ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

# ಸಾಧ್ವಿ

ಸಂಪುಟ ೧೪] ಭಾನುವಾರ ೮-೧-೫೦ [ಸಂಚಿಕೆ ೨೪

# ಮಂತ್ರಿಮಂಡಲದಲ್ಲಿ ಅಲ್ಪಸ್ವಲ್ಪ ಬದಲಾವಣೆ?

## ಹೋಟೇಲ್ ಕೆಲಸಗಾರರ ಸಂಘ

ಮೈಸೂರು ೧

ಮೇಲ್ಕಂಡ ಸಂಘದ ಸರ್ವ ಸದಸ್ಯರ ಸಾಮಾನ್ಯ ಸಭೆಯು ಶ್ರೀ ಸಿ ಜೆ ದೇವನಾಥನವರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ನಡೆದು, ಕೆಳಗೆ ಕಂಡ ನಿರ್ಣಯಗಳು ಅಂಗೀಕರಿಸಲ್ಪಟ್ಟವು- ಈ ತಿಂಗಳು ೩ ನೇ ತಾ|| ನಡೆಯಬೇಕಾದ ಸಮ್ಮೇಳನವನ್ನು ಮುಂದಿನ ತಿಂಗಳು ನಡೆಸುವುದು, ಆ ಸಮ್ಮೇಳನದ ರಜಾಕ್ಕೆ ನೋಟಿಸ್ ಆಫ್ ಚೇಂಜ್ ಕೊಡುವುದು ಈ ತಿಂಗಳು ೨೬ನೇ ತಾ|| ಭಾರತವು ಸ್ವತಂತ್ರ ರಿಪಬ್ಲಿಕ್ ಆಗಿ ಘೋಷಿಸಲ್ಪಡುವುದರಿಂದ ಅಂದು ಹೋಟೇಲ್ ಮಾಲೀಕರು ಕೆಲಸಗಾರರಿಗೆ ರಜಾ ಕೊಡುವಂತೆ ಕೇಳುವುದು, ಮಂಡ್ಯದ ಸಕ್ಕರೆ ಕಾರ್ಖಾನೆ ಕೆಲಸಗಾರ ಮುಷ್ಕರದ ಸಂಬಂಧವಾಗಿ ದಸ್ತಗಿರಿಯಾಗಿರುವವರನ್ನು ಕೂಡಲೆ ಬಿಡುಗಡೆ ಮಾಡುವಂತೆ ಒತ್ತಾಯಪಡಿಸುವುದು

## ಗ್ರಾಮಾಭಿವೃದ್ಧಿ ಸಮಿತಿಗಳ ಸದಸ್ಯರು

ನ್ಯಾಯ ವಿಧಾಯಕ ಸಭೆ ಮತ್ತು ಪ್ರಜಾ ಪ್ರತಿನಿಧಿ ಸಭೆಯ ಮಾಜಿ ಸದಸ್ಯರುಗಳಿಗೆ ಗ್ರಾಮಾಭಿವೃದ್ಧಿ ಸಮಿತಿಗಳಲ್ಲಿ ಸದಸ್ಯರಾಗಿರುವವರು, ಇನ್ನು ಮುಂದೆಯೂ ಸದರಿ ಸಮಿತಿಗಳಿಗೆ ವೈಯಕ್ತಿಕವಾಗಿ ಸದಸ್ಯರಾಗಿರಬಹುದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

## ಬೃಂದಾವನದಲ್ಲಿ ದೀಪೋತ್ಸವ

ಈ ದಿನ ರಾತ್ರಿ ಏಳು ಘಂಟೆಯಿಂದ ಒಂಭತ್ತು ಘಂಟೆವರೆಗೆ ಕೃಷ್ಣರಾಜಸಾಗರದ ಬೃಂದಾವನದಲ್ಲಿ ದೀಪೋತ್ಸವವನ್ನು ಏರ್ಪಡಿಸಲಾಗಿದೆ

## ಕಾರ್ಮಿಕ ಪ್ರತಿನಿಧಿಗಳಿಗೆ ಎಂ. ಪಿ. ಲಿಂಗಪ್ಪಯ್ಯನವರ ಸಲಹೆ

ಕೆನಡ, ಸ್ವಿಟ್ಜರ್ಲೆಂಡ್, ಮೆಕ್ಸಿಕೋ ಮತ್ತು ದಕ್ಷಿಣ ಅಮೆರಿಕ ಕಾರ್ಮಿಕ ಪ್ರತಿನಿಧಿಗಳೊಡನೆ ಭೇಟಿ ಮಾಡಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಬಗ್ಗೆ ಶ್ರೀ ಎಂ ಪಿ ಲಿಂಗಪ್ಪಯ್ಯನವರು ಈ ಕೆಳಗೆ ಕಂಡ ಸಲಹೆಗಳನ್ನು ನೀಡಿದರೆಂದು ತಿಳಿದುಬಂದಿದೆ-

ಕೆಲಸಗಾರರು ಕಂಪೆನಿಗಳ ಷೇರುಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿ ಅವರು ಮೊಬಲಗನ್ನು ತಮ್ಮ ಸಂಬಳದಲ್ಲಿ ಸ್ವಲ್ಪ ಸ್ವಲ್ಪವಾಗಿ ಹಿಡಿದುಕೊಳ್ಳುವ ಏರ್ಪಾಡು ಮಾಡಿದರೆ ಕೆಲಸಗಾರರಿಗೆ ತೃಪ್ತಿಯಾಗುವುದಲ್ಲದೆ ಮುಷ್ಕರಗಳು ತಪ್ಪಿ ಸಾಮಾನುಗಳ ತಯಾರಿಕೆಯು ಅಧಿಕವಾಗುವುದು ಹಾಗೆ ಮಾಡುವುದರಿಂದ ಕೆಲಸಗಾರರು ಮಾಲೀಕರಾಗುವುದಕ್ಕೆ ಅವಕಾಶವಾಗುವುದು [illegible] ಗಳನ್ನು ಅವರು ಒಪ್ಪಿದಂತಾಗಿ [illegible] ದೆ ಎಂದೂ ಗೊತ್ತಾಗಿದೆ

## ಭಾರತ ಸೈನ್ಯ ವಿಭಾಗದಲ್ಲಿ ಹೆಚ್ಚು ಪದವಿ

೨೦೦ನೇ ತಾ|| ಸೈನ್ಯದ ಸಮ್ಮೇಳನವು ಅಲಹಾಬಾದಿನಲ್ಲಿ ಕಳೆದ ಗುರುವಾರ [illegible] ಬಾರಿಕದ ನಾನಾ ವಿಭಾಗಗಳ ಸೈನ್ಯ ಪದವಿಗಳನ್ನು ಇನ್ನೂ ಹೆಚ್ಚಿಸಬೇಕೆಂದೂ, ಪ್ರಾಂತ ಮತ್ತು ಕೇಂದ್ರ [illegible] ಸರ್ಕಾರದವರು [illegible] ಮಾಡುತ್ತಾರೆ

## ಹಂಗಾಮಿ ಪುರಸಭಾಧ್ಯಕ್ಷರು

ಮೈಸೂರು ೧

ಇಕ್ಕಿನ ಪೌರಸಭೆಯ [illegible] ಅಧ್ಯಕ್ಷರನ್ನು ಚುನಾಯಿಸುವವರೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಜಿ ಎನ್ ನಾಗರಾಜರಾವ್‌ರವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ [illegible] ಅಧಿಕಾರ ಸ್ವೀಕರಿಸಿದರು.

## ವಿನೋಬಾ ಭಾವೆಯವರಿಗೆ ಅಸ್ವಸ್ಥತೆ

[illegible]

## ಕಾಶ್ಮೀರ ಗಡಿ ಸಿಪಾಯಿಗಳಿಗೆ

[illegible]

## ಭಾರತದ [illegible] ಪ್ರಧಮಾಧ್ಯಕ್ಷರ ಭಾಷಣ

[illegible]

## ಬಡ ಸಂಸ್ಥೆಗಳ ಬಾಲಿಗಾಗಿ ನೆರವೂರಕ [illegible]

[illegible]

## ಮಂತ್ರಿಮಂಡಲದಲ್ಲಿ ಸ್ವಲ್ಪ ಬದಲಾವಣೆ

ಬೆಂಗಳೂರು ೧

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಬೊಂಬಾಯಿನಲ್ಲಿ ಸರದಾರ್ ಪಟೇಲರೊಡನೆ ಮಂತ್ರಿಮಂಡಲದ ಪುನಾರಚನೆ ಬಗ್ಗೆ ನಿನ್ನೆ ಮಾತನಾಡಿದರು. ಶಾಸನ ಸಭೆಯ ಎಲ್ಲ ಪಕ್ಷಗಳಿಗೂ ತೃಪ್ತಿಕರವಾಗುವ [illegible] ಮಂತ್ರಿಮಂಡಲವನ್ನು ರಚಿಸುವ [illegible] ಮಂತ್ರಿಮಂಡಲವನ್ನು ವಿಸ್ತರಿಸುವ [illegible] ಗೊತ್ತಾಗಿದೆ

## ಭಾರೀ ಗಲಭೆ ಎಬ್ಬಿಸಲು ಭಾರೀ ಸಂಚು [illegible]

[illegible] ಭಾರತ ಸರ್ಕಾರದ [illegible] ಈ ಪತ್ರಿಕೆಗೆ ಬಂದಿದೆ [illegible]

## ಕಂಟ್ರಾಕ್ಟರುಗಳ ಸಮ್ಮೇಳನ

ತುಮಕೂರು ೩೧

ನಿನ್ನೆ ದಿನ ಇಲ್ಲಿ ಸೇರಿದ್ದ ಮೈಸೂರು ದೇಶದ ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರುಗಳ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿದ್ದ ಸಚಿವರಾದ ಶ್ರೀ ಟಿ ಮರಿಯಪ್ಪನವರು ಭಾಷಣ ಮಾಡಿ ಕಂಟ್ರಾಕ್ಟರುಗಳು ಲಂಚ ಮತ್ತು ಇತರ ದುವ್ಯವಹಾರಗಳನ್ನು ತೊಲಗಿಸಬೇಕೆಂದು ಮನವಿ ಮಾಡಿದರು. ಈ ಸಂಬಂಧವಾಗಿ ಸರಕಾರದೊಡನೆ ಅವರು ಸಹಕರಿಸಬೇಕೆಂದು ಕೋರಿದರು

## ಸಲೆಕ್ಷನ್ ಪರೀಕ್ಷೆಗಾಗಿ ಉಪಾಧ್ಯಾಯರುಗಳ ಒತ್ತಾಯ

ಮದರಾಸಿನ ಪ್ರಾಥಮಿಕ ಉಪಾಧ್ಯಾಯರುಗಳು ಮೊನ್ನೆ [illegible] ಸ್ಕೂಲ್ ಫೈನಲ್ ಪರೀಕ್ಷೆಗಳ ಸಲೆಕ್ಷನ್ [illegible] ರದ್ದು ಮಾಡಿರುವ ಆಜ್ಞೆಯನ್ನು ಸರ್ಕಾರದವರು ವಾಪಸು ತೆಗೆದುಕೊಂಡು ಹಿಂದೆ ಉಪಾಧ್ಯಾಯರುಗಳಿಗೆ ಇದ್ದ ಅಧಿಕಾರವನ್ನು ಪುನಃ ಕೊಡಬೇಕೆಂದು ಕೋರಿ ನಿರ್ಣಯ ಮಾಡಿರುವರು.

## ಪಾಕಿಸ್ತಾನದಲ್ಲಿ ಪ್ರತ್ಯೇಕ ಚುನಾವಣೆ

ಪೂರ್ವ ಪಾಕಿಸ್ತಾನದ ಅದಿವಾಸಿ [illegible] ಸಂಘದ ಮೊನ್ನೆ [illegible] ನಲ್ಲಿ ಸೇರಿ [illegible] ಪ್ರತ್ಯೇಕ ಚುನಾವಣೆ [illegible]

## ಒಂದೂವರೆ ಸಾವಿರ ಅಂಚೆ ಕವರು

[illegible]

## ಲಕ್ಷ್ಮಿ [illegible]

[illegible]

## ದವಸದಂತೆ ಧಾನ್ಯಗಳ [illegible] ಆವಶ್ಯಕ

[illegible]

# ವಾರ ಭವಿಷ್ಯ

ತಾ|| ೧-೧-೫೦ರಿಂದ ೭-೧-೫೦ರ ವರೆಗೆ

ಮೇಷ—ಆರೋಗ್ಯ ಉತ್ತಮ. ಮಹತ್ವ ಕಾರ್ಯ ಸಾಧನೆ. ವಿಶೇಷ ಗೌರವ ಪ್ರಾಪ್ತಿ. ನೌಕರಿ ಆನಂದದಾಯಕ. ಭೂಮಿ ವಿಕ್ರಯ ಮುಂತಾದುವುಗಳಿಗೆ ಉತ್ತಮ ಕಾಲ. ಶತ್ರು ಪಕ್ಷದವರ ಮನಸ್ಸು ಒಂದೇ ಆಗುವುದು. ತಾ|| ೩, ೪ ಪ್ರವಾಸ ವಾಹನ ಪ್ರಾಪ್ತಿ, ಶುಭವಾರ್ತೆ

ವೃಷಭ—ನಿಮ್ಮ ಮತ್ತು ಪತ್ನಿಯ ಆರೋಗ್ಯ ನೆಟ್ಟಗೆ ಮಕ್ಕಳ ಆರೋಗ್ಯ ಕ್ಲೇಶಕರ. ಹಣಕಾಸಿನ ಆದಾಯ ಚೆನ್ನಾಗಿದೆ, ಆದರೆ ಉಳಿತಾಯವಿಲ್ಲ. ವ್ಯಾಪಾರ ವ್ಯವಹಾರಗಳಲ್ಲಿ ಇಷ್ಟಪ್ರದ ಸಂಗತಿ ಕೃಷಿ ತಾ|| ೫, ೬ ಆಕಸ್ಮಿಕ ಪ್ರವಾಸ, ವಿದ್ವಜ್ಜನರ ಸ್ನೇಹ.

ಮಿಥುನ—ಕಲಹ ಪ್ರಾಪ್ತಿಯಾಗುವ ಪ್ರಸಂಗಗಳು ಗೃಹದಲ್ಲಿ ಅಸ್ವಸ್ಥತೆ ಖರ್ಚು ಹೆಚ್ಚುವುದು. ನಿದ್ರಾ ಭಂಗ ಚಿಂತಾಕುಲತೆ ಸ್ಮರಣ ಶಕ್ತಿಯ ಮುಂದನಾಗುವುದು. ಎಲ್ಲರೂ ನಿಮ್ಮ ಕೋಪನೆಗಾಗಿ ಇರುವರೆಂಬ ಭಾವನೆ ತಾ|| ೧, ೨ ನೌಕರಿಯಲ್ಲಿ ಶತ್ರು ಪೀಡೆ ಹಾನಿ.

ಕರ್ಕ—ನಿಮ್ಮ ಏಳಿಗೆ ಸಾಧನೆಗೆ ವಾರ ಚೆನ್ನಾಗಿದೆ ಆರೋಗ್ಯ ನೆಟ್ಟಗೆ ಇಷ್ಟಾರ್ಥ ಪ್ರಾಪ್ತಿ. ವಾದ ವಿವಾದಗಳಲ್ಲಿ ಜಯ ವ್ಯಾಪಾರಾದಿಗಳಲ್ಲಿಯೂ ಲಾಭ. ನೌಕರಿಯಲ್ಲಿ ಮೇಲಧಿಕಾರ ಸಿಕ್ಕುತ್ತೆ. ಧರ್ಮಕಾರ್ಯ. ಆಪ್ತರ ಭೇಟಿ ತಾ|| ೧, ೭ ಧನಲಾಭ, ಆನಂದ

ಸಿಂಹ—ಕಳೆದ ವಾರದಷ್ಟು ತೊಂದರೆ ಈ ವಾರ ಇಲ್ಲ. ಕೌಟುಂಬಿಕ ವೆಚ್ಚ ಅತ್ಯಧಿಕ. ಖರ್ಚನ್ನು ಸರಿದೂಗಿಸಲು ಬಹಳ ತೀವ್ರ ಯೋಚನೆ ನೌಕರಿಯಲ್ಲಿ ಆಗುತ್ತಿದ್ದ ಭಯವು ಮಾಯವಾಗುವುದು ವ್ಯಾಪಾರಾದಿಗಳಲ್ಲಿ ಆಶಾ ಜ್ಯೋತಿ. ಆದರೆ ಶತ್ರುಗಳ ಕಾಟ.

ಕನ್ಯಾ—ವಿಚಿತ್ರ ಪರಿಸ್ಥಿತಿ ಒದಗುವುದು. ಮನಸ್ಸಿನಲ್ಲಿ ವಿರಕ್ತ ಭಾವನೆ ಖರ್ಚು ಹೆಚ್ಚುವುದು. ಪತ್ನಿಯ ಆರೋಗ್ಯ ಕೋರ ಮೇಲಧಿಕಾರಿಗಳು ರೇಗುವರು. ಪ್ರವಾಸಕ್ಕೆ ವಾರ ಸರಿಯಲ್ಲ. ವ್ಯಾಪಾರಾದಿಗಳಲ್ಲಿ ತೊಂದರೆ ತಾ|| ೫, ೬ ಆರ್ಥಿಕ ವಿವಂಚನೆ ದೂರಾಗುವುದು ಮಿತ್ರರ ಭೇಟಿ

ತುಲಾ—ಉಳಿತಾಯದ ಉದ್ದೇಶದಿಂದ ಈ ವಾರ ನಿಮಗೆ ಹೆಚ್ಚು ಖರ್ಚು ಬಾಕಿ ಬರುವುದಿಲ್ಲ. ಆದಾಯ ಹೆಚ್ಚಿಸಿಕೊಳ್ಳಲಾರಿರಿ. ಮನೆಯಲ್ಲಿ ಅನಾರೋಗ್ಯ ಕ್ಲೇಶಗಳುಂಟಾಗುವವು. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ಕಟು ಅನುಭವ ತಾ|| ೧, ೨ ನಾನಾ ಹಾನಿ ಪತ್ನಿಯೊಡನೆ ಕಲಹ ಆಕಸ್ಮಿಕ ಖರ್ಚು.

ವೃಶ್ಚಿಕ—ವಾರ ಉತ್ತಮವಾದುದು. ಆರೋಗ್ಯ ನೆಟ್ಟಗೆ ಹಣದ ಲಾಭ ನೂತನ ಕಾರ್ಯದ ಯಶಸ್ವಿ ಪೂರೈಕೆ ಮಾನಸನ್ಮಾನ ವ್ಯಾಪಾರಾದಿಗಳಲ್ಲಿ ಸಹಕಾರಿಗಳ ಪ್ರಾಪ್ತಿ ತಾ|| ೩, ೪ ಪರೋಪಕಾರ, ದಾನ ಧರ್ಮಕ್ಕಾಗಿ ಖರ್ಚು.

ಧನು—ನಿಮಗಿದ್ದ ಒಂದು ಚಿಂತೆಯು ದೂರವಾಗುವುದು. ಶತ್ರುಗಳನ್ನು ನಿವಾರಿಸಿಕೊಳ್ಳುವ ಶಕ್ತಿ ಬರುತ್ತೆ. ಆರೋಗ್ಯ ನೆಟ್ಟಗೆ ಬೌದ್ಧಿಕ ಸಾಮರ್ಥ್ಯದ ಪ್ರಕಾಶ. ಸುಖ ಪ್ರವಾಸ ಅಧಿಕಾರ ಪ್ರಾಪ್ತಿ ವ್ಯಾಪಾರಾದಿಗಳಲ್ಲಿ ಧನಲಾಭ. ತಾ|| ೫, ೬ ಮಾನ್ಯವ್ಯಕ್ತಿಯ ಆದರ. ತಾ|| ೩, ೪ ಸ್ತ್ರೀಯರಿಂದ ಲಾಭ

ಮಕರ—ಆರೋಗ್ಯ, ಮನಸ್ಸ್ವಾಸ್ಥ್ಯ, ಆರ್ಥಿಕ ದೃಷ್ಟಿಯಿಂದ ವಾರ ಚೆನ್ನಾಗಿದೆ ಯಾರ ಭೇಟಿಗೆ ಇಚ್ಛಿಸುತ್ತಿದ್ದರೋ ಅವರ ಸಂದರ್ಶನ ನೌಕರಿಯು ಪಾಲಿಗೂ ಪ್ರವಾಸ ಸುಖರೂಪಕರ ತಾ|| ೨ ಸಹಕಾರ ತಾ|| ೬, ಶುಭ ವಾರ್ತೆ ಲಾಭ

ಕುಂಭ—ಕರ್ತವ್ಯ ದಕ್ಷತೆ ಮತ್ತು ನಿಗ್ರಹ ಬುದ್ಧಿಯವರಾದ ನಿಮಗೆ ಸುಖ ದುಃಖಗಳ ಕಾಟವಿರದು. ಪರಿಸ್ಥಿತಿ ಅನುಕೂಲಕರವಲ್ಲ ಮನಸ್ಸಿಗೆ ಉದ್ವೇಗ ವ್ಯಾಪಾರಾದಿಗಳಲ್ಲಿ ಅಂದಾಜು ಸರಿಬರಲಾರದು. ಅಪಘಾತ ಭಯ ತಾ|| ೧, ೨ ದಿನ ಮತ್ತು ವಾಹನಾಘಾತ ಧನ ಚಿಂತೆ.

ಮೀನ—ಸದ್ಭಾವನೆಯಿಂದ ವರ್ತಿಸಿರಿ ಮಕ್ಕಳ ಆರೋಗ್ಯದ ಕಡೆ ಲಕ್ಷ್ಯವಿರಲಿ ಸಖ್ಯದ ಪರಿಸ್ಥಿತಿ ನಿಮಗೆ ವಿರೋಧವಾಗಿರುವುದು. ಎಚ್ಚರಿಕೆ ಇರಲಿ. ತಾ|| ೧, ೨, ಮನಶ್ಶಾಂತಿ ಸೌಖ್ಯ

## ಆಂಧ್ರದ ರಾಜಧಾನಿ

ಮದರಾಸಿನ ಹೊರಭಾಗದಲ್ಲಿ ನೂತನ ಆಂಧ್ರ ದೇಶದ ಪ್ರತ್ಯೇಕ ಕೇಂದ್ರವನ್ನು ಸ್ಥಾಪಿಸಿ ಮುಖ್ಯವಾದ ಎಲ್ಲಾ ಸರ್ಕಾರಿ ಕಛೇರಿಗಳನ್ನು ಸದ್ಯಕ್ಕೆ ಮದರಾಸ್ ನಗರದಲ್ಲಿಯೇ ಇಟ್ಟುಕೊಂಡಿರುವಂತೆ ಮದರಾಸ್ ಪ್ರಭುತ್ವ ಸಮಿತಿಯವರು ನಿರ್ಧರಿಸುವುದಾಗಿ ತಿಳಿದುಬಂದಿದೆ. ಹೊಸ ರಾಜಧಾನಿಯನ್ನು ಗೊತ್ತುಮಾಡಿ ಅಲ್ಲಿಗೆ ಇಲಾಖೆಗಳನ್ನೆಲ್ಲಾ ವರ್ಗಾಯಿಸಲು ಮೂರು ವರ್ಷಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

## ಆಕಾಶವಾಣಿಯಲ್ಲಿ ಜಗಜೀವನರಾಂರವರ ಭಾಷಣ

ಮೈಸೂರು ೧

ಇದೇ ತಿಂಗಳು ೩ನೇ ತಾರೀಖು ಸಂಜೆ ಭಾರತದ ಕಾರ್ಮಿಕ ಮಂತ್ರಿಗಳಾದ ಶ್ರೀ ಜಗಜೀವನರಾಂರವರು ಆಕಾಶವಾಣಿಯಲ್ಲಿ ಪ್ರಸಾರ ಭಾಷಣ ಮಾಡುವರು

### ನೂತನ ವರ್ಷದ ಶುಭಾಶಯ

ರಾಜಧಾನಿಯ ಧರ್ಮಪ್ರವರ್ತ ಎ. ಎಸ್. ರಂಗಸ್ವಾಮಿ ಅಯ್ಯಂಗಾರ್ಯರು ಭಾರತದ ಗೌರ್ನರ್ ಜನರಲ್ ರಾಜಾಜಿಯವರಿಗೆ ಕಳುಹಿಸಿದ ನೂತನವರ್ಷದ ಶುಭಾಶಯಗಳನ್ನು ಅವರು ಸ್ವೀಕರಿಸಿ ವಂದನಾಪೂರ್ವಕ ಪತ್ರವನ್ನು ಬರೆದಿರುತ್ತಾರೆ

### ಕ್ಯಾಲೆಂಡರ್ ಸ್ವೀಕಾರ

ಬೆಂಗಳೂರು ಟೈಪ್ ಫೌಂಡ್ರಿಯವರು ನಮಗೆ ಕಳುಹಿಸಿರುವ ೧೯೫೦ ನೇ ಇಸವಿಯ ಹೊಸ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ ಅದರಲ್ಲಿ ಹಬ್ಬದ ದಿನಗಳು, ರಜಾ ದಿನಗಳು, ರಾಹುಕಾಲ, ಗುಳಿಕ ಕಾಲ ಮತ್ತು ಮಹಾ ನಕ್ಷತ್ರಗಳು ಮೊದಲಾದ ಉಪಯುಕ್ತ ಅಂಶಗಳನ್ನೂ ಕೊಡಲಾಗಿದೆ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನಲ್ಲಿರುವ ಶ್ರೀ ಜಯಲಕ್ಷ್ಮಿ ಬ್ಯಾಂಗಲ್ ಸ್ಟೋರ್ಸಿನವರು ಕಳುಹಿಸಿರುವ ಮಹಾತ್ಮ ಗಾಂಧಿಯವರ ಭಾವಚಿತ್ರ ಮತ್ತು ಭಾರತದ ಭೂಪಟಗಳಿಂದ ಕೂಡಿದ ಹೊಸ ವರ್ಷದ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸುತ್ತೇವೆ

### ಜನವರಿ ೨ನೇ ತಾ|| ಅಂಚೆ ಕಛೇರಿಗಳಿಗೆ ರಜಾ

ಈದ್ ಮಿಲಾದ್ ಹಬ್ಬದ ಪ್ರಯುಕ್ತ ಜನವರಿ ೨ನೇ ತಾ|| ಅಂಚೆ ಮತ್ತು ತಂತಿ ಕಛೇರಿಗಳಿಗೆ ರಜಾ ಕೊಡಲಾಗುವುದು.

## ಸರ್ ಆರ್ಕಾಟ್‌ರವರು ಪುನಃ ಲೇಕ್ ಸಕ್ಸಸ್ಸಿಗೆ

ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ಸಂಯುಕ್ತ ರಾಷ್ಟ್ರಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಸಭೆಗೆ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಭಾರತ ನಿಯೋಗ ನಾಯಕರಾಗಿ ಪುನಃ ತೆರಳುವರೆಂದು ಹೇಳಲಾಗಿದೆ

## ಹತ್ತಿ ಹತೋಟಿಯು ಮುಂದುವರಿಯುವುದು

ಈಗ ಹತ್ತಿಯಮೇಲೆ ಭಾರತ ಸರ್ಕಾರದವರು ಹಾಕಿರುವ ಹತೋಟಿಯು ಮುಂದುವರಿಯುವುದೆಂದು ತಿಳಿದುಬಂದಿದೆ. ಈಗಿರುವ ನಿಬಂಧನೆಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾತ್ರ ಮಾಡಬಹುದೆಂದು ಹೇಳಲಾಗಿದೆ.

## ರಾಜೇಂದ್ರ ಬಾಬುಗಳಿಗೆ ಮದರಾಸಿನ ಬಿನ್ನವತ್ತಳೆ

ಭಾರತ ರಾಜ್ಯಾಂಗಸಭೆಯ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ನಾಳೆ ಅಖಿಲ ಭಾರತ ವ್ಯವಸಾಯ ಮತ್ತು ಆರ್ಥಿಕ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಮದರಾಸಿಗೆ ಬಂದಾಗ ಅಲ್ಲಿನ ಪೌರಸಭೆಯವರು ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸುವುದಾಗಿ ನಿರ್ಧರಿಸಿರುವರು

## ಬ್ರಿ|| ಹಡಗು ವ್ಯಾಪಾರಕ್ಕೆ ಖೋತಾ

ಮುಂದಿನ ವರ್ಷದಿಂದ ಇಂಗ್ಲೆಂಡಿನ ಹಡಗು ವ್ಯಾಪಾರವು ಬಹಳ ಮಟ್ಟಿಗೆ ಹಿನ್ನಡೆಯಾಗುವುದೆಂದು ನಿರೀಕ್ಷಿಸಲಾಗಿದೆ. ಜಪಾನ್ ಮತ್ತು ಜರ್ಮನಿಗಳು ಅದರೊಡನೆ ಪೈಪೋಟಿ ಮಾಡುವುವೆಂದು ಹೇಳಲಾಗಿದೆ.

### ಡ್ರೈವರ್ ಬ್ಯಾಡ್ಜ್ ಸಿಕ್ಕಿದೆ

ಮೋಟಾರುಡ್ರೈವರ್ ಬ್ಯಾಡ್ಜ್ ಒಂದು ಈ ದಿನ ಬೆಳಿಗ್ಗೆ ಸಿಕ್ಕಿರುತ್ತೆ. ಮಾಲೀಕರು ಸಾಧ್ವಿ ಪತ್ರಿಕಾ ಕಛೇರಿಗೆ ಬಂದು ಪಡೆಯಬಹುದು.

A Happy & Prosperous New Year
to all Their Friends & Well-wishers & Patrons of
SRI GAYATHRI
Daily 3 Shows
From 1-1-50 for 3 days
M.G.M's Love drama!
FASTER — — PARADE
ಈಸ್ಟರ್ ಪೆರೇಡ್
(In Technicolor)
With Fred Astaire & Judy Garland

ಗಣೇಶಾ ಟಾಕೀಸ್
1-1-50ರಿಂದ 3 ದಿನಗಳು ಮಾತ್ರ
ರಿಪಬ್ಲಿಕ್ ರವರ ಪೂರ್ಣ ಸೀರಿಯಲ್
ಡಾರ್ಕೆಸ್ಟ್ ಆಫ್ರಿಕ
DARKEST AFRICA
[ಹೊಸ ಪ್ರಿಂಟ್]
ಪಾತ್ರ:-ಕ್ಲೈಡ್ ಬೆಟ್ಟಿ ಮತ್ತು ಮ್ಯಾನ್ಯುಲ್ ಕಿಂಗ್
—:ಮುಂದಿನ ಆಕರ್ಷಣೆ:—
Painted Stallion

ರಾಜಕಮಲ್
ಮೈಸೂರು
30-12-49 ರಿಂದ
ಜನಭರಿತವಾದ ೨ನೇ ವಾರ
ಜೀವನಂ
—:ಭೂಮಿಕೆ:—
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

ಪ್ರಭುದೇವಾ ಟಾಕೀಸ್
ದಿನವಹಿ ೩ ಆಟಗಳು
1-1-50 ನೇ ಭಾನುವಾರದಿಂದ ಅಮೋಘ ಪ್ರಾರಂಭ
★ ಮಹಿರಾವಣ ★
(ತೆಲುಗು ಚಿತ್ರ)
ಮುಖ್ಯ ಪಾತ್ರ:-ಗಗ್ಗಯ್ಯ, ಕಾಂಚನಮಾಲಾ, ರಾಮಕೃಷ್ಣ ಶಾಸ್ತ್ರಿ ಮುಂತಾದವರು

Edited printed and published by A. R. Nagarajan, at Sadhvi Press, D. Subbiah Road, Mysore.

ಪೋ॥ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಸೋಮವಾರ ೨-೧-೫೦ [ಸಂಚಿಕೆ ೧೮೦

# ಪಾಕೀಸ್ತಾನದೊಡನೆ ಭಾರತ ಸೇರುವುದಿಲ್ಲ

## ಸಂಗೀತ ಕಛೇರಿ

ಮೈಸೂರು ೨

ಪುಣ್ಯಮಿ ಪ್ರಯುಕ್ತ ನಾಳೆ ರಾತ್ರಿ ೮॥ ಘಂಟೆಗೆ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಕಛೇರಿ ಮಹಡಿ ಮೇಲೆ ವಿದ್ವಾನ್ ವಿಶ್ವನಾಥ್‌ರವರ ಸಂಗೀತವು ಆ॥ ವಿ॥ ಸಿ ಎ ಶ್ರೀನಿವಾಸಮೂರ್ತಿಯವರ ಪಿಟೀಲು ಮತ್ತು ಆ॥ ವಿ॥ ನಂಜನಗೂಡು ಸೀತಾರಾಮಶಾಸ್ತ್ರಿಗಳವರ ಮೃದಂಗದೊಡನೆ ನಡೆಯುವುದು ಸರ್ವರಿಗೂ ಸ್ವಾಗತವಿದೆ

## ಅಂತರ ರಾಷ್ಟ್ರೀಯ ಕಾರ್ಮಿಕ ಸಭೆ

ನಾಳೆ ಮಧ್ಯಾಹ್ನ ೩ ಘಂಟೆಗೆ ಜಗನ್ಮೋಹನ ಭವನದಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಯ ಆಡಳಿತ ಮಂಡಳಿಯ ೧೧೧ ನೇ ಅಧಿವೇಶನದ ಆರಂಭೋತ್ಸವವು ನಡೆಯುವುದು. ಶ್ರೀಮನ್ಮಹಾರಾಜರವರು ಸ್ವಾಗತ ಭಾಷಣ ಮಾಡುವರು

## ಹರಿಕಥೆ

ಚಾಮರಾಜ ಮೊಹಲ್ಲಾ ಗೊಲ್ಲಗೇರಿಯಲ್ಲಿರುವ ಜಾನಕಿ ರಾಮಮಂದಿರದಲ್ಲಿ ಇಂದಿನಿಂದ ೭ ದಿನಗಳವರೆಗೆ ಪ್ರತಿ ಸಂಜೆ ಹರಿಕಥಾ ರತ್ನ ವೇಣುಗೋಪಾಲ ದಾಸರಿಂದ "ಶ್ರೀನಿವಾಸ ಕಲ್ಯಾಣ" ಎಂಬ ಹರಿಕಥೆ ನಡೆಯುವುದು.

## ಆರ್ಥಿಕ ಸಮ್ಮೇಳನದ ಅಧ್ಯಕ್ಷತೆಗೆ ವಿ. ಎಲ್. ಡಿಸೌಜಾ

ಮಹಾರಾಜಾ ಕಾಲೇಜಿನ ಪ್ರೊ॥ ಶ್ರೀ ವಿ ಎಲ್. ಡಿಸೌಜರವರು ಈ ವರುಷ ಅಲಿಘಡದಲ್ಲಿ ನಡೆಯಲಿರುವ ಅಖಿಲಭಾರತ ಆರ್ಥಿಕ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರು

## ಜೂಜಾಟದ ಪತ್ತೆ

ನಿನ್ನೆ ಮಧ್ಯಾಹ್ನ ಬಿ ಡಿವಿಜನ್ ಪೋಲೀಸ್ ಇನ್ಸ್‌ಪೆಕ್ಟರ್ ಆಂಡಿಯಪ್ಪನವರೂ, ಎ ಡಿವಿಜನ್ ಇನ್ಸ್‌ಪೆಕ್ಟರ್ ವೆಂಕಟಪ್ಪನವರೂ ತಮ್ಮ ಸಿಬ್ಬಂದಿಯೊಡನೆ ಡಿ ಸುಬ್ಬಯ್ಯನವರ ಕ್ರಾಸ್ ರಸ್ತೆಯ ಕುಂಬಾರಗೇರಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ಜೂಜಿನ ಕಟ್ಟೆಗೆ ಮುತ್ತಿಗೆ ಹಾಕಿ ೨೪ ರೂ ೧೨ ಆಣೆಯನ್ನು ವಶಪಡಿಸಿಕೊಂಡರು. ಮತ್ತು ಕೃಷ್ಣಪ್ಪ, ಕೆಂಪಯ್ಯ, ಸಿದ್ದಯ್ಯ, ಮರಿಯಪ್ಪ, ನಂಜಪ್ಪ, ಮರಿಯಪ್ಪ, ಗಣೇಶರಾವ್, ಕಾಳಯ್ಯ, ನಂಜಯ್ಯ, ಗೋಪಾಲರಾವ್, ಶ್ರೀಕಂಠ, ಕರಿಯಪ್ಪ ಮತ್ತು ಚನ್ನಯ್ಯ ಎಂಬುವರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು ಅವರ ಮೇಲೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗುವುದು.

## ಮಹಮದ್ ಪೈಗಂಬರರ ದಿನಾಚರಣೆ

ಈ ದಿನ ಸಂಜೆ ಲಷ್ಕರ್ ಮೊಹಲ್ಲಾ ಮಿಲಾದ್ ಪಾರ್ಕಿನಲ್ಲಿ ಮಹಮದ್ ಪೈಗಂಬರ್‌ರವರ ದಿನಾಚರಣೆಯ ಸಂಬಂಧವಾಗ ನಟಿಮರಾದ ಶ್ರೀ ಎಚ್. ಸಿ ದಾಸಪ್ಪ ಮತ್ತು ವಿಶ್ವವಿದ್ಯಾನಿಲಯದ ಪ್ರೋ ಚಾನ್ಸಲರ್ ಡಾ॥ ಸಿ ಆರ್ ರೆಡ್ಡಿಯವರು ಭಾಷಣ ಮಾಡುವರು

## ೧೨ ತಿಂಗಳೊಳಗೆ ಭಾರತದಲ್ಲಿ ಮಹಾ ಚುನಾವಣೆ

ಹೊಸ ರಾಜ್ಯಾಂಗದ ಪ್ರಕಾರ ಇನ್ನು ೧೨ ತಿಂಗಳುಗಳಲ್ಲಿ ಭಾರತದ ಮಹಾ ಚುನಾವಣೆಯು ನಡೆಯುವುದೆಂದೂ ಜನರು ಚುನಾವಣೆಯ ಮಹತ್ವವನ್ನರಿತು ಅರ್ಹರಾದವರನ್ನೇ ಆರಿಸಬೇಕೆಂದೂ ಪಂಡಿತ ನೆಹರೂರವರು ತಿಳಿಸಿರುತ್ತಾರೆ.

## ಚಿತ್ರ ಮಂದಿರಕ್ಕೆ ಸುಪ್ರಸಿದ್ಧ ನಟರ ಭೇಟಿ

ಮೈಸೂರು. ೨

ಸುಪ್ರಸಿದ್ಧ ವಾರ್ನರ್ ಚಿತ್ರ ಸಂಸ್ಥೆಯ ಪ್ರಸಿದ್ಧ ನಟರೂ ಮತ್ತು ಪ್ರೇಕ್ಷಕರನ್ನು ಬಹುವಾಗಿ ಆಕರ್ಷಿಸಿ ಚಿತ್ರ ರಂಗಕ್ಕೆ ಅಪೂರ್ವ ಕಳೆಯನ್ನು ನೀಡಿ ಹಾಗೂ ರಾಬಿನ್‌ಹುಡ್ ಮತ್ತು ಡಾನ್ ಜಾನ್ ಚಿತ್ರಗಳ ಕಥಾನಾಯಕರಾಗಿರುವ ಮಾನ್ಯ ಎರ್ರಾಲ್ ಫ್ಲಿನ್‌ರವರೂ ಮತ್ತು ಎಂ. ಜಿ ಯಂ ಚಿತ್ರ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರಾದ ಕ್ಯಾಮರನ್ ಮತ್ತು ಅವರ ಪತ್ನಿಯವರೂ ಮೊನ್ನೆ ಸಂಜೆ ರಾಜಧಾನಿಯ ಏಕಮಾತ್ರ ಆಂಗ್ಲೇಯ ಚಿತ್ರ ಪ್ರದರ್ಶನ ಕೇಂದ್ರವೆನಿಸಿರುವ ಶ್ರೀ ಗಾಯತ್ರಿ ಚಿತ್ರ ಮಂದಿರಕ್ಕೆ ಭೇಟಿ ಕೊಟ್ಟರು ಮಂದಿರದ ಮಾಲೀಕರಾದ ವಾಸ್ತುಕಲಾ ನಿಪುಣರಾದ ಶ್ರೀ ಟಿ ಚಲುವಾಚಾರ್ಯರವರು ವಿಶೇಷ ಸಲಕರಣೆಗಳಿಂದ ಅವರನ್ನೂ ಮತ್ತು ರಾಜಧಾನಿಯ ಅನೇಕ ಮಾನ್ಯ ಆಂಗ್ಲೇಯರನ್ನೂ ಕಲಾಭಿಮಾನಿಗಳನ್ನೂ ಬರಮಾಡಿಕೊಂಡು ಸತ್ಕರಿಸಿ ಅತಿಥಿಗಳಿಗೆ ಅಮೂಲ್ಯವಾದ ಹಾಗೂ ಮೈಸೂರಿನ ಕಲಾಪಂಕ್ತಿಯಿಂದ ಒಳಗೊಳ್ಳಬೇಕೆಂದೆ ಒಂದು ಸಾಬೂನಿಗಾಗಿ ತಯಾರಿಸಿದ ವಸ್ತುಗಳನ್ನು ಪಾರಿತೋಷಕವಾಗಿ ಕೊಟ್ಟರು ಮಾನ್ಯ ಎರ್ರಾಲ್ ಫ್ಲಿನ್‌ರವರು ಚಿತ್ರ ಮಂದಿರವನ್ನು ವೀಕ್ಷಿಸಿ ಮಂದಿರವು ಆಂಗ್ಲ ದೇಶದಲ್ಲಿರುವಂತಿದೆ ಎಂದು ಹೇಳಿ ಆಂಗ್ಲೇಯ ಚಿತ್ರಕ್ಕೆ ಇಷ್ಟೊಂದು ಪ್ರೋತ್ಸಾಹದೊರಕಿರುವುದು ತಮಗೆ ತುಂಬಾ ಸಂತೋಷವೆಂದೂ ಮತ್ತು ಇಲ್ಲಿನ ಸಿನಿಮಾ ಪ್ರೇಕ್ಷಕರಿಗೆ ತಮ್ಮಲ್ಲಿರುವ ವಿಶ್ವಾಸಕ್ಕೆ ತಾವು ಕೃತಜ್ಞರಾಗಿರುವುದಾಗಿಯೂ ಹೇಳಿದರು

## ಚುನಾವಣೆಗೆ ಕಮ್ಯೂನಿಸ್ಟರ ಸ್ಪರ್ಧೆ

ಬರುವ ಸಾಧಾರಣ ಚುನಾವಣೆಯಲ್ಲಿ ಭಾರತದ ಕಮ್ಯೂನಿಸ್ಟರು ಭಾಗವಹಿಸಬೇಕೆಂದು ಆಲೋಚಿಸುತ್ತಿರುವುದಾಗಿ ಹೇಳಲಾಗಿದೆ. ಈ ಕಾರ್ಯಕ್ಕಾಗಿ ಅವರು ಒಂದು ಸ್ವಯಂಸೇವಕ ಪಡೆ ಮತ್ತು ಕೆಂಪು ಸೇನೆಯನ್ನು ನಿರ್ಮಿಸುತ್ತಿರುವುದಾಗಿಯೂ ತಿಳಿದಿದೆ

○ ಶ್ರೀ ರೆಡ್ಡಿಯವರ ಬೊಂಬಾಯಿ ನಿಂದ ನಾಳೆ ಬೆಂಗಳೂರಿಗೆ ಹಿಂದಿರುಗುವ ನಿರೀಕ್ಷಣೆ ಇದೆ

## ಪೌರಸಭಾಧ್ಯಕ್ಷರ ಸತ್ಕಾರ ಸಮಾರಂಭ

ಮೈಸೂರು ೨

ಇಂದಿನಿಂದ ನಿವೃತ್ತರಾಗಲಿರುವ ರಾಜಧಾನಿಯ ಪೌರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ನಿನ್ನೆ ಸಂಜೆ ನಗರದ ಅನೇಕ ಮಾನ್ಯ ಮಹನೀಯರುಗಳನ್ನೂ ಮಹಿಳೆಯರನ್ನೂ ಪೌರಸಭಾ ಭವನಕ್ಕೆ ಬರಮಾಡಿಕೊಂಡು ಸತ್ಕಾರ ಸಮಾರಂಭವನ್ನು ನಡೆಸಿದರು. ಕಳೆದ ಒಂದು ವರ್ಷ ಕಾಲ ತಮ್ಮ ಸೇವೆಯಲ್ಲಿ ನೆರವು ನೀಡಿದ ಸಕಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು ಇಂದಿನ ಆರ್ಥಿಕ ಮುಗ್ಗಟ್ಟಿನ ಸ್ಥಿತಿಯಲ್ಲಿ ಪೌರಸಭೆಯು ನಗರ ನಿವಾಸಿಗಳಿಗೆ ಸಾಧ್ಯವಾದ ಸೌಕರ್ಯಗಳೆಲ್ಲವನ್ನೂ ನಿರ್ವಂಚನೆಯಿಂದ ಸಲ್ಲಿಸುತ್ತಿದೆಯೆಂದು ಅವರು ಹೇಳಿದರು ಮುಂದೆಯೂ ಜನ ಪೌರಸಭೆಯೊಡನೆ ಎಲ್ಲಾ ಸಹಕರಿಸಿ, ಅದು ತನ್ನ ಕರ್ತವ್ಯವನ್ನು ಸಮರ್ಪಕವಾಗಿ ನೆರವೇರಿಸುವಂತೆ ಮಾಡಬೇಕೆಂದು ಕೋರಿದರು

ಡಾ ಬಿ॥ ಎಂ ರಾಮಸ್ವಾಮಿ ಮತ್ತು ಶ್ರೀಗಳಾದ ಎಂ ಎಸ್ ರಾಮಸ್ವಾಮಿ, ಎಂ ಶಂಕರಯ್ಯ ಮತ್ತು ಪೌರಸಭಾ ಕಮಿಷನರ್ ಸಿ ನರಸಿಂಹಮೂರ್ತಿಯವರು ಮಾತನಾಡಿ ಶ್ರೀ ವೆಂಕಟರಮಣಯ್ಯನವರ ಗುಣಾತಿಶಯಗಳನ್ನು ಕೊಂಡಾಡಿ ಅವರಿಗೆ ಸಕಲ ಸನ್ಮಂಗಳಗಳೂ ಉಂಟಾಗಲೆಂದು ಹಾರೈಸಿದರು ವಂದೇ ಮಾತರಂ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

## ಭಾರತವು ಪಾಕಿಸ್ತಾನದೊಡನೆ ಐಕ್ಯವಾಗುವುದಿಲ್ಲ

ಪುನಃ ಪಾಕಿಸ್ತಾನದೊಡನೆ ಭಾರತವು ಐಕ್ಯವಾಗುವುದಿಲ್ಲವೆಂದು ಪಂಡಿತ ನೆಹರೂರವರು ಖಚಿತವಾಗಿ ಹೇಳಿದ್ದಾರೆ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಡಾ॥ ಖರೆಯವರು ಹಿಂದೂಸ್ತಾನ ಪಾಕಿಸ್ತಾನಗಳೆರಡೂ ಪುನಃ ಒಂದುಗೂಡಬೇಕೆಂಬುದೇ ತಮ್ಮ ಗುರಿಯೆಂದು ಹೇಳಿರುವುದು ಬೇಜವಾಬ್ದಾರಿಯ ಮಾತೆಂದೂ ಅವರು ಹೇಳುವಂತೆ ಪಾಕಿಸ್ತಾನದೊಡನೆಯೇ ಕೋಮುವಾರು ಭಾವನೆಯು ಹೋಗಬೇಕಾಗಿತ್ತೆಂದೂ ಈಗ ಅದ ಮತ್ತೆ ತಲೆ ಎತ್ತಲು ಅವಕಾಶ ಕೊಡಲಾಗುವುದಿಲ್ಲವೆಂದೂ ಅವರು ಎಚ್ಚರಿಕೆಯಿತ್ತಿರುವರು

## ಮಾತುಕತೆಗಾಗಿ ಬೊಂಬಾಯಿಗೇಕೆ ತೆರಳಲಿಲ್ಲ

### ಹನುಮಂತಯ್ಯನವರ ವಿವರಣೆ

[ಸ್ವಂ ಸು ಫೋ] ಬೆಂಗಳೂರು ೨

ಈ ದಿನ ಬೆಳಿಗ್ಗೆ ಶ್ರೀ ಕೆ ಹನುಮಂತಯ್ಯನವರು ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿದರು. ಬೊಂಬಾಯಿಗೆ ಬರುವಂತೆ ಶ್ರೀ ಕೆ. ಸಿ. ರೆಡ್ಡಿಯವರು ಕಳುಹಿಸಿದ್ದ ಆಮಂತ್ರಣವನ್ನು ತಾವೂ ಸಿದ್ದಲಿಂಗಯ್ಯನವರೂ ನಿರಾಕರಿಸಿದುದಾಗಿ ಹೊರಟಿರುವ ವದಂತಿಯು ಸರಿಯಲ್ಲವೆಂದು ಅವರು ಹೇಳಿದರು ಇಲ್ಲಿ ತಾವು ಒಂದು ತೀರ್ಮಾನಕ್ಕೆ ಬಂದು ಅನಂತರ ಸರದಾರ್ ಪಟೇಲರಲ್ಲಿಗೆ ಹೋಗುವುದು ಉಚಿತ, ತೀರ್ಮಾನ ಕೊಡುವಂತೆ ಕೇಳಲು ಅವರಲ್ಲಿಗೆ ಹೋಗುವುದು ಸರಿಯಲ್ಲ ಇಲ್ಲಿಗೆ ಶ್ರೀ ರೆಡ್ಡಿಯವರು ಹಿಂದಿರುಗಿದಮೇಲೆ ಅವರು ಅಪೇಕ್ಷೆ ಪಟ್ಟರೆ ಅವರೊಡನೆ ನಾನು ಪುನಃ ಮಾತುಕತೆ ನಡೆಸುತ್ತೇನೆ ಸಾರ್ವಜನಿಕರ ವಿಶ್ವಾಸಕ್ಕೆ ಪಾತ್ರವಾಗುವಂತೆ ಮಂತ್ರಿಮಂಡಲದ ಪುನರ್ರಚನೆ ಆಗಬೇಕು. ಎಂಟು ತಿಂಗಳಿಂದಲೂ ನಾನು ಅದನ್ನೆ ಹೇಳುತ್ತಿದ್ದೇನೆ ಈಗಲೂ ಅದನ್ನೇ ಹೇಳುತ್ತೇನೆ—ಎಂದು ಅವರು ತಿಳಿಸಿದರು

## ಈಜಿಪ್ಟಿನ ದೊರೆಗೆ ಪುನಃ ವಿವಾಹ

ಇಪ್ಪತ್ತೊಂಬತ್ತು ವರ್ಷ ವಯಸ್ಸಿನ ಈಜಿಪ್ಟಿನ ದೊರೆ, ಫರೂಕರವರು ತಮ್ಮ ರಾಣಿ ಫರೀದಾರವನ್ನು ಒಂದು ವರ್ಷದ ಹಿಂದೆ ತ್ಯಜಿಸಿಬಿಟ್ಟರಷ್ಟೆ ಈಗ ಅವರು ಮಿಸ್. ನರೀಮನ್ ಸಾದೆಕ್ ಎಂಬ ಹದಿನಾರು ವರ್ಷದ ತರುಣಿಯನ್ನು ಪ್ರೀತಿಸಿ ಮದುವೆಯಾಗಲು ತೊಡಗಿದ್ದರೆಂದು ವರದಿಯಾಗಿದೆ ಆಕೆಯು ಬ್ರಿಸ್ಟಲ್ ವಿಶ್ವ ವಿದ್ಯಾಲಯದ ಪದವೀಧರಳು ಆಕೆಯ ತಂದೆಯು ಈಜಿಪ್ಟ್ ಸರ್ಕಾರದ ಸಿವಿಲ್ ಸರ್ವಿಸ್ ಅಧಿಕಾರಿ. ಆತನು ಮಗಳನ್ನು ಬೇರೆ ಒಬ್ಬಾತನಿಗೆ ಕೊಟ್ಟು ಮದುವೆ ಮಾಡಲು ನಿಶ್ಚಿತವಾದಮೇಲೆ ರಾಜದೃಷ್ಟಿಯು ಕನ್ಯೆಯ ಮೇಲೆ ಬಿದ್ದು ಆ ಪ್ರಯುಕ್ತವೇ ತಪ್ಪಿ ರಾಜವಿವಾಹದ ಪ್ರಯತ್ನವು ನಡೆಯುತ್ತಿದೆ.

## ಬಳ್ಳಾರಿಯ ತಾಲ್ಲೂಕುಗಳ ಬಗ್ಗೆ ಸತ್ಯಾಗ್ರಹವೇ?

ಮದರಾಸ್ ಪ್ರಾಂತದಲ್ಲಿರುವ ಕನ್ನಡ ಭಾಗಗಳನ್ನು ಬಲಾತ್ಕಾರವಾಗಿ ಆಂಧ್ರ ದೇಶದಲ್ಲಿ ಸೇರಿಸಿದರೆ ಉಗ್ರವಾದ ಚಳುವಳಿಯು ನಡೆಯುವುದೆಂದು ಕರ್ನಾಟಕ ಪ್ರಾಂತ್ಯ ಸಮಿತಿಯ ನಿಯೋಗದವರು ಹೇಳಿರುವರು

## ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ಶ್ರೀಗಳಾದ ಟಿ ಚಲುವಾಚಾರ್-ಟಿ. ಯಾಲಕ್ಕಾಚಾರ್ ಮತ್ತು ಅವರ ಮಕ್ಕಳು ಕಳುಹಿಸಿರುವ ಗಾಯತ್ರಿ, ಚಾಮುಂಡೇಶ್ವರಿ ಮತ್ತು ಗಣೇಶಾ ಚಿತ್ರ ಮಂದಿರಗಳ ಚಿತ್ರಗಳನ್ನೊಳಗೊಂಡ ಹೊಸ ವರ್ಷದ ಕ್ಯಾಲೆಂಡರನ್ನೂ,

ವಾಣೀವಿಲಾಸ ರಸ್ತೆಯಲ್ಲಿರುವ ಸಿಟಿ ಟ್ಯುಟೋರಿಯಲ್ ಕಾಲೇಜಿನವರು ಪ್ರಕಟಿಸಿರುವ ಕ್ಯಾಲೆಂಡರಿನ ಪ್ರತಿಯನ್ನೂ,

ಮೈಸೂರಿನ ಪ್ರಸಿದ್ಧ ಜಾಹಿರಾತು ಸಂಸ್ಥೆಯವರಾದ ಶ್ರೀ ಪಿ. ಎಸ್ ಮಣಿ ಮತ್ತು ಕಂಪೆನಿಯವರು ಪ್ರಕಟಿಸಿರುವ ಕ್ಯಾಲೆಂಡರನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ

## ಎರಡು ಜಿಲ್ಲೆಗಳಲ್ಲಿ ಗ್ರಾಮ ಕೈಗಾರಿಕೋದ್ಯಮ

ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಗ್ರಾಮ ಕೈಗಾರಿಕೆಗಳ ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ ಇದು ಕೂಡಲೇ ಜಾರಿಗೆ ಬರುವುದು ಇದಕ್ಕಾಗಿ ನಾಲ್ಕು ಲಕ್ಷದ ಐವತ್ತುಮೂರು ಸಾವಿರ ರೂ. ಖರ್ಚಾಗುವುದು ಸರ್ ಎಂ ವಿಶ್ವೇಶ್ವರಯ್ಯನವರ ಯೋಜನೆಯನ್ನು ಅನುಸರಿಸಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು

## ನೆಹರೂರಿಂದ ಬೊಂಬಾಯಿ ಸ್ಟೇಡಿಯಂ ಆರಂಭ

ಪ್ರಧಾನಿ ನೆಹರೂರವರು ಈ ತಿಂಗಳು ೧೯ನೇ ತಾ॥ ದಿನ ಬೊಂಬಾಯಿಯಲ್ಲಿ ಕಟ್ಟಲಾಗುವ ಕ್ರೀಡಾಂಗಣದ ಶಿಲಾನ್ಯಾಸವನ್ನು ಹಾಕುವರೆಂದು ಗೊತ್ತಾಗಿದೆ

## ಪ್ರತಿ ಪ್ರಾಂತಕ್ಕೂ ಮರದ ಕಾರ್ಖಾನೆ

ಉಕ್ಕಿನ ಬದಲು ಮರವನ್ನು ಹೆಚ್ಚಾಗಿ ಉಪಯೋಗಿಸುವುದಕ್ಕೆ ಉತ್ತೇಜನವೀಯಲು ಭಾರತ ಸರಕಾರವು ಆಲೋಚಿಸಿದೆ ಅದರಂತೆ ಪ್ರತಿ ಪ್ರಾಂತ ಮತ್ತು ಸಂಸ್ಥಾನದಲ್ಲೂ ಒಂದೊಂದು ಮರದ ಕಾರ್ಖಾನೆಯನ್ನು ಸ್ಥಾಪಿಸಲು ಕಾರ್ಯಕ್ರಮ ಕೈಗೊಳ್ಳಲಾಗುವುದು

## ವಿಯಟ್ನಾಂ ಸ್ವಾತಂತ್ರ್ಯ

ಫ್ರೆಂಚ್ ಯೂನಿಯನ್ನಿನೊಳಗೆ ಹೊಸದಾಗಿ ಸ್ವತಂತ್ರ ರಾಷ್ಟ್ರವಾಗಿರುವ ವಿಯಟ್ನಾಮ್ ದೇಶದ ಮಾಜಿ ಚಕ್ರವರ್ತಿ ಬಾವೋಡಾಯ್‌ರವರಿಗೆ ಫ್ರಾನ್ಸ್ ದೇಶವು ಮೊನ್ನೆ ದಿನ ಅಧಿಕಾರವನ್ನು ವಿಧಿಪೂರ್ವಕವಾಗಿ ವಹಿಸಿಕೊಟ್ಟಿತು

## ಪಾಕಿಸ್ಥಾನದ ರೂಪಾಯಿಗೆ ಹೆಸರಿನ ಬದಲಾವಣೆ?

ಭಾರತ ಸರ್ಕಾರದವರು ಪೂರ್ವಪಂಜಾಬಿನ ಹೆಸರನ್ನು ಪಂಜಾಬ್ ಎಂಬುದಾಗಿ ಬದಲಾಯಿಸಿರುವುದರಿಂದ ಪಶ್ಚಿಮ ಪಂಜಾಬ್ ಮತ್ತು ಪೂರ್ವ ಬಂಗಾಳದ ಹೆಸರುಗಳನ್ನೂ ಮತ್ತು ಪಾಕಿಸ್ಥಾನದ ರೂಪಾಯಿನ ಹೆಸರನ್ನೂ ಬದಲಾಯಿಸುವ ವಿಚಾರವು ತಮ್ಮ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಪಾಕಿಸ್ಥಾನದ ಮುಖ್ಯಮಂತ್ರಿಗಳು ಹೇಳಿದ್ದಾರೆ

### ಆಂಧ್ರ ಪರಿಹಾರ ನಿಧಿ

ಮೈಸೂರು ಸರ್ಕಾರದವರು ಆಂಧ್ರ ಪರಿಹಾರ ನಿಧಿಯನ್ನು ಸರ್ಕಾರಿ ನೌಕರರಿಂದ ವಸೂಲು ಮಾಡದೆ ಜನರು ಸ್ವಂತವಾಗಿ ಕೊಡಬೇಕೆಂದು ಸ್ವಾಭಿಮಾನದಿಂದ [illegible]

### ನಿಧನ

ಮೈಸೂರಿನ ಮಹಾರಾಜಾ ಗರ್ಲ್ಸ್ ಸ್ಕೂಲಿನ ಹೆಡ್ಮಾಸ್ಟರಾಗಿದ್ದು, ಅನೇಕ ವರ್ಷಕಾಲ ಮೈಸೂರಿನ ಹೈಸ್ಕೂಲಿನ ಉಪಾಧ್ಯಾಯರಾಗಿಯೂ ಇದ್ದ ಶ್ರೀ ಎಂ. ಎ. ಶ್ರೀನಿವಾಸ ಅಯ್ಯಂಗಾರ್ಯರು ಮೊನ್ನೆ ಪ್ರಾತಃಕಾಲ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಕರ್ತವ್ಯನಿಷ್ಠರಾಗಿ, ಶ್ರದ್ಧಾಸಕ್ತಿ ವಹಿಸಿ ೦೦ ವರ್ಷಗಳ ದೀರ್ಘ ಸೇವೆಯನ್ನು ವಿದ್ಯಾಇಲಾಖೆಗೆ ಸಲ್ಲಿಸಿದರು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ

## ಗುಮಾಸ್ತೆ ಬದಲು ನ್ಯಾಯಾಧೀಶರಿಗೆ ಲಂಚ!

ಲೂಧಿಯಾನದ ನ್ಯಾಯಾಸ್ಥಾನದ ಗುಮಾಸ್ತನೊಬ್ಬ ತಪ್ಪಿ, ಶಿಕ್ಷೆಯಿಂದ ತಪ್ಪಿಸಲು ಮಾಜಿಸ್ಟ್ರೇಟರಿಗೆ ಲಂಚ ಕೊಡಲು ಪ್ರಯತ್ನಿಸಿದ ಕಾರಣಕ್ಕಾಗಿ [illegible] ಎಂಬುವನನ್ನು ದಸ್ತಗಿರಿ ಮಾಡಲಾಗಿದೆ ಅವನು ಕೋರ್ಟಿಗೆ ಹೋಗಿ ಮೊಕದ್ದಮೆಯಲ್ಲಿ ಗುಮಾಸ್ತನೆಂದು ತಿಳಿದು ತನಗೆ ಸಂಬಂಧಿಸಿದ ಒಂದು ಮೊಕದ್ದಮೆಯ ಪತ್ರಗಳನ್ನು ತೋರಿಸುವಂತೆ ಕೇಳಿ, ಒಂದು ರೂಪಾಯಿಯನ್ನು ಅವನು ಕೊಡಲು ಯತ್ನಿಸಿದನಾಗಿ ಹೇಳಲಾಗಿದೆ

## ಹರಿಜನನನ್ನು ಹೊಡೆದು ಕೊಂದುದಕ್ಕಾಗಿ ದಸ್ತಗಿರಿ

ದೇವಕೋಟೆಯ ಹರಿಜನ ನಿವಾಸಿ ಪೂಚಿ ಎಂಬುವನನ್ನು ಹೊಡೆದು ಕೊಂದು, ಅವನ ಮೃತದೇಹವನ್ನು ಕೂಡಲೇ ದಹನಮಾಡಿದುದಕ್ಕಾಗಿ ನಾಟಿಮುನ್ಸೀಫ್, ಆಂಡಿ ಕಾರ್ಡುಂಬರ್ ಮತ್ತು ಲಕ್ಷ್ಮಣ ಅಂಬಲಂ ಎಂಬುವರ ದಸ್ತಗಿರಿಯಾಗಿದೆ

## ಭತ್ತದ ಪೈರು ಈ ವರ್ಷ ಹೆಚ್ಚಿದೆ

ಈ ಸಾಲಿನಲ್ಲಿ ೩೦೬ ಲಕ್ಷ ಎಕರೆ ಜಮೀನು ಭತ್ತದ ಸಾಗುವಳಿಗೆ ಬಂದಿರುವುದಾಗಿ ಗೊತ್ತಾಗಿದೆ ಕಳೆದ ಸಾಲಿಗಿಂತ ೩೦ ಲಕ್ಷ ಎಕರೆ ಜಾಸ್ತಿ ಈ ವರ್ಷ ಬಿತ್ತನೆಯಾಗಿದೆ

## ಮೋಟಾರು ಇಂಜನ್ನಿನಲ್ಲಿ ಬಂಗಾರದ ಗಟ್ಟಿ

ಕರಾಚಿಗೆ ಪರ್ಷಿಯದಿಂದ ಬಂದ ೧೦ ಅಮೇರಿಕದ ಮೋಟಾರು ಇಂಜನ್ನಿನಲ್ಲಿ ೩೨ ಸಾವಿರ ಪೌಂಡುಗಳ ಬೆಲೆಯಾಗುವ ೭೦ ರಾತಲು ತೂಕದ ಬಂಗಾರದ ಗಟ್ಟಿಗಳನ್ನು ಗುಟ್ಟಾಗಿ ಸಾಗಿಸುತ್ತಿದ್ದುದನ್ನು ಅಲ್ಲಿನ ಸುಂಕದ ಅಧಿಕಾರಿಗಳು ಪತ್ತೆ ಮಾಡಿರುವರು.

## ದುಷ್ಕೃತ್ಯದ ತಡೆಗಾಗಿ ಭಾರಿ ಅಧಿಕಾರಿಗಳ ಸಭೆ

ಈ ತಿಂಗಳು ೧೨ ರಿಂದ ೧೪ರ ವರೆಗೆ ದೆಹಲಿಯಲ್ಲಿ ಭಾರತದ ನಾನಾ ಭಾಗಗಳ ಭಾರಿ ಪೊಲೀಸು ಅಧಿಕಾರಿಗಳ ಸಭೆಯನ್ನು ಸರದಾರ್ ಪಟೇಲರು ಆರಂಭಿಸುವರು. ಸಮ್ಮೇಳನದಲ್ಲಿ ಈಚೆಗೆ ದೇಶದಲ್ಲಿ ಹೆಚ್ಚುತ್ತಿರುವ ದುಷ್ಕೃತ್ಯಗಳನ್ನು ತಡೆಯಲು ಸೂಕ್ತ ಉಪಾಯಗಳನ್ನು ಪರಿಶೀಲಿಸಲಾಗುವುದು

## ಹಂಗಾಮಿ ಆಂಧ್ರ ರಾಜಧಾನಿ ಸೈದಾ ಪೇಟೆಯಲ್ಲಿ

ಮದರಾಸಿನ ಸೈದಾ ಪೇಟೆಯಲ್ಲಿ ಹೊಸದಾಗಿ ರಚಿತವಾಗುವ ಆಂಧ್ರ ಪ್ರಾಂತದ ಕಛೇರಿಯನ್ನು ಹಂಗಾಮಿಯಾಗಿ ತೆರೆಯಲಾಗುವುದು

### ಪಬ್ಲಿಕ್ ಸರ್ವಿಸ್ ಕಮಿಷನರ್ ಶಿಕ್ಕೆ

ಈ ತಿಂಗಳು ೨೬ನೇ ತಾ॥ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ನೇಮಕದ ಬಗ್ಗೆ ಆಜ್ಞೆಯು ಹೊರಬೀಳುವುದಾಗಿ ಹೇಳಲಾಗಿದೆ.

## ಮಲಯಕ್ಕೂ ಸ್ವಾತಂತ್ರ್ಯ

ಮಲಯಾಕ್ಕೂ ಸ್ವಾತಂತ್ರ್ಯ ಬಹಳ ಶೀಘ್ರವಾಗಿ ಸನ್ನಿಹಿತವಾಗಿರುವುದಾಗಿ ಭಾರತದ ಆರೋಗ್ಯ ಮಂತ್ರಿ ಶ್ರೀಮತಿ ಅಮೃತಕೌರರು ಸಿಂಗಪುರದಲ್ಲಿ ಹೇಳಿದರು ಇವರು ಇಂಡೋನೇಷ್ಯದ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಿ ಸ್ವದೇಶಕ್ಕೆ ಹಿಂದಿರುಗಿದ್ದಾರೆ.

## ಆಸ್ಸಾಂ ಮಾಜಿ ಮುಖ್ಯ ಮಂತ್ರಿ ಕಾಂಗ್ರೆಸ್ಸಿಗೆ

ಮುಸ್ಲಿಂ ಲೀಗಿನ ಸದಸ್ಯರಾಗಿದ್ದ ಆಸ್ಸಾಂನ ಮುಖ್ಯ ಮಂತ್ರಿಯಾಗಿದ್ದ ಸರ್ ಮಹಮದ್ ಸಾದುಲ್ಲಾರವರು ಕಾಂಗ್ರೆಸ್ ಸೇರಿದ್ದಾರೆ


ಕಬ್ಬಿಣದ ಪೆಟ್ಟಿಗೆ, ಬೀರು, ಕ್ಯಾಷ್ ಬಾಕ್ಸ್
ಮತ್ತು ಅಲಾರಂ ಸೇಫ್, : ಸುಲಭವಾದ ಬೆಲೆ

ಸಿಟಿ ಇಂಪ್ಲಿಮೆಂಟ್ ವರ್ಕ್ಸ್

2767, — ಹಳ್ಳದ ಕೇರಿ, — ಮೈಸೂರು.

ಪ್ರಭಾ ಆಮೋಘ ಪ್ರಾರಂಭ 31-12-49 ರಿಂದ ಪ್ರತಿದಿನ 3 ಆಟಗಳು

ಭಾರತೀಯ ಸ್ತ್ರೀತ್ವದ ಧ್ಯೇಯಗಳನ್ನು ಎತ್ತಿಹಿಡಿದ ಮಹಿಳೆಯು ಪ್ರಶಂಸನೀಯ ಪ್ರಯತ್ನ!

ವಿ. ಆರ್. ಎ. ಪಿಕ್ಚರ್ಸ್‌ರವರ ಹಿಂದೀ ಚಿತ್ರ

# ಸ್ವಯಂ ಸಿದ್ಧ

ಶಾಂತಾ ಆಪ್ಟೆ, ಶೋಲಿನಾ, ಗೀತಾ ಶ್ರೀ, ಬಿಪಿನ್ ಗುಪ್ತ

ಇತ್ಯಾದಿ ಕಾಂಪ್ಲಿಮೆಂಟರಿ ಪಾಸುಗಳನ್ನು ಮನ್ನಾ ಮಾಡಲಾಗುತ್ತೆ

# ಪ್ರಭುದೇವಾ ಟಾಕೀಸ್

ದಿನವಹಿ ೪ ಆಟಗಳು

1—1 50 ನೇ ಭಾನುವಾರದಿಂದ ಅಮೋಘ ಪ್ರಾರಂಭ

# ★ ಮಹಿರಾವಣ ★

(ತೆಲುಗು ಚಿತ್ರ)

ಮುಖ್ಯ ಪಾತ್ರ.-ಗಗ್ಗಯ್ಯ, ಕಾಂಚನ ಮಾಲಾ, ರಾಮಕೃಷ್ಣ ಶಾಸ್ತ್ರಿ ಮುಂತಾದವರು



NOTICE

MANGALORE
GANESH BEEDIES
(No. 6425)
GANESH BEEDIES
(No. 113569)

(No. 6426)

(No. 127573)

Know all men, trade and custom that the above trade marks have been registered under the Trade Marks Act, 1940 (Government of India) in the name of Bantwal R. M. Prabhu and Bantwal Madhava Shenoi trading as Mangalore Ganesh Beedi Works, Sreerampet, Mysore No. 6425, 113569, 6426, 127573 in respect of Beedies and that anyone using any mark or marks identical or similar to the above marks will be liable for an action for infringement in the Courts of Law.

MANGALORE
GANESH BEEDI WORKS
Srirampet, Mysore


Edited, printed and published by A. R. Nagarajan, at Sadhvi Press, D. Subbiah Road, Mysore.

ರೋ॥ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಮಂಗಳವಾರ ೩-೧-೫೦ [ಸಂಚಿಕೆ ೧೩೧

# ತಿರುವಾಂಕೂರಿನಲ್ಲಿ ಹೊಸಮಂತ್ರಿಮಂಡಲ

## ತಿರುವಾಂಕೂರಿಗೆ ಐದೇ ಜನ ಮಂತ್ರಿಗಳು

ತಿರುವಾಂಕೂರು ಮತ್ತು ಕೊಚ್ಚಿ ಸಂಯುಕ್ತ ಸಂಸ್ಥಾನದ ೮ ಜನ ಮಂತ್ರಿಗಳು ನಿನ್ನೆ ದಿನ ಪ್ರಧಾನ ಸಚಿವರಿಗೆ ತಮ್ಮ ರಾಜೀನಾಮೆಗಳನ್ನು ಸಲ್ಲಿಸಿದರು. ಅಲ್ಲಿನ ಮಂತ್ರಿಗಳ ಸಂಖ್ಯೆಯನ್ನು ಕೇವಲ ಐದಕ್ಕೆ ಇಳಿಸಿ ಪ್ರಧಾನ ಸಚಿವರು ಅದನ್ನು ಪುನರ್ರಚನೆಮಾಡಿದ್ದಾರೆ.

## ಬಳ್ಳಾರಿ ಕನ್ನಡಪ್ರದೇಶಗಳಿಗೆ ಪ್ರತ್ಯೇಕ ಜಿಲ್ಲೆ

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಯಾಕೂಡ್ಲು ಈ ತಾಲ್ಲೂಕುಗಳನ್ನು ಸೇರಿಸಿ ಮದ್ರಾಸ್ ಅಧಿಪತ್ಯದ ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಗುವುದೆಂದು ತಿಳಿದುಬಂದಿದೆ.

## ಪುನಃ ಅಣು ಬಾಂಬಿನ ಪರೀಕ್ಷೆ

ಶಾಂತಿ ಸಾಗರದ ಎನಿವೆ ಟೋಕ್ ದ್ವೀಪ ಸಮೂಹದಲ್ಲಿ ಕಳೆದ ವರ್ಷ ನಡೆಸಿದಂತೆಯೇ ಈ ವರ್ಷವೂ ಅಣು ಬಾಂಬಿನ ಪ್ರಯೋಗವನ್ನು ನಡೆಸಲು ಪ್ರಯತ್ನಗಳಾಗುತ್ತಿವೆ.

## ಬ್ಯಾಂಕಿನಲ್ಲಿ ೪೦ಸಾವಿರ ರೂ. ಕಳವು

ಆಗ್ರಾ ಹಿಂದೂಸ್ಥಾನ್ ಕಮರ್ಶಿಯಲ್ ಬ್ಯಾಂಕಿನಲ್ಲಿ ೪೦ ಸಾವಿರ ರೂಪಾಯಿನ ನೋಟುಗಳು ಮಾಯವಾಗಿವೆ. ಬ್ಯಾಂಕ್ ಅಧಿಕಾರಿಗಳನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

## ಅಸ್ಸಾಂ ಮಂತ್ರಿಗಳ ಸಂಖ್ಯೆಯಲ್ಲಿ ಖೋತಾ

ಮಂತ್ರಿ ಮಂಡಲದ ಮೇಲೆ ತರಲಾಗಿದ್ದ ಅವಿಶ್ವಾಸ ನಿರ್ಣಯವೊಂದನ್ನು ಅಸ್ಸಾಮಿನ ಕಾಂಗ್ರೆಸ್ ಪಕ್ಷವು ಪರಿಶೀಲಿಸಿ, ಅದನ್ನು ತಿರಸ್ಕರಿಸಿತು. ಮಂತ್ರಿಗಳ ಸಂಖ್ಯೆಯನ್ನು ಕಡಿಮೆಮಾಡಬೇಕೆಂದೂ ಸಹ ನಿರ್ಧರಿಸಲಾಯಿತು.

## ಸಿನಿಮಾಗಳಲ್ಲಿ ಧೂಮಪಾನವಿಲ್ಲ

ಹೈದರಾಬಾದು ಮತ್ತು ಸಿಕಂದರಾಬಾದುಗಳ ಸಿನಿಮಾ ಮಂದಿರಗಳಲ್ಲಿ ಧೂಮಪಾನ ಮಾಡದಂತೆ ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

## ಮಿತವ್ಯಯಕ್ಕಾಗಿ ಅಭಿವೃದ್ಧಿ ಕಾರ್ಯಗಳ ಖೋತಾ

ಭಾರತ ಸರ್ಕಾರದವರ ಸೂಚನೆಯಂತೆ ಮಿತವ್ಯಯದ ಯೋಜನೆಗೆ ಅನುಸಾರವಾಗಿ ನಮ್ಮ ಸರ್ಕಾರದವರು ಈ ವರ್ಷದ ಅಭಿವೃದ್ಧಿ ಕಾರ್ಯಗಳಿಗಾಗಿ ಗೊತ್ತಾಗಿದ್ದ ವೆಚ್ಚದಲ್ಲಿ ಕಾಲು ಭಾಗವನ್ನು ಕಡಿಮೆ ಮಾಡುವಂತೆ ಇಲಾಖೆಗಳಿಗೆ ತಿಳಿಸುವುದಾಗಿ ಗೊತ್ತಾಗಿದೆ.

## ಕಬ್ಬಿಣದ ಕಾರ್ಖಾನೆ ವಾರ್ಷಿಕೋತ್ಸವ

ಈ ತಿಂಗಳು ೧೮ನೇ ತಾ॥ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವಾರ್ಷಿಕೋತ್ಸವ ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಅವರು ೯ನೇ [illegible]ನಿಂದ ೨೧ ನೇ ತಾ॥ ವರೆಗೆ ಭದ್ರಾವತಿ, ಜೋಗ್ ಕೆಮ್ಮಣ್ಣುಗುಂಡಿ ಮುಂತಾದ ಪ್ರದೇಶಗಳಲ್ಲಿ ಪ್ರವಾಸ ಮಾಡುವರು.

## ಕಾರ್ಮಿಕ ಸಮಸ್ಯೆಗಳ ಪರಿಶೀಲನೆ

### ಅಂತರ ರಾಷ್ಟ್ರೀಯ ಸಮ್ಮೇಳನದ ಆರಂಭ

ಮೈಸೂರು ೩

ಈ ಮಧ್ಯಾಹ್ನ ೩ ಘಂಟೆಗೆ ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಯ ಆಡಳಿತ ಸಮಿತಿಯ ೧೧೦ ನೇ ಅಧಿವೇಶನವು ಈ ಮಧ್ಯಾಹ್ನ ೩ ಗಂಟೆಗೆ ಜಗನ್ಮೋಹನ ಭವನದಲ್ಲಿ ಆರಂಭವಾಯಿತು.

ಶ್ರೀ ವಿ. ನ್ ಮಹಾರಾಜರು ಅಧಿವೇಶನದ ಪ್ರತಿನಿಧಿಗಳನ್ನು ಸ್ವಾಗತಿಸಿ ಭಾಷಣ ಮಾಡಿದರು. ರಾಜಧಾನಿಯಲ್ಲಿ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳು ಆಗುತ್ತಿರುವುದರ ಬಗ್ಗೆ ಪ್ರಜೆಗಳು ಹರ್ಷವನ್ನು ವ್ಯಕ್ತಪಡಿಸಿ, ಸಮಾಜ ಸುಧಾರಣೆಯ ವಿಷಯದಲ್ಲಿ ಸಮಾಲೋಚಿಸಲು ಈ ರೀತಿ ಸೇರಿರುವ ಗಣ್ಯ ಕರ್ತರುಗಳನ್ನು ಸ್ವಾಗತಿಸಲು ತುಂಬಾ ಸಂತೋಷವಾಗುವುದೆಂದು ತಿಳಿಸಿದರು. ಈ ಸಭೆಯು ಏಷ್ಯಾದಲ್ಲಿ ಸೇರುತ್ತಿರುವುದು ಇದೇ ಪ್ರಥಮ ಬಾರಿಯಾಗಿದ್ದು ಮೈಸೂರು ನಗರವನ್ನು ಈ ಕಾರಣಕ್ಕಾಗಿ ಆರಿಸಿದುದಕ್ಕೆ ತೃಪ್ತಿ ಸೂಚಿಸಿದರು.

ಮೈಸೂರು ಸರಕಾರದವರು ಸಾಮಾನ್ಯ ಕಾರ್ಮಿಕನ ಏಳಿಗೆಯ ವಿಷಯದಲ್ಲಿ ತೋರಿಸುತ್ತಿರುವ ಆಸಕ್ತಿಯು ಬಹಳವಾಗಿದೆಯೆಂದೂ, ಮೈಸೂರು ಭಾರತದಲ್ಲಿ ಸೇರಿಹೋದ ಭಾಗವಾದ ಕಾರಣ ಇನ್ನೂ ಕಾರ್ಮಿಕರ ಹಿತ ಚಿಂತನೆ ಚೆನ್ನಾಗಿ ನಡೆದು ಕೈಗಾರಿಕೆ ಮತ್ತು ವ್ಯವಸಾಯ ಕಾರ್ಮಿಕರ ಜೀವನ ಪರಿಸ್ಥಿತಿಯು ಉತ್ತಮಗೊಳ್ಳಲೆಂದು ಆಶಿಸಿದರು.

ಈಗ ಬಹು ಮಹತ್ವದ ಕಾಲವಾಗಿದ್ದು ಅನೇಕ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳು ಆಗುತ್ತಿವೆ; ಪ್ರಪಂಚವಿನ್ನೂ ಸಾಮಾನ್ಯ ಪರಿಸ್ಥಿತಿಯಲ್ಲಿಲ್ಲ; ರಾಷ್ಟ್ರೀಯ ಮತಿಯು ಪ್ರಬಲವಾಗಿಯೇ ಇದೆ.

ಅಂತರ್ರಾಷ್ಟ್ರೀಯ ಭಾವನೆಯು ಇನ್ನೂ ಮುಂದುವರಿಯಬೇಕಾಗಿದೆ; ಆಧುನಿಕ ವಿಜ್ಞಾನ ಮತ್ತು ಸಂಚಾರ ವಿಧಾನಗಳು ಮಾನವರೆಲ್ಲಾ ಒಂದೇ ಎಂಬುದನ್ನು ತೋರಿಸಿವೆ; ಈ ಧ್ಯೇಯೋದ್ದೇಶಕ್ಕೆ ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಯು [illegible]ಯೊಂದಿದೆ. ಅದರ ಮುಖ್ಯ ಗುರಿಯೆಂದರೆ, ಅಭದ್ರತೆ ಕೊರತೆ, ನಿರುದ್ಯೋಗ ಮತ್ತು ಇತರ ಭೀತಿಗಳು ಕಾರ್ಮಿಕನನ್ನು ಆವರಿಸದಂತೆ ಮಾಡುವುದೇ ಆಗಿದೆ. ಈ ಕಾರ್ಯದಲ್ಲಿ ತನ್ನ ಮೂವತ್ತು ವರ್ಷದ ಜೀವಿತದಲ್ಲಿ ಶ್ಲಾಘನೀಯವಾದ ಕಾರ್ಯವನ್ನು ಸಂಸ್ಥೆ ಮಾಡಿದೆ-ಎಂದು ಪ್ರಭುಗಳು ತಿಳಿಸಿ, ಈ ಸಮ್ಮೇಳನದ ಕಾರ್ಯಕ್ರಮದ ಬಗ್ಗೆ ಏಷ್ಯಾ ರಾಷ್ಟ್ರಗಳಲ್ಲಿ ಉತ್ಸುಕತೆ ಉಂಟಾಗಿರುವುದನ್ನು ಸಭಿಕರ ಗಮನಕ್ಕೆ ತಂದುಕೊಟ್ಟರು. ಭಾರತದಲ್ಲೊಂದು ಐ. ಎಲ್. ಓ. ಭವನವನ್ನು ಕಟ್ಟಲೇ ಬೇಕಾಗಿರುವುದೆಂದೂ, ಅದಕ್ಕೆ ಮೈಸೂರು ಸರಕಾರದವರು ತಮ್ಮ ಭಾಗದ ದ್ರವ್ಯ ಸಹಾಯ ಮಾಡುವರೆಂದೂ ತಿಳಿಸಿ, ಸಮ್ಮೇಳನವು ಯಶಸ್ವಿಯಾಗಲೆಂದು ಹಾರೈಸಿದರು.

### ಅಧ್ಯಕ್ಷರ ಭಾಷಣ

ಭಾರತದ ಕಾರ್ಮಿಕ ಇಲಾಖಾ ಕಾರ್ಯದರ್ಶಿಗಳೂ ಮತ್ತು ಆಡಳಿತ ಮಂಡಲಿಯ ಅಧ್ಯಕ್ಷರೂ ಆದ ಶ್ರೀ ಎಸ್. ಲಾಲ್‌ರವರು ಸಭೆಯನ್ನುದ್ದೇಶಿಸಿ ಭಾಷಣಮಾಡಿದರು. ಏಷ್ಯಾದಲ್ಲಿ ಇನ್ನೂ ಬಹು [illegible]ವಾದ ಸಮಸ್ಯೆಗಳು ಪರಿಹಾರವಾಗದೇ ಹಾಗೇ ಉಳಿದು, ಈ [illegible]ಗೆ ಒಂದು ಸವಾಲಿನಂತಿವೆ. ಏಷ್ಯಾದಲ್ಲಿ ಸಂಸ್ಥೆಯು ವಿಜಯ ಪಡೆದರೆ ಎಲ್ಲೆಲ್ಲೂ ಜಯವೇ [illegible] ಆದ್ದರಿಂದ ಈ ಸಭೆಯು ಬಹು ಪ್ರಾಮುಖ್ಯವಾಗಿದೆ-ಎಂದು ಅವರು ಹೇಳಿದರು.

ಸಂಘಕಟ್ಟಲು ಸ್ವಾತಂತ್ರ್ಯ, ನಿರುದ್ಯೋಗ ಮುಂತಾದ ಅನೇಕ ಸಮಸ್ಯೆಗಳ ಬಗ್ಗೆ ಇರುವ ಕಾರ್ಯಕ್ರಮಗಳನ್ನು ಅವರು ವಿವರಿಸಿದರು. ಮೈಸೂರಿನ ಮಹಾರಾಜರು ಮತ್ತು ಸರಕಾರದವರು ಮಾಡಿರುವ ಕೆಲಸಕಾರ್ಯಗಳನ್ನು ಪ್ರಶಂಸಿಸಿದರು.

ಕಾರ್ಮಿಕರ ಕನಿಷ್ಠಜೀವನದ ಮಟ್ಟವನ್ನು ನಿರ್ಧರಿಸುವುದು ಮತ್ತು ಅದರೊಡನೆಯೇ ಕಾರ್ಮಿಕ-ಆಡಳಿತ ಮಂಡಲಿಯ ಸಂಬಂಧವನ್ನು ಉತ್ತಮಗೊಳಿಸುವುದು ಇದೇ ಸಮಿತಿಯ ಕರ್ತವ್ಯವಾಗಿರುತ್ತವೆ. ಉಕ್ಕು-ಕಬ್ಬಿಣ, ಲೋಹಯಂತ್ರ ಕಲ್ಲಿದ್ದಲು, ಬಟ್ಟೆ, ಕಟ್ಟಡ, ಒಳನಾಡಿನ, ಪೆಟ್ರೋಲ ಮತ್ತು ರಾಸಾಯನಿಕ ಮುಂತಾದ ಕೈಗಾರಿಕೆಗಳ [illegible] ಈಗ ಇವೆ. ಇವುಗಳೊಡನೆ ತೋಟಗಳ ಕಾರ್ಮಿಕರ [illegible]

[illegible]

... ದ ಶಾಂತಿಕಾಲಕ್ಕೆ ಬರುವ ವೇಳೆಯಲ್ಲಿ ಹುಟ್ಟುವ ನಿರುದ್ಯೋಗವನ್ನು ಈಗ ಎದುರಿಸಬೇಕಾಗಿದೆ. ಅದರಿಂದ ಜನಶಕ್ತಿಯ ವ್ಯವಸ್ಥೆ ಮಾಡಬೇಕು ಎಂದು ಶ್ರೀ ಲಾಲ್‌ರವರು ತಿಳಿಸಿದರು.

ಶ್ರೀ ವಿ. ನ್ ಮಹಾರಾಜರ ಭಾಷಣವಾದ ನಂತರ ಭಾರತದ ಕಾರ್ಮಿಕ ಮಂತ್ರಿ ಜಗಜೀವನರಾಂ [illegible] ಮಾಡಿ [illegible] ಎಲ್ಲರನ್ನೂ ಸ್ವಾಗತಿಸಿದರು.

[illegible] ಭಾಷಣ [illegible] ಮಂತ್ರಿ [illegible] ವಾಯಿತು.

## ಶ್ರೀ ಕೆ. ಸಿ. ರೆಡ್ಡಿ

ಸ್ವಂ. ವರದಿಗಾರ! ಬೆಂಗಳೂರು ೩

ಈ ದಿನ ಮಧ್ಯಾಹ್ನ ಶ್ರೀ ಕೆ. ಸಿ. ರೆಡ್ಡಿಯವರು ಬೊಂಬಾಯಿನಿಂದ ಹಿಂದಿರುಗುವ ನಿರೀಕ್ಷಣೆಯಿದೆ.

ಕೇಂದ್ರಶಾಸನ ಸಭೆಯ ಅಧ್ಯಕ್ಷರಾದ ಶ್ರೀ ಜಿ. ವಿ. ಮಾವಳಂಕರ್‌ರವರು ನಾಳಿದ್ದು ಇಲ್ಲಿಗೆ ಬರುವರು. ನಾಳಿದ್ದು ಇಲ್ಲಿಗೆ ಬಂದು ಅನಂತರ ಮೈಸೂರಿಗೂ ಭೇಟಿ ಕೊಡುವರೆಂದು ತಿಳಿದುಬಂದಿದೆ.

## ಕ್ರಿಕೆಟ್ಟಿನಲ್ಲಿ ಭಾರತಕ್ಕೆ ವಿಜಯ

ಕಲ್ಕತ್ತೆಯ ಈಡನ್ ಗಾರ್ಡನ್ಸಿನಲ್ಲಿ ಕಾಮನ್‌ವೆಲ್ತ್ ಕ್ರಿಕೆಟ್ ಟೀಮಿಗೂ ಭಾರತದ ಟೀಮಿಗೂ ನಡೆಯುತ್ತಿದ್ದ ಮೂರನೆ, ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಭಾರತೀಯ ಟೀಮು ಏಳು ವಿಕೆಟ್ಟುಗಳಿಂದ ವಿಜಯಗಳಿಸಿತೆಂಬ ವಾರ್ತೆ ಬಂದಿರುತ್ತದೆ.

## ಅಕ್ರಮ ಗೋಧಿ ರವಾನೆಗೆ ಜುಲ್ಮಾನೆ

ಮಂಡಿ ಮೊಹಲ್ಲೆಯ ಬಾಬು ಮತ್ತು ಚಮನಲಾಲ್ ಎಂಬುವರು ೬೫ ಸೇರು ಗೋಧಿಯನ್ನು ರಹದಾರಿ ಇಲ್ಲದೆ ಸಾಗಿಸುದುದಕ್ಕಾಗಿ ಮೊದಲನೇ ಮಾಜಿಸ್ಟ್ರೇಟರು ತಲಾ ೬೦ ರೂ ಜುಲ್ಮಾನೆ ವಿಧಿಸಿರುತ್ತಾರೆ.

ಕ್ಯಾಲೆಂಡರ್ ಸ್ವೀಕಾರ

ಆರೇಕಾ [illegible] ಕಬ್ಬಿಣ ಮತ್ತು ಬಣ್ಣದ ವ್ಯಾಪಾರಿಗಳಾಗಿ ಶ್ರೀ ಎಂ. ವಿ. [illegible]ರವರು ಕಳುಹಿಸಿಕೊಟ್ಟಿರುವ ನೂತನ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ.

## ಕಾರು - ಕಾರಿಗೆ ಢಿಕ್ಕಿ

ಈ ಮಧ್ಯಾಹ್ನ ಮಹಾರಾಣಿ ಸ್ಕೂಲು ಬಳಿ ಎರಡು ಕಾರುಗಳಿಗೆ ಢಿಕ್ಕಿ ಹೊಡೆದು ಒಂದು ಕಾರಿಗೆ ತುಂಬಾ ಹಾನಿಯಾಗಿದೆ. ಮತ್ತೊಂದು ಕೆಂಪು ಕಾರಿನ ರೇಡಿಯೇಟರು ಮತ್ತು ಮುಂಭಾಗಕ್ಕೆ ಬಲವಾದ ಏಟು ಬಿದ್ದಿದೆ. ಡ್ರೈವರಿಗೆ ಮುಖ ಮತ್ತು ಕಾಲುಗಳ ಮೇಲೆ ಏಟು ಬಿದ್ದಿದೆ. ಢಿಕ್ಕಿ ಹೊಡೆದ ರಭಸಕ್ಕೆ ಕಾರು [illegible] ಪೋಸ್ಟಿಗೆ ಹೊಡೆದುದರಿಂದ ಅದು ಮುರಿದು ಹೋಗಿದೆ. ಪೋಲೀಸರು ಸ್ಥಳದಲ್ಲಿದ್ದಾರೆ.

## ಸಾಧು ಮತ್ತು ಶಿಷ್ಯರಿಬ್ಬರ ವಿಚಿತ್ರ ನಂಬಿಕೆ

ಗೋರಖಪುರ ಜಿಲ್ಲೆಯ ಸಾಧುವೊಬ್ಬನ ಶಿಷ್ಯನು ಶ್ರೀ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳಲು ಗುರುವಿನ ಆಜ್ಞೆಯಂತೆ ೧೫ ದಿನಗಳ ಪರ್ಯಂತ ಮಣ್ಣು ಮಾತ್ರ ತಿನ್ನುತ್ತಾ ಸೇವಿಸುತ್ತಿದ್ದು ಬಳಿಕ ಶಿಂಗನ ಆತನೇ ಕಾರ್ಯಪ್ರವೃತ್ತನಾಗಿದ್ದನೆಂದು. ನಂತರ ಮೂರನೇ ಗಿಡ ಆತನ ಶರೀರವನ್ನು ಸಾಧುವು ಪೆಟ್ಟಿಗೆಯಲ್ಲಿ ಇಟ್ಟಿರುವನು. ಸತ್ತವನು ಆರು ತಿಂಗಳನಂತರ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಪುನಃ ಬದುಕುವನೆಂದು ಹೇಳುತ್ತಿರುತ್ತಾನೆ. ಸಾಧುವು ಇದಕ್ಕೆ ೩ ದಿನಗಳ ಹಿಂದೆ ಶಿಷ್ಯನು ಪ್ರಜ್ಞೆ ತಪ್ಪಿದಾಗ ಸಾಧುವು ಅವನಿಗೆ ಪ್ರಜ್ಞೆ ಬರುವಂತೆ ಮಾಡಿದನೆಂದೂ ಆವನು ನ ಟರನ್ನು ಕುರಿತು ತಾನು ಇನ್ನು ಆರು ತಿಂಗಳನಂತರ ವಾಪಸು ಬರುವುದಾಗಿ ಹೇಳಿ ಆದಾದ ಎರಡು ದಿನಗಳನಂತರ ಸತ್ತನೆಂದೂ ಹೇಳಲಾಗಿದೆ.

## ಕಾಳ ಸಂತೆಗೆ ಬಹಿಷ್ಕಾರವೇ ಮದ್ದು

ಸರಕಾರದವರು ಕಾಳ ಸಂತೆ ವ್ಯಾಪಾರವನ್ನು ತಡೆಗಟ್ಟಲಿಲ್ಲವೆಂಬುದಾಗಿ ಆಪಾದನೆ ಯಾಗುತ್ತಿರುವುದರಿಂದಲೂ ಆದರ ಸಮಾಜವೇ ಈ ವ್ಯಾಪಾರವನ್ನು ಸಹಿಸಿಕೊಂಡು ಬರುತ್ತಿರುವುದರಿಂದ ಸರಕಾರದವರು ಏನು ಮಾಡಬಹುದೆಂಬುದನ್ನು ಆಲೋಚಿಸಬೇಕೆಂದೂ, ಆದ್ದರಿಂದ ಇದು ಹೋಗುವುದಕ್ಕೆ ಸಮಾಜವೇ ಬಹಿಷ್ಕಾರ ಹಾಕಬೇಕೆಂದೂ ಭಾರತದ ಕಾರ್ಮಿಕ ಮಂತ್ರಿ ಜಗಜೀವನರಾಂ ರವರು ವರಂಗಲ್ಲಿನ ಕಾರ್ಮಿಕರನ್ನು ಕುರಿತು ಮಾತನಾಡುತ್ತಾ ತಿಳಿಸಿದರು.

## ಥಿಯಾಸಫಿಸ್ಟರ ಸಂಸ್ಥೆಗೆ ಅಶೋಕ ಚಕ್ರದ ಹೆಸರು

ಭಾರತದ ಥಿಯಾಸಫಿಸ್ಟರು ತಾವು ಕಟ್ಟಲಿರುವ ಹೊಸ ಸಂಸ್ಥೆಯನ್ನು ಅಶೋಕ ಚಕ್ರ ಸಂಘವೆಂದು ಕರೆಯುವುದಾಗಿ ಗೊತ್ತಾಗಿದೆ.

## ದೇವಸ್ಥಾನ, ಮಠ ಮುಂತಾದವು ಕೇಂದ್ರಾಡಳಿತಕ್ಕೆ

ದೇವಸ್ಥಾನಗಳು, ಮಠಗಳು ಮುತ್ತು ಇತರ ಮತೀಯ ಸಂಬಂಧವಾದ ಸಂಸ್ಥೆಗಳ ಆಸ್ತಿಗಳ ಮೇಲ್ವಿಚಾರಣೆಯನ್ನು ಕೇಂದ್ರಾಡಳಿತಕ್ಕೆ ಒಳಪಡಿಸಲು ಸಧ್ಯದಲ್ಲಿಯೇ ಶಾಸನವೊಂದು ಬರಲಿರುವುದೆಂದು ಹೇಳಲಾಗಿದೆ.

## ಭಾರತದ ಮುಸ್ಲಿಮರನ್ನೋಲೆ ಪಾಕ್ ಪೋಲೀಸರ ಗುಂಪು

ಅಸ್ಸಾಮಿನ ಗಡಿ ... ಪಾಕೀಸ್ತಾನದ ಪೋಲೀಸರು ... ಗಡಿ ... ಮನೆ ... ಪಾಕಿಸ್ತಾನಕ್ಕೆ ... ಬಂದ ... ಒಬ್ಬರಿಗೆ ... ವಾರ್ತೆ ... ಬೆದರಿಕೆ ...

## ೮೦೦೦ ನಿರಾಶ್ರಿತರಿಗೆ ಮನೆ

ಭಾರತ ಸರಕಾರದವರು ಈ ವರ್ಷದಲ್ಲಿ ೮ ಸಾವಿರ ಮನೆ ನಿರಾಶ್ರಿತರಿಗೆ ಕಟ್ಟಲು ... ... ಕಟ್ಟಲಿದ್ದಾರೆ

## ನೆಹರೂರವರಿಗೆ ಇನ್ನೊಂದು ಗೌರವ ಪ್ರಶಸ್ತಿ

ನಾಗಪುರ ವಿಶ್ವವಿದ್ಯಾಲಯದವರು ನೆಹರೂ ... ರವರಿಗೆ ಡಾಕ್ಟರ್ ಆಫ್ ಲಾ ... ಗೌರವ ಪ್ರಶಸ್ತಿಯನ್ನು ಕೊಟ್ಟು ... ವಿಶೇಷ ಸಭೆ ... ಪ್ರತಿಕೊಟ್ಟಿಗೂ ... ಪಂಡಿತರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು

## ವಿಷಕ್ರಿಮಿಗಳ ಬಾಂಬಿಗಾಗಿ ೨೫ ವರ್ಷ ಶಿಕ್ಷೆ

ಇಂಗ್ಲೆಂಡ್, ಅಮೆರಿಕಾ ಮತ್ತು ರಷ್ಯ ಗಳ ಮೇಲೆ ಜಪಾನು ಯುದ್ಧ ಹೂಡಿದ್ದ ಕಾಲದಲ್ಲಿ ಹಲವು ಜಪಾನ್ ವೈಜ್ಞಾನಿಕರು ಆ ರಾಷ್ಟ್ರಗಳ ಮೇಲೆ ವಿಷಕ್ರಿಮಿಗಳುಳ್ಳ ಬಾಂಬುಗಳನ್ನು ಹಾಕಲು ಅವರು ಹೊಂದಿದ್ದರೆಂದು ರಷ್ಯದ ಮಿಲಿಟರಿ ನ್ಯಾಯಾಸ್ಥಾನವು ೪ ಜನರಿಗೆ ೨೫ ವರ್ಷ ಶಿಕ್ಷೆ ವಿಧಿಸಿದೆ.

## ಸೌರಾಷ್ಟ್ರದಲ್ಲಿ ೧೮೦೦ ಜಹಗೀರುದಾರರಿಗೆ ಜಮೀನುಗಳ ವಜಾ

ಸೌರಾಷ್ಟ್ರದಲ್ಲಿದ್ದ ೬೦೦ ಸಂಸ್ಥಾನಗಳ ... ಸುಮಾರು ... ಜಮೀನುಗಳನ್ನು ವಜಾ ಮಾಡಲಾಗಿದೆ ಇದರಿಂದ ... ಪಾಳೆಯಗಾರ ಪದ್ಧತಿಯು ಪೂರ್ಣವಾಗಿ ನಾಶವಾಯಿತೆಂದು ಹೇಳಲಾಗಿದೆ

## ಸಿ. ವಿ. ರಾಮನ್‌ರಿಗೆ ಆದರಪೂರ್ವಕ ಬಹುಮಾನ

ಅತಿ ಅಪೂರ್ವವಾದ ವಜ್ರಗಳನ್ನು ತುಂಬಿದ್ದ ಗಾಜಿನ ಕೋಣೆಯೊಂದನ್ನು ಅಮೆರಿಕದ ವೈಜ್ಞಾನಿಕರು ಭಾರತದ ಪ್ರಸಿದ್ಧ ಭೌತಶಾಸ್ತ್ರ ಪಾರಂಗತರಾದ ಸರ್ ಸಿ ವಿ ರಾಮನ್‌ರವರಿಗೆ ಬಹುಮಾನವಾಗಿ ಕೊಟ್ಟಿರುತ್ತಾರೆ "ರಾಮನ್ ಪರಿಣಾಮ" ಎಂಬುದಾಗಿ ಕಂಡುಹಿಡಿದಿರುವ ಹೊಸ ವಿಧಾನವನ್ನು ಮುಂದುವರಿಸಲು ಸಾಧ್ಯವಾಗಲೆಂದು ಈ ಬಹುಮಾನವನ್ನು ಕೊಡಲಾಗುವುದು

## ಫಿನ್‌ಲೆಂಡ್ ಗಡಿ ಬಳಿ ರಷ್ಯ ಸೈನ್ಯವೇ?

ರಷ್ಯ-ಫಿನ್‌ಲೆಂಡ್ ಗಡಿ ಬಳಿ ಬಲವಾದ ರಷ್ಯ ಸೈನ್ಯಗಳ ಕೇಂದ್ರೀಕರಣವಾಗಿರುವುದಾಗಿ ನ್ಯೂಯಾರ್ಕ್ ರೇಡಿಯೋ ತಿಳಿಸಿರುವುದು ಹೆಲ್ಸಿಂಕಿಯ ಸೈನ್ಯಾಧಿಕಾರಿಗಳು ಈ ಸುದ್ದಿಯು ನಿಜವಲ್ಲವೆಂದಿದ್ದಾರೆ

## ನರಿಗಳ ನಾಶದ ವಾರದ ಆಚರಣೆ

ಪಂಜಾಬಿನ ವ್ಯವಸಾಯ ಇಲಾಖೆಯು ಸತ್ತು ಸಾವಿರ ಗುಳ್ಳೆ ನರಿಗಳನ್ನು ನಾಶಮಾಡಲು ಒಂದು ವಾರವನ್ನು ಗೊತ್ತುಪಡಿಸಿದ್ದು ... ನರಿಗಳ ... ಒಂದು ವಾರ ಸಪ್ತಾಹವನ್ನಾಗಿ ಮಾಡುತ್ತಿರುವೆಯೆಂದು ಹೇಳಲಾಗಿದೆ


THE CITY TUTORIAL COLLEGE

C. T. C. Publications

Ready for Sale 0 8 0 each

A very useful Guide to B. Sc. & Inter Science Examinations

J. Neem ... Sons Mysore ... 


## ಭಾಗ್ಯವಂತರು ಅಲ್ಪ ಸಂಖ್ಯಾತರ ಸಮ್ಮೇಳನ

... ಪ್ರದೇಶಗಳಲ್ಲಿ ವಾಸಿಸುವ ಅಲ್ಪ ಸಂಖ್ಯಾತರ ಪ್ರಶ್ನೆಯು ಒಪ್ಪುದೆಸಿಸ್ಟುವಾಗು ... ದರಿಂದ ಅದನ್ನು ಇತ್ಯರ್ಥ ಮಾಡಲು ಒಂದು ಸಮ್ಮೇಳನವು ನಡೆಯ ವಿದೆಯು ಕಾಂಗ್ರೆಸ್ ಅಧ್ಯಕ್ಷ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿರುತ್ತಾರೆ

## ಅಂತರ್‌ರಾಷ್ಟ್ರೀಯ ಕಾರ್ಮಿಕ ಪ್ರತಿನಿಧಿಗಳಿಗೆ ಮೈಸೂರಿನ ಬಹುಮಾನ

ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನಕ್ಕಾಗಿ ಆಗಮಿಸಿರುವ ಪ್ರತಿನಿಧಿಗಳಿಗೆ ಹೊಸ ವರ್ಷದ ಬಹುಮಾನವನ್ನು ಸಂಸ್ಥಾನದ ಕಾರ್ಮಿಕ ಮಂತ್ರಿ ಶ್ರೀ ಕೆ ಟಿ. ಭಾಷ್ಯಂರವರು ಖುದ್ದಾಗಿ ಹಂಚಿದರು. ಸೊರಬ ಸಾಗರಗಳಲ್ಲಿ ಶಿಲ್ಪಿಗಳ ಸುಪ್ರಸಿದ್ಧ ಗಂಧದ ಮರದ ಸಾಮಾನು, ಗಂಧದ ಸಾಬೂನು, ಮುಂತಾದುವುಗಳನ್ನು ಕೊಟ್ಟರು ಇವುಗಳನ್ನು ಕಂಡು ಅವರುಗಳು ತುಂಬಾ ಹರ್ಷಗೊಂಡರೆಂದು ಹೇಳಲಾಗಿದೆ.

## ಸತ್ಕಾರ ಸಮಾರಂಭ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಆಡಳಿತ ಮಂಡಲಿಯ ಅಧ್ಯಕ್ಷರಾದ ಶ್ರೀ ಎಸ್ ... ರವರು ನಿನ್ನೆ ಸಂಜೆ ಲಲಿತ ಮಹಲಿನಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ... ಸಮ್ಮೇಳನದ ಅನೇಕ ಪ್ರತಿನಿಧಿಗಳೂ ಇತರ ಮಾನ್ಯ ಮಹಿಳೆಯರೂ ಮಹನೀಯರೂ ಬಂದಿದ್ದರು

ನೃತ್ಯ ನಾಟಕದ ... ... ... ನೆಯಲ್ಲಿ ... ಕಾರ್ಯಕ್ರಮ ... ಕೆ ಆರ್ ಪ್ರಸಾದ್ ಮುತ್ತು ಟಿ ಅನಂತ ಪದ್ಮನಾಭಾಚಾರ್ಯರು ಪ್ರತಿಸ್ಪರ್ಧೆ ಇಲ್ಲದೆ ಚುನಾಯಿತರಾಗಿದ್ದಾರೆ

## ಹರಿಕಥೆ

ದೇವರಾಜ ಮೊಹಲ್ಲಾ ಆನೆ ಸಾರೋಟರ ಬೀದಿ ಭಜನೆ ವೆಂಕಟಪ್ಪನವರ ರಾಮ ಮಂದಿರದಲ್ಲಿ ನಾಳೆ ರಾತ್ರಿ ೯-೩೦ ಘಂಟೆಗೆ ಶ್ರೀ ಎಚ್ ಕೆ ಎಲ್ ಭಾಗವತರಿಂದ "ಸತಿ ಅನಸೂಯ" ಎಂಬ ಹರಿಕಥೆ ನಡೆಯುತ್ತದೆ


ಗಣೇಶಾ ಟಾಕೀಸ್

3-1-50ರಿಂದ ಪ್ರತಿ ದಿನ 3 ಆಟಗಳು

ರಿಪಬ್ಲಿಕ್‌ರವರ ಸಾಹಸಮಯವಾದ ಪೂರ್ತಿ ಸಿನಿಮಾ

ಪೆಯಿಂಟೆಡ್ ಸ್ಟಾಲಿಯನ್

PAINTED STALLION

ಜಾನ್ ... ಮತ್ತು ...


... ... ... Edited, Printed and Published by ... R. Naga...

## ಸಂಗೀತ ಕಛೇರಿ

ಮೈಸೂರು

ಹುಣ್ಣಿಮೆ ಪ್ರಯುಕ್ತ ಈ ದಿನ ರಾತ್ರಿ ೮-೩೦ ಘಂಟೆಗೆ ಡಿ. ಸುಬ್ಬಯ್ಯನವರ ಛತ್ರದಲ್ಲಿರುವ ಸಾಧ್ವಿ ಕಛೇರಿಯ ಮಹಡಿಯ ಮೇಲೆ ವಿದ್ವಾನ್ ಎಸ್. ವಿಶ್ವನಾಥರವರ ಸಂಗೀತವು ಆ॥ ವಿ॥ ಸಿ. ಎಸ್. ಶ್ರೀನಿವಾಸ ಮೂರ್ತಿಯವರ ಪಿಟೀಲು ಮತ್ತು ಆ॥ ವಿ॥ ನಂಜನಗೂಡು ಸೀತಾರಾಮ ಶಾಸ್ತ್ರಿಗಳವರ ಮೃದಂಗದೊಡನೆ ನಡೆಯುವುದು ಸರ್ವರಿಗೂ ಸ್ವಾಗತವಿದೆ

## ಮುಹಮ್ಮದ್-ಪೈಗಂಬರರ ದಿನಾಚರಣೆ

ಮೈಸೂರು.

ನಿನ್ನೆ ದಿನ ರಾಜಧಾನಿಯ ಮುಸ್ಲಿಮರು ಮಹಮದ್ ಪೈಗಂಬರ್‌ರವರ ದಿನಾಚರಣೆಯನ್ನು ವಿಶೇಷ ಶ್ರದ್ಧಾಭಕ್ತಿಗಳಿಂದ ನೆರವೇರಿಸಿದರು. ಟೌನ್‌ಹಾಲ್ ಮೈದಾನದಲ್ಲಿ ಸಾವಿರಾರು ಜನರು ಸೇರಿ ಧ್ವಜಗಳಸಹಿತ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮಿಲಾದ್ ಪಾರ್ಕಿನಲ್ಲಿ ಒಂದು ಸಭೆ ನಡೆಯಿತು. ಹಣಕಾಸಿನ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರು ಅಗ್ರಾಸನ ವಹಿಸಿದ್ದರು. ಡಾ॥ ಅಣ್ಣಪ್ಪನವರೂ, ಜ॥ ಮಹಮದ್ ಸೇಟ್‌ರವರೂ ಮತ್ತು ಇತರ ಅನೇಕರು ಕನ್ನಡ, ಉರ್ದು, ಇಂಗ್ಲೀಷ್ ಮತ್ತು ಮಲೆಯಾಳಗಳಲ್ಲಿ ಭಾಷಣ ಮಾಡಿದರು. ಅಧ್ಯಕ್ಷರು ಮಹಮದ್ ಪೈಗಂಬರರಿಗೂ, ಮಹಾತ್ಮ ಗಾಂಧಿಯವರಿಗೂ ಇದ್ದ ಹೋಲಿಕೆಯನ್ನು ವಿವರಿಸಿದರು. ಆ ಮಹಾಪುರುಷರುಗಳ ಆದರ್ಶವನ್ನು ಎಲ್ಲರೂ ಆಚರಿಸಿ ದೇಶದ ಕಲ್ಯಾಣವನ್ನು ಸಾಧಿಸಬೇಕೆಂದು ಕೋರಿದರು

ಪೌರ ಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಮಂಡಿ ಮೊಹಲ್ಲಾದಲ್ಲಿಯೂ ಈ ಸಮಾರೋಪವನ್ನು ನಡೆಸಲಾಯಿತು.

## ತಿರುವಾಂಕೂರಿನಲ್ಲಿ ಕಮ್ಯೂನಿಸ್ಟ್ ಸಂಸ್ಥೆಗೆ ನಿಷೇಧ

ತಿರುವಾಂಕೂರು ಸಂಯುಕ್ತ ಸಂಸ್ಥಾನದಲ್ಲಿ ಕಮ್ಯೂನಿಸ್ಟ್ ಪಕ್ಷವು ಅಕ್ರಮ ಕೂಟವೆಂದು ಸಾರಲಾಗಿದೆ. ನೂರು ಜನ ಕಮ್ಯೂನಿಸ್ಟರ ಗುಂಪೊಂದು ಕೊಚ್ಚಿಯ ಎಂಬ ಊರಿನಬಳಿ ಒಂದು ಗ್ರಾಮಕ್ಕೆ ನುಗ್ಗಿ ಪೋಲೀಸ್ ಸ್ಟೇಷನ್ನಿನ ಮೇಲೆ ಧಾಳಿ ನಡೆಸಿ ಇನ್‌ಸ್ಪೆಕ್ಟರನ್ನೂ ಮೂರು ಜನ ಪೋಲೀಸರನ್ನೂ ಕೊಲೆಮಾಡಿದರು


ರಾಜಕಮಲ್

ಮೈಸೂರು

30-12-49 ರಿಂದ

ಜನಭರಿತವಾದ ೨ನೇ ವಾರ

ಜೀವನಂ

ಭೂಮಿಕೆ—

ವೈಜಯಂತಿಮಾಲಾ, ಟಿ ಆರ್ ರಾಮ ... ವೆಂ ... ಪದ್ಮಿನಿ

ಫೋ|| ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಬುಧವಾರ ೮-೨-೫೦ [ಸಂಚಿಕೆ ೧೩೩

# - ಆಂಧ್ರ ಪ್ರಾಂತದ - ರಚನೆಯಲ್ಲಿ ತೊಡಕು

## ಪೌರಸಭಾ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ

ಮೈಸೂರು ೮

ಹೊಸದಾಗಿ ರಚಿತವಾಗಿರುವ ಮೈಸೂರು ಪೌರಸಭೆಯು ಅಧ್ಯಕ್ಷರನ್ನೂ ಉಪಾಧ್ಯಕ್ಷರನ್ನೂ ಚುನಾಯಿಸಲು ಈ ತಿಂಗಳು ೧೬ನೇ ತಾ|| ಗುರುವಾರ ಮಧ್ಯಾಹ್ನ ೪ ಘಂಟೆಗೆ ಪೌರಸಭೆಯ ವಿಶೇಷ ಅಧಿವೇಶನವು ನಡೆಯುವುದು ಉಮೇದವಾರಿಕೆಗಳನ್ನು ೧೫ನೇ ತಾ|| ಬುಧವಾರ ಸಂಜೆ ೫ ಘಂಟೆವರೆಗೆ ಸ್ವೀಕರಿಸಲಾಗುವುದು

## ಶ್ರೀ ಮರ್ಗ ಮ ಹಾ ರಾ ಜ ರ ವ ರ ಸತ್ಕಾರ ಸಮಾರಂಭ

ಅಂತರ ರಾಷ್ಟ್ರೀಯ ಪ್ರತಿನಿಧಿಗಳ ಗೌರವಾರ್ಥವಾಗಿ ನಿನ್ನೆ ಸಂಜೆ ಚಾಮುಂಡಿ ಉದ್ಯಾನದಲ್ಲಿ ಒಂದು ಸತ್ಕಾರ ಸಮಾರಂಭವನ್ನು ಶ್ರೀಮನ್ಮಹಾರಾಜರು ಏರ್ಪಡಿಸಿದ್ದರು ಸಾವಿರಕ್ಕೆ ಮೇಲ್ಪಟ್ಟು ಅತಿಥಿಗಳು ಬಂದಿದ್ದರು ಉಪಾಹಾರಾನಂತರ ಪ್ರಭುಗಳು ಮುಖ್ಯ ಅತಿಥಿಗಳ ಪಂಚಯ ಮಾಡಿಕೊಂಡು ಕುಶಲ ಸಂಭಾಷಣೆ ನಡೆಸಿದರು.

## ಕಾಂ|| ಕಾರ್ಯಕಾರಿ ಮಂಡಲಿಗೆ ಹನುಮಂತಯ್ಯನವರು

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಶ್ರೀ ಕೆ ಹನುಮಂತಯ್ಯನವರನ್ನು ಅಧ್ಯಕ್ಷರು ನಾಮಕರಣ ಮಾಡಿರುತ್ತಾರೆ

## ಶೀಘ್ರದಲ್ಲಿ ಭಾರತ-ಅಮೇರಿಕ ಒಪ್ಪಂದ

ಭಾರತ ಮತ್ತು ಅಮೇರಿಕಗಳಿಗೆ ಒಪ್ಪಂದವೊಂದು ಶೀಘ್ರದಲ್ಲಿಯೇ ಆಗುವುದೆಂದು ಹೇಳಲಾಗಿದೆ ಅಮೇರಿಕವು ಭಾರತಕ್ಕೆ ಒದಗಿಸಬಹುದಾದ ಆರ್ಥಿಕ ಸಹಾಯದ ಬಗ್ಗೆ ಹಾಕಿದ್ದ ಷರತ್ತುಗಳನ್ನು ಅನೇಕವು ಬಾಬತು ತೆಗದುಕೊಂಡಿರುವುದರಿಂದ ಈ ರೀತಿ ಒಪ್ಪಂದವಾಗಲು ಅವಕಾಶವಾಗಿದೆಯೆಂದು ನಂಬಲಾಗಿದೆ

## ಸಕ್ಕರೆ ಹತೋಟಿ ಬಗ್ಗೆ ಸರಕಾರದ ಪರ್ಯಾಲೋಚನೆ

ಸಕ್ಕರೆಯನ್ನು ಹತೋಟಿಯಿಂದ ತಪ್ಪಿಸುವುದೇ, ಅಥವಾ ಪೂರ್ಣ ಹತೋಟಿಗೆ ಒಳಪಡಿಸುವುದೇ ಎಂಬ ಪ್ರಶ್ನೆಯನ್ನು ಭಾರತ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ಹೇಳಲಾಗಿದೆ ಸಕ್ಕರೆ ಬೆಲೆಯನ್ನು ನಿಗದಿಮಾಡಿ, ಪ್ರಾಂತ ಸರ್ಕಾರಗಳು ಆ ಪದಾರ್ಥದ ಹಂಚಿಕೆ ವ್ಯವಸ್ಥೆಯನ್ನು ನೋಡಿಕೊಳ್ಳಲು ಇದುವರೆಗೆ ಏರ್ಪಾಡು ಮಾಡಲಾಗಿತ್ತು.

## ಹೈದರಾಬಾದಿನಲ್ಲಿ ಪಾಕೀಸ್ತಾನಿ ನೌಕರರ ವಜಾ

ಹೈದರಾಬಾದು ಪೋಲೀಸು ಇಲಾಖೆಯಲ್ಲಿರುವ ಎಲ್ಲಾ ಪಾಕೀಸ್ತಾನೀ ಪ್ರಜೆಗಳನ್ನು ನೌಕರಿಯಿಂದ ತೆಗೆದು ಹಾಕಲು, ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ ಅವರಗಳ ಪಟ್ಟಿಯನ್ನು ತಯಾರಿಸಿ ಅವರಿಗೆ ನೋಟೀಸನ್ನು ಕೊಡಲಾಗುತ್ತಿದೆ

## ಆ ಹಾ ರ ಧಾ ನ್ಯ ಕೊಳೆಯುತ್ತಿದೆ

ಸಂಚಾರ ಸೌಲಭ್ಯಗಳ ಅಭಾವದಿಂದ ಪಟಿಯಾಲ ಮತ್ತು ಪೂರ್ವ ಪಂಜಾಬ್ ಸ್ಟೇಟ್ಸ್ ಯೂನಿಯನ್ನಿನಲ್ಲಿ ೮ ಲಕ್ಷ ಮಣ ಆಹಾರ ಧಾನ್ಯ ಕೊಳೆತ ... ವಾಗಿ ತಿಳಿದುಬಂದಿದೆ

## ರೆಡ್ಡಿ-ಹನುಮಂತಯ್ಯ ಭೇಟಿ ನಡೆಯಲಿಲ್ಲ

ಸ್ವಂ ಸು ಫೋ||] ಬೆಂಗಳೂರು ೮

ಈ ದಿನ ಪ್ರಾತಃಕಾಲ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರಿಗೂ ಶ್ರೀಗಳಾದ ಕೆ ಹನುಮಂತಯ್ಯ ಮತ್ತು ಟಿ ಸಿದ್ದಲಿಂಗಯ್ಯ ಇವರುಗಳಿಗೂ ಏರ್ಪಾಡಾಗಿದ್ದ ಭೇಟಿಯು ರೆಡ್ಡಿಯವರದೇಹಾಲಸ್ಯದಿಂದ ನಡೆಯಲಿಲ್ಲವೆಂದು ಗೊತ್ತಾಗಿದೆ ನಿನ್ನೆ ದಿನ ಶ್ರೀ ರೆಡ್ಡಿಯವರು ಬೊಂಬಾಯಿನಿಂದ ಬಂದಮೇಲೆ ಅವರನ್ನು ಪತ್ರಿಕಾ ಪ್ರತಿನಿಧಿಗಳು ಭೇಟಿ ಮಾಡಿದಾಗ ಮಂತ್ರಿ ಮಂಡಲದಲ್ಲಿ ಅದಲು (ಬದಲು) ಬದಲಾವಣೆಯಾಗುವುದೆಂದೂ, ತಾವು ಬೊಂಬಾಯಿಗೆ ಹೋಗಿ ಸರದಾರ್ ಪಟೇಲರೊಡನೆ ಮಾತನಾಡಿದುದಲ್ಲದೆ ತಮ್ಮ ಆರೋಗ್ಯದ ಬಗ್ಗೆ ವೈದ್ಯ ಸಲಹೆಯನ್ನು ಕೇಳಲು ಹೋಗಿದ್ದುದಾಗಿಯೂ ತಿಳಿಸಿದರು ಮಂತ್ರಿ ಮಂಡಲದ ಸಂಬಂಧವಾಗಿ ಸ್ಥಳೀಯ ಕಾಂಗ್ರೆಸ್ ಪ್ರಮುಖರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಾಗಿಯೂ ಶೀಘ್ರದಲ್ಲೇ ಯಾವುದನ್ನೂ ವ್ಯಕ್ತಪಡಿಸಲಾಗುವುದೆಂದೂ ತಿಳಿಸಿದರು

## ಕಾಂ|| ಕಾರ್ಯಕಾರಿ ಸಮಿತಿ ಸಭೆ

ನಾಳೆ ದಿನ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರುವುದು ಎ ಎಂ ಸಿ ಸಿ ಚುನಾವಣೆ ನಡೆಯುವುದು ಮತ್ತು ಭಾರತದ ಪಾರ್ಲಿಮೆಂಟಿಗೆ ಶಾಸನ ಸಭೆಯಿಂದ ನಡೆಯಬೇಕಾಗಿರುವ ಚುನಾವಣೆ ಇವೇ ಮುಂತಾದ ವಿಷಯಗಳನ್ನು ಪರಿಶೀಲಿಸಲಾಗುವುದು. ಮಧ್ಯಾಹ್ನ ೩ ಗಂಟೆಗೆ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಕುಮಾರಪಾರ್ಕಿನಲ್ಲಿ ನಡೆಯುವುದು

## ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣ ಮಹೋತ್ಸವ

ಈ ವರ್ಷ ಜೂನ್ ತಿಂಗಳಿಗೆ ಐವತ್ತು ವರ್ಷ ಪೂರ್ತಿಯಾಗಲಿರುವ ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣ ಮಹೋತ್ಸವದ ಏರ್ಪಾಡಿನ ಬಗ್ಗೆ ಸರಕಾರದವರ ಹಲವು ಸಲಹೆಗಳಿಗೆ ಒಪ್ಪಿಗೆ ಇತ್ತಿದ್ದಾರೆ ... ವೈದ್ಯ ಪರಿಕರ ... ಪುಗಳಿಗೆ ಮಂಜೂರಾತಿ ದೊರೆತಿದೆ

## ಭಾರತ ಕಾರ್ಮಿಕ ಮಂತ್ರಿ ಬಳಿ ರೈಲ್ವೆಯವರ ನಿಯೋಗ

ಮೈಸೂರು ೮

ಭಾರತದ ಕಾರ್ಮಿಕಮಂತ್ರಿಗಳಾದ ಶ್ರೀ ಜಗಜೀವನರಾಂರವರ ಬಳಿಗೆ ಸಂಸ್ಥಾನದ ರೈಲ್ವೆ ಉದ್ಯೋಗಸ್ಥರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಈ ಬೇಗ್ಗೆ ನಿಯೋಗ ಹೋಗಿದ್ದರು ಮಂತ್ರಿಗಳಿಗೆ ಒಂದು ಮನವಿಯನ್ನು ಅರ್ಪಿಸಲಾಯಿತು ಸಂಘವನ್ನು ರೈಲ್ವೆ ಫೆಡರೇಷನ್ನಿಗೆ ಸೇರಿಸಿಕೊಳ್ಳುವುದು, ಎಲ್ಲಾ ಕಡೆಗಳಲ್ಲಿಯೂ ಒಂದೇ ವಿಧವಾದ ಕಾರ್ಮಿಕ ಶಾಸನವನ್ನು ಜಾರಿಗೆ ತರುವುದು, ಕನಿಷ್ಟಾಂಶ ಕೂಲಿಯನ್ನು ಗೊತ್ತುಪಡಿಸುವುದು, ರೈಲ್ವೆ ವರ್ಕ್‌ಷಾಪನ್ನು ವಿದ್ಯುಚ್ಛಕ್ತಿಯ ಇಂಜಿನ್ ತಯಾರಿಕಾ ಕೇಂದ್ರವನ್ನಾಗಿ ಪರಿವರ್ತಿಸಿ, ಅದನ್ನು ಹೆಚ್ಚು ಪ್ರಮಾಣವುಳ್ಳದ್ದನ್ನಾಗಿ ಮಾಡುವುದು, ಇವೇ ಮುಂತಾದ ವಿಷಯಗಳನ್ನು ಮಂತ್ರಿಗಳಿಗೆ ವಿವರಿಸಲಾಯಿತು ಅವರು ಸಾವಧಾನವಾಗಿ ಎಲ್ಲವನ್ನೂ ಕೇಳಿ, ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ಭರವಸೆಯಿತ್ತರು

## ಶ್ರೀ ಜಗಜೀವನ ರಾಂರವರು

ಸ್ವಂ ಸು ಫೋ||] ಬೆಂಗಳೂರು ೮

ಭಾರತದ ಕಾರ್ಮಿಕ ಮಂತ್ರಿ ಶ್ರೀ ಜಗಜೀವನರಾಂರವರು ಇಲ್ಲಿಗೆ ಈ ಮಧ್ಯಾಹ್ನ ... ೧೦ ಗಂಟೆಗೆ ಅವರ ಗೌರವಾರ್ಥವಾಗಿ ಶ್ರೀ ... ಸನ್ನಿನವರು ಸತ್ಕಾರವೊಂದನ್ನು ಏರ್ಪಡಿಸಿದ್ದರು ಸಂಜೆ ... ನಲ್ಲಿ ಸಂಸ್ಥಾನದ ನಿಮ್ನ ವರ್ಗದವರು ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸುವರು

### ಭತ್ತ ಸಾಗಿಸಲು ರಹದಾರಿ

ಆಹಾರದ ಅಜ್ಞೆಯ ... ನೇ ... ವನೆಯನ್ನು ಬದಲಾಯಿಸಿ ಸರಕಾರದವರು ಸರ್ಕಾರಿ ಆಜ್ಞೆ ... ಭತ್ತದ ರ ... ಸಾಗಿಸಬೇಕಾದರೆ ರಹದಾರಿಯನ್ನು ಪಡೆಯಬೇಕೆಂದು ... ಕ್ರಮ ಮಾಡಿರುವರು ... ... ಚಿಕ್ಕಬಳ್ಳಾಪುರ ... ... ಸಕ್ಕಸೆ ... ಕಪಟ ... ... ಯಿಂದ ... ಗಾಗಿ

## ಆಂಧ್ರ ಪ್ರಾಂತ್ಯ ರಚನೆ ಬಗ್ಗೆ ತೊಡಕು

ಆಂಧ್ರ ಪ್ರಾಂತ್ಯ ರಚನೆ ಬಗ್ಗೆ ಮದರಾಸ್ ವಿಭಜನಾ ಸಮಿತಿಯವರು ಮಾಡಿದ್ದ ಸಲಹೆಗಳನ್ನು ಕುರಿತು ಆಂಧ್ರ ಪ್ರಾಂತ್ಯ ಕಾಂಗ್ರೆಸ್ ಸಮಿತಿಗೆ ಅಸಮ್ಮತಿಯುಂಟಾಗಿ, ಆದರಿಂದ ಆಂಧ್ರ ಪ್ರಾಂತ್ಯ ರಚನೆ ವಿಚಾರವಾಗಿ ಸ್ವಲ್ಪ ತೊಡಕುಂಟಾಗಿದೆ ಮದರಾಸ್ ವಿಭಜನಾ ಸಮಿತಿಯವರು ಮಾಡಿರುವ ಸಲಹೆಗಳ ಪ್ರಕಾರ ಆಂಧ್ರ ಪ್ರಾಂತದ ರಾಜಧಾನಿಯನ್ನು ತಾತ್ಕಾಲಿಕವಾಗಿಯೂ ಮದರಾಸ್ ನಗರದಲ್ಲಿ ಸ್ಥಾಪಿಸಕೂಡದೆಂದು ಸೂಚಿಸಿರುವುದಾಗಿ ಹೇಳಲಾಗಿದೆ ನಿನ್ನೆ ದಿವಸ ಸಮಾವೇಶಗೊಂಡಿದ್ದ ಆಂಧ್ರ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧಿಕಾರಿ ವರ್ಗದವರು ಸಭೆ ಸೇರಿ ಈ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ, ಆದರಿಂದ ಆಂಧ್ರರಿಗೆ ಉದ್ರೇಕ ಉಂಟಾಗಿದೆಯೆಂದೂ ನಿರ್ಣಯ ಮಾಡಿರುತ್ತಾರೆ

## ಕೊಲೆ ಮಾಡಿದುದನ್ನು ನಂಬದೆ ಮರಣದಂಡನೆ ಶಿಕ್ಷೆ

ದಕ್ಷಿಣ ಆಫ್ರಿಕದ ಪೋರ್ಟ್ ಎಲಿಜಬೆತ್ ಎಂಬಲ್ಲಿ ೪೦ ವರ್ಷ ವಯಸ್ಸಿನ ಜಾರ್ಜ್ ಲಿಂಕರ್ ಎಂಬಾತನು ಅಲ್ಲಿನ ಒಬ್ಬ ಸ್ತ್ರೀಯನ್ನು ಕೊಲೆ ಮಾಡಿದನೆಂಬ ಅಪಾದನೆ ಮೇಲೆ ಅಲ್ಲಿನ ನ್ಯಾಯಾಧೀಶರೊಬ್ಬರು ತಾವು ಕೊಲೆಯ ಸುದ್ದಿಯನ್ನು ನಂಬದಿದ್ದರೂ ಅವನಿಗೆ ಮರಣದಂಡನೆ ವಿಧಿಸಿದರು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಈ ರೀತಿ ತಿಳಿಸಿದ್ದಾರೆ.- ನನ್ನ ಅಭಿಪ್ರಾಯದಲ್ಲಿ, ಸರ್ಕಾರದವರು ಕೊಲೆ ಮಾಡಿದ ಅಂಶವನ್ನು ಸಮರ್ಥಿಸಿಲ್ಲ ಇಬ್ಬರು ಅಸೆಸರುಗಳೂ ಕೊಲೆ ಅಪಾದನೆಯು ಸದೃಢವಾಗಿದೆಯೆಂದು ಸಾಧಿಸುತ್ತಿರುವುದರಿಂದ ನಾನು ವಿಧಿಸಬಹುದಾದ ಒಂದೇ ಒಂದು ಶಿಕ್ಷೆಯಾದರೂ ಮರಣ ದಂಡನೆ

## ಪಾಕೀಸ್ತಾನಕ್ಕೆ ಪೋಲೆಂಡಿನಿಂದ ಕಲ್ಲಿದ್ದಲು

ಪೋಲೆಂಡು ಪಾಕೀಸ್ತಾನಕ್ಕೆ ಇನ್ನು ಮುಂದೆ ಪ್ರತಿ ತಿಂಗಳೂ ಐದು ಸಾವಿರ ಟನ್ ಕಲ್ಲಿದ್ದಲನ್ನು ಸರಬರಾಜು ಮಾಡಲು ಒಪ್ಪಿದೆಯೆಂದು ಗೊತ್ತಾಗಿದೆ ಇಲ್ಲಿಗೆ ಪ್ರತಿಯಾಗಿ ಪಾಕೀಸ್ತಾನಕ್ಕೆ ಹತ್ತಿ ಕಳುಹಿಸಲು ಸರಬರಾಜು ಮಾಡಲು ಒಪ್ಪಿದೆಯೆಂದು ತಿಳಿದುಬಂದಿದೆ

## ಮೂಗನಿಗೆ ಬಸ್ ಇನ್ಸ್‌ಪೆಕ್ಟರ ಕೆಲಸ

ಇಂಗ್ಲೆಂಡಿನ ಲ್ಯಾಂಕಾಷೈರಿನಲ್ಲಿ ೭೪ ವರ್ಷ ವಯಸ್ಸಿನ ಜೇಮ್ಸ್ ಸ್ಕಿನ್ನರ್ ಎಂಬ ಮೂಗನು ಬಸ್ ಇನ್ಸ್‌ಪೆಕ್ಟರಾಗಿ ನೇಮಕ ಹೊಂದಿದ್ದಾನೆ ಅವನ ಪ್ರತಿ ಗಂಟೆಗೂ ... ... ... ... ಸಲಹೆಗಳನ್ನು ... ... ... ತಿಳಿಸಲಾಗಿದೆ

## ಮೈಸೂರು ಜಿಲ್ಲಾ ಖಜಾನೆ ಅಧಿಕಾರಿಗಳು

ಶ್ರೀ ಎ ಸತ್ಯನಾರಾಯಣ ಮೂರ್ತಿಯವರು ... ... ... ... ನೇಮಿಸಲಾಗಿದೆ

## ಜಲಪುರಿಯಲ್ಲಿ ವಯಸ್ಕರ ಶಿಕ್ಷಣ

ಮೈಸೂರು ೪

ಕಳೆದ ಶಕ್ರವಾರ ಜಲಪುರಿ ಜಿಲ್ಲಾ ಬೋರ್ಡ್ ಅಭಿವೃದ್ಧಿ ಸಮಿತಿಯ ಆಶ್ರಯದಲ್ಲಿ ವಯಸ್ಕರ ಶಿಕ್ಷಣ ದಿನಾಚರಣೆಯನ್ನು ಸೂಚಿಸಲಾಗಿತ್ತು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಆದಿ ಜಾಂಬವಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎನ್ ರಾಚಯ್ಯನವರು ಅಧ್ಯಕ್ಷರಿಗೂ ಮತ್ತು ಇತರ ಮಹನೀಯರಿಗೂ ಸುಸ್ವಾಗತವನ್ನು ಬಯಸಿದರು

ನಗರ ವಯಸ್ಕರ ಶಿಕ್ಷಣ ಸಮಿತಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ಎಸ್ ವಿ. ಮಂಜುನಾಥರವರು ಮತ್ತು ಶ್ರೀ ಸೀರಳೀ ಮಾದಯ್ಯನವರೂ ವಯಸ್ಕರ ಶಿಕ್ಷಣದ ಆವಶ್ಯಕತೆ ಮತ್ತು ಪುಸ್ತಕ ಭಂಡಾರಗಳ ಉಪಯೋಗಗಳ ಬಗ್ಗೆ ಅಮೂಲ್ಯವಾದ ಭಾಷಣಗಳನ್ನು ಮಾಡಿದರು

ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಒಂದು ಪುಸ್ತಕ ಭಂಡಾರ ಮತ್ತು ಎರಡು ಹೊಸ ತರಗತಿಗಳ ಆರಂಭೋತ್ಸವವನ್ನೂ ನೆರವೇರಿಸಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಗೆ ಹೋಗಿ ವಿದ್ಯೆ ಕಲಿಯಲು ಸಾಧ್ಯವಾಗದಿರುವ ವಯಸ್ಕರಿಗಾಗಿ ಏರ್ಪಡಿಸಿರುವ ಇಂತಹ ಶಾಲೆಗಳನ್ನೂ, ಪುಸ್ತಕ ಭಂಡಾರಗಳನ್ನೂ ಹೆಚ್ಚು ಹೆಚ್ಚಾಗಿ ಸ್ಥಾಪಿಸದಿದ್ದಲ್ಲಿ ಶೇಕಡ ೯೦ ಮಂದಿ ಅವಿದ್ಯಾವಂತರಿರುವ ನಮ್ಮನಾಡು ಪ್ರಗತಿ ಹೊಂದಲಾರದೆಂದು ಒತ್ತಿಹೇಳಿ ಆದಿಜಾಂಬವಾಭಿವೃದ್ಧಿ ಸಮಿತಿಯವರು ಮುಂದೆ ಬಂದ ಕೈಗೊಂಡಿರುವ ಕಾರ್ಯಕ್ಕೆ ಮೆಚ್ಚಿಗೆಯನ್ನು ಸೂಚಿಸಿದರು

ಪಾರ್ವತೀಪರಮೇಶ್ವರ ನೃತ್ಯ ಮತ್ತು ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿತ್ತು ನೆರೆದಿದ್ದ ಕೇರಿಯವರೆಲ್ಲರೂ ಬಹಳ ಆನಂದಪಟ್ಟು ಹೆಂಗಸರು ಗಂಡಸರು ಎಂಬ ಭೇದವಿಲ್ಲದೆ ಮುಂದೆಂದು ಅಕ್ಷರಸ್ಥರಾಗಲು ವಿದ್ಯೆ ಕಲಿಯುತ್ತೇವೆಂದು ಭರವಸೆ ಕೊಟ್ಟರು

ವಂದನಾರ್ಪಣೆಯಾದನಂತರ "ವಂದೇಮಾತರಂ" ನೊಡನೆ ಸಭೆ ಮುಕ್ತಾಯಗೊಂಡಿತು.

## ಹರಿಜನ ಕೇರಿಗೆ ಜಗಜೀವನರಾಂರವರ ಭೇಟಿ

ಮೈಸೂರು ೪

ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿಗಳಾದ ಶ್ರೀ ಜಗಜೀವನರಾಂ ಅವರು ನಿನ್ನೆ ದಾವಣಗೆರೆ, ಜಲಪುರಿ, ಕುಕ್ಕರಹಳ್ಳಿ ಮತ್ತು ಆದಿ ಕರ್ನಾಟಕ ಪುರದಲ್ಲಿರುವ ಹರಿಜನ ಕೇರಿಗಳಿಗೆ ಭೇಟಿ ಇತ್ತರು ಅವರೊಡನೆ ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಆರ್ ಚನ್ನಿಗರಾಮಯ್ಯ ಮತ್ತು ಜಿಲ್ಲಾಧಿಕಾರಿಗಳೂ, ಪುರಸಭಾ ಕಮೀಷನರೂ, ರೀಜನಲ್ ಅಧಿಕಾರಿಗಳೂ ಇದ್ದರು ಅವರು ಹರಿಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಆಸಕ್ತಿಯಿಂದ ಕೇಳಿ ತಿಳಿದುಕೊಂಡರು ಕುಕ್ಕರಹಳ್ಳಿ ಮತ್ತು ಆದಿಕರ್ನಾಟಕ ಪುರದಲ್ಲಿ ಅಭಿವೃದ್ಧಿ ನಿಧಿಯ ಸಹಾಯದಿಂದ ಕಟ್ಟಲಾಗಿರುವ ಮನೆಗಳನ್ನು ನೋಡಿ ಕೆಲವು ಸಲಹೆಗಳನ್ನು ಕೊಟ್ಟರು

### ಮಂತ್ರಿಗಳಿಗೆ ಆಹ್ವಾನವಿಲ್ಲ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗಳಿಗೆ ಬರುವ ತಿಂಗಳಿನಿಂದ ಮಂತ್ರಿಗಳಿಗೆ ಆಹ್ವಾನವನ್ನು ಕಳುಹಿಸತಕ್ಕ ಪದ್ಧತಿಯನ್ನು ಇನ್ನು ಮುಂದೆ ತಪ್ಪಿಸಿ ಸದಸ್ಯರನ್ನು ಮಾತ್ರ ಕರೆಯುವಂತೆ ಅಧ್ಯಕ್ಷರ ನಿರ್ಧರಿಸಿದ್ದಾರೆ

### ಭಾರತ ರೈಲ್ವೆ ಸಚಿವರ ಆಗಮನ

ಕೇಂದ್ರ ಸರ್ಕಾರದ ರೈಲ್ವೆ ಸಚಿವರಾದ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್ಯರು ಮುಂದಿನ ವಾರ ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಡುವರೆಂದು ತಿಳಿದು ಬಂದಿದೆ

### ರೆಡ್ಡಿಯವರು ವಾಪಸು

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಿನ್ನೆ ಮಧ್ಯಾಹ್ನ ಬೊಂಬಾಯಿನಿಂದ ಬೆಂಗಳೂರಿಗೆ ಹಿಂದಿರುಗಿದರು

### ಇಂಡೋನೇಷ್ಯಕ್ಕೆ ಸದಸ್ಯತ್ವ

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಆಡಳಿತ ಮಂಡಲಿಯಲ್ಲಿ ನೂತನ ಸ್ವತಂತ್ರ ರಾಷ್ಟ್ರವಾದ ಇಂಡೋನೇಷ್ಯಕ್ಕೆ ಸ್ಥಾನವನ್ನು ಕೊಡಬೇಕೆಂದು ನೆದರ್ಲ್ಯಾಂಡ್ ಸರ್ಕಾರದವರಿಂದ ಬಂದಿದ್ದ ಸೂಚನೆಯನ್ನು ನಿನ್ನೆ ಪೋಲ್ಯಾಂಡ ಸಂಸ್ಥೆಯ ಸಭೆಯಲ್ಲಿ ಅಂಗೀಕರಿಸಲಾಯಿತು

## ಬಹಿರಂಗ ಸಭೆ

ಮೈಸೂರು ೪

ಮೈಸೂರು ಸರ್ಕಾರದವರು ಶ್ರೀ ಶೃಂಗೇರಿ ಮಠದ ಆಡಳಿತವನ್ನು ನಡೆಸಲು ಈಗಿರುವ ಸರ್ಕಾರಿ ಅಧಿಕಾರಿಗಳ ಬದಲು ಬೇರೆ ಸಮಿತಿಯನ್ನು ನೇಮಿಸಬೇಕೆಂದು ಆಲೋಚಿಸಿರುವ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಲು ಇದೇ ಏಳನೇ ತಾ|| ಶನಿವಾರ ಸಂಜೆ ೬|| ಘಂಟೆಗೆ ರಾಜಧಾನಿಯ ಅಭಿನವ ಶಂಕರಾಲಯದಲ್ಲಿ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಭೆಯೊಂದು ನಡೆಯುವುದಾಗಿಯೂ ಇದರಲ್ಲಿ ಸಾರ್ವಜನಿಕರು ಸಹಕರಿಸಬೇಕೆಂದೂ ಮಠದ ಶಿಷ್ಯ ಮಂಡಲಿಯವರು ಕೋರಿರುತ್ತಾರೆ

### ಸ್ಕಾಟುಗಳ ಪ್ರವಾಸ

ರಾಜಧಾನಿಯ ಲಕ್ಷ್ಮೀಪುರಂ ಮಾಧ್ಯಮಿಕ ಶಾಲಾ ಸ್ಕಾಟುಗಳು ಕಳೆದ ೩೦ನೇ ತಾ|| ಸೋಮವಾರ ಸೋಮನಾಥಪುರ, ಶಿವನಸಮುದ್ರದ ವಿದ್ಯುಚ್ಛಕ್ತಿ ಕೇಂದ್ರ, ಕಾವೇರಿ ಜಲಪಾತ, 'ಬ...ಡು ಮುಂತಾದ ಪ್ರೇಕ್ಷಣೀಯ ... ಗಳಿಗೆ ಭೇಟಿ ಕೊಟ್ಟರು

[illegible] ಸ್ಕಾಟುಗಳ ... ವಿಮಾನ ... ಸಕ್ಕರೆ ... ಕಾರ್ಖಾನೆಯನ್ನು ... ಎಂ ಬಿ ಮೋಟಾರು ಸರ್ವಿಸ್ ಮಾಲೀಕರು ... ದರ್ಶನ ... ರವರ ... ನೋಡಿಕೊಂಡು ಕರೆತಂದ ಹೆ|| ಮಾ|| ರವರ ಮತ್ತು ಸ್ಕಾಟು ಮಾಸ್ಟರುಗಳಿಗೆ ಮಕ್ಕಳ ಪೋಷಕರು ಧನ್ಯವಾದಗಳನ್ನು ಸಲ್ಲಿಸಿದ್ದಾರೆ

### ೧೪೦ ವರ್ಷದ ಮುದಕ; ೧೧೮ ಮಕ್ಕಳು, ಮೊಮ್ಮಕ್ಕಳು

ಟರ್ಕಿಯ ಗಡಿಯಲ್ಲಿರುವ ಒಸ್ಸದ ಗ್ರಾಮವೊಂದರಲ್ಲಿ ೧೪೦ ವರ್ಷ ವಯಸ್ಸಿನ ವೃದ್ಧನಾದ ಮುದುಕನೊಬ್ಬನಿರುವನೆಂದೂ, ಅವನಿಗೆ ೧೧೮ ಜನ ಮಕ್ಕಳು, ಮೊಮ್ಮಕ್ಕಳೂ ಇರುವರೆಂದೂ ತಿಳಿದು ಬಂದಿದೆ ಆ ಊರಿನಲ್ಲಿ ಸಾಮೂಹಿಕ ವ್ಯವಸಾಯ ಪದ್ಧತಿಯು ಆಚರಣೆಯಲ್ಲಿರುವುದರಿಂದ ಅವರು ಬೆಳೆದ ಧಾನ್ಯದಲ್ಲಿ ಅವನ ಮನೆಗೆ ಅರ್ಧ ಭಾಗವು ದೊರೆಯುತ್ತದೆ ಮುದುಕನು ಕಳೆದ ತಿಂಗಳಲ್ಲಿ ೧೮ ದಿವಸ ಕೆಲಸಮಾಡಿ ಸಂಬಳವನ್ನು ತೆಗೆದುಕೊಂಡಿರುವನು

## ಪೋಸ್ಟಾಫೀಸಿನಲ್ಲಿ ೫೪ ಸಾವಿರ ರೂ. ಕಳವು

ಕಲ್ಕತ್ತೆಯ ಉತ್ತರ ಭಾಗದ ಒಂದು ಅಂಚೆಕಛೇರಿಗೆ ನಿನ್ನೆ ಶಸ್ತ್ರ ಸಜ್ಜಿತರಾದ ... ನುಗ್ಗಿ ಅಲ್ಲಿನ ಖಜಾನೆಯಿಂದ ೫೪ ಸಾವಿರ ರೂ ಗಳನ್ನು ಅಪಹರಿಸಿಕೊಂಡು ಹೋದರೆಂದು ತಿಳಿದು ಬಂದಿದೆ ಅವರು ಬಂದೂಕಗಳನ್ನು ಹಿಡಿದು ಅಧಿಕಾರಿಗಳನ್ನು ಬೆದರಿಸಿ ಹಣವನ್ನು ದೋಚಿಕೊಂಡು ಹೊರಗಡೆ ನಿಂತಿದ್ದ ಟ್ಯಾಕ್ಸಿಯಲ್ಲಿ ಪಲಾಯನ ಮಾಡಿದರೆಂದು ಹೇಳಲಾಗಿದೆ

### ದೆಹಲಿಯಲ್ಲಿ ಶಾಂತಿ ಸಪ್ತಾಹ

ಶ್ರೀ ದೇವದಾಸ್ ಗಾಂಧಿಯವರ ಅಧ್ಯಕ್ಷತೆಯಲ್ಲಿ ಶಾಂತಿ ಸಪ್ತಾಹವು ನಿನ್ನೆ ದಿನ ದೆಹಲಿಯಲ್ಲಿ ಆರಂಭವಾಯಿತು ... ಶಾಂತಿ ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳು ಭಾಷಣ ಮಾಡಿ ಗಾಂಧೀಜಿಯವರ ಸತ್ಯ, ಅಹಿಂಸೆಗಳ ಸಂದೇಶದಿಂದಲೇ ಪ್ರಪಂಚಕ್ಕೆ ಕ್ಷೇಮವೆಂದು ಹೇಳಿದರು

### ಫ್ರೆಂಚ್ ಸರ್ಕಾರ ಉಳಿದು ಕೊಂಡಿತು

ಕೇವಲ ೪ ಓಟುಗಳ ಬಹುಮತದಿಂದ ಫ್ರೆಂಚ್ ರಾಷ್ಟ್ರೀಯ ಸಭೆಯು ಒಡ್ಡಿದ ಮೋಲಿನ ಚರ್ಚೆಯಲ್ಲಿ ಅಲ್ಲಿನ ಸರ್ಕಾರವು ವಿಶ್ವಾಸವನ್ನು ಗಳಿಸಿರುತ್ತದೆ ಸರ್ಕಾರದ ಕಡೆ ೩೦೦ ಓಟುಗಳೂ ವಿರೋಧವಾಗಿ ೨೯೬ ಓಟುಗಳೂ ಬಂದವು ಆಯವ್ಯಯವನ್ನು ಸರಿತೂಗಿಸಲು ೬೪೦೦ ಕೋಟಿ ಫ್ರಾಂಕುಗಳಷ್ಟು ಹೊಸ ತೆರಿಗೆಗಳನ್ನು ಹಾಕಲು ಸರ್ಕಾರವು ನಿರ್ಧರಿಸಿತ್ತು


# ಗಾಯತ್ರೀ ಟಾಕೀಸ್

4-1-50ರಿಂದ 2 ದಿನಗಳು ಮಾತ್ರ
ದಿನವಹಿ 3 ಪ್ರದರ್ಶನಗಳು
ಸ್ತ್ರೀ ಸಾಹಸ ಮತ್ತು ಶೌರ್ಯವನ್ನು ಕಾಣಬಹುದಾದ ಚಿತ್ರ

**Belle Starr's Daughter**

(ಬೆಲ್ಲಿ ಸ್ಟಾರ್ಸ್ ಡಾಟರ್)

ಪಾತ್ರ—ಜಾರ್ಜ ಮಾಂಟ್ ಗೋಮರಿ, ರುತಾ ರೋಮನ್

— ಮುಂದಿನ ಬದಲಾವಣೆ —
ONE TOUCH of VENUS



# ಚಾಮುಂಡೇಶ್ವರೀ ಟಾಕೀಸ್

5-1-49ರಿಂದ ಆಕರ್ಷಣೀಯವಾದ 2ನೇ ವಾರ ದಿನವಹಿ 3 ಆಟಗಳು

ವಾಹಿನಿಯವರ ಅನೋಘವಾದ ತೆಲುಗು ಚಿತ್ರ

## * ಗುಣ ಸುಂದರಿ ಕಥಾ *

[illegible]



## Mysore Co-operative Society Ltd,
MYSORE

Applications are invited for the post of Clerk in the above Society minimum qualification required being S S L C Pass, Accountancy & Auditing Last date for the receipt of applications is 10-1-50 Salary according to qualifications

G V DESIKACHAR




... V R Narasimh... Kotwal?, Mysore

ಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಗುರುವಾರ ೫-೧-೫೦ [ಸಂಚಿಕೆ ೧೩೩

# ಪಾಕಿಸ್ತಾನಕ್ಕೆ ಯುದ್ಧವು ಬೇಕಾದರೆ ನಾವು ಸಿದ್ಧ

## ಬೆಳಗೊಳದ ಕಂಪೆನಿಯಲ್ಲಿ ೯೪ ಜನ ಕಾರ್ಮಿಕರ ವಜಾ

ಮೈಸೂರು ೫

ಬೆಳಗೊಳದಲ್ಲಿರುವ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆಯು ೯೪ ಜನ ಕೆಲಸಗಾರರನ್ನು ಈ ತಿಂಗಳ ೫ರಿಂದ ಜಾರಿಗೆ ಬರುವಂತೆ ವಜಾ ಮಾಡಿರುವುದಾಗಿ ಗೊತ್ತಾಗಿದೆ. ಕಂಪೆನಿಯು ಆಡಳಿತ ವರ್ಗದವರು ನಿಯಮದ ಪ್ರಕಾರ ೧೫ ದಿನಗಳ ನೋಟೀಸನ್ನೂ ಸಹ ಕೊಡದೆ ಹೀಗೆ ಮಾಡಿರುವರು. ಸದ್ಯದಲ್ಲಿಯೇ ಇನ್ನೂ ಕೆಲವರನ್ನು ತೆಗೆಯುವರೆಂಬ ವರ್ತಮಾನವಿದೆ.

ಈಗ ತೆಗೆಯಲ್ಪಟ್ಟಿರುವವರ ಪೈಕಿ ಕಂಪೆನಿಯ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಎ ಸುಬ್ರಹ್ಮಣ್ಯ ಅಯ್ಯರ್ ಮತ್ತು ಕಾರ್ಯದರ್ಶಿ ಶ್ರೀ ಬಿ ಎಲ್ ಸುಂದರರಾಜರವರೂ ಸೇರಿದ್ದಾರೆ. ಈಗ್ಗೆ ೧೫ ದಿನಗಳ ಕೆಳಗೆ ಕಾರ್ಮಿಕರ ವೆಲ್‌ಫೇರ್ ಆಫೀಸರ್ ಆದ ಶ್ರೀ ಲಕ್ಷ್ಮೀಪತಿಯವರನ್ನು ಸಹ ತೆಗೆದುಹಾಕಲಾಗಿತ್ತು.

ಕಾರ್ಖಾನೆಯ ಮೋಟಾರ್ ಜನರೇಟರ್ ಕೆಟ್ಟುಹೋಗಿರುವುದರಿಂದ ಅದನ್ನು ಸರಿಮಾಡಲು ಕೆಲವು ಕಾಲವಾಗಬಹುದೆಂದೂ ಆದ್ದರಿಂದ ಕಾರ್ಮಿಕರನ್ನು ಕೆಲಸದಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲವೆಂದೂ ನೋಟೀಸಿನಲ್ಲಿ ತಿಳಿಸಲಾಗಿದೆ. ಜನರೇಟರು ರಿಪೇರಿ ಆದಮೇಲೆ ಮತ್ತೆ ಸೇರಿಸಿಕೊಳ್ಳುವುದಾಗಿ ಸಹಾ ಸೂಚಿಸಿಲ್ಲ. ಆಡಳಿತಗಾರರ ಈ ವರ್ತನೆಯಿಂದ ಕಾರ್ಮಿಕರಿಗೆ ವಿಶೇಷ ತೊಂದರೆಯೂ ಅನ್ಯಾಯವೂ ಆಗಿರುವುದೆಂದು ಹೇಳಲಾಗಿದೆ.

ವಜಾ ಮಾಡಲಾಗಿರುವ ಕೆಲಸಗಾರರ ಪೈಕಿ ಕೇವಲ ೮ ಜನರು ಮಾತ್ರ ಜನರೇಟರ್‌ನಲ್ಲಿ ಕೆಲಸ ಮಾಡುತ್ತಿದ್ದರು ... ಜನರಿಗೂ ಜನರೇಟರಿಗೂ ಸಂಬಂಧವೇ ಇರಲಿಲ್ಲ. ಅವರುಗಳು ಬೇರೆ ಬೇರೆ ಪ್ಲಾಂಟುಗಳಲ್ಲಿ ಕೆಲಸ ಮಾಡುತ್ತಿದ್ದರು. ಅವರ ಪೈಕಿ ಅನೇಕರು ೮-೧೦ ವರ್ಷಗಳಿಂದಲೂ ರಾತ್ರಿ ಹಗಲೆನ್ನದೆ ಒಳ್ಳೆ ಶ್ರದ್ಧೆ ನಿಷ್ಠೆಯಿಂದ ದುಡಿಯುತ್ತಿದ್ದರು. ಇವರ ಶ್ರಮದ ಫಲವಾಗಿ ಕಂಪೆನಿಗೆ ೮ ಲಕ್ಷಾಂತರ ರೂಪಾಯಿನ ವರಮಾನ ಬಂದಿರುತ್ತದೆ. ಅಂತಹವರನ್ನು ಈಗ ಹಠಾತ್ತಾಗಿ ತೆಗೆದು ಹಾಕಿರುವುದರಿಂದ ಕಾರ್ಮಿಕರಲ್ಲಿ ವಿಶೇಷ ಅಸಮಾಧಾನವೂ ಕೋಲಾಹಲವೂ ಉಂಟಾಗಿರುತ್ತದೆ.

ಜಗತ್ತಿನ ಕಾರ್ಮಿಕರ ಪವಿತ್ರ ಹಕ್ಕುಗಳನ್ನು ಬಿಗಿಹಿಡಿಸಲು ಮೈಸೂರು ನಗರವು ರಂಗಸ್ಥಳವಾಗಿರುವ ಈ ಸಮಯದಲ್ಲಿ ಇಲ್ಲಿಗೆ ಹತ್ತು ಮೈಲಿಯೊಳಗೇ ಕಾರ್ಮಿಕರಿಗೆ ಇಂತಹ ಅನ್ಯಾಯವು ನಡೆಯುತ್ತಿರುವುದು ಒಂದು ವಿಷಾದಪೂರಿತ ಪ್ರಹಸನದಂತೆ ಕಾಣಬರುತ್ತಿದೆಯೆಂದು ಕಾರ್ಮಿಕ ವರ್ಗದಲ್ಲಿ ಟೀಕಿಸಲಾಗುತ್ತಿದೆ.

## ಫೆಬ್ರವರಿಯಲ್ಲಿ ಶಿವಮೊಗ್ಗದಲ್ಲಿ ಎ. ಎಂ. ಸಿ. ಸಿ

ಸ್ವಂತ ಫೋನ್] ಬೆಂಗಳೂರು ...

ಬರುವ ತಿಂಗಳು ೮ ಮತ್ತು ..ನೇ ತಾರೀಖುಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ... ಸಭೆ ನಡೆಯಲಿದೆ ... [illegible]

## ಪಾಕಿಸ್ತಾನಕ್ಕೆ ಯುದ್ಧವು ಬೇಕಾದರೆ ನಾವು ಸಿದ್ಧ

ಪಾಕಿಸ್ತಾನದೊಡನೆ ಭಾರತವು ಯುದ್ಧವನ್ನು ಬಯಸುತ್ತಿಲ್ಲ. ಆದರೆ ಆ ರಾಜ್ಯಕ್ಕೆ ಯುದ್ಧವೇ ಅವಶ್ಯಕವಾಗಿದ್ದರೆ ನಾವು ಸಿದ್ಧರಿದ್ದೇವೆ, ಎಂಬುದಾಗಿ ಭಾರತದ ಉಪ ಮುಖ್ಯಮಂತ್ರಿ, ಸರದಾರ್ ಪಟೇಲರು ನೆನ್ನೆ ರಾತ್ರಿ ಬೊಂಬಾಯಿಯ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಪಾಕಿಸ್ತಾನದ ಸ್ನೇಹ ಗಳಿಸಲು ನಾವು ಶ್ರಮಪಟ್ಟಿದ್ದಾಗಿಯೂ, ಆದರೆ ಅದು ಯುದ್ಧದ ಮಾತನ್ನೇ ಆಡುತ್ತಿದೆಯೆಂದೂ ಅವರು ಹೇಳಿದರು.

## ಕರ್ನಾಟಕ ಕಾಂಗ್ರೆಸ್ಸಿಗೆ ದಿವಾಕರರ ಎಚ್ಚರಿಕೆ

ಭಾರತದ ವಾರ್ತಾ ಮಂತ್ರಿಗಳೂ ಕರ್ನಾಟಕದ ಮುಖಂಡರೂ ಆದ ಶ್ರೀ ಆರ್ ಆರ್ ದಿವಾಕರರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕರ್ನಾಟಕ ಪ್ರಾಂತ ರಚನೆ ಬಗ್ಗೆ ಮಾಡಿರುವ ನಿರ್ಣಯವನ್ನು ಸಾರ್ವಜನಿಕ ವಾದಗ್ರಸ್ತ ವಿಚಾರವನ್ನಾಗಿ ಮಾಡುವುದನ್ನು ಖಂಡಿಸಿದ್ದಾರೆ. ಏನಾದರೂ ತೀವ್ರ ಕಾರ್ಯಕ್ರಮವನ್ನು ಕರ್ನಾಟಕ ಕಾಂಗ್ರೆಸ್ಸಿನವರು ತೆಗೆದು ಕೊಂಡರೆ, ಅದರಿಂದ ಪ್ರಾಂತದಲ್ಲಿ ಕಾಂಗ್ರೆಸ್ಸಿನ ಸಮಾಧಿಯನ್ನು ಮಾಡಿದಂತಾಗುತ್ತದೆಂದೂ, ಇದರಿಂದ ಏಕೀಕರಣವು ಸಾಧಿತವಾಗುವುದಿಲ್ಲವೆಂದೂ ಅವರು ಎಚ್ಚರಿಸಿದ್ದಾರೆ.

## ಆದವಾನಿಗೆ ಜೋಗ್ ವಿದ್ಯುಚ್ಛಕ್ತಿ

ಆದವಾನಿಗೆ ಜೋಗ್ ವಿದ್ಯುಚ್ಛಕ್ತಿಯು ಕೇಂದ್ರದಿಂದ ಈ ತಿಂಗಳು ೧೫ ರಿಂದ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದು. ರಾಯಲಸೀಮೆಯಲ್ಲಿರುವ ವಿದ್ಯುತ್ ಗಿರಣಿಗಳಿಗೆ ಮೊದಲು ವಿದ್ಯುಚ್ಛಕ್ತಿಯನ್ನು ಕೊಡಲು ಏರ್ಪಾಡಾಗಿದೆ.

## ಜಿಲ್ಲಾ ಬೋರ್ಡುಗಳಿಗೆ ಜೀವದಾನ

ಸ್ವಂತ ಫೋನ್] ಬೆಂಗಳೂರು ...

ಇದೇ ಜೂನ್ ತಿಂಗಳು ... [illegible]

## ಮೈಸೂರು ಮಹಾರಾಜರಿಗೆ ಕೊಡಗಿನ ಆನೆ

ಕೊಡಗಿನ ಸರ್ಕಾರದವರು ಅಲ್ಲಿನ ಉತ್ತಮ ಜಾತಿಯ ಮೂರು ವರ್ಷ ವಯಸ್ಸಿನ ಗಂಡಾನೆಯೊಂದನ್ನು ಮೈಸೂರು ಶ್ರೀಮನ್ಮಹಾರಾಜರವರಿಗೆ ಅರ್ಪಿಸಲಿರುವರೆಂದು ತಿಳಿದು ಬಂದಿದೆ. ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ಕೊಡಗಿಗೆ ಹೋಗಿದ್ದಾಗ ಈ ಆನೆಯನ್ನು ನೋಡಿ ಅದನ್ನು ಬಹಳವಾಗಿ ಮೆಚ್ಚಿದ್ದರು. ಈ ಜಾತಿಯ ಆನೆಗಳು ಬಹಳ ಅಪರೂಪವೆಂದು ಹೇಳಲಾಗಿದೆ. ಅವುಗಳ ಬಣ್ಣ ಬೂದು ಕನ್ನಡಿಗಳ ಚೆಕ್ಕಿನಂತೆ ಇರುತ್ತವೆ. ಕೊಡಗು ದೇಶದಲ್ಲಿ ಮಾತ್ರ ಇವು ದೊರೆಯುತ್ತವೆ.

## ಬಿಳಿಗಿರಿ ರಂಗನ ಬೆಟ್ಟದಲ್ಲಿ ಜಾತ್ರೆ ಇಲ್ಲ

ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ಕಾಲರಾ ವ್ಯಾಧಿ ಇರುವುದರಿಂದ ಈ ತಿಂಗಳು ೧೫ನೇ ತಾ|| ಬಿಳಿಗಿರಿ ರಂಗಸ್ವಾಮಿ ಬೆಟ್ಟದಲ್ಲಿ ನಡೆಯಬೇಕಾಗಿದ್ದ ಚಿಕ್ಕ ಜಾತ್ರೆಯನ್ನು ನಿಲ್ಲಿಸಲಾಗಿದೆಯೆಂದು ತಿಳಿದುಬಂದಿದೆ.

## ರಾಜಕುಮಾರರು ಸೈನ್ಯಕ್ಕೆ

ಕಪೂರ್ಥಲಾದ ೧೫ ವರ್ಷ ವಯಸ್ಸಿನ ಮಹಾರಾಜಕುಮಾರ್ ಸುಖಜಿತ್ ಸಿಂಗರು ಭಾರತ ಸೈನ್ಯದಲ್ಲಿ ಸೇರಲು ಅಪೇಕ್ಷೆ ಹೊಂದಿದ್ದಾರೆ. ಅವರು ಬರುವ ಮಾರ್ಚಿ ತಿಂಗಳಲ್ಲಿ ರಾಷ್ಟ್ರೀಯ ರಕ್ಷಣಾ ಶಾಲೆಯಲ್ಲಿ ತರಪೇತಿಗಾಗಿ ಸೇರುವರು. ಇವರಲ್ಲದೆ ಕಾಲ್ಸಿಯಾ ರಾಜರೂ ಸಹ ಈಗಾಗಲೇ ಈ ಶಾಲೆಯಲ್ಲಿ ಶಿಕ್ಷಣ ಹೊಂದುತ್ತಿರುತ್ತಾರೆ.

## ಸೈನಿಕರಿಂದ ಆಹಾರದ ಉಳಿತಾಯ

ಹೆಚ್ಚು ಆಹಾರ ಬೆಳೆಯುವ ಚಳವಳಿಯನ್ನು ಮಾಡಿದ ಎರಡು ತಿಂಗಳಿನಿಂಗೆ ಭಾರತ ಸೈನ್ಯದವರು ... ಪಡಿತರದಲ್ಲಿ ... ಮಾಡಿಕೊಂಡ ಪರಿಣಾಮವಾಗಿ ... ಉಳಿತಾಯವಾಗಿರುವುದಾಗಿ ತಿಳಿದು ಬಂದಿದೆ ... [illegible]

## ಗದಗಿನಲ್ಲಿ ಕೆ. ಪಿ. ಸಿ. ಸಿ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕರ್ನಾಟಕಪ್ರಾಂತ್ಯ ರಚನೆ ಬಗ್ಗೆ ಮಾಡಿರುವ ನಿರ್ಣಯವನ್ನು ಪರಿಶೀಲಿಸಲು ಗದಗಿನಲ್ಲಿ ಈ ತಿಂಗಳು ೧೧ನೇ ತಾರೀಖು ಕರ್ನಾಟಕಪ್ರಾಂತ್ಯ ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನವು ಸೇರುವುದು. ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೂ, ಮಂತ್ರಿಗಳೂ ಈ ಸಭೆಗೆ ಬರುವಂತೆ ಆಹ್ವಾನಿಸಲಾಗುವುದು. ಸರದಾರ್ ಪಟೇಲರನ್ನು ಭೇಟಿ ಮಾಡಲು ಒಂದು ನಿಯೋಗವನ್ನು ಕಳುಹಲೇರ್ಪಾಡಾಗಿದೆ.

## ನೂತನ ಚೀಣಾ ಸರ್ಕಾರಕ್ಕೆ ಪಾಕಿಸ್ತಾನದ ಮನ್ನಣೆ

ಚೀಣಾ ರಿಪಬ್ಲಿಕ್ಕಿನ ನೂತನ ಪ್ರಜಾ ಸರ್ಕಾರಕ್ಕೆ ಪಾಕಿಸ್ತಾನವು ಮನ್ನಣೆಯಿತ್ತಿದೆ.

## ಬೊಂಬಾಯಿನಲ್ಲಿ ತಾಂಬೂಲ ಸೇವನೆಗೆ ನಿರ್ಬಂಧ

ಬಹಿರಂಗ ಸ್ಥಳಗಳಲ್ಲಿ ತಾಂಬೂಲ ಸೇವಿಸುವುದನ್ನು ನಿರೋಧಿಸಿ ಬೊಂಬಾಯಿ ಸರ್ಕಾರದವರು ಶಾಸನ ಮಾಡಲಿರುವರೆಂದು ವರದಿಯಾಗಿದೆ. ತಾಂಬೂಲ ಹಾಕಿಕೊಳ್ಳುವರು ರಸ್ತೆಗಳಲ್ಲಿಯೂ, ಗೋಡೆಗಳ ಮೇಲೆಯೂ ದೀಪದ ಕಂಬಗಳಿಗೂ, ರೈಲ್ವೆ ಗಾಡಿಗಳಲ್ಲಿಯೂ, ಇಚ್ಛೆಬಂದಂತೆ ಉಗುಳುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

## ಪಾಕಿಸ್ತಾನದಲ್ಲಿ ಮಹಾಸಭಾ ಕಾರ್ಯಕರ್ತನ ದಸ್ತಗಿರಿ

ಪೂರ್ವ ಮತ್ತು ಪಶ್ಚಿಮ ಬಂಗಾಳಾ ಐಕ್ಯಕ್ಕಾಗಿ ಪ್ರಚಾರ ಮಾಡಲು ಹೋಗಿದ್ದ ಪ್ರಮಥನಾಥರಾಯ್ ಎಂಬ ಹಿಂದೂ ಮಹಾಸಭೆಯ ಪ್ರಮುಖ ಕಾರ್ಯಕರ್ತನನ್ನು ಪಾಕಿಸ್ತಾನ ಅಧಿಕಾರಿಗಳು ದಸ್ತಗಿರಿ ಮಾಡಿರುತ್ತಾರೆ. ಅವರು ಕಳೆದ ವಾರ ಕಲ್ಕತ್ತಾದಿಂದ ಕಾಮಿಲ್ಲಾದಲ್ಲಿ ವಾಸಿಸಲು ಹೋಗಿದ್ದರು.

## ಮವಲಂಕರರ ಆಗಮನ

ಸ್ವಂತ ಫೋನ್] ಬೆಂಗಳೂರು ೫

ಭಾರತದ ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ ಜಿ ವಿ ಮವಲಂಕರ್‌ರವರು ಈ ಬೆಳಗ್ಗೆ ಇಲ್ಲಿಗೆ ವಿಮಾನದಲ್ಲಿ ಆಗಮಿಸಿದರು. ಮಧ್ಯಾಹ್ನದ ಮೇಲೆ ಅವರು ದೊಡ್ಡಬಳ್ಳಾಪುರದ ತಾಲ್ಲೂಕು ಕಸ್ತೂರಬಾ ... ಭೇಟಿಯಿತ್ತರು. ನಾಳೆ ದಿನ ಮಂಡ್ಯ ಜಿಲ್ಲೆಯ ... ಕಸ್ತೂರಿ ಬಾ ಶಿಬಿರವನ್ನು ಸಂದರ್ಶಿಸಿ ಅವರು ರಾಜಧಾನಿಗೆ ಪ್ರಯಾಣ ಮಾಡುವರು.

## ಶ್ರೀ ಜಗಜೀವನರಾಂ

ಭಾರತದ ಕಾರ್ಮಿಕ ಮಂತ್ರಿ, ಶ್ರೀ ಜಗಜೀವನರಾಂರವರು ಈ ಬೆಳಗ್ಗೆ ದೆಹಲಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು.

## ಕಾಂ|| ಕಾರ್ಯಕಾರಿ ಸಮಿತಿ

ಈ ದಿನ ಕಾಂಗ್ರೆಸ್ ಕಛೇರಿಯಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು. ಸಮಿತಿಯ ಸದಸ್ಯರಲ್ಲದೆ ಶ್ರೀ ಕೆ ಸಿ ರೆಡ್ಡಿಯವರ ... ಮಂತ್ರಿಗಳೂ ಸಭೆಗೆ ... ಈ ಸಭೆಯು ... [illegible]

## ೨೫ ಸಾವಿರ ರೂ. ಚಿನ್ನದ ಗಟ್ಟಿಗಳ ಕಳವು

ಮಂಗಳೂರಿನಲ್ಲಿ ನಡೆದ ೨೫ ಸಾವಿರ ರೂ. ಬೆಲೆ ಬಾಳುವ ಚಿನ್ನದ ಘಟ್ಟಿಗಳ ಕಳ್ಳತನದ ಸಂಬಂಧವಾಗಿ ಹಾಸನದ ಪೋಲೀಸರು ಅಲ್ಲಿ ಟ್ಯಾಕ್ಸಿಯೊಂದರ ಮಾಲೀಕ ಮತ್ತು ಡ್ರೈವರನ್ನು ದಸ್ತಗಿರಿ ಮಾಡಿದ್ದಾರೆ. ಮಂಗಳೂರಿನ [illegible] ಅಂಗಡಿಯೊಂದಕ್ಕೆ [illegible] ವು ಧರಿಸಿದವನೊಬ್ಬನು [illegible] ಹೋಗಿ, ೨೫ ಸಾವಿರ ರೂಪಾಯಿನಷ್ಟು ಚಿನ್ನದ ಘಟ್ಟಿಯನ್ನು ಕೊಂಡನು [illegible] ಯಾರನ್ನಾದರೂ ಅಲ್ಲಿನ [illegible] ಗೆ ಕಳುಹಿದರೆ ದುಡ್ಡು ಕೊಡುವುದಾಗಿಯೂ ಹೇಳಿ, ಪತ್ರಿಕಾದಕ್ಷಿಯೇ [illegible] ಟ್ಯಾಕ್ಸಿಯೊಂದನ್ನು [illegible] ಹಾಸನದ ಮೂಲಕ ಮೈಸೂರಿಗೆ ಹೊರಟನೆಂದೂ, ಹಾಸನವನ್ನು ದಾಟಿದಮೇಲೆ ಅಲ್ಲಿನ ಪೋಲೀಸರಿಗೆ ಈ ಸುದ್ದಿಯು ತಿಳಿಯಿತೆಂದೂ ಮೈಸೂರು ಸೇರಿದನಂತರ ಟ್ಯಾಕ್ಸಿ ಡ್ರೈವರನಿಗೆ ದುಡ್ಡು ಕೊಟ್ಟು ಕಳುಹಿಸಿ, ಚಿನ್ನವನ್ನು ಕೊಂಡವನು ಕಣ್ಮರೆಯಾದನೆಂದೂ ಹೇಳಲಾಗಿದೆ. ಈಗ ಟ್ಯಾಕ್ಸಿಯ ಡ್ರೈವರ್ ಮತ್ತು ಮಾಲೀಕನನ್ನು ಮೈಸೂರಿನಿಂದ ಹಿಂತಿರುಗಿದ ಮೇಲೆ ಹಾಸನದಲ್ಲಿ ದಸ್ತಗಿರಿ ಮಾಡಲಾಗಿದೆ.

## ಇಂಗ್ಲೆಂಡಿನಲ್ಲಿ ೫೦ ಸಾವಿರ ವಿವಾಹ ವಿಚ್ಛೇದನ

ಈ ವರ್ಷ ಬ್ರಿಟನ್ನಿನಲ್ಲಿ ೫೦ ಸಾವಿರ ವಿವಾಹ ವಿಚ್ಛೇದನಗಳಾಗಿವೆಯೆಂದು ಅಲ್ಲಿನ ರಾಷ್ಟ್ರೀಯ ವಿವಾಹ ಸಲಹಾ ಸಭೆಯು ತಿಳಿಸಿದೆ. ಈ ಬಗ್ಗೆ ಸಭೆಯು ನಡೆಸಿದ ತನಿಖೆಯಿಂದ ಈ ವಿಚ್ಛೇದನಗಳಿಗೆ ಸಂಸಾರಕ್ಕೆ ತಕ್ಕ ಏರ್ಪಾಡು ಮಾಡಿಕೊಳ್ಳದಿರುವುದು, ವಾದ ಮನೆ ಮತ್ತು ಅತ್ತೆ-ಸೊಸೆಯರ ಜಗಳ, ಸ್ತ್ರೀಪುರುಷರಲ್ಲಿ ಪರಸ್ಪರ ಹೊಂದಾಣಿಕೆಯಿಲ್ಲದಿರುವುದು ಮತ್ತು ಆಧ್ಯಾತ್ಮಿಕವಾದ ಹಿನ್ನೆಲೆಯು ಇಲ್ಲದಿರುವುದು ಇವೇ ಮುಖ್ಯವಾದವುಗಳು ಕಾರಣವಾಗಿವೆಯೆಂದು ಹೇಳಲಾಗಿದೆ.

## ಅರವಿಂದರ ಆಶ್ರಮದಲ್ಲಿ ಹೊಸ ವರ್ಷದ ಆಚರಣೆ

ಪುದುಚೇರಿಯಲ್ಲಿರುವ ಶ್ರೀ ಅರವಿಂದ ಘೋಷರವರ ಆಶ್ರಮದಲ್ಲಿ ಕಳೆದ ಭಾನುವಾರ ಹೊಸವರ್ಷದ ಆಚರಣೆಯು ನಡೆಯಿತು. ದೇಶ ನಾನಾ ಭಾಗಗಳಿಂದ ಪ್ರೇಕ್ಷಕರು ಬಂದಿದ್ದರು. ರಾತ್ರಿ ೧೨ ಘಂಟೆ ಹೊಡೆದಾಗ ಆಶ್ರಮದ ಮಾತೆಯವರು [illegible] ದರ್ಶನವಿತ್ತು [illegible] [illegible] ಕೇಳಿ [illegible] ಪ್ರತಿಯೊಬ್ಬರೂ [illegible] ಹೊಸವರ್ಷ [illegible] ಎಂದು ಸೂಚಿಸಲಾಗಿದೆ.

## ೨೦ನು ಗಂಟೆಯಲ್ಲಿ ೩ ಪತಿಯರ ವಿಧವೆಯಾದವಳು

[illegible] ಬಂದಿರುವ [illegible] ಒಂದೇ ಗಂಟೆಯಲ್ಲಿ [illegible] ವಿಧವೆಯಾದವಳೆಂ[illegible] [illegible] ತನ್ನ [illegible] ಇನ್ನೂ [illegible] ತಿಂಗಳುಗಳ ಹಿಂದೆ [illegible] ಕೆಲವು ಕಾಲಾನಂತರ ಆಕೆಯು ಮೊದಲನೇ ಗಂಡನು ಜೀವಂತನಾಗಿ ಸ್ವಗ್ರಾಮಕ್ಕೆ ಹಿಂತಿರುಗುತ್ತಿದ್ದಾನೆಂದು ಆಕೆಗೆ ತಂತಿ ಸುದ್ದಿ ಬಂದಿತು. ಆತನನ್ನು ಸಂದರ್ಶಿಸಲು ಅವಳು ರೈಲ್ವೆ ಸ್ಟೇಷನ್ನಿಗೆ ಹೋಗಲು ಅಲ್ಲಿ ತನ್ನ ಪತಿಯು ಒಂದು ರೈಲು ಗಾಡಿಯಲ್ಲಿ ಸತ್ತು ಬಿದ್ದುದನ್ನು ಕಂಡಳು. ಒಂದು ಘಂಟೆಯನಂತರ ಅವಳು ಮನೆಗೆ ಹಿಂದಿರುಗಿ, ಆಕೆಯು ವಿರಹವನ್ನು ತಡೆಯಲಾರದೆ ಅವಳ ಎರಡನೇ ಪತಿಯು ನೇಣು ಹಾಕಿಕೊಂಡು ಮೃತಪಟ್ಟಿದ್ದ ದೃಶ್ಯವನ್ನೂ ಕಂಡಳು.

## ಪಾನ ನಿರೋಧದ ಬಗ್ಗೆ ನೆಹರೂರವರ ಅಭಿಪ್ರಾಯ

ಆರ್ಥಿಕ ಪರಿಸ್ಥಿತಿಯನ್ನು ಅಲಕ್ಷ್ಯಮಾಡದೆ ಪಾನ ನಿರೋಧ ಕಾರ್ಯಕ್ರಮವನ್ನು ಕ್ರಮಕ್ರಮವಾಗಿ ಜಾರಿಗೆ ತರಬೇಕೆಂದು ಪಂಡಿತ ನೆಹರೂರವರು ಹೇಳಿದ್ದಾರೆ. ಹಲವು ಸಂದರ್ಭಗಳಲ್ಲಿ ಪಾನ ನಿರೋಧವು ಅ[illegible]ಗಲು ತೊಂದರೆಯುಂಟಾಗಬಹುದು. ಶಾಸನ ಮಾಡಿದನಂತರ ಆರ್ಥಿಕ ಸ್ಥಿತಿಯನ್ನೂ ಮತ್ತು ಈ ಕಾರ್ಯಕ್ರಮವು ಯಶಸ್ವಿಯಾಗುವ ಅಂಶವನ್ನೂ ಪರಿಗಣಿಸಿ ನಿರ್ಣಯಿಸಬೇಕೆಂದೂ ಅವರು ಹೇಳಿರುವರು.

## ಕಳೆದ ವರ್ಷದಲ್ಲಿ ೨॥ ಕೋಟಿ ಜನರ ವಿಮಾನ ಪ್ರಯಾಣ

ಕಳೆದ ವರ್ಷ ಪ್ರಪಂಚದ ಎಲ್ಲಾ ಸಂಚಾರ ವಿಮಾನಗಳಲ್ಲಿ ೨॥ ಕೋಟಿ ಜನರು ವಿಮಾನ ಯಾನ ಮಾಡಿರುವರೆಂದು ಹೇಳಲಾಗಿದೆ.

## ಭಾರತ-ಅಫ್ಘಾನ್ ಸಖ್ಯ ಒಪ್ಪಂದ

ಭಾರತ ಮತ್ತು ಅಫ್ಘಾನಿಸ್ಥಾನಗಳು ಉಭಯ ರಾಷ್ಟ್ರಗಳ ಸಖ್ಯವನ್ನು ಏರ್ಪಡಿಸಲು ಒಪ್ಪಂದವೊಂದನ್ನು ನಿಶ್ಚೆ ಮಾಡಿಕೊಂಡಿರುವುವು.

## ಹೈದರಾಬಾದ್ ಕೋರ್ಟುಗಳಲ್ಲಿ ಉರ್ದುಗೆ ಬದಲು ಇಂಗ್ಲಿಷ್

ಇದೇ ತಿಂಗಳು ೨೬ನೇ ತಾರೀಖಿನನಂತರ ಹೈದರಾಬಾದಿನ ಎಲ್ಲ ನ್ಯಾಯಸ್ಥಾನಗಳಲ್ಲೂ ಉರ್ದುವಿಗೆ ಪ್ರತಿಯಾಗಿ ಆಂಗ್ಲಭಾಷೆಯನ್ನು ಜಾರಿಗೆ ತರಲಾಗುವುದೆಂದು ವರದಿಯಾಗಿದೆ. ಈ ಬದಲಾವಣೆಯಿಂದ ಅಲ್ಲಿನ ಹೈಕೋರ್ಟಿನಲ್ಲಿ ಉಂಟಾಗುವ ತೊಂದರೆಯನ್ನು ನಿವಾರಿಸಲು, ಆ ಕೋರ್ಟಿನಲ್ಲಿ ಮಾತ್ರ ವ್ಯವಹಾರವನ್ನು ಉರ್ದುವಿನಲ್ಲೇ ನಡೆಸಲು ಕೇಂದ್ರ ಸರ್ಕಾರದ ಅನುಮತಿ ಕೇಳಲಾಗುವುದೆಂದೂ, ಅದಕ್ಕೆ ಒಂದು ಪಕ್ಷ ಒಪ್ಪಿದರೂ, ನ್ಯಾಯಸ್ಥಾನದ ತೀರ್ಪು, ಆಜ್ಞೆಗಳು ಮತ್ತು ಡಿಕ್ರಿಗಳನ್ನು ಇಂಗ್ಲೀಷಿನಲ್ಲೇ ಬರೆಯಬೇಕಾಗುವುದೆಂದೂ ಹೇಳಲಾಗಿದೆ.

## ನ್ಯೂಗಿನಿ ಇಂಡೋನೇಷ್ಯ ಸೇರುವುದೇ?

ಹೊಸ ವರ್ಷದ ಆಶ್ಯಂತರೊಳಗಾ[illegible] ಚ್ಚರಿಗೆ ಸೇರಿರುವ ನ್ಯೂಗಿನಿಯು ಇಂಡೊನೇಷ್ಯಕ್ಕೆ ಸೇರುವುದೆಂದು ಇಂಡೋನೇಷ್ಯದ ಅಧ್ಯಕ್ಷರಾದ ಡಾ॥ ಸೋಕರ್ನರವರು ತಿಳಿಸಿದ್ದಾರೆ.


ರಾಜಕಮಲ್

ಮೈಸೂರು

6—1—50 ರಿಂದ

ಜನಭರಿತವಾದ ೬ನೇ ವಾರ

ಜೀವನಂ

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

— Morning Shows —
From. 6-1-50 For 4 days

Devils of the Desert

With:—John Wayne Ruth Hall, Jack Mulhall

(A Full Serial full of thrills and stunts)

ಗಣೇಶಾ ಟಾಕೀಸ್

6-1-50ರಿಂದ, ಪ್ರತಿ ದಿನ 3 ಆಟ[illegible]

ಪೌಕತ್ ಆರ್ಟ್ ಪ್ರೊಡಕ್ಷನ್ಸ್‌ರವ[illegible]

ಸುಮಧುರ ಸಂಗೀತಮಯ ಹಿಂದಿ [illegible]

ಜುಗ್ನು

—:ಮುಖ್ಯ ಪಾತ್ರ:—

ನೂರ್‌ಜಹಾನ್, ದಿಲೀಪ್ ಕುಮಾ[illegible] ಮತ್ತಿತರರು

—:ಮುಂದಿನ ಬದಲಾವಣೆ:—

ವಾಲ್ಮೀಕಿ

ಮೈಸೂರು

ದೊಡ್ಡಕೆರೆ ಮೈದಾನದಲ್ಲಿ

15-1-50ನೇ ಭಾನುವಾರ

ಖಂಡಿತ ಆರು ಜೊತೆ ಕುಸ್ತಿಗಳು ನಡೆಯುತ್ತ[illegible]

೧ ಪೈ॥ ಸಣ್ಣಬೋರಯ್ಯ
೨ ಪೈ॥ ರಾಣಿಬೆನ್ನೂರು ನಂಜಪ್ಪ
೧ ಪೈ॥ ಸಾಬುಲಾಲ್
೨ ಪೈ॥ ದಾವಣಗೆರೆ ಚಮನ್ [illegible]
೧ ಪೈ॥ ಮರಿಗೌಡ
೨ ಪೈ॥ ಕೃಷ್ಣಾಜಿ
೧ ಪೈ॥ ರಾಮು
(ಕೊಪ್ಪಲು ಬಸವಯ್ಯನವರ ಶಿಷ್ಯ)
೨ ಪೈ॥ ನಾರಾಯಣ

ವಿ. ಪುಟ್ಟಸ್ವಾಮಿ [illegible]

ಲಕ್ಷ್ಮೀ ಥಿಯೇಟರ್

6—1—50 ರಿಂದ ದಿನವಹಿ 3 ಆಟಗಳು

ರಾಜಲಕ್ಷ್ಮೀ ಪಿಕ್ಚರ್ಸ್‌ರವರ ಅತ್ಯಮೋಘ ಕಥಾ ಸನ್ನಿವೇಶಗಳಿಂದ ಕೂಡಿದ ರಸಮಯ ಹಿಂದಿ ಚಿತ್ರ

BRIDGE ಪ್ಲಾಲ್

—:ಮುಖ್ಯ ಪಾತ್ರ:—

ರೆಹನಾ, ಭೀಮ್ ಬ್ಯಾನರ್ಜಿ, ಬಾಲರಾಜ ಮೆಹ್ತಾ, ಮಾಯಾದೇವಿ

ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು

ಬೇಕಾದಷ್ಟು ದೊರೆಯುತ್ತದೆ. ಕೂಡಲೇ ವಿಚಾರಿಸಿ —

"ಸಾಧ್ವಿ" ಆಫೀಸು

ಮೈಸೂರು.

[illegible] ಕೀರ್ತಿಯನ್ನು ಬೆಳಗಿದ ಜನಾನುರಾಗದ ಚಿತ್ರ

ಪ್ರಭಾ ಪಿಕ್ಚರ್ ಹೌಸ್, ಮೈಸೂರು

7—1—50ರಿಂದ ಯಶಸ್ವಿಯಾದ 2ನೇ ವಾರ

ಸ್ವಯಂ ಸಿದ್ಧ

(ಹಿಂದಿ)

ಪಾತ್ರ:— ಶಾಂತಾ ಆಪ್ಟೆ - ನೋಲಿನ - ಬಿಪಿನ್ ಗುಪ್ತ


Edited, printed and published by A. R. Nagarajan at Sadhvi Press, D. Subbiah Road, Mysore.

ಫೋ ನಂ. 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಶುಕ್ರವಾರ ೬-೧-೫೦ [ಸಂಚಿಕೆ ೧೩೪

# ಈ ತಿಂಗಳು ೨೬ ರಿಂದ ಮೈಸೂರಿಗೆ ಹೊಸ ಧ್ವಜ

## ಪೌರಸಭೆಯ ವಿಶೇಷ ಅಧಿವೇಶನ

ಮೈಸೂರು ೬

ರಾಜಧಾನಿಯ ಪೌರಸಭೆಯ ವಿವಿಧ ಸಮಿತಿಗಳಿಗೂ, ನಗರಾಭಿವೃದ್ಧಿ ಸಮಿತಿಗೂ ಸದಸ್ಯರನ್ನು ಚುನಾಯಿಸಲು ಪೌರಸಭೆಯ ವಿಶೇಷ ಅಧಿವೇಶನವು ಇದೇ ೧೧ನೇ ತಾ|| ಬುಧವಾರ ಸಂಜೆ ೪ ಘಂಟೆಗೆ ನಡೆಯಲಿದೆ ಈ ತಿಂಗಳು ೨೬ ಮತ್ತು ೨೬ನೇ ತಾ|| ಭಾರತ ರಿಪಬ್ಲಿಕ್ ದಿನಾಚರಣೆಯ ಸಂಬಂಧವಾದ ಕಾರ್ಯಕ್ರಮಗಳನ್ನೂ ಸಹ ನಿರ್ಧರಿಸಲಾಗುವುದು.

### ಶಾಸನ ಸಭಾಧ್ಯಕ್ಷರ ಚುನಾವಣೆ

ಈ ತಿಂಗಳು ೧೨ ನೇ ತಾ|| ಗುರುವಾರ ನೂತನ ಮೈಸೂರು ಶಾಸನಸಭೆಯ ಅಧ್ಯಕ್ಷರನ್ನೂ ೧೩ ನೇ ತಾ|| ಉಪಾಧ್ಯಕ್ಷರ ಚುನಾವಣೆಯನ್ನೂ ನಡೆಸುವಂತೆ ನಿರ್ಧರಿಸಲಾಗಿದೆ.

### ಬಟ್ಟೆ ವ್ಯಾಪಾರಿಗಳ ಸಂಘದ ಅಧಿಕಾರಿ ವರ್ಗ

ರಾಜಧಾನಿಯ ಬಟ್ಟೆ ವ್ಯಾಪಾರಿಗಳ ಸಂಘದ ಅಧಿಕಾರಿ ವರ್ಗಕ್ಕೆ ಈ ಸಾಲಿನಲ್ಲಿ ಶ್ರೀಗಳಾದ ಯು ಎಲ್ ರಾಮಚಂದ್ರರಾವ್‌ರು ಅಧ್ಯಕ್ಷರಾಗಿಯೂ, ಶ್ರೀ ಕೆ. ಎಸ್. ಸತ್ಯನಾರಾಯಣರಾಯರು ಉಪಾಧ್ಯಕ್ಷರಾಗಿಯೂ ಬಿ ಎಸ್. ರುದ್ರಪ್ಪನವರು ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ.

### ವ ನಿ ತಾ ಸ ದ ನ

ಕಳೆದ ಭಾನುವಾರ ವನಿತಾ ಸದನದಲ್ಲಿ ಸದನದ ಮಕ್ಕಳೂ, ವಿದ್ಯಾರ್ಥಿಗಳೂ 'ಚಳಿಗಾಲದ ಹಬ್ಬ"ವನ್ನು ಆಚರಿಸಿದರು. ಮಕ್ಕಳಿಗೆ ಆನಂದಕರವಾದ ಆಟಗಳು ನಡೆದವು. ಹಿಂದುಗಳಿಗೆ ಲಕ್ಕಿ ಡಿಪ್ ನ ವ್ಯವಸ್ಥೆಯಾಗಿತ್ತು. ಸಂಜೆ ೬ ಗಂಟೆಗೆ ಜನ ಟ್ರೂಪಿನವರಿಂದ ಕ್ಯಾಂಪ್ ಫೈರ್ ನಡೆಯಿತು. ಕೊನೆಗೆ ಸ್ಕ್ಯಾಂಡಲ್ ಫ್ಯಾಕ್ಟರಿ ಮಾನೇಜರಾದ ಶ್ರೀ ಕೆ ಆರ್ ಶ್ರೀನಿವಾಸರಾಯರು ಬಹುಮಾನಗಳನ್ನು ಹಂಚಿದರು.

### ಸಹಕಾರ ಸಂಘಗಳ ರಿಜಿಸ್ಟ್ರಾರ್

ಗ್ರಾಮಾಭಿವೃದ್ಧಿ ಕಮಿಷನರಾದ ಶ್ರೀ ಎನ್ ಎಸ್. ಹಿರಣ್ಣಯ್ಯನವರನ್ನು ಅವರ ಕೆಲಸದ ಜೊತೆಗೆ ಸಹಕಾರ ಸಂಘಗಳ ರಿಜಿಸ್ಟ್ರಾರ್ ಮತ್ತು ಚೀಫ್ ಮಾರ್ಕೆಟಿಂಗ್ ಆಫೀಸರನ್ನಾಗಿ ನೇಮಿಸಲಾಗಿದೆ.

## ನೆಹರೂರವರಿಗೆ ಮಾತ್ರ ಸಾರ್ವಜನಿಕ ಸ್ವಾಗತ

ಸಿಲೋನಿನಲ್ಲಿ ಸೇರಲಿರುವ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗ ವಹಿಸಲು ಹೋಗುವ ಕಾಮನ್‌ವೆಲ್ತ್ ಮಂತ್ರಿಗಳ ಪೈಕಿ ಭಾರತದ ಪ್ರಧಾನಿ ನೆಹರೂರವರಿಗೆ ಮಾತ್ರ ಸಾರ್ವಜನಿಕ ಸ್ವಾಗತವನ್ನು ಸಿಲೋನ್ ಅಧಿಕಾರಿಗಳು ಕೊಡಲು ನಿರ್ಧರಿಸಿದ್ದಾರೆ ಇದಕ್ಕಾಗಿ ಬಹಳ ವಿಜೃಂಭಣೆಯ ಸಿದ್ಧತೆಗಳನ್ನು ಮಾಡಲಾಗುತ್ತಿದೆ

## ಹೊಸ ವರ್ಷದ ದಿನ ಅತಿಯಾಗಿ ಕುಡಿದು ಮರಣ

ತಿಗ್ರಾದ ಕ್ರಿಸ್ತದೇವಾಲಯದೊಂದರಲ್ಲಿ ನೌಕರನಾಗಿರುವ ಇಬ್ಬರು, ಹೊಸ ವರ್ಷದ ದಿನ ಅತಿಯಾಗಿ ಕುಡಿದುದರ ಪರಿಣಾಮವಾಗಿ ಒಬ್ಬನು ಸತ್ತನೆಂದೂ ಮತ್ತೊಬ್ಬನ ಸ್ಥಿತಿಯು ಚಿಂತಾಜನಕವಾಗಿದೆಯೆಂದೂ ತಿಳಿಸಲಾಗಿದೆ ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ

## ಬ ಹಿ ರಂ ಗ ಸ ಭೆ

ಮೈಸೂರು ೬

ಈ ದಿನ ಸಂಜೆ ೬-೩೦ ಘಂಟೆಗೆ ಟೌನ್ ಹಾಲಿನಲ್ಲಿ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ಸ್ಟೇಟ್ ಲೈಬ್ರರಿ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯೊಂದು ನಡೆಯುವುದು. ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಧ್ಯೇಯಗಳ ಬಗ್ಗೆ ಸಂಸ್ಥೆಯ ಸದಸ್ಯರುಗಳಿಂದ ಭಾಷಣಗಳು ಜರುಗುವುವು

## ಚಿಯಾಂಗ್ ಕೈಷೇಕರ ಶಕ್ತಿ ಅಡಗಿತು

ಫಾರ್ಮೋಸಾದ ಮುಖ್ಯಸ್ಥನಾದ ಚಿಯಾಂಗ್ ಕೈಷೇಕರು ಭಾರಿ ಪ್ರಮಾಣದ ಕಾರ್ಯಾಚರಣೆಗಳಲ್ಲಿ ತೊಡಗಲು ಶಕ್ತರಲ್ಲವೆಂದೂ ಇನ್ನು ಕೆಲವು ದಿನಗಳಲ್ಲಿ ಕಮ್ಯೂನಿಸ್ಟರು ಫಾರ್ಮೋಸಾ ದ್ವೀಪದ ಮೇಲೆ ಧಾಳಿ ನಡೆಸಬಹುದೆಂದೂ ಫಾರ್ಮೋಸಾದಲ್ಲಿ ಅಮೆರಿಕದ ಕಾನ್ಸಲ್ ಜನರಲ್ ಆಗಿದ್ದ ಜಾನ್ ಮ್ಯಾಕ್ ಡೊನಾಲ್ಡ್ ರವರು ಹೇಳಿದ್ದಾರೆ. ಫಾರ್ಮೋಸಾ ದ್ವೀಪದ ಜನರಿಗೆ ಚಿಯಾಂಗರ ವಿಷಯದಲ್ಲಿ ಕೋಪವಿದೆಯೆಂದೂ ಆದರೆ ದಂಗೆ ಏಳುವ ಸಂಭವವಿಲ್ಲವೆಂದೂ ಅವರು ಹೇಳಿದ್ದಾರೆ

## ಮದ್ರಾಸು ತಾತ್ಕಾಲಿಕ ಆಂಧ್ರ ರಾಜಧಾನಿ ಆಗಲಿ

ಆಂಧ್ರದ ತಾತ್ಕಾಲಿಕ ರಾಜಧಾನಿಯು ಮದ್ರಾಸಿನಲ್ಲಿರಬೇಕು; ಖಾಯಂ ಆದ ರಾಜಧಾನಿಯು ರಾಯಲಸೀಮೆಯಲ್ಲಿರಬೇಕು. ತಾತ್ಕಾಲಿಕ ರಾಜಧಾನಿ ಮತ್ತು ಪ್ರಾಂತದ ಆಸ್ತಿ ಮತ್ತು ಸಾಲಸೋಲಗಳ ಬಗ್ಗೆ ಕೇಂದ್ರ ಸರಕಾರದವರು ತೀರ್ಮಾನಿಸಬೇಕು; ಈ ತಿಂಗಳು ೨೬ಕ್ಕೆ ಮುಂಚೆ ಆಂಧ್ರಪ್ರಾಂತವ ರಚಿಸಬೇಕು—ಇವೇ ಮುಂತಾದ ನಿರ್ಣಯಗಳು ಮೊನ್ನೆ ಮದ್ರಾಸಿನಲ್ಲಿ ಸೇರಿದ್ದ ಆಂಧ್ರ ಪ್ರಾಂತ ಕಾಂಗ್ರೆಸ್ ಸಮಿತಿಯ ಸಾಧಾರಣ ಸಭೆಯಲ್ಲಿ ಅಂಗೀಕೃತವಾದವು

### ಪಿ. ಪಿ. ಮೆ ನ ನ್ನ ರು

ಭಾರತದ ಸಂಸ್ಥಾನ ಶಾಖೆಯ ... ಯೋಗದಾರದ ಶ್ರೀ ವಿ ಪಿ ಮೆನನ್ನರು ... ಸೂರಿಗೆ ನಾಳೆ ದಿನ ಬರಲಿ ... ... ಮಹಾರಾಜರವರ ... ಲಿಯುವರೆಂದೂ ಗೊತ್ತಾಗಿದೆ

## ಯುಗೋಸ್ಲೇವಿಯಾವಿಗೆ ಅಮೆರಿಕದ ನೆರವು

ಯುಗೋಸ್ಲೇವಿಯಾದ ಮೇಲೆ ರಷ್ಯವು ಧಾಳಿ ನಡೆಸುವುದೆಂಬ ಸಂದಿಗ್ಧ ಸನ್ನಿವೇಶವಾಗಿ ಆ ಧಾಳಿಯೇನಾದರೂ ನಡೆದಲ್ಲಿ ಅಮೆರಿಕವು ಯುಗೋಸ್ಲೇವಿಯಾಕ್ಕೆ ನೆರವು ನೀಡಿ ರಷ್ಯದ ಧಾಳಿಯನ್ನು ಎದುರಿಸುವುದೆಂದು ಯುಗೋಸ್ಲೇವಿಯಾದಲ್ಲಿ ಅಮೆರಿಕದ ರಾಯಭಾರಿಯಾಗಿ ನೇಮಿಸಲ್ಪಟ್ಟಿರುವ ಮಿ|| ಜಾರ್ಜ್ ವಿ ಅಲನ್‌ರವರು ಲಂಡನ್ನಿನಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ತಿಳಿಸಿದ್ದಾರೆ

## ಮೆಣಸಿಗೆ ವಿಪರೀತ ಬೆಲೆ

ಪ್ರಪಂಚದಾದ್ಯಂತ ಉಂಟಾಗಿರುವ ಮೆಣಸಿನ ಅಭಾವದಿಂದ ಭಾರತದಲ್ಲಿ ಮೆಣಸಿನ ಬೆಲೆಯು ಅತ್ಯಧಿಕವಾಗಿದೆಯೆಂದೂ, ಈ ಬೆಲೆಯು ಸಂದರ್ಭೋಚಿತ ಮೆಣಸಿನ ಸಂಗ್ರಹಣೆಗೆ ಉತ್ತೇಜನ ಕೊಟ್ಟಿದೆಯೆಂದೂ ಕೊಚ್ಚಿಯ ಛೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷರು ಹೇಳುತ್ತಾರೆ ಆದರೆ ಅವರು ಈ ಅಧಿಕ ಬೆಲೆಯು ತಾತ್ಕಾಲಿಕವಾಗಿರಬಹುದೆಂದೂ, ಇಂಡೋನೇಷ್ಯವು ಈ ವ್ಯಾಪಾರದಲ್ಲಿ ಪುನಃ ಸ್ಪರ್ಧಿಸಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆ. ಆರು ವರ್ಷದ ಹಿಂದೆ ಮೆಣಸಿನ ಬೆಲೆಯು ಹಂಡ್ರೆಡ್ ವೆಯಿಟಿಗೆ ೧೭ ರೂ ಇದ್ದುದು ಈಗ ೩೫೦ ರೂ ಆಗಿರುತ್ತದೆ

## ಜೋಧಪುರದ ಮಾಜಿ ಸಚಿವರ ಮೇಲೆ ನಂಬಿಕೆ ದ್ರೋಹ

ಜೋಧಪುರದ ಮಾಜಿ ಪ್ರಧಾನ ಸಚಿವರಾದ ... ರಾಜ್ಯಾಂಗ ... ರೂ ಆದ ಶ್ರೀ ಜಯನಾರಾಯಣ ವ್ಯಾಸರವರ ಮೇಲೆ ನಂಬಿಕೆ ದ್ರೋಹದ ... ವನ್ನು ... ಮತ್ತು ಅವರ ... ಮಂತ್ರಿಮಂಡಲದಲ್ಲಿ ... ... ಮತ್ತು ... ... ... ... ... ... ... ... ... ... ... ... ... ...

## ಮೈಸೂರಿಗೆ ಹೊಸ ಧ್ವಜ

ಸ್ವಂ.ಸು.ಫೋ] ಬೆಂಗಳೂರು. ೬

ಈ ತಿಂಗಳು ೨೬ ನೇ ತಾರೀಖಿನ ನಂತರ ಮೈಸೂರಿನ ಧ್ವಜದಲ್ಲಿ ಬದಲಾವಣೆಯಾಗುವುದೆಂದು ತಿಳಿದುಬಂದಿದೆ. ಹೊಸ ರಾಜ ಪ್ರಮುಖರ ಧ್ವಜವು ಕೇಸರಿ ಬಣ್ಣವುಳ್ಳದ್ದಾಗಿರುವುದು ಅದರಲ್ಲಿ ಅಶೋಕ ಸ್ತಂಭವನ್ನೂ ಮೈಸೂರಿನ ಹೆಸರನ್ನೂ ಸೇರಿಸಲಾಗುವುದೆಂದು ಗೊತ್ತಾಗಿದೆ.

### ರೆಡ್ಡಿಯವರಿಗೆ ಒಂದು ವಾರ ರಜಾ

ಅನಾರೋಗ್ಯದ ನಿಮಿತ್ತ ವಿಶ್ರಾಂತಿ ಪಡೆಯಬೇಕೆಂದು ವೈದ್ಯರು ಸಲಹೆ ಇತ್ತಿರುವ ಮೇರೆಗೆ ಮುಖ್ಯ ಮಂತ್ರಿ ಶ್ರೀ|| ಕೆ. ಸಿ. ರೆಡ್ಡಿಯವರು ಒಂದು ವಾರ ರಜಾ ಪಡೆದು ಮುಲಬಾಗಿಗೆ ತೆರಳುವರೆಂದು ತಿಳಿದುಬಂದಿದೆ

## ಮೌಲಂಕರರ ಆಗಮನ

ಮೈಸೂರು ೬

ಭಾರತ ಕೇಂದ್ರ ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ ಜಿ ವಿ. ಮೌಲಂಕರರು ಈ ದಿನ ಮಧ್ಯಾಹ್ನ ಶ್ರೀಮತಿಯಶೋಧರೆ ದಾಸಪ್ಪನವರೊಡನೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಶ್ರೀಯುತರು ಈ ದಿನ ಮಂಡ್ಯದ ಬಳಿ ಇರುವ ಬೂದನೂರಿನ ಕಸ್ತೂರಿ ಬಾ ಶಿಬಿರದ ಕೇಂದ್ರದ ಆರಂಭೋತ್ಸವವನ್ನು ನೆರವೇರಿಸಿದರು. ಅವರು ಈ ಮಧ್ಯಾಹ್ನ ಶ್ರೀ ಮನ್ಮಹಾರಾಜರವರನ್ನು ಟಿ.ಟಿ ಮೂಲಕ ಮುಲಬಾಗಿನ ಮೈನ್ ಗೆ ಡೆಲ್ಲಿಯ ಕಡೆಗೆ ಪ್ರಯಾಣಬೆಳೆಸಿದರು

## ಭಾ ರ ತ ದ ರಿ ಪ ಬ್ಲಿ ಕ್ ದಿನಾಚರಣೆ ಕಾರ್ಯಕ್ರಮ

### ಅರಮನೆಯಲ್ಲಿ ವಿಶೇಷ ದರ್ಬಾರು

ಮೈಸೂರು. ೬

ಭಾರತದ ರಿಪಬ್ಲಿಕ್ಕಿನ ಸ್ಥಾಪನೆಯ ಸಂದರ್ಭದಲ್ಲಿ ಇದೇ ೨೬ ನೇ ತಾರೀಖಿನ ಬೆಳಿಗ್ಗೆ ೧೧-೧೫ ಕ್ಕೆ ಶ್ರೀಮನ್ಮಹಾರಾಜರು ರಾಜಪ್ರಮುಖರಾಗಿ ಪ್ರತಿಜ್ಞೆಯನ್ನು ಸ್ವೀಕರಿಸುವರು. ನಂತರ ಚೀಫ್ ಜಡ್ಜರು ಮತ್ತು ಮಂತ್ರಿಗಳಿಂದ ಪ್ರಮಾಣ ವಚನ ಸ್ವೀಕಾರ, ಸಂಜೆ ೪ ಗಂಟೆಗೆ ಅರಮನೆಯಿಂದ ಸರಕಾರಿ ಭವನಕ್ಕೆ ನಾಲ್ಕು ಕುದುರೆ ಗಾಡಿಯಲ್ಲಿ ಪ್ರಭುಗಳ ಸವಾರಿ, ಶ್ರೀಮನ್ಮಹಾರಾಜರವರಿಂದ ಭಾರತ ಧ್ವಜಾರೋಹಣ ಅಲ್ಲಿ ಸೈನಿಕರ ಕವಾಯಿತು, ೬ ಗಂಟೆಗೆ ರೇಸ್ ಕೋರ್ಸಿನಲ್ಲಿ ಪ್ರಭುಗಳೇರ್ಪಡಿಸುವ ಉಪಾಹಾರ. ಕಾರ್ಯಕ್ರಮಗಳು ಅಂದು ಜರುಗುವುವು

ಮಾರನೇ ದಿನ ಸಂಜೆ ಬೆಂಗಳೂರು ಅರಮನೆಯಲ್ಲಿ ಶ್ರೀಮನ್ಮಹಾರಾಜರವರು ಒಂದು ಔತಣ ಕೂಟವನ್ನೇರ್ಪಡಿಸುವರು

### ತಾಲ್ಲೋಕು ಸಮ್ಮೇಳನಗಳ ಮಜಾ

ಸರ್ಕಾರದವರು ಆಜ್ಞೆಯೊಂದನ್ನು ... ... ಳಿಸುವವರೆಗೂ ತಾಲ್ಲೋಕು ಸಮ್ಮೇಳನಗಳನ್ನು ನಡೆಸಬಾರದೆಂದು ತಿಳಿಸಿದ್ದಾರೆ

... ಭಾರತದ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ... ನಾಥಯ್ಯನವರು ಅ... ... ಮಾಡಿಕೊಂಡಿದ್ದಾರೆಂದು ಗೊತ್ತಾಗಿದೆ

### ಪ್ರಜಾ ... ಯುವಮಂಡಳಿ

ಪ್ರಜಾ ... ಪಕ್ಷ ... ...

... ... ... ಕಾರ್ಯದರ್ಶಿ ಶ್ರೀ ಓ. ... ... ... ... ... ಗ

## ಮದ್ರಾಸು ಕಾಪಿಯಿಸ್ಟರಿಗೆ ಪೆನ್ಷನ್

ನ್ಯಾಯಸ್ಥಾನಗಳಲ್ಲಿ ಕೆಲಸ ಮಾಡುವ ಕಾಪಿಯಿಸ್ಟುಗಳಿಗೆ ಪೆನ್ಷನ್ ಕೊಡುವ ಸಲಹೆಯನ್ನು ಮದ್ರಾಸು ಸರ್ಕಾರದವರು ಅಂಗೀಕರಿಸಿದ್ದಾರೆ. ೨೦ ವರ್ಷ ನೌಕರಿ ಮಾಡಿದವರಿಗೆ ತಿಂಗಳಿಗೆ ೨೫ ರೂ ನಂತೆ ಕನಿಷ್ಠ ಪೆನ್ಷನ್ ದೊರೆಯುವುದು. ಇದಕ್ಕೂ ಕಡಿಮೆ ವರ್ಷ ಕೆಲಸ ಮಾಡಿದ್ದರೆ ಅದಕ್ಕೆ ತಕ್ಕಂತೆ ಕೊಡಲಾಗುವುದು

## ಭಾವಿ ತೋಡುವಾಗ ನೀರಿನ ಬದಲು ಕಲ್ಲಿದ್ದಲು

ಚಿತ್ತೂರಿನ ಸಮೀಪದ ಹಳ್ಳಿಯೊಂದರಲ್ಲಿ ನೀರಾವರಿಗಾಗಿ ಒಂದು ಭಾವಿ ತೆಗೆದಾಗ ಆಳದಲ್ಲಿ ೧೦ ಅಡಿ ಉದ್ದದ ಕಲ್ಲಿದ್ದಲಿನ ಗಟ್ಟಿಯು ಸಿಕ್ಕಿದೆ ಎಂದು ಹೇಳಲಾಗಿದೆ

## ೧೦೦ ರೂ. ಬೆಲೆ[illegible]ಸೆಣಬಿಗೆ [illegible]

[illegible]ಮನೆಯ ಮನೆಗೆ ಇಳಿದ ನೂರು ರೂಪಾಯಿ ಬೆಲೆ ಬಾಳುವ ಸೆಣಬಿಗೆ ನೂರನಲವತ್ತೈದು ರೂಪಾಯಿಯನ್ನು ಪಾಕಿಸ್ತಾನವು ಕೇಳುತ್ತಿದೆ. ಅದರ ಅಷ್ಟನ್ನು ಕೊಡಲು ನಾವೇನೂ ದಡ್ಡರಲ್ಲ ನಮ್ಮ ಗಿರಣಿಗಳು ನಿಂತರೂ ಚಿಂತೆಯಿಲ್ಲ—ಎಂಬುದಾಗಿ ಸರದಾರ್ ಪಟೇಲರು ತಿಳಿಸಿರುತ್ತಾರೆ

## ಹಂಗೇರಿ ರಾಯಭಾರಿ ಕಛೇರಿಯನ್ನು ಮುಚ್ಚಬೇಕು

ಅಮೆರಿಕದ ಕ್ಲೀವ್‌ಲ್ಯಾಂಡ್, ಓಹಿಯೊ ಮತ್ತು ನ್ಯೂಯಾರ್ಕ್ ನಗರಗಳಲ್ಲಿರುವ ಹಂಗೇರಿ ರಾಯಭಾರಿ ಕಛೇರಿಗಳನ್ನು ಇದೇ ತಿಂಗಳು ೧೫ನೇ ತಾರೀಖಿನೊಳಗಾಗಿ ಮುಚ್ಚಬೇಕೆಂದು ಅಮೆರಿಕ ಸಂಯುಕ್ತ ಸಂಸ್ಥಾನದವರು ಆಜ್ಞೆ ಮಾಡಿದ್ದಾರೆ

## ಈಜಿಪ್ಟಿನ ಚುನಾವಣೆಯಲ್ಲಿ ವಾಫ್ಡ್ ಪಂಗಡದ ಜಯ

ಈಜಿಪ್ಟಿನಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಈಗಾಗಲೇ ನಹಾಸ್ ಪಾಷಾರವರ ವಾಫ್ಡ್ ಪಂಗಡಕ್ಕೆ ಅತ್ಯಂತ ಭಾರಿ ಬಹುಮತವು ಬಂದಿದೆ.

## ಆಫ್ರಿಕ ಮತ್ತು ಪಾಕಿಸ್ತಾನಗಳ ಸೌಹಾರ್ದ

ದಕ್ಷಿಣ ಆಫ್ರಿಕ ಮತ್ತು ಪಾಕಿಸ್ತಾನಗಳಿಗೆ ಭಿನ್ನತೆಯು ತಲೆದೋರಿ ಇಷ್ಟರಲ್ಲೇ ಆ ರಾಷ್ಟ್ರಗಳಿಗೆ ಸೌಹಾರ್ದವೇರ್ಪಡುವುದೆಂದೂ ಮತ್ತು ಪಾಕಿಸ್ತಾನಕ್ಕೆ ಬೇಕಾಗುವ ಎಲ್ಲ ಕಲ್ಲಿದ್ದಲನ್ನೂ ದಕ್ಷಿಣ ಆಫ್ರಿಕವು ಸರಬರಾಜು ಮಾಡಲು ಒಪ್ಪಿದೆಯೆಂದು ಪಾಕಿಸ್ತಾನ ಸ್ಟೇಟ್ ಬ್ಯಾಂಕಿನ ಡೈರೆಕ್ಟರೊಬ್ಬರು ತಿಳಿಸಿರುತ್ತಾರೆ

## ಇಂಡೋನೇಷ್ಯ ಸೈನ್ಯದೊಡನೆ ಮುಸ್ಲಿಂ[illegible]ಗುಂಪಿನ ಕದನ

ಉತ್ತ[illegible] ದ್ವೀಪದ ಟ್ರಿಬ್ಸ್ ಎಂ[illegible] ಇಂಡೋನೇಷ್ಯದ ಸೈನ್ಯ ರಾಣಿಗ ಮೇಲೆ ಸಾವಿರ ಮುಸ್ಲಿಂ ಕ್ರಾಂತಿಕಾರರ ಎ[illegible] ಗುಂಪುಗಳು ಬಿದ್ದು, ತಾತ್ಕಾಲಿಕ ವ[illegible] ರಾಣಿಗಳನ್ನು ತಮ್ಮ ವಶಕ್ಕೆ ತೆಗೆದು ಕೊ[illegible]ದ್ದವೆಂದೂ, ಅನಂತರ ಅವುಗಳನ್ನು ಓಡಿಸಲಾಯಿತೆಂದೂ ಹೇಳಲಾಗಿದೆ. ಸ್ವತಂತ್ರ ಇಂಡೋನೇಷ್ಯದ ಸ್ಥಾಪನೆಯಾದ ಮೇಲೆ ಈ ರೀತಿ ನಡೆದುದು ಇದೇ ಮೊದಲು

## ಭಾರತದ ನ್ಯಾಯಸ್ಥಾನಕ್ಕೆ ಹೆಚ್ಚಿನ ನ್ಯಾಯಾಧೀಶರು

ಭಾರತದ ಫೆಡರಲ್ ನ್ಯಾಯಸ್ಥಾನಕ್ಕೆ ಇನ್ನೂ ಇಬ್ಬರು ಅಥವಾ ಮೂವರು ನ್ಯಾಯಾಧೀಶರನ್ನು ನೇಮಕ ಮಾಡುವ ವಿಷಯವು ಕೇಂದ್ರ ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದು ಹೇಳಲಾಗಿದೆ

## ಭದ್ರತಾ ಸಮಿತಿಗೆ ಸರ್ ಬಿ. ಎನ್. ರಾವ್

ಭಾರತದ ಪರವಾಗಿ ಭದ್ರತಾ ಸಮಿತಿಗೆ ಸರ್ ಬಿ ನರಸಿಂಗರಾಯರನ್ನು ನೇಮಿಸಲಾಗಿದೆ. ಈ ಮಾಹೆ ೧ ರಿಂದ ಅವರು ಸಮಿತಿಯ ಸದಸ್ಯರಾಗಿರುವರು

## ಮಳೆಗಾಗಿ ಅಳುವುದು

ತಂಜಾವೂರು ಜಿಲ್ಲೆಯಲ್ಲಿ ಮಳೆ ಬಾರದೆ ತೊಂದರೆಯಾಗಿರುವುದರಿಂದ ಪುರಾತನ ಪದ್ಧತಿಯಾದ ಅಳುವ ಸಮಾರಂಭವನ್ನು ಅಲ್ಲಿನ ಗ್ರಾಮಸ್ಥರು ಆಚರಿಸುತ್ತಿರುವುದಾಗಿ ತಿಳಿದುಬಂದಿದೆ ವರುಣ ದೇವನ ಉದಾಸೀನತೆಗಾಗಿ ಶೋಕವನ್ನು ಸೂಚಿಸುವ ದೊಡ್ಡ ಬೊಂಬೆಗಳನ್ನು ಮಾಡಿ ಹಳ್ಳಿಗಳ ರಸ್ತೆಯಲ್ಲಿ ಅವುಗಳನ್ನು ಎಳೆದುಕೊಂಡು ಹೋಗಲಾಗುತ್ತದೆ ಇದರಿಂದ ಮಳೆ ಬರುವುದೆಂಬ ನಂಬಿಕೆಯು ಗ್ರಾಮಸ್ಥರಿಗೆ ಇರುತ್ತದೆ

### ತ್ಯಾಗರಾಜ ಮಹೋತ್ಸವ

ಇದೇ ೮ನೇ ತಾ|| ಭಾನುವಾರ ಶ್ರೀ ತ್ಯಾಗರಾಜಸ್ವಾಮಿಯವರ ಆರಾಧನಾ ಪ್ರಯುಕ್ತ ಶ್ರೀರಂಗಪಟ್ಟಣದ ಅಂಗಡಿಬೀದಿಯಲ್ಲಿರುವ (ಸವಿತ) ನಯನಜ ಕ್ಷತ್ರಿಯರ ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ಪೂಜೆಯೂ ೧೧ನೇ ತಾ|| ಬುಧವಾರ ಸಂಜೆ ಉತ್ಸವವೂ ನಡೆಯುವುವು

## ಪಶ್ಚಿಮ ಪಂಜಾಬಿನ ಹೆಸರು

ಪೂರ್ವ ಪಂಜಾಬಿನ ಹೆಸರನ್ನು ಕೆಲವು ದಿನಗಳ ಹಿಂದೆ ಪಂಜಾಬೆಂದು ಬದಲಾಯಿಸಲಾಯಿತಷ್ಟೆ. ಪಶ್ಚಿಮ ಪಂಜಾಬಿಗೂ ಸಹ ಅದೇ ಹೆಸರನ್ನು ಕೊಡುವುದಾಗಿ ಪಾಕಿಸ್ಥಾನದ ಗೆಜೆಟ್ಟಿನಲ್ಲಿ ಪ್ರಕಟಿಸಲಾಗಿದೆ

## ಧಾರವಾಡ ಪ್ರಸಾರ ಕೇಂದ್ರ

ನಾಳಿದ್ದು ಸಂಜೆ ಧಾರವಾಡದ ಹೊಸ ರೇಡಿಯೋ ಪ್ರಸಾರ ಕೇಂದ್ರದ ಆರಂಭೋತ್ಸವವನ್ನು ಭಾರತ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರರವರು ನೆರವೇರಿಸುವರು

### ಆಕಾಶವಾಣಿಯಲ್ಲಿ ವಿಶೇಷ ಪ್ರಸಾರ

ನಾಳಿದ್ದು ಭಾನುವಾರ ಮಧ್ಯಾಹ್ನ ೨-೪೦ ರಿಂದ ೩ ಘಂಟೆ ವರೆಗೆ ಮಕ್ಕಳ ಉಪಯೋಗಕ್ಕಾಗಿ "ರೇಷ್ಮೆವ್ಯವಸಾಯ ಕೇಂದ್ರ" ಎಂಬ ವಿಷಯವಾಗಿ ವಿಶೇಷ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುವುದು.


ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)
ಶಿವರಾಂಪೇಟೆ, ಮೈಸೂರು

ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಸೀರೆಗಳು ಬಂದಿವೆ ದಯವಿಟ್ಟು ಭೇಟಿ ಕೊಡಿ


Office of the President,
City Municipal Council, Mysore,
Dated, 4th January 1950.

## NOTIFICATION

Applications will be received for the post of the Municipal Advocate of the Mysore City Municipality from Legal Practitioners of not less than 5 years standing. The emoluments will be Rs. 150/-per month The period of appointmentwill beco-extensive with that of the newly constituted Municipal Council. The selected candidate before entering on his duties should enter into an agreement with the Municipal President to the effect:—

1. That he shall bind himself ordinarily in person to attend toall legal works of the Mysore City Municipal Council such as to appear and conduct all civil, criminal and land acquisition cases.

2. That he shall give studied and written opinion on all questions referred to him by the Municipal Council or the Municipal President or the Municipal Commissioner.

3 That he shall draft all agreements, deeds etc., required of him by the Municipal Council or the Municipal President or the Municipal Commissioner.

4. That he shall appear and conduct all appeals, revisions and reviews relating to the Mysore City Municipal Council, before all appellate and revision courts in Mysore city.

5 That one month's previous notice in writing shall be given by either party to the other in case it is found necessary to terminate the said agreement.

6. That the Municipal Council shall be at liberty to employ another or additional legal advisers along with or instead of him in cases of special importance

7. The last date for receipt of applications is 20-1-1950

C Narasimha Moorty,
Municipal Commissioner.

ಮೈಸೂರು
ದೊಡ್ಡಕೆರೆ ಮೈದಾನದಲ್ಲಿ
15-1-50ನೇ ಭಾನುವಾರ

## ಖಂಡಿತ ಆರು ಜೊತೆ ಕುಸ್ತಿಗಳು ನಡೆಯುತ್ತವೆ

೧ ಪೈ|| ಸಣ್ಣಬೋರಯ್ಯ
೨ ಪೈ|| [illegible]. ಸಂಗಾಸ್ವಾ
೧ ಪೈ|| ಸಾಬುಲಾಲ್
೨ ಪೈ|| [illegible] ಅಮೀರ್ ಸಾಬು
೧ ಪೈ|| ಮರಿಗೌಡ
೨ ಪೈ|| ಕೃಷ್ಣಾಜಿ
೧ ಪೈ|| ರಾಮು
([illegible])
೨ ಪೈ|| ನಾರಾಯಣ

ವಿ. ಪುಟ್ಟಸ್ವಾಮಿ (ಕಂ)


CHAMUNDESWARI
TALKIES
Morning Shows
From 6-1-50 for 3 days
20th Century Fox
Productions
I Wonder Who
is Kissing Her
Now



ಗಣೇಶಾ ಟಾಕೀಸ್

6-1-50ರಿಂದ ಪ್ರತಿ ದಿನ 3 ಆಟಗಳು
ಗೌರಿಶಂಕರ್ ಪ್ರೊಡಕ್ಷನ್ಸ್‌ರವರ
ಸುಮಧುರ ಸಂಗೀತಮಯ ಹಿಂದಿ ಚಿತ್ರ

* ಜುಗ್ನು *

— ಮುಖ್ಯ ಪಾತ್ರ —
ನೂರ್ ಜಹಾನ್, ದಿಲೀಪ್ ಕುಮಾರ್ ಮುಂತಾದವರು

— ಮುಂದಿನ ಬದಲಾವಣೆ —

— ವಾಲ್ಮೀಕಿ (ಕನ್ನಡ)


Edited, printed and published by V R Nagarajan at Sadhvi Press, D. S [illegible]

ಫೋ॥ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಶನಿವಾರ ೭-೧-೫೦ [ಸಂಚಿಕೆ ೧೩೫

# ಪಾಕಿಸ್ತಾನಕ್ಕೆ ಭಾರತದ ಸಮರ ತ್ಯಾಗ ಸೂಚನೆ

## ಕಾರ್ಮಿಕರಲ್ಲಿ ದಕ್ಷತೆ ಮತ್ತು ಶ್ರದ್ಧೆ ಬೆಳೆಯಬೇಕು

ಶ್ರೀ ಕೆ. ಟಿ. ಭಾಷ್ಯಂರವರ ಹಿತೋಕ್ತಿ

ಮೈಸೂರು ೬

ಸಂಸ್ಥಾನದ ರೈಲ್ವೆ ಕೆಲಸಗಾರರ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ಭಾರಿ ಬಹಿರಂಗ ಸಭೆ ನಡೆಯಿತು ... ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ಅಗ್ರಾಸನವನ್ನು ವಹಿಸಿದ್ದರು. ...ತರರಾಷ್ಟ್ರೀಯ ಕಾರ್ಮಿಕ ಸಂಘದ ...ಳಿತ ಮಂಡಲಿಯು ಸಭೆಗಾಗಿ ಬಂದಿದ್ದ ಇಂಗ್ಲೆಂಡ್, ಅಮೆರಿಕ, ಆಸ್ಟ್ರೇಲಿಯಾ ಮುಂತಾದ ದೇಶಗಳ ಪ್ರತಿನಿಧಿಗಳು ...ವಣಮಾಡಿ ಭಾರತೀಯ ಕೆಲಸಗಾರರಿಗೆ ತಮ್ಮ ದೇಶಗಳ ಕಾರ್ಮಿಕರ ಶುಭಾಶಯಗಳನ್ನು ಸಲ್ಲಿಸಿದರು 'ಕಾರ್ಮಿಕರು ...ನ ಪಕ್ಷಗಳ ಪ್ರಭಾವಕ್ಕೆ ಬಲಿಯಾಗದೆ ಒಗ್ಗಟ್ಟಿನಿಂದಲೂ, ಶಿಸ್ತಿನಿಂದಲೂ ಸಂಘಟನೆಯನ್ನು ಹಿತವನ್ನೂ, ಪ್ರಸಂಚದ ಅಭ್ಯುದಯವನ್ನೂ ಸಾಧಿಸಬೇಕೆಂದು ಅವರು ಸೂಚಿಸಿದರು

ರೈಲ್ವೆ ಕೆಲಸಗಾರರಾದ ಶ್ರೀಗಳು ರಾಜು ...ದಲಿಜಾರ್, ಕೃಷ್ಣಮೂರ್ತಿ, ನರಸ... ರಜಾಬ್ ಅಲಿಯವರು ಮತ್ತು ... ಜಿ ದೇವನಾಥ್‌ರವರು ಮಾ...ನಾಡಿ ಕೆಲಸಗಾರರಿಗೆ ಇರುವ ಕುಂದುಕೊರತೆಗಳನ್ನು ಸರ್ಕಾರದವರು ಪರಿಹರಿಸಿಕೊಡಬೇಕಾದ ಅಂಶಗಳನ್ನು ವಿವರಿಸಿದರು

...ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾರ್ಮಿಕರಿಗೆ ಮುಂದೆ ಭವ್ಯತರವಾದ ಭವಿಷ್ಯವು ...ದೆಯೆಂದೂ, ಅವರು ದಕ್ಷತೆಯಿಂದ ...ಶ್ರದ್ಧೆಯಿಂದಲೂ ಕೆಲಸಮಾಡಿ ತಮಗೂ, ದೇಶಕ್ಕೂ ಕೀರ್ತಿ ತರಬೇಕೆಂದೂ ...ರವರು ಕೆಲಸಗಾರರ ಹಿತಸಾಧನೆಗಾಗಿ ಇದುವರೆಗೆ ಮಾಡಲಾಗಿರುವ ಕೆಲಸ...ಗಳನ್ನು ವಿವರಿಸಿದರು ಮುಂದೆಯೂ ಸಹಾ ಅವಶ್ಯಕವಾದ ಎಲ್ಲ ಸೌಲಭ್ಯಗಳನ್ನೂ ಕಲ್ಪಿಸುವುದಾಗಿ ಭರವಸೆ ಇತ್ತರು.

...ಮುಷ್ಕರದ ಕೆಲಸಗಾರರ ಸ್ಥಿತಿಗತಿಗಳ ... ಪ್ರಸ್ತಾಪಿಸುತ್ತಾ ಈ ಪ್ರಶ್ನೆಯನ್ನು ಬಗೆಹರಿಸಲು ಇದುವರೆಗೆ ಅನೇಕ ಪ್ರಯತ್ನಗಳನ್ನು ಮಾಡಿರುವುದಾಗಿ ಹೇಳಿ ಸಧ್ಯದಲ್ಲೇ ಇದು ಸಮರ್ಪಕವಾಗಿ ಇತ್ಯರ್ಥವಾಗಬಹುದೆಂದು ಆಶಿಸಿದರು ಈಗ ಬಂಧನಕ್ಕೊಳಗಾಗಿರುವವರನ್ನು ಬಿಡುಗಡೆ ಮಾಡಲಾಗುವುದೆಂದು ಸಹಾ ತಿಳಿಸಿದರು.

...ಬೆಳಗೋಳದ ಕಾರ್ಖಾನೆಯಲ್ಲಿ ಉಂಟಾ...ದ ತೊಂದರೆಯನ್ನು ಪ್ರಸ್ತಾಪಿಸಿ ಅದ...ಬಗೆಯೂ ಸೂಕ್ತವಾದ ವಿಚಾರಣೆ ನಡೆಸಲಾಗುವುದೆಂದೂ ಕೆಲಸಗಾರರಿಗೆ ...ಗಳ ಬೋನಸ್ಸು ಕೊಡಿಸುವ ...ದಾಗಿಯೂ ಹೇಳಿದರು

### ಹ ರಿ ಕ ಥೆ

...ಯ ಕೊಪ್ಪಲು ರಾಮಯ್ಯ... ...ದಿರುವ ಶ್ರೀ ಕಮಲಾಂಬ... ...ದಲ್ಲಿ ನಾಳೆ ಮಧ್ಯಾಹ್ನ ೨-೩೦ ಕ್ಕೆ ... ನಾರಾಯಣ ದಾಸರಿಂದ ... ಹರಿಶ್ಚಂದ್ರ ಎಂಬ ಹರಿಕಥೆ ನಡೆಯುತ್ತದೆ

### ತ್ಯಾಗರಾಜರ ಆರಾಧನೆ

ಶ್ರೀ ಪ್ರಸನ್ನ ಸೀತಾರಾಮ ಮಂದಿರದ... ನಾಳೆ ಸಂಜೆ ೬-೩೦ ಘಂಟೆಯಿಂದ ಶ್ರೀ ತ್ಯಾಗರಾಜರವರ ಆರಾಧನೆ ಆಚರಿಸಲ್ಪಡುವುದು ಸರ್ವರಿಗೂ ಸ್ವಾಗತವಿದೆ

## ಗುರುಗಳ ಜಯಂತಿ ಉತ್ಸವ

ಮೈಸೂರು ೬

ಶ್ರೀ ಕೂಡಲಿ ಮಠದ ಶ್ರೀ ವಿದ್ಯಾಭಿನವ ವಾಲುಕೇಶ್ವರ ಭಾರತೀ ಸ್ವಾಮಿಗಳವರ ೭೭ನೆಯ ಜಯಂತಿ ಉತ್ಸವವು ಇದೇ ೧೦ನೇ ತಾ॥ ಮಂಗಳವಾರದಿಂದ ೪ ದಿನಗಳು ಸಂಸ್ಕೃತ ಮಹಾ ಪಾಠಶಾಲೆಯ ಆವರಣದಲ್ಲಿ ಗುರುಗಳ ಸನ್ನಿಧಿಯಲ್ಲಿ ನಡೆಯುವುದು ೧೦ನೇ ತಾ॥ ಸಂಜೆ ೭ ಘಂಟೆಗೆ ಬಿ॥ ವಿ॥ ಸಿ ಚಂದ್ರಶೇಖರ ಭಟ್ಟರಿಂದ 'ಕರ್ಮಫಲ" ಎಂಬ ವಿಚಾರವಾಗಿ ಭಾಷಣ, ೧೧ನೇ ತಾ॥ ಸಂಜೆ ಬಿ॥ ವಿ॥ ಎಂ ಶಿವಪ್ಪನವರಿಂದ ಗಾನ, ೧೨ನೇ ತಾ॥ ಸಂಜೆ ಶ್ರೀ ಮಿರ್ಲೆ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ ಪದ್ಮನಾಭನ ಮತ್ತು ೧೩ನೇ ತಾ॥ ಶುಕ್ರವಾರ ಸಂಜೆ ಶ್ರೀ ಲಕ್ಷ್ಮೀಪತಿ ಸಹೋದರರಿಂದ "ಬ್ರಹ್ಮರ್ಷಿ ವಿಶ್ವಾಮಿತ್ರ" ಎಂಬ ಹರಿಕಥೆ ನಡೆಯುವುವು

### ಪ್ರಭುತ್ವ ಭವನದಲ್ಲಿ ಸತ್ಕಾರ ಸಮಾರಂಭ

ಅಂತರರಾಷ್ಟ್ರೀಯ ಕಾರ್ಮಿಕ ಕಛೇರಿಯ ಡೈರೆಕ್ಟರ್ ಜನರಲ್ ಮಿ॥ ಡೇವಿಡ್ ಮಾರ್ಸ್‌ರವರು ನಿನ್ನೆ ಸಂಜೆ ಪ್ರಭುತ್ವ ಭವನದಲ್ಲಿ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು ಕಾರ್ಮಿಕ ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳೂ ಮತ್ತು ಇತರ ಅನೇಕ ಜನ ಅಧಿಕಾರಿ ಮತ್ತು ಖಾಸಗಿ ಪ್ರಮುಖರೂ ಭಾಗವಹಿಸಿದ್ದರು

### ಅಮೆರಿಕಕ್ಕೆ ಮೈಸೂರಿನ ಆನೆಗಳು

ಪಂಡಿತ ನೆಹರೂರವರ ಪ್ರಾರ್ಥನೆಯಂತೆ ಮೈಸೂರಿನಿಂದ ಒಂದು ಹೆಣ್ಣು ಮತ್ತು ಇನ್ನೊಂದು ಗಂಡು ಆನೆ ಮರಿಗಳನ್ನು ಅಮೆರಿಕದ ನ್ಯೂಯಾರ್ಕಿನ ಮೃಗಾಲಯಕ್ಕೆ ಕಳುಹಿಸಿಕೊಡಲಾಗುವುದು ಅವು ಮೈಸೂರಿನಿಂದ ಈ ತಿಂಗಳು ೧೫ನೇ ತಾ॥ ಬೊಂಬಾಯಿಗೆ ಹೋಗಿ ಅಲ್ಲಿಂದ ಒಂದು ವಿಶೇಷ ವಿಮಾನದಲ್ಲಿ ಅಮೆರಿಕಕ್ಕೆ ತೆರಳುವುವು

### ಮೈಸೂರು ರೈಲ್ವೆಯ ಭವಿಷ್ಯ

ಕೇಂದ್ರ ಸರಕಾರದ ರೈಲ್ವೆ ಮಂತ್ರಿಗಳಾದ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್ಯರೊಡನೆ ಮೈಸೂರು ರೈಲ್ವೆಯ ಭವಿಷ್ಯದ ವಿಚಾರವಾಗಿ ಮಾತುಕತೆ ನಡೆಸಲು ಸಂಸ್ಥಾನದ ಸಚಿವರಾದ ಶ್ರೀ ಹೆಚ್ ಸಿದ್ದಯ್ಯನವರು ನಿನ್ನೆ ಮದರಾಸಿಗೆ ತೆರಳಿದರು

## ಹೈದರಾಬಾದನ್ನು ಈಗಲೇ ವಿಭಜಿಸುವುದಿಲ್ಲ

ಪಂಡಿತ ನೆಹರೂರವರು ಒಂದು ಹೇಳಿಕೆಯನ್ನಿತ್ತು ಹೈದರಾಬಾದು ಸಂಸ್ಥಾನವನ್ನು ಈಗಲೇ ಭಾಷಾವಾರು ವಿಭಾಗಗಳಾಗಿ ಹರಿದು ಹಂಚುವುದು ಉಚಿತವಲ್ಲವೆಂದು ತಿಳಿಸಿರುತ್ತಾರೆ ಹೈದರಾಬಾದಿನ ಭವಿಷ್ಯವನ್ನು ಗೊತ್ತುಮಾಡುವ ಅಧಿಕಾರವು ಅಲ್ಲಿನ ಪ್ರಜೆಗಳಿಗೇ ಸೇರಿದೆ ಇನ್ನು ಕೆಲವು ಕಾಲದವರೆಗೆ ಆ ಸಂಸ್ಥಾನವು ಈಗಿರುವಂತೆಯೇ ಇರುವುದು ಒಳ್ಳೆಯದು ಅದನ್ನು ಈ ಕೂಡಲೇ ವಿಭಾಗ ಮಾಡಿದರೆ ಅನೇಕ ಸಮಸ್ಯೆಗಳು ಏಳುವುವು- ಎಂದು ಅವರು ತಿಳಿಸಿರುವರು.

### ಬೊಂಬಾಯಿಯಲ್ಲಿ ೪೦ ಸಾವಿರ ಮಂದಿಗೆ ನಿರುದ್ಯೋಗ

ಕಚ್ಚಾ ಹತ್ತಿಯ ಅಭಾವದಿಂದ ಬೊಂಬಾಯಿನ ಅನೇಕ ಬಟ್ಟೆ ಗಿರಣಿಗಳು ಮುಚ್ಚಿಹೋಗಿವೆಯೆಂದೂ ಇದರಿಂದ ೪೦ ಸಾವಿರ ಮಂದಿ ಕೆಲಸಗಾರರು ನಿರುದ್ಯೋಗಿಗಳಾಗುವರೆಂದೂ ಬೊಂಬಾಯಿನ ಕಾರ್ಮಿಕ ಸಚಿವರಾದ ಶ್ರೀ ಗುಲ್‌ಜಾರಿಲಾಲ್ ನಂದಾರವರು ಹೇಳಿರುತ್ತಾರೆ ಗಿರಣಿಗಳಿಗೆ ಸೂಕ್ತವಾದ ಸಹಾಯ ನೀಡಿ ಅವುಗಳು ಮುಚ್ಚದಂತೆ ತಕ್ಕ ವ್ಯವಸ್ಥೆ ಮಾಡಲು ಪ್ರಯತ್ನಿಸುವುದಾಗಿಯೂ ಸಹ ಅವರು ತಿಳಿಸಿರುತ್ತಾರೆ

### ಪಾಕಿಸ್ತಾನಕ್ಕೆ ಭಾರತದಿಂದ ಸಮರ ತ್ಯಾಗದ ಸೂಚನೆ

ಉಭಯ ರಾಷ್ಟ್ರಗಳೂ ಪರಸ್ಪರ ಯುದ್ಧಕ್ಕೆ ಇಳಿಯದೆ ಸ್ನೇಹ, ಸಂಧಾನ ಒಪ್ಪಂದ ಅಥವಾ ಪಂಚಾಯಿತಿಯ ಮೂಲಕ ಎಲ್ಲ ವ್ಯಾಜ್ಯಗಳನ್ನೂ ಪರಿಹರಿಸಿಕೊಳ್ಳುವ ಬಗ್ಗೆ ಒಂದು ಜಂಟಿ ಘೋಷಣೆಯನ್ನು ಹೊರಡಿಸುವ ಸೂಚನೆಯನ್ನೊಳಗೊಂಡ ಕರಡು ಪ್ರತಿಯೊಂದನ್ನು ಮೂರು ವಾರದ ಕೆಳಗೆ ಪಾಕಿಸ್ತಾನಕ್ಕೆ ಕಳುಹಿಸಲಾಗಿತ್ತೆಂದೂ, ಆದರೆ ಅದಕ್ಕೆ ಯಾವ ಉತ್ತರವೂ ಇನ್ನೂ ಬಂದಿರುವುದಿಲ್ಲವೆಂದು ಪಂಡಿತ ನೆಹರೂರವರು ತಿಳಿಸಿರುತ್ತಾರೆ

○ ಮಲಯದ ಕೌಲಾಲಂಪುರದಲ್ಲಿರುವ ಅವತಾರ್ ಸಿಂಗ್ ಎಂಬುವನು ೩ ಗಂಟೆ ೧೦ ನಿಮಿಷದಲ್ಲಿ ೫೦ ಮೈಲಿ ಸೈಕಲ್ ಸವಾರಿ ಮಾಡಿರುವನು.

## ಭಾರತದ ಪಾರ್ಲಿಮೆಂಟಿಗೆ ಕಾಂ॥ ಉಮೇದುವಾರರು

ಸ್ವಂ. ಸು ಫೋ॥] ಬೆಂಗಳೂರು ೬

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಈ ಕೆಳಗೆ ಕಂಡ ೬ ಜನರನ್ನು ಭಾರತದ ಪಾರ್ಲಿಮೆಂಟಿಗೆ ಉಮೇದುವಾರರನ್ನಾಗಿ ಚುನಾಯಿಸಿದ್ದಾರೆ:-ಶ್ರೀಗಳಾದ ಕೆ. ಹನುಮಂತಯ್ಯ, ಎಂ. ವಿ. ರಾಮರಾವ್, ಹೆಚ್ ಎಸ್. ರುದ್ರಪ್ಪ, ಎಂ ಶಂಕರಯ್ಯ, ಜಿ ಎ. ತಿಮ್ಮಪ್ಪಗೌಡ ಮತ್ತು ಟಿ. ಚನ್ನಯ್ಯ

### ರಿಪಬ್ಲಿಕ್ ದಿನೋತ್ಸವ

ಭಾರತ ರಿಪಬ್ಲಿಕ್ ದಿನಾಚರಣೆ ಸಂಬಂಧವಾಗಿ ಈ ತಿಂಗಳು ೨೬ ಮತ್ತು ೨೭ ನೇ ತಾ॥ ಸಾರ್ವಜನಿಕ ರಜಾ ಕೊಡಲಾಗುವುದು ಮೊದಲೇ ಗೊತ್ತಾಗಿರುವ ಕಾರ್ಯಕ್ರಮಗಳಲ್ಲದೆ ಬೆಂಗಳೂರು ಮೈಸೂರುಗಳಲ್ಲಿ ಅರಮನೆಗಳ ದೀಪೋತ್ಸವವೂ ನಡೆಯುವುದು. ಬೃಂದಾವನದಲ್ಲೂ ದೀಪೋತ್ಸವವು ಜರುಗುವುದು ಜಿಲ್ಲಾ ಕೇಂದ್ರಗಳಲ್ಲಿ ಸೈನಿಕರ ಕವಾಯಿತು ಮತ್ತು ಮೆರವಣಿಗೆಗಳು ನಡೆಯುವುವು ಸರ್ಕಾರಿ ಕಟ್ಟಡಗಳ ಮೇಲೆ ದೀಪಾಲಂಕಾರ ಮಾಡಲಾಗುವುದು ಮಹಾಜನರು ಈ ಕಾರ್ಯಕ್ರಮಗಳಲ್ಲಿ ಸಹಕರಿಸಬೇಕೆಂದು ಸರ್ಕಾರದವರು ಪ್ರಾರ್ಥನೆ ಮಾಡಿದ್ದಾರೆ.

### ಮೇದಪ್ಪನವರ ಮೇಲೆ ಕೇಂದ್ರ ಸರ್ಕಾರಕ್ಕೆ ದೂರು

ಮೈಸೂರು ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮೇದಪ್ಪನವರ ಮೇಲೆ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರಕ್ಕೆ ದೂರು ಹೋಗಿದೆಯೆಂದು ವರದಿಯಾಗಿದೆ

### ಕೆ. ಸಿ. ರೆಡ್ಡಿಯವರು ಪುದುಚೇರಿಗೆ

ಪ್ರಧಾನ ಸಚಿವ ಶ್ರೀ ಕೆ. ಸಿ ರೆಡ್ಡಿಯವರು ವಿಶ್ರಾಂತಿ ಪಡೆಯುವ ನಿಮಿತ್ತ ಪುದುಚೇರಿಗೆ ತೆರಳಿ ಅಲ್ಲಿ ೧೦ ದಿನಗಳಿರುವರೆಂದು ಗೊತ್ತಾಗಿದೆ

### ರಿಪಬ್ಲಿಕ್ ದಿನಾಚರಣೆಯಲ್ಲಿ ರಾಷ್ಟ್ರಧ್ವಜದ ಉಪಯೋಗ

ಭಾರತ ರಿಪಬ್ಲಿಕ್ ಸ್ಥಾಪನೋತ್ಸವದ ಸಂಬಂಧವಾಗಿ ಇದೇ ತಿಂಗಳು ೨೬ ಮತ್ತು ೨೭ನೇ ತಾರೀಖುಗಳಲ್ಲಿ ಸಾರ್ವಜನಿಕರು ಭಾರತದ ಧ್ವಜವನ್ನು ಉಪಯೋಗಿಸಲು ಯಾವ ನಿರ್ಬಂಧವೂ ಇರುವುದಿಲ್ಲ

### ಆಕಾಶವಾಣಿಯಲ್ಲಿ ಸಂಗೀತ

ಈ ದಿನ ಸಂಜೆ ೭ ರಿಂದ ೭-೩೦ರವರೆಗೆ ಮತ್ತು ರಾತ್ರಿ ೯-೩೦ ರಿಂದ ೧೦ ರವರೆಗೆ ಆಕಾಶವಾಣಿಯಲ್ಲಿ ಸುಲೋಚನಾ ಮಹಾದೇವರವರ ಗಾನವನ್ನು ಏರ್ಪಡಿಸಲಾಗಿದೆ

### ದೇವರಾವ್ ಶಿವರಾಂರವರ ನಿಧನ

ಸ್ವಂ. ಸು. ಫೋ॥] ಬೆಂಗಳೂರು ೬

ಧರ್ಮ ಪ್ರಕಾಶ ರಾ॥ ಬ॥ ದೇವರಾವ್ ಶಿವರಾಂರವರು ನಿನ್ನೆ ಮಧ್ಯರಾತ್ರಿ ೧-೩೦ ಘಂಟೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಕೆಲವು ದಿನಗಳಿಂದ ಅವರಿಗೆ ಅಸ್ವಸ್ಥವಾಗಿತ್ತು ಅವರಿಗೆ ೬೦ ವರ್ಷ ವಯಸ್ಸಾಗಿತ್ತು ಅವರ ಪ್ರಾತಿನಿಧಿಕ ಸಭಾ ಸದಸ್ಯರೂ ಆಗಿದ್ದರು ಸುಮಾರು ೨ ಲಕ್ಷ ರೂಪಾಯಿಗಳವರೆಗೆ ದಾನ ಧರ್ಮಗಳನ್ನು ಮಾಡಿದ್ದರು

## ಜಿಲ್ಲಾ ಸಹಕಾರ ಸಮ್ಮೇಳನ

ಮೈಸೂರು ೬

ಮೈಸೂರು ಜಿಲ್ಲೆಯ ದ್ವಿತೀಯ ಸಹಕಾರ ಸಮ್ಮೇಳನವು ಈ ತಿಂಗಳು ೨೨ನೇ ಭಾನುವಾರ ಮಧ್ಯಾಹ್ನ ೧ ೩೦ ಘಂಟೆಗೆ ಶ್ರೀ ಪಿ ಗೋಪಾಲಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಚಾಮರಾಜನಗರದ ಭ್ರಮರಾಂಬಾ ಟಾಕೀಸಿನಲ್ಲಿ ನಡೆಯುವುದು. ಗೃಹಸಚಿವ ಶ್ರೀ ಟಿ ಮರಿಯಪ್ಪನವರು ಉದ್ಘೋಷಣವನ್ನು ನೆರವೇರಿಸುವರು. ಅದೇ ದಿನ ಬೆಳಿಗ್ಗೆ ೧೦-೩೦ ಘಂಟೆಗೆ ಅಲ್ಲೇ ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಸದಸ್ಯರ ಪ್ರಥಮ ವಾರ್ಷಿಕ ಮಹಾ ಸಭೆಯೂ ನಡೆಯುವುದು

### ಸತ್ಕಾರ ಕೂಟ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಆಡಳಿತ ಮಂಡಲದ ಸದಸ್ಯರನ್ನೂ, ಅಧಿಕಾರಿ ವರ್ಗದವರನ್ನೂ ಸತ್ಕರಿಸಲು ನಿನ್ನೆ ಮಧ್ಯಾಹ್ನ ಲಲಿತ ಮಹಲ್ ಅರಮನೆಯಲ್ಲಿ ಮುಖ್ಯ ಮಂತ್ರಿಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ನೂರಾರು ಜನ ಅತಿಥಿಗಳು ಬಂದಿದ್ದರು. ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾದ ಶ್ರೀ ಜಿ ವಿ ಮಾವಲಂಕರರೂ ಸಹಾ ಬಂದಿದ್ದರು

### ಮಂಡ್ಯಕ್ಕೆ ಕ್ಷಯರೋಗದ ಆಸ್ಪತ್ರೆ

ಮಂಡ್ಯ ಟವನ್ನಿಗೆ ಒಂದು ಕ್ಷಯರೋಗದ ಆಸ್ಪತ್ರೆಯನ್ನು ಕೊಡಲು ಸರ್ಕಾರದವರು ಒಪ್ಪಿ ಸಿಬ್ಬಂದಿಯವರನ್ನು ಮಂಜೂರು ಮಾಡಿರುತ್ತಾರೆ. ಈಗಾಗಲೇ ಶಿವಮೊಗ್ಗ, ತುಮಕೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಇಂತಹ ಚಿಕಿತ್ಸಾಲಯಗಳನ್ನು ತೆರೆಯಲಾಗಿದೆ


### ಜ್ಯೋತಿಷ್ಯ

ಭವಿಷ್ಯ ಮತ್ತು ಜಾತಕ ಫಲ ಪ್ರಶ್ನೆಗಳನ್ನು ನಿಖರವಾಗಿ ಹೇಳಲಾಗುತ್ತದೆ. ಈ ಕೆಳಗೆ ಕಂಡವರಲ್ಲಿ ಬಂದು ವಿಚಾರಿಸಿರಿ —

ಕೆ ಆರ್ ಶಿವರಾಮ್

ಉಡುಪಿ ಆಸ್ಟ್ರಾಲಜರ್,

೨, ಕೈಲಾಸ ವಿಹಾರ, ವಾಣೀವಿಲಾಸ ಮಾರ್ಕೆಟ್ ಚೌಕ, ಮೈಸೂರು.


## ಮೈಸೂರು ಆಹಾರ ಯೋಜನೆಗೆ ಭಾರತದ ಅಂಗೀಕಾರ

೧೯೫೨ರೊಳಗೆ ಇಲ್ಲದೆ ಇರುವ ೦ ಸ್ಟೇಟಿನ ಆಹಾರದ ಕೊರತೆಯನ್ನು ನೀಗಲು ಮೈಸೂರು ಸರ್ಕಾರದವರು ಹಾಕಿಕೊಂಡಿರುವ ೭॥ ಕೋಟಿ ರೂಗಳ ಯೋಜನೆಗೆ ಭಾರತ ಸರ್ಕಾರದವರು ಅಂಗೀಕಾರ ಕೊಟ್ಟಿರುತ್ತಾರೆ ಮತ್ತು ಇದನ್ನು ಕಾರ್ಯರೂಪಕ್ಕೆ ತರಲು ನಾಲ್ಕು ತಿಂಗಳಲ್ಲಿ ೬೦ ಲಕ್ಷ ರೂಗಳನ್ನು ಸಹಾಯ ಮಾಡುವರು.

## ಇಟಲಿಯಲ್ಲಿ ರೈತರ ದಂಗೆ

ಜಮೀನುಗಳಿಲ್ಲದ ರೈತರುಗಳು ಸಾಗುವಳಿಯಾಗದ ಭಾಗಗಳನ್ನು ಉತ್ತರ ಇಟಲಿಯ ಮೊಡೆನಾ ಪ್ರದೇಶದಲ್ಲಿ ಆಕ್ರಮಿಸಿಕೊಂಡಿರುತ್ತಾರೆಂದು ಹೇಳಲಾಗಿದೆ. ಇಟಲಿಯಲ್ಲಿ ನಡೆದ ರೈತರ ದಂಗೆಯು ಹೊಸ ಗಲಭೆಯೆಂದು ಭಾವಿಸಲಾಗಿದೆ. ಇದಾದ ಕೆಲವು ಗಂಟೆಗಳಲ್ಲಿ ಪೋಲೀಸರು ಬಂದು ಅವರುಗಳನ್ನು ಆ ಸ್ಥಳದಿಂದ ಓಡಿಸಿದರು. ಹಲವರು ಹಾಗೆ ಹೋಗಲು ನಿರಾಕರಿಸಿ, ಭೂಮಿಯನ್ನು ಉಳುತ್ತಿರುವರು. ಇವರನ್ನು ಗಸ್ತು ಪೋಲೀಸರು ನೋಡುತ್ತಿರುವರು

## ಸರ್ಕಾರಿ ನೌಕರರಿಗೆ ಮುಷ್ಕರದ ಹಕ್ಕಿಲ್ಲ

ಕೇಂದ್ರ ಮರಾಮತ್ತು ಸಚಿವರಾದ ಶ್ರೀ ಗಾಡ್ಗೀಲರು ಸರಕಾರಿ ನೌಕರರಿಗೆ ಮುಷ್ಕರ ಹೂಡುವ ಹಕ್ಕು ಇರಕೂಡದೆಂದು ಅಭಿಪ್ರಾಯಪಟ್ಟಿರುತ್ತಾರೆ. ಪ್ರತಿಯೊಬ್ಬ ಉದ್ಯೋಗಿಯೂ ನ್ಯಾಯವಾದ ಕೂಲಿಯನ್ನು ಕೇಳಲು ಹಕ್ಕು ಹೊಂದಿರುವನೆಂದೂ, ಅದಕ್ಕೆ ಪ್ರತಿಯಾಗಿ ಅವನು ಪೂರ್ತಿಯಾಗಿ ಕೆಲಸ ಮಾಡಬೇಕೆಂದೂ ಅವರು ತಿಳಿಸಿರುವರು. ದೇಶದ ಪ್ರಗತಿ ಮತ್ತು ಭದ್ರತೆಯು ಸರಕಾರಿ ನೌಕರರ ಮೇಲೆ ಅವಲಂಬಿಸಿರುವುದರಿಂದ ಅವರುಗಳ ಮೇಲೆ ವಿಶೇಷ ಜವಾಬ್ದಾರಿ ಬಿದ್ದಿರುತ್ತದೆ. ಆದ್ದರಿಂದ ಅವರ ಮುಷ್ಕರದ ಪ್ರಶ್ನೆಯೇ ಸರಿಯಾದುದಲ್ಲವೆಂದು ಅವರು ತಿಳಿಸಿದರು.

## ರಾಷ್ಟ್ರೀಯ ಚೀಣದೊಡನೆ ಬ್ರಿಟನ್ನಿನ ಸಂಬಂಧ ತ್ಯಾಗ

ಬ್ರಿಟನ್ನು ಈ ದಿನ ಕಮ್ಯೂನಿಸ್ಟ್ ಚೀಣಕ್ಕೆ ಮನ್ನಣೆ ಕೊಡುವುದೆಂದೂ, ಅದು ರಾಷ್ಟ್ರೀಯ ಚೀಣದೊಡನೆ ಸಂಬಂಧವನ್ನು ತ್ಯಜಿಸಿ, ಆ ಬಗ್ಗೆ ಬ್ರಿಟನ್ನಿನಲ್ಲಿರುವ ರಾಷ್ಟ್ರೀಯ ಚೀಣಾ ಸರ್ಕಾರದ ಪ್ರತಿನಿಧಿಗೆ ಸೂಚನೆ ಕೊಡಲಿದೆಯೆಂದೂ ವರದಿಯಾಗಿದೆ

## ಸಚಿನ್ ಸಂಸ್ಥಾನದ ಬೇಗಮಳಿಗೆ ನೋಟೀಸು

ಸೌರಾಷ್ಟ್ರದಲ್ಲಿರುವ ಸಚಿನ್ ಸಂಸ್ಥಾನದ ನವಾಬರ ಬೇಗಮಳಿಗೆ ದೇಶತ್ಯಾಗಿಗಳ ಆಸ್ತಿಯ ಡೆಪ್ಯೂಟಿ ಕಂಟ್ರೋಲರರಾದ ಸೂರತ್ ಕಲೆಕ್ಟರರು ಪತ್ರವೊಂದನ್ನು ಬರೆದು ಆಕೆಯು ಪಾಕಿಸ್ತಾನಕ್ಕೆ ಹೋಗಿರುವುದರಿಂದ ಆಕೆಗೆ ಸೇರಿದ ಸುಲ್ತಾನಾಬಾದಿನ ಬಂಗಲೆ ಮತ್ತು ಐದು ಎಕರೆ ಜಮೀನುಗಳನ್ನು ಸರಕಾರದವರು ತಮ್ಮ ವಶಕ್ಕೆ ಏಕೆ ತೆಗೆದುಕೊಳ್ಳಕೂಡದೆಂಬುದಕ್ಕೆ ಕಾರಣ ಕೊಡಬೇಕೆಂದು ಕೇಳಿರುತ್ತಾರೆ


### ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಕ್ರಿಸ್‌ಮಸ್ ರಜಕ್ಕಾಗಿ ಮುಚ್ಚಿ(ದ್ದ) ಶ್ರೀ ಜಗದಂಬಾ ಶಿಶುವಿಹಾರವು ಈ ಮಾ(ಸ) ೯ನೇ ತಾರೀಖಿನಿಂದ ನಡೆಯುತ್ತ(ದೆ). ಪೋಷಕ ಮಹಾಶಯರು ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಬೇಕಾಗಿ ವಿನಂತಿ. ಶಿಶುವಿದ್ಯಾಭ್ಯಾಸದಲ್ಲಿ ಆಸ(ಕ್ತ)ರಾದ ಮಹನೀಯರು ಕಾಲವಿಳಂಬ ಮಾಡದೆ ತಮ್ಮ ಮಕ್ಕಳನ್ನು ಈ ಶಾಲೆಗೆ (ಕಳುಹಿ)ಸಿ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ

### ಗಣೇಶಾ ಟಾಕೀಸ್

೬-1-50ರಿಂದ ಪ್ರತಿ ದಿನ 3 ಆಟಗಳು

ಪ್ರಕಾಶ್ ಆರ್ಟ್ ಪ್ರೊಡಕ್ಷನ್ಸ್‌ರವರ ಸುಮಧುರ ಸಂಗೀತಮಯ ಹಿಂದಿ ಚಿತ್ರ

★ ಜುಗ್ನು ★

— ಮುಖ್ಯ ಪಾತ್ರ:—
ನೂರ್‌ಜಹಾ, ದಿಲೀಪ್ ಕುಮಾರ್ ಮತ್ತಿತರರು

— ಮುಂದಿನ ಬದಲಾವಣೆ —

— ವಾಲ್ಮೀಕಿ — (ತಮಿಳು)


Edited, printed and published by A R. Nagarajan at Sadhvi Press, D Subbiah Road, Mysore


### ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)
ಶಿವರಾಂಪೇಟೆ, ಮೈಸೂರು

ಗ್ಯಾರಂಟಿಯಾದ ಮಾಲು
ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಸೀರೆಗಳು ಬಂದಿವೆ
ದಯವಿಟ್ಟು ಭೇಟಿ ಕೊಡಿ

### ನಾಳೆ 8-1-50ನೇ ಭಾನುವಾರ ನಡೆಯುವ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ

ಚುನಾವಣೆಯಲ್ಲಿ ನಮ್ಮೀರ್ವರಿಗೂ ಸಹ ಓಟು ಮಾಡಬೇಕಾಗಿ ಪ್ರಾರ್ಥಿಸುತ್ತೇ(ವೆ)

15 ಬಿ. ಆರ್. ನಾಯ್ಡು

39 ಬಿ. ಎಸ್. ಸುಬ್ಬರಾವ್

### ರಾಜಕಮಲ್

ಮೈಸೂರು

6—1—50 ರಿಂದ

ಜನಭರಿತವಾದ ೪ನೇ ವಾರ

ಜೀವನಂ

- ಭೂಮಿಕೆ -
ವೈಜಯಂತಿಮಾಲಾ, ಟಿ ಆರ್ ರಾಮಚಂದ್ರ, ಲಲಿತ-ಪದ್ಮಿನಿ

—: Morning Shows —
From 6-1-50 For 4 days

**Devils of the Desert**

With - John Wayne, Ruth Hall, Jack Mulhall
( A Full Serial full of thrills and stunt )

### ಪ್ರಭುದೇವಾ ಟಾಕೀಸ್

ದಿನವಹಿ ೪ ಆಟಗಳು

8—1—50 ನೇ ಭಾನುವಾರದಿಂದ
ಅಮೋಘವಾದ ೨ನೇ ವಾರ

★ ಮಹಿರಾವಣ ★

(ತೆಲುಗು ಚಿತ್ರ)

ಮುಖ್ಯ ಪಾತ್ರ — ಗಗ್ಗಯ್ಯ, ಕಾಂಚನಮಾಲಾ, ರಾಮಕೃಷ್ಣ ಶಾಸ್ತ್ರಿ ಮುಂತಾದವರು

ಸತಿಯ ಸರ್ವಸ್ವವೂ ಪತಿಯೇ ಎಂದು ಸಾರಿ ಮನೆತನದ ಮಾನ ... ಕೀರ್ತಿಯನ್ನು ಬೆಳಗಿದ ನಾರೀಮಣಿಯ ಚರಿತ್ರೆ

### ಪ್ರಭಾ ಪಿಕ್ಚರ್ ಹೌಸ್, ಮೈಸೂರು

7—1—50ರಿಂದ ಯಶಸ್ವಿಯಾದ 2ನೇ ವಾರ

ಸ್ವಯಂಸಿದ್ಧ

(ಹಿಂದಿ)

ಪಾತ್ರ - ಶಾಂತಾ ಆಪ್ಟೆ - ಮೋತಿಲಾಲ್ - ಬಿಪಿನ್ ಗುಪ್ತ

ಫೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಾಧ್ವಿ

ಸಂಪುಟ ೧೪] ಭಾನುವಾರ ೮-೧-೫೦ [ಸಂಚಿಕೆ ೨೫

# ೨೬ ನೇ ತಾ|| ರಿಪಬ್ಲಿಕ್ ಘೋಷಣೆ ಕಾರ್ಯಕ್ರಮ

## ಪುದುಚೇರಿಗೆ ರೆಡ್ಡಿಯವರ ಪ್ರಯಾಣ

[ಸ್ವಂ ಸು.ಫೋ.] ಬೆಂಗಳೂರು ೬ ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಆರೋಗ್ಯದ ನಿಮಿತ್ತ ನಿನ್ನೆ ಸಂಜೆ ಪುದುಚೇರಿಗೆ ತೆರಳಿದರು ೧೧ನೇ ತಾ|| ವರು ವಾಪಸ್ಸು ಬರುವರು ಆದುವರೆಗೆ ಶ್ರೀ ಹೆಚ್. ಸಿ ದಾಸಪ್ಪನವರೇ ಮುಖ್ಯ ಮಂತ್ರಿಯ ಕೆಲಸಕಾರ್ಯಗಳನ್ನು ನಡೆಸಿಕೊಳ್ಳುವರು

### ರಾಜ್ಯಾಂಗ ಸಭೆ

೨೩ನೇ ತಾ|| ಮಧ್ಯಾಹ್ನ ಶಾಸನ ಸಭೆಯು ಸೇರಿ ಅಧ್ಯಕ್ಷರನ್ನು ಚುನಾಯಿಸಿದ ನಂತರ ಅದೇ ಸಭೆಯು ಸಂಜೆ ೪ ಗಂಟೆಗೆ ರಾಜ್ಯಾಂಗ ಸಭೆಯಾಗಿ ಪರಿವರ್ತಿಸಿಕೊಂಡು ಆನೇ ಅಧಿವೇಶನದ ಕಾರ್ಯಕಲಾಪಗಳನ್ನು ನಡೆಸುವುದು.

### ಕಾಂಗ್ರೆಸ್ ಪಕ್ಷದ ಸಭೆ

ಶಾಸನ ಸಭೆಯ ಕಾಂ|| ಪಕ್ಷದ ಸಭೆಯು ಇದೇ ೧೧ನೇ ತಾ|| ಬೆಳಗ್ಗೆ ೧೧|| ಗಂಟೆಗೆ ಕುಮಾರ ಪಾರ್ಕಿನಲ್ಲಿ ಸೇರುವುದು

ಶ್ರೀ ಕೆ ಸುಬ್ಬರಾಯರು ರಜದಿಂದ ಹಿಂತಿರುಗಿದ ನಂತರ ಎಕ್ಸೈಸ್ ಕಮೀಷನರ್ ಕೆಲಸವನ್ನು ವಹಿಸಿಕೊಳ್ಳುವರು. ಜನ್ನಯಿ.ಸಿ.ಎಸ್ ಪರೀಫ್ ರವರು ಲೇಬರ್ ಕಮೀಷನರಾಗುವರು ಜ|| ಸಫ್‌ದರ್ ಷರೀಫ್‌ರವರು ಒಂದು ತಿಂಗಳ ರಜಾ ತೆಗೆದುಕೊಳ್ಳುವರು.

## ಭಾರತದಲ್ಲಿ ಮಾರ್ಚಿ ೯ಕ್ಕೆ ರೈಲ್ವೆ ಮುಷ್ಕರ

ಬರುವ ಮಾರ್ಚಿ ೯ನೇ ತಾರೀಖಿನಲ್ಲಿ ಒಂದು ದಿನ ಮಾತ್ರ ಭಾರತದ ಎಲ್ಲ ರೈಲ್ವೆ ನೌಕರರೂ ಮುಷ್ಕರ ಹೂಡಬೇಕೆಂದು ರೈಲ್ವೆ ಕೆಲಸಗಾರರ ಅಖಿಲ ಭಾರತ ಫೆಡರೇಷನ್ನಿನ ಸೋಷಲಿಸ್ಟ್ ಸಂಘವು ನಿರ್ಧಾರ ಮಾಡಿದೆ. ರೈಲ್ವೆ ಯುನಿಯನ್ನು ಸಾರ್ವತ್ರಿಕ ನೌಕರರ ಮುಷ್ಕರವನ್ನು ಪ್ರತಿಭಟಿಸುವುದೇ ಈ ಮುಷ್ಕರದ ಉದ್ದೇಶ್ಯವೆಂದು ಹೇಳಲಾಗಿದೆ

—§—

## ಬೆಯಾಂಗರ ಬಂಡವಾಳ ಬರಿದಾಯಿತು

ಫಾರ್ಮೋಸಾ ದ್ವೀಪದಲ್ಲಿ ಹಿಂದೆ ಚೀನ ಸರಕಾರದ ನೃಹವಾಗಿದ್ದ ಭವನದಲ್ಲಿ ಸ್ವಾರ್ ಕೈಷೇಕರು ಏಕಾಂಗಿಯಾಗಿ ಸಿದ್ಧರಾಗಿದ್ದಾರೆ ಫಾರ್ಮೋಸಾ ದ್ವೀಪದ ಕಡೆಗೂ ಸಮೀಪಿಸುತ್ತಿದೆಯೆಂದು ಹೇಳಲಾಗಿದೆ ಅವರ ಬಳಿ ಇರುವ ಸೈನಿಕರ ಮಾನ ಉತ್ಸಾಹವೂ, ಕಾಣಬರದ ಶ್ರೀ ಚಿಕೆಗಳ ಸಾಕಾಗುವಷ್ಟು ಮಾತ್ರ ಅವರ ಬಯಾಂಗರಲ್ಲಿ ಇರುವುದಾಗಿ ಕೇಳಿದೆ

---

### ಸಭಾ ಕಾಂಗ್ರೆಸ್ ಪಕ್ಷದ ಸಭೆ

ನಗರ ಪೌರ ಸಭೆಯ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸುವುದಕ್ಕೂ, ಅಧ್ಯಕ್ಷ ಉಪಾಧ್ಯಕ್ಷ ಮತ್ತು ನಾಯಕರುಗಳನ್ನು ಚುನಾಯಿಸುವುದಕ್ಕೂ ನಾಳೆ ಸಂಜೆ ೬ ಗಂಟೆಗೆ ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಸಭೆ ನಡೆಯುವುದು ಶ್ರೀ ಟಿ ಸಿದ್ದಲಿಂಗಯ್ಯನವರು ದಯಮಾಡಿಸುವರೆಂದು ನಿರೀಕ್ಷಿಸಲಾಗಿದೆ ಒದಗಬೇಕೆಂದು. ಶ್ರೀ ... ಕಾರ್ಯದರ್ಶಿಯವರು ಕೋರಿರುತ್ತಾರೆ

## ಕೇಂದ್ರ ಪಾರ್ಲಿಮೆಂಟಿಗೆ ಯತಿರಾಜುಲು ನಾಯ್ಡು

[ಸ್ವಂ ಸು.ಫೋ.] ಬೆಂಗಳೂರು ೮ ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯವರು ಮೈಸೂರಿನಿಂದ ಕೇಂದ್ರ ಪಾರ್ಲಿಮೆಂಟ್ ಸಭೆಗೆ ಖಾಲಿಯಿದ್ದ ಇನ್ನೊಂದು ಸ್ಥಾನಕ್ಕೆ ಶ್ರೀ|| ಜಿ. ಆರ್. ಯತಿರಾಜುಲು ನಾಯ್ಡುರವರನ್ನು ಆರಿಸಿದ್ದಾರೆ

ಕೋಲಾರದ ಚಿನ್ನದ ಗಣಿ ಮಾಲೀಕರಿಗೂ ಕೆಲಸಗಾರರಿಗೂ ಬೋನಸ್ಸಿನ ವಿಷಯದಲ್ಲಿ ಉಂಟಾಗಿರುವ ವ್ಯವಹಾರದಲ್ಲಿ ಕಂಪೆನಿಯ ಪರವಾಗಿ ಮಾತನಾಡಲು ಬೊಂಬಾಯಿನ ಶ್ರೀ ಕೆ.ಎ. ಮುನ್ಷಿಯವರು ಬೆಂಗಳೂರಿಗೆ ಬಂದಿರುತ್ತಾರೆ

## ಜನಸಂಖ್ಯೆ ತಡೆಯಬೇಕೆಂದು ನೆಹರೂರವರ ಸಲಹೆ

ದೇಶದಲ್ಲಿ ಜನಸಂಖ್ಯೆಯು ಹೆಚ್ಚುತ್ತಿರುವುದನ್ನು ತಡೆಯಬೇಕೆಂದು ಪ್ರಧಾನಿ ನೆಹರೂರವರು ಹೇಳಿರುವರು. ಈಗ ಇರುವ ಜನರಿಗೆ ಸಾಕಾದಷ್ಟು ಆಹಾರವು ದೊರೆಯಬಹುದಾದರೂ ಇನ್ನೂ ಹೆಚ್ಚಾಗಿ ಬೆಳೆಯಲು ಸಾಧ್ಯವಾಗದಿರಬಹುದೆಂದೂ ಆ ದಕಾರಣ ಜನತೆಯು ಸಂಖ್ಯೆ ಹೆಚ್ಚುವುದನ್ನು ತಪ್ಪಿಸುವ ಕಡೆಗೆ ಗಮನ ಕೊಡಬೇಕೆಂದೂ ಅವರು ಹೇಳಿರುವರು

## ರಾಜಾಜಿಯವರಿಗೆ ಹೊಸ ಹುದ್ದೆ

ಗೌರ್ನರ್ ಜನರಲ್ ರಾಜಾಜಿಯವರು ಮುಂದೆ ಕೇಂದ್ರ ಸಂಯೋಜನಾ ಸಮಿತಿಯ ಅಧ್ಯಕ್ಷರಾಗುವರೆಂದು ದೆಹಲಿಯಿಂದ ವಾರ್ತೆ ಬಂದಿದೆ ಡಾ|| ರಾಜೇಂದ್ರ ಪ್ರಸಾದರೇ ಭಾರತದ ಅಧ್ಯಕ್ಷರಾಗುವರೆಂದು ಸಹಾ ತಿಳಿದುಬಂದಿದೆ

## ೧೧ ನೇ ತಾ|| ಹೊಸ ಮಂತ್ರಿಮಂಡಲ

[ಸ್ವಂ ಸು ಫೋ.] ಬೆಂಗಳೂರು ೮ ಶ್ರೀ ಕೆ ಸಿ ರೆಡ್ಡಿಯವರ ೧೧ನೇ ತಾರೀಖು ಬುಧವಾರ ಪುದುಚೇರಿಯಿಂದ ಹಿಂದಿರುಗಿದ ಕೂಡಲೇ ಹೊಸ ಮಂತ್ರಿಗಳ ಹೆಸರನ್ನು ಪ್ರಭುಗಳಿಗೆ ಒಪ್ಪಿಸುವರೆಂದು ವರದಿಯಾಗಿದೆ

ಮಂತ್ರಿಗಳ ಸಂಖ್ಯೆಯನ್ನು ಆರರಿಂದ ಎಂಟಕ್ಕೆ ಏರಿಸಲಾಗುವುದೆಂದು ಹೇಳಲಾಗಿದೆ.

## ಟಿ. ಸಿದ್ದಲಿಂಗಯ್ಯನವರು ಶಾಸನ ಸಭಾಧ್ಯಕ್ಷರು

[ಸ್ವಂ ಸು ಫೋ.] ಬೆಂಗಳೂರು ೮ ಶಾಸನ ಸಭೆಯು ತನ್ನ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವವರೆಗೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಟಿ. ಸಿದ್ದಲಿಂಗಯ್ಯನವರನ್ನು ಶ್ರೀಮನ್ಮಹಾರಾಜರವರು ಶಾಸನ ಸಭಾಧ್ಯಕ್ಷರನ್ನಾಗಿ ನೇಮಿಸಿರುತ್ತಾರೆ

## ಗಂಗೆಗೂ ಕಾವೇರಿಗೂ ಮಧ್ಯೆ ಕಾಲುವೆಯ ಸೂಚನೆ

ಉತ್ತರ ದೇಶದಲ್ಲಿ ಹರಿಯುತ್ತಿರುವ ಗಂಗಾನದಿಯಿಂದ ದಕ್ಷಿಣ ಭಾರತದ ಕಾವೇರಿ ನದಿಗೆ ಒಂದು ಕಾಲುವೆಯೊಂದನ್ನು ತೋಡಿ ಪಾಕಿಸ್ತಾನದ ಎಲ್ಲಾ ಪ್ರದೇಶಗಳಿಗೂ ಸುಲಭವಾಗಿ ನೀರು ಸರಬರಾಜು ಮಾಡುವುದಲ್ಲದೆ ಸಾರಿಗೆಗೂ ಸಾಗಿಸುವುದು ದಕ್ಷಿಣ ಸಂಸ್ಥಾನ ಫಲಭರಿತವೂ ಆಗಿ ಸೂಚಿಸಿದ ಸಲಹೆಯು ... ಅಧ್ಯಕ್ಷರಾಗಿರುವ ಡಾ|| ಸತ್ಯನಾರಾಯಣ ... ಇದೆ. ಅಭಿಪ್ರಾಯವನ್ನು ಬಹಳ ಹಿಂದಿನಿಂದಲೂ ಹೇಳುತ್ತ ಬಂದಿರುವರು

## ಕೆ. ಪಿ. ಸಿ. ಸಿ. ಮುಂದಕ್ಕೆ ಹೋಯಿತು

ಗದಗಿನಲ್ಲಿ ಸೇರಬೇಕೆಂದಿದ್ದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಸಭೆಯು ಒಂದು ವಾರ ಮುಂದಕ್ಕೆ ಹಾಕಲ್ಪಟ್ಟಿದೆ.

## ಪೋಲೀಸ್ ಉಡುಪುಗಳಿಗೆ ಅಶೋಕ ಸ್ತಂಭದ ಚಿಹ್ನೆ

ಇನ್ನು ಮುಂದೆ ಭಾರತದ ಪೋಲೀಸ್ ಮತ್ತು ಮಿಲಿಟೆರಿಯವರ ಯೂನಿಫಾರಂ ಉಡುಪುಗಳ ಮೇಲೆ ಕಿರೀಟದ ಬದಲಾಗಿ ಅಶೋಕ ಸ್ತಂಭದ ಚಿಹ್ನೆಯನ್ನು ಹಾಕಲಾಗುವುದು.

### ಹರಿಕಥೆ

ದೇವರಾಜ ಮೊಹಲ್ಲಾ ... ಟಿ. ಬಾಲಿಗ್ಲಿ ಇರುವ ಭಜನೆ ಪೆಂಕಟ ಸ್ವಾಮಿಯವರ ... ಎ ೬ ಹರಿಕಥೆ ನಡೆಯುತ್ತದೆ

## ಸ್ವತಂತ್ರ ಭಾರತದ ರಿಪಬ್ಲಿಕ್ ಘೋಷಣೆ

ಈ ತಿಂಗಳು ೨೬ನೇ ತಾ|| ಬೆಳಗ್ಗೆ ಗೌರ್ನರ್ ಜನರಲ್ ರಾಜಾಜಿಯವರು ದೆಹಲಿಯ ದರ್ಬಾರ್ ಮಂಟಪದಲ್ಲಿ ಭಾರತ ರಿಪಬ್ಲಿಕ್ಕಿನ ಘೋಷಣೆಯನ್ನು ಮಾಡುವರು ಅನಂತರ ತಮ್ಮ ಸಿಂಹಾಸನದಿಂದ ಇಳಿದು ಅವರು ಮುಂದಿನ ರಾಷ್ಟ್ರಾಧ್ಯಕ್ಷರನ್ನು ಅಲ್ಲಿಗೆ ಕರೆದೊಯ್ದು ಅದರ ಮೇಲೆ ಕುಳ್ಳಿರಿಸುವರು ಭಾರತ ಪ್ರಧಾನ ನ್ಯಾಯಮೂರ್ತಿ ಶ್ರೀ ಕಾನಿಯಾರವರ ಮುಂದೆ ಅಧ್ಯಕ್ಷರು ಪ್ರಮಾಣ ವಚನವನ್ನು ಸ್ವೀಕರಿಸುವರು ಮಾರನೇ ದಿನ ರಾಜಾಜಿಯವರು ಸಕಲ ಮರ್ಯಾದೆಗಳೊಡನೆ ಮದರಾಸಿಗೆ ಪ್ರಯಾಣ ಮಾಡುವರು. ೨೪ ನೇ ತಾ|| ರಾಜ್ಯಾಂಗ ಸಭೆಯು ಅಧ್ಯಕ್ಷರನ್ನು ಚುನಾಯಿಸುವುದು. ಬಾಬು ರಾಜೇಂದ್ರ ಪ್ರಸಾದರೇ ಸರ್ವಾನುಮತದಿಂದ ಅಧ್ಯಕ್ಷರಾಗಲಿರುವರು.

## ವಿಶ್ವ ಸಂಸ್ಥೆಗೆ ಸರ್ ಆರ್ಕಾಟರು ಸೆಕ್ರೆಟರಿ?

ಮಿ|| ಟ್ರಿಗ್ವೆಲೀರವರು ವಿಶ್ವ ಸಂಸ್ಥೆಯ ಕಾರ್ಯದರ್ಶಿ ಸ್ಥಾನದಿಂದ ನಿರ್ವೃತ್ತರಾಗಲಿರುವುದರಿಂದ ಸರ್ ಆರ್ಕಾಟರು ಆಸ್ಥಾನಕ್ಕೆ ಸ್ಪರ್ಧಿಸಿ ಬಹುಮತದಿಂದ ಚುನಾಯಿತರಾಗುವ ಸಂಭವವಿದೆ ಎಂದು ವರದಿಯಾಗಿದೆ

## ಹೊಟ್ಟೆಗಿಲ್ಲದೆ ಮಗುವಿನ ಮಾರಾಟ

ತನ್ನ ಗಂಡನು ಎರಡು ತಿಂಗಳ ಹಿಂದೆ ಸತ್ತು ತನಗೆ ಕಣ್ಣೆದುರಲ್ಲಿ ಮಂಜು ಬಂದು ತಾನು ಒಂದು ವಾರದ ಹಿಂದೆ ಹೆತ್ತ ಮಗುವನ್ನು ಸಾಕಲಾರದೆ ಕಣ್ಣೀರಿಡುತ್ತ ಒಬ್ಬ ಹೆಂಗಸು ಮೊನ್ನೆ ಪಾಟ್ನಾ ನಗರದ ಕಾಲೇಜಿನ ಮುಂದೆ ಮಗುವನ್ನು ಬಹಿರಂಗವಾಗಿ ೫ ರೂ ಗೆ ಮಾರಿದಳೆಂದು ವರದಿಯಾಗಿದೆ

## ಕೊಂಬುಗಳುಳ್ಳ ಮಗು

ಮುಳವಳ್ಳಿಯಲ್ಲಿ ಕಳೆದ ಗುರುವಾರ, ಒಂದು ವಿಚಿತ್ರವಾದ ಮಗು ಜನಿಸಿದ ಸುದ್ದಿ ಬಂದಿದೆ. ಅದರ ತಲೆ ಇನ್ನೊಂದು ದಪ್ಪ ತಲೆಯ ಎರಡು ಬಾಗದಲ್ಲೂ ಎರಡು ಕೊಂಬುಗಳು ಹುಟ್ಟಿದ ಕೆಲವು ನಿಮಿಷಗಳಲ್ಲೇ ಅದು ಮೃತಪಟ್ಟಿತು

### ಕೃಷ್ಣರಾಜೇಂದ್ರ ಆಸ್ಪತ್ರೆ ಸಮಿತಿ ಸದಸ್ಯರು

ರಾಜಧಾನಿಯ ಪೌರ ಸಭಾಧ್ಯಕ್ಷರು (ಅಧ್ಯಕ್ಷರು), ಎಲ್. ಶ್ರೀನಿವಾಸ ಮೂರ್ತಿ, ಕೆ. ಪುಟ್ಟಸ್ವಾಮಿ, ಆಚಾರ್ಯ, ಪ್ರೊ|| ಪ್ರೊ|| ಎ. ಎನ್ ರಂಗಸ್ವಾಮಿಅಯ್ಯಂಗಾರ್ ಮತ್ತು ಪಿ ಸೀತಾರಾಮಯ್ಯನವರು ಕೃಷ್ಣರಾಜೇಂದ್ರ ಆಸ್ಪತ್ರೆಯ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

### ತ್ಯಾಗರಾಜ ಜಯಂತಿ

ಇಂದಿನಿಂದ ೧೫ ನೇ ತಾ|| ಭಾನುವಾರದವರೆಗೆ ಶ್ರೀ ತ್ಯಾಗರಾಜ ಸ್ವಾಮಿಯವರ ಮಹೋತ್ಸವವು ಅಶೋಕಾ ರಸ್ತೆಯ ೪ ನೇ ಕ್ರಾಸಿನಲ್ಲಿರುವ ಶ್ರೀ ಸರಸ್ವತಿ ... ಸಂಗೀತ ವಿದ್ವಾನ್ ... ಪ್ರತಿದಿನ ... ಸಂಗೀತ ... ಸರ್ವರಿಗೂ ಸ್ವಾಗತವು

## ವಾರ ಭವಿಷ್ಯ

ತಾ|| ೮-೧-೫೦ ರಿಂದ ೧೪-೧-೫೦ರ ವರೆಗೆ

ಮೇಷ– ಸಾಹಸಕಾರ್ಯಗಳ ಯೋಚನೆ. ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ಮೇಲ್ಪಟ್ಟವರ ತೃಪ್ತಿ. ವ್ಯಾಪಾರ ಉದ್ಯೋಗಗಳ ದರ್ಜೆಯು ಊರ್ಜಿತ ಮಧ್ಯಮೇನ ಧನ ಲಾಭ ತಾ|| ೮, ೧೩ ಮಹತ್ವದ ಕಾರ್ಯ ನಡೆಸ್ಲಿ ವಾರ

ವೃಷಭ –ಯಶಸ್ವೀ ವಾರವಿದು ಆರೋಗ್ಯ ನೆಟ್ಟಗೆ ವಿಶ್ರಾಂತಿ ಯೋಗುವುದು. ನೌಕರ ವರ್ಗಗಳ ಪರಿಹಾರ, ವ್ಯಾಪಾರ, ವ್ಯವಹಾರಗಳಲ್ಲಿ ಧನಿಕರ ಸಹಕಾರ ತಾ|| ೪, ೧೩ ಹಿರಿಯರ ಅದರಾತಿಥ್ಯ

ಮಿಥುನ ಪ್ರಿಯ ಜನರೊಬ್ಬರ ವಿಯೋಗ ಮಕ್ಕಳು ಆರೋಗ್ಯಗಳು ನಿಮ್ಮ ಮೇಲೆ ಒದು ಶತೃವೆ ಮಾತ್ರ ಸ್ತ್ರೀಯವರಿಗೆ ಕ್ಲೇಶ ನೌಕರಿಯಲ್ಲಿ ಕೆಳಗಿನವರಿಂದ ತ್ರಾಸ, ಅಪಮಾನ ಅಪ್ಪರೇ ವಿರುದ್ಧವಾಗುವರು ತಾ|| ೯, ೧೦ ಹಾನಿ, ಮಿತ್ರರದಿಂದ ಬೀಳುವ ಪ್ರಸಂಗ

ಕರ್ಕ ಇಚ್ಛಿತ ಊರಿಗೆ ಭೇಟಿ ಆರೋಗ್ಯ ನೆಟ್ಟಗೆ ಮಾನ ಸನ್ಮಾನ ಮಹತ್ವ ಕಾರ್ಯಕ್ಕೆ ಅತೀಸಾರದ ವ್ಯಾಪಾರಗಳಲ್ಲಿ ಲಾಭ ಕೋರ್ಟ್ ಕಾರ್ಯ ಯಶ ತಾ|| ೯, ೧೦ ಆಕಸ್ಮಿಕ ಲಾಭದಾಯಕ ಪ್ರವಾಸ

ಸಿಂಹ –ಕಾರ್ಯೋನ್ಮುಖರಾಗಲು ಜೊಲ ಸಿಗುತ್ತೆ ಎದುರಾಳಿಗಳ ಕ್ಲೇಶ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಸುಪ್ರದರ್ಶನೆ ನೌಕರಿಯಲ್ಲಿ ಸಂಕಟ ದೂರ ಸುಖ ಪ್ರವಾಸ ತಾ ೧೦, ೧೩ ಶುಭ ವಾರ್ತೆ ಧನ ಲಾಭ

ಕನ್ಯಾ – ಆತ್ಮಶಕ್ತಿ ಬೆಳೆವಣಿಗೆಗೆ ಗಮನ ಕೊಡಿ ಮನಸ್ಥಿತಿ ಸರಿಯಿರದು. ಚಿಂತೆ, ಕ್ಲೇಶ ಮಕ್ಕಳ ಪರಿಣಾಮ, ಆಫೀಸು ಕಾರ್ಯ ಹೆಚ್ಚುವುದು ತಾ||೧೧, ೧೨, ೧೩ ಧನ ಲಾಭ ಶೀಘ್ರ ಚಿಂತೆಯಿಂದ ಬಿಡುಗಡೆ

ತುಲಾ— ಭೇಟಿಯಾಗುವ ಜನರೇ ನಿಮಗೆ ಕಂಟಕರಾಗುವರು ಹೊಸ ಪ್ರಯತ್ನ ಬೇಡ ಪಳೆಯದನ್ನೇ ಮುಗಿಸಿ ಹಣದ ಖರ್ಚು ಅಧಿಕ ಆರೋಗ್ಯ ನೆಟ್ಟಗಿರದು. ತಾ||೯, ೧೦, ೧೧ ಪ್ರವಾಸದಲ್ಲಿ ಹಾನಿ, ಮಹತ್ವದ ಕಾಗದಪತ್ರಗಳ ಕಳವು

ವೃಶ್ಚಿಕ– ಕನಸು ನನಸಾಗುವ ವಾರವಿದು ಆರೋಗ್ಯ ನೆಟ್ಟಗೆ ಮಾನಸನ್ಮಾನ ಸಾಹಸೀ ಕಾರ್ಯ ಮೇಲಧಿಕಾರಿ ಪ್ರಾಪ್ತಿ ವ್ಯಾಪಾರ. ಉದ್ಯೋಗ, ನೌಕರಿಗಳ ಊರ್ಜಿತಾವಸ್ಥೆ ಪ್ರವಾಸ ಸಾಧ್ಯ ನೂತನ ವಾಹನ ಯೋಗ ತಾ||೧೧, ೧೩ ಸತ್ಕಾರ ಸ್ವಾಗಿ ಭೋಜನ

ಧನು –ಆರೋಗ್ಯ ನೆಟ್ಟಗೆ ವ್ಯಾಪಾರ ಉದ್ಯೋಗಾದಿಗಳಲ್ಲಿ ಪ್ರಗತಿ ಹಣದ ಸ್ಥಿತಿ ಸಮಾಧಾನಕರ. ಕಡೆಗೆ ಉತ್ತಮ ವಾರ ಶಕ್ತಿಯ ಸಮಾಚಾರ ತಾ ೧೧ ೧೩ ಚಿಕಣ, ಇಷ್ಟ ವಾರ್ತೆ

ಮಕರ ಗ್ರಹಮಾನ ಉತ್ತೇಜನಕರವಾಗಿವೆ ಬೀಗ ಅಗತ್ಯ ಆರೋಗ್ಯ ನೆಟ್ಟಗೆ ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಸಹಕಾರ ಲಭ್ಯ ಪ್ರವಾಸದ ಉದ್ದೇಶ ಸಿದ್ಧಿ ಮಹತ್ವ ಜನರೊಡನೆ ಮಾತು. ತಾ|| ೯, ೧೦ ಧನ ಲಾಭ ...

ಕುಂಭ ಆರೋಗ್ಯಕ್ಕೆ ಕಿರ್ಕ ಕ್ಲೇಶ

## ಅಫ್ಘಾನಿಸ್ಥಾನಕ್ಕೂ ಪಾಕೀಸ್ಥಾನಕ್ಕೂ ಸಂಬಂಧ ಹಾಳಾಗಿದೆ

ಪಾಕಿಸ್ಥಾನ ಮತ್ತು ಅಫ್ಘಾನಿಸ್ಥಾನಗಳಿಗೆ ದಿನೇ ದಿನೇ ವೈಮನಸ್ಯವು ಬೆಳೆಯುತ್ತಿದೆ. ... ಕಾಬೂಲ್ ನಗರಗಳ ಸ್ತ್ರೀ ಪುರುಷರ ... ಹೇಳಲಾಗಿದೆ ಅಫ್ಘಾನಿಸ್ಥಾನದ ... ಪಾಕಿಸ್ಥಾನದ ... ಟೆಗೆ ಕರೆಯಲಾಗಿದೆ. ಆದರೂ ಮತ್ತೆ ಅಫ್ಘಾನಿಸ್ಥಾನಕ್ಕೆ ಹೋಗುವ ಸಂಭವವಿಲ್ಲವೆಂದೂ ಹೇಳಲಾಗಿದೆ

## ಬಳ್ಳಿ ಕಾಗದದ ಕಾರ್ಖಾನೆ

ಕೊಚ್ಚಿ ರೇವಿನಿಂದ ಒಂದಿಷ್ಟು ದೂರದ ... ನದಿಯ ದಡದ ಮೇಲೆ ಬಳ್ಳಿ ಕಾಗದದ ಕಾರ್ಖಾನೆಯೊಂದನ್ನು ಹೊಸದಾಗಿ ಸ್ಥಾಪಿಸಲಾಗಿದೆ ಅದರಲ್ಲಿ ವರ್ಷಕ್ಕೆ ೧೦ ಲಕ್ಷ ಪೌಂಡು ನಯವಾದ ಬಳ್ಳಿ ಕಾಗದವೂ ಮತ್ತು ೪೦ ಲಕ್ಷ ಪೌಂಡು ಕೃತಕ ರೇಷ್ಮೆಯ ದಾರವೂ ತಯಾರಾಗುವುವೆಂದು ಹೇಳಲಾಗಿದೆ

## ಬೆರಳಿನಿಂದ ಶಬ್ದಗ್ರಹಣ

ಅಮೇರಿಕದ ಗಣಿತ ಶಾಸ್ತ್ರಜ್ಞರೊಬ್ಬರು ಕೈ ಬೆರಳು ತುದಿಯಿಂದ ಕಿವುಡರು ಶಬ್ದಗ್ರಹಣ ಮಾಡುವ ಹೊಸ ವಿಧಾನವನ್ನು ಕಂಡು ಹಿಡಿದಿರುತ್ತಾರೆ ಮೂಕರು ಮಾತನಾಡುವುದನ್ನು ಕಲಿಯಲೂ ಸಹ ಈ ವಿಧಾನವನ್ನು ಉಪಯೋಗಿಸಲಾಗಿದೆ ಯಂತ್ರವು ಶಬ್ದವನ್ನು ಗ್ರಹಣಮಾಡಿ ಬೆರಳುಗಳಿಗೆ ಗೊತ್ತಾಗುವಂತೆ ಪರಿವರ್ತನೆ ಮಾಡುತ್ತದೆ

## ಗ್ರಂಥಕರ್ತರಿಗೂ ಪತ್ರಿಕೋದ್ಯೋಗಿಗಳಿಗೂ ತೆರಿಗೆ ಇಲ್ಲ

ಬ್ರೆಜಿಲ್ ರಾಜ್ಯದ ಗ್ರಂಥಕರ್ತರು ಮತ್ತು ಪತ್ರಿಕೋದ್ಯೋಗಿಗಳು ವರಮಾನ ತೆರಿಗೆಯನ್ನು ಕೊಡಬೇಕಾಗಿಲ್ಲವೆಂದು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ. ಇದರಿಂದ ಈ ವೃತ್ತಿಯವರಿಗೆ ಒಂದು ದೊಡ್ಡ ಗೌರವವನ್ನು ಮಾಡಿದಂತಾಗಿದೆ

---

ವಾಹನಾಘಾತ ಅಪ್ತರೇ ವಿರುದ್ಧವಾಗುವರು ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಹಾನಿ. ಸಂಸಾರದಲ್ಲಿ ಚಕಮಕಿ. ತಾ||೯, ೧೦ ಅಗ್ನಿಯಿಂದ ಹಾನಿ, ಅನಿಷ್ಟ ವಾರ್ತೆ.

ಮೀನ— ಪರಿಸ್ಥಿತಿ ತಕ್ಕ ತಿಳುವಳಿಕೆಯೇ ಈ ವಾರದ ಮಹತ್ವ. ಗುಪ್ತ ಚಿಂತೆ ಆರೋಗ್ಯ ನೆಟ್ಟಗೆ. ಮನೆ ಕಲಹ ವ್ಯಾಪಾರ, ವ್ಯವಹಾರಗಳಲ್ಲಿ ವಿಶ್ವಾಸ ಘಾತ. ಅಪೇಕ್ಷಾ ಭಂಗ ಸುಸ್ಥ ಆರೋಗ್ಯ. ತಾ ೧೧ ೧೩ ಪ್ರಿಯಜನ ವಿಯೋಗ. ಮನೋವ್ಯಥೆ ಭಗ್ನತೆ

## ಅಲೆಕ್ಸಾಂಡರ್ ಬಂಗ್ಲೆ ಎದುರಿಗೆ ಸತ್ಯಾಗ್ರಹ ಸಂಸಾರದ ಉಪವಾಸ

ಸೋವಿಯಟ್ ಪ್ರತಿನಿಧಿ ಅಲೆಕ್ಸಾಂಡರ ಬಂಗಲೆಯ ಎದುರಿನಲ್ಲಿ ... ಸ್ಮಿತ್ ಎಂಬ ಸ್ಥಳೀಯ ನಿವಾಸಿಯು ... ಆತನ ... ಹೆಂಡತಿ ಮತ್ತು ಇಬ್ಬರು ... ನೊಡನೆಯಿಂದ ಉಪವಾಸ ಮಾಡಲಾರಂಭಿಸಿದ್ದಾರೆ. ಆತನಿಗೆ ಒಂದು ದಿನದ ಆಹಾರವನ್ನು ಕೊಳ್ಳಲು ... ಈ ರೀತಿ ಉಪವಾಸ ಮಾಡುವನು ... ಕಾರಣ, ಆತನು ಕಳೆದ ನಾಲ್ಕು ತಿಂಗಳುಗಳಿಂದಲೂ ಮನೆಯಲ್ಲಿದ್ದ ಪಾತ್ರೆ ಪದಾರ್ಥಗಳೆಲ್ಲವನ್ನೂ ಮಾರಿ ಜೀವನ ಮಾಡಿದನಾಯಿತೆಂದೂ, ಇತರ ಜಾಗಗಳಲ್ಲಿ ನೌಕರಿಗೆ ಸೇರಲು ಪ್ರಯತ್ನಪಟ್ಟರೂ ಸಹ ಅದು ಸಿಗಲಿಲ್ಲವೆಂದೂ ಆತನು ತಿಳಿಸಿರುವನು

## ಫಾರ್ಮೋಸಕ್ಕೆ ಅಮೇರಿಕಾದ ಸಹಾಯವಿಲ್ಲ

ಫಾರ್ಮೋಸಾ ದ್ವೀಪಕ್ಕೆ ಅಮೇರಿಕವು ಸೈನಿಕ ಸಹಾಯವನ್ನು ನೀಡುವುದಿಲ್ಲವೆಂದು, ಅಧ್ಯಕ್ಷ ಟ್ರೂಮನ್ನರು ತಿಳಿಸಿರುತ್ತಾರೆ. ಅಮೇರಿಕ ಸರಕಾರವು ಫಾರ್ಮೋಸಾದಲ್ಲಿರುವ ಚೀಣಾ ಸೈನ್ಯಕ್ಕೆ ಸಲಹೆಗಳನ್ನು ಕೊಡುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿದ್ದಾರೆ

## ಶೀಘ್ರ ಲಿಪಿಗಾರರ ಕೊರತೆ

ನಮ್ಮ ಪ್ರಜಾಸರ್ಕಾರವು ಸಂಸ್ಥಾನದ ಆಫೀಸ್ ಇಲಾಖೆಗಳಲ್ಲಿ ೧-೧-೪೭ ರ ಹಿಂದೆ ಪ್ರಥಮ ದರ್ಜೆಗೆ ವಿಧಿತವಾದ ಅರ್ಹತೆ ಪಡೆದು ದುಡಿಯುತ್ತಿರುವ ಶೀಘ್ರ ಲಿಪಿಗಾರರೆಲ್ಲರನ್ನೂ ಪ್ರಥಮ ದರ್ಜೆಗೆ ಏರಿಸಿ ಅವರ ಕುಂದುಕೊರತೆಗಳನ್ನು ನಿವಾರಿಸಿರುವುದು ಸರಿಯಷ್ಟೆ ಆದರೆ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇಂತಹ ಅರ್ಹತೆಯನ್ನು ಪಡೆದು ಹತ್ತಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶೀಘ್ರ ಲಿಪಿಗಾರರಿಗೆ ಈ ಸೌಲಭ್ಯವನ್ನು ಇದುವರೆವಿಗೂ ಕಲ್ಪಿಸದಿರುವುದು ಅತಿ ವಿಷಾದಕರ. ಆದುದರಿಂದ, ಸುವರ್ಣಾಕ್ಷರಗಳಿಂದ ಕೆತ್ತಲ್ಪಡಲರ್ಹವಾದ ೨೬-೧-೫೦ ರ ವೇಳೆ ಎದರೂ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಹಾಲಿ ಕೆಲಸ ಮಾಡುತ್ತಿರುವ ಮತ್ತು ೧-೧-೪೭ ರಿಂದಲೂ ತಕ್ಕ ಅರ್ಹತೆ ಪಡೆದಿರುವ ಶೀಘ್ರ ಲಿಪಿಗಾರರಿಗೂ ಪ್ರಥಮ ದರ್ಜೆಯ ಸುಯೋಗವನ್ನು ೧-೧-೪೭ ರಿಂದ ಒದಗಿಸಿಕೊಡುವುದು ನಮ್ಮೆಲ್ಲರ ಪ್ರಜಾಸರ್ಕಾರದ ಪವಿತ್ರ ಕರ್ತವ್ಯವೆಂದು ಕೋರಿ ಹಿತೈಷಿಗಳೊಬ್ಬರು ನಮಗೆ ಪತ್ರ ಬರೆದಿರುತ್ತಾರೆ.

## ಕೇಂದ್ರ ಪಾರ್ಲಿಮೆಂಟಿನಲ್ಲಿ ಮಹಿಳೆಯರಿಗೆ ಹೆಚ್ಚು ಸ್ಥಾನ

ಪಂಡಿತ ಜವಾಹರಲಾಲ್ ನೆಹರೂರವರು ಭಾರತ ಪ್ರಾಂತ್ಯ ಸರ್ಕಾರಗಳ ಪ್ರಧಾನಿಗಳಿಗೆ ಪತ್ರಗಳನ್ನು ಬರೆದು ಕೇಂದ್ರ ಪಾರ್ಲಿಮೆಂಟ್ ಸಭೆಗೆ ಪ್ರಾಂತ್ಯಗಳಿಂದ ಹೆಚ್ಚು ಹೆಚ್ಚಾಗಿ ಮಹಿಳಾ ಪ್ರತಿನಿಧಿಗಳು ಬರಲು ಅವಕಾಶ ಕಲ್ಪಿಸಿಕೊಡಬೇಕೆಂದು ಸೂಚಿಸಿರುವುದಾಗಿ ಗೊತ್ತಾಗಿದೆ. ಪ್ರಾಂತೀಯ ಶಾಸನಸಭೆಗಳ ಮಹಿಳಾ ಸದಸ್ಯರು ಕೇಂದ್ರ ಪಾರ್ಲಿಮೆಂಟಿಗೆ ಹೋಗಲು ಅಪೇಕ್ಷಿಸದಲ್ಲಿ ಅದರ ಬಗ್ಗೆ ನಿರ್ಬಂಧ ಪಡಿಸುವ ನಿಯಮಗಳಲ್ಲಿ ವಿನಾಯಿತಿ ಕೊಡಬೇಕೆಂದು ಪಂಡಿತ ನೆಹರೂರವರು ಸೂಚಿಸಿರುವರೆಂದೂ ವರದಿಯಾಗಿದೆ,

## ೭೨ ವರ್ಷದ ನಾಜಿ ಸ್ತ್ರೀಗೆ ಕಠಿಣ ಸಜಾ

ಮಾಜಿ ಜರ್ಮ ಸೈನ್ಯಾಧಿಪತಿಗಳಾದ ಫೀಲ್ಡ್ ಮಾರ್ಷಲ್ ಲೂಡರ್ ಡಾರ್ಫ್‌ರವರ ಪತ್ನಿಯು ಭಾರಿ ತಪ್ಪಿತಸ್ಥಳೆಂದು ಜರ್ಮನಿಯ ನ್ಯಾಯಾಸ್ಥಾನವು ಆಪಾದನೆ ಹೊರಿಸಿ ೨ ವರ್ಷ ಕಠಿಣ ಶಿಕ್ಷೆ ವಿಧಿಸಿದೆ. ಅದಲ್ಲದೆ ಆಕೆಯ ಆಸ್ತಿಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆಜ್ಞೆಯಾಗಿದೆ. ಆಕೆಯು ಶಿಕ್ಷೆ ಕಳೆದನಂತರ, ಜೀವಾವಧಿ ಹಲವು 'ನಿರ್ಬಂಧಗಳಿಗೆ ಒಳಗಾಗಬೇಕಾಗಿದೆ.


ರಾಜಕಮಲ್
ಮೈಸೂರು
6 1—50 ರಿಂದ
ಜನಭರಿತವಾದ ೩ನೇ ವಾರ
ದಿನವಹಿ 3 ಪ್ರದರ್ಶನಗಳು
ಜೀವನ
—.ಭೂಮಿಕೆ —
ಪೈಜಯಂತಿಮಾಲಾ, ಟಿ ಆರ್ ರಾಮಚಂದ್ರ್, ಲಲಿತ-ಪದ್ಮಿನಿ

ನ್ಯೂಸ್ ಪ್ರಿಂಟ್
ಡಬ್ಬಲ್ ಕ್ರೌನ್ ಸೈಜು
ಬಿಕರಿಗೆ ದೊರೆಯುತ್ತದೆ ಕೂಡಲೇ
ವಿಚಾರಿಸಿರಿ.–
"ಸಾಧ್ವಿ" ಆಫೀಸು,
ಮೈಸೂರು

ಗುರುದೇವಾ ಹಾಲ್
(ಬೆಂಗಳೂರು ಜವಳಿ ಅಂಗಡಿ)
ಶಿವರಾಮಪೇಟೆ, ಮೈಸೂರು

ಗಾಯತ್ರೀ ಟಾಕೀಸ್
8-1-50ರಿಂದ 3 ದಿನಗಳು ಮಾತ್ರ
ದಿನವಹಿ 3 ಆಟಗಳು
ದಿ ಕನೆಕ್ಟಿಕಟ್
ಯಾಂಕಿ ಇನ್ ಕಿಂಗ್
ಆರ್ಥರ್ಸ್ ಕೋರ್ಟ್
ಪಾತ್ರ:–ಬಿಂಗ್ ಕ್ರಾಸ್ಬಿ ಮತ್ತು ರಾಂಡಾ ಫ್ಲೆಮಿಂಗ್
–:ಮುಂದಿನ ಬದಲಾವಣೆ:–
ಬ್ಲಾಕ್ ಅಂಡ್ ಬ್ಯಾಗರ್

THE CITY
TUTORIAL COLLEGE
C. T. C. Publications
Ready for Sale 0 8 0 Each
Au veryseful Guide to
B. Sc. & Inter Science
Examinations.
J. Nanumal & Sons.
Mysore & other leading
Book-sellers


Edited, printed and published by A. R. Nagarajan at Sadhvi Press, D. Subbiah Road, Mysore


ಗ್ಯಾರಂಟಿಯಾದ ಮಾಲು
ಶುದ್ಧವಾದ ಮೈಸೂರು ಸಿಲ್ಕಿನಲ್ಲಿ
ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಸೀರೆಗಳು ಬಂದಿವೆ
ಒಂದಾವರ್ತಿ ಭೇಟಿ ಕೊಡಿ

ಫೋ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಸೋಮವಾರ ೯-೧-೫೦ [ಸಂಚಿಕೆ ೧೩೬

# ಸಂಸ್ಥಾನ ಒಕ್ಕೂಟಗಳು ಪ್ರಾಂತ್ಯಗಳಲ್ಲಿ ಐಕ್ಯ

## ಸಹಕಾರ ವ್ಯವಸಾಯ ಕೇಂದ್ರಗಳು

ಬೆಂಗಳೂರು ೯

ಸಂಸ್ಥಾನದಲ್ಲಿ ಜಮೀನು ಇಲ್ಲದ ರೈತರುಗಳು ವ್ಯವಸಾಯದಲ್ಲಿ ತೊಡಗಲೆಂಬ ದೃಷ್ಟಿಯಿಂದ ಸಹಕಾರ ವ್ಯವಸಾಯ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಆಹಾರ ಸಚಿವರಾದ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಗ್ರಾಮಾಭಿವೃದ್ಧಿ ಸಮಿತಿಯವರು ನಿರ್ಧರಿಸಿದ್ದಾರೆ ... ದಿನಗಳು ಬೇಸಿಗೆ ರಜಾದಲ್ಲಿ ಗ್ರಾಮಗಳಲ್ಲಿ ಸಮಾಜ ಸೇವಾ ಕಾರ್ಯವನ್ನು ... ವುದು, ಸಹಕಾರ ತತ್ವದ ಮೇಲೆ ... ನೀರಾವರಿ ಯೋಜನೆ, ರೈತರಿಗೆ ಬೀಜ ಮತ್ತು ಗೊಬ್ಬರದ ಸರಬರಾಜು ಮುಂತಾದ ವಿಷಯಗಳೂ ಸಭೆಯಲ್ಲಿ ಚರ್ಚಿಸಲ್ಪಟ್ಟವು.

## ಬ್ರಿಟನ್ನಿನಿಂದ ಫ್ರಾನ್ಸಿಗೆ ಸಮುದ್ರದಲ್ಲಿ ಸುರಂಗ

ಬ್ರಿಟನ್ ಮತ್ತು ಫ್ರಾನ್ಸಿನ ಮಧ್ಯೆ ಇರುವ ಇಂಗ್ಲಿಷ್ ಕಡಲ್‌ಗಾಲುವೆಯ ತಳದಲ್ಲಿ ಸುರಂಗ ಮಾರ್ಗವನ್ನು ಏರ್ಪಡಿಸಬೇಕೆಂಬ ೧೫೦ ವರ್ಷಗಳ ಹಿಂದಿನ ಯೋಜನೆಯು ಈಗ ಕಾರ್ಯಗತವಾಗಬಹುದೆಂದೂ, ಅಮೇರಿಕವು ಇದಕ್ಕೆ ಸಹಾಯ ಮಾಡಬಹುದೆಂದೂ ಅದಕ್ಕೆ ೬೦ ಕೋಟಿ ರೂಪಾಯಿಗಳು ಖರ್ಚಾಗಿ, ಕೆಲಸ ಪೂರೈಸಲು ... ವರ್ಷಗಳಾಗುವುದೆಂದೂ ಹೇಳಲಾಗಿದೆ

## ಭಾರತದೊಡನೆ ಚೀಣಾ ರಾಜ ತಾಂತ್ರಿಕ ಸಂಬಂಧ

ಭಾರತದೊಡನೆ ಚೀಣಾದ ಕಮ್ಯೂನಿಸ್ಟ್ ಸರಕಾರದವರು ರಾಜ ತಾಂತ್ರಿಕ ಸಂಬಂಧ ಸ್ಥಾಪಿಸಿಟ್ಟುಕೊಳ್ಳಲು ಸಿದ್ಧರಿರುವುದಾಗಿ ವಿದೇಶಾಂಗ ಮಂತ್ರಿ ಚೌ ಎನ್ ಲೈರವರು ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿದ್ದಾರೆ ಸಮತೆ ಮತ್ತು ಉಭಯ ರಾಷ್ಟ್ರಗಳ ಭದ್ರತೆ ಪರಸ್ಪರ ಗೌರವ ಇವುಗಳ ಆಧಾರದ ಮೇಲೆ ರಾಜ ತಾಂತ್ರಿಕ ಸಂಬಂಧವಾಗಬಹುದೆಂದು ಅವರು ತಿಳಿಸಿರುತ್ತಾರೆ

## ಫೆಡರಲ್ ಕೋರ್ಟಿನಲ್ಲಿ ವಾದಿಸಲು ವಕೀಲರು

ಪ್ರಾಂತೀಯ ಸರಕಾರದ ಮೊಕದ್ದಮೆಗಳ ಬಗ್ಗೆ ವಾದಮಾಡಲು ಖಾಸಗಿ ವ್ಯಕ್ತಿಗಳನ್ನು ಆಯಾ ಸರಕಾರದವರು ಕಳುಹಿಸುವುದರ ಬದಲು ಕೇಂದ್ರ ಸರಕಾರದವರು ನೇಮಿಸುವ ವಕೀಲರುಗಳೇ ಫೆಡರಲ್ ಕೋರ್ಟಿನಲ್ಲಿ ವಾದಿಸುವುದು ಉತ್ತಮವೆಂಬ ಸಲಹೆಯನ್ನು ಕೇಂದ್ರ ಸರಕಾರದವರು ಪ್ರಾಂತ ಸರಕಾರಗಳಿಗೆ ಕೊಟ್ಟಿದ್ದಾರೆ

## ಬ್ರಿಟಿಷ್ ರಾಜ ಚಿಹ್ನೆಯನ್ನು ತೆಗೆಯಲಾಯಿತು

ನೂರಾರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ದೆಹಲಿಯ ಶಾಸನಸಭೆ ಭವನದ ಗೋಪುರದ ಗುಮ್ಮಟದ ಮೇಲ್ಭಾಗದಲ್ಲಿ ಶೋಭಿಸುತ್ತಿದ್ದ ಬ್ರಿಟಿಷ್ ರಾಯಲ್ ಕೋಟ್ ಆಫ್ ಆರಂಸ್ ಎಂಬ ಚಿಹ್ನೆಯನ್ನು ತೆಗೆಯಲಾಗಿದೆ ಫೆಡರಲ್ ಸಂಸ್ಥಾನದ ಮೇಲಿದ್ದ ರಾಜ ಚಿಹ್ನೆಯೂ ಹೋಗಿದೆ. ಕೆಲವು ವಾರಗಳ ಹಿಂದೆ ಮೌಂಟುಬ್ಯಾಟನ ಸೀಸದ ಬ್ರಿಟಿಷ್ ... ಭವನದ ಮೇಲ್ಭಾಗದಿಂದ ತೆಗೆಯಲ್ಪಟ್ಟಿತ್ತು.

## ಕೇಂದ್ರ ಹಣಕಾಸಿನ ಸಮಿತಿಯವರ ಆಗಮನ

ಸ್ವಂ ಸು ಫೋ] ಬೆಂಗಳೂರು ೯

ಸರ್ ವಿ ಟಿ. ಕೃಷ್ಣಮಾಚಾರ್ಯರ ಅಧ್ಯಕ್ಷತೆಯಲ್ಲಿ ನೇಮಕವಾಗಿರುವ ಕೇಂದ್ರ ಹಣಕಾಸಿನ ಸಮಿತಿಯವರು ಈ ದಿನ ಬೆಳಗ್ಗೆ ಆಗಮಿಸಿದರು. ಅವರು ೩ ದಿನಗಳು ಇಲ್ಲಿ ಇರುವರು.

### ವಿ. ಪಿ. ಮೆನನ್‌ರವರ ಆಗಮನ

ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ವಿ ಪಿ. ಮೆನನ್‌ರವರು ನಿನ್ನೆ ಸಂಜೆ ಆಗಮಿಸಿದರು ಶ್ರೀಗಳಾದ ಕೆ. ಟಿ. ಭಾಷ್ಯಂ, ಹೆಚ್ ಸಿದ್ದಯ್ಯ, ಆರ್. ಚನ್ನಿಗರಾಮಯ್ಯ ಮತ್ತು ಶ್ರೀಮನ್ ಕಾರ್ಯದರ್ಶಿ ಶ್ರೀ ಕೆ. ಶ್ರೀನಿವಾಸನ್‌ರವರೊಡನೆ ಮಾತುಕತೆ ನಡೆಸಿ ಈ ದಿನ ಬೆಳಗ್ಗೆ ಅವರು ಮದರಾಸಿಗೆ ಪ್ರಯಾಣ ಬೆಳೆಸಿದರು ೧೧ನೇ ತಾ|| ಅವರು ವಾಪಸು ಬರುವರು

### ಪಾರ್ಲಿಮೆಂಟ್ ಚುನಾವಣೆಗೆ ೧೮ ಜನ ಉಮೇದುವಾರರು

ಭಾರತದ ಪಾರ್ಲಿಮೆಂಟಿಗೆ ಮೈಸೂರಿನ ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ನಡೆಯುವ ಚುನಾವಣೆಗೆ ೭ ಜನ ಕಾಂಗ್ರೆಸ್ ಉಮೇದುವಾರರ ಜೊತೆಗೆ ಈ ಕೆಳಗೆ ಕಂಡ ೧೧ ಜನರು ಸ್ವತಂತ್ರವಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.– ಶ್ರೀಗಳಾದ ಮೀರ್ ನೂರ್ ಹುಸೇನ್, ಎಸ್ ಎಂ. ಮುನಿವೆಂಕಟಪ್ಪ, ಜಿ ಎಸ್ ದೇವದಾಸ್, ನೀಲಗಿರಿ ಸಂಜೀವಯ್ಯ. ಕೆ ಆರ್. ಸುಬ್ಬಣ್ಣಾಚಾರ್, ಟಿ ಎಲ್ ಶಾಂತಂ, ಮಹೇಂದ್ರನಾಥ್ ಪಟೇಲ್, ವೈ ಎಸ್. ನಾಗಪ್ಪ, ಅಬ್ದುಲ್ ಗಫಾರ್, ಎ ಜಿ. ಖಲೀಲ್ ಮತ್ತು ವಿ ಎಸ್. ನಾರಾಯಣರಾವ್

## ಕಳೆದ ವರ್ಷ ೧೪೦ ಕೋಟಿ ರೂ. ಆಹಾರದ ಆಮದು

ಕಳೆದ ವರ್ಷ ಭಾರತಕ್ಕೆ ಹೊರಗಿನಿಂದ ೧೪೦ ಕೋಟಿ ರೂ ಬೆಲೆ ಬಾಳುವ ೩೭ ಲಕ್ಷ ಟನ್ ಆಹಾರ ಧಾನ್ಯವನ್ನು ತರಿಸಲಾಯಿತು ಈ ತಿಂಗಳು ೧೮ ರಲ್ಲಿ ದೆಹಲಿಯಲ್ಲಿ ಸೇರುವ ಪ್ರಾಂತ ಮತ್ತು ಸಂಸ್ಥಾನಗಳ ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ಈ ವರ್ಷದಲ್ಲಿ ತರಿಸಬೇಕಾದ ಆಹಾರದ ಪ್ರಮಾಣವನ್ನು ಕುರಿತು ಪರ್ಯಾಲೋಚನೆ ನಡೆಯುವುದು.

## ಪ್ರಾಂತ್ಯಗಳಲ್ಲಿ ಯೂನಿಯನ್ನುಗಳ ಐಕ್ಯ

ಈಗಿರುವ ಮಧ್ಯ ಭಾರತ್, ರಾಜಾಸ್ಥಾನ, ವಿಂಧ್ಯ ಪ್ರದೇಶ, ಭೂಪಾಲ್, ತಿರುವಾಂಕೂರು ಮತ್ತು ಕೊಚ್ಚಿ ಯೂನಿಯನ್ನುಗಳನ್ನು ಪ್ರಾಂತ್ಯಗಳಿಗೆ ಸೇರಿಸಿ, ಭಾರತದಲ್ಲಿ ಕೇವಲ ೯ ಪ್ರಾಂತ್ಯಗಳು ಮಾತ್ರ ಇರುವ ಯೋಜನೆಯೊಂದನ್ನು ಸಂಸ್ಥಾನ ಶಾಖೆಯವರು ತಯಾರಿಸಿರುವರೆಂದೂ, ಅದನ್ನು ಮುಂದಿನ ಮಾರ್ಚಿ ತಿಂಗಳಿನೊಳಗಾಗಿ ಕಾರ್ಯರೂಪಕ್ಕೆ ತರಲಾಗುವುದೆಂದೂ ಹೇಳಲಾಗಿದೆ ಸಂಸ್ಥಾನಗಳ ರಾಜಕೀಯದಲ್ಲಿ ಪಕ್ಷಗಳ ಗೊಂದಲದಿಂದ ಆಡಳಿತದಲ್ಲಿ ದಕ್ಷತೆ ಇಲ್ಲದಿರುವುದು, ಮತ್ತು ಸಣ್ಣಪುಟ್ಟ ಪ್ರದೇಶಗಳನ್ನು ವಿಸರ್ಜಿಸುವ ನೀತಿ-ಇವುಗಳೇ ಈ ಯೋಜನೆಗೆ ಕಾರಣವೆಂದು ಹೇಳಲಾಗಿದೆ ಮೈಸೂರು ಮತ್ತು ಹೈದರಾಬಾದುಗಳ ವಿಚಾರದಲ್ಲಿ ಈಗಾಗಲೇ ಕೈಹಾಕುವುದಿಲ್ಲವೆಂದೂ ತಿಳಿದು ಬಂದಿದೆ

## ಪರೀಕ್ಷಾ ಕೇಂದ್ರಗಳು

ಚನ್ನರಾಯಪಟ್ಟಣ, ಚನ್ನಗಿರಿ, ಚಿಕ್ಕನಾಯ್ಕನಹಳ್ಳಿ, ಅರಕಲಗೂಡು, ಮಾಲೂರು, ಮದ್ದೂರು, ಸಿರಾ, ಸಾಲಿಗ್ರಾಮ, ಗುಬ್ಬಿ, ಮತ್ತು ತರೀಕೆರೆಗಳಲ್ಲಿ ಈ ವರ್ಷದಿಂದ ಎಸ್. ಎಸ್. ಎಲ್. ಸಿ ಯ ನೂತನ ಪರೀಕ್ಷಾ ಕೇಂದ್ರಗಳನ್ನು ಏರ್ಪಡಿಸಲಾಗಿದೆ

ಚಿಟ್ಟದಪುರ, ದೊಡ್ಡಪೇಟೆಕುರ್ಕ,ಬೇಲೂರು, ದೊಡ್ಡಬೆಳವಂಗಲ, ಶಿವಮೊಗ್ಗ ಸರ್ಕಾರಿ ಬಾಲಕಿಯರ ಶಾಲೆ ಮತ್ತು ಚಿಕ್ಕಮಗಳೂರು ಸೆಂಟ್ ಜೋಸೆಫ್ಸ್ ಕಾನ್ವೆಂಟ್ ಬಾಲಕಿಯರ ಹೈಸ್ಕೂಲು ಈ ಸ್ಥಳಗಳಲ್ಲಿ ಮಿಡಲ್ ಸ್ಕೂಲ್ ಮತ್ತು ಅಪ್ಪರ್ ಪ್ರೈಮರಿ ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗುವುದು ಎಂದು ವಿದ್ಯಾ ಇಲಾಖೆ ಪ್ರಕಟಣೆ ತಿಳಿಸಿರುತ್ತದೆ

### ಚ ಚಾ ೯ ಸ್ಪರ್ಧೆ

ಮೈಸೂರು ಫಸ್ಟ್ ಗ್ರೇಡ್ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಇದೇ ೧೫ನೇ ತಾ|| ಬಿ ಎಂ. ಶ್ರೀಕಂಠಯ್ಯ ಸ್ಮಾರಕ ಅಂತರ ಕಾಲೇಜುಗಳ ಚರ್ಚಾ ಸ್ಪರ್ಧೆಯು ನಡೆಯುವುದು ೪ ರೂ. ಪ್ರವೇಶ ಧನದೊಡನೆ ಇದೇ ೧೦ನೇ ತಾ|| ನೊಳಗಾಗಿ ಅರ್ಜಿಯನ್ನು ಕಳುಹಿಸಬೇಕೆಂದು ತಿಳಿಸಲಾಗಿದೆ

## ಡಾ|| ಲೋಹಿಯಾರವರ ದಸ್ತಗಿರಿ

ಭಾರತದ ಸಮತಾವಾದಿ ಪಕ್ಷದ ನಾಯಕರಾದ ಡಾ|| ಲೋಹಿಯಾರವರನ್ನು ನಿನ್ನೆ ದಿನ ರೀವಾ ಸಂಸ್ಥಾನದಲ್ಲಿ ದಸ್ತಗಿರಿ ಮಾಡಿ ಗೊತ್ತಿಲ್ಲದ ಪ್ರದೇಶಕ್ಕೆ ಕರೆದುಕೊಂಡುಹೋಗಲಾಗಿದೆ ಯೆಂದು ವರದಿಯಾಗಿದೆ

### ಡೈರೆಕ್ಟರುಗಳ ಚುನಾವಣೆ

ರಾಜಧಾನಿಯ ಹೌಸಿಂಗ್ ಸೊಸೈಟಿ ಡೈರೆಕ್ಟರುಗಳ ಚುನಾವಣೆಯು ನೆನ್ನೆ ನಡೆದು, ಈ ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ:– ಶ್ರೀಗಳಾದ ಎ ಕೃಷ್ಣಮೂರ್ತಿ ರಾವ್,ಬಿ ಆರ್ ನಾಯಿಡು, ಎ, ಲಿಂಗಪ್ಪಯ್ಯ, ಡಿ ಬಿ ಕೃಷ್ಣಪ್ಪ, ಟಿ. ನಾರಾಯಣ, ಜಿ ಜನಾರ್ದನ ನಾಯಿಡು, ಎಂ. ಆರ್.ಸಿ. ಬಸಪ್ಪ, ಜೆ.ವಿ ದೇಶಿಕಾಚಾರ್, ಟಿ ಸಿ. ಗೌಡ, ಬಿ ಮಹದೇವಪ್ಪ, ಮೇಲೂ ಸಿಂಗ್, ಗೋಪಾಲ ಸಿಂಗ್, ಬಿ. ಎಸ್. ಸುಬ್ಬರಾವ್, ಎ ವಿ ಶ್ರೀನಿವಾಸಮೂರ್ತಿ ಮತ್ತು ಎಸ್. ಚನ್ನಸ್ವಾಮಿ ಶೆಟ್ಟಿ.

### ಪೌರಸಭಾಧ್ಯಕ್ಷಸ್ಥಾನಕ್ಕೆ ಪ್ರಜಾ ಸಂಘದ ಉಮೇದುವಾರರು

ಮೈಸೂರು ಪೌರಸಭಾಧ್ಯಕ್ಷ ಸ್ಥಾನಕ್ಕೆ ಶ್ರೀ ಬಿ ಕೆ. ರಾಮಕೃಷ್ಣಯ್ಯನವರನ್ನೂ, ಉಪಾಧ್ಯಕ್ಷಸ್ಥಾನಕ್ಕೆ ಡಾ|| ಎಸ್. ದೇವಡ್‌ರವರನ್ನೂ ಪ್ರಜಾ ಸಂಘದ ಪರವಾಗಿ ಸಲ್ಲಿಸಬೇಕೆಂದು ನಿನ್ನೆ ನಡೆದ ಸಂಘದ ಸಭೆಯಲ್ಲಿ ತೀರ್ಮಾನಿಸಲಾಯಿತೆಂದು ತಿಳಿದುಬಂದಿದೆ

## ಷೋಲಾಪುರದ ಗಿರಣಿ ಸರಕಾರದ ವಶಕ್ಕೆ

ಷೋಲಾಪುರದ ಸ್ಪಿನಿಂಗ್ ಮತ್ತು ವೀವಿಂಗ್ ಮಿಲ್ಸ್ ಎಂಬ ಹತ್ತಿ ಗಿರಣಿಯನ್ನು ಬೊಂಬಾಯಿನ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡಿರುವರು. ಈ ಮಿಲ್ಲಿನಲ್ಲಿ ೧೪ ಸಾವಿರ ಜನರು ಕೆಲಸಮಾಡುತ್ತಿದರು ಭಾರತದಲ್ಲೆಲ್ಲಾ ಇದೇ ಮೊದಲನೆಯದಾಗಿ ಗಿರಣಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲ್ಪಟ್ಟಿರುವುದೆಂದು ಹೇಳಲಾಗಿದೆ

## ವೈದ್ಯರ ಸರ್ಟಿಫಿಕೇಟಿನ ಮೋಸ ಸಜಾ ತಪ್ಪಿತು

ಕಾಳಸಂತೆಯಲ್ಲಿ ಸಿಮೆಂಟನ್ನು ಮಾರುತ್ತಿದ್ದರೆಂಬ ಆಪಾದನೆಯ ಮೇಲೆ ವೆಂಕಟೇಶ ಶುದ್ಧ ಮತ್ತು ಕೃಷ್ಣಶೆಟ್ಟರವರುಗಳನ್ನು ಮಂಗಳೂರಿನ ಕೋರ್ಟಿನಲ್ಲಿ ವಿಚಾರಣೆಗೆ ಒಳಪಡಿಸಿದಾಗ, ಜೈಲುವಾಸ ಮಾಡಲು ತನ್ನ ಆರೋಗ್ಯ ಸರಿಯಿಲ್ಲವೆಂದು ವೈದ್ಯರ ಸರ್ಟಿಫಿಕೇಟನ್ನು ಮೊದಲನೆಯ ಅಪರಾಧಿಯು ಹಾಜರ್ಪಡಿಸಿದ ಮೇಲೆ ಆತನಿಗೆ ೫೦೦೦ ರೂ. ದಂಡ, ತಪ್ಪಿದಲ್ಲಿ ೬ ತಿಂಗಳ ಸಜಾ ಶಿಕ್ಷೆಯನ್ನು ವಿಧಿಸಲಾಯಿತು ಮತ್ತೊಬ್ಬನಿಗೆ ೭ ತಿಂಗಳು ಸಜಾ ಶಿಕ್ಷೆಯನ್ನು ಕೊಡಲಾಯಿತು.

## ಕಾಶ್ಮೀರದ ರಾಜಮನೆತನದ ವಸ್ತುಗಳ ಹರಾಜು

ಕಾಶ್ಮೀರದ ರಾಣಿವಾಸದವರಿಗೆ ಸೇರಿದ ಅಮೂಲ್ಯ ಆಭರಣಗಳು, ಬಟ್ಟೆಗಳು, ಮತ್ತು ಇತರ ವಸ್ತುಗಳನ್ನು ದೊರೆಗಳ ಅಪ್ಪಣೆ ಮೇರೆ ಬಹಿರಂಗವಾಗಿ ಹರಾಜು ಮಾಡಲಾಗುತ್ತಿದೆ

## ಧಾನ್ಯ ರಕ್ಷಣೆಗಾಗಿ ಇಲಿ, ಹಂದಿ, ಕೋತಿಗಳ ನಾಶ

ಅಧಿಕ ಆಹಾರದ ಬೆಳೆಯ ಅಂಗವಾಗಿ ಹಲವು ಪ್ರಾಂತೀಯ ಸರಕಾರಗಳು ಇಲಿ, ಗುಳ್ಳೇನರಿ, ಕೋತಿ, ಕಾಡು ಹಂದಿ ಮುಂತಾದ ಪ್ರಾಣಿಗಳನ್ನು ನಾಶಪಡಿಸುವ ಕಾರ್ಯಕ್ರಮಗಳನ್ನು ಕೈಗೆದುಕೊಂಡಿವೆ ಪಂಜಾಬು ಸರಕಾರದವರ ಈಗಾಗಲೇ ೭೫ ಸಾವಿರ ರೂ ಗಳನ್ನು ಇದಕ್ಕಾಗಿ ಮಂಜೂರು ಮಾಡಿ ೪೦೦ ಕೋತಿಗಳನ್ನು ಹಿಡಿಸಿದ್ದಾರೆ ಮಧ್ಯ ಪ್ರಾಂತದಲ್ಲಿ ಕಾಡು ಹಂದಿಗಳನ್ನು ಸ್ಥಳೀಯ ಜೋಂ ಗಾಡ್ ಗಳ ಸಹಾಯದಿಂದ ನಾಶಪಡಿಸಲಾಗುತ್ತಿದೆ

## ಉಳುವುದಕ್ಕೆ ಟ್ರ್ಯಾಕ್ಟರಿಗಿಂತ ಆನೆ ಉತ್ತಮ

ಬೇಸಾಯಕ್ಕೆ ಟ್ರ್ಯಾಕ್ಟರ್ ಮುಂತಾದ ಯಂತ್ರೀಯ ಕರಣಗಳಿಗಿಂತಲೂ ಆನೆಗಳ ಸಹಾಯವನ್ನು ಪಡೆದುಕೊಳ್ಳುವುದು ಉತ್ತಮವೆಂದು ಬಿಹಾರಿನ ವ್ಯವಸಾಯಾಧಿಕಾರಿಗಳೊಬ್ಬರು ಹೇಳಿರುತ್ತಾರೆ ದಕ್ಷಿಣ ಆಫ್ರಿಕಾದಲ್ಲಿ ಆನೆಗಳ ಸಹಾಯವನ್ನು ಈ ಕಾರ್ಯಕ್ಕಾಗಿ ತೆಗೆದುಕೊಳ್ಳಲಾಗುತ್ತಿದೆಯೆಂದು ಅವರು ತಿಳಿಸಿರುತ್ತಾರೆ ಟ್ರ್ಯಾಕ್ಟರ್ ನಡೆಸಲು ತಕ್ಕಷ್ಟು ಪೆಟ್ರೋಲು ಮತ್ತು ನುರಿತ ಜನ ಅಭಾವವಿರುವುದರಿಂದ ಆನೆಗಳ ಉಪಯೋಗವು ಉತ್ತಮವೆಂದು ಅವರು ಅಭಿಪ್ರಾಯಪಟ್ಟಿರುವರು

## ಶೇಕಡ ೩೦ ಜನರಿಗೆ ಸಂಜೆಗಣ್ಣು

ತಿನ್ನವೆಲ್ಲಿ ಜಿಲ್ಲೆಯ [illegible] ನಲ್ಲಿ ಶೇಕಡ ೩೦ ರಷ್ಟು ಜನರಿಗೆ ರಾತ್ರಿ ಕಾಲದಲ್ಲಿ ಕಣ್ಣು ಕಾಣಿಸದೆ ತೊಂದರೆ ಪಡುತ್ತಿರುವರೆಂದೂ, ಇದಕ್ಕೆ ಹಾಲು ಮತ್ತು ಇತರ ಪುಷ್ಟಿಕರವಾದ ಆಹಾರ ಇಲ್ಲದಿರುವುದೇ ಕಾರಣವೆಂದೂ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ [illegible]ನ್ನು ಹೆಚ್ಚಾಗಿ ತಿನ್ನಬೇಕೆಂದು ಅವರಿಗೆ ತಿಳಿಸಲಾಗಿದೆ

Edited, printed and published by A R Nagarajan at Sadhvi Press, D Subbiah Road, Mysore

## ಕಮ್ಯೂನಿಸಂ ತಡೆಗಟ್ಟಲು ಅಮೆರಿಕದ ಸರ್ವ ಸಹಾಯ

ಅಮೆರಿಕದ ಅಧಿಕಾರಿಗಳು ಮೊನ್ನೆ ಸಮಾವೇಶಗೊಂಡು ದೂರ ಪ್ರಾಚ್ಯ ರಾಷ್ಟ್ರಗಳ ಬಗ್ಗೆ ತನ್ನ ನೀತಿಯನ್ನು ಕುರಿತು ಚರ್ಚೆ ನಡೆಸಿದರೆಂದು ವರದಿಯಾಗಿದೆ ಈ ಮಾತುಕತೆಗಳ ಪ್ರಕಾರ ಅಮೆರಿಕವು ಚೀಣಾದ ಪ್ರಜೆಗಳೊಡನೆ ತನ್ನ ನಿಕಟ ಸಂಬಂಧವನ್ನು ಇಟ್ಟುಕೊಂಡಿರುವುದೆಂದೂ, ಅಗತ್ಯ ಬಿದ್ದರೆ ಚೀಣಾದಲ್ಲಿ ಕಮ್ಯೂನಿಸ್ಟ್ ಆಡಳಿತವನ್ನು ಗೌರವಿಸಬೇಕಾಗುವುದೆಂದೂ ಹೇಳಲಾಗಿದೆ ಇತರ ಏಷ್ಯಾ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಚಟುವಟಿಕೆಗಳನ್ನು ತಡೆಗಟ್ಟಲು ಅಲ್ಲಿನ ರಾಷ್ಟ್ರೀಯ ಪಕ್ಷಗಳವರಿಗೆ ಧನ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸುವುದೇ ಅಮೆರಿಕದ ನೀತಿಯೆಂದೂ ಹೇಳಲಾಗಿದೆ

## ಬರ್ಮಾ ನೌಕರರ ಸಾಮೂಹಿಕ ಪ್ರಮಾಣ ವಚನ

ಬರ್ಮಾ ಸರಕಾರದ ನೌಕರಿಯಲ್ಲಿ ಮತ್ತು ಸರಕಾರಕ್ಕೆ ಸಂಬಂಧಿಸಿದ ಸಂಸ್ಥೆಗಳಲ್ಲಿ ಇರುವ ಉದ್ಯೋಗಸ್ಥರು ಮೊನ್ನೆ ದಿನ ಅಲ್ಲಿ ನಡೆದ ಸ್ವಾತಂತ್ರ್ಯದ ವಾರ್ಷಿಕೋತ್ಸವ ಸಮಾರಂಭದಲ್ಲಿ ಬರ್ಮಾದ ರಾಷ್ಟ್ರಾಧ್ಯಕ್ಷರ ಭವನದ ಎದುರಿಗೆ ಸಾಮೂಹಿಕ ಪ್ರಮಾಣ ವಚನವನ್ನು ಸ್ವೀಕರಿಸಿ ದೇಶಕ್ಕೆ ತಾವು ನಿಷ್ಠರಾಗಿರುವುದಾಗಿ ವಾಗ್ದಾನ ಮಾಡಿದರು

## ಅಸ್ಸಾಂ ಪ್ರಾಂತ್ಯದಲ್ಲಿ ವಿಶೇಷ ಶಾಸನ

ಅಸ್ಸಾಂ ಪ್ರಾಂತದಿಂದ ಅನುಚಿತ ವ್ಯಕ್ತಿಗಳನ್ನು ಹೊರದೂಡುವ ಬಗ್ಗೆ ಒಂದು ವಿಶೇಷ ಶಾಸನವನ್ನು ಹೊರಡಿಸಲಾಗಿದೆ ಇದಕ್ಕೆ ಗವರ್ನರ್ ಜನರಲ್ಲರು ಸಮ್ಮತಿ ಇತ್ತಿರುವರು

THE CITY TUTORIAL COLLEGE
C T C Publications
Ready for Sale 0 8 0 Each
A very useful Guide to B Sc & Inter Science Examinations
J Nanumal & Sons
Mysore & other leading Book-sellers

## ಹೈದ್ರಾಬಾದಿನಲ್ಲಿ ಶುಕ್ರವಾರ ಬದಲು ಭಾನುವಾರ ರಜಾ

ಹೈದರಾಬಾದಿನಲ್ಲಿ ಇದುವರೆಗೆ ಇದ್ದ ಶುಕ್ರವಾರದ ದಿನದ ರಜವನ್ನು ಇನ್ನು ಮುಂದೆ ಭಾನುವಾರ ಕೊಡಲಾಗುವುದು ಜನವರಿ ೨೬ನೇ ತಾರೀಖಿನಿಂದ ಇದು ಜಾರಿಗೆ ಬರುತ್ತದೆ ಅಲ್ಲಿನ ಫಸಲಿ ಶಕೆಯ ಬದಲು ಇಂಗ್ಲೀಷ್ ಕ್ಯಾಲೆಂಡರನ್ನೇ ಉಪಯೋಗಿಸಲಾಗುವುದು

## ಗ್ರಾಮಾಧಿಕಾರಿಗಳಿಗೆ ಪಂಚಾಯಿತಿ ಸದಸ್ಯತನವಿಲ್ಲ

ಪಂಚಾಯಿತಿಗಳಲ್ಲಿ ಗ್ರಾಮಾಧಿಕಾರಿಗಳು ಸದಸ್ಯರಾಗಿರಕೂಡದೆಂದು ಮದರಾಸ್ ಶಾಸನ ಸಭೆಯಲ್ಲಿ ಗ್ರಾಮ ಪಂಚಾಯಿತಿ ಮಸೂದೆಯು ಚರ್ಚೆಗೆ ಬಂದಾಗ ತೀರ್ಮಾನಿಸಲಾಗಿದೆ

## ಹುಲಿ ಮಾಡಿದ ಗಾಯದಿಂದ ಮರಣ

ಚಿಕ್ಕಮಗಳೂರು ೫

ಕಡೂರಿನ ಜಮೀನುದಾರರಾದ ಶ್ರೀ ಮರಿಕೃಷ್ಣಯ್ಯನವರ ಮಗ ಲಕ್ಷ್ಮಯ್ಯನು ದನಕರುಗಳನ್ನು ಮೇಯಿಸುತ್ತಿದ್ದಾಗ ಹುಲಿಯೊಂದು ಅವನ ಮೇಲೆ ಬಿದ್ದು ಗಾಯಪಡಿಸಿತು ಆತನನ್ನು ಚಿಕಿತ್ಸೆಗಾಗಿ ಕರೆತರುತ್ತಿದ್ದಾಗ ದಾರಿಯಲ್ಲಿ ಮೃತಪಟ್ಟನು ಹುಲಿಯನ್ನು ಉಪಾಯಾಂತರದಿಂದ ಹಿಡಿಯಲಾಗಿತ್ತು ಆದರೆ ಅದು ತಪ್ಪಿಸಿಕೊಂಡಿತೆಂದು ಹೇಳಲಾಗಿದೆ

## ಭೂಕಂಪಕ್ಕೆ ಜಗ್ಗದ ಗೃಹಗಳ ನಿರ್ಮಾಣ

ಭೂಕಂಪ, ಬೆಂಕಿ, ಮತ್ತು ಗಾಳಿಯ ಹೊಡೆತವನ್ನು ತಡೆಯಬಲ್ಲ ಮತ್ತು ಕ್ರಿಮಿಗಳಿಗೆ ಅವಕಾಶವೀಯದ ಹೊಸ ಮಾದರಿಯ ಗೃಹವೊಂದನ್ನು ಬೊಂಬಾಯಿನ ವ್ಯಾಪಾರ ಸಂಸ್ಥೆಯೊಂದು ಕಟ್ಟಿರುವುದು ಇಂತಹ ಗೃಹವು ಪ್ರಪಂಚದಲ್ಲೇ ಹೊಸತೆಂದು ಹೇಳಲಾಗಿದೆ ಇದನ್ನು ಕಟ್ಟಲು ೧೪ ದಿನಗಳು ಮಾತ್ರ ಹಿಡಿದವು ಮನೆಯ ಅಡಿಪಾಯವು ಕೇವಲ ಒಂದು ಅಡಿ ಇದೆ ಅದನ್ನು ಕಟ್ಟಲು ಐದು ಸಾವಿರ ರೂ ಮಾತ್ರ ಖರ್ಚಾಗಿದೆ ಆಕ್ಸಿಕ್ಲೋರೈಡ್ ಎಂಬ ರಸಾಯನದಿಂದ ಈ ರೀತಿ ಕಟ್ಟಲಾಯಿತೆಂದು ಹೇಳಲಾಗಿದೆ

### ಭತ್ತವನ್ನು ಮಿಲ್ ಮಾಡಿಸಲು ಅನುಮತಿ ಕೊಡಬೇಕು

ಭತ್ತವನ್ನು ಮಿಲ್ ಮಾಡಿಸಕೂಡದೆಂದು ಸರ್ಕಾರದವರು ಇತ್ತೀಚೆಗೆ ಮಾಡಿರುವ ಆಜ್ಞೆಯಿಂದ ಕೂಲಿ ರೈತರಿಗೆ ತುಂಬಾ ಕಷ್ಟವಾಗಿರುತ್ತದೆ ಒಕ್ಕಣೆ ಮಾಡುವ ಮತ್ತು ಕೂಲಿ ರೈತರುಗಳಿಗೆ ದಿನವೆಲ್ಲಾ ಕೆಲಸಮಾಡಿ, ರಾತ್ರಿ ಭತ್ತ ಕುಟ್ಟಿಕೊಂಡು ಊಟ ಮಾಡಬೇಕಾಗಿದೆ ಆದುದರಿಂದ ಸಂಸಾರಕ್ಕೆ ಒಂದು ತಿಂಗಳಿಗೆ ಬೇಕಾಗುವಷ್ಟು ಭತ್ತವನ್ನು ಮಿಲ್ಲು ಮಾಡಿಸಲು ಅನುಮತಿ ಕೊಡಬೇಕೆಂದು ನೊಂದವರೊಬ್ಬರು ಪತ್ರ ಬರೆದು ತಿಳಿಸುತ್ತಾರೆ




ಗುರುದೇವಾ ಹಾಲ್
(ಬೆಂಗಳೂರು ಜವಳಿ ಅಂಗಡಿ)
ಶಿವರಾಂಪೇಟೆ, ಮೈಸೂರು

ಗ್ಯಾರಂಟಿಯಾದ ನೂಲು ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ತಯಾರಾದ ಬೆಂಗಳೂರು ಧರ್ಮಾವರಂ [illegible] ಸೀರೆಗಳು ಬಂದಿವೆ ಒಂದಾವರ್ತಿ ಭೇಟಿ ಕೊಡಿ

A BOON TO PADDY & RICE TRANSPORTERS

Your problem of transportation of goods is solved Under our skilled and well-organised Daily running Lorry Service between Mysore and Bangalore we undertake to transport all your goods, Paddy and Rice

Bangalore Transit Company
Clearing & Forwarding Agents,
11 Ramakrishna Buildings
Sri Narasimharaja Road,
Bangalore City

Mysore office —
Managing Agents -
Thirthe and Co,
Narayana Sastry Road
Mysore

ರಸಿಕರಿಗೆ ಅಚ್ಚುಮೆಚ್ಚಾದುವು
ಮೈಸೂರು ರೇಷ್ಮೆ ವಸ್ತ್ರಗಳು
ಮಿತವ್ಯಯ-ಹಾಗೂ, ಸುರುಚಿ.
ಮೈಸೂರು ರೇಷ್ಮೆ — ಸಮಾಜದಲ್ಲಿ ಮೇಲ್ಮೆಯ ಉಡುಪು
[illegible]ಯಲ್ಲಿ ಅನುಪಮವಾದುದು
ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನಸೆಳೆವ ಮಾದರಿಗಳು
ಇಂದಿನ ಅಂದದ ರಂಗುಗಳು.
ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,
ಮೈಸೂರು

ಶೋ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೪] ಮಂಗಳವಾರ ೧೦-೧-೫೦ [ಸಂಚಿಕೆ ೧೪೭

# ಜೈಪ್ರಕಾಶ್ ರವರ ಉಪವಾಸ ಮುಕ್ತಾಯ

## ಎಸ್. ಲಿಂಗಣ್ಣ ಮತ್ತು ಎ. ಕೃಷ್ಣಮೂರ್ತಿ ರಾವ್

### ಪುರಸಭಾಧ್ಯಕ್ಷ ಮತ್ತು ಉಪಾಧ್ಯಕ್ಷಗೆ ಕಾಂಗ್ರೆಸ್ ಉಮೇದುವಾರರು

ಮೈಸೂರು ೧೦

ನಿನ್ನೆ ಸಂಜೆ ಪೌರಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಸೇರಿ, ಮೈಸೂರು ಪೌರಸಭಾಧ್ಯಕ್ಷ ಸ್ಥಾನಕ್ಕೆ ಶ್ರೀ ಎಸ್. ಲಿಂಗಣ್ಣನವರನ್ನು, ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಎ. ಕೃಷ್ಣಮೂರ್ತಿರಾಯರನ್ನು ನಿಲ್ಲಿಸುವಂತೆ ತೀರ್ಮಾನ ಮಾಡಲಾಯಿತು.

ಶ್ರೀ ಪಿ. ಸೀತಾರಾಮಯ್ಯನವರು ಪಕ್ಷದ ನಾಯಕರಾಗಿಯೂ ಶ್ರೀ ಟಿ. ನರಸಿಂಹಾಚಾರ್ಯರು ಉಪ ನಾಯಕರಾಗಿಯೂ, ಶ್ರೀ ಎ. ಕೃಷ್ಣಮೂರ್ತಿರಾಯರು ಕಾರ್ಯದರ್ಶಿಗಳಾಗಿಯೂ, ಶ್ರೀ ಚೌಡಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು.

### ಹರಿಕಥೆ

ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿ ಶ್ರೀರಾಮ ಮಂದಿರದಲ್ಲಿ ಈ ರಾತ್ರಿ ೯ ಘಂಟೆಗೆ ಶ್ರೀ ಎ. ಎಸ್. ಹರಿನಾರಾಯಣದಾಸರಿಂದ "ಗಜಾನನ ವಿಜಯ" ಎಂಬ ಹರಿಕಥೆ ನಡೆಯುವುದು.

## ರಿಪಬ್ಲಿಕ್ ಅಧ್ಯಕ್ಷರಿಗೆ ನೈಜಾಮರ ರಥದ ಅರ್ಪಣೆ

ಭಾರಿ ಮೆರವಣಿಗೆಗಳಿಗೆ ಮಾತ್ರ ಹೈದರಾಬಾದಿನಲ್ಲಿ ಉಪಯೋಗಿಸಲಾಗುತ್ತಿದ್ದ ನೈಜಾಮರ ರಾಜಮನೆತನಕ್ಕೆ ಸೇರಿದ ೬ ಕುದುರೆಗಳುಳ್ಳ ಸುಂದರವಾದ ರಥವ ಇದೇ ೨೬ನೇ ತಾರೀಖು, ಹೈದರಾಬಾದಿನ ನೈಜಾಮರು ಭಾರತದ ರಿಪಬ್ಲಿಕ್ಕಿನ ಅಧ್ಯಕ್ಷರಿಗೆ ತಮ್ಮ ಕಾಣಿಕೆಯಾಗಿ ಅರ್ಪಿಸುವರು. ಅದನ್ನು ನಿಜಾಮರ ಪರವಾಗಿ ಅವರ ಮಕ್ಕಳೇ ದೆಹಲಿಗೆ ಒಪ್ಪಿಸಲಿರುವರು. ದೆಹಲಿ ರಾಜಮೆರವಣಿಗೆಯಲ್ಲಿ ಮೊದಲಾಗಿ ಈ ರಥವನ್ನು ಉಪಯೋಗಿಸಬೇಕೆಂದು ನಿಜಾಮರು ಕೋರಿದ್ದಾರೆ.

## ಅಬಿಸೀನಿಯಕ್ಕೆ ಭಾರತದ ಬಂಡವಾಳ

ಅಬಿಸೀನಿಯದ ರಾಜ್ಯ ಅಭಿವೃದ್ಧಿಗಾಗಿ ಅಲ್ಲಿನ ಸರಕಾರದವರು ಭಾರತ ಸರ್ಕಾರದವರಿಗೆ ಪತ್ರ ಬರೆದು, ಭಾರತದ ಬಂಡವಾಳ ಮತ್ತು ಪ್ರವೀಣರ ಸಹಾಯವನ್ನು ಸ್ವಾಗತಿಸುವುದಾಗಿ ತಿಳಿಸಿರುತ್ತಾರೆ.

## ಹೊಸ ನೋಟು ಮತ್ತು ಹೊಸ ರೂಪಾಯಿ ನಾಣ್ಯ

ಈ ತಿಂಗಳು ೨೬ನೇ ತಾ॥ ನಿಂದ ಒಂದು ರೂಪಾಯಿನ ಹೊಸ ನೋಟುಗಳೂ ನಾಣ್ಯಗಳೂ ಚಲಾವಣೆಗೆ ಬರಲಿವೆ. ಆ ನೋಟ್ ಬ್ರಿಟಿಷ್ ಚಕ್ರವರ್ತಿಯ ತಲೆಯ ಬದಲು ಅಶೋಕ ಸ್ತಂಭವಿರುವುದು. ನೋಟುಗಳ ಮೇಲೆ ಭಾರತ ಸರಕಾರದ ಹಣಕಾಸಿನ ಕಾರ್ಯದರ್ಶಿ ಕೆ. ಆರ್. ಕೆ. ಮೆನನ್‌ರವರ ರುಜು ಇರುವುದು.

## ಅಖಿಲ ಭಾರತ ಹರಿಜನ ಸಮ್ಮೇಳನ

ಅಖಿಲ ಭಾರತದಲ್ಲಿ ಸದ್ಯದಲ್ಲಿಯೇ ಅಖಿಲ ಭಾರತ ಹರಿಜನ ಸಮ್ಮೇಳನವನ್ನು ನಡೆಸಬೇಕೆಂದು, ಮದರಾಸಿನಲ್ಲಿ ಮೊನ್ನೆ ದಿನ ನಡೆದ ಬಾಹ್ಯ ಸಭೆಯ ಹರಿಜನ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಯಿತು.

## ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆ

ಬೆಳಗೊಳದ ನೀಲ್ಸಾಂಡ್ ಕಾರ್ಖಾನೆಯ ಹಲವು ಕೆಲಸಗಾರರನ್ನು ತೆಗೆದುಹಾಕಿರುವ ವಿಚಾರವಾಗಿ ಅಲ್ಲಿನ ಜನರಲ್ ಮ್ಯಾನೇಜರ್‌ರವರು ಪತ್ರಿಕೆಗೆ ಒಂದು ಪತ್ರವನ್ನು ಬರೆದು ಈ ರೀತಿ ತಿಳಿಸಿರುತ್ತಾರೆ:-

ಅಧಿಕವಾದ ಸಿಬ್ಬಂದಿಯನ್ನು ಖಿಲ್ಲೆ ಮಾಡುವ ಬಗ್ಗೆ ದೀರ್ಘಾಲೋಚನೆಯಿಂದ ಮಾಡಿರುವ ನಿರ್ಧಾರವು ಸಂಪೂರ್ಣವಾಗಿ ಕಾನೂನಿಗೆ ಅನುಗುಣವಾಗಿರುತ್ತದೆ.

ಇನ್ನೂ ಕೆಲವರನ್ನು ತೆಗೆದು ಹಾಕುವರೆಂಬ ಸಂಶಯಕ್ಕೆ ಆಧಾರವಿಲ್ಲ.

ಜನರೇಟರಿನಲ್ಲಿ ೪ ಜನರ ಖಿಲ್ಲೆ ಇವರಿಗೆ ಕೆಲಸವಿಲ್ಲವೆಂದು ಹೇಳುವುದು ಸರಿಯಲ್ಲ. ಅದರಿಂದ ಎಲೆಕ್ಟ್ರಾಲಿಟಿಕ್ ಸ್ಲಾಂಟಿಗೆ ನೇರವಾಗಿ ಕರೆಂಟು ಸರಬರಾಜಾಗಿ ಅದರ ಮೂಲಕ ಇತರ ಪ್ಲಾಂಟಿನ ಕೆಲಸ ಮಾಡಬೇಕಾಗಿದೆ. ಜನರೇಟರು ಕೆಟ್ಟುಹೋಗಿರುವುದರಿಂದ ಪ್ಲಾಂಟಿನ ಇತರ ಶಾಖೆಗಳೂ ಕೆಲಸವಿಲ್ಲದೆ ಇವೆ.

ಈಗ ತೆಗೆದುಹಾಕಲಾಗಿರುವವರ ಪೈಕಿ ೭೪ ಜನರು ದಿನಗೂಲಿಯವರು, ಅಂಜನರು ತಿಂಗಳ ಸಂಬಳದವರು. ದಿನಗೂಲಿಯವರು ಖಾಯಂ ಆಗಿ ಕೆಲಸ ಮಾಡುವವರಲ್ಲ. ಅವರು ವರ್ಷಕ್ಕಿಂತ ಕಡಿಮೆ ಕೆಲಸ ಮಾಡಿರುವರು. ಪ್ಲಾಂಟಿನ ೪೦ ಜನಗಳ ಪೈಕಿ ೮ ಜನರು ೯ ವರ್ಷಕ್ಕೆ ಕಡಿಮೆ ಕೆಲಸ ಮಾಡಿರುವರು. ಇತರರು ೬ ರಿಂದ ೭ ವರ್ಷ ಕೆಲಸ ಮಾಡಿರುವರು.

## ಅಣುಶಕ್ತಿಯನ್ನು ಕಂಡುಹಿಡಿಯುವ ಪರಿಶೋಧನೆ

ಹಿಂದುಸ್ಥಾನದ ವಿಜ್ಞಾನ ಶಾಸ್ತ್ರಜ್ಞರಾದ ಡಾ॥ ಭಾರ್ಗವರವರು ಅಣುಶಕ್ತಿ ಇರುವ ಖನಿಜವಸ್ತುಗಳ ಶೋಧನೆಯಲ್ಲಿ ತೊಡಗಿರುವರು. ಇವರ ಪರಿಶೋಧನೆ ... ಅಲ್ಲಿನ ಸರಕಾರದವರು ... ಕೊಟ್ಟಿರುತ್ತಾರೆ ... ಹೇಳಲಾಗಿದೆ.

## ಜಯಪ್ರಕಾಶರ ಉಪವಾಸ ಮುಕ್ತಾಯ

ಅಖಿಲ ಭಾರತ ಅಂಚೆ ಮತ್ತು ತಂತಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಜಯಪ್ರಕಾಶನಾರಾಯಣರು ದೆಹಲಿಯಲ್ಲಿ ಅಂಚೆ ಮುಷ್ಕರ ನಡೆದ ದಿನಗಳಿಗಾಗಿ ಕೊಡುವುದಾಗಿ ಒಪ್ಪಿದ್ದ ಸಂಬಳಗಳನ್ನು ಸರ್ಕಾರದವರು ಕೊಡದೇ ಇದ್ದರೆ, ಮತ್ತು ಅವರ ಹೆಚ್ಚಿನ ತುಟ್ಟಿ ಭತ್ಯವನ್ನು ಮುಂದೆಯೂ ಕೊಡದೆ ಹೋದರೆ ... ಮುಂದಿನ ತಿಂಗಳು ... ಉಪವಾಸ ಪ್ರಶ್ನೆಯನ್ನು ... ತಿಳಿಸಿರುತ್ತಾರೆ.

## ಪಾರ್ಲಿಮೆಂಟಿನ ಉಮೇದುವಾರರ ಅರ್ಜಿ ಪೈಕಿ ಭಿಕ್ಷೆ ತಿರಸ್ಕಾರ

[ಸ್ವಂ. ವ. ವರದಿ] ಬೆಂಗಳೂರು ೧೦

... ಶ್ರೀ ... ಎಸ್. ನಾರಾಯಣರಾವ್ ... ಅಂಚೆಯನ್ನು ... ಅರ್ಜಿ ... ಬರೆದು ... ರಾಯಚೂರಿನ ... ಕಾಂಗ್ರೆಸ್ಸಿನ ... ತಿಳಿಸಿದ್ದಾರೆ.

ಶ್ರೀಗಳಾದ ಎಸ್. ಎಂ. ಮುನಿವೆಂಕಟಪ್ಪ ಮತ್ತು ಟಿ. ಎಸ್. ವೇಣುಗೋಪಾಲರವರು ಗಳು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಳ್ಳುವರೆಂದು ಹೇಳಲಾಗಿದೆ.

## ವಿ. ಪಿ. ಮೆನನ್ನರ ಆಗಮನದ ಉದ್ದೇಶ

### ರಾಜಧನದ ನಿಷ್ಕರ್ಷೆಗಾಗಿ

[ಸ್ವಂ. ವ. ವರದಿ] ಬೆಂಗಳೂರು ೧೦

ಕೇಂದ್ರದಲ್ಲಿ ಹಣಕಾಸಿನ ಪಕ್ಷ ಮತ್ತು ... ಜನರ ... ಬಗ್ಗೆ ಹೊಸ ... ದಿವಾನ ... ವಿ. ಪಿ. ಮೆನನ್ನರು ... ಸಂಸ್ಥಾನಕ್ಕೆ ... ಆಗಮಿಸಿದ ... ಸಕ್ಕರೆ ... ಹೇಳಲಾಗಿದೆ.

## ಹೊಸ ಮಂತ್ರಿಮಂಡಲದ ಬಗ್ಗೆ ನಾಳೆ ಪ್ರಕಟಣೆ

[ಸ್ವಂ. ವ. ವರದಿ] ಬೆಂಗಳೂರು ೧೦

ಸಂಸ್ಥಾನದ ಮಂತ್ರಿಮಂಡಲದ ಪುನರ್ರಚನೆಯ ಬಗ್ಗೆ ಹೊಸ ಪ್ರಕಟಣೆಯೊಂದು ನಾಳೆ ಹೊರಬೀಳುವುದೆಂದು ಹೇಳಲಾಗಿದೆ. ಹೊಸದಾಗಿ ನೇಮಕವಾಗುವ ಮಂತ್ರಿಗಳು ನಾಳಿದ್ದು ಪ್ರಮಾಣ ವಚನವನ್ನು ಸ್ವೀಕರಿಸುವರೆಂದು ಗೊತ್ತಾಗಿದೆ. ಮಂತ್ರಿಗಳ ಸಂಖ್ಯೆಯನ್ನು ೯ ರಿಂದ ೭ ಕ್ಕೆ ಇಳಿಸಲಾಗುವುದೆಂದೂ ಹೇಳಲಾಗಿದೆ.

### ಸತ್ಯಾಗ್ರಹಿಗಳಿಗೆ ಸರ್ಕಾರಿ ನೌಕರಿ

ರಾಜಕೀಯ ಹೋರಾಟಗಳಲ್ಲಿ ಭಾಗವಹಿಸಿದ ಕಾರಣದಿಂದ ಪರೀಕ್ಷೆಗಳಿಗೆ ಕೂಡಲಾಗದಿದ್ದವರಿಗೂ ಮತ್ತು ಕೆಲಸ ಕಳೆದುಕೊಂಡವರಿಗೂ ಈಗ ಖಾಲಿ ಬಿದ್ದಿರುವ ಸರ್ಕಾರಿ ಕೆಲಸಗಳನ್ನು ಸಾಧ್ಯವಾದ ಮಟ್ಟಿಗೂ ಒದಗಿಸಬೇಕೆಂದು ಸರ್ಕಾರದ ಆಜ್ಞೆಯಾಗಿದೆ. ವಿಶೇಷತರವಾದ ಖಾಲಿ ಸ್ಥಾನಗಳಲ್ಲಿ ಹಿಂದುಳಿದ ವರ್ಗದ ಉಮೇದುವಾರರನ್ನೇ ನೇಮಿಸಬೇಕೆಂದು ಸೂಚಿಸಲಾಗಿದೆ.

## ಮಂಡ್ಯದ ಕಾರ್ಮಿಕರಿಗೂ ಅಧಿಕಾರಿಗಳಿಗೂ ಒಪ್ಪಂದ

ನಿನ್ನೆ ದಿನ ಮಂಡ್ಯದ ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿ ಸಕ್ಕರೆ ಕಂಪೆನಿಯ ಅಧಿಕಾರಿ ವರ್ಗದವರಿಗೂ ಮತ್ತು ಕಾರ್ಮಿಕರ ಪ್ರತಿನಿಧಿಗಳಿಗೂ ಪರಸ್ಪರ ಮಾತುಕತೆಗಳು ನಡೆದುವು. ಇದರ ಪರಿಣಾಮವಾಗಿ ಕಾರ್ಮಿಕರಿಗೂ ಮಾಲೀಕರಿಗೂ ಒಪ್ಪಂದವಾಗುವ ಸೂಚನೆಗಳಿವೆ.

## ಡಾ॥ ಲೋಹಿಯಾರವರ ಬಿಡುಗಡೆ ಮತ್ತು ಗಡೀಪಾರು

ಮೊನ್ನೆ ದಿನ ರೇವಾ ಸಂಸ್ಥಾನದಲ್ಲಿ ದಸ್ತಗಿರಿ ಮಾಡಲಾಗಿದ್ದ ಸಮಾಜವಾದಿ ನಾಯಕ ಡಾ॥ ರಾಮಮನೋಹರ ಲೋಹಿಯಾರವರನ್ನು ಬಿಡುಗಡೆ ಮಾಡಿ ರೇವಾ ಮಿರ್ಜಾಪುರಗಡಿಗೆ ಕರೆದುಕೊಂಡು ಬಂದು ಗಡೀಪಾರು ಮಾಡಲಾಯಿತು.

## ಹೈದರಾಬಾದಿನಲ್ಲಿ ಅಂಚೆ ಕಾರ್ಮಿಕರ ಮುಷ್ಕರ

ಹೈದರಾಬಾದಿನ ಮಜದೂರ್ ಸಂಘಕ್ಕೆ ಸೇರಿದ ಅನೇಕ ಕಾರ್ಮಿಕರ ಸಂಸ್ಥೆಗಳ ೪೦ ಸಾವಿರ ಜನರು ನಾಳೆಯಿಂದ ಮುಷ್ಕರ ಹೂಡಲು ನಿರ್ಧರಿಸಿರುವುದಾಗಿ ಸಂಘದ ಅಧ್ಯಕ್ಷ ಶ್ರೀ ಬಿ. ಎಸ್. ಮಹಾದೇವ ಸಿಂಗ್‌ರವರು ತಿಳಿಸುತ್ತಾರೆ. ವಾರಂಗಲ್ ಪ್ರದೇಶದಲ್ಲಿ ಕಮ್ಯೂನಿಸ್ಟ್ ಚಟುವಟಿಕೆಗಳಿರುವುದರಿಂದ ಅಲ್ಲಿನ ಕಾರ್ಮಿಕರು ಮುಷ್ಕರ ಹೂಡಬಾರದೆಂದು ಸೂಚನೆ ಕೊಟ್ಟಿರುವುದಾಗಿಯೂ ಅವರು ತಿಳಿಸಿರುವರು.

## ವನಸ್ಪತಿ ಕಾರ್ಖಾನೆಗಳಿಗೆ ಧಕ್ಕೆ

ಕಡಲೆಕಾಯಿಯ ಬೆಲೆಯು ವಿಪರೀತ ಏರುವುದರಿಂದ ಈ ವರ್ಷ ವನಸ್ಪತಿ ಕಾರ್ಖಾನೆಗಳ ಬೆಳವಣಿಗೆಗೆ ಧಕ್ಕೆ ಒದಗಿರುವುದರಿಂದ ಭಾರತದಲ್ಲಿ ಅನೇಕ ವನಸ್ಪತಿ ಕಾರ್ಖಾನೆಗಳು ಮುಚ್ಚುವ ಸ್ಥಿತಿಗೆ ಬಂದಿರುವುದೆಂದು ಹೇಳಲಾಗಿದೆ. ಈಗ ... ಕಡಲೆಕಾಯಿ ... ಕಡಲೇಕಾಯಿ ಎಣ್ಣೆಯು ... ಮಾಡಿಕೊಳ್ಳ ... ಹೇಳಲಾಗಿದೆ.

## ಶೃಂಗೇರಿ ಮಠದ ಸಮಿತಿಯ ಸ್ಥಾಪನೆಗೆ ಪ್ರತಿಭಟನೆ

ಮೈಸೂರು ೯.

ಇಲ್ಲಿನ ಶ್ರೀ ಶಂಕರ ಮಠದಲ್ಲಿ ಕಳೆದ ಶನಿವಾರ ಶ್ರೀ ತಿಂಬಳೆ ಸುಬ್ರಹ್ಮಣ್ಯ ಅಯ್ಯಂಗಾರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಶೃಂಗೇರಿ ಮಠಕ್ಕೆ ಸಲಹಾ ಸಮಿತಿಯೊಂದನ್ನು ನೇಮಿಸಬೇಕೆಂದು ಸರಕಾರದವರು ಯೋಚಿಸುತ್ತಿರುವುದನ್ನು ಪ್ರತಿಭಟಿಸುವ ನಿರ್ಣಯ ಮಾಡಲಾಯಿತು. ಶ್ರೀಗಳಾದ ಎಂ. ವಿ. ನಾರಾಯಣರಾವ್, ಆ॥ ವಿ॥ ನ ಜನಗೂಡು ಶ್ರೀಕಂಠಶಾಸ್ತ್ರಿ, ರಾಮಲಿಂಗ ಶರ್ಮ, ವೆಂಕಟಸುಬ್ಬಯ್ಯ, ಟಿ. ನಾರಾಯಣ ಮುಂತಾದವರು ಮಾತನಾಡಿ, ಸರ್ಕಾರದ ನೀತಿಯನ್ನು ಖಂಡಿಸಿದರು. ಶೃಂಗೇರಿ ಮಠದ ಆಡಳಿತವನ್ನು ಸುವ್ಯವಸ್ಥಿತವಾಗಿ ನೆರವೇರಿಸಲು ಚಿಕ್ಕಸ್ವಾಮಿಗಳವರೇ ಸಮರ್ಥರಾಗಿರುವುದರಿಂದಲೂ, ಅವರ ನೆರವಿಗೆ ಹಿರಿಯ ಗುರುಗಳು ಇರುವುದರಿಂದಲೂ, ಮತ್ತು ಈಗಾಗಲೇ ಸರ್ಕಾರಿ ಅಧಿಕಾರಿಯೊಬ್ಬರು ಮಠದ ಮೇಲ್ವಿಚಾರಕರಾಗಿರುವುದರಿಂದಲೂ, ಮತ್ತೊಂದು ಸಮಿತಿಯ ಅವಶ್ಯಕತೆ ಇಲ್ಲವೆಂದೂ, ಇದು ಕೆಲವು ಸ್ವಾರ್ಥ ಸಾಧಕರ ಸಲಹೆಯೆಂದೂ, ಅದಕ್ಕೆ ಸರ್ಕಾರದವರು ಬೆಲೆಕೊಡಬಾರದೆಂದೂ, ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು.

### ಅಂಗಡಿ ಕೆಲಸಗಾರರ ಸಂಘ

ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿಯು ಮೊನ್ನೆ ಸೇರಿ ಸಂಘದ ಸಾಮಾನ್ಯ ಸದಸ್ಯರ ಸಭೆಯನ್ನು ಮುಂದಿನ ಭಾನುವಾರ ಕರೆಯುವಂತೆಯೂ ಮಾಲೀಕರು ಕಾನೂನನ್ನು ಉಲ್ಲಂಘಿಸುತ್ತಿರುವ ಬಗ್ಗೆ ಕಾರ್ಮಿಕ ಮಂತ್ರಿಗಳಲ್ಲಿ ನಿಯೋಗ ಹೋಗುವಂತೆಯೂ ನಿರ್ಣಯ ಮಾಡಲಾಯಿತು.

## ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಕ್ರಿಸ್‌ಮಸ್ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವು ಈ ಮಾಹೆ ೪ನೇ ತಾರೀಖಿನಿಂದ ನಡೆಯುತ್ತಿದೆ. ಪೋಷಕ ಮಹಾಶಯರು ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಬೇಕಾಗಿ ವಿನಂತಿ. ಶಿಶುವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಹನೀಯರು ಕಾಲವಿಳಂಬ ಮಾಡದೆ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ.

ಬಿ. ಕೃಷ್ಣಮೂರ್ತಿ,
ವ್ಯವಸ್ಥಾಪಕ

ಸಾ ... ಲ್ಯಾಂಡ್ ... ಕೊಲೆಗಾರನಿಗೆ ಶಿಕ್ಷೆ

ಆಂಧ್ರ ... ಜಿಲ್ಲೆಯ ... ಮಾಜಿ ... ಪಾಟೀಲರು ... ಮತ್ತು ... ಗಲ್ಲಿಗೆ ... ಶಿಕ್ಷೆಯು ... ಕೊಲೆಗಾರ ... ಹಾಗೂ ಇತರ ... ರನ್ನು ಎರಡು ... ಶಿಕ್ಷೆ ... ಮಂದಿಗೆ ... ಕೊಡ ... ಎಂದು ... ದಿದ್ದರೆ ಅವರು ... ಕೊಡಲು ನಿರಾಕರಿಸಿದ ನಂತರ ಆತನನ್ನು ಕಲ್ಲಿನಿಂದ ಹೊಡೆದು, ಅನಂತರ ಕತ್ತಿಗೆಯನ್ನು ಹಿಸುಕಿ ಕೊಂದನೆಂದೂ ಆಪಾದಿಸಲಾಗಿತ್ತು.

## ತಣ್ಣೀರು ಸ್ನಾನದಿಂದ ದೀರ್ಘಾಯುಷ್ಯ

ತಣ್ಣೀರು ಸ್ನಾನ ಮಾಡುವುದರಿಂದ ಹೆಚ್ಚು ವರ್ಷ ಬದುಕಬಹುದೆಂದು ಅಸ್ಟ್ರೇಲಿಯಾದ ೯೦ ವರ್ಷದ ವಿ.॥ ರೀವ್ ಎಂಬಾತನು ತಿಳಿಸಿರುತ್ತಾನೆ. ತಾನು ೪೦ ವರ್ಷಗಳಿಂದಲೂ ತಣ್ಣೀರು ಸ್ನಾನ ಮಾಡುತ್ತಿರುವುದಾಗಿಯೂ ತನ್ನ ೭೬ ವರ್ಷದ ಹೆಂಡತಿಯು ಇದೇ ರೀತಿ ಮಾಡುತ್ತಿರುವುದರಿಂದ ಶಕ್ತಿವಂತಳಾಗಿದ್ದಾಳೆಂದೂ ಆತನು ತಿಳಿಸಿರುತ್ತಾನೆ.

### ೨೬ನೇ ತಾ॥ನಿಂದ ರಾಜ್ಯಾಂಗ ಸಭೆಯು ರದ್ದು

ಇದೇ ೨೬ನೇ ತಾ॥ನಿಂದ ಕೇಂದ್ರ ರಾಜ್ಯಾಂಗ ಸಭೆಯು ರದ್ದಾಗುವುದರಿಂದ ಅಂದಿನಿಂದಲೇ ಮೈಸೂರು ರಾಜ್ಯಾಂಗ ಸಭೆಯನ್ನೂ ವಿಸರ್ಜಿಸಬೇಕೆಂಬ ನಿರ್ಣಯವನ್ನು ಇದೇ ೧೨ನೇ ತಾ॥ ಸೇರಲಿರುವ ರಾಜ್ಯಾಂಗ ಸಭೆಯಲ್ಲಿ ಅಂಗೀಕರಿಸಲಾಗುವುದೆಂದು ತಿಳಿದುಬಂದಿದೆ.


# ರಾಜಕಮಲ್

ಮೈಸೂರು

**6—1—50 ರಿಂದ**

ಜನಭರಿತವಾದ ೩ನೇ ವಾರ
ದಿನವಹಿ ೩ ಪ್ರದರ್ಶನಗಳು

# ಜೀವನ

— ಭೂಮಿಕೆ: —

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ



# ನ್ಯೂಸ್ ಪ್ರಿಂಟ್

ಡಬ್ಬಲ್ ಕ್ರೌನ್ ಸೈಜು
ಬೇಕಾಗಿದೆ/ಸಿಗುತ್ತದೆ ಕೂಡಲೇ
ವಿಚಾರಿಸಿ.—

"ಸಾಧ್ವಿ" ಆಫೀಸು,
ಮೈಸೂರು



ಕಪ್ಪು ಬಿಳಿ ಪೆಟ್ಟಿಗೆ, ಬೀರು, ಕ್ಯಾಷ್ ಬಾಕ್ಸ್
ಮತ್ತು ಇಲಾಖಾ ಸೇಫ್ : ಸುಲಭವಾದ ಬೆಲೆ

ಸಿಟಿ ಇಂಜಿನಿಯರಿಂಗ್ ವರ್ಕ್ಸ್

2707, ಮಳೆ ರೋಡ್ — ಮೈಸೂರು


Printed and published by A. R. Nagaraj ... Press, D. Subbiah Road, Mysore

## ಜನಾಬ್ ... ಆಂಧ್ರಪ್ರಾಂತ್ಯದ ಗೌರ್ನರರೇ?

ಆಂಧ್ರ ಪ್ರಾಂತ್ಯದ ಗೌರ್ನರರಾಗಿ ಮೌಲಾನಾ ... ಕಲಾಂ ಆಜಾದರನ್ನು ನೇಮಿಸಲಾಗುತ್ತದೆಂದೂ, ಡಾ॥ ಜಕೀರ್ ಹುಸೇನರನ್ನು ಕೇಂದ್ರ ವಿದ್ಯಾ ಸಚಿವರನ್ನಾಗಿ ಮಾಡಲಾಗುವುದೆಂದೂ ದೆಹಲಿಯ ಅಧಿಕೃತ ವಲಯದಲ್ಲಿ ಹೇಳಲಾಗುತ್ತಿದೆ.

## ಉಚಿತವಾಗಿ ವ್ಯವಸಾಯ ಪಂಪುಗಳ ರಿಪೇರಿ

ವ್ಯವಸಾಯಕ್ಕಾಗಿ ರೈತರು ಇಟ್ಟುಕೊಂಡಿರುವ ಖಾಸಗೀ ಪಂಪುಗಳನ್ನು ಉಚಿತವಾಗಿ ರಿಪೇರಿಮಾಡಬೇಕೆಂದು ಮದರಾಸಿನ ಸರ್ಕಾರದವರು ವ್ಯವಸಾಯ ಇಲಾಖೆಯವರಿಗೆ ಸೂಚನೆ ಕೊಟ್ಟಿರುತ್ತಾರೆ. ಆದಕ್ಕೆ ಬೇಕಾಗುವ ಸಾಮಾನುಗಳು ಮತ್ತು ಇತರ ಸಹಾಯವನ್ನು ರೈತರು ಕೊಡಬೇಕೆಂದು ತಿಳಿಸಲಾಗಿದೆ.

## ಸ್ವಯಂ ಸಿದ್ಧಾ ಚಿತ್ರ

ಪಾಶ್ಚಾತ್ಯ ವಿದ್ಯೆಯನ್ನೂ ಹಿಂದೂ ಸಂಪ್ರದಾಯಗಳನ್ನೂ ಸಮ್ಮಿಳನಗೊಳಿಸಿ ಅಂಧಕಾರದಲ್ಲಿ ತೊಳಲುತ್ತಿರುವ ತನ್ನ ಪತಿಯನ್ನು ಬೆಳಕಿಗೆ ತರಲು ಶ್ರಮಿಸುವ ಆದರ್ಶ ಪತ್ನಿಯ ಜೀವಿತವೇ "ಸ್ವಯಂ ಸಿದ್ಧಾ" ಚಿತ್ರದ ತಿರುಳು. ಚಿತ್ರ ತಯಾರಕರು ತಮ್ಮ ಉದ್ಯಮದಲ್ಲಿ ಸಂಪೂರ್ಣ ಯಶಸ್ವಿಗಳಾಗಿದ್ದಾರೆ. ಸಂಭಾಷಣೆಗಳು ರಸಮಯವಾಗಿವೆ. ದಿಗ್ದರ್ಶನವು ಉನ್ನತ ಮಟ್ಟದಲ್ಲಿದೆ. ಕಥೆಯು ನೀತಿ ಬೋಧಕವಾಗಿದೆ. ಪಾತ್ರಧಾರಿಗಳು ತಮ್ಮ ತಮ್ಮ ಪಾತ್ರಗಳನ್ನು ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ.

ಶಾಂತಾ ಆಪ್ಟೆ ಚಂಡಿ ಪಾತ್ರದಲ್ಲಿ ತನ್ನ ಇತರ ಚಿತ್ರಗಳಿಗಿಂತಲೂ ಉತ್ತಮವಾಗಿ ಅಭಿನಯಿಸಿದ್ದಾಳೆ. ಚಿತ್ರದ ಶಬ್ದ ಗ್ರಹಣ, ಛಾಯಾಗ್ರಹಣವೂ ಉತ್ತಮವಾಗಿವೆ.

ಚಿತ್ರವು ಸ್ಥಳೀಯ ಪ್ರಭಾ ಚಿತ್ರ ಮಂದಿರದಲ್ಲಿ ಕಿಕ್ಕಿರಿದ ಮೂರನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಚಿತ್ರವು ಜನಾದರಣೀಯವಾಗಿ ಇನ್ನೂ ಹೆಚ್ಚು ಕಾಲ ಪ್ರದರ್ಶಿಸಲ್ಪಡುವ ನಿರೀಕ್ಷಣೆ ಇದೆ.

## ಧಾರವಾಡದಲ್ಲಿ ರೇಡಿಯೋ ಕೇಂದ್ರದ ಪ್ರಾರಂಭ

ಧಾರವಾಡದಲ್ಲಿ ಮೊನ್ನೆದಿನ ಕೇಂದ್ರ ಸರಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರರು ನೂತನ ರೇಡಿಯೋ ಕೇಂದ್ರದ ಆರಂಭೋತ್ಸವವನ್ನು ನೆರವೇರಿಸಿದರು. ಇಂದಿನ ವಿಜ್ಞಾನ ಯುಗದಲ್ಲಿ ಮಾನವನು ವಿಶ್ವದ ನಾಡಿಗಳನ್ನು ಕೇಳಿ, ಜೀವನವನ್ನು ಹರ್ಷದಾಯಕವಾಗಿ ಮಾಡಿಕೊಳ್ಳಲು ರೇಡಿಯೋಗಳು ಮುಖ್ಯ ಸಾಧನವೆಂದೂ, ವಿದ್ವಾಂಸರು ಮತ್ತು ಇತರರೂ ಸೇವಾ ಮನೋಭಾವದಿಂದ ಪ್ರಸಾರ ಕಾರ್ಯದಲ್ಲಿ ತೊಡಗಿ ಜನಸೇವೆ ಮಾಡಬೇಕೆಂದೂ ಶ್ರೀ ದಿವಾಕರರು ತಮ್ಮ ಭಾಷಣದಲ್ಲಿ ತಿಳಿಸಿರುತ್ತಾರೆ.

### ನೆಹರೂರವರ ಭಾವಚಿತ್ರ ಅನಾವರಣ

ಮೈಸೂರು ನಗರದ ಗೃಹ ನಿರ್ಮಾಣ ಸಹಕಾರ ಸಂಘದ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರಾದ ಶ್ರೀ ಬಿ. ಆರ್. ನಾಯಿಡುರವರು ಸಂಘದಲ್ಲಿ ಹಾಕಲು ದಯಪಾಲಿಸಿದ್ದ ಪಂಡಿತ ನೆಹರೂರವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಮೊನ್ನೆ ಶ್ರೀ ವಿ. ಲಿಂಗಪ್ಪಯ್ಯನವರು ನೆರವೇರಿಸಿದರು. ಶ್ರೀಮತಿ ಜಿ. ವಿ. ರಂಗನಾಯಕಮ್ಮನವರಿಂದ ಸುಶ್ರಾವ್ಯವಾದ ಸಂಗೀತವು ಏರ್ಪಾಡಾಗಿದ್ದಿತು. ಶ್ರೀ ಎ. ಕೃಷ್ಣಮೂರ್ತಿರಾಯರು ಸ್ವಾಗತ ಭಾಷಣ ಮಾಡಿದರು. ಕಾರ್ಯನಿರ್ವಾಹಕ ಸಮಿತಿಯ ಪರವಾಗಿ ಶ್ರೀ ಬಿ. ಎಸ್. ಸುಬ್ಬರಾಯರು ದಾತೃಗಳಿಗೂ, ಸಂಗೀತಗಾರರು ಮತ್ತು ಅಧ್ಯಕ್ಷರಿಗೂ ಧನ್ಯವಾದಗಳನ್ನು ಅರ್ಪಿಸಿದರು.

## ಆಸ್ಪತ್ರೆಗೆ ಬೆಂಕಿ ಬಿದ್ದು ೨೮ ಜನರ ಮರಣ

ಅಮೆರಿಕದ ಡೇವನ್ ಪೋರ್ಟ್ ಎಂಬಲ್ಲಿನ ಹುಚ್ಚರ ಆಸ್ಪತ್ರೆಯಲ್ಲಿ ಮೊನ್ನೆ ದಿನ ಆಕಸ್ಮಾತ್ ಬೆಂಕಿ ಅನಾಹುತ ಸಂಭವಿಸಿ, ೨೮ ಜನ ರೋಗಿಗಳು ಭಸ್ಮವಾದರೆಂದೂ, ಇತರ ೩೧ ಮಂದಿಗೆ ತೀವ್ರ ಗಾಯವಾಗಿದೆಯೆಂದೂ ವರದಿಯಾಗಿದೆ.


# ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)
ಶಿವರಾಂಪೇಟೆ, ಮೈಸೂರು

ಗ್ಯಾರಂಟಿಯಾದ ಮಾಲು
ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಸೀರೆಗಳು ಬಂದಿವೆ
ಒಂದಾವರ್ತಿ ಭೇಟಿ ಕೊಡಿ


ಮೈಸೂರು ಸಿಟಿ ಮುನಿಸಿಪಲ್ ಕಮಿಷನರ್‌ರವರ ಆಫೀಸು

## ಟೆಂಡರ್ ನೋಟಿಫಿಕೇಷನ್

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಸೆಕ್ಷನ್ ಎತ್ತುಗಳಿಗೂ ಮತ್ತು ಸೂಯೇಜ್ ಫಾರಂ ಎತ್ತುಗಳಿಗೂ ತಾರೀಖು ೧-೨-೧೯೫೦ ರ ಲಾಗಾಯ್ತು ೩೧-೧-೫೧ ರ ವರೆಗೆ ಹುರುಳಿ, ಸೆಲ್ಲು ಹುಲ್ಲು, ಜರಡಿ ಹಗ್ಗ, ನೂಲಿನ ಹಗ್ಗ ಮತ್ತು ಎರೇ ಎಣ್ಣೆ ಇವುಗಳನ್ನು ಸಪ್ಲೈ ಮಾಡಲು ಇಷ್ಟವುಳ್ಳವರು ಟೆಂಡರ್ ನೋಟಿಫಿಕೇಷನ್ನಿನಲ್ಲಿ ನಮೂದಿಸಿರುವ ಷರತ್ತುಗಳಿಗನುಸಾರವಾಗಿ ತಾ॥ ೧೩-೧-೫೦ ನೇ ಶುಕ್ರವಾರ ಮಧ್ಯಾಹ್ನ ೪ ಘಂಟೆಯೊಳಗೆ ಮೈಸೂರು ಸಿಟಿ ಮುನಿಸಿಪಲ್ ಕಮೀಷನರ್‌ರವರಿಗೆ ತಮ್ಮ ಟೆಂಡರುಗಳನ್ನು ಕಳುಹಿಸಬಹುದು. ಹೆಚ್ಚಿನ ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಅಥವಾ ಸೂಯೇಜ್ ಫಾರಂ ಮ್ಯಾನೇಜರ್‌ರವರಲ್ಲಾಗಲೀ ತಿಳಿದುಕೊಳ್ಳಬಹುದು.

(ಸಹಿ) ಸಿ. ನರಸಿಂಹ ಮೂರ್ತಿ,
ಮುನಿಸಿಪಲ್ ಕಮಿಷನರ್,
ಮೈಸೂರು ಸಿಟಿ ಮುನಿಸಿಪಾಲಿಟಿ

ಫೋ।। ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಬುಧವಾರ ೧೧-೧-೫೦ [ಸಂಚಿಕೆ ೧೩೮

# ೨೬ಕ್ಕೆ ನೈಜಾಮರೂ ರಾಜ ಪ್ರಮುಖರು

## ಕೆ.ಸಿ. ರೆಡ್ಡಿಯವರು ವಾಪಸು

ಸ್ವಂ.ಸು. ಫೋ।।] ಬೆಂಗಳೂರು ೧೧

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಿನ್ನೆ ರಾತ್ರಿ ಪುದುಚೇರಿಯಿಂದ ಇಲ್ಲಿಗೆ ಹಿಂದಿರುಗಿದರು

## ಸರ್ ಆರ್ಕಾಟರು ನಿಯೋಗದ ನಾಯಕರು

ಫೆಬ್ರವರಿ ೭ನೇ ತಾ।। ನಡೆಯಲಿರುವ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಸಭೆಗೆ ಸರ್. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಭಾರತ ನಿಯೋಗದ ನಾಯಕರಾಗಿ ನೇಮಿಸಲ್ಪಟ್ಟಿರುವರು

## ಬದ್ರಿನಾಥ ದೇವಾಲಯದ ರಕ್ಷಣಾ ಏರ್ಪಾಡು

ಅಲಕನಂದಾ ನದಿಯ ದಡದ ಮೇಲಿರುವ ಬದರೀನಾಥ ದೇವಾಲಯದ ರಕ್ಷಣಾ ಕಾರ್ಯಕ್ಕಾಗಿ ಸಂಯುಕ್ತ ಪ್ರಾಂತ್ಯ ಸರಕಾರದವರು ೮೧ ಸಾವಿರ ರೂ ಗಳನ್ನು ಮಂಜೂರು ಮಾಡಿರುತ್ತಾರೆ ನದಿಯ ಬಲ ದಡದಲ್ಲಿರುವ ಭೂಮಿಯು ಕುಸಿಯುತ್ತಿರುವುದರಿಂದ, ಇದೇ ರೀತಿ ಬಿಟ್ಟರೆ ದೇವಾಲಯವೇ ಕಳಚಿ ಬೀಳುವುದೆಂದು ಇಂಜಿನಿಯರರ ಅಭಿಪ್ರಾಯ ಪಟ್ಟಿರುವುದರಿಂದ ಈ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ

## ೭೨ ವರ್ಷದ ವಧು: ೩೫ ವರ್ಷದ ವರ

ಇಂಗ್ಲೆಂಡಿನ ಸ್ಟಾಫರ್ಡ್ ಎಂಬ ಪ್ಲೇಸ್ನಲ್ಲಿ ೭೨ ವರ್ಷ ವಯಸ್ಸಿನ ಮಿಸ್ ಮಾರ್ಗ್ರೆಟ್ ಎಂಬಾಕೆಯು ೩೫ ವರ್ಷದ ಜವೈರ್ ದ್ವೀಪದ ಕರಿಯ ಮನುಷ್ಯನನ್ನು ಅಲ್ಲಿನ ಚರ್ಚೊಂದರಲ್ಲಿ ವಿವಾಹವಾದಳೆಂದು ವರದಿಯಾಗಿದೆ

## ಅಂಚೆ ಕವರುಮೇಲೆ ಭಾರತ ಸರ್ಕಾರದ ಸರ್ವಿಸ್

ಮೈಸೂರು ಸರ್ಕಾರದಿಂದ ಟಪಾಲು ಮುಖಾಂತರ ಕಳುಹಿಸತಕ್ಕ ಕಾಗದ ಪತ್ರಗಳ ಮೇಲೆ "ಮೈಸೂರು ಸರ್ಕಾರದ ಸರ್ವಿಸ್ಸಿನ ಮೇಲೆ" ಎಂದು ಇದುವರೆಗೂ ಬರೆಯುತ್ತಿದ್ದುದನ್ನು ಇದೇ ಜನವರಿ ೨೬ ನೇ ತಾರೀಖಿನ ನಂತರ "ಭಾರತ ಸರ್ಕಾರದ ಸರ್ವಿಸ್ಸಿನ ಮೇಲೆ" ಎಂದು ಬರೆಯಬೇಕೆಂದು ಸರ್ಕಾರದ ಸೂಚನೆ ಹೊರಟಿದೆ

## ಯುದ್ಧವಾದರೆ ವಾಷಿಂಗ್ಟನ್ ರಾಜಧಾನಿಯು ವರ್ಗಾವಣೆ

ಅಮೆರಿಕದ ರಕ್ಷಣಾ ಶಾಖಾ ಕಾರ್ಯದರ್ಶಿ ಮಿ।। ಲೂಯಿ ಜಾನ್ಸನ್ನರು ಅಲ್ಲಿನ ಸೆನೇಟರ್ ಮಿ।। ಟೈಲೀರವರಿಗೆ ಒಂದು ಪತ್ರ ಬರೆದು ಯುದ್ಧವೇನಾದರೂ ಸಂಭವಿಸಿದಲ್ಲಿ ಸಂಯುಕ್ತ ಸಂಸ್ಥಾನಗಳ ಸರ್ಕಾರವನ್ನು ವಾಷಿಂಗ್ಟನ್ನಿನಿಂದ ಬೇರೆ ಕಡೆಗೆ ವರ್ಗಾಯಿಸಲು ಆಲೋಚಿಸಲಾಗಿದೆಯೆಂದು ತಿಳಿಸಿದ್ದಾರೆ ತುರ್ತು ಸಂದರ್ಭಗಳಲ್ಲಿ ಸರಕಾರಿ ಇಲಾಖೆಗಳನ್ನು ವಿಕೇಂದ್ರೀಕರಿಸುವ ಯೋಜನೆಗಳೂ ಸಿದ್ಧವಾಗಿರುವುದಾಗಿ ಅವರು ತಿಳಿಸಿರುತ್ತಾರೆ

○ಕವ ನ್ಯಾಸಿಸ್ಟ್ ಚೀಣದ ದಂಡನಾಯಕರು ಒಂದು ಹೇಳಿಕೆಯಲ್ಲಿ, ಇನ್ನುಂದೆ ಟಿಬೆಟ್ಟಿನ ಮೇಲೆ ಆಕ್ರಮಣವನ್ನು ನಡೆಸಿ ಅಲ್ಲಿನ ಜನರನ್ನು ಚೀಣೀ ಕಮ್ಯೂನಿಸ್ಟರನ್ನು ಸ್ವಾಧೀನ ಮುಕ್ತರನ್ನಾಗಿ ಮಾಡುವುದಾಗಿ ತಿಳಿಸಿದ್ದಾರೆ

## ಕಾಮನ್‌ವೆಲ್ತ್ ಸಮ್ಮೇಳನ

ಕಾಮನ್‌ವೆಲ್ತಿಗೆ ಸೇರಿದ ವಿದೇಶಾಂಗ ಸಚಿವರುಗಳ ಸಮ್ಮೇಳನವು ಮೊನ್ನೆ ದಿನ ಕೊಲಂಬೊದಲ್ಲಿ, ಅಲ್ಲಿನ ಮುಖ್ಯಮಂತ್ರಿ ಡಿ ಎಸ್ ಸೇನಾನಾಯಕರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಅರ್ನೆಸ್ಟ್ ಬೆವಿನ್ನರು ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಏಷ್ಯಾದಲ್ಲಿ ಪೆಸಿಫಿಕ್ ಸಾಗರದ ಒಪ್ಪಂದವಾಗಲು ಕಾಲವು ತಕ್ಕದಾಗಿಲ್ಲವೆಂದು ನುಡಿದರು. ನೆಹರೂರವರು ಭಾಷಣ ಮಾಡಿ ಏಷ್ಯಾದಲ್ಲಿರುವ ರಾಜ್ಯಗಳು ಪರಸ್ಪರ ಕಲೆತು ಸಮಸ್ಯೆಗಳನ್ನು ಬಗೆಹರಿಸುವುದರಿಂದಲೇ ಎಲ್ಲವೂ ಸಾಧ್ಯವೆಂದೂ, ಹೊರಗಿನವರು ಪ್ರವೇಶಿಸುವುದು ಉಚಿತವಲ್ಲವೆಂದೂ ತಿಳಿಸಿದರು ರಷ್ಯದ ಪ್ರಾಬಲ್ಯವನ್ನು ತಡೆಗಿಸಲು ಸಾಧ್ಯವಾಗದಿರುವುದಕ್ಕಾಗಿ ಕೆನಡಾ ಪ್ರತಿನಿಧಿ ಲೆಸ್ಟರ್ ಪಿಯರ್‌ಸನ್ನರು ವ್ಯಥೆಪಟ್ಟರು

## ನ್ಯಾಯಾಸ್ಥಾನದಲ್ಲಿ ಅಪರಾಧಿಗೆ ಹುಚ್ಚು ಹಿಡಿಯಿತು

ಅನಂತಪುರದ ಬೋಯಾ ಪೆದ್ದಗುರು ಎಂಬಾತನು ಕೊಲೆಮಾಡಿದ ಆಪಾದನೆಗಾಗಿ ಅಲ್ಲಿನ ಜಿಲ್ಲಾ ನ್ಯಾಯಾಸ್ಥಾನದಲ್ಲಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದನು ಕೊಲೆಗೀಡಾದ ಗುರುನಾಥ ಆವನ ವಿಚಾರಣೆ ಆರಂಭವಾಗಿ ಅವನ ಮೇಲಿನ ಆಪಾದನೆಯನ್ನು ಓದಿ ತಿಳಿಸಿ ಅದಕ್ಕೆ ಅವನ ಅಭಿಪ್ರಾಯವನ್ನು ಕೇಳಲು ಕೂಡಲೇ ಅವನಿಗೆ ಬುದ್ಧಿಭ್ರಮಣೆಯಾಗಿ ಅಲ್ಲಿದ್ದ ಕಂಬಿಗೆ ತನ್ನ ತಲೆಯನ್ನು ಹೊಡೆದುಕೊಂಡು ಸಿಕ್ಕಿದಂತೆ ನಾನಾ ವಿಧವಾಗಿ ವ್ಯಥೆಪಟ್ಟು ಕಾಸಿ ಪಡಿಸಿಕೊಂಡನು ಅವನನ್ನು ಪೊಲೀಸರು ಒಯ್ದರು ... ಭಂಟರು ... ನ್ಯಾಯಾಧೀಶರು ಇಂದಿನ ಕೋರ್ಟು ವ್ಯವಹಾರವನ್ನೆಲ್ಲಾ ಮುಂದೆ ಹಾಕಿದರು ಆಪಾದಿತನು ವೈದ್ಯಪರೀಕ್ಷೆ ಮಾಡಬೇಕೆಂದು ವೈದ್ಯಾಧಿಕಾರಿಗಳಿಗೆ ಸೂಚನೆ ಕಳುಹಿದೆ

## ಅ।। ಭಾ।। ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಹೊಸ ವರ್ಷದ ಅಧಿವೇಶನವನ್ನು ಒರಿಸ್ಸಾ ಪ್ರಾಂತದಲ್ಲಿ ಸೇರಿಸುವ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಪಟ್ಟಾಭಿ ಸೀತಾರಾಮಯ್ಯನವರಿಗೂ ಒರಿಸ್ಸಾ ಕಾಂಗ್ರೆಸ್ ಪಕ್ಷದವರಿಗೂ ಮಾತುಕತೆ ನಡೆದಿದೆ

## ೨೬ ನೇ ತಾ।। ನೈಜಾಮರೂ ರಾಜ ಪ್ರಮುಖರಾಗುವರು

ಈ ತಿಂಗಳು ೨೬ ನೇ ತಾ।। ಹೈದ್ರಾಬಾದಿನ ನೈಜಾಮರೂ ಸಹ ರಾಜ ಪ್ರಮುಖರಾಗಿ ಪ್ರಮಾಣ ವಚನವನ್ನು ಸ್ವೀಕರಿಸುವರು. ಅನಂತರ ಅಲ್ಲಿನ ಮಂತ್ರಿಗಳು ಪ್ರಮಾಣ ವಚನವನ್ನು ತೆಗೆದುಕೊಳ್ಳುವರು.

ಆ ದಿನ ಬೆಳಗ್ಗೆ ೧೧ ಗಂಟೆಗೆ ನಿಜಾಮರು ಅಲ್ಲಿನ ಕಿಂಗ್ ಕೋಠಿ ಅರಮನೆಯಿಂದ ಪಬ್ಲಿಕ್ ಭವನಕ್ಕೆ ಮೆರವಣಿಗೆಯಲ್ಲಿ ತೆರಳಿ, ಅಲ್ಲಿ ೧೧-೩೦ ಗಂಟೆಗೆ ಪ್ರಮಾಣ ವಚನ ಸ್ವೀಕರಿಸುವರು ಆ ವೇಳೆಯಲ್ಲಿ ೩೧ ಸಿಡಿಮದ್ದು ತೋಪುಗಳನ್ನು ಹಾರಿಸಲಾಗುವುದು.

ನಗರ ಮತ್ತು ತಾಲ್ಲೂಕುಗಳಲ್ಲಿರುವ ಬಡಜನರಿಗೆ ಅನ್ನದಾನ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಹಣ್ಣು ಹಂಪಲುಗಳ ಸರಬರಾಜು ಮಾತ್ರ ವೈದಿಕರಿಗೆ ವಿಶೇಷ ಸಂಭಾವನೆ ... ಎಲ್ಲ ಸರಕಾರಿ ಭವನಗಳ ಮೇಲೂ ಭಾರತದ ಧ್ವಜವನ್ನು ಹಾರಿಸಲಾಗುವುದು. ಸಂಜೆ ೭ ಘಂಟೆಗೆ ಮುಖ್ಯ ಮಂತ್ರಿಗಳೂ ... ಗಂಟೆಗೆ ರಾಜಪ್ರಮುಖರೂ, ರೇಡಿಯೋ ಮೂಲಕ ಭಾಷಣ ಮಾಡುವರು

## ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ನಿವೇಶನ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ನಗರಾಭಿವೃದ್ಧಿ ಸಮಿತಿಯವರು ಸಿಲ್ಕ್ ಫಿಲೇಚರ್ ಬಳಿಯಿರುವ ಖಾಲಿ ಜಾಗದಲ್ಲಿ ಒಂದು ದೊಡ್ಡ ನಿವೇಶನವನ್ನು ಉದಾರವಾಗಿ ಕೊಟ್ಟಿರುತ್ತಾರೆ

## ಬೆಂಗಳೂರಿನಲ್ಲಿ ರಿಜರ್ವ್ ಬ್ಯಾಂಕ್ ಶಾಖೆ

ಭಾರತ ರಿಜರ್ವ್ ಬ್ಯಾಂಕ್ ಶಾಖೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದು ಈ ಸಂಬಂಧವಾಗಿ ಬ್ಯಾಂಕಿನ ಸೀನಿಯರ್ ಡೆಪ್ಯುಟಿ ಗವರ್ನರ್ ಜನಾಬ್ ... ನೇಕ್ರಿವಾಲರು ೧೮ನೇ ತಾ।। ಬರಲಿರುವರು.

○ರಾಜ್ಯಾಂಗ ಸಭೆಯನ್ನು ವಿಸರ್ಜನೆ ಮಾಡುವ ನಿರ್ಣಯವನ್ನು ನಾಳೆ ಶ್ರೀ ಕೆ ಸಿ ರೆಡ್ಡಿಯವರ ಸಭೆಯಲ್ಲಿ ಮಂಡಿಸಲಿ[ದ್ದಾರೆ]

## ವಿ. ವೆಂಕಟಪ್ಪನವರೇ ಶಾಸನ ಸಭಾಧ್ಯಕ್ಷರು

ಸ್ವಂ.ಸು ಫೋ।।] ಬೆಂಗಳೂರು ೧೧

ಈ ಬೆಳಗ್ಗೆ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆ ನಡೆದು ಶ್ರೀ ವಿ. ವೆಂಕಟಪ್ಪನವರನ್ನು ಶಾಸನ ಸಭಾಧ್ಯಕ್ಷ(ಸ್ಪೀಕರ್) ಸ್ಥಾನಕ್ಕೆ ನಿಲ್ಲಿಸುವಂತೆ ತೀರ್ಮಾನವಾಯಿತು ಶ್ರೀಗಳಾದ ಟಿ. ಸುಬ್ರಹ್ಮಣ್ಯಂ, ಕೆ. ಭೀಮಪ್ಪನಾಯಕ್, ಹೆಚ್. ಕೆ ವೀರಣ್ಣಗೌಡ, ಹೆಚ್. ಎಂ. ಚನ್ನಬಸಪ್ಪ, ಇವರುಗಳ ಹೆಸರುಗಳನ್ನೂ ಸೂಚಿಸಲಾಗಿತ್ತು. ಆದರೆ ಅವರು ತಮ್ಮ ಹೆಸರುಗಳನ್ನು ಹಿಂದಕ್ಕೆ ತೆಗೆದುಕೊಂಡರು ಶ್ರೀ ಕೆ. ಸಿ. ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು ನಾಳೆ ಉಪಾಧ್ಯಕ್ಷರ ಚುನಾವಣೆ ನಡೆಯುವುದು

○೨೬ನೇ ತಾ।। ನಡೆಯುವ ವಿಶೇಷ ದರ್ಬಾರಿಗೆ ಸುಮಾರು ೧೦೦೦ ಜನರನ್ನು ಅತಿಥಿಗಳಾಗಿ ಆಹ್ವಾನಿಸಲಾಗುವುದು.

○ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿ ಶ್ರೀಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರು ಈ ಬೆಳಗ್ಗೆ ಇಲ್ಲಿಗೆ ಬಂದರು ರೈಲ್ವೆ ಸಚಿವ ಶ್ರೀ ಹೆಚ್ ಸಿದ್ದಯ್ಯ ಮತ್ತು ಹೈದರಾಬಾದ್ ಸಚಿವ ಶ್ರೀ ಬಾಪ್ಲೆಯವರೊಡನೆ ಅವರು ಸಮಾಲೋಚನೆ ನಡೆಸಿದರು. ವಿಮಾನ ಕಾರ್ಖಾನೆಯಲ್ಲಿ ತಯಾರಾಗುತ್ತಿರುವ ರೈಲ್ವೆ ಗಾಡಿಗಳನ್ನು ಅವರು ಪರಿಶೀಲಿಸಿದರು

## ರಾಷ್ಟ್ರಾಧ್ಯಕ್ಷರಿಗೆ ಅರ್ಪಿಸುವ ಹೈದರಾಬಾದಿನ ರಥ

ಹೈದರಾಬಾದ್ ನೈಜಾಮರು ಭಾರತದ ಮೊದಲನೇ ಅಧ್ಯಕ್ಷರಿಗೆ ಅರ್ಪಿಸಲಿರುವ ರಥದ ಬಗ್ಗೆ ಈ ಕೆಳಗೆ ಕಂಡ ಹೆಚ್ಚಿನ ವಿವರಗಳು ತಿಳಿದುಬಂದಿವೆ -ಸಂಸ್ಥಾನದಲ್ಲಿ ನಡೆಯುವ ವಿಶೇಷ ಉತ್ಸವ ಸಂದರ್ಭಗಳಲ್ಲಿ ರಾಜರು ಉಪಯೋಗಿಸುತ್ತಿದ್ದ ೩ ರಥಗಳ ಪೈಕಿ ಇದು ಒಂದು ಇದುವರೆಗೆ ೪ ಕುದುರೆಗಳನ್ನು ಮಾತ್ರ ಅದಕ್ಕೆ ಕಟ್ಟಲಾಗುತ್ತಿತ್ತು ಇನ್ನು ಮುಂದೆ ೧೨ ಕುದುರೆಗಳನ್ನು ಕಟ್ಟುವಂತೆ ಅದನ್ನು ಸಜ್ಜುಗೊಳಿಸಲಾಗಿದೆ ೭೦ ವರ್ಷಗಳ ಹಿಂದೆ ಹಿಂದಿನ ನೈಜಾಮರು ಮೇಲ್ಕಂಡ ಮೂರು ರಥಗಳನ್ನು ಕೊಂಡುಕೊಂಡರು ಬ್ರಿಟಿಷ್ ಚಕ್ರವರ್ತಿಗಳ ಪಾರ್ಲಿಮೆಂಟ್ ಸಭೆಗೆ ಸಕಲ ಮರ್ಯಾದೆಗಳೊಡನೆ ತೆರಳುವಾಗ ಉಪಯೋಗಿಸುವ ಸಾರೋಟಿನಂತೆಯೇ ಈ ಗಾಡಿಗಳೂ ಇರುತ್ತವೆ ಇಂದಿನ ನೈಜಾಮರು ೧೯೧೧ ರಲ್ಲಿ ದೆಹಲಿ ದರ್ಬಾರಿಗೆ ಹೋಗಿದ್ದಾಗ ಒಂದು ಬಾರಿ ಮಾತ್ರ ಈ ರಥವನ್ನು ಉಪಯೋಗಿಸಿದ್ದರೆಂದು ಗೊತ್ತಾಗಿದೆ.

## ಪ್ರಭುಗಳೊಡನೆ ಕೆ. ಸಿ ರೆಡ್ಡಿಯವರ ಭೇಟಿ

ಪ್ರಧಾನ ಸಚಿವ ಶ್ರೀ ಕೆ ಸಿ ರೆಡ್ಡಿಯವರು ಈದಿನ ಬೆಂಗಳೂರಿನಿಂದ ರಾಜಧಾನಿಗೆ ಆಗಮಿಸಿ, ಪ್ರಭುಗಳವರನ್ನು ಭೇಟಿ ಮಾಡಿದ್ದರೆಂದು ತಿಳಿದು ಬಂದಿದೆ

## ಮೇನನ್ನರ ಆಗಮನ

ಭಾರತ ಸರ್ಕಾರದ ಸಂಸ್ಥಾನಗಳ ಶಾಖಾ ಸಲಹೆಗಾರರಾದ ಶ್ರೀ ವಿ ಪಿ ಮೆನನ್ನರವರು ಈ ದಿನ ಮೈಸೂರಿಗೆ ವಿಮಾನದ ಮೂಲಕ ಆಗಮಿಸಿದರು.

## ಏಷ್ಯಾದಲ್ಲಿ ಕಮ್ಯೂನಿಸಂ ಹರಡಲು ಸ್ಟಾಲಿನ್-ಮಾವೊತ್ಸೆ ಟುಂಗ್ ಮಾತುಕತೆ

ಇಡೀ ಏಷ್ಯಾಖಂಡವನ್ನು ಕಮ್ಯೂನಿಸಂ ತತ್ವಾನುಯಾಯಿಗಳನ್ನಾಗಿ ಮಾಡಲು ಒಂದು ಯೋಜನೆಯನ್ನು ಕುರಿತು ಚೀನಾ ಕಮ್ಯೂನಿಸ್ಟ್ ನಾಯಕರಾದ ಮಾವೊತ್ಸೆಟುಂಗ್ ಮತ್ತು ರಷ್ಯದ ಮಾರ್ಷಲ್ ಸ್ಟಾಲಿನ್ ರವರುಗಳು ಮಾತುಕತೆ ನಡೆಸುತ್ತಿರುವರೆಂದು ಹೇಳಲಾಗಿದೆ. ಕಳೆದ ತಿಂಗಳ ೨೬ ರಿಂದಲೂ ಮಾವೊತ್ಸೆಟುಂಗರು ಮಾಸ್ಕೋನಲ್ಲಿಯೇ ಇರುವರು. ಈ ಯೋಜನೆ ಪ್ರಕಾರ ಚೀನಾದಲ್ಲಿಲ್ಲದೆ ಸಂಪೂರ್ಣವಾಗಿ ಆ ತತ್ವವನ್ನು ಜಾರಿಗೆ ಕೊಡುವುದು, ಇತರ ಕಡೆಗಳಲ್ಲಿರುವ ಕಮ್ಯೂನಿಸ್ಟರಿಗೆ ಶಸ್ತ್ರಾಸ್ತ್ರಗಳನ್ನೊದಗಿಸಿ ಅವರು ಆಯಾ ಸರ್ಕಾರಗಳ ಮೇಲೆ ಬೀಳುವಂತೆ ಮಾಡುವುದು ಮತ್ತು ಭಾರತ ಮುಂತಾದ ದೇಶಗಳಲ್ಲಿರುವವರಿಗೆ ಸಹಾಯ ನೀಡುವುದು-ಇವೇ ಮುಂತಾದ ಕಾರ್ಯಕ್ರಮಗಳನ್ನು ಹಾಕಲಾಗಿದೆ

## ಫಾರ್ಮೋಸಾ ದ್ವೀಪದಲ್ಲಿ ಕಮ್ಯೂನಿಸ್ಟರ ಹಾವಳಿ

ಫಾರ್ಮೋಸಾ ದ್ವೀಪದಲ್ಲಿ ಚೀಣೀ ಕಮ್ಯೂನಿಸ್ಟ್ ಕ್ರಾಂತಿಕಾರರು ಮತ್ತು ಪಂಚಮ ದಳದವರು ಹೆಚ್ಚಿಕೊಂಡಿರುವುದಾಗಿ ಮುಖ್ಯ ಮಂತ್ರಿ ಯೇಷಿರ್ವಾ ರವರು ತಿಳಿಸಿರುತ್ತಾರೆ. ಇವರುಗಳು ದೋಣಿಗಳ ಮುಖಾಂತರ ಚೀನಾದಿಂದ ಫಾರ್ಮೋಸಾವಿಗೆ ಬಂದಿರುವುದಾಗಿ ಹೇಳಲಾಗಿದೆ.

## ಬ್ರಿಟನ್ನಿನಲ್ಲಿ ಮುಂದಿನ ತಿಂಗಳು ಮಹಾ ಚುನಾವಣೆ

ಬರುವ ತಿಂಗಳು ೨೬ ಅಥವಾ ಆ ದಿನಕ್ಕೆ ಮುಂಚಿತವಾಗಿ ಬ್ರಿಟನ್ನಿನಲ್ಲಿ ಮಹಾ ಚುನಾವಣೆಗಳಾಗುವುವೆಂದು ತಿಳಿಸಲಾಗಿದೆ

## ಸೂರ್ಯ ಗ್ರಹದ ಹತ್ತಿರ ಅಪೂರ್ವ ತೇಜಸ್ಸು

ಸೂರ್ಯ ಗ್ರಹದ ಹತ್ತಿರ ಅಪೂರ್ವವಾದ ತೇಜಸ್ಸು ಕಾಣಬರುತ್ತಿರುವುದನ್ನು ಕುಂಭಕೋಣದ ಜ್ಯೋತಿಷ ಶಾಸ್ತ್ರಜ್ಞರು [illegible] ಮಾಡುತ್ತಿರುವರೆಂದು ಹೇಳಲಾಗಿದೆ. ಸಂಜೆ ಅಸ್ತಮಯವಾಗುವುದಕ್ಕೆ ೧ ಗಂಟೆ ಮುಂಚಿತವಾಗಿ ಈ ಹೊಸ ಪ್ರಕಾಶವು ಕಣ್ಣಿಗೆ ಕಾಣುವುದೆಂದು ಹೇಳಲಾಗಿದೆ. ಈ ತೇಜಸ್ಸು ಚಂದ್ರನ ಪ್ರಕಾಶಕ್ಕಿಂತಲೂ ಹೆಚ್ಚು ಪ್ರಕಾಶಮಯವಾಗಿದೆಯೆಂದು ಹೇಳಲಾಗಿದೆ.

## ಪಶ್ಚಿಮ ಬಂಗಾಳಾ ಪ್ರಧಾನಿ ರಾಯಿಗೆ ಕಲ್ಲೇಟು

ಪಶ್ಚಿಮ ಬಂಗಾಳದ ಪ್ರಧಾನಿ ಡಾ|| ಬಿ. ಸಿ. ರಾಯರವರು ಪ್ರವಾಸ ಕೈಗೊಂಡಿದ್ದಾಗ ಹಲವು [illegible] ಅವರ ಕಾರಿನ ಮೇಲೆ ಕಲ್ಲುಗಳನ್ನು ಎಸೆದರೆಂದೂ, ರಸ್ತೆಗೆ [illegible] ಗಳನ್ನು ತೆಗೆಯಲು ಆಜ್ಞೆ [illegible] ಯನ್ನ ಮಾಡಿದರೆಂದೂ ವರದಿಯಾಗಿದೆ

## ಹೊರದೇಶಗಳಿಗೆ ವಿದ್ಯಾರ್ಥಿಗಳನ್ನು [illegible]

[illegible] ಶಿಕ್ಷಣದ ಮಟ್ಟವನ್ನು ನಾವು ನಮ್ಮ ದೇಶದಲ್ಲಿ ಹೊಂದಬೇಕು. ಹೊರದೇಶಗಳಿಗೆ ನಮ್ಮ ವಿದ್ಯಾರ್ಥಿಗಳನ್ನು ಹೆಚ್ಚಿನ ಶಿಕ್ಷಣಕ್ಕಾಗಿ ಕಳುಹಿಸುವುದನ್ನು ಇನ್ನು ಮುಂದೆ ನಿಲ್ಲಿಸಬೇಕು —ಎಂಬುದಾಗಿ ಭಾರತದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ್ ಕೌರರು ಹೇಳುತ್ತಾರೆ

—:§:—

## ಅಕ್ಕಿ ವಾಪಸು ಪಡೆಯಲು ಮದ್ರಾಸಿನ ಹೊಸ ವಿಧಾನ

ಮದರಾಸಿನಲ್ಲಿ ಈಗ ಇರುವ ದಾಸ್ತಾನು ಖರ್ಚಾಗದೆ ಉಳಿಸಿಕೊಳ್ಳುವುದಕ್ಕಾಗಿ ಮದ್ರಾಸು ಸರ್ಕಾರದವರು ಹೊಸ ಏರ್ಪಾಡೊಂದನ್ನು ಮಾಡಿರುವರು. ಇದರ ಪ್ರಕಾರ ರೇಷನ್ ಇರುವ ಪಟ್ಟಣ ಮತ್ತು ಹಳ್ಳಿಗಳಲ್ಲಿರುವ ಕಾರ್ಡುದಾರರು ತಾವು ವಾಪಸು ಕೊಡುವ ಪ್ರತಿಯೊಂದು ಔನ್ಸು ಅಕ್ಕಿಗೆ ಪ್ರತಿಯಾಗಿ ಎರಡು ಔನ್ಸು ಇತರ ಧಾನ್ಯವನ್ನು ಕೊಡಲಾಗುವುದು.

## ಅ|| ಭಾ|| ಕೊರಾನ್ ಸಮ್ಮೇಳನ

ಕೊರಾನಿನ ಉಪದೇಶಗಳನ್ನು ಪ್ರಸಾರ ಮಾಡುವುದಕ್ಕಾಗಿ ಅಖಿಲ ಭಾರತ ಕೊರಾನ್ ಸಮ್ಮೇಳನವೊಂದನ್ನು ಕರೆಯಲು ಅಹಮದಾಬಾದಿನಲ್ಲಿ ಪ್ರಯತ್ನಗಳಾಗುತ್ತಿವೆ. ಪ್ರಮುಖ ಮುಸ್ಲಿಮರು ಮತ್ತು ಮುಸ್ಲಿಮೇತರರನ್ನು [illegible] ಸಮ್ಮೇಳನಕ್ಕೆ [illegible] ಏರ್ಪಾಡಾಗಿದೆ

## ಹೋಂಗಾರ್ಡುಗಳ ಪ್ರವಾಸ

ಸ್ವಂ. ವ.] ಗುಂಡ್ಲುಪೇಟೆ

ಇಲ್ಲಿನ ಹೋಮ್ ಗಾರ್ಡ್ಸ್ ದಳದವರು ಕಮ್ಯಾಂಡರ್ ಶ್ರೀ ಜಿ. ಎಸ್. ನಾರಾಯಣರವರ ನೇತೃತ್ವದಲ್ಲಿ ಶ್ರೀ [illegible] ಸಾರ್ವತ್ರಿಕ ಬೆಟ್ಟಕ್ಕೆ ಮೊನ್ನೆ ದಿನ ಪ್ರವಾಸ ಹೋಗಿ ಮಾರನೆಯ ದಿನ ಸಾಯಂಕಾಲ ಹಿಂದಿರುಗಿದರು. ತಾಲ್ಲೂಕು ಪೋಲೀಸ್ ಇನ್ಸ್ಪೆಕ್ಟರವರೂ ಡೆವಲಪ್ ಮೆಂಟ್ ಕಮಿಟಿ ಅಧ್ಯಕ್ಷರೂ ಶ್ರೀ ಬಿ. [illegible] ಶ್ರೀ ಸಿ ಆರ್ ಪುಟ್ಟಣ್ಣನವರೂ ವಿಶೇಷ ಅತಿಥಿಗಳಾಗಿ ದಯಮಾಡಿಸಿದ್ದರು. ಬೆಟ್ಟದ ಮೇಲೆ ಹೋಮ್ ಗಾರ್ಡ್ಸ್ ದಳದವರಿಂದ ಪೆರೇಡ್, ವಿವಿಧ ವಿನೋದಾವಳಿ ಇತ್ಯಾದಿಗಳು ಯಶಸ್ವಿಯಾಗಿ ನಡೆದವು. ಶ್ರೀ ದೊಡ್ಡಯ್ಯನವರೂ ಮತ್ತು ಪೋಲೀಸ್ ಇನ್ಸ್ಪೆಕ್ಟರವರೂ ದಳದ ಸೆಲ್ಯೂಟ್ ಸ್ವೀಕರಿಸಿ ಹೋಮ್ ಗಾರ್ಡ್‌ಗಳಿಗೆ ಹಿತೋಕ್ತಿಗಳನ್ನು ನುಡಿದರು. ಏರ್ಪಾಟುಗಳೆಲ್ಲವೂ ಸಮರ್ಪಕವಾಗಿರುವಂತೆ ಸಹಕರಿಸಿದ ದೇವಸ್ಥಾನದವರೂ, ಗ್ರಾಮಾಧಿಕಾರಿಗಳೂ ಅಭಿನಂದನಾರ್ಹರು.

## ಶ್ರೀ ತ್ಯಾಗರಾಜ ಮತ್ತು ಪುರಂದರ ದಾಸರ ಜಯಂತಿ

ಮೈಸೂರು ಶ್ರೀ ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ ಇದೇ ತಿಂಗಳು ೨೧ ಮತ್ತು ೨೨ನೇ ತಾ|| ಗಳಲ್ಲಿ ಶ್ರೀ ತ್ಯಾಗರಾಜ ಮತ್ತು ಪುರಂದರದಾಸರ ಜಯಂತ್ಯುತ್ಸವಗಳನ್ನು ನೆರವೇರಿಸಲಾಗುವುದು ೨೨ನೇ ತಾ|| ಸಂಗೀತ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಇದರಲ್ಲಿ ಭಾಗವಹಿಸುವವರು ಶ್ರೀ ತ್ಯಾಗರಾಜರ ಅಥವಾ ಪುರಂದರ ದಾಸರ ಅಥವಾ ಮುತ್ತುಸ್ವಾಮಿ ದೀಕ್ಷಿತರ ಕೀರ್ತನೆಗಳನ್ನು ಹಾಡುವುದರಲ್ಲಿ ಯಾವುದಾದರೂ ಒಂದು ಭಾಗಕ್ಕೆ ಸ್ಪರ್ಧಿಸಬಹುದು, ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿಗಳವರಿಂದ ಪಡೆಯಬಹುದು. ಸ್ಪರ್ಧಿಸುವವರು ಅರ್ಜಿಗಳನ್ನು ಇದೇ ೨೦ನೇ ತಾ|| ಯೊಳಗೆ ಕಾರ್ಯದರ್ಶಿಗಳವರಿಗೆ ಕಳುಹಿಸಬೇಕು.

## ರಷ್ಯದ ಪ್ರತಿನಿಧಿಯ ಸಭಾ ಪರಿತ್ಯಾಗ

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಸಭೆಯು ನಿನ್ನೆ ಸೇರಿದ್ದಾಗ ರಾಷ್ಟ್ರೀಯ ಚೀನಾದ ಪ್ರತಿನಿಧಿ ಚಂಗ್ ರವರು ಅದರಲ್ಲಿ ಭಾಗವಹಿಸಿ ಅಧ್ಯಕ್ಷರಾಗಿರುವುದನ್ನು ಪ್ರತಿಭಟಿಸಿ ರಷ್ಯದ ಪ್ರತಿನಿಧಿ ಜಾಕೋಬ್ ಮಲ್ಲಿಕ್ ರವರು ಸಭಾ ಪರಿತ್ಯಾಗ ಮಾಡಿದರು. ರಾಷ್ಟ್ರೀಯ ಚೀನಾದ ಪ್ರತಿನಿಧಿಯನ್ನು ಸಮಿತಿಯಿಂದ ಹೊರದೂಡಬೇಕೆಂದು ಕಮ್ಯೂನಿಸ್ಟ್ ಚೀನಾ ಸರ್ಕಾರದಿಂದ ಬಂದಿದ್ದ ಸೂಚನೆಯನ್ನು ರಷ್ಯದ ಪ್ರತಿನಿಧಿಯು ಸಮರ್ಥಿಸಿದರು. ಈ ವಿಷಯವನ್ನು ಪರಿಶೀಲಿಸಲು ಕಾಲಾವಕಾಶ ಬೇಕೆಂದು ಅಧ್ಯಕ್ಷರು ರೂಲಿಂಗ್ ಕೊಟ್ಟು ಸದರಿ ಸಲಹೆಯನ್ನು ತಳ್ಳಿ ಹಾಕಿದರು. ಚೀನಾದ ಪ್ರತಿನಿಧಿಯನ್ನು ಹೊರಗೆ ಕಳುಹಿಸುವವರೆಗೆ ತಾವು ಸಭೆಯಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿ ಮಲ್ಲಿಕ್‌ರವರು ಹೊರಟು ಹೋದರು.


ಗಾಯತ್ರೀ ಟಾಕೀಸ್

11-1-50ರಿಂದ 2 ದಿನಗಳು ಮಾತ್ರ
ದಿನವಹಿ 3 ಆಟಗಳು
ಅದ್ಭುತ ಸಾಹಸಮಯ ಚಿತ್ರ.

ಕ್ಲೋಕ್ ಅಂಡ್ ಡ್ಯಾಗರ್

Cloak & Dagger

ಪಾತ್ರ:-ಗ್ಯಾರಿ ಕೂಪರ್, ರಾಬರ್ಟ್ ಅಲ್ಡ

-:ಮುಂದಿನ ಬದಲಾವಣೆ:-
ಸಾರೋಫುಲ್ ಜೋನ್ಸ್
SORROWFUL JONES



ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಕ್ರಿಸ್‌ಮಸ್ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವು ಈ ಮಾಹೆ ೪ನೇ ತಾರೀಖಿನಿಂದ ನಡೆಯುತ್ತಿದೆ. ಪೋಷಕ ಮಹಾಶಯರು ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಬೇಕಾಗಿ ವಿನಂತಿ. ಶಿಶುವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಹನೀಯರು ಕಾಲವಿಳಂಬ ಮಾಡದೆ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ

ಡಿ. ಕೃಷ್ಣಮೂರ್ತಿ,
ವ್ಯವಸ್ಥಾಪಕ



ಗುರುದೇವಾ ಹಾಲ್
(ಬೆಂಗಳೂರು ಜವಳಿ ಅಂಗಡಿ)
ಶಿವರಾಂಪೇಟೆ, ಮೈಸೂರು

ಗ್ಯಾರಂಟಿಯಾದ ಬಣ್ಣ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಸೀರೆಗಳು ಬಂದಿವೆ
ಒಂದಾವರ್ತಿ ಭೇಟಿ ಕೊಡಿ



ಪ್ರಭುದೇವಾ ಟಾಕೀಸ್ ★ 13-1-50 ನೇ
ದಿನವಹಿ ೪ ಆಟಗಳು ಶುಕ್ರವಾರದಿಂದ

★ ಭೂಲೋಕ ರಂಭೆ ★ (ತಮಿಳು)

ಪಾತ್ರ:- ಟಿ. ಆರ್. ಮಹಾಲಿಂಗಂ, ಕೃಷ್ಣ, ಮಧುರಂ ಮುಂತಾದವರು

-: ಪೊಂಗಲ್ ಸ್ಪೆಷಲ್ ಪ್ರೋಗ್ರಾಂ :-

M. G. M's Release NEHRU IN U. S. A.

ಪಂಡಿತ ನೆಹರೂರವರ ಅಮೆರಿಕಾ ಪ್ರವಾಸದ ಚಿತ್ರಗಳನ್ನೂ ಪ್ರದರ್ಶಿಸಲಾಗುವುದು


Edited, Printed and published by A. K. Nagarajan at Sadhvi Press, D.Subbiah Road, Mysore.

ಕೋ|| ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಗುರುವಾರ ೧೨-೧-೫೦ [ಸಂಚಿಕೆ ೧೪೭

# - ಮಂತ್ರಿಮಂಡಲದ - ಪುನರ್ರಚನೆ ನಾಳಿದ್ದು

## ರಿಪಬ್ಲಿಕ್ ದಿನಾಚರಣೆಗಾಗಿ ೫೦೦೦ ರೂಪಾಯಿ

### ಪೌರಸಭೆಯಲ್ಲಿ ಮಂಜೂರಾತಿ

ಮೈಸೂರು ೧೨

ಈ ತಿಂಗಳು ೨೬ನೇ ತಾ|| ನಡೆಯಲಿರುವ ಸ್ವಾತಂತ್ರ್ಯದಿನಾಚರಣೆಯ ಕಾರ್ಯಕ್ರಮಗಳಿಗಾಗಿ ೫೦೦೦ ರೂಪಾಯಿಗಳಿಗೆ ಮೀರದಂತೆ ಖರ್ಚು ಮಾಡಬಹುದೆಂಬ ನಿರ್ಣಯವನ್ನು ನಿನ್ನೆ ನಡೆದ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ಮಾಡಲಾಯಿತು. ಶ್ರೀ ಜಿ ಎಸ್. ನಾಗರಾಜರಾಯರು ಅಧ್ಯಕ್ಷತೆ ವಹಿಸಿದ್ದರು. ಇದಕ್ಕಾಗಿ ಶ್ರೀಗಳಾದ ಎಸ್ ಲಿಂಗಣ್ಣ, ಟಿ ವೆಂಕಟರಮಣಯ್ಯ, ಕೃಷ್ಣಮೂರ್ತಿರಾವ್ ರೀ|| ಫಾ|| ಅಡಿಯೋ ಮತ್ತು ಜ|| ಮಿರ್ ನೂರ್ ಜಂಶೀರವರನ್ನೊಳಗೊಂಡ ಉಪಸಮಿತಿಯನ್ನು ರಚಿಸಲಾಯಿತು

೨೦೦೦ ರೂ.ಗೆ ಮಾರದಂತೆ ವೆಚ್ಚ ಮಾಡಬೇಕೆಂದು ಶ್ರೀ ಎ. ವೆಂಕಟೇಶಯ್ಯನವರು ತಂದ ತಿದ್ದುಪಡಿಯು ಬಿದ್ದುಹೋಯಿತು

### ರಣಜೋಧ ಸಿಂಗರು ದೆಹಲಿಗೆ

ಇದೇ ತಿಂಗಳು ೧೨ ನೇ ತಾರೀಖಿನಿಂದ ೧೪ ರವರೆಗೆ ದೆಹಲಿಯಲ್ಲಿ ನಡೆಯುವ ಪ್ರಾಂತ್ಯ ಮತ್ತು ಸಂಸ್ಥಾನಗಳ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲರ ಸಮ್ಮೇಳನದಲ್ಲಿ ಭಾಗವಹಿಸಲು ಸಂಸ್ಥಾನದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲರಾದ ಶ್ರೀ ಸಿ ಎಂ. ಹೆಚ್ ರಣಜೋಧಸಿಂಗರವರು ಅಲ್ಲಿಗೆ ತೆರಳಿದರು.

### ವಿಶೇಷ ಸೇವೆ ಮತ್ತು ಅರ್ಚನೆ

ರಾಮಾನುಜಾ ರಸ್ತೆಯ ೭ನೇ ನಂಬರಿನ ಮನೆಯಲ್ಲಿರುವ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಇದೇ ೧೪ನೇ ತಾ|| ಶನಿವಾರದಿಂದ ಕರ್ನಾಟಕ ಸಂಕ್ರಮಣದ ಪ್ರಯುಕ್ತ ವಿಶೇಷ ಸೇವೆ, ಕಾಲತ್ರಯಾರ್ಚನೆಗಳು ಸ್ವತಂತ್ರ ದಿನಾಚರಣೆಯವರಿಗೆ ವಿಶೇಷ ಜಪಗಳು ದೇಶಕಲ್ಯಾಣಕ್ಕಾಗಿ ನಡೆಯುವುವೆಂದು ತಿಳಿಸಲಾಗಿದೆ.

### ಭಾರತದ ಅಧ್ಯಕ್ಷರ ಮೆರವಣಿಗೆ

ಈ ತಿಂಗಳು ೨೬ ನೇ ತಾ|| ಭಾರತದ ನೂತನ ಅಧ್ಯಕ್ಷರ ಮೆರವಣಿಗೆಯು ದೆಹಲಿಯಲ್ಲಿ ೭೫ ನಿಮಿಷ ಕಾಲ ನಡೆಯುವಂತೆ ಏರ್ಪಾಡಾಗಿರುತ್ತದೆ. ಸರ್ಕಾರಿ ಭವನದಿಂದ ಇರ್ವಿನ್ ಸ್ಟೇಡಿಯಮ್ಮಿಗೆ ಅಧ್ಯಕ್ಷರು ಅಂದು ಮಧ್ಯಾಹ್ನ ೨-೩೦ ಗಂಟೆಗೆ ಸಕಲ ಮರ್ಯಾದೆಗಳೊಡನೆ ತೆರಳುವರು ಅಲ್ಲಿ ರಕ್ಷಣಾ ದಳದ ಅಧಿಕಾರಿಗಳು ಅವರನ್ನು ಸ್ವಾಗತಿಸುವರು. ಅನಂತರ ಅಧ್ಯಕ್ಷರು ರಾಷ್ಟ್ರಧ್ವಜವನ್ನು ಹಾರಿಸುವರು ತರುವಾಯ ಜೀಪ್ ಕಾರಿನಲ್ಲಿ ಕುಳಿತು ಸೈನ್ಯ ಪಡೆಗಳನ್ನು ಪರಿಶೀಲಿಸುವರು. ದಾರಿಯುದ್ದಕ್ಕೂ ಪೊಲೀಸ್ ಮತ್ತು ಸೈನಿಕದವರು ಸಾಲಾಗಿ ನಿಂತು ಅವರಿಗೆ ಗೌರವವನ್ನು ಸೂಚಿಸುವರು

### ಸಕ್ಕರೆ ಕಾರ್ಖಾನೆಯಲ್ಲಿ ಮುಷ್ಕರ

ಹೆಚ್ಚಿನ ಸಂಬಳ, ಬೋನಸ್, ರಜಾ ಮುಂತಾದ ಬೇಡಿಕೆಗಳನ್ನು ಈಡೇರಿಸದೇ ಇದ್ದುದರಿಂದ ನಂಜನಗೂಡು ಸಕ್ಕರೆ ಕಾರ್ಖಾನೆಯ ೧೦೦ ಜನ ಕೆಲಸಗಾರರು ಕಳೆದ ಬುಧವಾರದಿಂದ ಮುಷ್ಕರ ಹೂಡಿರುವುದಾಗಿ ತಿಳಿದುಬಂದಿದೆ

ಕ್ರಿಕೆಟ್ಟಿನ ಪಂದ್ಯಾಟದ ಟಿಕೆಟ್‌ಗಳನ್ನು ೨೦ ೩ ರಿಂದ ೧೧ ರವರೆಗು ಇಳಿಸುವಂತೆ ... ಸರ್ಕಾರ ... ಪತ್ರಿಕೆ ... ವೆ ತ್ತಾರೆ

## ಪೌರಸಭೆಯ ವಿವಿಧ ಸಮಿತಿಗಳ ರಚನೆ

ಮೈಸೂರು ೧೨

ಪುನರ್ರಚಿತವಾದ ಮೈಸೂರು ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆ ಶ್ರೀ ಜಿ ಎಸ್ ನಾಗರಾಜರಾಯರ ಅಧ್ಯಕ್ಷತೆಯಲ್ಲಿ ನಡೆದು ಈ ಕೆಳಗೆ ಕಂಡಂತೆ ವಿವಿಧ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲಾಯಿತು ಪ್ರಜಾ ಸಂಘದವರು ಸೂಚಿಸಿದವರೆಲ್ಲರೂ ಪರಾಜಿತರಾದರು. ಕಾಂಗ್ರೆಸ್ಸಿನ ಕಡೆಯ ಉಮೇದುವಾರರೇ ಆರಿಸಲ್ಪಟ್ಟರು.

ಮ್ಯಾನೇಜಿಂಗ್ ಸಮಿತಿ.- ಶ್ರೀಗಳಾದ ಎ ಕೃಷ್ಣಮೂರ್ತಿರಾವ್, ಟಿ ಎಸ್ ರಾಜಗೋಪಾಲಯ್ಯಂಗಾರ್, ಎಂ. ಎಲ್ ರಾಮಚಂದ್ರರಾವ್, ಬಿ ಎಲ್ ರಾಮಸ್ವಾಮಿ ಶೆಟ್ಟಿ, ಜಿ ಲಿಂಗಯ್ಯ, ಜಿ ಬಿ ರಂಗಸ್ವಾಮಯ್ಯ ಮತ್ತು ಜ|| ಗುಲಾಂ ಅಹಮದ್ ಖಾನ್, ಮೀರ್ ನೂರ್ ಹುಸೇನ್

ವರ್ಕ್ಸ್ ಸಮಿತಿ:- ಶ್ರೀಗಳಾದ ಕೆ ಸೀತಾರಾಮಯ್ಯ, ಚೌಡಯ್ಯ, ಟಿ ವೆಂಕಟರಮಣಯ್ಯ ಮತ್ತು ಜ|| ಮೀರ್ ನೂರ್ ಹುಸೇನ್

ಆರೋಗ್ಯ ಸಮಿತಿ.- ಶ್ರೀಗಳಾದ ಟಿ ನರಸಿಂಹಯ್ಯಂಗಾರ್: ಕೆ. ಪುಟ್ಟಸ್ವಾಮಿ ರೀ|| ಫಾ|| ಅಡಿಯೋ ಮತ್ತು ಜ|| ಅಹಮದ್ ಖಾನ್

ಟೌನ್‌ಹಾಲ್ ಸಮಿತಿ — ಶ್ರೀಗಳಾದ ಟಿ ನರಸಿಂಹಯ್ಯಂಗಾರ್, ಟಿ ವೆಂಕಟರಮಣಯ್ಯ ಎಸ್ ರಾಜಯ್ಯ ಮತ್ತು ಎ ಕೃಷ್ಣಮೂರ್ತಿರಾವ್

ಲೀಗಲ್ ಸಮಿತಿ ಶ್ರೀಗಳಾದ ಕೆ ಸೀತಾರಾಮಯ್ಯ, ಟಿ ಎಸ್ ರಾಜಗೋಪಾಲಯ್ಯಂಗಾರ್ ಮತ್ತು ಜ|| ಮೀರ್ ನೂರ್ ಹುಸೇನ್

ಆಡಿಟ್ ಸಮಿತಿ -ಶ್ರೀಗಳಾದ ಎ ಕೃಷ್ಣಮೂರ್ತಿರಾವ್, ಟಿ ನರಸಿಂಹಯ್ಯಂಗಾರ್ ಮತ್ತು ಜ|| ಅಬ್ದುಲ್ ರಹಮಾನ್

ಪ್ರಾವಿಡೆಂಟ್ ಫಂಡ್ ಸಮಿತಿ — ಶ್ರೀಗಳಾದ ಟಿ ನರಸಿಂಹಯ್ಯಂಗಾರ್, ಕೆ ಪುಟ್ಟಸ್ವಾಮಿ ಮತ್ತು ಜ|| ಅಹಮದ್ ಖಾನ್

ನಗರಾಭಿವೃದ್ಧಿ ಸಮಿತಿಗೆ -ಶ್ರೀಗಳಾದ ಟಿ ವೆಂಕಟರಮಣಯ್ಯ ... ನರಸಿಂಹಯ್ಯಂಗಾರ್

## ೨೬ರಿಂದ ದೇಶದಲ್ಲೆಲ್ಲ ಒಂದೇ ರೀತಿಯ ಆಡಳಿತ

### ವಿ. ಪಿ. ಮೇನನ್ನರ ಹೇಳಿಕೆ

ಮೈಸೂರು ೧೨

ಭಾರತ ಸರ್ಕಾರದ ಸಂಸ್ಥಾನ ಶಾಖಾ ಸಲಹೆಗಾರರಾದ ಶ್ರೀ ವಿ ಪಿ ಮೇನನ್ನರು ನಿನ್ನೆ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿ ಸಂಸ್ಥಾನದ ಆಡಳಿತ ವಿವರಗಳನ್ನು ಕುರಿತು ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ ಪ್ರಭುಗಳಿಗೆ ಇನ್ನು ಮುಂದೆ ಸಲ್ಲುವ ರಾಜವೇತನ, ಪ್ರಭುಗಳಿಗೂ ಭಾರತ ಸರ್ಕಾರಕ್ಕೂ ಆಗಲಿರುವ ಒಪ್ಪಂದ, ಆರ್ಥಿಕ ಮುಂತಾದ ವಿಲೀನೀಕರಣ, ಪಬ್ಲಿಕ್ ಸರ್ವಿಸ್ ಕಮಿಷನ್ ಮುಂತಾದ ವಿಷಯಗಳ ಬಗ್ಗೆ ಅವರು ಈ ದಿನ ಬೆಂಗಳೂರಿನಲ್ಲಿ ಮುಖ್ಯ ಮಂತ್ರಿಗಳೊಡನೆ ಮಾತನಾಡಿ ಅಂತ್ಯ ನಿರ್ಧಾರಕ್ಕೆ ಬರಲಿದ್ದಾರೆ.

೨೬ನೇ ತಾ|| ನ ನಂತರ ಭಾರತ ಖಂಡದ ಎಲ್ಲೆಲ್ಲೂ ಒಂದೇ ನಮೂನೆಯ ರಾಜ್ಯಾಂಗವು ಜಾರಿಗೆ ಬರುವುದೆಂದೂ ಯಾವ ಕಡೆಯಲ್ಲಿಯೂ ಪ್ರತ್ಯೇಕ "ಘಟಕ ಸ್ವತಂತ್ರ"ವಾದ ವ್ಯವಸ್ಥೆಗೆ ಅವಕಾಶವಿರುವುದಿಲ್ಲವೆಂದೂ ಶ್ರೀ ಮೇನನ್ನರು ತಿಳಿಸಿದರು.

ಮತ್ತು ದೇಶದಲ್ಲೆಲ್ಲಾ ಒಂದೇ ರಾಷ್ಟ್ರಧ್ವಜವಿರುವುದರಿಂದಲೂ ಬೇರೆ ಬೇರೆ ಧ್ವಜಗಳಿರುವುದಿಲ್ಲವೆಂದೂ ಸಹಾ ಅವರು ಹೇಳಿದರು.

## ಇಟಲಿಯಲ್ಲಿ ೪೦ ಲಕ್ಷ ಕಾರ್ಮಿಕರ ಮುಷ್ಕರ

ಇಟಲಿಯ ಹಲವು ಪ್ರಮುಖ ಕೈಗಾರಿಕಾ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತಿರುವುದನ್ನು ಪ್ರತಿಭಟಿಸಲು ಇಟಲಿನ ಕಮ್ಯೂನಿಸ್ಟ್ ಮತ್ತು ಸೋಷಿಯಲಿಸ್ಟ್ ಕಾರ್ಮಿಕ ನಾಯಕರು ಮುಷ್ಕರವನ್ನು ಏರ್ಪಡಿಸಿದ್ದರು. ಮುಷ್ಕರಕಾರರನ್ನು ಚದುರಿಸಲು ಪೊಲೀಸರು ... ಹಾರಿಸಿದುದರ ಪರಿಣಾಮವಾಗಿ ೬ ಮಂದಿ ಮಡಿದರು, ೫೦ ಜನರಿಗೆ ಗಾಯಗಳಾದುವೆಂದು ವರದಿ ... ದಸ್ತಗಿರಿ ಮಾಡಲಾಗಿದೆ ಮರಣ ಹೊಂದಿದವರ ಬಗ್ಗೆ ಸಂತಾಪ ಸೂಚಕವಾಗಿ ... ಮತ್ತು ... ಮುಷ್ಕರ ...

## ನಾಳಿದ್ದು ನೂತನ ಮಂತ್ರಿಗಳ ಹೆಸರಿನ ಪ್ರಕಟಣೆ

ಮೈಸೂರು ೧೨

ಶ್ರೀ ಕೆ ಸಿ ರೆಡ್ಡಿಯವರು ನಿನ್ನೆ ಪ್ರಭುಗಳನ್ನು ಭೇಟಿ ಮಾಡಿದ ನಂತರ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುವಾಗ ನಾಳಿದ್ದು ಪುನಃ ರಾಜಧಾನಿಗೆ ಬರುವುದಾಗಿಯೂ ಆಗ ಹೊಸ ಮಂತ್ರಿಮಂಡಲದ ಹೆಸರುಗಳನ್ನು ಪ್ರಕಟಿಸುವುದಾಗಿಯೂ ತಿಳಿಸಿದರು ತಿರುವಣ್ಣಾಮಲೈ ಮತ್ತು ಪುದುಚೇರಿಗಳಿಗೆ ಭೇಟಿ ಇತ್ತ ಮೇಲೆ ತಮ್ಮ ಆರೋಗ್ಯವು ಉತ್ತಮಗೊಂಡು ಮನಸ್ಸಿಗೆ ನೆಮ್ಮದಿ ಉಂಟಾಗಿರುವುದಾಗಿಯೂ ಹೇಳಿದರು ಶ್ರೀಮನ್ಮಹಾರಾಜರವರಿಗೂ ಭಾರತ ಸರ್ಕಾರಕ್ಕೂ ಆಗುವ ಹೊಸ ಒಪ್ಪಂದದ ಪ್ರತಿಯನ್ನು ಪ್ರಭುಗಳ ರುಜುವಿನೊಡನೆ ತೆಗೆದುಕೊಂಡು ತಾವು ಈ ತಿಂಗಳು ೨೩ನೇ ತಾ|| ದೆಹಲಿಗೆ ತೆರಳುವುದಾಗಿಯೂ ರಿಪಬ್ಲಿಕ್ ದಿನಾಚರಣೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ೨೫ನೇ ತಾ|| ಹಿಂದಿರುಗುವುದಾಗಿಯೂ ಹೇಳಿದರು

### ಕರ್ನಾಟಕ ಸಂಘಗಳ ಸಮ್ಮೇಳನ

ನಾಳೆಯಿಂದ ೩ ದಿನಗಳ ಕಾಲ ಮೈಸೂರು ಮೊದಲನೇ ಗ್ರೇಡ್ ಕಾಲೇಜಿನಲ್ಲಿ ಭಾರತದ ಕರ್ನಾಟಕ ಸಂಘಗಳ ಸಮ್ಮೇಳನವು ಸಮಾವೇಶಗೊಳ್ಳಲಿದೆ ಪ್ರಮುಖ ಸಾಹಿತಿಗಳೂ, ಕವಿಗಳೂ ಭಾಷಣ ಮಾಡುವರು ಸಕಲರಿಗೂ ಸ್ವಾಗತವಿದೆ

## ಶಾಸನ ಸಭಾಧಿವೇಶನ

### ವಿ. ವೆಂಕಟಪ್ಪನವರಿಗೆ ಅಧ್ಯಕ್ಷಸ್ಥಾನ

ಸ್ವಂ ಸು ಫೋ] ಬೆಂಗಳೂರು ೧೨

ಈದಿನ ಮಧ್ಯಾಹ್ನ ನೂತನ ಶಾಸನ ಸಭೆಯು ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಇದುವರೆಗೆ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳು ಮಾಡಿರುವ ಕಾರ್ಯಗಳನ್ನು ಅಧ್ಯಕ್ಷರು ವಿವರಿಸಿ ಮುಂದೆ ಅದು ಅದೇ ಉನ್ನತ ಮಟ್ಟದಲ್ಲಿ ಮುನ್ನಡೆಯುವುದೆಂದು ಹಾರೈಸಿದರು

ಪ್ರತಿಸ್ಪರ್ಧಿಗಳಿಲ್ಲದಿರುವುದರಿಂದ ಶ್ರೀ ವಿ ವೆಂಕಟಪ್ಪನವರೇ ಅಧ್ಯಕ್ಷರಾಗಿ ಚುನಾಯಿತರಾಗಿರುವರೆಂದು ಅವರು ತಿಳಿಸಿದರು. ಮತ್ತು ಅದಕ್ಕೆ ಶ್ರೀಮನ್ಮಹಾರಾಜರವರ ಒಪ್ಪಿಗೆ ದೊರೆತಿರುವುದಾಗಿಯೂ ತಿಳಿಸಿದರು ಚುನಾವಣೆಯಾಗುವುದಕ್ಕೆ ಮುಂಚೆಯೇ ಪ್ರಭುಗಳ ಒಪ್ಪಿಗೆ ದೊರೆತಿರುವ ಬಗ್ಗೆ ಶ್ರೀ ಹೆಚ್. ಬಿ ಗುಂಡಪ್ಪಗೌಡ ಮತ್ತು ಜ|| ಇನಾಯತುಲ್ಲಾರವರು ಟೀಕಿಸಿದರು ಇದೊಂದು ನಾಮಮಾತ್ರದ ವಿಚಾರವೆಂದೂ, ಅದರಲ್ಲೇನೋ ಸಮೇನೂ ಇಲ್ಲವೆಂದೂ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿದರು

ಅನಂತರ ಶ್ರೀ ವಿ. ವೆಂಕಟಪ್ಪನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅಭಿನಂದನೆ ಮತ್ತು ವಂದನೆಗಳಾದ ಬಳಿಕ ಸಭೆ ಇಂದಿಗೆ ಮುಗಿಯಿತು

## ಎಲ್. ಎ. ತಿಮ್ಮಾಬೋಯಿ ಉಪಾಧ್ಯಕ್ಷರು

ಸ್ವಂ ಸು ಫೋ] ಬೆಂಗಳೂರು ೧೨

ಶಾಸನ ಸಭೆಯ ಉಪಾಧ್ಯಕ್ಷರಿಗೆ (ಡೆಪ್ಯುಟಿ ಸ್ಪೀಕರ್) ಅಕ್ಕವಳ್ಳಿಯ ಎಲ್.ಎ ತಿಮ್ಮಾಬೋಯಿಯವರನ್ನು ಸೂಚಿಸಬೇಕೆಂತ ಕಾಂಗ್ರೆಸ್ ಪಕ್ಷದವರು ನಿರ್ಧರಿಸಿದ್ದಾರೆ.

## ತಾಯಿಯ ಪ್ರೇಮಿಯಿಂದ ಮಗನ ಕೊಲೆ

೧೮ ವರ್ಷದ ಹೇಸಿ ಎಂಬ ಹುಡುಗನನ್ನು ಆತನ ತಾಯಿ ಆದುಪ್ಪಮ್ಮಾಳ್ ಎಂಬುವಳ ಪ್ರೇಮಿ ನಾಗಪ್ಪ ಎಂಬುವನು ಆಕೆಯ ಎದುರಿನಲ್ಲೇ ಕಳೆದ ಅಕ್ಟೋಬರ್ ೩ ರಲ್ಲಿ ಕೊಲೆ ಮಾಡಿದನೆಂಬ ಕಾರಣದ ಮೇಲೆ ಆತನಿಗೆ ಫಾಸಿ ಶಿಕ್ಷೆಯನ್ನು ವಿಧಿಸಲಾಗಿದೆ. ಇವರಿಬ್ಬರಿಗೆ ಇದ್ದ ಅಕ್ರಮ ಸಂಬಂಧವನ್ನು ಹುಡುಗನು ಸ್ಪಿಂಕದೆ ಅಸಹಿಸಿದನೆ. ಇದರಿಂದ ಸಿಟ್ಟಾದನು, ಒಂದು ರಾತ್ರಿ ಆತನು ಮನೆಯಲ್ಲಿ ನಿದ್ರಿಸುತ್ತಿದ್ದಾಗ ಇವರಿಬ್ಬರೂ ಮಚ್ಚಿನಿಂದ ಸಹಾಯದಿಂದ ಅವನನ್ನು ಕೊಂದು, ತಾಯಿಗೆ ಸೇರಿದ್ದ ತೆಂಗಿನ ತೋಟದಲ್ಲಿದ್ದ ಬಾವಿಯೊಳಗೆ ಮೃತ ದೇಹವನ್ನು ಹಾಕಿ ಮಣ್ಣು ಮುಚ್ಚಿ, ಅಲ್ಲಿ ಮಾವಿನ ಗಿಡವನ್ನು ನೆಟ್ಟರೆಂದೂ ನಂತರ ಹುಡುಗನು ಮಾಯವಾದ ಬಗ್ಗೆ ಪತ್ತೆ ತರದೂದು ನಡೆದು ಕೊಲೆಗೆ ಸಹಾಯಕನಾದವನಿಂದ ವಿಷಯಗಳು ಗೊತ್ತಾದುವೆಂದೂ ಹೇಳಲಾಗಿದೆ. ನಂತರ ಅಪರಾಧಿಕರ ದಸ್ತಗಿರಿಯಾಗಿ ಮೊಕದ್ದಮೆ ಹೂಡಲ್ಪಟ್ಟು ಮೇಲ್ಕಂಡಂತೆ ಶಿಕ್ಷೆಯಾಯಿತು. ಮೃತನ ತಾಯಿಗೆ ೭ ವರ್ಷ ಶಿಕ್ಷೆ ವಿಧಿಸಲಾಯಿತು.

---

ಮೈಸೂರು
ದೊಡ್ಡಕೆರೆ ಮೈದಾನದಲ್ಲಿ
15-1-50ನೇ ಭಾನುವಾರ
ಖಂಡಿತ ಆರು ಜೊತೆ
ಕುಸ್ತಿಗಳು ನಡೆಯುತ್ತವೆ

೧ ಪೈ॥ ಸಣ್ಣಬೋರಯ್ಯ
ಪೈ॥ ಲಾಣಿಜೆನ್ನ... ನಂಜಪ್ಪ
೨ ಪೈ॥ ಸಾಬೂಲಾಲ್
ಪೈ॥ ದಾವಣಗೆರೆ ಚತುರ್ ಸಾಬು
೩ ಪೈ॥ ಮರಿ ಗೌಡ
ಪೈ॥ ಕೃಷ್ಣಾಜಿ
೪ ಪೈ॥ ರಾಮು
(ಕೊಪ್ಪಲು ಬಸವಯ್ಯನವರ ಮಗ)
ಪೈ॥ ನಾರಾಯಣ
ವಿ. ಪುಟ್ಟಸ್ವಾಮಿ (ರಂ)

## ಕಲ್ಲತ್ತಾನಿಗೆ ಸರ್ದಾರ್ ಪಟೇಲರ ಭೇಟಿ

ಸರ್ದಾರ್ ವಲ್ಲಭಾಯಿ ಪಟೇಲರು ೩ ದಿನ ಕಲ್ಕತ್ತಾನಗೆ ಪ್ರವಾಸ ಬೇಕಿ ಅಲ್ಲಿ ಎಂದು ಸ್ವಾತಂತ್ರ್ಯ ... ಕಾಂಗ್ರೆಸ್ಸಿನ ವಿವಿಧ ಪಕ್ಷಗಳವರನ್ನು ಭೇಟಿ ಮಾಡುವರೆಂದು ಗೊತ್ತಾಗಿದೆ.

## ಫಾರ್ಮೋಸಾವಿಗೆ ಶತೀ ಚಿಯಾಂಗರ ಪ್ರಯಾಣ

ಕಮ್ಯೂನಿಸ್ಟರ ಫಾರ್ಮೋಸಾದಲ್ಲಿರುವ ರಾಷ್ಟ್ರೀಯ ಸರ್ಕಾರದ ... ಚಿಯಾಂಗ್ ಕೈಷೇಕರು ಮೊನ್ನೆ ದಿನ ಅಮೇರಿಕದಿಂದ ತಮ್ಮ ಪರಿವಾರದೊಡನೆ ಪ್ರಯಾಣ ಬೆಳೆಸಿದರು.

## ರಸ್ತೆಯಲ್ಲಿ ಚುನಾವಣೆ

ರಷ್ಯದ ಅತ್ಯುನ್ನತ ಶಾಸನ ಸಭೆಗಳಿಗೆ ಮಾರ್ಚಿ ೧೨ ರಲ್ಲಿ ಚುನಾವಣೆಗಳು ನಡೆಯುತ್ತವೆಂದು ಹೇಳಲಾಗಿದೆ.

### ನಂಜನಗೂಡು ಕಾಂಗ್ರೆಸ್ ಕೆಲಸಗಾರರ ಸಭೆ

ಜನವರಿ ೧೪ನೇ ತಾ॥ ಶನಿವಾರ ಮಧ್ಯಾಹ್ನ ೪ ಘಂಟೆಗೆ ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಕೆಲಸಗಾರರ ಸಭೆಯು ನಂಜನಗೂಡಿನ ಸೆಂಟ್ರಲ್ ಡಿಪೋ ಮಹಡಿಯ ಮೇಲೆ ನಡೆಯಲು ಏರ್ಪಾಡಾಗಿದೆ. ಏಪ್ರಿಲ್ ವಿನಾಟಂಕೆ, ಕಾಂಗ್ರೆಸ್ ಸದಸ್ಯತ್ವ, ಹರಾಜಿನ ಸ್ಥಿತಿ, ಆಫೀಸ್ ಕಟ್ಟುವುದೇ ಮುಂತಾದ ವಿಷಯಗಳನ್ನು ಪರಿಶೀಲಿಸಲಾಗುವುದು

## ಭಾರತಕ್ಕೆ ಡಾ॥ ಸೊಕರ್ನೊ

ಶಾಂತಿನಿಕೇತನದಲ್ಲಿ ಭಾಗವಹಿಸಲು ಇಂಡೊನೇಶ್ಯದ ಅಧ್ಯಕ್ಷರಾದ ಡಾ॥ ಸೊಕರ್ನೊರವರು ಈ ತಿಂಗಳು ೨೪ ರಂದು ಭಾರತಕ್ಕೆ ಹೊರಡುವರು. ಅನಂತರ ಶಾಂತಿನಿಕೇತನವನ್ನೂ ಪಾಕಿಸ್ತಾನವನ್ನೂ ಭೇಟಿ ಕೊಡುವರು.

## ದೆಹಲಿಗೆ ನೋಯಲ್ ಬೇಕರರ ಆಗಮನ

ಕಾಮನ್‌ವೆಲ್ತ್ ಸಮ್ಮೇಳನವನ್ನು ... ಗಿಸಿಕೊಂಡು ಬ್ರಿಟಿಷ್ ಮಂತ್ರಿ ನೋಯಲ್ ಬೇಕರರು ಈ ತಿಂಗಳು ೧೭ಕ್ಕೆ ಲಂಡನ್‌ದಿಂದ ದೆಹಲಿಗೆ ಆಗಮಿಸುವರೆಂದು ಹೇಳಲಾಗಿದೆ

---

## ರಣಜಿತ್ ಟಾಕೀಸ್

13—1—50 ರಿಂದ
ಆಕರ್ಷಣೀಯವಾದ ೪ ನೇ ವಾರ
ಮೆಹಬೂಬ್‌ರವರ ಹಿಂದಿ ಚಿತ್ರ

# ಅಂದಾಜ್

ಸಂಗೀತ — ನೌಷಾದ್
ನರ್ಗೀಸ್, ದಿಲೀಪ್ ಕುಮಾರ್,
ರಾಜ ಕಪೂರ್, ವಿ. ಎಚ್.
ದೇಸಾಯ್ ಮತ್ತು ಕಕ್ಕೂ

## ಗಣೇಶಾ ಟಾಕೀಸ್

13-1-50ರಿಂದ ಪ್ರತಿ ದಿನ ೩ ಆಟಗಳು
ಜ್ಯೂಪಿಟರ್ಸ್‌ರವರ

# ವಾಲ್ಮೀಕಿ

(ತಮಿಳು)
-: ಭೂಮಿಕೆ :-
ಹೊನ್ನಪ್ಪ ಭಾಗವತರ್, ಟಿ. ಆರ್.
ರಾಜಕುಮಾರಿ, ಯು. ಆರ್.
ಜೀವರತ್ನಂ ಕಾಳಿ ಎನ್. ರತ್ನಂ

## ರಾಜಕಮಲ್ ಮೈಸೂರು

13-1-50 ರಿಂದ
ಜನಭರಿತವಾದ ೪ನೇ ವಾರ
ದಿನವಹಿ 3 ಪ್ರದರ್ಶನಗಳು

# ಜೀವನ

—: ಭೂಮಿಕೆ : —
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ; ಲಲಿತ-ಪದ್ಮಿನಿ

—: Morning Shows —
From 13-1-50 for 4 days
Charles Dickens'

## Great Expectations

With:-John Mills and
Valeari Hodson

---

## ಗುರುದೇವಾ ಹಾಲ್

(ಬೆಂಗಳೂರು ಜವಳಿ ಅಂಗಡಿ)
ಶಿವರಾಂಪೇಟೆ, ಮೈಸೂರು

ಗ್ಯಾರಂಟಿಯಾದ ಬಣ್ಣ
ಶುದ್ಧವಾದ ಮೈಸೂರು ಸಿಲ್ಕಿನಲ್ಲಿ
ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಸೀರೆಗಳು ಬಂದಿವೆ
ಒಂದಾವರ್ತಿ ಭೇಟಿ ಕೊಡಿ

---

ಮೈಸೂರು ಸಿಟಿ ಮುನಿಸಿಪಲ್ ಕಮಿಷನರ್‌ರವರ ಆಫೀಸು

## ಟೆಂಡರ್ ನೋಟಿಫಿಕೇಷನ್

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಸೆಕ್ಷನ್ ಎತ್ತುಗಳಿಗೂ ಮತ್ತು ಸೂಯೇಜ್ ಫಾರಂ ಎತ್ತುಗಳಿಗೂ ತಾರೀಖು ೧-೨-೧೯೫೦ ರ ಲಾಗಾಯ್ತು ೩೧-೧-೫೧ ರ ವರೆಗೆ ಹುರುಳಿ, ನೆಲ್ಲು ಹುಲ್ಲು, ಚಕ್ಕೆ ಹಗ್ಗ, ನೂಲಿನ ಹಗ್ಗ ಮತ್ತು ಎರೇ ಎಣ್ಣೆ ಇವುಗಳನ್ನು ಸಪ್ಲೈ ಮಾಡಲು ಇಷ್ಟಪಟ್ಟವರು ಟೆಂಡರ್ ನೋಟಿಫಿಕೇಷನ್ನಿನಲ್ಲಿನ ಷರತ್ತುಗಳಿಗನುಸಾರವಾಗಿ ತಾ॥ ೧೩-೧-೫೦ ನೇ ಶುಕ್ರವಾರ ಮಧ್ಯಾಹ್ನ ೪ ಘಂಟೆಯೊಳಗೆ ಮೈಸೂರು ಸಿಟಿ ಮುನಿಸಿಪಲ್ ಕಮೀಷನರ್‌ರವರಿಗೆ ತಮ್ಮ ಟೆಂಡರುಗಳನ್ನು ಕಳುಹಿಸಬಹುದು. ಹೆಚ್ಚಿನ ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಅಥವಾ ಸೂಯೇಜ್ ಫಾರಂ ಮ್ಯಾನೇಜರ್‌ರವರಲ್ಲಾಗಲೀ ತಿಳಿದುಕೊಳ್ಳಬಹುದು

(ಸಹಿ) ಸಿ. ನರಸಿಂಹ ಮೂರ್ತಿ,
ಮುನಿಸಿಪಲ್ ಕಮಿಷನರ್,
ಮೈಸೂರು ಸಿಟಿ ಮುನಿಸಿಪಾಲಿಟಿ.

ಮೈಸೂರು ಸಿಟಿ ರೇಷನಿಂಗ್ ಆಫೀಸು

## ನೋಟಿಫಿಕೇಷನ್

ನಂ R 6-34/49-50
ತಾ॥ 9-1-1950

ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷನ್ ಡಿಪೋ, ಮೊಹಲ್ಲಾ ಸಬ್ ಗೋಡೌನ್, ಸರ್ಕಾರೀ ಡಿಪೊ ಮತ್ತು ಸಹಕಾರ ಸಂಘಗಳಿಗೆ ಇದೇ ಮಾಹೆ 14 ನೇ ತಾ॥ ಶನಿವಾರ "ಉತ್ತರಾಯಣ ಪುಣ್ಯಕಾಲ" ದ ಬಗ್ಗೆ ಪೂರ್ತಾ ರಜಾ ಕೊಡಲ್ಪಟ್ಟಿರುತ್ತೆ.

(ಸಹಿ) ಡಿ. ಜೆ. ಬಾಲರಾಜ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

---

# ಪ್ರಭುದೇವಾ ಟಾಕೀಸ್ ★ 13-1-50 ನೇ

ದಿನವಹಿ ೩ ಆಟಗಳು
ಶುಕ್ರವಾರದಿಂದ

# ✱ ಭೂಲೋಕ ರಂಭೆ ✱ (ತಮಿಳು)

ಪಾತ್ರ:- ಟಿ. ಆರ್. ಮಹಾಲಿಂಗಂ, ಕೃಷ್ಣ, ಮಧುರಂ ಮುಂತಾದವರು

## -: ಪೊಂಗಲ್ ಸ್ಪೆಷಲ್ ಪ್ರೋಗ್ರಾಂ :-

M. G. M's Release **NEHRU IN U. S. A.**

ಪಂಡಿತ ನೆಹರೂರವರ ಅಮೆರಿಕಾ ಪ್ರವಾಸದ ಚಿತ್ರಗಳನ್ನು ಇಪ್ಪತ್ತು ನಿಮಿಷ ಕಾಲ ಪ್ರದರ್ಶಿಸಲಾಗುವುದು

Edited, Printed and published by A. R. Nagarajan at Sadhvi Press, D.Subbiah Road, Mysore

ರಿಜಿ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಶುಕ್ರವಾರ ೧೩-೧-೫೦ [ಸಂಚಿಕೆ ೧೧೦

# ಶ್ರೀಮನ್ಮಹಾರಾಜರಿಗೆ ೧೮ಲಕ್ಷ ರೂ.ರಾಜಧನ

## ರಿಪಬ್ಲಿಕ್ ದಿನದಲ್ಲಿ ೨೦೦೦೦ ಖೈದಿಗಳಿಗೆ ರಿಯಾಯಿತಿ

ಭಾರತದ ರಿಪಬ್ಲಿಕ್ಕಿನ ಸ್ಥಾಪನೆಯ ದಿನದ ಜ್ಞಾಪಕಾರ್ಥವಾಗಿ ಮದ್ರಾಸು ಸರ್ಕಾರದವರು ಆ ಪ್ರಾಂತದ ಜೈಲುಗಳಲ್ಲಿರುವ ೨೦ ಸಾವಿರ ಖೈದಿಗಳಿಗೆ ಹತ್ತು ದಿನಗಳಿಂದ ೩ ತಿಂಗಳವರೆಗೆ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡಲು ನಿರ್ಧರಿಸಿದ್ದಾರೆ. ಈ ರಿಯಾಯಿತಿಯು ಕಮ್ಯೂನಿಸ್ಟರು, ದರೋಡೆ, ಗೂಢಚರ್ಯೆ, ಮುಂತಾದ ಹೀನ ಕೃತ್ಯಗಳಲ್ಲಿ ಭಾಗವಹಿಸಿದವರಿಗೆ ಸಿಗುವುದಿಲ್ಲ.

## ಮೈಸೂರಿಗೆ ಮಲ್ಪೆ ಬಂದರು

ರೈಲ್ವೆ ಸಚಿವರಾದ ಶ್ರೀ ಎಚ್. ಸಿ. [illegible]ಯ್ಯನವರು ಮದರಾಸಿನಲ್ಲಿ ಭಾರತ ಸರ್ಕಾರದ ರೈಲ್ವೆ ಸಚಿವರೊಡನೆಯೂ ಮತ್ತು ಮದರಾಸಿನ ಅಧಿಕಾರಿಗಳೊಡನೆಯೂ ಮಾತುಕತೆ ನಡೆಸಿ ಹಾಸನ-ಮಂಗಳೂರು ಮತ್ತು ಚಾಮರಾಜನಗರ-ಸತ್ಯಮಂಗಲಂ ರೈಲ್ವೆ ನಿರ್ಮಾಣದ ಬಗ್ಗೆ ಪ್ರಸ್ತಾಪಿಸಿದರೆಂದು ಗೊತ್ತಾಗಿದೆ. ಮೈಸೂರು ಸಂಸ್ಥಾನದ ವ್ಯಾಪಾರ ಮತ್ತು ವಾಣಿಜ್ಯದ ಅಭಿವೃದ್ಧಿಗಾಗಿ ಪಶ್ಚಿಮ ತೀರದಲ್ಲಿರುವ ಮಲ್ಪೆ ಬಂದರನ್ನು ಮೈಸೂರಿಗೆ ಸೇರಿಸಿಕೊಂಡು ಅಲ್ಲಿಗೆ ಸಂಸ್ಥಾನದಿಂದ ರೈಲ್ವೆ ಲೈನನ್ನು ಹಾಕುವ ಬಗ್ಗೆಯೂ ಮಾತುಕತೆ ನಡೆದು ಕೇಂದ್ರ ಸರ್ಕಾರದ ಪ್ರತಿನಿಧಿಗಳು ಸಂಸ್ಥಾನದ ನ್ಯಾಯಬದ್ಧವಾದ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರೆಂದೂ ತಿಳಿದುಬಂದಿದೆ.

## ಇಂಡೊನೇಷ್ಯದಲ್ಲಿ ಡಚ್ ಸೇನಾನಿಯ ಖಾಸಗಿ ಯುದ್ಧ

ವೆಸ್ಟರ್ಲಿಂಗ್ ಎಂಬ ಡಚ್ ಸೈನ್ಯಾಧಿಕಾರಿಯೊಬ್ಬನು ಪಶ್ಚಿಮ ಜಾವಾ ದ್ವೀಪದಲ್ಲಿರುವ ಮತಾಂಧ ಮುಸ್ಲಿಂ ಪಂಗಡದವನ ಸೇರಿಕೊಂಡು ಇಂಡೊನೇಷ್ಯಾದ ಮೇಲೆ ಯುದ್ಧ ನಡೆಸುತ್ತಿರುವ ಆ ರಾಜ್ಯದ ಮುಖ್ಯ ಮಂತ್ರಿ ಡಾ|| [illegible]ರವರಿಗೂ, ಡಚ್ ಹೈಕಮಿಷನರಿಗೂ ಪತ್ರ ವ್ಯವಹಾರ ನಡೆಯುತ್ತಿದೆ. ಆ [illegible] ಸ್ವಾತಂತ್ರ್ಯಕೊಡುವವರನ್ನು ಜೊತೆಗೆ ಸುಲ್ತಾನರು ಡಚ್ ರಾಣಿಯ ಪ್ರತಿನಿಧಿಗಳಿಗೆ ಪತ್ರ ಬರೆದು ಈ ಸೇನಾನಿಯನ್ನು ದೇಶ ಭ್ರಷ್ಟನನ್ನಾಗಿ ಮಾಡಬೇಕು ಕೇಳಿದಾಗ, ಅವರು ಹಾಗೆ ಮಾಡಲು ಶಕ್ಯವಿಲ್ಲವೆಂದು ಹೇಳಲಾಗಿದೆ.

## ಸ್ಟರ್ಲಿಂಗ್ ಸಾಲದಲ್ಲಿ ಖೋತಾ

[illegible] ವರ್ಷದ ಸ್ಟರ್ಲಿಂಗ್ ಸಂಧಾನ ಸಮಯದಲ್ಲಿ ಸ್ಟರ್ಲಿಂಗ್ ಸಾಲದಲ್ಲಿ ಕಡಿಮೆ ಮಾಡಿಕೊಳ್ಳಬೇಕೆಂದು ಸಾಲಗಾರ ದೇಶಗಳನ್ನು ಬ್ರಿಟನ್ನು ಕೇಳುವುದೆಂದು ಬ್ರಿಟಿಷ್ ಹಣಕಾಸು ಮಂತ್ರಿ ಸರ್ ಸ್ಟಾಫರ್ಡ್ ಕ್ರಿಪ್ಸರು ತಿಳಿಸಿದ್ದಾರೆ.

## ವಿಮಾನಸಂಚಾರ ಕಂಪೆನಿಗಳು ಸರಕಾರಕ್ಕೆ

ವಿಮಾನ ಸಂಚಾರದ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡುವ ವಿಷಯದ ಬಗ್ಗೆ [illegible] ಪ್ರಸ್ತಾಪಿಸಲಾಗಿದೆ

## ಕರ್ನಾಟಕ ಸಂಘಗಳ ಸಮ್ಮೇಳನ

ಮೈಸೂರು ೧೩

ಅಖಿಲ ಭಾರತ ಕರ್ನಾಟಕ ಸಂಘಗಳ ಸಮ್ಮೇಳನವು ತಾ|| ೧೩, ೧೪, ೧೫ರಲ್ಲಿ ಪ್ರಥಮ ದರ್ಜೆಯ ಕಾಲೇಜಿನಲ್ಲಿ ನಡೆಯುವುದು. ಈ ಸಂದರ್ಭದಲ್ಲಿ ನಡೆಯುವ ಸಂಸ್ಕೃತಿಯ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರು ವಹಿಸುವರು. ಶ್ರೀ ಆ. ನ. ಕೃಷ್ಣರಾಯರು ಪ್ರಾರಂಭೋತ್ಸವವನ್ನು ನೆರವೇರಿಸುವರು. ನಾಳೆ ನಡೆಯುವ ಪ್ರತಿನಿಧಿ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಜೆ. ಗಂಗಾಧರಪ್ಪನವರು ವಹಿಸುವರು. ಶ್ರೀ ಎಸ್. ನಿಜಲಿಂಗಪ್ಪನವರಿಂದ ಆರಂಭೋತ್ಸವವು ನೆರವೇರುವುದು. ಸರ್ವಜ್ಞ ಕವಿಯ ಭಾವಚಿತ್ರ ಅನಾವರಣೋತ್ಸವವನ್ನು ಪಂಡಿತ ರತ್ನ, ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿಗಳು ನೆರವೇರಿಸುವರು. ೧೫ನೇ ತಾ|| ನಡೆಯುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಎಂ. ಆರ್. ಶ್ರೀನಿವಾಸ ಮೂರ್ತಿಯವರು ವಹಿಸುವರು. ಶ್ರೀ ಡಿ. ಎಲ್. ನರಸಿಂಹಾಚಾರ್ಯರಿಂದ ಪ್ರಾರಂಭ ಭಾಷಣವೂ ಶ್ರೀ ಪು. ತಿ. ನರಸಿಂಹಾಚಾರ್ಯರಿಂದ ಕಾವ್ಯ ವಾಚನವೂ ನಡೆಯುವುವು.

## ಆಯುರ್ವೇದ ಮತ್ತು ಯುನಾನಿ ಕಾಲೇಜು ಸಂಘ

ಮೇಲ್ಕಂಡ ಸಂಘದ ಆರಂಭ ಭಾಷಣವನ್ನು ಆರೋಗ್ಯ ಮಂತ್ರಿಗಳಾದ ಜನಾಬ್ ಮಹಮದ್ ಷರೀಫ್‌ರವರು ಇದೇ ೧೫ನೇ ತಾ|| ಭಾನುವಾರ ಸಂಜೆ ೫-೩೦ ಘಂಟೆಗೆ ನೆರವೇರಿಸುವರು. ಶ್ರೀ ಟಿ. ವೆಂಕಟರಮಣಯ್ಯನವರು ಅಗ್ರಾಸನ ವಹಿಸುವರು.

## ಆಯುರ್ವೇದ ವೈದ್ಯರ ಸಭೆ

ಗೌ|| ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ಸಂಘದ ವೈದ್ಯ ಸಭೆ— ಮಂಡ್ಯ ಶಾಖೆಯ ಆಶ್ರಯದಲ್ಲಿ ಸದರೀ ಕಾಲೇಜಿನಲ್ಲಿ ೧೫-೧-೫೦ನೇ ಭಾನುವಾರ ಮಧ್ಯಾಹ್ನ ೩-೩೦ ಘಂಟೆಗೆ ಕ್ಲಿನಿಕಲ್ ಸಭೆಯೂ ಮತ್ತು ೫ ಘಂಟೆಗೆ ವಿಶೇಷ ಸಭೆಯೂ ನಡೆ ಏರ್ಪಡಿಸಲ್ಪಟ್ಟಿವೆ [illegible] ಪ್ರಾರ್ಥಿಸಲಾಗಿದೆ

## ಶಾಸನ ಸಭಾಧ್ಯಕ್ಷರ ಸಂಭಾವನೆ ೮೦೦ ರೂ.

ಸ್ವಂ.ಸು.ಫೋ|] ಬೆಂಗಳೂರು ೧೩

ಈ ಮಧ್ಯಾಹ್ನ ಮುಖ್ಯ ಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು ಶಾಸನ ಸಭೆಯ ಅಧ್ಯಕ್ಷರ ಸಂಬಳ ಸಾರಿಗೆ ಬಗ್ಗೆ ನಿರ್ಣಯವನ್ನು ತಂದು ಅವರಿಗೆ ೮೦೦ ರೂ ಸಂಬಳ, ೧೫೦ ರೂಪಾಯಿ ಭತ್ಯ, ಸರಕಾರಿ ಭವನ ಅಥವ ೨೦೦ ರೂ. ಬಾಡಿಗೆ ಮತ್ತು ಸರಕಾರಿ ಮೋಟಾರುಗಳನ್ನು ಕೊಡಲು ಸೂಚಿಸಿದರು. ಅದಕ್ಕೆ ಸಭೆಯ ಸಮ್ಮತಿ ದೊರಕಿತು. ಉಪಾಧ್ಯಕ್ಷರಿಗೆ ೩೦೦ ರೂ.ಗಳ ಸಂಬಳವನ್ನು ನಿಗದಿ ಮಾಡಲಾಗಿದೆ. ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ತಿಮ್ಮಾಬೋವಿಯವರು ಆರಿಸಲ್ಪಟ್ಟಿರುವರು.

## ಸಮಿತಿಗಳಿಗೆ ಚುನಾವಣೆ

ಈ ಬೆಳಗ್ಗೆ ಶಾಸನ ಸಭೆ ಮತ್ತು ನಿಯಮಗಳ ಪರಿಗೆ ಸೇರಿ ಪುನಃ ಮಧ್ಯಾಹ್ನ ೩ ಗಂಟೆಗೆ ಸೇರಲು ಮುಂದೂಡಲಾಯಿತು. ಸಭಾಧ್ಯಕ್ಷರಾದ ಶ್ರೀ ವಿ. ವೆಂಕಟಪ್ಪನವರು ಸಭಾ ಸಮಿತಿ, ಪಬ್ಲಿಕ್ ಅಕೌಂಟ್ಸ್ ಸಮಿತಿ ಮತ್ತು ಪ್ರಿವಿಲೇಜ್ ಸಮಿತಿಗಳಿಗೆ ಆದ ಚುನಾವಣೆಯನ್ನು ಪ್ರಕಟಿಸಿದರು.

ಹೌಸ್ ಕಮಿಟಿ:- ಶ್ರೀಗಳಾದ ಎಂ. ವಿ. ಕೃಷ್ಣಪ್ಪ, ಎಚ್. ಸಿದ್ದಯ್ಯ, ಎಂ. ಸಿ. ವೆಂಕಟೇಶ ಮತ್ತು ಸೈಯದ್ ಅಬ್ದುಲ್ ರಹಮಾನ್. ಪಬ್ಲಿಕ್ ಅಕೌಂಟ್ಸ್ ಸಮಿತಿ:- ಶ್ರೀಗಳಾದ ಜಿ. ಎ. ಆಚಾರ್ಯ, ವಿ. ಪುಟ್ಟೇಗೌಡ, ಎಲ್. ಸಿದ್ದವೀರಪ್ಪ ಮತ್ತು ಜೆ. ಕೆ. ವೀರಣ್ಣಗೌಡ. ಪ್ರಿವಿಲೇಜ್ ಸಮಿತಿ:- ಶ್ರೀಗಳಾದ ಎ. ಭೀಮಪ್ಪ ನಾಯಕ್, ಜೆ. ಎಂ. ಚನ್ನಬಸಪ್ಪ, ಎ. ಜಿ. ರಾಮಚಂದ್ರರಾವ್ ಮತ್ತು ಸೈಯದ್ ಅಬ್ದುಲ್ ರಹಮಾನ್

## ಸೂಚನೆ

ಉತ್ತರಾಯಣ ಪುಣ್ಯಕಾಲದ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

## ರಾಜ್ಯಾಂಗ ಸಭೆಯ ಪರಿಸಮಾಪ್ತಿ

ನೆನ್ನೆ ಮಧ್ಯಾಹ್ನ ಮೈಸೂರಿನ ರಾಜ್ಯಾಂಗ ಸಭೆಯು ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ರಾಜ್ಯಾಂಗ ಸಭೆಯನ್ನು ಇದೇ ೨೬ನೇ ತಾ||ನಿಂದ ಪಾಸಿಟ್ ಶಾಸನ ಸಭೆಯೆಂದು ಶ್ರೀ ಕೆ. ಸಿ. ರೆಡ್ಡಿಯವರು ತಂದ ನಿರ್ಣಯವು ಅಂಗೀಕೃತವಾಯಿತು.

[illegible] ಸಂಬಂಧಪಟ್ಟ ಪಕ್ಷಾರ ಕಂಪೆನಿ ಆಡಳಿತ ವರ್ಗದವರಿಗೂ ಕಾರ್ಮಿಕರಿಗೂ ಇದ್ದ ಬಿಕ್ಕಟ್ಟು ಬಗೆ ಹರಿದು, ಒಪ್ಪಂದವಾಗಿರುವುದಾಗಿಯೂ, ಇಷ್ಟರಲ್ಲೇ ಎಲ್ಲ ಕಾರ್ಮಿಕರು [illegible]

## ಪ್ರಭುಗಳಿಗೆ ೧೮ ಲಕ್ಷ ರೂ. ರಾಜಧನ

ಸ್ವಂ.ಸು.ಫೋ|] ಬೆಂಗಳೂರು ೧೩

ಶ್ರೀಮನ್ ಮಹಾರಾಜರವರು ತಮ್ಮ ರಾಜಧನವನ್ನು ೨೬ ಲಕ್ಷ ರೂ. ಗಳಿಂದ ೧೮ ಲಕ್ಷ ರೂ. ಗಳಿಗೆ ಇಳಿಸಿಕೊಳ್ಳಲು ಸಮ್ಮತಿಸಿರುವುದಾಗಿ ತಿಳಿದುಬಂದಿದೆ. ಅರಮನೆಯವರು ನಡೆಸುತ್ತಿದ್ದ ಹಲವು ಇಲಾಖೆಗಳ ಕಾರ್ಯಗಳು ಇನ್ನು ಮೇಲೆ ಸರಕಾರದ ಖರ್ಚಿನಿಂದಲೇ ನಡೆಯುವುವೆಂದು ಹೇಳಲಾಗಿದೆ

## ಮೇದಪ್ಪನವರಿಗೆ ಪುಟ್ಟರಾಜೇ ಅರಸಿನವರ ನೋಟೀಸ್

ಶ್ರೇಷ್ಠ ನ್ಯಾಯಾಧೀಶರಾದ ರಾ|| ಬ|| ಮೇದಪ್ಪನವರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ|| ಆರ್. ಪುಟ್ಟರಾಜೇ ಅರಸಿನವರನ್ನು ತಮ್ಮ ಮನೆಗೆ ಬರಮಾಡಿಕೊಂಡು ಅವರನ್ನು ಜಸ್ಟಿಸ್ ಎನ್. ಬಾಲಕೃಷ್ಣಯ್ಯನವರ ಎದುರಿಗೆ ತಿರಸ್ಕಾರವಾಗಿ ಮಾತನಾಡಿ, ಮನೆಯಿಂದ ಬಲ ಪ್ರಯೋಗ ಮಾಡಿ ಹೊರದೂಡಲು ಹೋದರೆಂಬ ಕಾರಣದ ಮೇಲೆ ಶ್ರೀ|| ಪುಟ್ಟರಾಜೇ ಅರಸಿನವರು ಚೀಫ್ ಜಸ್ಟಿಸ್ ಮೇದಪ್ಪನವರಿಗೆ ನೋಟೀಸ್ ಕೊಟ್ಟಿರುವರೆಂದೂ ಇದಕ್ಕೆ ರಾ|| ಬ|| ಮೇದಪ್ಪನವರು ಇನ್ನೂ ಉತ್ತರ ಕೊಟ್ಟಿಲ್ಲವೆಂದೂ ವರ್ತಮಾನ ಬಂದಿದೆ.

## ಪಾರ್ಲಿಮೆಂಟಿಗೆ ಚುನಾವಣೆ

ಈ ದಿನ ಕೇಂದ್ರ ಶಾಸನ ಸಭೆಗೆ ನಡೆದ ಚುನಾವಣೆಯಲ್ಲಿ ಶ್ರೀಗಳಾದ ಟಿ. ಚನ್ನಯ್ಯ, ಜಿ. ಆರ್. ಯತಿರಾಜಲು ನಾಯುಡು, ಕೆ. ಹನುಮಂತಯ್ಯ, ಎಂ. ವಿ. ರಾಮರಾವ್, ಜೆಚ್. ಎಸ್. ರುದ್ರಪ್ಪ, ಮತ್ತು ಜಿ. ಎ. ತಿಮ್ಮಪ್ಪ ಗೌಡ ಇವರುಗಳು ಚುನಾಯಿತರಾದರು. ೧೩ ಜನರು ಸ್ಪರ್ಧಿಸಿದ್ದರು

## ೧೬ನೇ ತಾ|| ನೂತನ ಮಂತ್ರಿಗಳ ಅಧಿಕಾರ ಸ್ವೀಕಾರ

ನಾಳೆದಿನ ಶ್ರೀ ಕೆ.ಸಿ. ರೆಡ್ಡಿಯವರು ಶ್ರೀಮನ್ಮಹಾರಾಜರವರಿಗೆ ಹೊಸ ಮಂತ್ರಿ ಮಂಡಲದ ಪಟ್ಟಿಯನ್ನು ಒಪ್ಪಿಸುವರು. ೧೬ನೇ ತಾ|| ಸೋಮವಾರ ನೂತನ ಮಂತ್ರಿಗಳು ಪ್ರಮಾಣ ವಚನವನ್ನು ಸ್ವೀಕರಿಸುವರು. ಮಂತ್ರಿಗಳ ಸಂಖ್ಯೆ ಆರಕ್ಕೆ ಇಳಿಯಬಹುದೆಂದು ಒಂದು ವದಂತಿ ಇರುತ್ತದೆ

## ೧೫ ಸಾವಿರ ಕಾರ್ಮಿಕರ ಮುಷ್ಕರ

ಹೈದರಾಬಾದು, ಸಿಕಂದರಾಬಾದು ನಗರ ಸಭೆಗಳು ಮತ್ತು ಇತರ ಸರ್ಕಾರಿ ಖಾಸಗಿ ಕೈಗಾರಿಕೆಗಳಲ್ಲಿರುವ ೧೫ ಸಾವಿರ ಕಾರ್ಮಿಕರು ಮೊನ್ನೆಯಿಂದ ಸಾರ್ವತ್ರಿಕ ಮುಷ್ಕರವನ್ನು ಹೂಡಿದ್ದಾರೆ. ಹೈದರಾಬಾದಿನ ಮಜ್ದೂರ್ ಸಂಘದ ಆಶ್ರಯದಲ್ಲಿ ಈ ಮುಷ್ಕರವು ನಡೆದಿದೆ

## ಕುಕ್ಕರಹಳ್ಳಿ ಕೆರೆಯಲ್ಲಿ ಇಬ್ಬರು ವಿದ್ಯಾರ್ಥಿಗಳ ಮರಣ

ಈ ದಿನ ಬೆಳಗ್ಗೆ, [illegible] ಕೆರೆಯಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾದ ಶ್ರೀ. [illegible] ಮತ್ತು ಸ್ಪೋರ್ಟ್ಸ್ ಸೆಕ್ರೆಟರಿ ಶ್ರೀ. [illegible] [illegible] ಈಜಲು ಹೋಗಿ ಕೆರೆಯಲ್ಲಿ ಮುಳುಗಿ ಮೃತಪಟ್ಟರು.

## ಬಳ್ಳಾರಿ ಸಭೆಯಲ್ಲಿ ಗೊಂದಲ

ಬಳ್ಳಾರಿ ಜಿಲ್ಲೆಯ ಆರು ಕನ್ನಡ ತಾಲ್ಲೂಕುಗಳನ್ನು ಸದ್ಯದಲ್ಲಿ ಆಂಧ್ರ ಅಥವಾ ತಮಿಳುನಾಡು ಪ್ರಾಂತಕ್ಕೆ ಸೇರಿಸುವ ಬಗ್ಗೆ ಅಭಿಪ್ರಾಯ ಪಡೆಯಲು ಬಳ್ಳಾರಿಯ ನಾಗರೀಕರ ಸಭೆಯು ಮೊನ್ನೆ ದಿನ ಅಲ್ಲಿ ನಡೆಯಿತು. ತಮ್ಮಳರನ್ನು ಬಿಟ್ಟು ಕನ್ನಡಿಗರು ಆ ಧ್ವರನ್ನೇ ಸದ್ಯಕ್ಕೆ ನೇಮಿಸಿಕೊಂಡರೆ ಉತ್ತಮವೆಂದು ಒಬ್ಬ ಭಾಷಣಕಾರರು ಸೂಚಿಸಿದಾಗ ಗಲಾಟೆಗಳಾಗ ಸಭೆಯು ನಡೆಯುವುದೇ ದುಸ್ತರವಾಯಿತು. ಕಲ್ಲುಗಳನ್ನೂ ಎಸೆಯಲಾಯಿತೆಂದು ಹೇಳಲಾಗಿದೆ ಪೋಲೀಸರಿಗೆ ಗಲಾಟೆಯು ಶಬ್ದಿಸ ಸ್ವೈರ ಮೇಲೆ ಅವರು ಸಮಾಧಾನಪಡಿಸಿದರು ನಂತರ ಆರು ಕನ್ನಡ ತಾಲ್ಲೂಕುಗಳು ಸದ್ಯ ಆಂಧ್ರ ಪ್ರಾಂತದಲ್ಲಿ ಅಡಕವಾಗಿರಬೇಕೆಂಬ ನಿರ್ಣಯವು ಅಂಗೀಕಾರವಾಯಿತು

### ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ಅಶೋಕಾರಸ್ತೆಯ ವರ್ತಕರಾದ ಶ್ರೀ ಎಸ್ ಪಿ ಭರಮಯ್ಯನವರು ನಮಗೆ ಕಳುಹಿಸಿರುವ ಈ ವರ್ಷದ ಇಂಗ್ಲೀಷ್ ಕ್ಯಾಲೆಂಡರನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ.

## ಡಾ॥ ಚಂದ್ರ ಶೇಖರರಿಗೆ ಅವಮಾನ

[illegible]

## ನೈಜೀರಿಯಾ ಪ್ರಜೆಗಳು ಗಾಂಧಿ ಮಾರ್ಗ ಹಿಡಿಯಲಿ

ಪ ಆಫ್ರಿಕಾಖಂಡದ ಪಶ್ಚಿಮ ಭಾಗದಲ್ಲಿರುವ ನೈಜೀರಿಯಾ ರಾಜ್ಯದ ಜನರು ಗಾಂಧೀಜಿಯವರ ಹಾಕಿಕೊಟ್ಟಿರುವ ಮಾರ್ಗವನ್ನು ಹಿಡಿದು ತಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕೆಂದು ಅಲ್ಲಿನ ಪ್ರಮುಖ ಪತ್ರಿಕೆಗಳು ಬರೆದಿವೆ. ಬ್ರಿಟಿಷರು ನೈಜೀರಿಯದಲ್ಲಿ [illegible] ಸಾಮ್ರಾಜ್ಯ [illegible] ಮಾಡುತ್ತಿರುವುದಾಗಿ [illegible] ಬ್ರಿಟಿಷ್ ಸರಕಾರದವರು [illegible]


ಎಂ. ವಿ. ಸುಬ್ರಹ್ಮಣ್ಯಸ್ವಾಮಿಯವರ
ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ
ಮೈಸೂರು
ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ
14-1-50 ನೇ ಶನಿವಾರದಿಂದ ಪ್ರತಿದಿನ ಪ್ರತಿ ಶನಿ, ಸೋಮ, ಬುಧವಾರಗಳಲ್ಲಿ ರಾತ್ರಿ ೧೦ ಕ್ಕೂ, ಪ್ರತಿ ಭಾನು, ಮಂಗಳ, ಗುರು, ಶುಕ್ರವಾರಗಳಲ್ಲಿ ಸಂಜೆ ೬ ಕ್ಕೂ
ಭಕ್ತ ಅಂಬರೀಷ
ಎಂಬ ನಾಟಕವು ಅಭಿನಯಿಸಲ್ಪಡುತ್ತ

ಪ್ರೂರ್ವ ಪಾಕೀಸ್ತಾನದಲ್ಲಿ ಕಲ್ಲಿದ್ದಲಿನ ಅಭಾವ


## ಪೂರ್ವ ಪಾಕೀಸ್ತಾನದಲ್ಲಿ ಕಲ್ಲಿದ್ದಲಿನ ಅಭಾವ

ಕಲ್ಲಿದ್ದಲಿನ ಅಭಾವದಿಂದ ಪೂರ್ವ ಪಾಕೀಸ್ತಾನದಲ್ಲಿ ರೈಲ್ವೆ ಸಂಚಾರವು [illegible] ಮಟ್ಟಿಗೆ ನಿಂತುಹೋಗಿದೆ. ಪಾಕೀಸ್ತಾನವು ಭಾರತಕ್ಕೆ ಕೊಡಬೇಕಾದ [illegible] ಕೊಟ್ಟನಂತರ ಅಲ್ಲಿಗೆ ಕಲ್ಲಿದ್ದಲನ್ನು [illegible] ಬರಾಜು ಮಾಡಲಾಗುವುದು.

### ಸಿತಾರ್ ವಾದನ

ಕೃಷ್ಣರಾಜ ಮೊಹಲ್ಲಾ [illegible]ಯಲ್ಲಿರುವ ದೊಡ್ಡ ರಾಮಮಂದಿರದಲ್ಲಿ ಸಂಜೆ ೬ ಘಂಟೆಗೆ ಆ॥ ವಿ॥ [illegible]ನರ ಸಿತಾರ್ ವಾದ್ಯ ನಡೆಯುತ್ತದೆ.


ಗಣೇಶಾ ಟಾಕೀಸ್
—:§:—
13-1-50ರಿಂದ ಪ್ರತಿದಿನ 3 ಆಟಗಳು
ಜ್ಯೂಪಿಟರ್ಸ್‌ರವರ
ವಾಲ್ಮೀಕಿ (ತಮಿಳು)
-:ಭೂಮಿಕೆ:-
ಹೊನ್ನಪ್ಪ ಭಾಗವತರ್, ಟಿ. ಆರ್. ರಾಜಕುಮಾರಿ, ಯು. ಆರ್. ಜೀವರತ್ನಂ, ಕಾಳಿ ಎನ್. ರತ್ನಂ

ಗಾಯತ್ರೀ ಟಾಕೀಸ್
13-1-50ರಿಂದ 2 ದಿನಗಳು ಮಾತ್ರ ದಿನವಹಿ 3 ಆಟಗಳು
ಹಾಸ್ಯ ಶಿರೋಮಣಿ ಬಾಬ್ ಹೋಪ್ ನಟಿಸಿರುವ
Sorrowful Jones
(ಸಾರೊಫುಲ್ ಜೋನ್ಸ್)
ಬೆಳಗಿನ ಪ್ರದರ್ಶನಗಳು
14 ಮತ್ತು 15ನೇ ತಾರೀಖುಗಳಲ್ಲಿ
ಜಂಗಲ್ ಪ್ರಿನ್ಸೆಸ್

ರಾಜಕಮಲ್
ಮೈಸೂರು
13—1—50 ರಿಂದ
ಜನಭರಿತವಾದ ೪ನೇ ವಾರ
ದಿನವಹಿ 3 ಪ್ರದರ್ಶನಗಳು
ಜೀವನ
—:ಭೂಮಿಕೆ:—
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರನ್, ಲಲಿತ-ಪದ್ಮಿನಿ
—: Morning Shows :—
From 13-1-50 for 4 days
Charles Dickens'
Great Expectations
With:-John Mills and Valeari Hobson

ಮೈಸೂರು
ದೊಡ್ಡಕೆರೆ "ಮೈದಾನದಲ್ಲಿ"
15-1-50ನೇ ಭಾನುವಾರ
ಖಂಡಿತ ಆರು ಜೋಡಿ ಕುಸ್ತಿಗಳು ನಡೆಯುತ್ತವೆ

೧ ಪೈ॥ ಸಣ್ಣಬೋರಯ್ಯ
ಪೈ॥ ರಾಣಿಬೆನ್ನೂರು ಹಂಚಪ್ಪ
೨ ಪೈ॥ ಸಾಬೂಲಾಲ್
ಪೈ॥ ದಾವಣಗೆರೆ [illegible]
೩ ಪೈ॥ ಮರಿ ಗೌಡ
ಪೈ॥ ಕೃಷ್ಣಾಜಿ
೪ ಪೈ॥ ರಾಮು
(ಕೊಪ್ಪಲು ಬಸವಯ್ಯನವರ ಮಗ)
ಪೈ॥ ನಾರಾಯಣ
ವಿ. ಪುಟ್ಟಸ್ವಾಮಿ [illegible]

A BOON TO PADDY & RICE TRANSPORTERS
Your problem of transportation of goods is solved Under our skilled and well-organised Daily running Lorry Service between Mysore and Bangalore we undertake to transport all your goods, Paddy and Rice.
Bangalore Transit Company.
Clearing & Forwarding Agents.
Sri Narasimharaja Road, Bangalore City
Mysore office:-
Narayana Sastry Road Mysore.

ಗುರುದೇವಾ ಹಾಲ್
(ಬೆಂಗಳೂರು ಜನಕಿ ಅಂಗಡಿ)
ಶಿವರಾಂಪೇಟೆ, ಮೈಸೂರು
ಗ್ಯಾರಂಟಿಯಾದ ಚಿಟ್ಟಿ ಶುದ್ಧವಾದ ಮೈಸೂರು ಸಿಲ್ಕಿನಲ್ಲಿ ತಯಾರಾದ ಬೆಂಗಳೂರು ಧರ್ಮಾವರಂ, ಆರಣಿ ಸೀರೆಗಳು ಬಂದಿವೆ ಒಂದಾವರ್ತಿ ಭೇಟಿ ಕೊಡಿ

ರಣಜಿತ್ ಟಾಕೀಸ್
13—1—50 ರಿಂದ ಆಕರ್ಷಣೀಯವಾದ ೪ನೇ ವಾರ
ಮೆಹಬೂಬ್‌ರವರ ಹಿಂದಿ ಚಿತ್ರ
ಅಂದಾಜ್
ಸಂಗೀತ:- ನೌಷಾದ್
ನರ್ಗೀಸ್, ದಿಲೀಪ್ ಕುಮಾರ್, ರಾಜ್ ಕಪೂರ್, ವಿ. ಎಚ್. ದೇಸಾಯ್ ಮತ್ತು ಇತರರು

ಪ್ರಭುದೇವಾ ಟಾಕೀಸ್
13-1-50 ನೇ ಶುಕ್ರವಾರದಿಂದ
ದಿನವಹಿ 3 ಆಟಗಳು
ಭೂಲೋಕ ರಂಭೆ ತಮಿಳು ಚಿತ್ರ
ಪಾತ್ರ:- ಟಿ. ಆರ್. ಮಹಾಲಿಂಗಂ, ಕೃಷ್ಣನ್, ಮಧುರಂ ಮುಂತಾದವರು

-: ಪೊಂಗಲ್ ಸ್ಪೆಷಲ್ ಪ್ರೋಗ್ರಾಂ :-
M. G. M's Release
NEHRU IN U. S. A.
ಪಂಡಿತ ನೆಹರೂರವರ ಅಮೆರಿಕಾ ಪ್ರವಾಸದ ಚಿತ್ರಗಳನ್ನು ಇಪ್ಪತ್ತು ನಿಮಿಷ ಕಾಲ ಪ್ರದರ್ಶಿಸಲಾಗುವುದು

ಪ್ರಭಾ
14-1-50 ರಿಂದ
ಅಮೋಘ 3ನೇ ವಾರ
ಪ್ರತಿದಿನ 3 ಆಟಗಳು
ಭಾರತೀಯ ಸ್ತ್ರೀತ್ವದ ಧ್ಯೇಯಗಳನ್ನು ಎತ್ತಿಹಿಡಿದ ಮಹಿಳೆಯ ಪ್ರಶಂಸನೀಯ ಪ್ರಯತ್ನ !
ಎ. ಎಸ್. ಎ. ಪಿಕ್ಚರ್ಸ್‌ರವರ ಹಿಂದಿ ಚಿತ್ರ
ಸ್ವಯಂ ಸಿದ್ಧ
ಶಾಂತಾ ಆಪ್ಟೆ, ಮೋಲಿನಾ, ಗೀತಾ ಶ್ರೀ, ಬಿಪಿನ್ ಗುಪ್ತ


Edited, Printed and published by A. R. Nagarajan at Sadhvi Press, D. Subbiah Road, Mysore

ಕೋ|| ನಂ 792 WEEKLY EDITION ಒಂದಿನ ಪತ್ರಿಕೆ ೬ ಕಾಸು

ತಾಯಿನಾಡು

ಸಂಪುಟ ೧೪] ಭಾನುವಾರ ೧೫-೧-೫೦ [ಸಂಚಿಕೆ ೨೬

# ಮಾ|| ಸ್ಟಾಲಿನ್ನರೊಡನೆ ರಾಧಾಕೃಷ್ಣನ್ನರ ಭೇಟಿ

## ಕರ್ನಾಟಕ ಸಂಘಗಳ ಮಹಾ ಸಮ್ಮೇಳನ

ಮೈಸೂರು ೧೫

ಅಖಿಲ ಭಾರತ ಕರ್ನಾಟಕ ಸಂಘಗಳ ಮಹಾ ಸಮ್ಮೇಳನವು ರಾಜಧಾನಿಯ ಫರ್ಸ್ಟ್ ಗ್ರೇಡ್ ಕಾಲೇಜಿನ ಕರ್ನಾಟಕ [illegible] ದ ಮಂದಿರದಲ್ಲಿ ಪ್ರಾರಂಭವಾಯಿತು. [illegible] ಶಿವನಂಕ ಶಾಸ್ತ್ರಾಚಾರ್ಯ ದರ್ಮರ [illegible] ಸ್ವಾಗತ ಸಮ್ಮೇಳನದ ಪ್ರಾರಂ[illegible] ನೆರವೇರಿಸಿದರು. ಭಾರತ [illegible] ಯೇ ಕನ್ನಡ ನಾಡಿಗೂ ಆಧಾ[illegible] ವಾದರೂ ಕನ್ನಡ ನಾಡಿನ [illegible], ಸಂಗೀತ, ಶಿಲ್ಪ ಮೊದಲಾದ [illegible] ಒಂದು ವಿಶಿಷ್ಟ ಛಾಪು [illegible] ಕನ್ನಡಿಗರು ಅಭಿ[illegible] ಬೇಕೆಂದು ಸೂಚಿಸಿದ [illegible] ಮಾನ್ಯರು [illegible] ನಮ್ಮ ವಿದ್ಯಾಲ[illegible]ಗಳಲ್ಲಿ ಶಿಕ್ಷಣವನ್ನು ಕೊಡಬೇಕೆಂದು [illegible] ಹೇಳಿದರು

ಸಮ್ಮೇಳನಕ್ಕೆ ಹೈದರಾಬಾದು, ನೀಲ[illegible] ಮುಂತಾದ ಕಡೆಗಳಿಂದಲೂ ಸಂಸ್ಥಾನದ ಹಲವು ಭಾಗಗಳಿಂದಲೂ ಪ್ರತಿನಿಧಿ[illegible] ಬಂದಿರುವರು.

### ಗೆಳೆಯರ ಬಳಗ

[illegible] ಸೂರು ಚಾಮರಾಜಪುರಂ [illegible] ದಲ್ಲಿ ಸ್ಥಾಪಿತವಾಗಿರುವ ಗೆಳೆಯರ ಬಳಗದ ನೂತನ ಸಾಲಿನ ಅಧಿಕಾರವರ್ಗ[illegible] ಶ್ರೀ ಬಿ ನಂಜಪ್ಪನವರು ಅಧ್ಯಕ್ಷರಾಗಿ [illegible] ಶ್ರೀಪತಿ ಎಸ್. ಆರ್. ಪ್ರಸಾದರು [illegible] ಕಾರ್ಯದರ್ಶಿಗಳಾಗಿಯೂ, ಆರಿಸಲ್ಪಟ್ಟ[illegible] ಸಂಘವು ಅಕ್ಷರ ಪ್ರಚಾರ [illegible] ವ್ಯಾಸಂಗ ಗೋಷ್ಠಿ ಮುಂತಾದ [illegible]ಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊ[illegible]ವರು

## ಸಂಸ್ಥಾನಗಳ ವಿಮಾನ ನಿಲ್ದಾಣಗಳು ಕೇಂದ್ರಕ್ಕೆ

ಹೈದರಾಬಾದು, ಜಯಪುರ, ಜೋಧ[illegible] ಬಿಕನೀರ್, ಸೌರಾಷ್ಟ್ರ ಯೂನಿಯ[illegible] ಮೈಸೂರು ಮತ್ತು ತಿರುವಾಂಕೂರು [illegible] ಮುಂತಾದ ಸಂಸ್ಥಾನಗಳಲ್ಲಿರುವ [illegible] ವಿಮಾನ ನಿಲ್ದಾಣಗಳನ್ನು ಭಾರತ ಸರ[illegible]ದವರು ತಮ್ಮ ಸಂಪೂರ್ಣ ಹತೋ[illegible] ಇಟ್ಟುಕೊಳ್ಳುವುದಾಗಿ [illegible]

## ಕಾಳಸಂತೆಕೋರರಿಗೆ ಬಹಿರಂಗದಲ್ಲಿ ಛಡಿ ಶಿಕ್ಷೆ

[illegible]ರದ ಆಹಾರ ಧಾನ್ಯದ ಹೊಸ [illegible] ಪ್ರಕಾರ [illegible] ಎಂಬ [illegible] ಬಹಿರಂಗವಾಗಿ ೧೨ ಛಡಿ[illegible]ಗಳನ್ನು ಹೊಡೆಯಲಾಯಿತು.

## ನುರಿದಂಡಯ್ಯನವರ ನಿಧನ

ಮೈಸೂರು ೧೫

[illegible] ಪುರಸಭೆಯ ಮಾಜಿ [illegible] ಶ್ರೀ ನುರಿದಂಡಯ್ಯನವರು ನಿನ್ನೆ [illegible] ಹೃದಯ [illegible] ವೃತ್ತಪಟ್ಟ[illegible] ಸಲು ವಿಷಾದಿಸುತ್ತೇವೆ ಅವರು [illegible] ಕರ್ನಾಟಕ [illegible] ನ ಜನರಿಗೂ ಮತ್ತು ರಾಜಧಾನಿಯ [illegible] ಅವರು ವಿಶೇಷ ಸೇವೆಸಲ್ಲಿ[illegible] ತ್ತಾರೆ ಅವರ ಆತ್ಮಕ್ಕೆ ಭಗವಂತನು [illegible]

[illegible] ರಿಕದ [illegible] ಯಿಂದ [illegible] ಗಾರರಿಗೆ [illegible] ಕಾಣಿಕೆಗಳು ಹಲವು ದೊರೆತಿವೆ

## ಜಾತಿ ಮತಗಳ ಗೊಂದಲ ತೊಲಗಲಿ

### ಶ್ರೀ ನಿಜಲಿಂಗಪ್ಪನವರ ಭಾಷಣ

ಮೈಸೂರು ೧೫

ಅಖಿಲ ಭಾರತ ಕರ್ನಾಟಕ ಸಂಘಗಳ ಸಮ್ಮೇಳನದ ಆಶ್ರಯದಲ್ಲಿ ನಿನ್ನೆ ಸರ್ವಜ್ಞ ಮಹಾಕವಿಯ ಭಾವಚಿತ್ರದ ಅನಾವರಣ ಮಹೋತ್ಸವವು ಫಸ್ಟ್‌ಗ್ರೇಡ್ ಕಾಲೇಜಿನಲ್ಲಿ ನಡೆಯಿತು.

ಆಸ್ಥಾನ ವಿದ್ವಾನ್ ಶ್ರೀ ಬಿ ಶಿವಮೂರ್ತಿ ಶಾಸ್ತ್ರಿಗಳು ಸರ್ವಜ್ಞ ಮಹಾಕವಿಯ ಭಾವಚಿತ್ರವನ್ನು ಅನಾವರಣ ಮಾಡಿ ಅವನ ಉದಾತ್ತ ಧ್ಯೇಯಗಳನ್ನು ವಿವರಿಸಿ ಕನ್ನಡಿಗರೆಲ್ಲರೂ ಆತನ ತತ್ವಗಳನ್ನು ತಿಳಿದುಕೊಳ್ಳಬೇಕಾದುದು ಯುಕ್ತವೆಂದು ಹೇಳಿದರು. ಸರ್ವಜ್ಞನ ಎಲ್ಲಾ [illegible] ಪ್ರವೇಶಿಸಿ, ಜನರಿಗೆ ಜ್ಞಾನ ಮಾರ್ಗವನ್ನು ಬೋಧಿಸಿರುವನೆಂದೂ ಎಲ್ಲರೂ ಆತನ ತತ್ವವನ್ನು ಮನನ ಮಾಡಿಕೊಂಡು ವಿಶಾಲ ಭಾವನೆಯಿಂದ ಕೂಡಿ ಕರ್ನಾಟಕ ಏಕೀಕರಣಕ್ಕೆ ಶ್ರಮಿಸಬೇಕೆಂದು ಕೋರಿದರು

ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ಭಾಷಣಮಾಡಿ, ಕನ್ನಡಿಗರು ಜಾತಿ ಮತಗಳ ಗೊಂದಲದಲ್ಲಿ ಸಿಲುಕಿಕೊಳ್ಳಲ ಕೂಡದೆಂದೂ ಕನ್ನಡದ ಜನರಲ್ಲಿ ವಿಶಾಲಭಾವನೆಯು ಮೂಡಿ ಅಖಂಡ ಕರ್ನಾಟಕವಾಗಬೇಕಾದುದು ಅಗತ್ಯವೆಂದೂ ಹೇಳಿದರು. ಮೈಸೂರಿನ ಕೆಲವು ಜನರು ಜೈಲಿಗೆ ಹೋಗಿ ಬಂದುದನ್ನು ಪ್ರದರ್ಶನವನ್ನಾಗಿ ಮಾಡಿಕೊಂಡು, ಸಂಕುಚಿತ ಮನೋಭಾವದಿಂದಲೂ ಸ್ವಾರ್ಥದ ದೃಷ್ಟಿಯಿಂದಲೂ ಎರಡು ಕೋಟಿ ಜನರ ಆಕಾಂಕ್ಷೆಗಳಿಗೆ ಅಡ್ಡಿ ಮಾಡುವುದು ನ್ಯಾಯವಲ್ಲವೆಂದು ತಿಳಿಸಿದರು

ರಾಜರು, ನವಾಬರು ಮುಂತಾದವರ ಬಗ್ಗೆ ತಮಗೆ ಬಾಲ್ಯದಿಂದಲೂ ಉತ್ಸಾಹವಿರಲಿಲ್ಲವೆಂದೂ, ಮೈಸೂರು ಶ್ರೀಮನ್ಮಹಾರಾಜರವರನ್ನು ಒಳಗೊಂಡ ಅಖಂಡ ಕರ್ನಾಟಕ ರಾಜ್ಯವು ಸ್ಥಾಪಿತವಾದರೆ ತಮ್ಮದೇನೂ ಆಕ್ಷೇಪಣೆ ಇಲ್ಲವೆಂದೂ, ಹಾಗಿದ್ದರೆ ರಾಜರಿಲ್ಲದ ಪ್ರಾಂತವಾದರೂ ತಮಗೆ ಸಮ್ಮತವೆಂದೂ ಅವರು ನುಡಿದರು [illegible] ನೇತ [illegible] ಭಾರತ [illegible] ಅಕ್ಷಯ ಅನೇಕ ನೈಸರ್ಗಿಕ ಸಂಪತ್ತಿ[illegible]

## ಸ್ಟಾಲಿನ್-ರಾಧಾಕೃಷ್ಣನ್ ಸಮಾಗಮ

ರಷ್ಯದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಎಸ್ ರಾಧಾಕೃಷ್ಣನ್‌ರವರು ಮಾರ್ಷಲ್ ಸ್ಟಾಲಿನ್ನರವರನ್ನು ನಿನ್ನೆ ಭೇಟಿ ಮಾಡಿದ್ದರೆಂದು ಮಾಸ್ಕೋ ರೇಡಿಯೋ ತಿಳಿಸಿದೆ. ಆ ಕಾಲದಲ್ಲಿ ವಿದೇಶಾಂಗ ಮಂತ್ರಿ ಆಂಡ್ರಿ ವಿಷಿನ್ಸ್ಕಿಯವರೂ ಹಾಜರಿದ್ದರು. ಶ್ರೀಮತಿ ವಿಜಯಲಕ್ಷ್ಮಿಯವರು ರಷ್ಯದಲ್ಲಿದ್ದಾಗ ಅವರಿಗೆ ಈ ಅವಕಾಶ ದೊರೆತಿರಲಿಲ್ಲ

### ಪೋಸ್ಟಲ್ ಸೂಪರಿಂಟೆಂಡೆಂಟರಿಗೆ ವರ್ಗ

• ಮೈಸೂರು ಸರ್ಕಲ್ಲಿನ ಪೋಸ್ಟಲ್ ಸೂಪರಿಂಟೆಂಡೆಂಟರಾದ ಶ್ರೀ ವೈ. ನರಸಿಂಗ ರಾಯರನ್ನು ಕಾಶಿ ಸರ್ಕಲ್ಲಿನ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲಾಗಿದೆ. ಶ್ರೀಯುತರ ಗೌರವಾರ್ಥವಾಗಿ ಈ ದಿನ ನಗರದ ಅಂಚೆ ಇಲಾಖೆ ನೌಕರರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಅವರು ಇನ್ನು ಒಂದು ವಾರದೊಳಗೆ ಕಾಶಿಗೆ ಪ್ರಯಾಣ ಬೆಳೆಸುವ ನಿರೀಕ್ಷಣೆ ಇದೆ

### ಆಗಮನ

ಸೌತ್ ಇಂಡಿಯನ್ ರೈಲ್ವೆಗಳ ಹಣಕಾಸಿನ ಮುಖ್ಯಾಧಿಕಾರಿಗಳೂ, ಮೈಸೂರಿನವರೂ ಆದ ಶ್ರೀ ಸಿ ಸುಂದರರಾಮರಾಯರು ಮೊನ್ನೆ ರಾಜಧಾನಿಗೆ ಆಗಮಿಸಿ ತಮ್ಮ ತಮ್ಮಂದಿರಾದ ಶ್ರೀ ಸಿ. ಆನಂದರಾಮರಾಯರ ಮನೆಯಲ್ಲಿ ತಂಗಿರುತ್ತಾರೆ ಶ್ರೀಯುತರು ಸದ್ಯದಲ್ಲಿಯೇ ಮಧ್ಯಪ್ರಾಂತ್ಯದ ಅಕೌಂಟೆಂಟ್ ಜನರಲ್ ಹುದ್ದೆಯನ್ನು ವಹಿಸಿಕೊಳ್ಳುವರ

ನ ಪ್ರಯೋಜನವುಂಟಾಗುವುದೆಂದು ತಿಳಿಸಿದರು ಕೇವಲ ತಾತ್ಕಾಲಿಕವಾದ ಅಲ್ಪ ಪ್ರಯೋಜನಗಳಿಗೆ ಮನ ಕೊಡದೆ ಇಡೀ ನಾಡಿನ ಶ್ರೇಯಸ್ಸಿಗಾಗಿ ಸಕಲರೂ ಶ್ರಮಿಸಬೇಕೆಂದು ಹೇಳಿದರು ವಿದ್ಯಾರ್ಥಿಗಳು ಪ್ರತಿ ವರ್ಷವೂ ರಜೆಯಲ್ಲಿ ೩ ತಿಂಗಳಾದರೂ ಗ್ರಾಮಗಳಲ್ಲಿ ರೈತರೊಡನೆ ಸೇರಿ ಕೆಲಸ ಮಾಡಬೇಕೆಂದೂ, ಹಾಗೆ ಮಾಡಿದವರಿಗೆ ಮಾತ್ರ ವಿಶ್ವ ವಿದ್ಯಾನಿಲಯದ ಪದವಿಯನ್ನು ಕೊಡಬೇಕೆಂದೂ ಅಭಿಪ್ರಾಯಪಟ್ಟರು ರಾಷ್ಟ್ರದ ಐಕ್ಯತೆ ಮತ್ತು ಭದ್ರತೆಗಾಗಿ ಸಕಲರೂ ಅಗತ್ಯವಾದ ತ್ಯಾಗವನ್ನು ಮಾಡಬೇಕೆಂದು ಸೂಚಿಸಿದರು.

ವಿದ್ಯಾರ್ಥಿನಿಯರಿಂದ ನಾಟಕ ಪ್ರದರ್ಶನವೂ ನಡೆಯಿತು.

## ರಿಪಬ್ಲಿಕ್ ದಿನ ವಿದ್ಯಾರ್ಥಿಗಳಿಗೆ ೨ ಆಣೆ ಬಹುಮಾನ

ರಿಪಬ್ಲಿಕ್ ದಿನಾಚರಣೆಯ ಸಂಬಂಧವಾಗಿ ಬೊಂಬಾಯಿ ಪ್ರಾಂತದ ಎಲ್ಲಾ ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳ ವಿದ್ಯಾರ್ಥಿಗಳಿಗೆ ತಲಾ ೨ ಆಣೆಯಂತೆ ಕೊಡಬೇಕೆಂದು ಅಲ್ಲಿನ ಸರಕಾರದವರು ತಿಳಿಸಿರುತ್ತಾರೆ ಅದನ್ನು ವಿದ್ಯಾರ್ಥಿಗಳು ಆಟ, ಪಾಠ ಅಥವ ಹಣ್ಣು ಹಂಪಲುಗಳಿಗಾಗಿ ಉಪಯೋಗಿಸಲು ಸ್ವತಂತ್ರರಾಗಿದ್ದಾರೆ. ಶಾಲಾಧ್ಯಕ್ಷರುಗಳು ಸಭೆ ನಡೆಸಿ ಆ ದಿನದ ಮಹತ್ವವನ್ನು ವಿವರಿಸಬೇಕೆಂದು ಕೋರಲಾಗಿದೆ

## "ಹಿಸ್ ಎಕ್ಸಲೆನ್ಸಿ" ಬಿರುದು ಇನ್ನು ಮೇಲೆ ಇಲ್ಲ

ಭಾರತದಲ್ಲಿ ರಿಪಬ್ಲಿಕ್ಕಿನ ಸರಕಾರವು ಸ್ಥಾಪನೆಯಾದಂದಿನಿಂದ ಗೌರ್ನರ್ ಜನರಲ್ ಮತ್ತು ಗೌರ್ನರುಗಳಿಗೆ ಇದ್ದ ಹಿಸ್ ಎಕ್ಸಲೆನ್ಸಿ ಎಂಬ ಬಿರುದೂ, ಮಂತ್ರಿಗಳಿಗೆ "ಆನರಬಲ್" ಎಂಬ ಅಭಿದಾನವೂ ಹೋಗುವುವೆಂದು ಹೇಳಲಾಗಿದೆ.

## ವಿಶ್ವಸಂಸ್ಥೆಗೆ ಎಸ್. ಲಾಲ್

ವಿಶ್ವ ಸಂಸ್ಥೆಯ ಸಹಾಯಕ ಕಾರ್ಯದರ್ಶಿಗಳಾಗಿ ಭಾರತದ ಕಾರ್ಮಿಕ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಎಸ್ ಲಾಲ್‌ರವರನ್ನು ನೇಮಿಸಲಾಗಿದೆ.

## ಯಳಂದೂರು ವಿದ್ಯಾರ್ಥಿ ನಿಧಿ

ಮೇಲ್ಕಂಡ ನಿಧಿಯ ೩೦ ವರ್ಷಗಳ ಸಂಕ್ಷಿಪ್ತ ವರದಿಯು ನಮ್ಮ ಹಸ್ತಗತವಾಗಿರುತ್ತದೆ ೧೯೨೦ ನೇ ಜನವರಿಯಲ್ಲಿ ಶ್ರೀಮಂತ ನರಸಿಂಗರಾವ್ ಪೂರ್ಣಯ್ಯನವರ ಸ್ಮಾರಕವಾಗಿ ಸ್ಥಾಪಿತವಾದ ಈ ನಿಧಿಯು ಕಳೆದ ೩೦ ವರ್ಷಗಳಿಂದ ಜಹಗೀರಿನ ಎಲ್ಲ ಜಾತಿಯ ಬಡ ವಿದ್ಯಾರ್ಥಿಗಳಿಗೂ ನೀಡಿರುವ ಸಹಾಯದ ವಿವರಗಳು ಅದರಲ್ಲಿ ಕೊಡಲ್ಪಟ್ಟಿವೆ. ಒಟ್ಟು ೯೩೮ ಜನ ವಿದ್ಯಾರ್ಥಿಗಳಿಗೆ ರೂ ೨೭೪೧೨ ಅನ್ನು ಕೊಡಲಾಗಿದೆ ಈ ೩೦ ವರ್ಷಗಳಲ್ಲಿ ತಾಲ್ಲೋಕಿನ ಮತ್ತು ಇತರ ಕಡೆಗಳ ಮಹಾಶಯರುಗಳಿಂದ ಒಟ್ಟು ರೂ ३೦,೨೮೫ ವಸೂಲಾಗಿರುತ್ತದೆ ಈ ನಿಧಿಯಿಂದ ಪ್ರಯೋಜನ ಪಡೆದಿರುವ ಅನೇಕ ವಿದ್ಯಾರ್ಥಿಗಳು ತಮ್ಮ ಕೃತಜ್ಞತೆಯನ್ನು ಸೂಚಿಸಲು ನಿಧಿಗೆ ೫೦೦೦ ರೂ ಗೆ ಮೀರಿ ಕಾಣಿಕೆಯನ್ನು ಸಲ್ಲಿಸಿರುತ್ತಾರೆ.

ಜಹಗೀರಿಯ ಫಂಡಿನಿಂದ ವರ್ಷಕ್ಕೆ ೫೦೦ ರೂಪಾಯಿ ಕೊಡಲು ಸರ್ಕಾರದವರು ಮಂಜೂರು ಮಾಡಿರುವುದನ್ನು ಖಾಯಂ ಆಗಿ ಕೊಡಬೇಕೆಂದು ವ್ಯವಸ್ಥಾಪಕರು ಮಾಡಿರುವ ಮನವಿಗೆ ಸರ್ಕಾರದವರು ಬೇಗನೆ ಅನುಮತಿ ಈಯುವರೆಂದು ನಂಬಲಾಗಿದೆ ೩೦ ವರ್ಷಕಾಲ ಅವಿಚ್ಛಿನ್ನವಾಗಿಯೂ ಮತ್ತು ದಿನೇ ದಿನೇ ಪ್ರಗತಿಪರವಾಗಿಯೂ ಈ ನಿಧಿಯು ನಡೆದುಬರಲು ಶ್ರಮಿಸಿದ ರಾಜಸೇವಾಸಕ್ತ ವೈ ಕೆ ರಾಮಚಂದ್ರರಾವ್ ಮತ್ತು ಇತರ ಮಹನೀಯರು ವಂದನಾರ್ಹರು ತಾಲ್ಲೋಕಿನ ನಿವಾಸಿಗಳು ಇನ್ನು ಮುಂದೆ ಈ ನಿಧಿಯಲ್ಲಿ ಇತೋಪ್ಯತಿಶಯವಾದ ಆಸಕ್ತಿಯನ್ನು ವಹಿಸಿ ಜೆಟ್ಟಿನ ಪ್ರಮಾಣದಲ್ಲಿ ಬಡ ವಿದ್ಯಾರ್ಥಿಗಳಿಗೆ ಸಹಾಯವಾಗಲು ಒಂದು ಶಾಶ್ವತವಾದ ನಿಧಿಯನ್ನು ಕೂಡಿಸುವುದರಲ್ಲಿ ನೆರವಾಗಬೇಕೆಂದು ನಾವು ಕೋರುತ್ತೇವೆ.

## ವಾರ ಭವಿಷ್ಯ

ಶ್ರೀ

ತಾ|| ೧೫-೧-೫೦ರಿಂದ ೨೧-೧-೫೦ರವರೆಗೆ

ಮೇಷ—ಆರೋಗ್ಯ ನೆಟ್ಟಗೆ ಇಷ್ಟಾರ್ಥ ಸಿದ್ಧಿ ಸಜ್ಜನರ ಸಹವಾಸ ಕೋರ್ಟು ಕಾರ್ಯಕ್ರಮವಾಗಿ ನಡೆಯುತ್ತದೆ ವ್ಯಾಪಾರ, ಉದ್ಯೋಗ ನೌಕರಿಗಳಲ್ಲಿ ಉನ್ನತಿ ಧಾರ್ಮಿಕ ಕಾರ್ಯ. ತಾ|| ೧೭-೨೦ ಅಲ್ಪ ಪ್ರವಾಸ, ಮಹತ್ವದ ಭೇಟಿ

ವೃಷಭ—ಆರೋಗ್ಯ ನೆಟ್ಟಗೆ ಆಪ್ತ ಜನರ ಭೇಟಿ ಧನಲಾಭ ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೆ ಸ್ಥಿತಿ ನೌಕರಿಯಲ್ಲಿ ಮಾನಸನ್ಮಾನಗಳ ಆಧಿಕ್ಯ ಕೋರ್ಟು ಕಾರ್ಯ ಜಯ. ಪ್ರವಾಸ ಸುಖಪ್ರದ. ತಾ|| ೧೭-೧೯ ಬಟ್ಟೆ ಖರೀದಿ, ಮಿತ್ರರ ಅನಾರೋಗ್ಯ.

ಮಿಥುನ—ವಾರ ಕಷ್ಟದಾಯಕ. ಅನಾರೋಗ್ಯ ಮನೆ ಸ್ಥಿತಿಯು ಬಿಗಡಾಯಿಸುವುದು ಸಾಲ ಬಗ್ಗೆ ನೋಟೀಸು ಬರುವುದು. ಪತ್ನಿಯ ಕೋಪ ತಾ|| ೧೮-೧೯ ಅಪಘಾತ, ಭಯ, ವಿಯೋಗ ಚಿಂತೆ.

ಕರ್ಕ-ಯಾರ ಭೇಟಿಗೆ ತವಕಿಸುತ್ತಿದ್ದಿರೋ ಅವರು ಅಕಸ್ಮಾತ್ ಸಿಕ್ಕುವರು. ಮನಸ್ಸಿಗೆ ಸಮಾಧಾನ ನೌಕರಿಯಲ್ಲಿ ಮೇಲ್ದರ್ಜೆ ಪ್ರಾಪ್ತಿ. ವ್ಯಾಪಾರಾದಿಗಳಲ್ಲಿ ಸಹಾನುಭೂತಿ ಹಣಕಾಸಿನ ಸ್ಥಿತಿ ಲಾಭದಾಯಕ. ತಾ|| ೧೬-೨೦ ಪರೋಪಕಾರ.

ಸಿಂಹ—ಎಲ್ಲಾ ಕಾರ್ಯಗಳಿಗೂ ಉತ್ತೇಜನ ಸಿಕ್ಕುವುದು. ವ್ಯಾಪಾರ ಉದ್ಯೋಗಗಳು ವ್ಯವಸ್ಥಿತವಾಗಿ ಸಾಗುವುವು. ನೌಕರಿಯಲ್ಲಿ ನಿಮ್ಮ ಮೇಲೆ ಅಧಿಕಾರಿಯು ಧ್ವಂಸ ಅಲ್ಪ ಪ್ರವಾಸ ಹಣಕಾಸಿನ ಅಡಚಣೆ ಅಷ್ಟಾಗಿ ಇಲ್ಲ ಪತ್ನಿಯು ಪ್ರಸನ್ನತೆ. ತಾ|| ೧೮-೧೯ ಜಾಗರಣೆ ಅಪ್ರೇಷ್ಠರಿಗೆ ಧನಸಹಾಯ.

ಕನ್ಯಾ—ಮನಸ್ಸಿಗೆ ಅಸಮಾಧಾನ ಆರೋಗ್ಯ ನೆಟ್ಟಗಿರದು, ಜವಾಬ್ದಾರಿಯನ್ನು ಹೊರುವುದು ಕಷ್ಟಕರವಾಗುವುದು ತರರೀನ ವ್ಯವಹಾರವೊಂದರಲ್ಲಿ ಸಿಕ್ಕಿಕೊಳ್ಳುವಿರಿ ತಾ|| ೧೬, ೧೭ ಮಸ್ತಕಕ್ಕೆ ತೀವ್ರ ಆಘಾತ

ತುಲಾ—ವ್ಯಾಪಾರ,ಉದ್ಯೋಗಾದಿಗಳಲ್ಲಿ ಹೇಚಾಟದ ಪ್ರಸಂಗ. ಯಾರ ಭೇಟಿಗಾಗಿ ನೀವು ತವಕಿಸುತ್ತಿದ್ದಿರೋ ಅವರ ಭೇಟಿ ದೊರೆಯುವುದಿಲ್ಲ ಕಾಲುನೋವು ತಾ|| ೧೮, ೧೯, ಬೆಲೆಬಾಳುವ ಪದಾರ್ಥದ ಕಳುವು.

ವೃಶ್ಚಿಕ—ಆರೋಗ್ಯ ನೆಟ್ಟಗೆ. ಉಚ್ಚತ ಸ್ಥಾನ ಲಭ್ಯವಾಗುತ್ತದೆ ಸುಖ ಪ್ರವಾಸ. ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ಅಂದಾಜು ಸರಿಬರುವುದು ಧನ ಲಾಭ. ತಾ|| ೧೬, ೧೮ ಮಹತ್ವದ ಪತ್ರಾಗಮನ.

ಧನು—ಆರೋಗ್ಯ ನೆಟ್ಟಗೆ ಮನಸ್ಸಿಗೆ ಉತ್ಸಾಹ. ನೌಕರಿ ಸಂಬಂಧ ಯಲ್ಲಿ ಉತ ಘಟನೆ. ಪ್ರಸಿದ್ಧ ಪುರುಷರಿಗೆ ಆತಿಥ್ಯ ವ್ಯಾಪಾರ, ಉದ್ಯೋಗಾದಿಗಳಲ್ಲಿ ಇಷ್ಟದಾಯಕ ಘಟನೆ ತಾ|| ೧೯, ೨೦ ಮಹತ್ವದ ನಿರೂಪ.

ಮಕರ—ಎದುರಾಳಿಗಳಿಗೆ ಅಂಜದಿರಿ ಆರೋಗ್ಯ ನೆಟ್ಟಗೆ ವ್ಯಾಪಾರ ಉದ್ಯೋಗಾದಿಗಳಲ್ಲಿ ಪ್ರಗತಿ ಪ್ರವಾಸದ ಯೋಜನೆ ತಾ|| ೧೬, ೧೭, ಗೊಂದಲ ಚಿಂತೆ

ಕುಂಭ—ಕಲಹಕ್ಕೆ ಕಾರಣರಾಗುವ ದುಷ್ಕರ್ಮಿ ವರ್ತಿಸಿರಿ. ಆರೋಗ್ಯದ ದೃಷ್ಟಿಯಿಂದ ತೊಂದರೆ ಉಗುರುಸಂಬಂಧವಾದ ಪೀಡೆಗಳು. ವ್ಯಾಪಾರ,ಉದ್ಯೋಗಾದಿಗಳಲ್ಲಿ ತೀವ್ರತೆ ಪ್ರವಾಸದಲ್ಲಿ ಸಂಕಟ. ತಾ|| ೧೭,೧೯ ಅಗ್ನಿ ರಕ್ತಭಯ ಧನಚಿಂತೆ

ಮೀನ ಅಪೇಕ್ಷಾಭಂಗ ಆರೋಗ್ಯ ನೆಟ್ಟಗೆ ಖರ್ಚು ಅಧಿಕ ಪ್ರವಾಸ ಆಕಸ್ಮಿಕ ರದ್ದು ತಾ|| ೧೬, ೧೯ ಯಾಂತ್ರಿಕ ವಾಹನ ಸಂಕಟದಿಂದ ಪಾರು

## ರಿಪಬ್ಲಿಕ್ ದಿನಾಚರಣೆಯಲ್ಲಿ ಆಹಾರದ ನಿರ್ಬಂಧವಿಲ್ಲ

ಭಾರತ ಗಣರಾಜ್ಯ ರಿಪಬ್ಲಿಕ್ ದಿನಾಚರಣೆಯಲ್ಲಿ ಅತಿಥಿ ಸತ್ಕಾರಕ್ಕಾಗಿ ಆಹಾರದ ಕಟ್ಟುಪಾಡನ್ನು ಕೇಂದ್ರ ಸರಕಾರದವರು ತೆಗೆದು ಹಾಕುತ್ತಾರೆ ಅಧಿಕಾರಯುತ ಸತ್ಕಾರಗಳ ಅತಿಥಿಗಳ ಸಂಖ್ಯೆಗೂ ಮತ್ತು ಆಹಾರಗಳಿಗೂ ಮಿತಿಯನ್ನು ಕಲ್ಪಿಸಿಲ್ಲ ಸಾರ್ವಜನಿಕರು ಸೇರಿಸಲುಪಾದ ಕೂಟಗಳಿಗೆ ರೇಷನ್ನಿನ ಸಾಮಾನುಗಳನ್ನು ಉಪಯೋಗಿಸದಿದ್ದರೆ ಅತಿಥಿಗಳ ಸಂಖ್ಯೆಯ ನಿರ್ಬಂಧವನ್ನು ತೆಗೆಯಲಾಗಿದೆ.

## ಇಲಿಗೆ ಹಾಲು ಕುಡಿಸುವ ಬೆಕ್ಕು

ಇಲಿಯ ಮರಿಗೆ ಬೆಕ್ಕು ಹಾಲು ಕೊಡುತ್ತಿರುವ ಪ್ರಸಂಗವೊಂದು ಕೊಲಂಬೋ ಬಳಿ ಇರುವ ದೆಹಿವೋ ನಿಟೊ ಎಂಬ ಯಾತ್ರಾಸ್ಥಳದಿಂದ ವರದಿಯಾಗಿದೆ. ಅಲ್ಲಿಯ ರೈತನೊಬ್ಬನ ಜಮೀನಿನಲ್ಲಿ ಇಲಿಗಳು ವಿಶೇಷವಾಗಿದ್ದುದರಿಂದ ಅವುಗಳನ್ನು ನಾಶಪಡಿಸಲು ಆತನು ಬೆಕ್ಕೊಂದನ್ನು ತಂದು ಬಿಟ್ಟನು. ಆದರೆ ಆ ಬೆಕ್ಕು ಆವುಗಳನ್ನು ತಿನ್ನದೆ ತಾನು ತನ್ನ ಮರಿಗಳಿಗೆ ತೋರುವ ಪ್ರೀತಿಯನ್ನು ಅವುಗಳಿಗೆ ತೋರಿಸಿ ತನ್ನ ಮೊಲೆ ಹಾಲನ್ನು ಅವುಗಳಿಗೆ ಕೊಡುತ್ತಿದೆ ಈ ಅದ್ಭುತ ದೃಶ್ಯವನ್ನು ಕಂಡು ಅಲ್ಲಿಗೆ ಯಾತ್ರಾರ್ಥಿಗಳಾಗಿ ಹೋಗಿದ್ದ ೧೦,೦೦೦ ಜನರು ಆಶ್ಚರ್ಯಚಕಿತರಾದರು

## ಮದ್ರಾಸು ಪ್ರಧಾನಿಗೆ "ಚೀಫ್ ಮಿನಿಸ್ಟರ್" ಹೆಸರು

ಸಂಸ್ಥಾನದ (ಪ್ರಾಂತ) ಮಂತ್ರಿಮಂಡಲ ಪ್ರಧಾನಿಗಳನ್ನು 'ಮುಖ್ಯ ಮಂತ್ರಿ" ಎಂದು ಕರೆಯಬೇಕೆಂದು ಭಾರತದ ರಾಜ್ಯಾಂಗದಲ್ಲಿ ವಿಧಾಯಕವಾಗಿರುವುದರಿಂದ, ಮದ್ರಾಸಿನ ಪ್ರಧಾನಿಯವರನ್ನು ಅದೇ ರೀತಿ ಕರೆಯಲಾಗುವುದೆಂದು ಅಧಿಕಾರಿ ಪ್ರಕಟಣೆ ತಿಳಿಸಿರುತ್ತದೆ

## ಕೊಟ್ಯಾಧೀಶ್ವರನಿಗೆ ಸಜಾ

ಸಾವಿರ ರೂ. ಬೆಲೆ ಬಾಳುವ ನೋಟುಗಳನ್ನು ಬಚ್ಚಿಟ್ಟ ಬೊಂಬಾಯಿಯ ಕೋಟ್ಯಾಧೀಶರಾದ ಮೊಂಡ್ಯ ಎಂಬುವರ ಮೇಲೆ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದಾಗ, ವಿಚಾರಣೆಯನ್ನು ತಪ್ಪಿಸಲು ಅವರು ಪೋಲೀಸು ಅಧಿಕಾರಿಯೊಬ್ಬರಿಗೆ ಒಂದು ಲಕ್ಷ ರೂ. ಗಳನ್ನು ಕೊಟ್ಟರೆಂಬ ಕಾರಣದ ಮೇಲೆ ಅವರಿಗೆ ವಿಧಿಸಲಾಗಿದ್ದ ಆರು ತಿಂಗಳ ಶಿಕ್ಷೆ ಮೇಲೆ ಅಪೀಲು ಮಾಡಲು ಹೈಕೋರ್ಟಿನವರು ೧ ವರ್ಷ ಶಿಕ್ಷೆಗೆ ಹೆಚ್ಚಿಸಿರುತ್ತಾರೆ ಪೋಲೀಸು ಅಧಿಕಾರಿಗೆ ೩ ತಿಂಗಳಿಂದ ೬ ತಿಂಗಳ ಸಜಾ ವಿಧಿಸಲಾಗಿದೆ.


ಗಣೇಶಾ ಟಾಕೀಸ್

—:§:—

13-1-50ರಿಂದ ಪ್ರತಿ ದಿನ 3 ಆಟಗಳು

ಜ್ಯುಪಿಟರ್ಸ್‌ರವರ

ವಾಲ್ಮೀಕಿ (ತಮಿಳು)

-: ಭೂಮಿಕೆ:-

ಹೊನ್ನಪ್ಪ ಭಾಗವತರ್, ಟಿ. ಆರ್. ರಾಜಕುಮಾರಿ. ಯು. ಆರ್. ಜೀವರತ್ನಂ ಕಾಳಿ ಎನ್ ರತ್ನಂ

ಎಂ. ವಿ. ಸುಬ್ಬಯ್ಯ ನಾಯ್ಡುರವರ

ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ

ಮೈಸೂರು

ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ

14-1-50 ನೇ ಶನಿವಾರದ ದಿನ ಪ್ರತಿದಿನ ಪ್ರ... ...

... ... ... ...

ಭಕ್ತ ಅಂಬರೀಷ

ಎಂಬ ನಾಟಕವು ಅಭಿನಯಿಸಲ್ಪಡುತ್ತ

ರಾಜಕಮಲ್

ಮೈಸೂರು

13—1—50 ರಿಂದ

ಜನಭರಿತವಾದ ೪ನೇ ವಾರ

ದಿನವಹಿ 3 ಪ್ರದರ್ಶನಗಳು

ಜೀವನ

—: ಭೂಮಿಕೆ: —

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ್, ಲಲಿತ-ಪದ್ಮಿನಿ

THE CITY TUTORIAL COLLEGE

C. T. C. Publications

Ready for Sale 0 8 0 Each

A very useful Guide to B. Sc., & Inter Science Examinations

J. Nanumal & Sons, Mysore & other leading Book-sellers

ಪ್ರಭುದೇವಾ ಟಾಕೀಸ್

13-1-50 ನೇ ಶುಕ್ರವಾರದಿಂದ

ದಿನವಹಿ 3 ಆಟಗಳು

ಭೂಲೋಕ ರಂಭೆ ತಮಿಳು ಚಿತ್ರ

ಪಾತ್ರ:- ಟಿ. ಆರ್. ಮಹಾಲಿಂಗಂ, ಕೃಷ್ಣನ್, ಮಧುರಂ ಮುಂತಾದವರು

-: ಪೊಂಗಲ್ ಸ್ಪೆಷಲ್ ಪ್ರೋಗ್ರಾಂ :

M. G. M's Release NEHRU IN U. S. A.

ಪಂಡಿತ ನೆಹರೂರವರ ಅಮೆರಿಕಾ ಪ್ರವಾಸದ ಚಿತ್ರಗಳನ್ನು ಇಪ್ಪತ್ತು ನಿಮಿಷ ಕಾಲ ಪ್ರದರ್ಶಿಸಲಾಗುವುದು

ಪ್ರಭಾ

14-1-50ರಿಂದ

ಅಮೋಘ ೩ನೇ ವಾರ

ಪ್ರತಿದಿನ 3 ಆಟಗಳು

ಭಾರತೀಯ ಸ್ತ್ರೀತ್ವದ ಧ್ಯೇಯಗಳನ್ನು ಎತ್ತಿಹಿಡಿದ ಮಹಿಳೆಯ ಪ್ರಶಂಸನೀಯ ಪ್ರಯತ್ನ!

... ಪಿಕ್ಚರ್ಸ್‌ರವರ ಹಿಂದಿ ಚಿತ್ರ

ಸ್ವಯಂ ಸಿದ್ಧ

ಶಾಂತಾ ಆಪ್ಟೆ, ಮೋಲಿನಾ, ಗೀತಾ ಶ್ರೀ, ಬಿಪಿನ್ ಗುಪ್ತ

ರಂಜಿತ್ ಟಾಕೀಸ್

13 1 50 ರಿಂದ ಅಭೂತಪೂರ್ವವಾದ ೪ನೇ ವಾರ

ಮೆಹಬೂಬ್‌ರವರ ಹಿಂದಿ ಚಿತ್ರ

ಅಂದಾಜ್

ಸಂಗೀತ:- ನೌಷಾದ್

ನರ್ಗೀಸ್, ದಿಲೀಪ್ ಕುಮಾರ್, ರಾಜ ಕಪೂರ್, ... ಕಕ್ಕು

॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಸೋಮವಾರ ೧೬-೧-೫೦ [ಸಂಚಿಕೆ ೧೪೧

# ಸಿದ್ದಲಿಂಗಯ್ಯನವರಿಗೆ ಮಂತ್ರಿ ಪದವಿ

## ಆರೋಗ್ಯ ಸಚಿವರ ಭಾಷಣ

ಮೈಸೂರು ೧೬

ಮೈಸೂರು ಆಯುರ್ವೇದ ಮತ್ತು ಯುನಾನಿ ಕಾಲೇಜು ಸಂಘದ ಆರಂಭ ಭಾಷಣವನ್ನು ನಿನ್ನೆ ಆರೋಗ್ಯ ಮಂತ್ರಿಗಳಾದ ಜ॥ ಮಹಮೂದ್ ಷರೀಫ್‌ರವರು ನೆರವೇರಿಸಿದರು. ಪೌರಸಭಾಧ್ಯಕ್ಷರಾದ ಶ್ರೀ ಟಿ ವೆಂಕಟರಮಣಯ್ಯನವರು ಅಗ್ರಾಸನ ವಹಿಸಿದ್ದರು.

ಕಾಲೇಜಿನ ಪ್ರಿನ್ಸಿಪಾಲ್‌ರವರು ಭಾಷಣ ಮಾಡಿ ಮೈಸೂರು ಸಂಸ್ಥಾನದಲ್ಲಿ ಬಹಳ ಹಿಂದಿನಿಂದಲೂ ಆಯುರ್ವೇದಕ್ಕೆ ದೊರೆಯುತ್ತಿರುವ ಉತ್ತೇಜನವನ್ನು ವಿವರಿಸಿದರು. ಜ॥ ಷರೀಫ್‌ರವರು ತಮ್ಮ ಭಾಷಣದಲ್ಲಿ ದೇಶೀಯ ವೈದ್ಯ ಪದ್ಧತಿಯ ಬೆಳವಣಿಗೆಗೆ ಸಂಶೋಧನಾ ಕಾರ್ಯಕ್ರಮದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಬೆಂಗಳೂರು ನಗರದಲ್ಲಿ ಒಂದು ಸಂಶೋಧನಾಲಯವು ಕೇಂದ್ರ ಸರ್ಕಾರದವರಿಂದ ಸ್ಥಾಪಿಸಲ್ಪಡುವುದೆಂದೂ ತಿಳಿಸಿದರು.

ಆಯುರ್ವೇದ ಮತ್ತು ಯುನಾನಿ ವೈದ್ಯರ ಆಧುನಿಕ ಸೌಲಭ್ಯಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ತಮ್ಮ ವಿದ್ಯೆಯನ್ನು ಶ್ರದ್ಧಾಭಕ್ತಿಗಳಿಂದ ಗಳಿಸಿಕೊಂಡು ಪ್ರಜೆಗಳಿಗೆ ಸಹಾಯ ಮಾಡಬೇಕೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೋರಿದರು.

## ಬೊಂಬಾಯಿ ಗೌರ್ನರರ ಆಗಮನ

ಬೊಂಬಾಯಿ ಗೌರ್ನರರಾದ ಸರ್ ಮಹಾರಾಜ ಸಿಂಗ್‌ರವರು ನಿನ್ನೆ ರಾಜಧಾನಿಗೆ ಆಗಮಿಸಿ ಪ್ರಭುತ್ವದ ಅತಿಥಿಗಳಾಗಿದ್ದಾರೆ. ಅವರು ಇನ್ನು ೩ ದಿನಗಳಿದ್ದು, ನಿನ್ನೆ ಮತ್ತು ಈದಿನ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದ್ದರು.

## ರೆಡ್ಡಿ-ದಾಸಪ್ಪನವರ ಆಗಮನ

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರೂ ಅರ್ಥಿಕ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರೂ ನಿನ್ನೆ ರಾತ್ರಿ ಇಲ್ಲಿಗೆ ಆಗಮಿಸಿದರು.

## ಶ್ರೀ ತ್ಯಾಗರಾಜ ಗಾಯನ ಸಭಾ

ರಾಜಧಾನಿಯ ಶ್ರೀ ತ್ಯಾಗರಾಜ ಗಾಯನ ಸಭೆಯವರು ಕೃಷ್ಣರಾಜೇಂದ್ರ ಆಸ್ಪತ್ರೆ ರೋಡಿನಲ್ಲಿರುವ ಒಕ್ಕಲಿಗರ ಶ್ರೀರಾಮ ಮಂದಿರದಲ್ಲಿ ನಿನ್ನೆಯಿಂದ ಪ್ರತಿ ದಿನ ಸಾಯಂಕಾಲ ೫ ಘಂಟೆಗೆ ಶ್ರೀಮದ್ ವಾಲ್ಮೀಕಿ ರಾಮಾಯಣ ಎಂಬ ಹರಿಕಥೆಯನ್ನು ಕೀರ್ತನ ವಿದ್ವಾನ್ ಆರ್ ನಾರಾಯಣದಾಸರಿಂದ ಏರ್ಪಡಿಸಿರುತ್ತಾರೆ. ನಾಳಿದ್ದು ಸಂಜೆ ೬ ಘಂಟೆಗೆ ಪುರಂದರದಾಸರ ಪುಣ್ಯದಿನದ ಪ್ರಯುಕ್ತ ವಿದ್ವಾನ್ ಎಂ ಆರ್ ರಾಮಕೃಷ್ಣ ಭಾಗವತರ ಗಾಯನವನ್ನು ಏರ್ಪಡಿಸಲಾಗಿದೆ.

## ಹೊಟೇಲ್ ಕೆಲಸಗಾರರ ಸಂಘ

ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿಯವರು ಹೊಟೇಲ್ ಮಾಲೀಕರಿಗೆ ಕೊಟ್ಟಿದ್ದ ನೋಟೀಸ್ ಆಫ್ ಛೇಂಜ್ ದ ಕಾರಣವಾಗಿ ಲೇಬರ್ ಆಫೀಸಿನಲ್ಲಿ ಮಾಲೀಕರಿಗೂ, ಸಂಘದ ಅಧಿಕಾರಿಗಳಿಗೂ ಚರ್ಚೆ ನಡೆದು ಯಾವ ನಿರ್ಧಾರಕ್ಕೂ ಬರದೇ ಇದ್ದುದರಿಂದ ವಿಷಯವು ಜನರಲ್ ಮೀಟಿಂಗಿನಲ್ಲಿ ಇತ್ಯರ್ಥ ಮಾಡುವುದಾಗಿ ಮಾಲೀಕರು ಭರವಸೆ ಇತ್ತ ಮೇಲೆ ಸಂಧಾನವನ್ನು ಮುಂದೆ ನಡೆಸಲು ತೀರ್ಮಾನಿಸಲಾಯಿತು.

## ಪಟೇಲರ ಭಾಷಣದ ಮೈದಾನದಲ್ಲಿ ಬಾಂಬು

ನಿನ್ನೆ ಮಧ್ಯಾಹ್ನ ಕಲ್ಕತ್ತಾ ಮೈದಾನವೊಂದರಲ್ಲಿ ನೆರೆದಿದ್ದ ೫ ಲಕ್ಷ ಪ್ರಜೆಗಳನ್ನು ಉದ್ದೇಶಿಸಿ ಸರದಾರ್ ಪಟೇಲರು ಭಾಷಣ ಮಾಡುವುದಕ್ಕೆ ಸ್ವಲ್ಪ ಮುಂಚಿತವಾಗಿ ಪೋಲೀಸರು ನಡೆಸಿದ ತೀವ್ರ ಶೋಧನಾ ಕಾರ್ಯದಿಂದ ೪ ಭಾರಿ ಬಾಂಬುಗಳು ದೊರೆತವು. ಸಭೆಗೆ ೮೦೦ ಗಜದ ಹತ್ತಿರ ಇದ್ದ ಚರಂಡಿಯಲ್ಲಿ ೩ ಬಾಂಬುಗಳನ್ನು ಬಚ್ಚಿಡಲಾಗಿತ್ತು. ಮತ್ತೊಂದು ಬಾಂಬು ಇನ್ನೊಂದು ಭಾಗದ ಹಾದಿಯಲ್ಲಿಡಲ್ಪಟ್ಟಿತ್ತು.

## ರಿಪಬ್ಲಿಕ್ ದಿನ ರಾಜಕೀಯ ಖೈದಿಗಳ ಖುಲಾಸೆ

೨೬ ನೇ ತಾರೀಖು ರಿಪಬ್ಲಿಕ್ ಸ್ಥಾಪನೆಯ ಸಂಬಂಧವಾಗಿ ರಾಜಕೀಯ ಖೈದಿಗಳನೇಕರಿಗೆ ಕ್ಷಮೆ ತೋರಿ ಖುಲಾಸೆ ಮಾಡಲಾಗುವುದೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

## ರಿಪಬ್ಲಿಕ್ಕಿನ ದಿನಗಳಲ್ಲಿ ಕಾರ್ಮಿಕರಿಗೆ ರಜಾ

ಭಾರತದ ರಿಪಬ್ಲಿಕ್ಕಿನ ಸ್ಥಾಪನೆಯ ಸಂದರ್ಭದಲ್ಲಿ ೨೬ ಮತ್ತು ೨೭ನೇ ತಾ॥ ನಾನಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ರಜ ಕೊಡಬೇಕೆಂದು ಕೇಂದ್ರ ಸರ್ಕಾರದವರು ಕೈಗಾರಿಕೆ ಸಂಘಗಳನ್ನು ಪ್ರಾರ್ಥಿಸಿರುತ್ತಾರೆ.

## ಚೀಣಾ ಪ್ರತಿನಿಧಿ ಕುರ್ಚಿಯಿಂದಿಳಿದರು

ಭದ್ರತಾ ಸಮಿತಿಯ ಅಧ್ಯಕ್ಷಸ್ಥಾನವನ್ನು ಹಿಡಿದ್ದ ಡಾ॥ ಟಿ ಎಫ್ ಟ್ಸಿಯಾಂಗ್‌ರವರು ತಮ್ಮ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟಿದ್ದಾರೆ. ಇವರು ಆ ಸ್ಥಾನವನ್ನು ಅಲಂಕರಿಸಕೂಡದೆಂದು ರಷ್ಯದ ಪ್ರತಿನಿಧಿಯು ಪ್ರತಿಭಟಿಸಿ ಸಭಾ ತ್ಯಾಗ ಮಾಡಿದ ಸಂದರ್ಭದಲ್ಲಿ ಈ ರೀತಿ ಅವರು ಇಳಿಯಬೇಕಾಗಿ ಬಂದಿದೆ.

## ಕಲ್ಲಿದ್ದಲಿನ ಕೊರತೆಯಿಂದ ೪ ರೈಲುಗಳು ನಿಂತವು

ಪೂರ್ವ ಬಂಗಾಳ ರೈಲ್ವೆ ಅಧಿಕಾರಿಗಳು ಕಲ್ಲಿದ್ದಲಿನ ಕೊರತೆಯ ಸಲುವಾಗಿ ೪ ರೈಲುಗಳ ಓಡಾಟವನ್ನು ಹಂಗಾಮಿಯಾಗಿ ನಿಲ್ಲಿಸಿರುತ್ತಾರೆ.

## ಈ ಸಂಜೆ ಹೊಸ ಮಂತ್ರಿ ಮಂಡಲದ ಪ್ರಕಟಣೆ

ಮೈಸೂರು ೧೬

ಮುಖ್ಯ ಮಂತ್ರಿ ಕೆ ಸಿ ರೆಡ್ಡಿಯವರು ಈ ಮಧ್ಯಾಹ್ನ ಬಹಳ ಹೊತ್ತಿನವರೆಗೂ ಸಚಿವರಾದ ಎಚ್ ಸಿ ದಾಸಪ್ಪ ಮತ್ತು ಶ್ರೀ॥ ಎಸ್ ಚನ್ನಯ್ಯನವರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಅವರು ಈ ಸಂಜೆ ಶ್ರೀಮನ್ಮಹಾರಾಜರವರನ್ನು ಕಂಡು ಹೊಸ ಮಂತ್ರಿಗಳ ಪಟ್ಟಿಯನ್ನು ಒಪ್ಪಿಸಿ, ಅದಕ್ಕೆ ಅನುಮತಿಯನ್ನು ಪಡೆದು ಅನಂತರ ಬೆಂಗಳೂರಿಗೆ ತೆರಳುವರೆಂದು ತಿಳಿದುಬಂದಿದೆ.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರಿಗೆ ಮಂತ್ರಿಮಂಡಲದಲ್ಲಿ ಸ್ಥಾನವಿರುವುದೆಂದು ಖಚಿತವಾಗಿ ಹೇಳಲಾಗಿದೆ.

ಹಳಬರ ಪೈಕಿ ಕಾಂಗ್ರೆಸ್ಸೇತರರಾದ ಶ್ರೀಗಳು ಪಾಪಿಡಿ ಸುಬ್ಬರಾಮಶೆಟ್ಟಿ ಮತ್ತು ಡಿ ಎಚ್ ಚಂದ್ರಶೇಖರಯ್ಯನವರುಗಳು ಇರುವುದಿಲ್ಲವೆಂದೂ ಹೇಳಲಾಗಿದೆ. ಜ॥ ಮಹಮದ್ ಷರೀಫ್‌ರವರ ಹೆಸರೂ ಪಟ್ಟಿಯಿಂದ ಹೋಗಬಹುದು.

ಶ್ರೀ ಟಿ ಸುಬ್ರಹ್ಮಣ್ಯಂರವರನ್ನು ಮಂತ್ರಿಮಂಡಲಿಗೆ ಸೇರಿಸಿಕೊಳ್ಳುವ ಪ್ರಯತ್ನಗಳು ತೀವ್ರವಾಗಿ ನಡೆಯುತ್ತಿರುವಂತೆ ಕಂಡುಬರುತ್ತಿದೆ. ಈ ಸಂಜೆಯೊಳಗೆ ಮಂತ್ರಿಗಳ ಹೆಸರು ಪ್ರಕಟವಾಗುವುದೆಂದು ನಿರ್ಧಾರವಾಗಿ ಹೇಳಬಹುದಾಗಿದೆ.

## ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯ ಶ್ರೀ ರಾಮಲಿಂಗೇಶ್ವರ ಚೌಡೇಶ್ವರಿ ದೇವಸ್ಥಾನದಲ್ಲಿ ಪುರಂದರ ದಾಸರ ಪುಣ್ಯದಿನದ ಪ್ರಯುಕ್ತ ದೇವಾಂಗ ಸಂಘದವರು ನಾಳೆ ಸಂಜೆ ೭ ಗಂಟೆಗೆ ಶ್ರೀ ಸಂಬಂಧ ಮೂರ್ತಿಗಳಿಂದ ನಂದನಾರ್ ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತಾರೆ.

## ಚೀಣಾ-ರಷ್ಯ ಒಪ್ಪಂದ

ಚೀಣಾ ಮತ್ತು ರಷ್ಯಗಳಿಗೆ ಒಪ್ಪಂದ, ಚೀಣಕ್ಕೆ ರಷ್ಯದ ಸಾಲ, ಮತ್ತು ಉಭಯ ರಾಷ್ಟ್ರಗಳ ವ್ಯಾಪಾರ ಇವುಗಳ ಬಗ್ಗೆ ಚರ್ಚೆ ಏರ್ಪಾಡು ಮಾಡಲು ಚೀಣ ಕಮ್ಯೂನಿಸ್ಟ್ ಮುಖಂಡರಾದ ಮಾವೋ ತ್ಸೆ ತುಂಗ ರವರು ಇನ್ನೂ ಹೆಚ್ಚು ವಾರಗಳವರೆಗೆ ಮಾಸ್ಕೋನಗರದಲ್ಲಿಯೇ ಇರುವರು.

## ಹನುಮಂತಯ್ಯನವರು ಮೈಸೂರು ಕಾಂ॥ ಅಧ್ಯಕ್ಷರು

ಬೆಂಗಳೂರು ೧೬

ಶ್ರೀ ಟಿ ಸಿದ್ದಲಿಂಗಯ್ಯನವರು ಮಂತ್ರಿಮಂಡಲಿಗೆ ಆರಿಸಲ್ಪಡಲಿರುವುದರಿಂದ ಅವರ ಸ್ಥಾನದಲ್ಲಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗುವರೆಂದು ವರದಿಯಾಗಿದೆ.

## ಬೊಲಿವಿಯಾ ರಾಜ್ಯದಲ್ಲಿ ಉತ್ಕಟ ಸ್ಥಿತಿ

ದಕ್ಷಿಣ ಅಮೆರಿಕದ ಬೊಲಿವಿಯಾ ರಾಜ್ಯದಲ್ಲಿ ಉಂಟಾಗಿರುವ ಉತ್ಕಟ ಪರಿಸ್ಥಿತಿಯನ್ನು ಎದುರಿಸಲು ಆ ದೇಶದಲ್ಲೆಲ್ಲಾ ಜರೂರು ಪರಿಸ್ಥಿತಿ ಏರ್ಪಟ್ಟಿರುವುದಾಗಿ ಘೋಷಣೆಯಾಗಿದೆ. ಈಗಿನ ಸರಕಾರವನ್ನು ಉರುಳಿಸಲು ಪಿತೂರಿ ನಡೆದಿತ್ತೆಂದು ಹೇಳಲಾಗಿದೆ.

## ಸಿಂಧ್ ಮಂತ್ರಿ ಮಂಡಲ

ಸಿಂಧ್ ಪ್ರಾಂತದ ಮಂತ್ರಿ ಗುಲಾಮ್ ಅಲಿ ಖಾನ್ ತಾಲ್ಪುರರವರು ೧೬ ಜನ ಶಾಸನ ಸಭಾ ಸದಸ್ಯರ ಬೆಂಬಲವು ತಮಗಿರುವುದೆಂದು ತಿಳಿಸಿ, ಮಂತ್ರಿ ಮಂಡಲ ಸ್ಥಾಪನೆಗೆ ತಮಗೆ ಅವಕಾಶವೀಯಬೇಕೆಂದು ಗೌರ್ನರರನ್ನು ಪ್ರಾರ್ಥಿಸಿರುತ್ತಾರೆ. ಗೌರ್ನರರು ಮುಖ್ಯ ಮಂತ್ರಿಗಳನ್ನೂ, ಗುಲಾಮ್ ಅಲಿ ಖಾನರನ್ನೂ ತಮ್ಮ ತಮ್ಮ ಬೆಂಬಲಿಗ ಸದಸ್ಯರನ್ನು ಹಾಜರು ಮಾಡಬೇಕೆಂದು ಕೋರಿರುತ್ತಾರೆ.

## ಚರ್ಚಿಲ್ ಪಂಗಡ ಗೆದ್ದರೆ ಭಾರತಕ್ಕೆ ತೊಂದರೆಯಿಲ್ಲ

ಚರ್ಚಿಲ್ಲರು ನಾಯಕರಾಗಿರುವ ಕನ್ಸರ್ವೇಟಿವ್ ಪಕ್ಷದವರು ಬ್ರಿಟನ್ನಿನ ಸಾರ್ವತ್ರಿಕ ಚುನಾವಣೆಯಲ್ಲಿ ಜಯಶಾಲಿಗಳಾಗಿ ಬಂದರೆ ಭಾರತಕ್ಕೇನೂ ತೊಂದರೆಯಿಲ್ಲವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

## ವಿಶೇಷ ದರ್ಬಾರಿಗೆ ರೈತರಿಗೆ ಆಹ್ವಾನ

ಮೈಸೂರು ೧೬

ಭಾರತದ ರಿಪಬ್ಲಿಕ್ ದಿನಾಚರಣೆಯ ಸಂದರ್ಭದಲ್ಲಿ ಇದೇ ೨೬ನೇ ತಾರೀಖು ಅರಮನೆಯಲ್ಲಿ ನಡೆಯುವ ವಿಶೇಷ ದರ್ಬಾರಿಗೆ ಸಂಸ್ಥಾನದ ಎಲ್ಲಾ ತಾಲ್ಲೂಕಿನಿಂದಲೂ ಆರಿಸಲ್ಪಟ್ಟ ರೈತರಿಗೆ ಆಹ್ವಾನವಿತ್ತಿದ್ದಾರೆಂದು ವರದಿಯಾಗಿದೆ.

## ಬಾಂಬಿನಿಂದ ಸರ್ಕಾರವನ್ನು ಬದಲಾಯಿಸಲಾಗುವುದಿಲ್ಲ

೫೦ ಲಕ್ಷ ಕಲ್ಕತ್ತೆಯ ಜನ ಸಮುದಾಯದಲ್ಲಿ ನಿನ್ನೆ ಸರ್ದಾರ್ ಪಟೇಲರು ಭಾಷಣ ಮಾಡಿ, ಜನರು ಸರ್ಕಾರವನ್ನು ಬದಲಾಯಿಸುವುದಾದರೆ ಓಟಿನ ಪೆಟ್ಟಿಗೆ ಅಥವಾ ಶಾಂತಿಯ ಮೂಲಕ ಮಾತ್ರ ಮಾಡಬಹುದೆಂದೂ, ಆದರೆ ಪೋಲೀಸಿನವರ ಮೇಲೆ ಬಾಂಬೆಸೆಯುವುದು ಕ್ರಾಂತಿಯಲ್ಲ, ಅದು ಕೇವಲ ಹುಚ್ಚುತನವೆಂದೂ ಹೇಳುತ್ತ ಸರಕಾರವನ್ನು ಓಡಿಸಲು ಕ್ರಾಂತಿಯನ್ನು ನಾವು ಆಚರಿಸುವುದಾಗಿಯೂ ಇನ್ನು ಮುಂದೆ ಹೊಸ ಅಧ್ಯಾಯವನ್ನು ಆರಂಭಿಸಬೇಕೆಂದೂ ಅವರು ಹೇಳಿದರು.

## ತಿಲಕ್ ಸಂಸ್ಥೆ

ಕಾರಣಾಂತರಗಳಿಂದ ತಾ॥ ೧೬-೧-೫೦ ರಲ್ಲಿ ನಡೆಯಬೇಕಾಗಿದ್ದ ವಿವಿಧ ವಿನೋದ ... ... ಮುಂದುವರಿಸಲಾಗಿದೆ.

## ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಬೆಳೆಯಬೇಕು

### ಎಂ. ಆರ್. ಶ್ರೀನಿವಾಸಮೂರ್ತಿಯವರ ಭಾಷಣ

ಮೈಸೂರು,

ನೊಣನೇ ಗ್ರೇಡ್ ಕಾಲೇಜಿನ [illegible] ರ್ಣಾಟಕ ಸಂಘದ ಆಶ್ರಯದಲ್ಲಿ ಜರುಗು ತ್ತಿರುವ ಕರ್ಣಾಟಕ ಸಂಘದ [illegible] ನದ ಅಧ್ಯಕ್ಷತೆಯಲ್ಲಿ [illegible] ಕವನ ನೆರೆಯಿತು [illegible] ಚನಗಾನವಾದ ನಂತರ ಶ್ರೀ [illegible] ಯಿಯವರು ದ ಕಾವ್ಯವಾಚನವೂ [illegible]

ಶ್ರೀ ಡಿ ಎಲ್. ನರಸಿಂಹಾಚಾರ್ [illegible] ರಂಭ ಭಾಷಣ ಮಾಡಿದರು. ವಾಸ್ತವಿಕವಾದ [illegible] ಗಳನ್ನು [illegible] ವಾಗಿ [illegible] ಸಲ್ಲದ ಸ್ಫುರ್ತಿಯುತವಾಗಿರುವವೆಂದು ಅವರು ತಮ್ಮ ಭಾಷಣದಲ್ಲಿ ತಿಳಿಸಿದರು. ಜೀವನದ ಎಲ್ಲ ವಿಭಾಗಗಳಿಂದಲೂ ಸಾರವನ್ನು ಗ್ರಹಿಸಿ ಆನಂದವನ್ನುಂಟುಮಾಡುವ ಕವಿತೆಗಳಿಗೆ ಸಕಲರ ಪುರಸ್ಕಾರವೂ ದೊರೆಯಬೇಕೆಂದು ಅವರು ಕೋರಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರ ಆಧುನಿಕ ಕವಿತೆಗಳ ರೀತಿಯನ್ನು [illegible] ಪ್ರಸಂಚದ ಅನುಭವ [illegible] ಯುವ ಕವಿತೆಗಳಿಗೂ ಅವುಗಳಲ್ಲಿ ಜ್ಞಾನವುಳ್ಳವರು [illegible] ರುವ ತಾರತಮ್ಯವನ್ನು ವಿವರಿಸಿದರು. ಮುಖ್ಯವಾಗಿ ಶೃಂಗಾರ ರಸವು ಬೀದಿ ವ್ಯಾಪಾರದ ವಸ್ತುವಾಗದಂತೆ ಗಾಂಭೀರ್ಯದಿಂದ ಕೂಡಿರಬೇಕೆಂದು ತಿಳಿಸಿದರು. ನಮ್ಮ ತರುಣ ತರುಣಿಯರು ನವನಾಗರಿಕತೆಯ ಭೋಗ ವಿಲಾಸಗಳಿಗಾಗಿ ವೆಚ್ಚ ಮಾಡುವ ಹಣದಲ್ಲಿ ಒಂದು ಭಾಗವನ್ನಾದರೂ ಉತ್ತಮವಾದ ಕನ್ನಡ ಸಾಹಿತ್ಯಕ್ಕೆ ವಿನಿಯೋಗಿಸಬೇಕೆಂದು ಸೂಚಿಸಿದರು.

### ಅ. ನ. ಕೃಷ್ಣರಾಯರ ಸಾಹಿತ್ಯ ಸೇವೆಯ ರಜತೋತ್ಸವ

ಕಳೆದ ೨೫ ವರ್ಷಗಳಿಂದ ಕನ್ನಡ ಸಾಹಿತ್ಯದ ನಾನಾ ರಂಗಗಳಲ್ಲಿ ನಮ್ಮ [illegible] ತ್ತವಹಿಸಿದ ಶ್ರೀ ಅ. ನ. ಕೃಷ್ಣರಾಯರ ಸಾಹಿತ್ಯ ಸೇವೆಯ ರಜತೋತ್ಸವವನ್ನು ಕರ್ಣಾಟಕದಾದ್ಯಂತ [illegible] ದ ವೇಳೆ [illegible] ರಜತೋತ್ಸವ ಸಮಿತಿಯವರು ಕೋರಿದ್ದಾರೆ.

---


# ಗಾಯತ್ರೀ ಟಾಕೀಸ್

17-1-50ರಿಂದ 3 [illegible] ದಿನವೂ 3 ಆಟಗಳು

ಪ್ರೇಮ, ಪ್ರಣಯ, [illegible]

CASBAH

ಕ್ಯಾಸ್ ಬಾ

ಪಾತ್ರ: ಯೊನೆ ಡಿಕಾರ್ಲೋ ಮತ್ತು ಟೋನಿ ಮಾರ್ಟಿನ್

— ಮುಂದಿನ ಬದಲಾವಣೆ.

ವಾರ್ನರ್‌ರವರ

**Look for the Silver Lining**

ಲುಕ್ ಫಾರ್ ದಿ ಸಿಲ್ವರ್ ಲೈನಿಂಗ್


---

## ಬೆಂಕಿಯಿಂದ ೫೦ ಸಾವಿರ ಮನೆ ಮಠಗಳ ನಾಶ

[illegible]

## ಅಪರಾಧ ಮನೋವೃತ್ತಿ ತಪ್ಪಿಸಲು ಶಸ್ತ್ರ ಚಿಕಿತ್ಸೆ

ಅಮೇರಿಕದ ವಿಸ್ಕಾನ್ಸಿನ್ [illegible] ಬ್ಬ ನು ಚಕ್ಕುಗಳನ್ನು ಫೋರ್ಜರಿ ಮಾಡಿದ ಅಪರಾಧಕ್ಕಾಗಿ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದನು. ನ್ಯಾಯಸ್ಥಾನದಲ್ಲಿ ಆಪಾದಿತನು ತನ್ನ ಮನೋವೃತ್ತಿಯನ್ನು ನೀಗಲು ತನ್ನ ಮೆದುಳಿಗೆ ಶಸ್ತ್ರ ಚಿಕಿತ್ಸೆ ನಡೆಸಬೇಕೆಂದು ಪ್ರಾರ್ಥಿಸಿದನು. ಕೋರ್ಟಿನವರ ಸಮ್ಮತಿ ದೊರೆತ ಬಳಿಕ ವೈದ್ಯರು ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದರು. ಈ ಚಿಕಿತ್ಸೆಯಿಂದ, ೨೨ ವರ್ಷ ವಯಸ್ಸಿನ ಅಪರಾಧಿಯು ಕೆಲವು ಕಾಲ [illegible] ಮಗುವಿನಂತೆ [illegible] ತ್ತಿದ್ದನೆಂದೂ, ಆದರೆ ಶಸ್ತ್ರ ಚಿಕಿತ್ಸೆಯಿಂದ [illegible] ಅವನು ಯಾವ ಅಪರಾಧವನ್ನೂ ಮಾಡದೆ ಪ್ರತಿಯೊಂದು ಕೆಲಸವನ್ನೂ ಆ ನಾಯತಿಯಿಂದಲೇ ಮಾಡುತ್ತಿದ್ದನೆಂದೂ ವೈದ್ಯರು ತಿಳಿಸಿರುತ್ತಾರೆ.

### ಮೈಸೂರು ಬ್ಲೂಸ್ ಫುಟ್‌ಬಾಲ್ ಕ್ಲಬ್

ಕಳೆದ [illegible] ಗಂಟೆಗೆ [illegible] ಬ್ಲೂಸ್ ಫುಟ್ ಬಾಲ್ ಕ್ಲಬ್ಬಿನ [illegible] 'ವಿಜಯಿ' [illegible] ಪ್ರದರ್ಶಿಸಲ್ಪಟ್ಟಿತು. [illegible] ಕ್ಲಬ್ಬಿನ ವತಿಯಿಂದ [illegible] ಕ್ಲಬ್ಬಿನ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಲಾಗಿದೆ.

### ಸಚ್ಚಿವಾಲಯದ ಕಾರ್ಖಾನೆ ಕೆಲಸಗಾರರ ಸಂಘ

ನೋಟೀಸಿನ ಸಂಘದ ಮಹಾಸಭೆ [illegible] ನಡೆಯುವುದು [illegible] ಸಂಘದ ಬಲವಾಗಿ [illegible]

---

## 'ಸಗ್ರೀ' ವಸೂಲಿಗಾಗಿ ೪೦ ಸಾವಿರ ರೂ. ದಂಡ

ಬೊಂಬಾಯಿನ [illegible] ಪ್ರದೇಶ [illegible] ೪೦ ಸಾವಿರ ರೂ. [illegible]

## ಅಣುಮುಕ್ತ ಹಣ್ಣುಗಳ ತೋಟ

ಚಿಕಾಗೋ ನಗರದ ಹತ್ತಿರ ಅಮೇರಿಕದ ಅಣು ಶಕ್ತಿಯ ಕಮಿಷನ್ನಿನ ಪ್ರಯೋಗಿಕ [illegible] ಬೆಳೆಯುತ್ತಿರುವ ಅಣು ವಿನ ಹಣ್ಣುಗಳ ವಿಸ್ಮಯಕಾರಕ ಉದ್ಯಾನವನಕ್ಕೆ ಮನುಷ್ಯನ ಪ್ರವೇಶವು ಸಾಧ್ಯವಿಲ್ಲವೆಂದೂ, ಈ ಹಣ್ಣುಗಳನ್ನು ಪ್ರಾಣಿ ಮತ್ತು ಕ್ರಿಮಿಗಳಿಗಾಗಿ ಬೆಳೆಸಲಾಗುತ್ತಿದೆಯೆಂದೂ ಹೇಳಲಾಗಿದೆ. ಪ್ರಕೃತಿಯಲ್ಲಿ ಹುದುಗಿರುವ ರಹಸ್ಯಗಳನ್ನು ಗೊತ್ತುಪಡಿಸಿಕೊಳ್ಳಲು ಈ ಉದ್ಯಾನವನವು ಸಹಾಯಕವಾಗುದೆಯೆಂದು ಹೇಳಲಾಗಿದೆ. ಮನುಷ್ಯನ ದೀರ್ಘಕಾಲ ಜೀವಿಸಲು ಮತ್ತು ರೋಗ ರುಜಿನಗಳಿಗೆ ತುತ್ತಾಗದೆ ಇರುವುದಕ್ಕಾಗಿ ಈ ಸಂಶೋಧನಾ ಕಾರ್ಯವು ನಡೆಯುತ್ತಿದೆ.

## ಬಿಜಾಪುರದ ಗೋಳಗುಮ್ಮಟದ ರಿಪೇರಿ

ಪ್ರಪಂಚದಲ್ಲೆಲ್ಲಾ ಅತ್ಯಂತ ಭಾರಿ ಗೋಪುರಗಳ ಪೈಕಿ ಎರಡನೆಯದಾದ ಬಿಜಾಪುರದ ಗೋಳ ಗುಮ್ಮಟವನ್ನು ೨ ಲಕ್ಷ ರೂ ಖರ್ಚಿನಿಂದ ರಿಪೇರಿ ಮಾಡಲಾಗುವುದು. ಗುಮ್ಮಟದ ಹತ್ತಿರ [illegible] ಪ್ರಸಿದ್ಧನಾದ ಗುಮ್ಮಟವು ಬಿಜಾಪುರದ ಆದಿಲ್ ಷಾಹಿ ರಾಜ [illegible] ಆದಿಲ್ ಷಾ [illegible] ಇದನ್ನು ಕಟ್ಟಿಸಿದ್ದರು.

## ಗಾಂಧೀ ಗೀತೆಗಳು

[illegible] ಪ್ರಕಟಿಸಿರುವ "ಗಾಂಧೀ ಗೀತೆಗಳು" ಎಂಬ ಪುಸ್ತಕವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಇದನ್ನು ಬರೆದವರು ಆಲಿ ಪಂಡಿತ ರತ್ನಂ ಬಿ ಶಿವಮೂರ್ತಿ ಶಾಸ್ತ್ರಿಗಳು ಬಿಎ ಆನ್ಸ್. ಮಹಾತ್ಮ ಗಾಂಧಿಯವರ ಬಗ್ಗೆ ಅಮೂಲ್ಯವಾದ ಪದ್ಯಗಳಿವೆ. ಮಹಾತ್ಮರ ಮತ್ತು ಕಸ್ತೂರಿಬಾಯಿಯವರ ಚಿತ್ರಗಳೂ ಇವೆ ಇದರ ಪ್ರಯೋಜನವನ್ನು ಕನ್ನಡಿಗರೆಲ್ಲರೂ ಪಡೆಯಬೇಕೆಂದು ಹಾರೈಸುತ್ತೇವೆ.

---

## ಭಾರತಕ್ಕೆ ಪಾಕೀಸ್ತಾನದ ಪ್ರತಿಭಟನೆ

ಕಲ್ಕತ್ತಾದಲ್ಲಿ ಕಳೆದ ತಿಂಗಳು ಅಂತ್ಯ ಭಾಗದಲ್ಲಿ ನಡೆದ ಹಿಂದೂಮಹಾಸಭೆಯ ಅಧಿವೇಶನದಲ್ಲಿ ನಡೆದ ಭಾಷಣಗಳ ಬಗ್ಗೆ ಪಾಕಿಸ್ತಾನವು ಭಾರತ ಸರಕಾರಕ್ಕೆ ಖಂಡನಾ ಪತ್ರವನ್ನು ಬರೆದಿರುವುದಾಗಿ ಹೇಳಲಾಗಿದೆ. ಪೂರ್ವ ಪಾಕೀಸ್ತಾನವನ್ನು ಬಲಾತ್ಕಾರದಿಯಿಂದ ಕಿತ್ತುಕೊಂಡು ನಿರಾಶ್ರಿತರಿಗೆ ಒಪ್ಪಿಸಬೇಕೆಂದು ಭಾಷಣಕಾರರು ಅಭಿಪ್ರಾಯಪಟ್ಟರೆಂದೂ, ಈ ಅಭಿಪ್ರಾಯದ ಬಗ್ಗೆ ಪಾಕೀಸ್ತಾನವು ತೀವ್ರ ಗಮನ ಕೊಡುವುದಾಗಿಯೂ ಭಾರತ ಸರಕಾರಕ್ಕೆ ತಿಳಿಸಲಾಗಿದೆ.

## ಗಂಟೆಗೆ ೨ ಸಾವಿರ ಮೈಲಿ ಹಾರುವ ವಿಮಾನ

ಅಮೇರಿಕದ ವಿಮಾನ [illegible] ರಾಕೆಟ್ ವಿಮಾನದಲ್ಲಿ ಕುಳಿತು ಗಂಟೆಗೆ ೨ ಸಾವಿರ ಮೈಲಿವೇಗದಲ್ಲಿ ಹಾರಾಡಿದನೆಂದು ಸುದ್ದಿಯು ವರದಿಯಾಗಿದೆ. ಈ ರಾಕೆಟ್ ವಿಮಾನವನ್ನು ಅಂತರಿಕ್ಷದ ಸೂಪರ್ ಫಾರ್ಟ್ರೆಸ್ ವಿಮಾನದ ಸಹಾಯದಿಂದ ಕೊಂಡೊಯ್ಯಲಾಗುವುದೆಂದೂ ಅನಂತರ ರಾಕೆಟ್ ವಿಮಾನವು ಅದರಿಂದ ಬೇರೆಯಾಗಿ ತಾನಾಗಿಯೇ ಹಾರುವುದೆಂದೂ ಹೇಳಲಾಗಿದೆ. ಈ ವೇಗದಲ್ಲಿ ಹಾರಿದರೆ, ಪ್ರಪಂಚವನ್ನೆಲ್ಲಾ [illegible] ಗಂಟೆಯಲ್ಲಿ ಸುತ್ತಬಹುದೆಂದು ಹೇಳಲಾಗಿದೆ.

## ಸಂತಾನಕ್ಕೂ ರೇಷನಿಂಗ್ ಬರಲೆಂದು ಸಂತಾನಂ

ನಮ್ಮ ಜನ ಸಂಖ್ಯೆಯನ್ನು ತಡೆಯಲು ಮಾರ್ಗವದ್ದು ಹುಡುಕದಿದ್ದರೆ, ದೇಶದ ಜನಶಕ್ತಿಯೊಂದು ಹೊರೆಯಾಗಿ ಪರಿಣಮಿಸುವುದೆಂದು ಭಾರತದ ರೈಲ್ವೇ ಮಂತ್ರಿ ಶ್ರೀ ಕೆ. ಸಂತಾನಂರವರು ಹೇಳಿದ್ದಾರೆ. ಭಾರತಕ್ಕೆ ರೇಷನಿಂಗ್ ಪದ್ಧತಿಯು ಅವಶ್ಯಕವಿದ್ದರೆ, ಆ ಪದ್ಧತಿಯು ಮುಖ್ಯವಾಗಿ ಮಕ್ಕಳ ರೇಷನಿಂಗಿಗೆ ಅನ್ವಯಿಸಬೇಕೆಂದು ಅವರು ತಿಳಿಸಿರುವರು.

---


**FOR SALE**

# NEWSPRINT

Double Crown Rough Newsprint available at

**SADHVI OFFICE,**

MYSORE


---

## ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಕ್ರಿಸ್‌ಮಸ್ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವು ಈ ಜನವರಿ [illegible] ಯಿಂದ ನಡೆಯುತ್ತಿದೆ. ಪೋಷಕ ಮಹಾಶಯರು ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಬೇಕಾಗಿ ವಿನಂತಿ. ಶಿಶುವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಹನೀಯರು ಕಾಲವಿಳಂಬ ಮಾಡದೆ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ,

ವ್ಯವಸ್ಥಾಪಕ

---


A BOON TO PADDY & RICE TRANSPORTERS

Your problem of transportation of goods is solved. Under our skilled and well-organised Daily running Lorry Service between Mysore and Bangalore we undertake to transport all your goods, Paddy and Rice.

**Bangalore Transit Company,**

Clearing & Forwarding Agents,
Sri Narasimharaja Road,
Bangalore City.

**Mysore office:-**

Narayana Sastry Road
Mysore


Edited Printed and published by A R Nagarajan at Sadhvi Press, D Subbiah Road, Mysore

ಕೋ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

# ಪ್ರಜಾ

ಸಂಪುಟ ೮] ಮಂಗಳವಾರ ೧೭-೧-೫೦ [ಸಂಚಿಕೆ ೧೪೩

# ಈ ಸಂಜೆ ಮಂತ್ರಿಗಳ ಪಟ್ಟಿ ಪ್ರಕಟಣೆ ನಿರೀಕ್ಷೆ

## ಮಂತ್ರಿಮಂಡಲದ ಪಟ್ಟಿ ಈ ಸಂಜೆ ಹೊರಬೀಳುವ ನಿರೀಕ್ಷಣೆ

### ಪ್ರಭುಗಳೊಡನೆ ಈ ಸಂಜೆ ಮುಖ್ಯ ರೆಡ್ಡಿಯವರ ಭೇಟಿ

ಮೈಸೂರು ೧೬

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನೆನ್ನೆ ಮಧ್ಯಾಹ್ನ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದ ಮೇಲೆ ಪುನಃ ಅವರ ದರ್ಶನ ತೆಗೆದುಕೊಳ್ಳಲಿಲ್ಲ. ಈ ಭೇಟಿಯು ಕೇವಲ ಔಪಚಾರಿಕವಾಗಿತ್ತೆಂದು ತಿಳಿದುಬಂದಿದೆ.

ಈ ದಿನ ಮಧ್ಯಾಹ್ನದವರೆಗೆ ಅವರು ಶ್ರೀಗಳಾದ ಕೆ. ಟಿ. ಭಾಷ್ಯಂ, ಎಚ್. ಸಿ. ದಾಸಪ್ಪ, ಎಸ್. ಚನ್ನಯ್ಯ ಮುಂತಾದವರುಗಳೊಡನೆ ದೀರ್ಘವಾಗಿ ಸಮಾಲೋಚನೆ ನಡೆಸಿದರು. ಮಾತುಕತೆಗಳು ಕಡೆಯ ಘಟ್ಟವನ್ನು ಮುಟ್ಟಿರಬಹುದೆಂದು ಊಹಿಸಲಾಗಿದೆ.

ನಿನ್ನೆ ನಿರೀಕ್ಷಿಸಿದ್ದಂತೆ ಹೊಸ ಮಂತ್ರಿಗಳ ಪಟ್ಟಿಯು ಹೊರಬೀಳಲಿಲ್ಲ.

ಈ ಸಂಜೆ ೪-೩೦ ಘಂಟೆಗೆ ರೆಡ್ಡಿಯವರು ಪ್ರಭುಗಳನ್ನು ನೋಡುವ ಕಾರ್ಯಕ್ರಮವು ಏರ್ಪಾಡಾಗಿದೆ. ಆಗ ಅವರು ಮಂತ್ರಿಗಳ ಪಟ್ಟಿಯನ್ನು ಒಪ್ಪಿಸಬಹುದೆಂದು ನಿರೀಕ್ಷಿಸಲಾಗಿದೆ. ಹಾಗೆ ಆದರೆ ಮತ್ತು ಈ ದಿನ ಅಮಾವಾಸ್ಯೆಯೆಂಬ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳದಿದ್ದರೆ ಈ ಸಂಜೆ ನೂತನ ಸಚಿವರುಗಳ ಹೆಸರುಗಳು ಪ್ರಕಟವಾಗುವ ಭರವಸೆ ಇದೆ.

### ಕಾಂಗ್ರೆಸ್ಸನ್ನು ಬಲಪಡಿಸಲು ವ್ಯವಸ್ಥೆ

ಮೈಸೂರು ಕಾಂಗ್ರೆಸ್ಸನ್ನು ಬಲಪಡಿಸಲು ಮತ್ತು ಮಂತ್ರಿ ಮಂಡಲವು ದಕ್ಷತೆಯಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತಕ್ಕ ಕಾರ್ಯಕ್ರಮಗಳನ್ನು ಹಾಕುವ ಸಲುವಾಗಿ ದೇಶದ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೊಸ ಉತ್ಸಾಹವನ್ನುಂಟುಮಾಡುವ ಬಗ್ಗೆ ಒಂದು ಸಮಿತಿಯನ್ನು, ಬೆಂಗಳೂರಿನ ಕ್ರೆಸೆಂಟ್ ಭವನದಲ್ಲಿ ೧೫ನೇ ತಾ॥ ಸೇರಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ರಚಿಸಲಾಯಿತು. ಈ ಸಮಿತಿಗೆ ಕೋಲಾರ ಜಿಲ್ಲೆಯ ಶ್ರೀ ಎಲ್. ಸಿ. ನಾಗಪ್ಪರೆಡ್ಡಿಯವರನ್ನು ಸಂಚಾಲಕರನ್ನಾಗಿ ನೇಮಿಸಲಾಯಿತು.

### ೬ ಮತ್ತು ೨೬ರಲ್ಲಿ ಕಾರ್ಮಿಕರಿಗೆ ಸಂಬಳದ ರಜಾ

ಸರಕಾರದ ನಾನಾ ಕೈಗಾರಿಕೆಗಳಲ್ಲಿರುವ ಕಾರ್ಮಿಕರು ರಿಪಬ್ಲಿಕ್ ದಿನಗಳ ಸಮಾರಂಭಗಳಲ್ಲಿ ಭಾಗವಹಿಸಲು ಅವರಿಗೆ ೬ ಮತ್ತು ೨೬ನೇ ತಾರೀಖುಗಳಲ್ಲಿ ಸಂಬಳದ ಸಹಿತ ರಜಾವನ್ನು ಕೊಡಲಾಗಿದೆ. ಕೆಜಿಎಫ್ ಮತ್ತು ಖಾಸಗೀ ಕೈಗಾರಿಕೆಯವರೂ ಸಹ ತಮ್ಮ ಕಾರ್ಮಿಕರಿಗೆ ಈ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಸರಕಾರದವರು ಪ್ರಾರ್ಥಿಸಿರುತ್ತಾರೆ.

### ಕೂಸೂರು ಜನರಿಗೆ ಪರಿಹಾರ

ಕೂಸೂರು ಗಲಭೆ ಸಂಬಂಧವಾಗಿ ನಷ್ಟ ಹೊಂದಿದ ಜನರಿಗೆ ೨೩,೮೦೦ ರೂಗಳ ಪರಿಹಾರ ಕೊಡಲಾಗುತ್ತದೆ.

### ಭಾರತಕ್ಕೆ ಜಾವಾ ಸಕ್ಕರೆ

ಇಂಡೋನೇಷ್ಯದಲ್ಲಿರುವ ಹೆಚ್ಚಿನ ಸಕ್ಕರೆಯನ್ನು ಭಾರತಕ್ಕೆ ಆಮದು ಮಾಡುವ ಬಗ್ಗೆ ಭಾರತ ಸರಕಾರದವರು ಆ ಸರಕಾರದೊಡನೆ ವ್ಯವಹಾರ ನಡೆಸುವರೆಂದು ಹೇಳಲಾಗಿದೆ.

## ರಿಪಬ್ಲಿಕ್ ದಿನದಲ್ಲಿ ಖೈದಿಗಳಿಗೆ ರಿಯಾಯಿತಿ

ಭಾರತ ರಿಪಬ್ಲಿಕ್ ದಿನಾಚರಣೆ ಸಂದರ್ಭದಲ್ಲಿ ಮುಂಬಾಯಿನ ಎಲ್ಲ ಖೈದಿಗಳಿಗೂ ೧೫ ರಿಂದ ೬೦ ದಿನಗಳ ಸಜಾ ರಿಯಾಯಿತಿಯನ್ನು ತೋರಿಸಲಾಗುವುದೆಂದು ಗೊತ್ತಾಗಿದೆ. ಗಾಂಧಿಜಿಯವರ ಕೊಲೆಯ ಸಂಬಂಧವಾಗಿ ನಡೆದ ಗಲಭೆಗಳಲ್ಲಿ ಶಿಕ್ಷೆ ಹೊಂದಿದ್ದ ಖೈದಿಗಳ ಪೈಕಿ ಮೂರನೇ ಎರಡು ಭಾಗದ ಸಜವನ್ನು ಅನುಭವಿಸಿರುವವರೆಲ್ಲರನ್ನೂ ಬಿಡುಗಡೆ ಮಾಡಲಾಗುವುದು.

## ಪೂ॥ ಪಾಕಿಸ್ತಾನದಲ್ಲಿ ಪೋಲೀಸರು-ರೈತರ ಹೋರಾಟ

ಪೂರ್ವ ಪಾಕಿಸ್ತಾನದ ರಾಜಶಾಹಿ ಜಿಲ್ಲೆಯ ಗ್ರಾಮವೊಂದರ ಸಂತಾಲ ಜನರು ತಾವು ಜಮೀನುಗಳಲ್ಲಿ ಬೆಳೆದ ಧಾನ್ಯದಲ್ಲಿ ಮೂರನೇ ಒಂದು ಭಾಗದಷ್ಟು ಧಾನ್ಯ ತಮಗೆ ಬರಬೇಕೆಂದು ನಡೆಸುತ್ತಿದ್ದ ಚಳವಳಿಯನ್ನು ತಹಬಂದಿಗೆ ತರಲು ಒಂದು ಪೋಲೀಸರ ಪಡೆಯು ಹೋದಾಗ ಆ ಪಡೆಗೂ, ಸಂತಾಲರಿಗೂ ಹೊಡೆದಾಟವಾಗಿ ೪ ಜನ ಕಾನ್ಸ್ಟೇಬಲ್ಲುಗಳೂ ಒಬ್ಬ ಸಬ್ ಇನ್ಸ್‌ಪೆಕ್ಟರರೂ ಸತ್ತರೆಂದು ಹೇಳಲಾಗಿದೆ.

## ಉಪಮಂತ್ರಿ ಸ್ಥಾನಗಳ ಬಗ್ಗೆ ವಿಶೇಷಾಜ್ಞೆ

ಕೇಂದ್ರ, ಪ್ರಾಂತ ಮತ್ತು ಸಂಸ್ಥಾನಗಳ ಉಪ ಮಂತ್ರಿಗಳ, ಸ್ಥಾನಗಳನ್ನು ೨೬ನೇ ತಾ॥ ನ ನಂತರವೂ ಉಳಿಸಿಕೊಳ್ಳುವ ಬಗ್ಗೆ ರಾಜ್ಯಾಂಗದ ನಿಯಮಾವಳಿಯ ಸಂಬಂಧವಾದ ವಿಶೇಷಾಜ್ಞೆಯನ್ನು ಗೌರ್ನರ್ ಜನರಲ್ಲರು ಸದ್ಯದಲ್ಲಿಯೇ ಹೊರಡಿಸಲಿರುವರೆಂದು ಹೇಳಲಾಗಿದೆ.

## ವಿಶ್ವ ಸಂಸ್ಥೆಗೆ ರಷ್ಯದ ಬಹಿಷ್ಕಾರ

ರಷ್ಯವು ವಿಶ್ವ ಸಂಸ್ಥೆಯ ಎಲ್ಲಾ ಸಮಿತಿಗಳಲ್ಲಿ ಭಾಗವಹಿಸದೆ ನಿನ್ನೆ ಸಭಾತ್ಯಾಗ ಮಾಡುವುದಾಗಿ ಹೇಳಲಾಗಿದೆ. ಚೀನಾದ ಪ್ರಾತಿನಿಧ್ಯದ ಬಗ್ಗೆ ರಷ್ಯ ಈ ಧೋರಣೆಯನ್ನು ಅವಲಂಬಿಸಿದೆ. ಚೀನಾದ ರಾಷ್ಟ್ರೀಯ ಸರಕಾರದ ಪ್ರತಿನಿಧಿಗಳನ್ನು ವಿಶ್ವ ಸಂಸ್ಥೆಯಿಂದ ಹೊರಗೆ ಹಾಕುವವರೆಗೆ ರಷ್ಯವು ಎಲ್ಲಿಯೂ ಭಾಗವಹಿಸುವುದಿಲ್ಲವೆಂದು ಹೇಳಲಾಗಿದೆ.

## ಹೈದರಾಬಾದಿನಲ್ಲೂ ಭಾರತದ ರಾಷ್ಟ್ರಧ್ವಜ

ಈ ತಿಂಗಳು ೨೬ನೇ ತಾ॥ ನಿಂದ ಮುಂದೆ ಹೈದರಾಬಾದಿನಲ್ಲಿ ಭಾರತ ರಾಷ್ಟ್ರೀಯ ಧ್ವಜವನ್ನೇ ಹಾರಿಸಲಾಗುವುದೆಂದು ಅಲ್ಲಿನ ಸರಕಾರದ ಪ್ರಕಟಣೆಯೊಂದು ತಿಳಿಸುತ್ತದೆ.

## ಪುಂಡರನ್ನು ಮಟ್ಟಹಾಕಲು ಪೂ॥ ಅಧಿಕಾರಿಗಳ ನಿರ್ಧಾರ

ದೆಹಲಿಯಲ್ಲಿ ಸೇರಿದ್ದ ಸಂಸ್ಥಾನ ಮತ್ತು ಪ್ರಾಂತಗಳ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲರುಗಳ ಸಮ್ಮೇಳನದಲ್ಲಿ ದೇಶದಲ್ಲಿರುವ ಸಮಾಜ ಘಾತಕರನ್ನು ಕೊಡೆದು ಹಾಕಿ ಶಾಂತಿಯನ್ನು ನೆಲೆಸುವಂತೆ ಮಾಡಲು ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದೂ ಇದಕ್ಕಾಗಿ ಪ್ರಜೆಗಳ ಸಹಕಾರ ಪಡೆಯಬೇಕೆಂದೂ ನಿರ್ಧರಿಸಲಾಯಿತು.

## ಭದ್ರಾವತಿ ಕಬ್ಬಿಣ ಕಾರ್ಖಾನೆ ಕಾರ್ಮಿಕರಿಗೆ ಬೋನಸ್ಸು

ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕರಿಗೆ ಲಾಭದ ಬೋನಸ್ಸಿನ ರೂಪದಲ್ಲಿ ಎರಡು ತಿಂಗಳ ಸಂಬಳವನ್ನು ಕೊಡಲು ನಿರ್ಧಾರವಾಗಿದೆಯೆಂದು ಹೇಳಲಾಗಿದೆ.

## ಔರಂಗಾಬಾದ್ ಬಳಿ ಕೋಮುವಾರು ಘರ್ಷಣೆ

ಔರಂಗಾಬಾದು ಜಿಲ್ಲೆಯ ಅಂಬಾಯಿ ಗ್ರಾಮದಲ್ಲಿ ಕಳೆದ ಗುರುವಾರ ಕೋಮುವಾರು ಗಲಭೆ ನಡೆದು, ೧೯ ಜನರು ಸತ್ತಿರುವ ಸುದ್ದಿಯು ವರದಿಯಾಗಿದೆ. ಪರಿಸ್ಥಿತಿಯು ಈಗ ಹತೋಟಿಯಲ್ಲಿದೆಯೆಂದು ಹೇಳಲಾಗಿದೆ.

## ಕಮ್ಯೂನಿಸ್ಟರಿಂದ ವಿದೇಶ ರಾಯಭಾರಿ ಆಸ್ತಿ ವಶ

ಕಮ್ಯೂನಿಸ್ಟ್ ಚೀನಾದಲ್ಲಿರುವ ಫ್ರೆಂಚ್ ಮತ್ತು ಡಚ್ ರಾಯಭಾರಿಗಳ ಆಸ್ತಿಪಾಸ್ತಿಗಳನ್ನು ಅಲ್ಲಿನ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆಂದು ಹೇಳಲಾಗಿದೆ.

ಪೀಕಿಂಗ್ನ ಕಮ್ಯೂನಿಸ್ಟರ ಆಸ್ತಿಗೆ ಒಳಪಟ್ಟಿರುವ ಅಮೆರಿಕನ್ನರು ಸ್ವದೇಶಕ್ಕೆ ಹಿಂತಿರುಗಲು ಅವಕಾಶವಾಗುವಂತೆ ರಾಷ್ಟ್ರೀಯ ಚೀನಾ ಸರಕಾರವು [illegible] ಕಲ್ಪಿಸಿಕೊಡುವುದೆಂದು ಹೇಳಲಾಗಿದೆ.

## ಶೃಂಗೇರಿ ಮಠದ ಸಲಹಾ ಸಮಿತಿಯ ರಚನೆಯಿಲ್ಲ

ಶೃಂಗೇರಿ ಮಠದ ಆಡಳಿತದ ಸಂಬಂಧವಾಗಿ ಸಲಹಾ ಸಮಿತಿಯೊಂದನ್ನು ನೇಮಿಸಬೇಕೆಂದು ಸರ್ಕಾರದವರು ಹಾಕಿಕೊಂಡಿದ್ದ ಯೋಜನೆಗೆ, ವಿಶೇಷವಾಗಿ ಸಾರ್ವಜನಿಕರ ಆಕ್ಷೇಪಣೆಗಳು ಬಂದುದರಿಂದ ಆ ಯೋಚನೆಯನ್ನು ತ್ಯಜಿಸಲಾಗಿದೆಯೆಂದು ಹೇಳಲಾಗಿದೆ.

## ನೇಪಾಳಕ್ಕೆ ಆರ್ಕಿಬಾಲ್ಡ್‌ನೈರವರ ಭೇಟಿ

ಭಾರತದಲ್ಲಿ ಬ್ರಿಟಿಷ್ ಹೈಕಮಿಷನರಾಗಿರುವ ಸರ್ ಆರ್ಕಿಬಾಲ್ಡ್ ನೈರವರು ಕಳೆದ ಮಂಗಳವಾರ ನೇಪಾಳಕ್ಕೆ ಭೇಟಿ ಕೊಟ್ಟು, ಅಲ್ಲಿನ ಅರಸರೊಡನೆ ಕಮ್ಯೂನಿಸ್ಟರು ಅಲ್ಲಿಗೆ ಅಕ್ರಮ ಪ್ರವೇಶ ಮಾಡುವ ವಿಚಾರವಾಗಿ ಮಾತುಕತೆ ನಡೆಸಿದರೆಂದು ಹೇಳಲಾಗಿದೆ.

## ಕನಿಷ್ಠ ಸಂಬಳ ೧೨೦ ರೂ. ಇರಬೇಕು

ಕೇಂದ್ರ ಸರ್ಕಾರದ ನೌಕರಿಯಲ್ಲಿ ಖೋತಾ ಹಾಕುವುದನ್ನು ಪ್ರತಿಭಟಿಸಲು ಅಲ್ಲಿನ ಸುಮಾರು ೧೦ ಸಾವಿರ ಜನ ಸರ್ಕಾರಿ ನೌಕರರು ಸಭೆ ಸೇರಿ ಕೆಳಗೆ ಕಂಡ ನಿರ್ಣಯಗಳನ್ನು ಮಾಡಿರುತ್ತಾರೆ:- ಕೇಂದ್ರ ಸರ್ಕಾರದ ಯಾವ ನೌಕರನನ್ನೂ, ಆತನಿಗೆ ಬೇರೆ ಕೆಲಸವನ್ನು ಒದಗಿಸಿದ ಹೊರತು, ತೆಗೆಯಕೂಡದು ಮತ್ತು ಮೂರನೇ ದರ್ಜೆಯ ಸರ್ಕಾರಿ ನೌಕರರಿಗೆ ಕನಿಷ್ಠಪಕ್ಷ ೧೨೦ ರೂ. ಸಂಬಳವನ್ನೂ, ಜವಾನರುಗಳು ಮತ್ತು ಆಳುಗಳಿಗೆ ೬೦ ರೂ. ಸಂಬಳವನ್ನೂ ಕೊಡಬೇಕು.

## ರಾಜ ಧನವನ್ನು ನಿಲ್ಲಿಸಲು ಜೈಪ್ರಕಾಶರ ಒತ್ತಾಯ

ಸಮಾಜವಾದಿ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣರವರು ಮಧ್ಯಪ್ರಾಂತ್ಯದ ಖಾಂಡ್ವ ಎಂಬಲ್ಲಿ ಭಾಷಣ ಮಾಡುತ್ತಾ ಭಾರತ ಸರ್ಕಾರದವರು ನವಾಬ ರಾಜರುಗಳಿಗೆ ಕೊಡುತ್ತಿರುವ ರಾಜಧನವು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾದುದೆಂದೂ, ಅದನ್ನು ನಿಲ್ಲಿಸಿ ಅವರಲ್ಲಿರುವ ಗುಪ್ತ ಧನಗಳನ್ನೂ ಕೂಡಲೇ ಸರ್ಕಾರಕ್ಕೆ ವಶಪಡಿಸಿಕೊಳ್ಳಬೇಕೆಂದೂ ಮತ್ತು ಇನಾಂದಾರರುಗಳಿಗೆ ಯಾವ ವಿಧವಾದ ಪರಿಹಾರವನ್ನೂ ಕೊಡಕೂಡದೆಂದೂ ತಿಳಿಸಿರುತ್ತಾರೆ.

## ಯೆಹೂದ್ಯರ ಸಂಖ್ಯೆಯಲ್ಲಿ ೪೦ ಲಕ್ಷ ಖೋತಾ

ಯುದ್ಧಕ್ಕೆ ಮುಂಚೆ ಪ್ರಪಂಚದಲ್ಲಿ ೧ ಕೋಟಿ ೬೦ ಲಕ್ಷ ಯೆಹೂದ್ಯರು ಇದ್ದರೆಂದೂ, ಯುದ್ಧಾನಂತರ ಅದು ೧ ಕೋಟಿ ೧೨ ಲಕ್ಷಕ್ಕೆ ಇಳಿಯಿತೆಂದೂ ಗೊತ್ತಾಗಿದೆ. ಅವರ ಸಂಖ್ಯೆಯು ವರ್ಷವರ್ಷವೂ ಹೆಚ್ಚುತ್ತಿರುವುದೆಂದು ಹೇಳಲಾಗಿದೆ.

### ಪ್ರಖ್ಯಾತಿನದ ಪ್ರಯುಕ್ತ ಪೂಜೆ

ರಾಜಧಾನಿಯ ನೊಣವಿನಕೆರೆ ಬೀದಿಯಲ್ಲಿರುವ ಶ್ರೀ ಪ್ರಸನ್ನ ರಾಮದಾಂಜನೇಯ ದೇವಸ್ಥಾನದಲ್ಲಿ ನಾಳೆ ಪುರಂದರ ದಾಸರ ಪುಣ್ಯದಿನದ ಸಂಬಂಧವಾಗಿ ವಿಶೇಷ [illegible] ಮತ್ತು [illegible]

## ರಿಪಬ್ಲಿಕ್ ದಿನ ಕಾಂಗ್ರೆಸ್ ಅಧ್ಯಕ್ಷರುಗಳ ಚಿತ್ರಗಳ ಮೆರವಣಿಗೆ

ಭಾರತದ ರಿಪಬ್ಲಿಕ್ಕಿನ ಉದ್ಘಾಟನೆಯ ಸಂಬಂಧವಾಗಿ [illegible] ಕಾಂಗ್ರೆಸ್ [illegible] ಅಧ್ಯಕ್ಷರುಗಳ [illegible] ಗಾಂಧಿ ಮತ್ತು [illegible] ದಿನ ರಾತ್ರಿ [illegible] ಗಳು [illegible] ಅನಂತರ ಧ್ವಜಾರೋಹಣವನ್ನು ಮಾಡಲಾಗುವುದು. ಕಾಂಗ್ರೆಸ್ ಅಧ್ಯಕ್ಷರು ಸ್ವಯಂಸೇವಕ ಸೇವಕಿಯರ ದಳಗಳ ಪರಿಶೀಲನೆ ನಡೆಸುವರು. ಸರ್ದಾರ್ ಪಟೇಲರು, ದೇಶೀಯ ಕಲಾ ಮತ್ತು ಕೌಶಲ್ಯಗಳ ಪ್ರದರ್ಶನವನ್ನು ತೆರೆಯುವರು [illegible] ವರು [illegible] ಪ್ರಾರಂಭವನ್ನು ಮಾಡುವರು.

## ಪಾಕಿಸ್ತಾನದ ಮೇಲೆ ಭಾರತದ ಪ್ರತಿಕ್ರಿಯೆ ಆಗಬೇಕು

ಪಾಕಿಸ್ತಾನದಲ್ಲಿ ಹಿಂದೂ ನಿರಾಶ್ರಿತರ ಆಸ್ತಿಪಾಸ್ತಿಗಳ ಸಮಸ್ಯೆಯನ್ನು ಬಗೆಹರಿಸಲು ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಸೇರಿದ ಪಶ್ಚಿಮ ಪಂಜಾಬಿಗೆ ಒದಗಿಸಲಾಗುತ್ತಿರುವ ನೀರು, ವಿದ್ಯುಚ್ಛಕ್ತಿ [illegible] ಪಾಕಿಸ್ತಾನವು [illegible] ಆಸ್ತಿಪಾಸ್ತಿಗಳ ಬಗ್ಗೆ [illegible] ಈ ವಿಷಯಗಳ ಬಗ್ಗೆ [illegible] ದೃಢ ಮತ್ತು ಬಲವತ್ತರ [illegible] ಗಳನ್ನು ತೆಗೆದುಕೊಳ್ಳಬೇಕೆಂದು ಅವರು ಹೇಳಿರುತ್ತಾರೆ.

## ಭಾರತದ ರಾಜ್ಯಾಂಗದ ಬಗ್ಗೆ ಶರತ್‌ಬಾಬು ಅಭಿಪ್ರಾಯ

ಭಾರತದ [illegible] ಶ್ರೀ ಶರಚ್ಚಂದ್ರ ಬೋಸರು [illegible] ಭಾರತದ ರಾಜ್ಯಾಂಗವನ್ನು [illegible] ರಾಜಕೀಯ ಪ್ರತಿ [illegible]

## ಹೈದರಾಬಾದ್ ಜಹಗೀರು ದಾರರಿಗೆ ಪರಿಹಾರ

ಹೈದರಾಬಾದಿನ [illegible] ಜಹಗೀರುದಾರರ [illegible] ಸರ್ಕಾರದವರು [illegible] ಅವನ್ನು [illegible]

## ಕೇಂದ್ರ ಸರ್ಕಾರವು ೧೫ ಕೋಟಿ ರೂ. ಸಾಲವೆತ್ತುವುದು

ಭಾರತ ಕೇಂದ್ರ ಸರ್ಕಾರದವರು ಮತ್ತೆ ಶೇಕಡ ೩ ರೂ. ಬಡ್ಡಿಯ ೧೯೫೫ರ ೧೫ ಕೋಟಿ ರೂ. ಸಾಲವನ್ನು ಎತ್ತಲು ನಿರ್ಧರಿಸಿದ್ದಾರೆ

## ಕಮ್ಯೂನಿಸ್ಟ್ ಸಂಗಡದ ಕಛೇರಿಗೆ ಬೆಂಕಿ

ಪ್ರದುಚೇರಿಯಲ್ಲಿರುವ ಕಮ್ಯೂನಿಸ್ಟ್ ಸಂಗಡದ ಕೇಂದ್ರ ಕಛೇರಿಗೆ ಬೆಂಕಿಯನ್ನು ಹೊತ್ತಿಸಿದುದರಿಂದ ಅದು ಸುಟ್ಟು ಹೋಗಿದೆ. ಅದಕ್ಕೆ ಸೇರಿದ ಆಹಾರ ಧಾನ್ಯದ ಡಿಪೋ ಸಹ ಅಗ್ನಿಗೆ ಆಹುತಿಯಾಗಿರುತ್ತದೆ. ಕಲವು ಗುಂಡರು ಸೀಮೆಎಣ್ಣೆ ಮತ್ತು ಪೆಟ್ರೋಲನ್ನು ಹಾಕಿ ಸುಟ್ಟರೆಂದು ಹೇಳಲಾಗಿದೆ

## ೨೦ ಕೋಟಿ ಬುಷಲ್ ಆಸ್ಟ್ರೇಲಿಯಾ ಗೋಧಿ

ಭಾರತವು ಸುಮಾರು ೨೦ ಕೋಟಿ ಬುಷಲ್ ಆಗುವಷ್ಟು ಆಸ್ಟ್ರೇಲಿಯಾ ಗೋಧಿಯನ್ನು ಕೊಳ್ಳಲು ಸಕಲ [illegible]

## ರಾಷ್ಟ್ರೀಯ ಫಿಸಿಕಲ್ ಪ್ರಾಯೋಗಿಕ ಶಾಲೆ

ಏಷ್ಯಾದಲ್ಲೆಲ್ಲಾ ಅತ್ಯಂತ ಹಿರಿದಾದ ರಾಷ್ಟ್ರೀಯ ಫಿಸಿಕಲ್ ಲ್ಯಾಬೊರೇಟರಿಯನ್ನು [illegible] ಸರ್ದಾರ್ ಪಟೇಲರು [illegible]

## ಮೂರು ಹೊಸ ಗ್ರಹಗಳ ಪತ್ತೆ

ರಷ್ಯದ ಜ್ಯೋತಿಷ್ಯ ಶಾಸ್ತ್ರಜ್ಞರು ಬೃಹಸ್ಪತಿ ಮತ್ತು ಅಂಗಾರಕ ಗ್ರಹಗಳ ನಡುವೆ ಇರುವುವೆಂದು ಹೇಳಲಾದ ೩ ಚಿಕ್ಕ ಗ್ರಹಗಳನ್ನು ಕಂಡುಹಿಡಿದಿರುವರೆಂದು ಹೇಳಲಾಗಿದೆ. ಅವುಗಳನ್ನು ಕಂಡುಹಿಡಿಯಲು ೧೫೦ ವರ್ಷ ಹಿಡಿಯಿತೆಂದು ತಿಳಿದುಬಂದಿದೆ

### ಪುರಂದರ ದಾಸರ ಪುಣ್ಯ ದಿನ

ನಾಳೆ ಸಂಜೆ ೬-೩೦ ರಿಂದ ಪುರಂದರ ದಾಸರ ಪುಣ್ಯ ದಿನದ ಪ್ರಯುಕ್ತ ವೀಣೆ ವೆಂಕಟ ಸುಬ್ಬಯ್ಯನವರ ಕೊಟ್ಟಿಗೆಯಲ್ಲಿ ಶ್ರೀ ರಾಮದಾಸರ [illegible] ಕೀರ್ತನೆ ಮತ್ತು ಉಪನ್ಯಾಸಗಳು ನಡೆಯುತ್ತವೆ.


FOR SALE

NEWSPRINT

Double Crown Rough Newsprint available at [illegible]


## ಹೈದರಾಬಾದು ರಾಜ್ಯಾಂಗ ಸಭೆಗೆ ಚುನಾವಣೆ

ಹೈದರಾಬಾದು ಸರಕಾರದವರು ಅಲ್ಲಿ [illegible] ರಾಜ್ಯಾಂಗ ಸಭೆಯ ಚುನಾವಣಾ [illegible] ಬಗ್ಗೆ [illegible] ಮಾಡಿರುತ್ತಾರೆ [illegible] ಅರ್ಜಿದಾರರು [illegible] ಕೊಡಬೇಕು. ಓಟು [illegible] ಬಣ್ಣದ ಪೆಟ್ಟಿಗೆ ಪದ್ಧತಿಯನ್ನು [illegible] ಪ್ರತಿ ಉಮೇದುವಾರರೂ [illegible] ಸಾವಿರ ರೂ. ಗಿಂತ ಹೆಚ್ಚು ಖರ್ಚು ಮಾಡಬಾರದೆಂದು ಗೊತ್ತುಮಾಡಲಾಗಿದೆ

## ಸಬ್ ಮರೀನ್ ಮುಳುಗಿ ೬೪ ಜನರ ಸಾವು

ಬ್ರಿಟನಿಗೆ ಸೇರಿದ ಟ್ರುಕುಲೆಂಟ್ ಎಂಬ ಸಬ್ ಮೇರೀನ್ ಸ್ವೀಡನ್ನಿನ ಹಡಗಿಗೆ ತಗುಲಿ ಮುಳುಗಿದುದರ ಪರಿಣಾಮವಾಗಿ ಇದುವರೆಗೆ ೬೪ ಜನರು ಸತ್ತರೆಂದು ವರದಿಯಾಗಿದೆ. ಅದರಲ್ಲಿದ್ದವರನ್ನು ಬದುಕಿಸಲು ವಿಶೇಷ ಪ್ರಯತ್ನಗಳನ್ನು ಮಾಡಲಾಯಿತು. ಅವರ ಸಹಾಯಕ್ಕಾಗಿ ಹೊರಟ ಬಾಂಬರ್ ವಿಮಾನವು ಹಾರಿದ ಕ್ಷಣದಲ್ಲಿ ಮುರಿದು ಐದು ಜನರು ಸತ್ತರು.

## ಲಾಹೋರು ಪತ್ರಿಕೆಗಳ ಮುಷ್ಕರ

ಪಾಕಿಸ್ತಾನದ ಗಡಿನಾಡಿನ ಸರ್ಕಾರದವರು ಸ್ಥಳೀಯ ಪತ್ರಿಕಾ ಸಂಪಾದಕರೊಬ್ಬರನ್ನು ದಸ್ತಗಿರಿ ಮಾಡಿರುವುದನ್ನು ಪ್ರತಿಭಟಿಸಲು, ಲಾಹೋರಿನ ೧೧ ಪತ್ರಿಕೆಗಳು ಆ ಪ್ರಾಂತದ ಸುದ್ದಿಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಕೂಡದೆಂದು ನಿರ್ಧರಿಸಿವೆ

### ರಾಜಧಾನಿಯಲ್ಲಿ ಗೋ ಮಾಂಸದ ಮಾರಾಟಕ್ಕೆ ಅನುಮತಿ

ಮೈಸೂರು ಸಂಸ್ಥಾನದ ಹೊರಗಡೆಯಿಂದ ಮೈಸೂರು ನಗರಕ್ಕೆ ಗೋ ಮಾಂಸವನ್ನು ಆಮದು ಮಾಡಿ ಮಾರಾಟ ಮಾಡಲು ಸರ್ಕಾರದವರು ಅನುಮತಿ ಕೊಟ್ಟಿರುವರೆಂದು ಗೊತ್ತಾಗಿದೆ

### ಗೃಹ ಸಹಕಾರ ಸಂಘದ ಅಧಿಕಾರಿ ವರ್ಗ

ರಾಜಧಾನಿಯ ಗೃಹ ಸಹಕಾರ ಸಂಘದ ಅಧಿಕಾರಿ ವರ್ಗಕ್ಕೆ ನಡೆದ ಚುನಾವಣೆಯು ಈ ರೀತಿ ಇದೆ.- ಶ್ರೀ ಪಿ. ಲಿಂಗಪ್ಪಯ್ಯ ಅಧ್ಯಕ್ಷರು, ಶ್ರೀ ಎಸ್. ಮೋಲಾಸಿಂಗ್ ಉಪಾಧ್ಯಕ್ಷರು, ಶ್ರೀ ಎ. ಕೃಷ್ಣಮೂರ್ತಿರಾವ್, ಗೌ॥ ಕಾರ್ಯದರ್ಶಿ ಮತ್ತು ಶ್ರೀ ಎಸ್. ಚಿನ್ನಸ್ವಾಮಿ ಶೆಟ್ಟಿ, ವಕೀಲರು.


ರಾಜಕಮಲ್
ಮೈಸೂರು
13-1-50 ರಿಂದ
ಜನಭರಿತವಾದ ೪ನೇ ವಾರ
ದಿನವಹಿ 3 ಪ್ರದರ್ಶನಗಳು
ಜೀವನ
[illegible]


## ೨೬ನೇ ತಾ॥ ಕಾರ್ಯಕ್ರಮದಲ್ಲಿ ಬದಲಾವಣೆ

ರಿಪಬ್ಲಿಕ್ಕಿನ ಸ್ಥಾಪನೆಯ ಸಂಬಂಧವಾಗಿ ದೆಹಲಿಯ ಸಮಾರಂಭವು ಬೆಳಿಗ್ಗೆ ೧೧-೧೫ ಕ್ಕೆ ಪ್ರಾರಂಭವಾಗಬೇಕಾಗಿದ್ದುದನ್ನು ೧೦-೧೫ ಗಂಟೆಗೆ ನೆರವೇರಿಸಬೇಕೆಂದು ಗೊತ್ತಾಗಿರುವುದರಿಂದ, ರಾಜಧಾನಿಯಲ್ಲಿ ನಡೆಯುವ ದರಬಾರು ಅದೇ ರೀತಿಯಲ್ಲಿ ಬದಲಾವಣೆಯಾಗಿದೆಯೆಂದು ಸರಕಾರದವರು ತಿಳಿಸಿರುತ್ತಾರೆ. ಇದೇ ಮೇರೆಗೆ ಇತರ ಪ್ರಾಂತ ಮತ್ತು ಸಂಸ್ಥಾನಗಳಲ್ಲೂ ಕಾರ್ಯಕ್ರಮಗಳು ಬದಲಾಯಿಸಲ್ಪಡುವುವು

## ಇಬ್ಬರು ಸ್ತ್ರೀಯರಿಂದ ಗರ್ಭಿಣಿ ಹೆಂಗಸಿನ ಕೊಲೆ

ಕಲ್ಲಿಕೋಟೆಯ ಬಳಿ ಪುನ್ನಂಪಟ್ಟದ ಶಾಲಾ ಉಪಾಧ್ಯಾಯಿನಿ ೨೫ ವರ್ಷದ ಲಕ್ಷ್ಮಿ ಪುದುವಾಳ್ ಮತ್ತು ಆಕೆಯ ಸ್ನೇಹಿತೆ ಜಾನಕಮ್ಮ ಎಂಬುವರು ಪಕ್ಕದ ಗ್ರಾಮದ ಶಾಲಾ ಉಪಾಧ್ಯಾಯರಾದ ನಾರಾಯಣ ನಂಬೀಶಂ ಎಂಬುವನ ಗರ್ಭಿಣಿಯಾದ ಪತ್ನಿಯನ್ನು ಕೊಲೆ ಮಾಡಿ ತಾವಾಗಿಯೇ ಪೋಲೀಸರ ವಶವಾದ ವಾರ್ತೆಯು ಬಂದಿದೆ. ನಂಬೀಶನಿಗೂ ಪುದುವಾಳಿಗೂ ಅನುರಾಗವಿತ್ತೆಂದೂ ಆದರೆ ಆತನ ಹೆಂಡತಿಯು ಅದಕ್ಕೆ ಅಡ್ಡಿಯಾಗಿದ್ದಳೆಂದೂ ಆದ್ದರಿಂದ ಅವಳು ಸ್ನಾನಕ್ಕಾಗಿ ಹೊರಗೆ ಹೋಗಿದ್ದಾಗ ಲಕ್ಷ್ಮಿಯು ಅವಳನ್ನು ಹಿಂಬಾಲಿಸಿ ಚೂರಿಯಿಂದ ಇರಿದು ಕೊಂದಳೆಂದೂ ಹೇಳಲಾಗಿದೆ. ಇನ್ನೊಬ್ಬಳು ಈ ಕೃತ್ಯದಲ್ಲಿ ಸಹಾಯಕಳಾಗಿದ್ದಳೆಂದು ತಿಳಿದುಬಂದಿದೆ.

### ದಾಸಪ್ಪನವರು ಭದ್ರಾವತಿಗೆ

ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಈ ದಿನ ಭದ್ರಾವತಿಗೆ ಪ್ರಯಾಣ ಬೆಳೆಸಿದರು

### ಭಾಷ್ಯಂರವರ ಆಗಮನ

ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರು ಈ ದಿನ ಬೆಳಗ್ಗೆ ರಾಜಧಾನಿಗೆ ಆಗಮಿಸಿ ಮುಖ್ಯಮಂತ್ರಿ ರೆಡ್ಡಿಯವರೊಡನೆ ಮಾತುಕತೆ ನಡೆಸಿದರು

### ರೈಲ್ವೆ ನೌಕರರಿಗೆ ೧ ತಿಂಗಳ ಬೋನಸ್ಸು

ಮೈಸೂರು ರೈಲ್ವೆಯ ಎಲ್ಲ ನೌಕರರಿಗೂ ಒಂದು ತಿಂಗಳ ಸಂಬಳದಷ್ಟು ಹಣವನ್ನು ಸಂಭಾವನೆಯಾಗಿ ಕೊಡಲು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ


ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಕ್ರಿಸ್‌ಮಸ್ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವು ಈ ಮಾಹೆ ೪ನೇ ತಾರೀಖಿನಿಂದ ನಡೆಯುತ್ತಿದೆ. ಪೋಷಕ ಮಹಾಶಯರು ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಬೇಕಾಗಿ ವಿನಂತಿ. ಶಿಶುವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಹನೀಯರು ಕಾಲವಿಳಂಬ ಮಾಡದೆ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ


[illegible] published [illegible] Mysore

ಫೋ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಬುಧವಾರ ೧೮–೧–೫೦ [ಸಂಚಿಕೆ ೧೮೭

# ಮಂತ್ರಿಮಂಡಲದ ರಚನೆಯಲ್ಲಿ ತೊಡಕು

## ಮಂತ್ರಿಮಂಡಲದ ಪುನರ್‍ರಚನೆಯಲ್ಲಿ ಸಾವಕಾಶ

### ಶ್ರೀ ಕೆ. ಸಿ. ರೆಡ್ಡಿಯವರ ವಿವರಣೆ

ಮೈಸೂರು ೧೭

ನಿನ್ನೆ ಕೆ. ಸಿ. ರೆಡ್ಡಿಯವರು ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದ ನಂತರ ಪತ್ರಿಕಾ ಪ್ರತಿನಿಧಿಗಳು ಅವರನ್ನು ಭೇಟಿ ಮಾಡಿ ಮಂತ್ರಿಮಂಡಲದ ಪುನರ್‍ರಚನೆಯ ವಿಷಯವನ್ನು ಪ್ರಸ್ತಾಪಿಸಿದಾಗ ಈ ರೀತಿ ಹೇಳಿಕೆ ಇತ್ತರು:–

ನಾನು ಕಳೆದ ಎರಡು ದಿನಗಳ ಹಿಂದೆ ನ್ಯೂಡೆಲ್ಲಿಗೆ ಮಂತ್ರಿಮಂಡಲವನ್ನು ಪುನರ್‍ರಚಿಸಲು ಬಂದಿರುವವರಿಗೂ ಒಪ್ಪುವಂತೆ ಹೊಂದಿಕೆಯಿಂದ ಕೆಲಸ ಮಾಡುವ ಸದಸ್ಯರನ್ನೊಳಗೊಂಡ ಮಂತ್ರಿಮಂಡಲವನ್ನು ರಚಿಸುವ ಭರವಸೆಯುಳ್ಳವನಾಗಿದ್ದೆನು. ನಾನು ಬೆಂಗಳೂರನ್ನು ಬಿಡುವಾಗ ನನ್ನ ಉದ್ಯಮದಲ್ಲಿ ಯಶಸ್ವಿಯಾಗುವ ನಂಬಿಕೆ ಇತ್ತು. ಕಟ್ಟಕಡೇ ಘಳಿಗೆಯಲ್ಲಿ ಅನಿರೀಕ್ಷಿತವಾದ ತೊಡಕುಂಟಾಗಿರುವುದರಿಂದ ಮಂತ್ರಿಮಂಡಲದ ಪುನರ್‍ರಚನೆ ವಿಷಯದಲ್ಲಿ ಸ್ವಲ್ಪ ಸಾವಕಾಶವಾಗಿದೆ. ಇದಕ್ಕಾಗಿ ನನಗಿಂತಲೂ ಹೆಚ್ಚಿಗೆ ವ್ಯಥೆಪಡುವವರು ಬೇರೊಬ್ಬರಿಲ್ಲ. ಈ ವಿಷಯಗಳನ್ನು ಜನರು ಜಾಗ್ರತೆ ಅರ್ಥಮಾಡಿಕೊಳ್ಳಬೇಕೆಂಬ ಆಕಾಂಕ್ಷೆಯಿಂದಿದ್ದೇನೆ.

### ಪ್ರಶ್ನೆಗಳು

ಜನವರಿ ೨೬ಕ್ಕೆ ನೂತನ ಮಂತ್ರಿಮಂಡಲ ರಚನೆಯಾಗಬಹುದೆಂಬ ಸುದ್ದಿಗೆ ಆಧಾರವಿದೆಯೇ?

ಶ್ರೀ ರೆಡ್ಡಿಯವರು– ಅದನ್ನು ಜಾಗ್ರತೆ ಈ ವಿಷಯವನ್ನು ತೀರ್ಮಾನಿಸಬೇಕೆಂಬುದೇ ನನ್ನ ಇಚ್ಛೆ.

ಮಂತ್ರಿಮಂಡಲದಲ್ಲಿ ಕಾಂಗ್ರೆಸ್ಸೇತರ ಸದಸ್ಯರಿರುವುದಿಲ್ಲವೇ?

ಶ್ರೀ ರೆಡ್ಡಿ– ಈಗ ನಾನು ಯಾವುದನ್ನೂ ಖಚಿತವಾಗಿ ಹೇಳಲಾರೆ.

ಮಂತ್ರಿಮಂಡಲದ ಸಂಖ್ಯೆ ನಿರ್ಧಾರವಾಗಿದೆಯೇ?

ಉ– ಯಾವುದೂ ನಿರ್ಧಾರವಾಗಿಲ್ಲ.

ಒಪ್ಪಂದ ಜನವರಿ ೨೬ರೊಳಗಾಗದೇ?

ಉ– ಯಾವುದೂ ತೀರ್ಮಾನಿಸಿಲ್ಲ. ಈ ಕ್ಷೇತ್ರದಲ್ಲಿ ನಿಬಂಧನೆಯಿಲ್ಲ.

ಶ್ರೀಮನ್ಮಹಾರಾಜರ ಭೇಟಿಯಲ್ಲಿ ಮಂತ್ರಿಮಂಡಲದ ಪ್ರಶ್ನೆ ಬಂತೇ?

ಉ– ಇದು ಸಾಮಾನ್ಯದ ಭೇಟಿ. ರಿಪಬ್ಲಿಕ್ ದಿನಾಚರಣೆಯ ವಿಷಯ ಮುಂತಾದವುಗಳನ್ನು ಚರ್ಚಿಸಲಾಯಿತು.

### ಸ್ವೀಕಾರ

ರಾಜಧಾನಿಯ ಆರ್. ಎಸ್. ಎಸ್. ಸಂಘದವರು ಕಳುಹಿಸಿಕೊಟ್ಟಿರುವ ಸಂಕ್ರಾಂತಿ ಹಬ್ಬದ ಶುಭಾಶಯಗಳನ್ನು ಮತ್ತು ಎಳ್ಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ.

## ಭಾರತ ಸರಕಾರಕ್ಕೆ ೩ ಹೊಸ ಹಡಗುಗಳು

ಭಾರತ ಸರ್ಕಾರಕ್ಕಾಗಿ ಮೂರು ಹೊಸ ಹಡಗುಗಳನ್ನು ತಯಾರಿಸಲು ವಿಶಾಖಪಟ್ಟಣದಲ್ಲಿರುವ ಸಿಂಧ್ಯ ಹಡಗು ನಿರ್ಮಾಣ ಸಂಸ್ಥೆಗೆ ಸೂಚನೆ ಕೊಡಲಾಗಿದೆಯೆಂದು ಗೊತ್ತಾಗಿದೆ. ಈ ಹಡಗುಗಳು ೮ ಸಾವಿರ ಟನ್ ತೂಕವುಳ್ಳದ್ದಾಗಿರುವುವು. ಹಡಗಿನ ಬೆಲೆ ಪ್ರತಿಯೊಂದಕ್ಕೂ ೬೪ ಲಕ್ಷ ರೂ.

## ೨೬ನೇ ತಾರೀಖು ಪ್ರಭುಗಳ ಮೆರವಣಿಗೆ

ಸ್ವಂ. ಸು. ಪ್ರೋ.] ಬೆಂಗಳೂರು ೧೮

ಇದೇ ತಿಂಗಳು ೨೬ನೇ ತಾರೀಖು ಭಾರತ ರಿಪಬ್ಲಿಕ್ ದಿನಾಚರಣೆಯ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರ ಮೆರವಣಿಗೆಯು ಏರ್ಪಾಡಾಗಿದೆ. ಸಂಜೆ ೪–೩೦ ಗಂಟೆಗೆ ಪ್ರಭುಗಳು ೮ ಕುದುರೆ ಸಾರೋಟಿನಲ್ಲಿ ರಾಜಧಾನಿಯ ಅರಮನೆಯಿಂದ ಹೊರಟು ಉತ್ತರ ಕೋಟೆ ಬಾಗಿಲಿನಿಂದ ಅಶೋಕ ರಸ್ತೆಯನ್ನು ಹಾಯ್ದು ದೊಡ್ಡ ಪೋಸ್ಟಾಫೀಸಿನಬಳಿ ಇರ್ವಿನ್ ರಸ್ತೆಯಲ್ಲಿ ಬಲಕ್ಕೆ ತಿರುಗಿ ಪ್ರಭುತ್ವ ಭವನಕ್ಕೆ ತೆರಳುವರು. ಅಲ್ಲಿ ಭಾರತ ರಾಷ್ಟ್ರಧ್ವಜಾರೋಹಣ ಮತ್ತು ಮಿಲಿಟರಿ ಪೆರೇಡುಗಳು ನಡೆಯುವುವು.

### ಬೊಂಬಾಯಿ ಗವರ್ನರರ ನಿರ್ಗಮನ

ಬೊಂಬಾಯಿನ ಗವರ್ನರಾದ ಸರ್ ಮಹಾರಾಜ್ ಸಿಂಗ್‌ರವರು ನಿನ್ನೆ ದಿನ ರಾಜಧಾನಿಯಲ್ಲಿ ಪ್ರಭುಗಳ ಜನ ಉಪಾಹಾರ ಸ್ವೀಕರಿಸಿ ಬೆಂಗಳೂರಿಗೆ ತೆರಳಿದರು. ಅವರು ಈ ದಿನ ವಿಮಾನದಲ್ಲಿ ಮದರಾಸಿಗೆ ಪ್ರಯಾಣ ಮಾಡಿದರು.

### ಸಿದ್ದಲಿಂಗಯ್ಯನವರು ದೆಹಲಿಗೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ದಲಿಂಗಯ್ಯನವರು ಇದೇ ತಿಂಗಳು ೨೧ ಅಥವ ೨೨ನೇ ತಾರೀಖು ಶ್ರೀ ಕೆ. ಹನುಮಂತಯ್ಯನವರೊಡನೆ ದೆಹಲಿಗೆ ಪ್ರಯಾಣ ಮಾಡುವರೆಂದು ಗೊತ್ತಾಗಿದೆ.

## ಕೆಂಪು ಚೀಣಾದಲ್ಲಿ ಇಂಗ್ಲೀಷಿಗೆ ಪ್ರತಿಬಂಧಕ

ಕಮ್ಯೂನಿಸ್ಟ್ ಚೀಣಾದಲ್ಲಿ ಬ್ರಿಟಿಷ್ ಮತ್ತು ಅಮೇರಿಕ ವಿರುದ್ಧ ಭಾವನೆಯು ಬಹಳ ಮಟ್ಟಿಗೆ ಬೆಳೆಯುತ್ತಿದೆಯೆಂದು ವರದಿಯಾಗಿದೆ. ಕ್ಯಾಂಟನ್ ಮತ್ತು ಇತರ ಹಲವು ಕಡೆಗಳ ಪಾಠಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಸಂಪೂರ್ಣವಾಗಿ ಪ್ರತಿಬಂಧಿಸಲಾಗಿದೆಯೆಂದೂ ಮತ್ತು ಬ್ರಿಟಿಷರಿಂದ ಸ್ಥಾಪಿಸಲ್ಪಟ್ಟಿರುವ ಬಾಲ ಚಮೂದಳದ ವ್ಯವಸ್ಥೆಯ ಬಗ್ಗೆಯೂ ಅವರು ನಿರೋಧವನ್ನು ವ್ಯಕ್ತಪಡಿಸಿ, ಅಲ್ಲಿನ ಬಾಲಕರು ಸ್ಕೌಟ್ ಸಭಾ ಕೂಡಬೇಕೆಂದು ಪ್ರತಿಬಂಧಿಸುವುದಾಗಿಯೂ ಹೇಳಲಾಗಿದೆ.

## ಗಂಡನ ಶವವನ್ನು ತುಂಡು ತುಂಡು ಮಾಡಿದ ಪತ್ನಿ

ಫ್ರಾನ್ಸಿನ ಮೇಡಂ ಲಮೊರಿ ಎಂಬ ೫೦ ವರ್ಷದ ಮಹಿಳೆಯು ತನ್ನ ಗಂಡನ ಚರ್ಯೆಯಲ್ಲಿ ಸಂದೇಹಪಟ್ಟು, ಅವನನ್ನು ಚೂರಿಯಿಂದ ಇರಿದು ಕೊಲೆ ಮಾಡಿ, ಅವನ ಶವವನ್ನು ೨೦೦ ತುಂಡುಗಳಾಗಿ ಕತ್ತರಿಸಿ ಆ ಚೂರುಗಳನ್ನು ೩೦ ಮೈಲಿ ದೂರದ ಮಾರ್ಗದಲ್ಲಿ ಉದ್ದಕ್ಕೂ ಬಿಸಾಡಿ ನಾಯಿನರಿಗಳು ತಿನ್ನುವಂತೆ ಮಾಡಿದ ಪ್ರಸಂಗವು ವರದಿಯಾಗಿದೆ.

### ಮಧ್ವನವಮಿ ಆಚರಣೆ

ಶ್ರೀ ಮಧ್ವನವಮಿ ಆಚರಣೆಯು ಪ್ರಯುಕ್ತ ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ನಾಳೆಯಿಂದ ಪ್ರತಿದಿನ ಪ್ರಾತಃಕಾಲ ವಿಶೇಷ ಪೂಜಾ ಪಾರಾಯಣ, ಪಾರಾಯಣ ನಂತರ ತೀರ್ಥಪ್ರಸಾದ ಮತ್ತು ಸಂಜೆ ೬ ಗಂಟೆಯಿಂದ ೮–೩೦ ವರೆಗೆ ಹರಿಕಥೆ ಪುರಾಣಾದಿಗಳು ನಡೆಯುವುವು. ಭಕ್ತಾದಿಗಳು ಈ ಉತ್ಸವದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

## ಶಾಂತಿನಿಕೇತನದ ಮೈಸೂರು ವಿದ್ಯಾರ್ಥಿಯ ಉಪವಾಸ?

ಮೈಸೂರಿನ ಲಲಿತ ಕಲಾ ವಿದ್ಯಾರ್ಥಿಯಾದ ಶ್ರೀ ಬಿ. ಕೃಷ್ಣಪ್ಪನವರು ಸದರಿ ಕಲೆಯ ಉನ್ನತ ವ್ಯಾಸಂಗಕ್ಕಾಗಿ ಶಾಂತಿನಿಕೇತನಕ್ಕೆ ತೆರಳಿದ್ದಾರೆ. ಅವರಿಗೆ ಮೈಸೂರು ಸರ್ಕಾರದವರು ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿರುತ್ತಾರೆ. ಆದರೆ ಕಳೆದ ಆರು ತಿಂಗಳಿನಿಂದಲೂ ಅವರಿಗೆ ವೇತನವನ್ನು ಕಳುಹಿಸದೆ ಊಟ ಮತ್ತು ವಸತಿ ಸೌಕರ್ಯಗಳಿಗೆ ತುಂಬಾ ತೊಂದರೆಯಾಗಿದೆ. ಶ್ರೀಯುತರು ಈ ಬಗ್ಗೆ ಮೈಸೂರು ಸರ್ಕಾರದೊಡನೆ ಪತ್ರವ್ಯವಹಾರ ನಡೆಸಿ, ಅದರಿಂದ ಏನೂ ಪ್ರಯೋಜನವಾಗಿಲ್ಲವಾದುದರಿಂದ ಅವರು ಉಪವಾಸವ್ರತ ಕೈಗೊಳ್ಳುವುದಾಗಿ ತಿಳಿಸಿ ಬಂದಿದೆ. ಅವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಲು ಮೈಸೂರಿನ ಲಲಿತ ಕಲಾ ವಿದ್ಯಾರ್ಥಿಗಳೂ ಉಪವಾಸ ಮಾಡಬೇಕಾಗುತ್ತದೆ. ಈ ಬಗ್ಗೆ ಅಧಿಕಾರಿಗಳು ಕೂಡ ವಿಚಾರಿಸಿ, ಮಾಡಬೇಕೆಂದು ರಾಜಧಾನಿಯ ಲಲಿತ ಕಲಾ ವಿದ್ಯಾರ್ಥಿ ಸಂಘದ ಅಧ್ಯಕ್ಷರು ನಮಗೆ ಬರೆದಿದ್ದಾರೆ.

## ರಾಜೇಂದ್ರ ಪ್ರಸಾದರ ಕಾರಿಗೆ ಜಖಂ

——:೦:——

ಮೊನ್ನೆ ದಿನ ಡಾ|| ರಾಜೇಂದ್ರ ಪ್ರಸಾದರು ಜಬ್ಬಲ್ಪುರದಿಂದ ಸಾಗರ್‌ಗೆ, ಅಲ್ಲಿನ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡಲು ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ದಾರಿಯಲ್ಲಿ ಒಂದು ಎತ್ತಿನ ಗಾಡಿಗೆ ಢಿಕ್ಕಿ ಹೊಡೆಯುತ್ತಿದ್ದುದನ್ನು ತಪ್ಪಿಸಲು ಹೋಗಿ ಅದು ಪಕ್ಕದ ಮರಕ್ಕೆ ಹೊಡೆಯಿತು. ಕಾರಿನಲ್ಲಿದ್ದವರಾರಿಗೂ ಏಟು ಬೀಳಲಿಲ್ಲ. ಕಾರಿಗೆ ಸ್ವಲ್ಪ ಜಖಂ ಆದುದರಿಂದ ಡಾ|| ಪ್ರಸಾದರು ಬೇರೆ ಕಾರಿನಲ್ಲಿ ಪ್ರಯಾಣ ಮಾಡಿ ಸಾಗರ್‌ವನ್ನು ಸಕಾಲಕ್ಕೆ ತಲಪಿದರು.

## ಬರ್ಮದಲ್ಲಿ ಜಮೀನುಗಳ ರಾಷ್ಟ್ರೀಕರಣ

ಬರ್ಮಾದ ಜಮೀನುಗಳ ರಾಷ್ಟ್ರೀಕರಣ ಶಾಸನದ ಪ್ರಕಾರ ಅಲ್ಲಿರುವ ಭಾರತೀಯರ ಜಮೀನುಗಳ ಬಗ್ಗೆ ಮಾತುಕತೆ ನಡೆಸಲು ಭಾರತ ಸರ್ಕಾರದವರು ೩ ಜನರ ಒಂದು ನಿಯೋಗವನ್ನು ಕಳುಹಿಸಲು ತೀರ್ಮಾನಿಸಿದ್ದಾರೆ. ಅದರಲ್ಲಿ ಮದರಾಸಿನ ಸಚಿವರುಗಳಾದ ಶ್ರೀಗಳು ಬಿ. ಗೋಪಾಲರೆಡ್ಡಿ ಮತ್ತು ಎಂ. ಭಕ್ತವತ್ಸಲಂರವರುಗಳು ಇರುವರು. ಅವರು ಬರುವ ಮಾರ್ಚಿ ತಿಂಗಳಲ್ಲಿ ರಂಗೂನಿಗೆ ತೆರಳುವರು.

## ಈಜಿಪ್ಟಿನಲ್ಲಿ ಕುರುಡು ಮಂತ್ರಿ

ಈಜಿಪ್ಟಿನ ಹುಟ್ಟು ಕುರುಡನಾದ ಟಾಹಾ ಹುಸೇನ್ ಬೇ ಎಂಬಾತನು ತನ್ನ ಬಾಲ್ಯದಲ್ಲಿ ಅಸಾಧಾರಣ ವಿದ್ಯಾ ಪ್ರೌಢಿಮೆಯನ್ನು ಹೊಂದಿ ಕೆಲವು ಕಾಲಾನಂತರ ಫ್ರಾನ್ಸಿನಲ್ಲಿ ಉಚ್ಚ ಶಿಕ್ಷಣಪಡೆದು ಉತ್ತಮ ಸಾಹಿತಿಯಾಗಿದ್ದಾನೆ. ಆತನನ್ನು ಈಗ ಈಜಿಪ್ಟ್ ಸರ್ಕಾರದ ಮಂತ್ರಿಮಂಡಲದಲ್ಲಿ ವಿದ್ಯಾಮಂತ್ರಿಯನ್ನಾಗಿ ನೇಮಿಸಲಾಗಿದೆಯೆಂದು ವರದಿಯಾಗಿದೆ.

——

## ಚೀಫ್ ಸೆಕ್ರೆಟರಿಯವರ ಕಛೇರಿ ಚರಸ್ವತ್ತಿನ ಜಪ್ತಿಗಾಗಿ ನೋಟೀಸು

ಬೆಂಗಳೂರಿನ ಕಂಟ್ರಾಕ್ಟರ್ ಶ್ರೀ ಕೃಷ್ಣಪ್ಪ ಎಂಬುವರು ಸರ್ಕಾರದಿಂದ ತಮಗೆ ಬರಬೇಕಾಗಿದ್ದ ಬಾಕಿಗಾಗಿ ಬೆಂಗಳೂರು ಮುನ್ಸೀಫ್ ಕೋರ್ಟಿನಲ್ಲಿ ದಾವಾ ಹೂಡಿದ್ದರು. ಆಗಸ್ಟ್ ೧೧ ತಿಂಗಳ ಕೆಳಗೆ ಈ ಬಗ್ಗೆ ಶ್ರೀ ಕೃಷ್ಣಪ್ಪನವರ ಪರ ಕೋರ್ಟಿನಲ್ಲಿ ತೀರ್ಪು ಕೊಡಲಾಯಿತು. ಇದುವರೆಗೂ ಅವರಿಗೆ ಬಾಕಿ ಸಂದಾಯವಾಗಿಲ್ಲವಾದುದರಿಂದ ಶ್ರೀಯುತರು ಚೀಫ್ ಸೆಕ್ರೆಟೆರಿಯವರ ಮತ್ತು ಇತರ ಇಲಾಖೆಗಳ ಕುರ್ಚಿ, ಮೇಜು ಮೊದಲಾದ ಚರಸ್ವತ್ತುಗಳನ್ನು ಜಪ್ತಿ ಮಾಡಿಸಲು ಅಮಲ್‌ಜಾರಿ ಪ್ರಮಾಣವನ್ನು ಕೈಗೊಂಡಿರುವುದಾಗಿ ವರದಿಯಾಗಿದೆ.

ನಂಜನಗೂಡು ಸರ್ಕಾರಿ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದ ೫ನೇ ವಾರ್ಷಿಕೋತ್ಸವವು ಇದೇ ತಿಂಗಳು ೨೬ನೇ ತಾರೀಖು ಹೈಸ್ಕೂಲು ಆವರಣದಲ್ಲಿ ನಡೆಯುತ್ತದೆ. ಶ್ರೀ ಎಸ್. ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀ ಜಿ. ಪಿ. ರಾಜರತ್ನಂ ರವರು ಗೌರವ ಅತಿಥಿಗಳಾಗಿ ಬರುವರು.

# ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಪ್ರಗತಿ

## ಸರ್ ಎಂ. ವಿಶ್ವೇಶ್ವರಯ್ಯನವರ ಭಾಷಣ

ಭದ್ರಾವತಿ ೧೫

ಈ ದಿನಸಂಜೆ ಇಲ್ಲಿ ನಡೆದ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ದಿನಾಚರಣೆಯಲ್ಲಿ ಮಾತಾಡಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರು ಭಾಷಣ ಮಾಡಿ ಕಾರ್ಖಾನೆಯ [illegible] ವರ್ಷದ ಪ್ರಗತಿಯನ್ನು ವಿವರಿಸಿದರು. ಕಾರ್ಖಾನೆಯ ಪ್ರಗತಿಯ ಬಗ್ಗೆ ಐದು ವರ್ಷದ ಯೋಜನೆಯನ್ನು ಸಿದ್ಧಗೊಳಿಸಿ, ಪ್ರತಿ ವರ್ಷವೂ ಅದನ್ನು ಪುನರ್ವಿಮರ್ಶಿಸಬೇಕೆಂದು ಅವರು ತಿಳಿಸಿದರು.

೧೯೧೮ರಲ್ಲಿ ತಾವು ಈ ಕಾರ್ಖಾನೆಯ ಸ್ಥಾಪನೆಗೆ ಕಾರಣರಾದರೂ ಕಳೆದ ೨೦ ವರ್ಷಗಳಿಂದಲೂ ಈ ಸಂಸ್ಥೆಗೂ ತಮಗೂ ಸಂಬಂಧವಿರಲಿಲ್ಲವೆಂದೂ ಅವರು ಹೇಳಿ ಈ ಉಕ್ಕಿನ ಕಾರ್ಖಾನೆಯು ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಅತ್ಯಂತ ಭಾರಿಯದೆಂದು ತಿಳಿಸಿದರು.

ಕಾರ್ಖಾನೆಯ ಸ್ಥಾಪನೆ, ಅದನ್ನು ನೋಡಿಕೊಳ್ಳಲು ಹೊರಗಿನಿಂದ ಕರೆಸಿದ ವ್ಯವಸ್ಥಾಪಕರು, ಸಂಚಾಲಕರ, ಮಾರಾಟ ಮುಂತಾದವುಗಳ ಬಗ್ಗೆ [illegible]ಯೊಂದನ್ನು ಕೊಡುತ್ತಾ, ಅವರು ಹಲವು ಸಲಹೆಗಳನ್ನು ಮಾಡಿದರು. ಇಂತಹ ಕೈಗಾರಿಕೆಗಳಿಗೆ ಎಷ್ಟು ಹಣ ಹಾಕಲಾಗುವುದೋ ಅಷ್ಟೇ ಹಣವನ್ನು [illegible] ಆದಾಯವಾಗಿ ಸಂಪಾದಿಸಬಹುದು [illegible], ಜೋಗ್ ವಿದ್ಯುಚ್ಛಕ್ತಿಯು ಕಾರ್ಖಾನೆಗೆ ವರಪ್ರದಾನವಾದಂತಾಗಿರುವುದೆಂದೂ ಭಾರತದಲ್ಲಿಯೇ ಮೈಸೂರಿನ ಉಕ್ಕಿಗೆ ಭಾರಿ ಮಾರ್ಕೆಟ್ಟು ದೊರಕುವುದೆಂದೂ ಅವರು ಹೇಳಿದರು.

ಭಾರತದಲ್ಲಿ ೧೦ ಲಕ್ಷ ಟನ್ನಿನಷ್ಟು ಉಕ್ಕು ತಯಾರಾಗುತ್ತಿರುವುದು [illegible] ಕೋಟಿ ಟನ್ನಿನಷ್ಟು [illegible], ಭಾರತವು ತನ್ನ ಉತ್ಪತ್ತಿಯನ್ನು ೫೦ ಲಕ್ಷ ಟನ್ನಿನಷ್ಟಾದರೂ ಹೆಚ್ಚಿಸಬೇಕು. ಒಂದು ಪಾಂಚ ವಾರ್ಷಿಕ ಯೋಜನೆಯನ್ನು ತಯಾರುಮಾಡಿ ಅದನ್ನು ವರ್ಷಂಪ್ರತಿ ಪುನರ್ವಿಮರ್ಶೆ ಮಾಡಿ ಅದರಂತೆ ವರ್ಷದ ಒಡೆಟ್ಟನ್ನು ತಯಾರಿಸಬೇಕು. ಕಾರ್ಖಾನೆಯ ಫೋರ್‍ಮನ್ ಮುಂತಾದವರನ್ನು ಸರಿಯಾಗಿ ದಕ್ಷತೆಯುಳ್ಳ ಕ್ರಿಯಾಶಕ್ತಿಯನ್ನು ಗಮನಿಸಬೇಕು. ಗುಣಾಢ್ಯರಾದ [illegible] ನೂರು ಜನರನ್ನೊಳಗೊಂಡ [illegible] ತಿಯನ್ನು ರಚಿಸಬೇಕು. ಅಲ್ಲದೆ ಭಾರತೀಯ [illegible] ವಿದೇಶೀಯರನ್ನೊಳಗೊಂಡ ಜನರ ಸಮಿತಿ ನೇಮಿಸಿ ಅವರ ಸಲಹೆಗಳನ್ನು ಪಡೆಯಬೇಕು ಎಂಬಿವೇ ಮುಂತಾದ ಸಲಹೆಗಳನ್ನು ಅವರು ಮಾಡಿದರು.

# ಬಳ್ಳಾರಿಯನ್ನು ಮದ್ರಾಸಿನಲ್ಲಿ ಉಳಿಸಿಕೊಳ್ಳಲು ಒತ್ತಾಯ

ಕರ್ನಾಟಕ [illegible]ನವರಿಗೆ ಬಳ್ಳಾರಿ ಜಿಲ್ಲೆಯನ್ನು [illegible]ವಾಗಿ ಮದ್ರಾಸ್ ಪ್ರಾಂತದಲ್ಲಿ ಉಳಿಸಿಕೊಳ್ಳಬೇಕೆಂದು [illegible] ಸರ್ದಾರ್ ಪಟೇಲರನ್ನು [illegible] ಪಡಿಸುವ ಸಲುವಾಗಿ ಬಳ್ಳಾರಿ ಜಿಲ್ಲಾ ಕರ್ನಾಟಕ ಸಂಘದವರು ದೆಹಲಿಗೆ ನಿಯೋಗ ಹೋಗಿರುವರು. ಈಗ ಭದ್ರಾ [illegible] ಆದೇಶವನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಅವರ ಒತ್ತಾಯಪಡಿಸುವರೆಂದೂ ಹೇಳಲಾಗಿದೆ.

## ರಥೋತ್ಸವ

ಸ್ವಂ. ವ.] ಗುಂಡ್ಲುಪೇಟೆ ೧೭

ಈ ತಾಲ್ಲೂಕಿಗೆ ಸೇರಿದ ಹುಲುಗಿನ ಮುರಡಿಯ ವೆಂಕಟರಮಣಸ್ವಾಮಿ ಬೆಟ್ಟದ ರಥೋತ್ಸವವು ಕಳೆದ ಶನಿವಾರ ಸಂಕ್ರಾಂತಿ ಹಬ್ಬದ ದಿನ ವಿಜೃಂಭಣೆಯಿಂದ ನಡೆಯಿತು.

FOR SALE

NEWSPRINT

Double Crown Rough Newsprint available at

SADHVI OFFICE,
MYSORE

# ಸಿನಿಮಾ ಚಿತ್ರಗಳ ಮೂಲಕ ಬಾಲಕರಿಗೆ ಶಿಕ್ಷಣ

ಸಿನಿಮಾ ಚಿತ್ರಗಳ ಮುಖಾಂತರ ಬಾಲಕರಿಗೆ ಶಿಕ್ಷಣ ಕೊಡುವ ಬಗ್ಗೆ ಭಾರತ ಸರ್ಕಾರದ ಫಿಲಂ ಶಾಖೆಯವರು ಒಂದು ಯೋಜನೆಯನ್ನು ತಯಾರಿಸಿರುತ್ತಾರೆ. [illegible] ವಯಸ್ಸಿನ [illegible] ವಿದ್ಯಾರ್ಥಿಗಳವರೆಗೆ ಚಿತ್ರವನ್ನು ತೋರಿಸಲಾಗುವುದೆಂದೂ ವಿದ್ಯಾರ್ಥಿಗಳು ಅದನ್ನು ನೋಡಿದ ನಂತರ ತಾವು ಕಂಡ ಚಿತ್ರದ ಬಗ್ಗೆ ಸೂಕ್ಷ್ಮವಾದ ಲೇಖನ ಬರೆಯುವಂತೆ ಕೇಳಲಾಗುವುದೆಂದೂ, ಈ ಸ್ಪರ್ಧೆಯ ಉತ್ತಮ ಲೇಖನಕ್ಕೆ ತಕ್ಕ ಬಹುಮಾನವನ್ನು ಕೊಡಲಾಗುವುದೆಂದೂ ಹೇಳಲಾಗಿದೆ.

## ಪ್ರೌಢಶಾಲೆ ಕಟ್ಟಡಕ್ಕಾಗಿ ಸರ್ಕಾರದಲ್ಲಿ ಮನವಿ

ಗುಂಡ್ಲುಪೇಟೆಗೆ ಒಂದು ಪ್ರೌಢಶಾಲೆಯು ಮಂಜೂರಾಗಿ ಮೂರು ವರ್ಷಗಳಾಗಿದ್ದರೂ, ಕಟ್ಟಡವು ಇನ್ನೂ ಆಗದೆ ಇರುವುದು ವಿದ್ಯಾ ವ್ಯಾಸಂಗಕ್ಕೆ ತುಂಬಾ ತೊಂದರೆಯಾಗಿರುತ್ತದೆಂದು ಹೇಳಲಾಗಿದೆ. ಈ ತಾಲ್ಲೂಕಿನ ದೊಡ್ಡ ಹುಂಡಿಯ ಸಾಹುಕಾರ್ ಶ್ರೀ ಭೋಗಪ್ಪನವರು [illegible] ಸಾವಿರ ರೂ.ಗಳನ್ನು ಕಟ್ಟಡದ ನಿಧಿಗಾಗಿ ಹಿಂದೆಯೇ ಕೊಟ್ಟಿದ್ದುದಲ್ಲದೆ, ಚಂದಾ ರೂಪದಲ್ಲಿ [illegible] ಸಾವಿರ ರೂ.ಗಳನ್ನು ಕೊಟ್ಟದ್ದರು. ಕಟ್ಟಡವನ್ನು ಕಟ್ಟಲು ಸಕಲ ಏರ್ಪಾಡು ಮಾಡಿಕೊಂಡ ಮೇಲೆ, ಭವನದ ನಕ್ಷೆ ಬದಲಾಯಿಸಬೇಕೆಂಬ ಕಾರಣದ ಮೇಲೆ ಕೆಲಸ ನಿಲ್ಲುವಂತೆ ಆಜ್ಞೆಯಾಯಿತೆಂದೂ, ಈ ಬಗ್ಗೆ ಕಂಟ್ರಾಕ್ಟರು ಸರಕಾರಕ್ಕೆ ನೋಟೀಸು ಕೊಟ್ಟಿರುವರೆಂದೂ ಹೇಳಲಾಗಿದೆ. ಸರಕಾರದ ರು ಜಾಗ್ರತೆ ಕಟ್ಟಡವಾಗುವಂತೆ ಏರ್ಪಾಡು ಮಾಡಿಕೊಡಬೇಕೆಂದು ಪ್ರಾರ್ಥಿಸಲಾಗಿದೆ.

# ೩೭ ವರ್ಷದ ಮದುವೆಯ ಗುಟ್ಟು ರಟ್ಟಾಯಿತು

ಇಂಗ್ಲೆಂಡಿನ ಆರ್ಥರ್ ಮರ್ಫಿ ಎಂಬ ಕವಿಯು ಒಂದು ವಿಲ್ಲನ್ನು ಬರೆದಿಟ್ಟು ಅದನ್ನು ೧೯೫೦ನೇ ಇಸವಿಯ ಮೊದಲನೆ ದಿವಸ ಒಡೆದು ನೋಡಬೇಕೆಂದು ಕೇಳಿ ಒಂದು ಪೆಟ್ಟಿಗೆಯಲ್ಲಿ ಬಚ್ಚಿಟ್ಟಿದ್ದನು. ಕೆಲವು ದಿವಸಗಳ ಹಿಂದೆ ಅದನ್ನು ಒಡೆದು ನೋಡಲಾಗಿ ಅದರಲ್ಲಿದ್ದ ಓರ್ವ ಸ್ತ್ರೀಯೊಡನೆ ಗುಪ್ತಪ್ರಣಯ ವ್ಯವಹಾರ ನಡೆಸುತ್ತಿದ್ದ ಪತ್ರಗಳು ದೊರೆತು, ಅವರಿಗೂ ೩೭ ವರ್ಷ ಕಾಲ ವಿವಾಹ ಸಂಬಂಧ ನಡೆದ ಅಂಶವು ಬಯಲಿಗೆ ಬಂತೆಂದು ಗೊತ್ತಾಗಿದೆ.

ರಾಜಧಾನಿಯ ಪಬ್ಲಿಕ್ ಸ್ಕೀಮ್ ಸಮಿತಿಯ ಅವಧಿಯನ್ನು ಇದೇ ವರ್ಷ ಅಂತ್ಯದವರೆಗೆ ಹೆಚ್ಚಿಸಲಾಗಿದೆ.

## ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್, ಮೈಸೂರು

ಕ್ರಿಸ್‌ಮಸ್ ರಜಕ್ಕಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವು ಈ ನೂತನ [illegible]ನೇ ತಾರೀಖಿನಿಂದ ನಡೆಯುತ್ತಿದೆ. ಪೋಷಕ ಮಹಾಶಯರು ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಬೇಕಾಗಿ ವಿನಂತಿ. ಶಿಶುವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಹನೀಯರು ಕಾಲವಿಳಂಬ ಮಾಡದೆ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕ

## ಶ್ರೀ ವೈದ್ಯೇಶ್ವರಸ್ವಾಮಿ ಕೋ-ಆಪರೇಟಿವ್ ಬ್ಯಾಂಕ್, ಪೆರಿಯಾಪಟ್ಣ

## ಪ್ರಕಟನೆ

ಮೇಲ್ಕಂಡ ಬ್ಯಾಂಕಿಗೆ ಮೇಕೆವಾರಂಗಿರತಕ್ಕ ಇವರಡಿ ನಮೂದಿಸಿರುವ ಪ್ರತಿವಾದಿಗಳ ಸರಿಯಾದ ವಿಳಾಸ ತಿಳಿಯದ ಪ್ರಯುಕ್ತ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಈ ಬ್ಯಾಂಕಿಗೆ ಬರಬೇಕಾದ ಬಾಕಿಗಾಗಿ ಮೈಸೂರು ಡಿವಿಜನ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಸಾಹೇಬರವರ ಕೋರ್ಟಿನಲ್ಲಿ ದಾಖಲ್ಮಾಡಿರುವ ಕೇಸಿನ ದಾವಾಗಳು ಇದೇ ಮಾಹೆ [illegible]ನೇ ಮಧ್ಯಾಹ್ನ ೧೨ ಘಂಟೆಗೆ ಹಾಸನ ರಿಜಿಸ್ಟ್ರಾರವರ ಆಫೀಸಿನಲ್ಲಿ ಹಿಯರಿಂಗ್ ಇಡಿಸಲ್ಪಟ್ಟಿರುತ್ತಾಗಿ ಈ ಕೇಸುಗಳಿಗೆ ಸಂಬಂಧಿಸಿದ ಪಾರ್ಟಿಗಳು ಇದನ್ನೇ ಸಮನ್ಸ್ ಎಂದು ಭಾವಿಸಿ ಹಿಯರಿಂಗ್ ತಾರೀಖಿಗೆ ದಾವೆಗೆ ಸಂಬಂಧಿಸಿದ ದಾಖಲಾತಿಗಳೊಡನೆ ಹಾಜರಾಗುವುದರ ಮೂಲಕ ತಮ್ಮಗಳ ಜವಾಬನ್ನು ಖಂಡಿತ ಮಾಡಿಕೊಳ್ಳತಕ್ಕದ್ದಿರುತ್ತೆ. ತಪ್ಪಿದಲ್ಲಿ ಏಕಪಕ್ಷ (Ex-parte) ತೀರ್ಮಾನದಿಂದ ಡಿಕ್ರಿ ಕೊಡಲ್ಪಡುತ್ತೆ. ನಂತರ ಬರಬಹುದಾದ ತಕರಾರುಗಳನ್ನು ಅಂಗೀಕರಿಸಲಾಗುವುದಿಲ್ಲವೆಂತ ಇದರಿಂದ ತಿಳಿಸಿರುತ್ತೆ.

— : ವಾದಿ : —

ಶ್ರೀ ವೈದ್ಯೇಶ್ವರಸ್ವಾಮಿ ಕೋ-ಆಪರೇಟಿವ್ ಬ್ಯಾಂಕ್, ಪೆರಿಯಾಪಟ್ಣ

— : ಪ್ರತಿವಾದಿಗಳು : —

ಕೇಸು ನಂಬರು [illegible] ೧) ಮೀರ್ ಹೈದರಾಲಿ, ೨) [illegible]
ಕೇಸು ನಂಬರು [illegible] ೧) ಸಂಜಾಬೋಯಿ [ಸಾವಿ] [illegible] ೨) ಸಿದ್ದಯ್ಯ.
ಕೇಸು ನಂಬರು [illegible] ೧) ಟಿ. ಎಸ್. ವೆಂಕಟೇಶಯ್ಯ, [illegible] ಟ್ರೈನ್ ಇನ್ಸ್‌ಪೆಕ್ಟರ್, [illegible] ೨) ಕೆ. ಕೆ. [illegible]ಗೌಡರು
ಕೇಸು ನಂಬರು [illegible] ೧) ಎಸ್. ಎಚ್. [illegible] ಗವರ್ನಮೆಂಟ್, ಪೋಲೀಸ್ ಇನ್ಸ್‌ಪೆಕ್ಟರವರು, ೨) [illegible]
ಕೇಸು ನಂಬರು [illegible] ೧) ಎಸ್. [illegible] ೨) ಪೀರ್ [illegible]

ಪಿ. ಎಸ್. ನಾರಾಯಣರಾವ್.
[illegible]

ರಸಿಕರಿಗೆ ಅಚ್ಚುಮೆಚ್ಚಾದುವು

ಮೈಸೂರು ರೇಷ್ಮೆ ವಸ್ತ್ರಗಳು

ಮಿತವ್ಯಯ-ಬಾಳಿಕೆ, ಸುರುಚಿ.

ಮೈಸೂರು ರೇಷ್ಮೆ [illegible]

ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನ ಸೆಳೆವ ನಮೂನೆಗಳು
ಇಂದಿನ ಅಂದದ ರಂಗುಗಳು.

ಸರ್ಕಾರಿ ರೇಷ್ಮೆ ನೇಯಿಗೆ ಕಾರ್ಖಾನೆ,
ಮೈಸೂರು.

Edited, Printed and published by A. R. Nagarajan at Sadhvi Press, D Subbiah Road Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮ | ಗುರುವಾರ ೧೯-೧-೫೦ | ಸಂಚಿಕೆ ೧೪೪

# ಶ್ರೀಮನ್ಮಹಾರಾಜರಿಗೆ ೨೬ ಲಕ್ಷ ರೂ. ರಾಜಧನ

## ರಿಪಬ್ಲಿಕ್ ದಿನಾಚರಣೆಯ ಕಾರ್ಯಕ್ರಮ

### ಪೌರಸಭೆಯ ವ್ಯವಸ್ಥೆ

ಮೈಸೂರು ೧೯

ಮೈಸೂರು ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆ ಶ್ರೀ ಜಿ ಎಂ ನಾಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ರಿಪಬ್ಲಿಕ್ ದಿನಾಚರಣೆಯ ಸಂಬಂಧವಾಗಿ ಉಪಸಮಿತಿಯವರು ಮಾಡಿದ್ದ ಸಲಹೆಗಳನ್ನು ಪರಿಶೀಲಿಸಿ ನಿರ್ಣಯ ಮಾಡಿತು.

ಪೌರಸಭೆಯ ಮಾಜೀ ಸದಸ್ಯರಾಗಿದ್ದ ಶ್ರೀ ಬಿ ಎಲ್ ಮರಿದುಂಡಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು.

ರಿಪಬ್ಲಿಕ್ ದಿನಾಚರಣೆಯನ್ನು ಈ ತಿಂಗಳು ೨೬ ಮತ್ತು ೨೭ನೇ ತಾ॥ ಗಳಲ್ಲಿ ವೈಭವದಿಂದ ಪುರನಿವಾಸಿಗಳೆಲ್ಲರೂ ನೆರವೇರಿಸಲು ಸದಸ್ಯರು ಸೂಕ್ತ ಸಲಹೆಗಳಿತ್ತರು. ೨೬ನೇ ತಾ॥ ಬೆಳಗ್ಗೆ ಪ್ರೈಮರಿ ಮತ್ತು ನರ್ಸರೀ ಶಾಲೆಗಳಲ್ಲಿಯೂ, ಶಾರೀರಿಕ ಮತ್ತು ಇತರ ಸಂಸ್ಥೆಗಳಲ್ಲಿಯೂ ಸಭೆಗಳನ್ನು ನಡೆಸಿ ರಾಷ್ಟ್ರ ಧ್ವಜಾರೋಹಣ ಮಾಡಿ ಆ ದಿನದ ಮಹತ್ವವನ್ನು ವಿವರಿಸಿ ವ್ಯಾಯಾಮ ಆಟಪಾಟಗಳನ್ನು ನಡೆಸಿ ಅವರಿಗೆ ಸಿಹಿ ತಿಂಡಿಗಳನ್ನು ಹಂಚುವುದು. ಸುಧಾರಣಾ ಸಂಸ್ಥೆಯಲ್ಲಿ ಮಕ್ಕಳಿಗೆ ಹಾಲನ್ನು ಕೊಡುವುದು ಕೃಷ್ಣರಾಜೇಂದ್ರ ವಿಕ್ಟೋರಿಯಾ ಆಸ್ಪತ್ರೆ, ಭಿಕ್ಷುಕರ ನಿವಾಸ ಮತ್ತು ಅಂಗಹೀನರ ಪಾಠಶಾಲೆಗಳಲ್ಲಿ ವಿಶೇಷ ಭೋಜನವನ್ನು ಏರ್ಪಡಿಸುವುದು.

೨೭ನೇ ತಾ॥ ಸ್ಕೌಟುಗಳ ಪ್ರದರ್ಶನ ವ್ಯಾಯಾಮಗಳ ಸ್ಪರ್ಧೆ, ಸಂಜೆ ಟೌನ್ ಹಾಲ್ ಮೈದಾನದಲ್ಲಿ ಸಭೆ ಮತ್ತು ಕಾಲೇಜು, ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳ ಕ್ರೀಡಾ ಸ್ಪರ್ಧೆಗಳು—ಇವೇ ಮುಂತಾದ ಕಾರ್ಯಕ್ರಮಗಳನ್ನು ಗೊತ್ತು ಮಾಡಲಾಯಿತು. ಇವುಗಳಿಗಾಗಿ ಖರ್ಚು ೪೫೦೦ ರೂ ಮಂಜೂರು ಮಾಡಲಾಯಿತು.

ಸಮಾರಂಭದ ಚಲನ ಚಿತ್ರವನ್ನು ತೆಗೆದುಕೊಳ್ಳಲೂ ಸಹ ಏರ್ಪಾಡು ಮಾಡಲಾಯಿತು.

### ರಿಪಬ್ಲಿಕ್ ದಿನ ಹೆಂಡದ ಅಂಗಡಿ ಬಂದ್

ರಾಜಧಾನಿಯ ಹೆಂಡದಂಗಡಿಗಳನ್ನು ಈ ತಿಂಗಳು ೨೬ ನೇ ತಾರೀಖು ರಿಪಬ್ಲಿಕ್ ಸಮಾರಂಭದ ಸಲುವಾಗಿ ಮುಚ್ಚಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ರಾಜಧಾನಿಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಆಸ್ಪತ್ರೆ

ವಿಶ್ವಸಂಸ್ಥೆಯ ಆರೋಗ್ಯ ಶಾಖೆಯವರು ಸ್ಥಾಪಿಸುವ ಕ್ಷಯರೋಗ ನಿವಾರಣಾ ಕೇಂದ್ರವನ್ನು ಮೈಸೂರು ನಗರದಲ್ಲಿ ತೆರೆಯುವ ಬಗ್ಗೆ ಭಾರತ ಮತ್ತು ಮೈಸೂರು ಸರಕಾರದವರು ಪರ್ಯಾಲೋಚಿಸುತ್ತಿರುವುದಾಗಿ ಹೇಳಲಾಗಿದೆ. ಇಂತಹ ಇನ್ನೆರಡು ಕೇಂದ್ರಗಳು ಪಾಟ್ನಾ ಮತ್ತು ತಿರುವನಂತಪುರಗಳಲ್ಲಿ ಸ್ಥಾಪಿತವಾಗಿವೆ. ಈ ಯೋಜನೆಯು ಕಾರ್ಯಗತವಾಗಲು ವಿಶ್ವಸಂಸ್ಥೆಯ ಆರೋಗ್ಯ ಸಮಿತಿಯು ೭ ಲಕ್ಷ ರೂ. ಬೆಲೆಯ ತಕ್ಕ ಸಾಧನಗಳನ್ನು ಒದಗಿಸಿ, ದಕ್ಷಿಣ ಕೇಂದ್ರದಲ್ಲಿರುವ ಪ್ರವೀಣರಿಗೆ ತರಬೇತಿ ನೀಡುವರೆಂದು ಹೇಳಲಾಗಿದೆ.

## ಬಾಗಮನೆ ದೇವೇಗೌಡರ ಉಪವಾಸ

### ದುರ್ಬಲ ಮತ್ತು ದಕ್ಷತೆಯಿಲ್ಲದ ಆಡಳಿತದ ಪ್ರತಿಭಟನೆಗಾಗಿ

ಬೆಂಗಳೂರು ೧೯

ಸಂಸ್ಥಾನದ ದುರ್ಬಲ ಮತ್ತು ದಕ್ಷತೆಯಿಲ್ಲದ ಆಡಳಿತ ಮತ್ತು ಅಸಮರ್ಥವಾದ ಮೈಸೂರು ಕಾಂಗ್ರೆಸ್ಸಿನ ನೀತಿಯನ್ನು ಪ್ರತಿಭಟಿಸಲು ಚಿಕ್ಕಮಗಳೂರು ಜಿಲ್ಲೆಯ ಕಾಫಿ ಪ್ಲಾಂಟರಾದ ಶ್ರೀ ಬಾಗಮನೆ ದೇವೇಗೌಡರ ಕ್ರೆಸೆಂಟ್ ಭವನದಲ್ಲಿ ನಿನ್ನೆ ಬೆಳಗ್ಗೆ ೭-೧೫ ರಿಂದ ಉಪವಾಸ ವ್ರತವನ್ನು ಕೈಗೊಂಡಿರುತ್ತಾರೆ. ಈ ವಿಷಯವನ್ನು ಅವರು ಪತ್ರ ಮುಖೇನ ಪಂಡಿತ ನೆಹರೂ, ಡಾ॥ ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್ ಮುಂತಾದವರಿಗೆ ತಿಳಿಸಿ ಇಲ್ಲಿನ ನ್ಯೂನತೆಗಳನ್ನು ಕೂಡಲೇ ಸರಿಪಡಿಸಬೇಕೆಂದು ಕೋರಿರುತ್ತಾರೆ. ಶ್ರೀ ... ರನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ ಸಿದ್ದಲಿಂಗಯ್ಯ ಮತ್ತು ಕೆ ಹನುಮಂತಯ್ಯ ಇವರುಗಳು ಕಂಡು ಉಪವಾಸವನ್ನು ವಜಾ ಮಾಡಬೇಕೆಂದು ಕೋರಿದರು. ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಗೊಳ್ಳುವವರೆಗೆ ತಾವು ಉಪವಾಸ ಮಾಡುವುದಾಗಿ ಅವರು ತಿಳಿಸಿರುತ್ತಾರೆ.

### ಕೆ. ಪಿ. ಸಿ. ಸಿ. ಕಾರ್ಯದರ್ಶಿಗಳ ಪ್ರವಾಸ

ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ವೆಂಕಟೇಶ ಮಾಗಡಿಯವರು ಇದೇ ೨೩ ರಿಂದ ೩೧ ರವರೆಗೆ ಸಂಸ್ಥಾನದಲ್ಲಿ ಪ್ರವಾಸ ಮಾಡುವರು. ೨೫ ನೇ ತಾರೀಖು ರಾಜಧಾನಿಯಲ್ಲಿರುವರು. ಕಾಂಗ್ರೆಸ್ ಸದಸ್ಯತ್ವದ ಪಟ್ಟಿ ತಯಾರಿಕೆಯ ಸಂಬಂಧವಾಗಿ ಅವರು ಪ್ರವಾಸ ಕೈಗೊಳ್ಳುವವರಾಗಿದ್ದಾರೆ.

## ನಿಜಾಮರು ರಾಜ ಪ್ರಮುಖ ರಾಗಕೂಡದು

ನಿಜಾಮರನ್ನು ಹೈದರಾಬಾದಿನ ರಾಜಪ್ರಮುಖರನ್ನಾಗಿ ಮಾಡಕೂಡದೆಂದು ಅಲ್ಲಿನ ಪ್ರಮುಖ ಕಾಂಗ್ರೆಸ್ ಮುಖಂಡರಾದ ಪಂಡಿತ ನರೇಂದ್ರಜಿಯವರು ಪ್ರಧಾನಿ ಮತ್ತು ಉಪ ಪ್ರಧಾನಿಗಳಿಗೆ ತಂತಿ ಕಳುಹಿಸಿರುತ್ತಾರೆ. ಈ ರೀತಿಯ ನೇಮಕವು ಪ್ರಜೆಗಳ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ... ಆಗಿದೆಯೆಂದು ... ದ್ದಾರೆ.

## ರಾಜಧನ ೨೬ ಲಕ್ಷ

ಶ್ರೀಮನ್ಮಹಾರಾಜರವರ ರಾಜಧನವನ್ನು ೨೬ ಲಕ್ಷ ರೂ ಗಳಿಗೆ ಗೊತ್ತು ಮಾಡಲಾಗುವುದೆಂದು ತಿಳಿದುಬಂದಿದೆ. ಮೈಸೂರು ಸರ್ಕಾರದೊಡನೆ ಸಮಾಲೋಚಿಸಿ ಭಾರತ ಸರ್ಕಾರದವರು ಇದನ್ನು ನಿರ್ಧರಿಸಿರುವರೆಂದು ತಿಳಿದುಬಂದಿದೆ.

## ಮಂಡ್ಯದ ಕಾರ್ಖಾನೆ ಕೆಲಸಗಾರರ ಬಗ್ಗೆ ಒಪ್ಪಂದ

ದೀರ್ಘಕಾಲದ ಸಂಧಾನದ ಪರಿಣಾಮವಾಗಿ ಮಂಡ್ಯದ ಸಕ್ಕರೆ ಕಂಪೆನಿ ಕೆಲಸಗಾರರ ಸಮಸ್ಯೆಯು ಸಮರ್ಪಕವಾಗಿ ಇತ್ಯರ್ಥವಾಗಿದೆಯೆಂದು ಸರ್ಕಾರದ ಪ್ರಕಟಣೆಯು ತಿಳಿಸುತ್ತದೆ. ಇದುವರೆಗೆ ತೀರ್ಮಾನವಾಗದೆ ಇರುವ ಎಲ್ಲಾ ನೋಟೀಸುಗಳನ್ನೂ ವಾಪಸು ತೆಗೆದುಕೊಳ್ಳುವುದಲ್ಲದೆ ಅವುಗಳ ತೀರ್ಮಾನವನ್ನು ಸಕ್ಕರೆ ಕಂಪೆನಿಯ ಅಧ್ಯಕ್ಷರು, ಕಾರ್ಮಿಕ ಸಂಘದ ಅಧ್ಯಕ್ಷರು ಮತ್ತು ಮಂಡ್ಯದ ರೈತರ ಸಂಘದ ಅಧ್ಯಕ್ಷರನ್ನೊಳಗೊಂಡ ಒಂದು ಸಮಿತಿಗೆ ಒಪ್ಪಿಸಲು ಸಮ್ಮತಿಸಿರುವರು. ಈ ಮಧ್ಯೆ ವಜಾ ಆಗಿರುವ ಕೆಲಸಗಾರರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಸೂಕ್ತ ಒಪ್ಪಂದಗಳಾಗಿವೆ.

## ಮಂಡ್ಯದ ಕಾರ್ಮಿಕ ನಾಯಕರ ಬಿಡುಗಡೆ

ಸಕ್ಕರೆ ಕಂಪೆನಿ ಕೆಲಸಗಾರರ ನಾಯಕರಾದ ಶ್ರೀಗಳು ಎ ರಾಮಣ್ಣ, ಮಾಸ್ತಿಗೌಡ ಮುಂತಾದವರನ್ನು ನಿನ್ನೆ ದಿನ ಬಂಧನದಿಂದ ಬಿಡುಗಡೆ ಮಾಡಲಾಯಿತು. ಅವರ ಮೇಲಿದ್ದ ಮೊಕದ್ದಮೆಗಳನ್ನೂ ಹಿಂದಕ್ಕೆ ತೆಗೆದುಕೊಳ್ಳಲಾಯಿತು.

## ಪೌರಸಭಾ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಮೈಸೂರು ೧೯

ಈದಿನ ಸಂಜೆ ಮೈಸೂರು ಪೌರಸಭೆಯ ವಿಶೇಷ ಅಧಿವೇಶನವು ಸೇರಿ ಶ್ರೀ ಎಸ್ ಲಿಂಗಣ್ಣನವರನ್ನು ಅಧ್ಯಕ್ಷರಾಗಿಯೂ, ಶ್ರೀ ಎ ಕೃಷ್ಣಮೂರ್ತಿರಾಯರನ್ನು ಉಪಾಧ್ಯಕ್ಷರನ್ನಾಗಿಯೂ ಬಹುಮತದಿಂದ ಚುನಾಯಿಸಲಾಯಿತು. ಶ್ರೀ ಲಿಂಗಣ್ಣನವರಿಗೆ ೧೭ ಓಟುಗಳೂ ಅವರ ಪ್ರತಿಪಕ್ಷಿ ... ಶ್ರೀ ಎ ಕೆ ... ಯ್ಯನವರಿಗೆ ೧೧ ಓಟುಗಳೂ ಬಂದುವು.

## ಮಂತ್ರಿಮಂಡಲದ ಪಟ್ಟಿ ಇಂದು ಸಿದ್ಧವಾಗಬಹುದು

ಬೆಂಗಳೂರು ೧೯

ಈ ಸಂಜೆಯೊಳಗೆ ಹೊಸ ಮಂತ್ರಿಮಂಡಲದ ಪಟ್ಟಿಯನ್ನು ತಯಾರಿಸಲು ಸಾಧ್ಯವಾಗಬಹುದೆಂದೂ ಹಾಗೆ ಆದರೆ ಅದನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲು ನಾಳೆ ಬೆಳಗ್ಗೆ ಮೈಸೂರಿಗೆ ತೆರಳುವುದಾಗಿಯೂ ಶ್ರೀ ಕೆ. ಸಿ ರೆಡ್ಡಿಯವರು ಸೂಚಿಸಿರುವರು.

## ಭಾರತದ ಸಾಮಗ್ರಿಗಳ ರವಾನೆಗೆ ಪಾಕಿಸ್ತಾನದ ಅಡ್ಡಿ

ಈದಿನ ಮಧ್ಯ ರಾತ್ರಿಯಿಂದ ಪಾಕಿಸ್ತಾನ ಸರಕಾರದವರು ಪೂರ್ವ ಬಂಗಾಳಾ ರೈಲ್ವೆ ಮೂಲಕ ರವಾನೆಯಾಗುವ ಭಾರತದ ಸಾಮಗ್ರಿಗಳ ಮೇಲೆ ಪ್ರತಿಬಂಧಕವನ್ನು ಹಾಕಿರುತ್ತಾರೆ. ಭಾರತಕ್ಕೆ ಬರಬೇಕಾಗಿದ್ದ ಸಾವಿರ ವ್ಯಾಗನ್ನುಗಳನ್ನು ತಡೆದು ನಿಲ್ಲಿಸಲಾಗಿದೆ.

## ದಕ್ಷಿಣ ಆಫ್ರಿಕದ ಭಾರತೀಯರ ಸತ್ಯಾಗ್ರಹವೇ?

ದಕ್ಷಿಣ ಆಫ್ರಿಕದಲ್ಲಿ ವಾಸವಾಗಿರುವ ಎಲ್ಲ ಜನರೂ ತಮ್ಮ ಜನಾಂಗವನ್ನು ಸೂಚಿಸುವ ಬಿಲ್ಲೆಗಳನ್ನು ಧರಿಸಬೇಕೆಂದು ನಿರ್ಬಂಧಪಡಿಸಿ ಕಾನೂನನ್ನು ಜಾರಿಗೆ ತರುವ ವಿಷಯದಲ್ಲಿ ಅಲ್ಲಿನ ಭಾರತೀಯರು ಅದಕ್ಕೆ ಪ್ರತಿಭಟಿಸಿ ಸತ್ಯಾಗ್ರಹವನ್ನು ಹೂಡಬಹುದೆಂದು ನಿರೀಕ್ಷಿಸಲಾಗಿದೆ.

## ಪಾಕಿಸ್ತಾನದ ದುರಾಶೆ

ಭಾರತದ ರಿಸರ್ವ್ ಬ್ಯಾಂಕಿನ ಷೇರುಗಳು ಮತ್ತು ಸ್ಟರ್ಲಿಂಗ್ ನಿಧಿಯ ಬಗ್ಗೆ ಪಾಕಿಸ್ತಾನದ ಭಾಗವು ಇನ್ನೂ ಬರಬೇಕಾಗಿದೆಯೆಂದು ಅಲ್ಲಿನ ಪ್ರಧಾನಿಯವರು ಆಡಿರುವ ಮಾತುಗಳು ಎಲ್ಲರಿಗೂ ಆಶ್ಚರ್ಯವುಂಟುಮಾಡಿವೆ. ಪಾಕಿಸ್ತಾನಕ್ಕೆ ಕೊಡಬೇಕಾದ ಹಣವೆಲ್ಲವೂ ಸಂದಾಯವಾಗಿದೆಯೆಂದು ಹೇಳಲಾಗಿದೆ.

## ಆಂಧ್ರ ಪ್ರಾಂತ ರಚನೆಗೆ ಸಾವಕಾಶ

ಆರ್ಥಿಕ ಮತ್ತು ಇತರ ಕಾನೂನಿನ ತೊಡಕುಗಳಿಂದ ಆಂಧ್ರ ಪ್ರಾಂತ ರಚನೆಯು ಈ ತಿಂಗಳು ೨೬ಕ್ಕೆ ಆಗಲು ಸಾಧ್ಯವಿಲ್ಲವೆಂದು ಖಚಿತವಾಗಿ ತಿಳಿದುಬಂದಿದೆ. ಅದು ಇನ್ನೂ ಕೆಲವು ಕಾಲ ತಳ್ಳಬಹುದೆಂದೂ ಹೇಳಲಾಗಿದೆ. ಇದಕ್ಕೆ ಆಂಧ್ರದ ನಾಯಕರ ಒಪ್ಪಿಗೆ ಇರುವುದೆಂದೂ ವರದಿಯಾಗಿದೆ.

## ಮದರಾಸ್ ನ್ಯಾಯಾಧೀಶರ ಸಂಬಳದಲ್ಲಿ ಖೋತಾ

ವಿ.ಗೋವಿಂದ ಮೆನನ್ ಮತ್ತು ವ್ಯಾಶ್‌ರವರ ವಿನಾ ಮದರಾಸ್ ಹೈಕೋರ್ಟಿನ ಇತರ ನ್ಯಾಯಾಧೀಶರುಗಳು ತಮ್ಮ ಸಂಬಳವನ್ನು ಕಡಿಮೆ ಮಾಡಿಕೊಳ್ಳಲು ತಾವಾಗಿ ಒಪ್ಪಿರುವರು. ಪ್ರಧಾನ ನ್ಯಾಯಾಧೀಶರು ೭೫೦ ರೂ ಇನ್ನೂ ಇತರರು ೫೦೦ ರೂ. ಗಳನ್ನೂ ಕಡಿಮೆ ಸ್ವೀಕರಿಸುವರು.

## ಜನತಾ ರೈಲುಗಳು

ಮಧ್ಯಮ ತರಗತಿಯ ಪ್ರಯಾಣಿಕರಿಗಾಗಿ ಏಪ್ರಿಲ್ ೧ ನೇ ತಾ॥ ನಿಂದ ಬೊಂಬಾಯಿ—ಪೂನಾ ಮತ್ತು ಬೊಂಬಾಯಿ—ಅಹಮದಾಬಾದುಗಳ ಮಧ್ಯೆ "ಜನತಾ ಎಕ್ಸ್‌ಪ್ರೆಸ್" ಎಂಬ ರೈಲುಗಳನ್ನು ಓಡಿಸಲಾಗುವುದೆಂದು ... ಉಪಮಂತ್ರಿ ತಿಳಿಸಿದ್ದಾರೆ.

## ಜರ್ಮನಿಗೆ ಭಾರತದ ಪ್ರೊಫೆಸರುಗಳು

ಜರ್ಮನಿಯ ಹಲವು ವಿಶ್ವ ವಿದ್ಯಾನಿಲಯಗಳು ತಮ್ಮಲ್ಲಿ ಹಿಂದಿ ಶಿಕ್ಷಣವನ್ನು ಜಾರಿಗೆ ತರಲು ಅಪೇಕ್ಷಿಸಿ ಭಾರತ ಸರ್ಕಾರಕ್ಕೆ ಪತ್ರ ಬರೆದು ಇಲ್ಲಿನ ಒಬ್ಬ ಹಿಂದಿ ಪ್ರೊಫೆಸರನ್ನು ಕಳುಹಬೇಕೆಂದು ಕೋರಿರುವುದಾಗಿ ವರ್ತಮಾನವಿದೆ. ಅದಕ್ಕೆ ಪ್ರತಿಯಾಗಿ ಭಾರತದಲ್ಲಿ ಜರ್ಮನ್ ಭಾಷೆಯ ಶಿಕ್ಷಣ ಕೊಡಲು ಅಲ್ಲಿಂದ ಪ್ರೊಫೆಸರನ್ನು ಕಳುಹುವುದಾಗಿಯೂ [illegible] ತಿಳಿಸಿದೆ.

## ಮಿಶ್ರ ಮಂತ್ರಿಮಂಡಳಿ ಬೇಕೆಂದು ಚರ್ಚಿಲ್ಲರು

ಬ್ರಿಟನ್ನಿನ ಚುನಾವಣೆಯಲ್ಲಿ [illegible] ಬಂದು ಜಯ ಶೀಲರಾದರೆ, ತಾವು ಈಗ ಸರಕಾರದಲ್ಲಿರುವ ಹಲವು ಜನರನ್ನು ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳುವುದಾಗಿ ಚರ್ಚಿಲ್ಲರು ತಿಳಿಸಿರುತ್ತಾರೆ. ಇದನ್ನು ಕೇಳಿ ಕನ್ಸರ್ವೇಟಿವ್ ಸಂಗಡದ ಇತರ ಸದಸ್ಯರಿಗೆ ಆಶ್ಚರ್ಯವಾಗಿದೆ.

## ಇಂಜನ್ನಿಗೂ ರೈಲಿಗೂ ಢಿಕ್ಕಿ

ಮೊನ್ನೆ ಸಂಜೆ ಕಾನ್ಪುರದ ರೈಲ್ವೆ ಸ್ಟೇಷನ್ನಿನಲ್ಲಿ ಇಂಜನ್ನೊಂದಕ್ಕೂ ಟ್ರೈನಿಗೂ ಢಿಕ್ಕಿ ಹೊಡೆದು ಗಾರ್ಡ್ ಸಮೇತ ೧೧ ಜನ ಗಾಯಗೊಂಡಿರುವರು.

### ಸ್ವೀಕಾರ

ರಾಜಧಾನಿಯ ಪಾಪ್ ಅಸಿಸ್ಟೆಂಟ್ಸ್ ಸಂಘದವರು ನಮಗೆ ಕಳುಹಿಸಿರುವ ಸಂಕ್ರಾಂತಿ ಎಳ್ಳನ್ನೂ, ಶುಭಾಶಯಗಳನ್ನೂ ಆದರದಿಂದ ಸ್ವೀಕರಿಸಿದ್ದೇವೆ.

## ಧವಳಗಿರಿ ಶಿಖರದ ಆರೋಹಣ ಪ್ರಯತ್ನ

ಹಿಮಾಲಯ ಪರ್ವತಗಳಲ್ಲಿರುವ ಧವಳಗಿರಿ ಶಿಖರವನ್ನು ಏರಲು ಫ್ರಾನ್ಸಿನ ಆರು ಮಂದಿ ಪರ್ವತಾರೋಹಿಗಳು ಒರುವ ಮಾರ್ಚ್ ತಿಂಗಳಿನಲ್ಲಿ ನೇಪಾಳಕ್ಕೆ ಆಗಮಿಸುವರೆಂದು ವರದಿಯಾಗಿದೆ.

## ಸ್ಕಾಟ್ಲೆಂಡಿನ ಸ್ವಾತಂತ್ರ್ಯಕ್ಕಾಗಿ ೧೦ ಲಕ್ಷ ಜನರ ರುಜು

ಬ್ರಿಟನ್ನಿನ ಉತ್ತರ ಭಾಗದ ನಾಡಾದ ಸ್ಕಾಟ್ಲೆಂಡಿನ [illegible] ಏಪ್ರಿಲ ತಿಂಗಳಲ್ಲಿ ಸ್ಥಾಪಿಸಲಾಗುವುದು. ಈ [illegible] ೧೦ ಲಕ್ಷ ಜನರ ರುಜು [illegible] ದೊಂಬಲವನ್ನೂ ಕೋರಲಾಗುವುದು.

## ಪ್ರಪಂಚದ ಆಹಾರಬಿಕ್ಕಟ್ಟಿನ ಪರಿಹಾರ

ಪ್ರಪಂಚದ ಆಹಾರದ ಮತ್ತು ಹಾಲಿನ ಕೊರತೆಯು ಮುಗಿಯಿತೆಂದು ಬ್ರಿಟನ್ನಿನ ಆಹಾರದ ಮಂತ್ರಿ ಜಾನ್ ಸ್ಟ್ರಾಚೆಯವರು ತಿಳಿಸಿರುತ್ತಾರೆ. ಬ್ರಿಟನ್ನಿನ ಪ್ರಜೆಗಳು ಈಗ ಯುದ್ಧ ಪೂರ್ವದಲ್ಲಿದ್ದ ಆಹಾರದ ಪರಿಸ್ಥಿತಿಯಲ್ಲಿದ್ದಾರೆಂದು ಅವರು ಹೇಳಿರುವರು.

## ಪಾಕಿಸ್ಥಾನಕ್ಕೆ ಭಾರತದ ಪ್ರತಿಭಟನೆ

ಪೂರ್ವ ಪಾಕಿಸ್ಥಾನದ ಗಡಿಪ್ರದೇಶದಲ್ಲಿ ಈಚೆಗೆ ಪಾಕಿಸ್ಥಾನ ಸೈನಿಕರು ತೋರ್ಪಡಿಸುತ್ತಿರುವ ಬೆದರಿಕೆಯ ವರ್ತನೆಯನ್ನು ಖಂಡಿಸಿ ಭಾರತ ಸರ್ಕಾರದವರು ಪಾಕಿಸ್ಥಾನಕ್ಕೆ ಬಲವಾದ ಪ್ರತಿಭಟನೆಯನ್ನು ಕಳುಹಿಸಿರುವುದಾಗಿ ಹೇಳಲಾಗಿದೆ. ಕಳೆದ ೮ನೇ ತಾ|| ನಲ್ಲಿ ಇಬ್ಬರು ಭಾರತೀಯರನ್ನು ಈ ಸೈನಿಕರು ಗುಂಡಿನಿಂದ ಹೊಡೆದು ಕೊಂದರೆಂದು ಹೇಳಲಾಗಿದೆ.

## ಮದ್ರಾಸ್ ನಾನ್ ಗೆಜೆಟೆಡ್ ನೌಕರರಿಗೆ ಗೃಹ ವಸತಿ

ಮದರಾಸ್ ನಗರದಲ್ಲಿರುವ ನಾನ್ ಗೆಜೆಟೆಡ್ ಸರ್ಕಾರಿ ನೌಕರರಿಗೆ ಗೃಹ ವಸತಿ ಸೌಕರ್ಯವನ್ನು ಕಲ್ಪಿಸಲು ೧೦ ಲಕ್ಷದ ಖರ್ಚಿನ ಒಂದು ಯೋಜನೆಯನ್ನು ಸಿದ್ಧಗೊಳಿಸಲಾಗಿದೆಯೆಂದೂ, ಈ ಯೋಜನೆಯನ್ನು ಸರ್ಕಾರದವರು ಇಷ್ಟರಲ್ಲೇ ಕಾರ್ಯಗತಮಾಡುವರೆಂದೂ ವರದಿಯಾಗಿದೆ. ಈ ರೀತಿ ಮನೆಗಳನ್ನು ಕಟ್ಟಲು [illegible] ಗೃಹ [illegible] ಸಂಘಗಳಿಗೆ [illegible] ಸಾಲ ಕೊಡಲು ಆಲೋಚಿಸಿರುವರೆಂದು ಹೇಳಲಾಗಿದೆ.

### ಬೀಡಿ ಕೆಲಸಗಾರರಿಗೂ ರಿಪಬ್ಲಿಕ್ ರಜಾ ಬೇಕು

ಮೈಸೂರು ನ [illegible] ಸಭೆಯ ಕಾರ್ಯಕರ್ತರಾದ ಜ|| ಮಹಮೂದ್ ಷರೀಫ್‌ರವರು ಒಂದು ಹೇಳಿಕೆಯನ್ನಿತ್ತು ನಗರದಲ್ಲಿರುವ ೪೦೦೦ ಜನ ಬೀಡಿ ಕೆಲಸಗಾರರು ಈ ತಿಂಗಳು ೨೬ ಮತ್ತು ೨೭ನೇ ತಾರೀಖು ರಿಪಬ್ಲಿಕ್ ದಿನಾಚರಣೆಯಲ್ಲಿ ಭಾಗವಹಿಸಲು ಇತರ ಕಾರ್ಮಿಕರಂತೆ ಅವರಿಗೂ ಸಹ ಸಂಬಳ ಸಹಿತ ಆ ದಿನಗಳಲ್ಲಿ ರಜಾ ಕೊಡುವಂತೆ ಸರ್ಕಾರದವರೂ ಸಾರ್ವಜನಿಕರೂ ಒತ್ತಾಯ ಪಡಿಸಬೇಕೆಂದು ಕೋರಿರುತ್ತಾರೆ.

### ಸುಬ್ರಹ್ಮಣ್ಯದ ರಥೋತ್ಸವ

ಮೈಸೂರು ತಾಲ್ಲೂಕು ಸಿದ್ಲಿಂಗಪುರದ ಬಳಿ ಸುಬ್ರಹ್ಮಣ್ಯದ ರಥೋತ್ಸವವು ಇದೇ ಮಾಘ ಶುಕ್ಲ ಷಷ್ಠೀ ಮಂಗಳವಾರ (ತಾ|| ೨೪-೧-೫೦) ನಡೆಯಲು ಏರ್ಪಾಡಾಗಿದೆ. ಆದಂಗವಾಗಿ ಶ್ರೀ ಬಾಲಸುಬ್ರಹ್ಮಣ್ಯೇಶ್ವರ ಸ್ವಾಮಿಯವರಿಗೆ ಮಂಟಪೋತ್ಸವ, ಬ್ರಾಹ್ಮಣ ಸುವಾಸಿನಿಯರಿಗೆ ಫಲದಾನಾದಿ ಸೇವೆಗಳೂ ನಡೆಸಲ್ಪಡುವುವು. ಅಲ್ಲದೆ ಈ ವರ್ಷದಿಂದಲೇ ದನಗಳ ಪರಿಷೆ ನಡೆಯಲು ಸರ್ವ ಏರ್ಪಾಡುಗಳೂ ತ್ವರಿತದಿಂದ ಸಾಗುತ್ತಿವೆ.

## ಚಿನ್ನ, ಬೆಳ್ಳಿ ಕರಂಡದಲ್ಲಿ ಚಿನ್ನವಸ್ತುಗಳಿಲ್ಲ

ಚಿನ್ನ ಮತ್ತು ಬೆಳ್ಳಿ ಕರಂಡಗಳಲ್ಲಿ ಯಾರಿಗೂ ಚಿನ್ನ ವಸ್ತುಗಳನ್ನು ಆರ್ಪಿಸಬಾರದೆಂಬ ಪಂಡಿತ ನೆಹರೂರವರ ಇಚ್ಛೆಯ ಮೇರೆ ಇನ್ನು ಮುಂದೆ ಆ ರೀತಿ ಯಾರಿಗೂ ಚಿನ್ನವಸ್ತುಗಳನ್ನು ಕೊಡುವುದಿಲ್ಲವೆಂದು ಅಂಬಾಲಾ ಪೌರಸಭೆಯು ನಿರ್ಣಯಿಸಿದೆ.

### ಫೆರ‍್ರೋ ಅಲಾಯ್ಸ್ ಕಾರ್ಖಾನೆ

ಮೈಸೂರು ಫೆರ‍್ರೋ ಅಲಾಯ್ಸ್ ಕಾರ್ಖಾನೆಯ ದಿನಾಚರಣೆಯು ನಿನ್ನೆ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕುಸ್ತಿ ಮತ್ತು ವಿನೋದದ [illegible]ದ್ಯಗಳು ಜರುಗಿದವು. ಶ್ರೀ ರಾಜಗೋಪಾಲರವರು ಮಾತನಾಡಿ ಸಂಸ್ಥೆಯ ಪ್ರಗತಿಯನ್ನು ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾರ್ಮಿಕರಿಗೂ ಅಧಿಕಾರಿಗಳಿಗೂ ಮಧುರ ಬಾಂಧವ್ಯ ಇರಬೇಕಾದ ಅವಶ್ಯಕತೆಯನ್ನು [illegible] ಹೇಳಿದರು. ದೇಶದ ರಾಜಕೀಯ ಸ್ವಾತಂತ್ರ್ಯವು ದೊರೆತಿರುವ ಈ ಸಮಯದಲ್ಲಿ [illegible]ರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಸಕಲರೂ ದುಡಿಯಬೇಕೆಂದು ಕೋರಿದರು.

### ಉಪಾಹಾರ ಸಮಿತಿ

ಉಪಾಹಾರ ಸಮಿತಿಯ ಮೊದಲನೆ ಕೂಟವು ನಿನ್ನೆ ಆದಿ ಕರ್ನಾಟಕರ [illegible] ನ್ಯೂ ಟೈಪ್ ಮಿಡ್ಲ್ ಸ್ಕೂಲಿನಲ್ಲಿ ಶ್ರೀ [illegible] ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು. ಸಮಿತಿಯ ಸದಸ್ಯರಾಗಿದ್ದ ಶ್ರೀ ಬಿ. ಎಲ್. ಮರಿದಂಡಯ್ಯನವರ [illegible] ಮರಣಕ್ಕಾಗಿ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸಲಾಯಿತು. ೧೯೪೮-೪೯ ನೇ ಸಾಲಿನ ಜಮಾ ಖರ್ಚುಗಳನ್ನು ಪರಿಶೀಲಿಸಿ ರಿಕಾರ್ಡು ಮಾಡಲಾಯಿತು. ೧೯೪೯-೫೦ ನೇ ಸಾಲಿನಲ್ಲಿ [illegible] ಪಾಹಾರವನ್ನು ಕೊಡುವುದನ್ನು ಮುಂದುವರಿಸುವಂತೆ ತೀರ್ಮಾನವಾಯಿತು.


|| ಶ್ರೀ ||

ಗಣೇಶಾ ಟಾಕೀಸ್

೨೦-೧-೫೦ರಿಂದ ಪ್ರತಿ ದಿನ 3 ಆಟಗಳು

ನವೀನ ಸಾರಂಗಧರ (ತಮಿಳು)

-ಪಾತ್ರವರ್ಗ-

ಎಂ. ಕೆ. ತ್ಯಾಗರಾಜ ಭಾಗವತರ್, ಎಸ್. ಡಿ. ಸುಬ್ಬುಲಕ್ಷ್ಮಿ ಮುಂತಾದವರು

ಪ್ರಭುದೇವಾ ಟಾಕೀಸ್

20-1-50 ಶುಕ್ರವಾರದಿಂದ ಜಯಪ್ರದವಾದ ೩ನೇ ವಾರ ದಿನವಹಿ 3 ಆಟಗಳು

ಭೂಲೋಕ ರಂಭೆ ತಮಿಳು ಚಿತ್ರ

20-1-50 ಶುಕ್ರವಾರದಿಂದ ರಿಪಬ್ಲಿಕ್ ದಿನೋತ್ಸವದ ಸ್ಪೆಶಲ್ ಪ್ರೋಗ್ರಾಂ

M. G. M's Release ... Second Series

Completion of NEHRU'S TOUR in America (Kannada)

ಪಂಡಿತ ನೆಹರೂರವರ ಅಮೇರಿಕದ (ಕನ್ನಡ) ಪೂರ್ಣ ಪ್ರವಾಸವನ್ನೂ ಪ್ರದರ್ಶಿಸಲಾಗುವುದು

ರಾಜಕಮಲ್ ಮೈಸೂರು

20-1-50 ರಿಂದ ಜನಭರಿತವಾದ ೫ನೇ ವಾರ ದಿನವಹಿ 3 ಪ್ರದರ್ಶನಗಳು

ಜೀವನ

—:ಭೂಮಿಕೆ:—

ವೈಜಯಂತಿಮಾಲಾ, ಟಿ. ಆರ್. ರಾ[illegible] ಚಂದ್ರ, ಲಲಿತ-ಪದ್ಮಿನಿ

—: Morning Shows :— From 20-1-50 for 4 d[ays]

IN OLD SACREMENT

With- William Elliot Constance Moore

ಶ್ರೀ ಜಗದಂಬಾ ಶಿಶುವಿಹಾರ

ದಿವಾನ್ಸ್ ರೋಡ್ ಮೈಸೂರು

ಕ್ರಿಸ್‌ಮಸ್ ರಜೆಗಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶುವಿಹಾರವು ಈ ಮಾಹೆ ೩ನೇ ತಾರೀಖಿನಿಂದ ನಡೆಯುತ್ತಿದೆ. ಪೋಷಕರ ಸಹಕಾರದಿಂದ ತಮ್ಮ ಮಕ್ಕಳನ್ನು ಕ್ರಮವಾಗಿ ಶಾಲೆಗೆ ಕಳುಹಿಸಬೇಕಾಗಿ ವಿನಂತಿ. ಶಿಶು-ವಿದ್ಯಾಭ್ಯಾಸದಲ್ಲಿ ಆಸಕ್ತರಾದ ಮಹನೀಯರು ಶಾಲೆಗೆ ಬಂದು ಮಾಡದ ತಮ್ಮ ಮಕ್ಕಳನ್ನು ಈ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ, ವ್ಯವಸ್ಥಾಪಕ

A BOON TO PADDY & RICE TRANSPORTERS

Your problem of transportation of goods is solved. Under our skilled and well-organised Daily running Lorry Service between Mysore and Bangalore we undertake to transport all your goods, Paddy and Rice.

Bangalore Transit Company, Clearing & Forwarding Agents, Sri Narasimharaja Road, Bangalore City.

Mysore office:- Narayana Sastry Road Mysore

FOR SALE

NEWSPRINT

Double Crown Rough Newsprint available: SADHVI OFFICE Mysore


Edited, Printed and published by A R Nagarajan at Sadhvi Press, D Subbiah Road, Mysore

ರೋ॥ ನಂ. 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಶುಕ್ರವಾರ ೨೦-೧-೫೦ [ಸಂಚಿಕೆ ೧೪೫

# "ಮಹಾರಾಜರ ಸರ್ಕಾರ"ದ ಬದಲು "ಮೈಸೂರು ಸರ್ಕಾರ"

## ಸ್ಕೌಟ್ ಪ್ರದರ್ಶನ

ಮೈಸೂರು ೨೦

ನಾಳೆ ಮತ್ತು ನಾಳಿದ್ದು ರಾಜಧಾನಿಯ ಸ್ಕೌಟ್ ಕೌನ್ಸಿಲ್ ಆಶ್ರಯದಲ್ಲಿ ಪ್ರದರ್ಶನವನ್ನು ಏರ್ಪಡಿಸಲಾಗಿದೆ ನಾಳೆ ಮಧ್ಯಾಹ್ನ ೩ ಘಂಟೆಗೆ ದೊಡ್ಡ ಕೆರೆಯಲ್ಲಿಯೂ ಸಂಜೆ ೬ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿಯೂ ಕಾರ್ಯಕ್ರಮಗಳು ನಡೆಯುವುವು ನಾಳಿದ್ದು ಬೆಳಿಗ್ಗೆ ಮತ್ತು ಸಂಜೆ ಟೌನ್ ಹಾಲ್ ಮೈದಾನದಲ್ಲಿ ಸಮಾರಂಭಗಳು ಜರುಗುವುವು

## ಸೈನ್ಯ ಪಡೆಗಳಿಂದ ಪ್ರಮಾಣ ವಚನ ಸ್ವೀಕಾರ

ಭಾರತ ರಿಪಬ್ಲಿಕ್ಕಿನಲ್ಲಿ ಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಿ ಸೈನ್ಯಪಡೆಗಳು ಇದೇ ೨೬ ನೇ ತಾ॥ ಪ್ರಮಾಣ ವಚನವನ್ನು ಸ್ವೀಕರಿಸುವುವು ಭಾರತವು ಇದುವರೆಗೂ ಬ್ರಿಟಿಷ್ ಡೊಮಿನಿಯನ್ನಿನಲ್ಲಿದ್ದುದರಿಂದ ಬ್ರಿಟಿಷ್ ಚಕ್ರವರ್ತಿಯವರಲ್ಲಿ ಪ್ರಮಾಣ ವಚನ ಸ್ವೀಕರಿಸಲಾಗುತ್ತಿತ್ತು

## ಭಾರತದ ಅಧಿಕಾರಿ ವೇಷ ಧರಿಸಿದವನ ಭಾರಿ ಮೋಸ

ಭಾರತ ಸರಕಾರದ ಸಂಚಾರ ಇಲಾಖೆಯ ಡೆಪ್ಯುಟಿ ಸೆಕ್ರೆಟರಿಯೆಂದು ಹೇಳಿಕೊಂಡ ಬಿ ಎಸ್. ಪುರಿ ಎಂಬಾತನು ಸರಕಾರದ ಪರವಾಗಿ ತಾನು ಯಂತ್ರ ಸಾಮಗ್ರಿಗಳನ್ನು ಕೊಳ್ಳುವುದಾಗಿ ತಿಳಿಸಿ, ಬೊಂಬಾಯಿನ ಛಾರಿವರ್ತಕರನ್ನು ಅನೇಕ ಸಾವಿರ ರೂ ಗಳವರೆಗೆ ಮೋಸ ಪಡಿಸಿರುವುದಾಗಿ ಗೊತ್ತಾಗಿದೆ ಆತನನ್ನು ಹುಡುಕುವುದರಲ್ಲಿ ಪೊಲೀಸರು ನಿರತರಾಗಿದ್ದಾರೆ

## ೧॥ ಲಕ್ಷ ಉಪಾಧ್ಯಾಯರಿಗೆ ಹೆಚ್ಚಿನ ಸಂಬಳ

ಮದ್ರಾಸಿನಲ್ಲಿ ಸರಕಾರಿ ಗ್ರಾಂಟು ಪಡೆಯುತ್ತಿರುವ ಪ್ರೈವೇಟ್ ಶಾಲೆಗಳ ಉಪಾಧ್ಯಾಯರ ಸಂಬಳದ ಪ್ರಮಾಣವನ್ನು ೨೫ ರೂ ಗಳಿಂದ ೩೦ಕ್ಕೆ ಏರಿಸುವ ವಿಷಯವು ಸರಕಾರದ ಪರ್ಯಾಲೋಚನೆಯಲ್ಲಿದೆ ಯೆಂದು ಹೇಳಲಾಗಿದೆ ಇದರಿಂದ ಸುಮಾರು ೧ ಲಕ್ಷ ೨೦ ಸಾವಿರ ಉಪಾಧ್ಯಾಯರಿಗೆ ಅನುಕೂಲವಾಗುವುದು ಸರಕಾರಕ್ಕೆ ೭೫ ಲಕ್ಷ ರೂ. ಹೆಚ್ಚಿಗೆ ಖರ್ಚಾಗುವುದು.

## ಕ್ಷಯ ರೋಗ ಕ್ರಿಮಿಗಳ ನಿರೋಧಕ್ಕೆ ಹೊಸ ಔಷಧ

ಕ್ಷಯರೋಗದ ಕ್ರಿಮಿಗಳು ಶರೀರದಲ್ಲಿ ವೇಗವಾಗಿ ವೃದ್ಧಿಯಾಗುವುದನ್ನು ಪೂರ್ಣವಾಗಿ ತಡೆಯುವಂತಹ ಹೊಸ ಔಷಧಿಯನ್ನು ಅಮೆರಿಕದ ಸಂಸ್ಥೆಯೊಂದು ಈ ವರ್ಷದ ಆದಿಯಲ್ಲಿ ಮಾರಾಟಕ್ಕೆ ಕೊಡುವುದೆಂದು ಹೇಳಲಾಗಿದೆ ಇದನ್ನು ಉಪಯೋಗಿಸುವುದರಿಂದ ಇಂಜಕ್ಷನ್‌ಗಳನ್ನು ತೆಗೆದುಕೊಳ್ಳಬೇಕಾಗುವುದಿಲ್ಲವೆಂದು ಹೇಳಲಾಗಿದೆ

## ಪಂಜಾಬ್ ಮೆಟ್ರಿಕ್ಕಿಗೆ ೩೦ ಸಾವಿರ ವಿದ್ಯಾರ್ಥಿಗಳು

ಪಶ್ಚಿಮ ಪಂಜಾಬಿನ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಈ ಸಾರಿ ೩೦ ಸಾವಿರ ವಿದ್ಯಾರ್ಥಿಗಳು ಕುಳಿತುಕೊಳ್ಳುವರೆಂದು ವರದಿಯಾ

## "ಮೈಸೂರು ಸರ್ಕಾರ" ಮಾತ್ರ ಬರೆಯಬೇಕು

ಈ ತಿಂಗಳು ೨೬ನೇ ತಾ॥ನಿಂದ ಮುಂದಕ್ಕೆ "ಶ್ರೀಮನ್ಮಹಾರಾಜರವರ ಸರ್ಕಾರ" ಎಂದು ಬರೆಯದೆ ಕೇವಲ "ಮೈಸೂರು ಸರ್ಕಾರ" ಎಂದು ಮಾತ್ರ ಬರೆಯಬೇಕೆಂದು ಎಲ್ಲಾ ಇಲಾಖೆಗಳಿಗೂ ಸರ್ಕಾರದವರು ತಿಳುವಳಿಕೆ ಕೊಟ್ಟಿರುವರೆಂದು ಗೊತ್ತಾಗಿದೆ

## ರಾಷ್ಟ್ರಾಧ್ಯಕ್ಷರ ಮತ್ತು ಗೌರ್ನರರುಗಳ ಬಿರುದು

ಭಾರತದ ರಿಪಬ್ಲಿಕ್ಕಿನ ಅಧ್ಯಕ್ಷರನ್ನು "ಹಿಸ್ ಎಕ್ಸಲೆನ್ಸಿ ಪ್ರೆಸಿಡೆಂಟ್" ಎಂದು ವಾಗಿ ಕರೆಯಲಾಗುವುದು ರಾಜಪ್ರಮುಖರಿಗೆ 'ಹಿಸ್ ಹೈನೆಸ್' ಎಂಬ ಅಭಿದಾನವು ಒಪ್ಪಂದದ ಪ್ರಕಾರ ಇರುವುದು ಗೌರ್ನರು ಗಳನ್ನೂ ಸಹ 'ಹಿಸ್ ಎಕ್ಸಲೆನ್ಸಿ' ಎಂದು ಸಂಬೋಧಿಸಲಾಗುವುದೆಂದು ಹೇಳಲಾಗಿದೆ

## ರಷ್ಯದ ಬಳಿ ೩೦೦ ಅಣು ಬಾಂಬುಗಳು

ನಾಗಸಾಕಿ ನಗರದ ಮೇಲೆ ಹಾಕಲಾದಂತಹ ೩೦೦ ಭಾರಿ ಅಣು ಬಾಂಬುಗಳು ರಷ್ಯದ ಬಳಿ ಇರುವುದಾಗಿ ಜರ್ಮನ್ ವೈಜ್ಞಾನಿಕನೊಬ್ಬನು ತಿಳಿಸಿರುತ್ತಾನೆ ಈತನು ರಷ್ಯದಿಂದ ತಪ್ಪಿಸಿಕೊಂಡು ಬಂದಿರುತ್ತಾನೆ. ಈ ಬಾಂಬುಗಳನ್ನು ತಯಾರಿಸಲು ಭೂಮಿಯೊಳಗೆ ೭೦೦ ಚದರ ಮೈಲಿಯ ಕಾರ್ಖಾನೆಯನ್ನು ನಿರ್ಮಿಸಲಾಗಿದೆ. ಪ್ರಪಂಚಕ್ಕೂ ಇದಕ್ಕೂ ಸಂಬಂಧವಿರದಂತೆ ಮಾಡಲಾಗಿದೆಯೆಂದು ಆತನು ತಿಳಿಸಿದ್ದಾನೆ

### ಆಹಾರ ಕಾನೂನು ಉಲ್ಲಂಘನೆಗೆ ದಂಡ

ತಿಂಗಪ್ಪ ಮತ್ತು ಚನ್ನಯ್ಯ ಎಂಬುವರು ರಹದಾರಿಯಿಲ್ಲದೆ ೫೬ ಸೇರು ಅಕ್ಕಿ ಸಾಗಿಸುತ್ತಿದ್ದರೆಂಬ ಆಪಾದನೆ ಮೇಲೆ ನಗರ ನ್ಯಾಯಾಧೀಶರು ನೆನ್ನೆ ದಿನ ಸದರಿ ಆಪಾದಿತರಿಗೆ ತಲಾ ೩೦ ರೂ ಗಳ ಜುಲ್ಮಾನೆ ವಿಧಿಸಿರುತ್ತಾರೆ ಜುಲ್ಮಾನೆ ತ

## ಹೊಸ ಮಂತ್ರಿಮಂಡಲದ ಪ್ರಮಾಣ ಸ್ವೀಕಾರ ಶುಕ್ರವಾರಕ್ಕೆ

### ಮುಖ್ಯ ಮಂತ್ರಿಗಳ ವಿವರಣೆ

ಬೆಂಗಳೂರು ೧೯

ಸಂಸ್ಥಾನದ ಹೊಸ ಮಂತ್ರಿಮಂಡಲದ ಪಟ್ಟಿಯು ೨೫ನೇ ತಾರೀಖಿನಲ್ಲಿ ತಯಾರಾಗುವುದು ಮಾರನೇ ದಿನ ಹೆಸರುಗಳನ್ನು ಶ್ರೀಮನ್ಮಹಾರಾಜರ ಒಪ್ಪಿಗೆಗೆ ಇಡಲಾಗುವುದು-ಎಂಬುದಾಗಿ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುತ್ತಾರೆ ೨೬ನೇ ತಾ॥ ರಿಪಬ್ಲಿಕ್ ಸಮಾರಂಭದ ದಿನವೇ ಹೊಸ ಮಂತ್ರಿಗಳು ಪ್ರಮಾಣವಚನ ಸ್ವೀಕಾರ ಮಾಡುವರು ೨೭ನೇ ತಾ॥ ಪ್ರಧಾನಮಂತ್ರಿ ಶ್ರೀ ರೆಡ್ಡಿಯವರು ದಿಲ್ಲಿಗೆ ಹೋಗಿ ಅಲ್ಲಿ ಮೂರು ದಿನಗಳವರೆಗೆ ಇದ್ದು ಮಂಗಳವಾರ ಹಿಂತಿರುಗುವರು.

### ಕಾಮರ್ಸ್ ಕಾಲೇಜಿನ ವರ್ಗ ಬೇಡ

ಬೆಂಗಳೂರಿನಲ್ಲಿರುವ ಕಾಮರ್ಸ್ ಕಾಲೇಜನ್ನು ರಾಜಧಾನಿಗೆ ವರ್ಗ ಮಾಡಬೇಕೆ ಮೈ ವಿಶ್ವವಿದ್ಯಾನಿಲಯದ ಪ್ರೋ ಚಾನ್ಸಲರು ಮಾಡಿರುವ ಸಲಹೆಯನ್ನು ಸರಕಾರವು ಅಂಗೀಕರಿಸಿದೆ. ಅದನ್ನು ಬೆಂಗಳೂರಿನಲ್ಲಿಯೇ ಇಟ್ಟಿರಬೇಕೆಂದು ವಾಣಿಜ್ಯ ಛೇಂಬರು ಸರಕಾರಕ್ಕೆ ಮನವಿ ಮಾಡಿಕೊಂಡಿರುವುದಾಗಿ ಹೇಳಲಾಗಿದೆ

### ಕಾಮರ್ಸ್ ಕಾಲೇಜು ಕಟ್ಟಡಕ್ಕೆ ೧ ಲಕ್ಷ ರೂ. ದಾನ

ಬೆಂಗಳೂರಿನಲ್ಲಿ ಕಾಮರ್ಸ್ ಕಾಲೇಜಿನ ಕಟ್ಟಡದ ನಿರ್ಮಾಣಕ್ಕಾಗಿ ಇಲ್ಲಿನ ಸುಪ್ರಸಿದ್ಧ ವರ್ತಕರಾದ ಶ್ರೀ ರಾಮನಾರಾಯಣ ಚೆಲ್ಲಾರಾಂರವರು ೧ ಲಕ್ಷ ರೂ.ಗಳನ್ನು ಉದಾರವಾಗಿ ದಾನ ಮಾಡಿರುವುದನ್ನು ಸರಕಾರದವರು ಅಂಗೀಕರಿಸಿದ್ದಾರೆ. ಕಾಲೇಜಿಗೆ ದಾತೃಗಳ ಹೆಸರನ್ನಿಡಲಾಗುವುದು.

## ಕಾಶ್ಮೀರ್ ಪ್ರಸ್ತಭೂಮಿ ಮೇಲೆ ಕೆಂಪು ಚೀಣಾದ ಧ್ವಜ

ರಷ್ಯ ಮತ್ತು ಚೀಣಾಗಳ ಗಡಿಯಲ್ಲಿರುವ ಪಾಮಿರ್ ಪ್ರಸ್ತಭೂಮಿಯ ಮೇಲೆ ಕ

## ಸುಲ್ತಾನ್ ಷರೀಫರ ನಿಧನ

ಸ್ವಂ. ವ.] ಚಾಮರಾಜನಗರ ೨೦

ಇಲ್ಲಿನ ಪುರ ಪ್ರಮುಖರಾದ ಜ॥ ಸುಲ್ತಾನ್ ಷರೀಫ್ ಸಾಹೇಬರು ನೆನ್ನೆ ರಾತ್ರಿ ೧೦ ಗಂಟೆಗೆ ಹೃದಯ ಸ್ತಂಭನದಿಂದ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಅವರು ಪೌರಸಭಾ ಸದಸ್ಯರಾಗಿದ್ದರು ಅಬ್ಕಾರಿ ಕಂಟ್ರಾಕ್ಟರೂ, ಬ್ಯಾಂಕರೂ ಮತ್ತು ಭಾರಿ ಜಮೀನ್ದಾರರೂ ಆಗಿದ್ದರು. ಅನೇಕ ರೈತಾಪಿ ಮತ್ತು ಕೂಲಿ ಜನರಿಗೆ ಬೇಕಾದವರಾಗಿದ್ದುದಲ್ಲದೆ ಹಲವಾರು ಧರ್ಮ ಕಾರ್ಯಗಳನ್ನೂ ಮಾಡಿದ್ದರು. ಇವರ ನಿಧನದಿಂದ ಈ ಊರಿಗೆ ದೊಡ್ಡ ನಷ್ಟವುಂಟಾಗಿದೆ

## ಪಾಕಿಸ್ತಾನಿಗಳಿಂದ ಭಾರತದ ರೈಲ್ವೆ ವ್ಯಾಗನ್ನುಗಳ ಕಳುವು

ಭಾರತ ರೈಲ್ವೆಗಳಿಗೆ ಸೇರಿದ ಆಸ್ತಿಪಾಸ್ತಿಗಳನ್ನು ಕದ್ದು ಪೂರ್ವ ಪಾಕಿಸ್ತಾನಕ್ಕೆ ಅನೇಕ ರೈಲ್ವೆ ನೌಕರರು ಓಡಿಹೋಗಿರುವುದಾಗಿ ವರದಿಯಾಗಿದೆ ಹಲವು ಜವಾಬ್ದಾರಿ ಪಾಕಿಸ್ತಾನಿ ರೈಲ್ವೆ ಅಧಿಕಾರಿಗಳನ್ನು ಈ ಸಂಬಂಧವಾಗಿ ಚಿಕೂರಿ ನಡೆಸಿದರೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಲಾಗಿದೆ ಅನೇಕ ವ್ಯಾಗನ್ನುಗಳು ಕಳುವಾಗಿವೆ

## ಯುದ್ಧವೊದಗಿದರೆ ಪಾಕಿಸ್ತಾನವು ರಷ್ಯಕ್ಕೆ ಸೇರುವುದೆ?

ಕಾಶ್ಮೀರ ಸಂಬಂಧವಾಗಿ ಯುದ್ಧವೇನಾದರೂ ಸಂಭವಿಸಿದರೆ ಅದು ಇಡೀ ಉಪಖಂಡಕ್ಕೇ ಹರಡುವುದೆಂದೂ, ಪಶ್ಚಿಮ ದೇಶಗಳ ಪ್ರಜಾ ಪ್ರಭುತ್ವಗಳು ಏನೇ ಹೇಳಲಿ, ಅಂತಹ ಸಂದರ್ಭದಲ್ಲಿ ಪಾಕಿಸ್ತಾನವು ರಷ್ಯದ ಪ್ರಾಂತವಾಗಲು ಅಲ್ಲಿನ ಜನರು ಒಪ್ಪುವರೆಂದೂ, ಸರ್ ಫಿರೋಜ್ ಖಾನ್ ನೂನರು ಪಾಕಿಸ್ತಾನದ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ ತಿಳಿಸಿರುವರು ಸಭೆಯಲ್ಲಿ ಬಹು ಬಿಸಿ ಬಿಸಿ ಮಾತುಗಳಾದವೆಂದು ವರದಿಯಾಗಿದೆ.

## ಪಾಕಿಸ್ತಾನದ ದೇವಾಲಯಗಳಲ್ಲಿ ಕಸಾಯಿ ಖಾನೆಗಳು

ಪಾಕಿಸ್ತಾನದಲ್ಲಿರುವ ಹಿಂದುಗಳನ್ನು ಹೊರಕ್ಕೆ ಅಟ್ಟುವ ಸಲುವಾಗಿ ಅಲ್ಲಿನ ಸರಕಾರದವರು ಸಿಂಧ್ ಹಿಂದುಗಳ ಮೇಲೆ ನಡೆಸುತ್ತಿರುವ ಅತ್ಯಾಚಾರಗಳ ದುರಂತ ವಾರ್ತೆಯನ್ನು ಸಿಂಧಿನಿಂದ ಬೊಂಬಾಯಿಗೆ ಬಂದ ಅಖಿಲ ಸಂಘ್ಯಾತರ ಬೋರ್ಡಿನ ಕಾರ್ಯದರ್ಶಿ ಬಿ ಎನ್. ನಾಗ್ಪಾಲೆಯವರು ತಿಳಿಸಿರುತ್ತಾರೆ ಇಸ್ಲಾಂ ಮತವನ್ನು ಸೇರಬೇಕು, ಅಥವಾ ನಾಶವಾಗಬೇಕು - ಇವೆರಡು ಪ್ರಶ್ನೆಗಳೇ ಸಿಂಧ್ ಹಿಂದುಗಳ ಮುಂದಿರುವುವು. ಹಲವು ದೇವಾಲಯಗಳಲ್ಲಿ ಕಸಾಯಿ ಅಂಗಡಿಗಳನ್ನೂ ತೆರೆಯಲಾಗಿದೆ

### ಬಿಳಿಗೊಳದ ಕಾರ್ಖಾನೆಯವರಿಗೆ ಪುನಃ ಕೆಲಸ

ಕೆಲವು ದಿನಗಳ ಹಿಂದೆ ಬಿಳಿಗೊಳದ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆಯಲ್ಲಿ ಕೆಲಸದಿಂದ ತೆಗೆದುಹಾಕಲ್ಪಟ್ಟಿದ್ದ ಕಾರ್ಮಿಕರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಪುನಃ ಕೆಲಸದ ಮೇಲೆ ತೆಗೆದುಕೊಳ್ಳುವಂತೆ ಕೇ

## ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಬೆಳವಣಿಗೆಗೆ ಸ್ವಾತಂತ್ರ್ಯ ಅಗತ್ಯ

### ಅಖಿಲ ಭಾರತ ಕರ್ನಾಟಕ ಸಂಘದ ನಿರ್ಣಯ

ಮೈಸೂರು ೧೮

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿಯ ದೃಷ್ಟಿಯಿಂದ ಕರ್ನಾಟಕ ಪ್ರಾಂತ ರಚನೆಯು ಅಗತ್ಯವೆಂದೂ ಕೇಂದ್ರ ಸರ್ಕಾರವು ಅದರ ಸ್ಥಾಪನೆ ಮಾಡಬೇಕೆಂದೂ ಪ್ರತಿಪಾದಿಸುವ ನಿರ್ಣಯವನ್ನು ಮೊನ್ನೆ ಸಂಜೆ ಅ|| ಭಾ|| ಕರ್ನಾಟಕ ಸಂಘಗಳ ಪ್ರತಿನಿಧಿಗಳ ಸಭೆಯಲ್ಲಿ ಮಾಡಲಾಯಿತು. ವಿಶ್ವವಿದ್ಯಾಲಯ ಮತ್ತು ಇತರ ಕಡೆಗಳಲ್ಲಿ ಕನ್ನಡವು ಪ್ರಥಮ ಭಾಷೆಯಾಗಬೇಕೆಂದೂ ಪ್ರತಿಯೊಂದು ವಿದ್ಯಾಲಯದಲ್ಲೂ ಕರ್ನಾಟಕ ಸಂಘಗಳು ಏರ್ಪಡಬೇಕೆಂದೂ, ಮದ್ರಾಸು ಸರ್ಕಾರದವರು ಕನ್ನಡ ಕವಿಗಳೊಬ್ಬರಿಗೆ 'ಕವಿ ಸಾರ್ವಭೌಮ' ಎಂಬ ಬಿರುದನ್ನು ಕೊಟ್ಟಂತೆ ಮೈಸೂರಿನ ಸರಕಾರದವರೂ ಸಹ ಅರ್ಹರಾದ ಕವಿಗಳಿಗೆ ಈ ಬಿರುದನ್ನು ಕೊಡಬೇಕೆಂದೂ ನಿರ್ಣಯ ಮಾಡಲಾಯಿತು.

ಕೇಂದ್ರ ಕರ್ನಾಟಕ ಸಂಘವನ್ನು ರಚಿಸಲಾಯಿತು. ಶ್ರೀ ಹೆಚ್ ಗಂಗಾಧರಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ವೇದಾಂತ ಹೆಮ್ಮಿಗೆಯವರು ಕಾರ್ಯದರ್ಶಿಯೂ ಆರಿಸಲ್ಪಟ್ಟರು.

## ಮೂರು ಅಂತಸ್ತಿನ ಮನೆಗೆ ಬೆಂಕಿ

ಮೇಲ್ಕಂಡ ಸಮಾರಂಭಗಳಲ್ಲದೇ, ಸ್ತ್ರೀ ಸಮಾಜ, ಮಹಾತ್ಮಾ ಗಾಂಧಿ ಸೇವಾ ಸಂಘ, ಮಾದರಿ ಬಾಲಿ ಮುಂತಾದ ಇತರ ಸಂಘಗಳಲ್ಲಿಯೂ ಈ ಸಮಾರಂಭವು ವೈಭವದಿಂದ ನಡೆಯಿತ ... ಕ್ಕಳಿಗೆ ಸಿಹಿ ತಿಂಡಿಗಳನ್ನು ಹಂಚಲಾಯಿತ

ಮಹಾತ್ಮ ಗಾಂಧಿ ಶಾಂತಿ ಸಪ್ತಾಹ

ದಿ ಸುಬ್ಬಯ್ಯನ ರಸ್ತೆಯಲ್ಲಿರುವ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ನಾಳಿದ್ದು ಸಂಜೆ ೬ ಘಂಟೆಗೆ ಮಹಾತ್ಮ ಗಾಂಧಿ ಸ್ಮಾರಕ ೨ನೇ ಶಾಂತಿ ಸಪ್ತಾಹದ ಆರಂಭೋತ್ಸವವನ್ನು ವಿಶ್ವವಿದ್ಯಾನಿಲಯದ ಪ್ರೊ|| ಚಾನ್ಸಲರಾದ ಡಾ|| ಸಿ ಆರ್ ರೆಡ್ಡಿಯವರು ನೆರವೇರಿಸುವರು ನಾಳಿದ್ದು ಸಂಜೆ ೫ ಘಂಟೆಗೆ ಶ್ರೀ ಶಂಕರರಾವ ದಳವಿ ... ಭಗವದ್ಗೀತೆಯ ಮೇಲೆ ಉಪನ್ಯಾಸವೂ ೮ ಘಂಟೆಗೆ ಶಂಕರಭಕ್ತಿಯೂ ನಡೆಯುವುವು ಅನಂತರ ಪ್ರತಿದಿನವೂ ... ಸಂಗೀತ ಮತ್ತು ಹರಿಕಥೆ ... ಜರುಗುವುವು ಈರಾತ್ರಿ ೮ ಘಂಟೆಗೆ ಶ್ರೀ ವೆಂಕಟಸುಬ್ಬದಾಸರಿಂದ ಭಕ್ತ ... ಸಂಕೀರ್ತನೆ ನಡೆಯುವುದು

## ರಾಜೇಂದ್ರ ಪ್ರಸಾದರಿಂದ ಅಧಿಕಾರ ಸ್ವೀಕಾರ

ಮೊದಲೇ ಗೊತ್ತಾಗಿದ್ದ ಕಾರ್ಯಕ್ರಮದಂತೆ ಮೊನ್ನೆ ದಿನ ಬೆಳಗ್ಗೆ ೧೦-೨೦ ಘಂಟೆಗೆ ನವದೆಹಲಿಯಲ್ಲಿ ಗವರ್ನರ್ ಜನರಲ್ ರಾಜಾಜಿಯವರು ಭಾರತದ ರಿಪ್ಲಿಕ್ ಘೋಷಣೆಯನ್ನು ಮಾಡಿ, ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡಾ|| ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷ ಪೀಠಕ್ಕೆ ಕರೆದೊಯ್ದು ಕುಳ್ಳಿರಿಸಿದರು ಅನಂತರ ರಾಜಾಜಿಯವರು ಕೇಂದ್ರ ಸರ್ಕಾರದ ಎಲ್ಲ ಸಚಿವರುಗಳನ್ನೂ, ಉನ್ನತಾಧಿಕಾರಿಗಳನ್ನೂ ಅಧ್ಯಕ್ಷರಿಗೆ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಸುಪ್ರೀಂ ಕೋರ್ಟ ನ್ಯಾಯಾಧೀಶರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಅನಂತರ ಕೇಂದ್ರ ಸರ್ಕಾರದ ಎಲ್ಲ ಮಂತ್ರಿಗಳೂ ಮತ್ತು ಉನ್ನತಾಧಿಕಾರಿಗಳೂ ಪ್ರಮಾಣ ವಚನ ಸ್ವೀಕರಿಸಿದರು ಮೊನ್ನೆ ದಿನ ಮಧ್ಯಾಹ್ನ ಅಧ್ಯಕ್ಷರು ೬ ಕುದುರೆ ಸಾರೋಟಿನಲ್ಲಿ ಪ್ರಭುತ್ವ ಭವನದಿಂದ ಮೆರವಣಿಗೆಯಲ್ಲಿ ಇರ್ವಿನ್ ಸ್ಟೇಡಿಯಂಗೆ ತೆರಳಿ ಅಲ್ಲಿ ಧ್ವಜಾರೋಹಣ ನಾನಾ ಮಿಲಿಟರಿ ಪೆರೇಡ್ ಮೊದಲಾದುವನ್ನು ವೀಕ್ಷಿಸಿದರು

## ಅರಮನೆ ವಿಶೇಷ ದರ್ಬಾರು

### ರಾಜಪ್ರಮುಖರಾಗಿ ಪ್ರಭುಗಳಿಂದ ಪ್ರಮಾಣ ಸ್ವೀಕಾರ

ಮಂತ್ರಿಗಳ ಮತ್ತು ನ್ಯಾಯಾಧೀಶರುಗಳ ಪ್ರಮಾಣ ವಚನ

ಮೈಸೂರು ೨೮

ಶ್ರೀಮನ್ಮಹಾರಾಜರ ಮೊನ್ನೆಯಿಂದ ನೂತನ ರಾಜ್ಯಾಂಗದ ಪ್ರಕಾರ ಸಂಸ್ಥಾನದ ರಾಜಪ್ರಮುಖರಾದರು ಈ ಬಗ್ಗೆ ಅರಮನೆಯಲ್ಲಿ ಮೊನ್ನೆ ದರ್ಬಾರು ನಡೆಯಿತು ೧೦-೧೫ಕ್ಕೆ ಸರಿಯಾಗಿ ಪ್ರಭುಗಳು ಭಾರತದ ರಾಜ್ಯಾಂಗ ಪ್ರಮಾಣವನ್ನು ರಾಜಪ್ರಮುಖರಾಗಿ ಸ್ವೀಕರಿಸಿದರು ಆಗ ... ತೋಪುಗಳು ... ಲ್ಪಟ್ಟವು ರಾಜಪ್ರಮುಖರ ... ಸಂಸ್ಥಾನದ ಧ್ವಜಗಳನ್ನು ಹಾರಿಸಲಾಯಿತು. ಅನಂತರ ಪ್ರಧಾನ ನ್ಯಾಯಾಧೀಶರುಗಳೂ ಹಿಂದಿನ ಸಚಿವರುಗಳೂ, ಇತರ ನ್ಯಾಯಾಧೀಶರೂ, ದಂಡನಾಯಕರೂ ಪ್ರಮಾಣ ವಚನ ವನ್ನು ತೆಗೆದುಕೊಂಡ ...

## ಪ್ರಭುಗಳಿಂದ ಆರಂಭೋತ್ಸವ

ಸ್ವಂತ ವರದಿಗಾರ] ಬೆಂಗಳೂರು ೨೮

ಕ್ಷಯರೋಗದ ಚಿಕಿತ್ಸೆ ಪಡೆದವರ ಚಿಕಿತ್ಸೋಪಚಾರಕ್ಕಾಗಿ ಏರ್ಪಟ್ಟಿರುವ ಸಂಸ್ಥೆ ಮತ್ತು ಪುಟ್ಟ ಕೃಷ್ಣಯ್ಯ ಚೆಟ್ಟಿ ರಾಮಲಕ್ಷ್ಮಮ್ಮನವರ ಹೆರಿಗೆ ಆಸ್ಪತ್ರೆಗಳ ಪ್ರಾರಂಭೋತ್ಸವವನ್ನು ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು ನೆರವೇರಿಸಿದರು ಸಾರ್ವಜನಿಕರು ಇಂತಹ ಧರ್ಮ ಕಾರ್ಯಗಳಿಗಾಗಿ ಹೆಚ್ಚು ಹೆಚ್ಚಿನ ಸಹಾಯವನ್ನು ನೀಡಬೇಕೆಂದು ಅವರು ಸೂಚಿಸಿದರು

ಶ್ರೀಮನ್ಮಹಾರಾಜರವರು ನೆನ್ನೆ ದಿನ ಸುಮಾರು ೨ ಸಾವಿರ ಜನ ಅತಿಥಿಗಳನ್ನು ಇಲ್ಲಿನ ಅರಮನೆಗೆ ಬರಮಾಡಿಕೊಂಡು ಉಪಾಹಾರದಿಂದ ಸತ್ಕರಿಸಿದರು

ಶ್ರೀ ಕೆ. ಸಿ ರೆಡ್ಡಿಯವರು ಸ್ವಲ್ಪ ಗುಣಮುಖರಾಗುತ್ತಿದ್ದಾರೆ ಅವರು ಈ ದಿನ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎ ಜಿ ರಾಮಚಂದ್ರರಾಯರನ್ನು ಬರಮಾಡಿಕೊಂಡು ಸಂಭಾಷಣೆ ನಡೆಸಿದರು ಶ್ರೀ ಎಚ್. ಸಿ ದಾಸಪ್ಪನವರು ಮುಖ್ಯ ಮಂತ್ರಿಯ ಕಾರ್ಯಗಳನ್ನೂ ನೋಡುತ್ತಿರುವರು ಶ್ರೀ ರೆಡ್ಡಿಯವ ದೇಹಾಲಸ್ಯದ ಪ್ರಯುಕ್ತ ಮಂತ್ರಿ ಮಂಡಲದ ಪುನರ್ರಚನೆಯು ತಡವಾಗಿರುವುದೆಂದು ಪ್ರಕಟಿಸಲಾಗಿದೆ

## ನಿಜಾಮರ ಮೇಲೆ ಕೈಬಾಂಬು

ಹೈದರಾಬಾದಿನ ನಿಜಾಮರು ಮೊನ್ನೆ ದಿನ ಅಲ್ಲಿನ ಜುಬಿಲಿ ಹಾಲಿನಲ್ಲಿ ರಾಜಪ್ರಮುಖ ಪ್ರಮಾಣ ವಚನವನ್ನು ಸ್ವೀಕರಿಸಿ ವಾಪಸು ಬರುತ್ತಿದ್ದ ಸಮಯದಲ್ಲಿ ಅವರ ಕಾರಿನ ಕಡೆ ಒಂದು ಕೈ ಬಾಂಬನ್ನು ಎಸೆಯಲಾಯಿತು ಅದನ್ನು ಎಸೆದವರಾರೆಂಬುದು ಪತ್ತೆಯಾಗಲಿಲ್ಲ ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ಲನು ಅದನ್ನು ತೆಗೆದುಕೊಂಡು ಪರೀಕ್ಷಿಸುತ್ತಿದ್ದಾಗ ಕೇಶ್ವರ್ ಎಂಬಾತನು ಬಂದು, ಅದು ತಾನು ಎಸೆದ ಕೈಬಾಂಬೆಂದೂ, ದೆಹಲಿಯಲ್ಲಿರುವ ಕಾಂಗ್ರೆಸ್ ಸರ್ಕಾರದ ಬಗ್ಗೆ ಪ್ರತಿಭಟನೆಯನ್ನು ವ್ಯಕ್ತಪಡಿಸಲು ತಾನು ಈ ಕೃತ್ಯವನ್ನು ಮಾಡಿದುದಾಗಿಯೂ, ತನ್ನನ್ನು ದಸ್ತಗಿರಿ ಮಾಡಬೇಕೆಂದೂ ತಿಳಿಸಿದನು ಅವನನ್ನು ದಸ್ತಗಿರಿ ಮಾಡಲಾಗಿದೆ

... ದೇಹಾಲಸ್ಯದ ಪ್ರಯುಕ್ತ ರೆಡ್ಡಿಯವರು ಬಂದಿರಲಿಲ್ಲ ಅವರು ಬೆಂಗಳೂರಿನಲ್ಲಿ ತಮ್ಮ ಮನೆಯಲ್ಲಿಯೇ ಪ್ರಧಾನ ನ್ಯಾಯಾಧೀಶರಮುಂದೆ ಪ್ರತಿಜ್ಞಾ ವಚನವನ್ನು ತೆಗೆದುಕೊಂಡರು

ಸಂಜೆ ೪ ಘಂಟೆಗೆ ಸರಿಯಾಗಿ ರಾಜಪ್ರಮುಖರು ಚತುರಾಶ್ವಗಳನ್ನು ಕಟ್ಟಿದ ಸಾರೋಟಿನಲ್ಲಿ ಪರಕಾಲ ಭವನಕ್ಕೆ ತೆರಳಿದರು ಗಾಡಿಯ ಮುಂಭಾಗ ಮತ್ತು ಹಿಂಭಾಗಗಳಲ್ಲಿ ಸೈನ್ಯದ ಎರಡು ಪಡೆಗಳು ಇದ್ದವು ಅಲ್ಲಿ ಪ್ರಭುಗಳು ಭಾರತದ ಧ್ವಜವನ್ನು ಏರಿಸಿದರು. ನಂತರ ಸೈನಿಕರಿಂದ ಸೆಲ್ಯೂಟ ಸ್ವೀಕರಿಸಿದರು ತರುವಾಯ ಚಾಮುಂಡಿ ಉದ್ಯಾನದಲ್ಲಿ ನಡೆದ ಸತ್ಕಾರ ಕೂಟಕ್ಕೆ ಸುಮಾರ ೬ ಸಾವಿರ ಅತಿಥಿಗಳು ಆಗಮಿಸಿದ್ದರು ರಾಜಪ್ರಮುಖರು ಅತಿಥಿಗಳ ಹತ್ತಿರ ಹೋಗಿ ಅವರ ಗಳ ಕ್ಷೇಮಸಮಾಚಾರಗಳನ್ನು ತಿಳಿದುಕೊಂಡರು ರಾತ್ರಿ ಅರಮನೆ ದೀಪಾಲಂಕಾರ ನಡೆಯಿತು.

## ಮುದರಾಸಿನಲ್ಲಿ ಮಧ್ವನವಮಿ ಮಹೋತ್ಸವ

ಮಾರ್ಡರ್ ಕೆಫೆಯ ಮಾಲೀಕರಾದ ಶ್ರೀ ಕೆ ಸೀತಾರಾಮ ರಾಯರು ಮುದರಾಸಿನಲ್ಲಿ ಮಧ್ವನವಮಿ ಸಂಬಂಧವಾಗಿ ಮಹೋತ್ಸವವನ್ನು ಎಂದಿನಂತೆ ವೈಭವದಿಂದ ಮುದರಾಸಿನ ತಮ್ಮ ದಂಸಪ್ರಸಾದ ಭವನದಲ್ಲಿ ಆಚರಿಸಿದರು. ಘನ ವಿದ್ವಾಂಸರುಗಳಿಂದ ಭಾಷಣ, ಭಜನೆ ಕೀರ್ತನೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಿ ವಿದ್ವಾಂಸರುಗಳಿಗೆ ಯಥೋಚಿತವಾದ ಸನ್ಮಾನವನ್ನು ಮಾಡಿದರು

## ಹೈದರಾಬಾದಿನ ವಿದೇಶಿ ವಿದ್ಯಾರ್ಥಿ ವೇತನ ನಿಂತಿತು

ಬರುವ ಏಪ್ರಿಲ್ ತಿಂಗಳಿಂದ ಪ್ರಾರಂಭವಾಗುವ ದಿನದಿಂದ ಒಂದು ವರ್ಷದ ವರೆಗೆ ಸರಕಾರದ ವಿದ್ಯಾರ್ಥಿ ವೇತನಗಳನ್ನು ಕೊಟ್ಟು ಹೊರಗಿನ ದೇಶಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಕೂಡದೆಂದು ಹೈದರಾಬಾದ ಸರಕಾರದವರು ತೀರ್ಮಾನಿಸಿರುತ್ತಾರೆ. ಹೊರಗೆ ಹೋಗಿ ಬಂದ ವಿದ್ಯಾರ್ಥಿಗಳನ್ನು ಸರಕಾರದವರು ನೌಕರಿಗೆ ತೆಗೆದುಕೊಳ್ಳದೇ ಅವರು ನಿರುದ್ಯೋಗಿಗಳಾಗಿರುವುದೇ ಇದಕ್ಕೆ ಕಾರಣ

ನೇತಾಜಿ ಫುಟ್‌ಬಾಲ್ ಕ್ಲಬ್

ಮೈಸೂರಿನ ನೇತಾಜಿ ಫುಟ್‌ಬಾಲ್ ಕ್ಲಬ್ಬಿನ ೨ನೇ ವಾರ್ಷಿಕೋತ್ಸವವು ಶ್ರೀ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಾಳೆ ಶ್ರೀರಂಗಪಟ್ಟಣದ ಕೃಷ್ಣಮೂರ್ತಿ ಅವರ ಛತ್ರದಲ್ಲಿ ನೇರವೇರುವುದು

## ಗಣಿತ ಶಾಸ್ತ್ರ ಚತುರನಾದ ೫ ವರ್ಷದ ಬಾಲಕ

ಕೊಲ್ಹಾಪುರದ ಬಳಿ ಮಹಾರಾಷ್ಟ್ರ ಕಂಚಿ... ಇದ್ದ ಕೇವಲ ೫ ವರ್ಷದ ಬಾಲಕನು ಗಣಿತ ಶಾಸ್ತ್ರದಲ್ಲಿ ಪ್ರಾವೀಣ್ಯವನ್ನು ಪ್ರದರ್ಶಿಸು ... ಕಠಿಣ ಲೆಕ್ಕಗಳಿಗೆ ... ಉತ್ತರವನ್ನು ... ಬಲ್ಲನು ... ಗೊತ್ತಾಗಿದೆ

"ಗೀತಾಸಾರ"

ಶ್ರೀ ಎ. ಎಲ್ ನಾರಣ್ಣನವರು ಹೊರಡಿಸಿರುವ ಆತ್ಮವಿಚಾರ ಗ್ರಂಥಮಾಲೆಯಲ್ಲಿ ೨ನೇ ಕುಸುಮವಾಗಿ ಪ್ರಕಟವಾಗಿರುವ "ಗೀತಾಸಾರ" ಎಂಬ ಪುಸ್ತಕವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಇದರಲ್ಲಿ ಶ್ರೀಮದ್ಭಗವದ್ಗೀತೆಯ ಮುಖ್ಯ ತತ್ವವನ್ನು ಸಂಗ್ರಹವಾಗಿ ಕೊಡಲಾಗಿದೆ. ಆಸ್ತಿಕ ಮಹಾಶಯರು ಇದನ್ನು ಓದಿ ಪ್ರಯೋಜನ ಪಡೆಯಲೆಂದು ನಾವು ಹಾರೈಸುತ್ತೇವೆ

## ಪುರಸಭಾ ಉಪಾಧ್ಯಕ್ಷರು

ಹಗ್ಗದದೇವನಕೋಟೆ ಜ

ಕಳೆದ ಬುಧವಾರ ಹೆಗ್ಗಡದೇವನಕೋಟೆ ಪುರಸಭೆಯ ಉಪಾಧ್ಯಕ್ಷರ ಚುನಾವಣೆ ನಡೆದ ಶ್ರೀ ಹೆಚ್ ವಿ ದಾಸರಾಜುರವರು ಅವಿರೋಧವಾಗಿ ಚುನಾಯಿತರಾದರು. ಇವರೊಡನೆ ಸ್ಪರ್ಧಿಸಿದ್ದ ಶ್ರೀ ... ಬಿ ... ಣ್ಣನವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡರು

## ತ್ಯಾಗರಾಜರ ಮತ್ತು ಪುರಂದರರ ಆರಾಧನೆ

ಸಂಸ್ಥಾನದ ಸಂಗೀತ ಪರಿಷತ್ತಿನ ವೆಸ್ಟ್ ... ಆಶ್ರಯದಲ್ಲಿ ನಾಳೆ ದಿನ ಒಂಟಿಕೊಪ್ಪಲಿನಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಾಲಯದಲ್ಲಿ ಶ್ರೀ ತ್ಯಾಗರಾಜರ ಮತ್ತು ಶ್ರೀ ಪುರಂದರದಾಸರ ದಿನವನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ ... ಜೀವನ ಚರಿತ್ರೆಯ ಮೇಲೆ ಭಾಷಣವೂ ಸಂಗೀತವೂ ಅನಂತರ ಮಧ್ಯಾಹ್ನ ೪ ಘಂಟೆಯಿಂದ ಪುನಃ ಸಂಗೀತವೂ ನಡೆಯುವವು. ಸಂಗೀತ ಪರಿಷತ್ತಿನ ಮೈಸೂರು ಶಾಖೆಯ ಸಮಿತಿಯು ರಚಿಸಲ್ಪಡುವುದರಿಂದ ಸದಸ್ಯರು ತಪ್ಪದೆ ಬರಬೇಕೆಂದು ಕೋರಲಾಗಿದೆ

ಪೌರಸಭಾ ಕೈಪಿಡಿ

ನಗರದ ಪೌರಸಭೆಯ ಗಣ್ಯರ ಕೈಪಿಡಿಯು ಮೈಸೂರು ಮುನಿಸಿಪಲ್ ಜರ್ನಲ್ ಸಂಪಾದಕರಾದ ಶ್ರೀ ಜಿ ಎಲ್ ಸ್ವಾಮಿಯವರಿಂದ ರಚಿತವಾಗಿ, ಟೂರಿಸ್ಟ್ ಬ್ಯೂರೋವಿನಿಂದ ಪ್ರಕಟವಾಗಿದೆ. ಅದರ ಪ್ರತಿಯೊಂದನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಬೆಲೆ ೮ ಆಣೆ

## ತೀರ್ಥ ಅಂಡ್ ಕಂಪೆನಿ

ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ತೀರ್ಥ ಅಂಡ್ ಕಂಪೆನಿಯವರು ಮೊನ್ನೆ ದಿನ ನೂತನ ಕಾಫಿ ಕಾರ್ಖಾನೆಯ ... ಆರಂಭೋತ್ಸವವನ್ನು ನೆರವೇರಿಸಿದರು.


# ರಾಜಕಮಲ್

ಮೈಸೂರು

27—1—50 ರಿಂದ

ಜನಭರಿತವಾದ ೬ನೇ ವಾರ

ದಿನವಹಿ ೩ ಪ್ರದರ್ಶನಗಳು

# ಜೀವನ

— ಭೂಮಿಕೆ —

ವೈಜಯಂತಿಮಾಲಾ, ಟಿ ಆರ್ ರಾಮಚಂದ್ರ, ಲಲಿತ-ಪದ್ಮಿನಿ

— Morning Shows —

From 27-1-50 for 4 days

# My Pal Trigger

With Roy Rogers & Jack Holt


## ಶ್ರೀ ಮಲ್ಲಿಕಾರ್ಜುನಸ್ವಾಮಿ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ನಾಚನಹಳ್ಳಿ

## ಪ್ರಕಟಣೆ

ಮೈಸೂರು ಡಿವಿಜನ್ ಅಸಿಸ್ಟೆಂಟ್ ರಿಜಿಸ್ಟ್ರಾರವರ ಕೋರ್ಟಿನಲ್ಲಿ

ಮೈಸೂರು ತಾಲ್ಲೂಕು ಇನಾಂ ನಾಚನಹಳ್ಳಿ ಶ್ರೀ ಮಲ್ಲಿಕಾರ್ಜುನಸ್ವಾಮಿ ಕೋ-ಆಪರೇಟಿವ್ ಸೊಸೈಟಿಯವರು ಈ ಕೆಳಗೆ ನಮೂದಿಸಿದ ಮೇಲ್ಕಂಡ ಪ್ರತಿವಾದಿಗಳ ಮೇಲೆ ಸದರಿ ... ಅವರು ಸೊಸೈಟಿಗೆ ಕೊಟ್ಟಿದ್ದ ಅಡ್ವಾನ್ಸುಗಳಲ್ಲಿ ಸದರಿ ಪ್ರತಿವಾದಿಗಳು ಪಕ್ಕೆ ಆಗದೆ ಈಗ ೩-೧-೧೯೫೦ನೇ ತಾರೀಖು ಮಧ್ಯಾಹ್ನ ೧೨ ಘಂಟೆಗೆ ವಿಚಾರಣೆ ಆಗುತ್ತೆ. ಸದರಿ ಪ್ರತಿವಾದಿಗಳು ... ಮುಂದೆ ಹಾಜರಾಗದೆ ತಪ್ಪಿದಲ್ಲಿ ಅವರುಗಳ ಮೇಲೆ ಏಕಪಕ್ಷ ಡಿಕ್ರಿ (ex-parte) ಪಡೆಯಲಾಗುತ್ತೆ, ಎಂಬ ಬಗ್ಗೆ ಈ ಪ್ರಕಟಣೆ ಇಂದ ತಿಳಿಸಲಾಗಿದೆ.

ವಾದಿ—ಶ್ರೀ ಮಲ್ಲಿಕಾರ್ಜುನಸ್ವಾಮಿ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಇನಾಂ ನಾಚನಹಳ್ಳಿ

(ಸಾಲ ಗಣನೆ-೪೯)

ಪ್ರತಿವಾದಿಗಳು —

ನಂ ೧೭೫ ಲಿಂಗಯ್ಯನ ಸಿದ್ದಯ್ಯ ಮತ್ತು ಒ ಟಿದಾರ್ ಮರಿ ಪುಟ್ಟಸ್ವಾಮಯ್ಯ ಇನಾಂ, ನಾಚನಹಳ್ಳಿ ಮೈ॥ ತಾ॥

ನಂ ೧೨೪ ನಂಜಶೆಟ್ಟಿ ... ಮಲ್ಲಪ್ಪ ಮತ್ತು ಜಾಮೀನು ಸುನಶೆಟ್ಟಿ ಮಗ ನಂಜಶೆಟ್ಟಿ, ಒಂಟಿಕೊಪ್ಪಲ್, ಮೈ॥ ತಾ॥

ನಂ ೧೨೦ ಚಿನ್ನಬೋಯಿ ... ನಾಗಬೋಯಿ ೧ನೇ ಜಾಮೀನುದಾರ್ ... ಇನಾಂ ನಾಚನಹಳ್ಳಿ ಮೈ॥ ತಾ॥ ಮತ್ತು ೨ನೇ ಜಾಮೀನುದಾರ್ ... ತಿಮ್ಮಬೋಯಿ, ... ತಾಲ್ಲೂಕು ಮಾಕನಹಳ್ಳಿ

ನಂ ೨೦೭ ... ಸಿದ್ದಬೋಯಿ ಮತ್ತು ಜಾಮೀನುದಾರ್ ... ಮಲ್ಲ ... ತಿಮ್ಮಬೋಯಿ ಇನಾಂ ನಾಚನಹಳ್ಳಿ ಮೈ॥ ತಾ॥

ನಂ ೨೧೦ ... ರಾಮಬೋಯಿ ಮತ್ತು ಜಾಮೀನುದಾರ್ ... ಪುಟ್ಟಮ್ಮ ಇನಾಂ ನಾಚನಹಳ್ಳಿ ಮೈ॥ ತಾ॥

ನಂ ೨೧೬ ... ನಂಜಶೆಟ್ಟಿ ಮತ್ತು ಜಾಮೀನುದಾರ್ ಹೆಂಡತಿ ... ಮೈಸೂರು ತಾಲ್ಲೂಕು

ನಂ ೪೭೬, ನಂ ... ನಂ ೪೭೭, ನಂ ೪೭೮ ... ಗಿರಿಯಾಬೋಯಿ, ಇನಾಂ ನಾಚನಹಳ್ಳಿ, ಮೈಸೂರು ತಾಲ್ಲೂಕು

ನಂ ೫೭೮ ... (ಶೋಭಿ ... ಮಗ) ಶೆಟ್ಟಿ ... ಸರ್ಕಾರ್, ... ಮೊಹಲ್ಲಾ

ನಂ ೬೬೯ ... ಜಾಮೀನುದಾರ್ ೧ನೇ ... ಮತ್ತು ೨ನೇ ... ಇನಾಂ ನಾಚನಹಳ್ಳಿ, ಮೈ॥ ತಾ॥

ನಂ ... ಬೋಯಿ ಮಗ ತಿಮ್ಮಾಬೋಯಿ, ದೊಡ್ಡಹಳ್ಳಿ ಮೈಸೂರು ತಾಲ್ಲೂಕು

ಎಂ ಆರ್ ಸುಬ್ರಹ್ಮಣ್ಯಂ
ಆನರರಿ ಸೆಕ್ರೆಟರಿ


# ಪ್ರಭಾ ★

28-1-50 ರಿಂದ

ಅಪೇಕ್ಷಿತವಾದ ೨ನೇ ವಾರ

ಹಾಲ್ಟಿಯ ಸಂದರವರ ಹಿಂದಿ ಚಿತ್ರ

# — ಸಿಂಗಾರ್ —

ಸುರೈಯ್ಯಾ, ಜಯರಾಜ್, ಮಧುಬಾಲ,

— ಮ ... ದಿನ ಬರಲಿದೆ —

... ಹಿಂದಿ ಚಿತ್ರ

# ಘೋರಾಬಾಯ್

Before the Assistant Registrar of Co-operative Societies, Mysore Division Mysore

Case No 172 1949 50

Plaintiff The Graduates Co-operative Society Ltd, Mysore

Vs

Defendant S Moulana Munavar M Sc, (Alighar) till recently Lecturer in Chemistry, I Grade College Mysore — Residing at Saint Street, Lashkar Mohalla, Mysore

Take notice that the above suit for recovery of Rs 196 9 6 and Interest due on a pronote executed by you is posted to 31-1 1950, and that if you fail to appear on that date at 12-30 P M the suit will be decided ex-parte

S P Ranganatha Char
Honorary Secretary

Edited, Printed and published by A R Nagarajan at Sadhvi Press, D Subbiah Road, Mysore

... WEEKLY EDITION ಇಂದಿನ ಪತ್ರಿಕೆ ೬ ಕಾಸು

# ಸಾಧ್ವಿ

ಸಂಪುಟ ೧೪] ಶನಿವಾರ ೩೧-೧-೫೦ [ಸಂಚಿಕೆ ೩೮

# ಫಾರ್ಮೋಸಾದ್ವೀಪಕ್ಕೆ ಗಂಡಾಂತರ ಸನ್ನಿಹಿತ

ರಿಪಬ್ಲಿಕ್ ದಿನಾಚರಣೆ

ಕಳೆದ ಗುರುವಾರ ಅಖಿಲ ಕರ್ನಾಟಕ ಯೂನಿವರ್ಸಿಟಿ ಹಾಸ್ಟಲಿನ ವಿದ್ಯಾರ್ಥಿ ಸಂಘದವರು ಮಹಾರಾಜ ಕಾಲೇಜಿನ ಇಂಗ್ಲೀಷ್ ಅಸಿ॥ ಪ್ರೊ॥ ಶ್ರೀ ಟಿ ಕೆ ಸಂಬಯ್ಯಂಗಾರರವರ ಅಧ್ಯಕ್ಷತೆಯಲ್ಲಿ ರಿಪಬ್ಲಿಕ್ ದಿನಾಚರಣೆಯನ್ನು ನೆರವೇರಿಸಿದರು.

ಅದೇ ದಿನ ಎ ಕೆ ಪುರದ ಎ. ಟಿ. ಎಂ ಶಾಲೆಯ ಅಂಗಳದಲ್ಲಿ ಪೌರ ಸಭಾ ಸದಸ್ಯರಾದ ಶ್ರೀ ಜಿ. ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ದಿನಾಚರಣೆಯು ನಡೆಯಿತು.

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಕಳೆದ ಗುರುವಾರ ಶ್ರೀ ಜಿ ಎಸ್. ನಾಗರಾಜಯ್ಯನವರಿಂದ ಧ್ವಜಾರೋಹಣವು ನೆರವೇರಿತು. ಶ್ರೀ ಡಿ ಎಂ. ಸಿದ್ದಯ್ಯನವರು ಭಾಷಣ ಮಾಡಿದರು. ಇಂದ್ರ ಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದರಿಂದ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲ್ಪಟ್ಟಿತು.

ಮೊನ್ನೆ ಸದ್ವಿದ್ಯಾ ಪಾಠಶಾಲೆಯಲ್ಲಿ ಶಾಲೆಯ ಮ್ಯಾನೇಜರಾದ ಧರ್ಮಪ್ರವರ್ತ ಎ ಎಸ್ ರಂಗಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ದಿನಾಚರಣೆಯು ನಡೆಯಿತು. ವಿಸಾ ದೇಶಭಕ್ತರ ಗುಣಗಾನವು ನಡೆದು ರಾಜಪ್ರಮುಖರ ... ನಮೂ ಅದನಂತರ ಬಾಲಕರಿಗೆ ಸಿಹಿ ತಿಂಡಿ ಹಂಚಲಾಯಿತು.

ಮೊನ್ನೆ ದಿನ ಇಲ್ಲಿನ ವೆಸ್ಲಿ ಪ್ರೆಸ್ ... 'ಪಬ್ಲಿಷಿಂಗ್' ಹೌಸಿನಲ್ಲಿ ... ಮಿ॥ ಜೆ. ... ಅಧ್ಯಕ್ಷತೆಯಲ್ಲಿ ದಿನಾಚರಣೆ ನಡೆದು ಅಧ್ಯಕ್ಷರ ... ಧ್ವಜಾರೋಹಣವೂ ... ಸಂಗೀತ ಮತ್ತು ಮಂಗಳಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಚಾಮರಾಜಪುರದ ಕನ್ನಡ ಪ್ರೈಮರಿ ಸ್ಕೂಲಿನಲ್ಲಿ ನಡೆದ ದಿನಾಚರಣೆಯು ಅಂಗವಾಗಿ ದೇಶ ಮುಖಂಡರ ಭಾವಚಿತ್ರಗಳ ಮೆರವಣಿಗೆಯಾದನಂತರ ಶಾಲೆಯಲ್ಲಿ ಸಭೆ, ಬಾಲಕರಿಗೆ ಸಿಹಿ ತಿಂಡಿ ಹಂಚುವಿಕೆ ಮತ್ತು ರಾಷ್ಟ್ರ ಗೀತೆಗಳು ನಡೆದವು.

ಪ್ರಭಾ ಕಲಾವಿದರ ಆಶ್ರಯದಲ್ಲಿ ಶ್ರೀ ಎಸ್ ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ದಿನಾಚರಣೆಯನ್ನು ನೆರವೇರಿಸಲಾಯಿತು. ಶ್ರೀಗಳಾದ ಕುಮಾರಸ್ವಾಮಿ ಮತ್ತು ಲಿಂಗಣ್ಣನವರು ಭಾಷಣ ಮಾಡಿದರು. ... ಭಾರತದ ಅಧ್ಯಕ್ಷರ ವ್ಯಕ್ತಿತ್ವ ... ಕುರಿತು ಮಾತನಾಡಿದರು.

## ಪತ್ರಿಕೋದ್ಯೋಗಿಗಳ ಹೊಸ ಅಧಿಕಾರ ವರ್ಗ

ಮೈಸೂರು, ೨೯

ಈ ದಿನ ಬೆಂಗಳೂರು ನಗರದ ಪತ್ರಿಕೋದ್ಯೋಗಿಗಳ ಸಭೆಯು ಸೇರಿತು. ... ಶ್ರೀ ಟಿ ಕೆ ಕುಮಾರಸ್ವಾಮಿ ಯವರು ಅಧ್ಯಕ್ಷರಾಗಿಯೂ, ಶ್ರೀ ಟಿ ಕೃಷ್ಣ ... ಉಪಾಧ್ಯಕ್ಷರಾಗಿಯೂ, ಶ್ರೀ ಜಿ ಎಲ್ ... ಯವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಲೆಕ್ಕ ಪತ್ರಗಳ ಅಂಗೀಕಾರವಾಯಿತು. ಹಳೆಯ ಅಧಿಕಾರ ವರ್ಗದವರಿಗೆ ವಂದನೆಯನ್ನರ್ಪಿಸಲಾಯಿತು.

## ಸರ್ವೋದಯ ದಿನಾಚರಣೆ

ಮೈಸೂರು, ೨೯

ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ... [illegible] ... ದಿನ ಆಚರಿಸಲ್ಪಡುವುದು.

## ರಿಪಬ್ಲಿಕ್ಕಿನ ಸುಪ್ರೀಂ ಕೋರ್ಟಿನ ಆರಂಭ

[illegible]

## ರಿಪಬ್ಲಿಕ್ ದಿನಾಚರಣೆ

ಚಾಮರಾಜನಗರ, ನಂಜನಗೂಡು

ಮೊನ್ನೆ ದಿನ ... ಶ್ರೀ ... ಅಧ್ಯಕ್ಷತೆಯಲ್ಲಿ ದಿನಾಚರಣೆಯು ನಡೆಯಿತು. ಶ್ರೀ ... ಸಿದ್ದಯ್ಯನವರ ... [illegible]

[illegible]

## ಕಮ್ಯೂನಿಸ್ಟರಿಂದ ಫಾರ್ಮೋಸಾ ದ್ವೀಪದ ಆಕ್ರಮಣ ಸಿದ್ಧತೆ

ಚೀನೀ ರಾಷ್ಟ್ರೀಯ ಸರ್ಕಾರದ ಕೇಂದ್ರವಾದ ಫಾರ್ಮೋಸಾ ದ್ವೀಪದ ಮೇಲೂ ಮತ್ತು ಹೈನಾನ್ ದ್ವೀಪದ ಮೇಲೂ ಕಮ್ಯೂನಿಸ್ಟರ ... ಆರಂಭಿಸಲು ... ಲಕ್ಷ ಸೈನಿಕರನ್ನು ... [illegible]

## ಭಾರತ ಪಾರ್ಲಿಮೆಂಟಿನ ಅಧಿವೇಶನ

ಭಾರತದ ರಿಪಬ್ಲಿಕ್ಕಿನ ಪಾರ್ಲಿಮೆಂಟು ... ಆರಂಭವಾಯಿತು. ... ಶ್ರೀ ಮಾವಳಂಕರರು ... [illegible]

## ರಾಜಾಜಿಯವರಿಗೆ ಕೇಸರಿ ಪುಷ್ಪದ ಅರ್ಪಣೆ

ಹಿಂದಿನ ಗವರ್ನರ್ ಜನರಲ್ ರಾಜಾಜಿಯವರು ... ಪ್ರಧಾನಿ ನೆಹರೂರವರು, ... [illegible]

## ಅಮೆರಿಕ, ರಷ್ಯಗಳಲ್ಲಿ ಜಲಜನಕ ಬಾಂಬು ತಯಾರಿ

ಅಣು ಬಾಂಬಿಗಿಂತಲೂ ಭೀಕರವಾದ ಜಲಜನಕ ಬಾಂಬುಗಳ ... [illegible]

## ಕೆಂಪು ಚೀಣಕ್ಕೆ ರಷ್ಯದ ಮಿಲಿಟರಿ ಸಹಾಯ

ಕೆಂಪು ಚೀಣ ಮತ್ತು ರಷ್ಯಗಳಿಗೆ ಪರಸ್ಪರ ಸಹಾಯದ ಬಗ್ಗೆ ಒಂದು ರಹಸ್ಯ ಕರಾರು ನಡೆದಿರುವುದೆಂದು ವರದಿಯಾಗಿದೆ. ಇದರ ಪ್ರಕಾರ ಚೀಣದಲ್ಲಿ ಕೊಮಿಂಟಾಂಗ್ ಪಕ್ಷದ ಪ್ರತಿಭಟಕರನ್ನು ಎದುರಿಸಲು ಕಮ್ಯೂನಿಸ್ಟರಿಗೆ ರಷ್ಯವು ಮಿಲಿಟರಿ ಮತ್ತು ಇತರ ತಾಂತ್ರಿಕ ಬೆಂಬಲ ನೀಡುವುದು. ಮತ್ತು ಬಲಯುತವಾದ ಕಮ್ಯೂನಿಸ್ಟ್ ವೈಮಾನಿಕ ಪಡೆಯನ್ನು ರಚಿಸಲು ಸಹಾಯ ನೀಡುವುದು. ಇದಕ್ಕೆ ಪ್ರತಿಯಾಗಿ ಕಮ್ಯೂನಿಸ್ಟ್ ಚೀಣೀಯರು ಮಂಚೂರಿಯಾ ಮತ್ತು ಸಿಂಕಿಯಾಂಗ್‌ಗಳಲ್ಲಿ ರಷ್ಯದ ಸೈನ್ಯಗಳನ್ನಿಟ್ಟುಕೊಳ್ಳಲು ಅವಕಾಶ ಕೊಡುವುದು ಮತ್ತು ಯೂರೋಪಿನಲ್ಲಿ ಯುದ್ಧವೇನಾದರೂ ಸಂಭವಿಸಿದರೆ ರಷ್ಯದ ಸಹಾಯಕ್ಕೆ ಒಂದು ಲಕ್ಷ ಮಂದಿ ಸೈನಿಕರನ್ನೂ ಮತ್ತು ಹತ್ತು ಲಕ್ಷ ಮಂದಿ ಕಾರ್ಮಿಕರನ್ನೂ ಕಳುಹಿಸುವುದು.

## ರಷ್ಯಕ್ಕೆ ಅಮೆರಿಕ ವಿಮಾನ ಯಂತ್ರಗಳ ಕಳ್ಳರವಾನೆ

ಅಮೆರಿಕದ ವಿಮಾನಗಳ ಎಂಜಿನ್ನುಗಳು ಮತ್ತು ಇತರ ಉಪಕರಣಗಳೂ ಅಕ್ರಮವಾಗಿ ಕಳ್ಳತನದಿಂದ ರಷ್ಯಕ್ಕೆ ಸಾಗುತ್ತಿರುವುವೆಂದೂ, ಈ ಬಗ್ಗೆ ಅಮೆರಿಕದ ಅಧಿಕಾರಿಗಳು ಪತ್ತೆ ಕಾರ್ಯ ನಡೆಸುತ್ತಿರುವರೆಂದೂ ವರದಿಯಾಗಿದೆ.

## ಬಿಹಾರ್ ಸಕ್ಕರೆ ಕಾರ್ಖಾನೆ ಕೆಲಸಗಾರರ ಮುಷ್ಕರ

ಬಿಹಾರ್ ಮತ್ತು ಸಂಯುಕ್ತ ಸಂಸ್ಥಾನಗಳ ಸಕ್ಕರೆ ಕಾರ್ಖಾನೆ ಕಾರ್ಮಿಕರು ೧೩ ಬೇಡಿಕೆಗಳನ್ನು ಸಲ್ಲಿಸಿ ಅವುಗಳನ್ನು ನೆರವೇರಿಸಿಕೊಡದಿದ್ದಲ್ಲಿ ಬರುವ ತಿಂಗಳು ೧೫ನೇ ತಾರೀಕಿನಿಂದ ಮುಷ್ಕರ ಹೂಡುವುದಾಗಿ ತಿಳಿಸಿದ್ದಾರೆ.

## ಸರ್ಕಾರಿ ನೌಕರರ ಮುಷ್ಕರ ನಿರೋಧ ಶಾಸನ

ಇನ್ನು ಮುಂದೆ ಸರ್ಕಾರಿ ನೌಕರರು ಹೂಡಬಹುದಾದ ಮುಷ್ಕರಗಳು ಶಾಸನ ಬಾಹಿರವೆಂದು ಸಾರುವ ಬಗ್ಗೆ ಅಗತ್ಯವಾದ ಕಾನೂನುಗಳನ್ನು ಭಾರತ ಕೇಂದ್ರ ಸರ್ಕಾರದವರು ಇಷ್ಟರಲ್ಲೇ ರಚಿಸಲಿರುವರು. ಆದರೆ ಸರ್ಕಾರಿ ನೌಕರರ ಕುಂದುಕೊರತೆಗಳನ್ನು ವಿಚಾರಿಸಲು ಸೂಕ್ತವಾದ ಒಂದು ವಿಧಾನವನ್ನು ರಚಿಸಲಾಗುವುದೆಂದೂ ಮತ್ತು ನೌಕರರು ರಚಿಸುವ ಸಂಘಕ್ಕೆ ಮಾನ್ಯತೆ ಮತ್ತು ಸ್ವಾತಂತ್ರ್ಯಗಳನ್ನು ಕೊಡಲಾಗುವುದೆಂದೂ, ಅವುಗಳಿಗೆ ಮುಷ್ಕರವನ್ನು ಪ್ರಕಟಿಸುವ ಅಧಿಕಾರವಿರುವುದಿಲ್ಲವೆಂದೂ ಹೇಳಲಾಗಿದೆ.

## ಸಂಗೀತ ಮತ್ತು ಹರಿಕಥೆ

ಈ ಸಂಜೆ ೬ ಘಂಟೆಗೆ ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಚಿಕಿತ್ಸಾಲಯದಲ್ಲಿ ಅ॥ವಿ॥ಬಿ ವರದರಾಜಯ್ಯಂಗಾರ್ಯರ ಹಾಡುಗಾರಿಕೆಯು ವಿ॥ಬಿ ಕೆ. ವೆಂಕಟರಾಮಯ್ಯನವರ ಪಿಟೀಲು ಮತ್ತು ಅ॥ವಿ॥ ಕೇಶವಪ್ಪನವರ ಮೃದಂಗದೊಡನೆ ಜರುಗುವುದು. ರಾತ್ರಿ ೯ ಘಂಟೆಗೆ ಶ್ರೀಗಳಾದ ಸಂಜೀವ ದಾಸರು ಮತ್ತು ರಾಮದೇವದಾಸರಿಂದ "ಶ್ರೀರಾಮ ಕಬೀರ್ ಸಂವಾದ" ಎಂಬ ಹರಿಕಥೆಯು ನಡೆಯುವುದು.

## ವಾರ ಭವಿಷ್ಯ

ತಾ|| ೨೯-೧-೫೦ರಿಂದ ೪-೨-೫೦ರ ವರೆಗೆ

ಮೇಷ—ವ್ಯಾಪಾರಾದಿಗಳಲ್ಲಿ ಪ್ರಗತಿ, ಆರೋಗ್ಯ ನೆಟ್ಟಗೆ, ದೊಡ್ಡವರ ಪರಿಚಯ ಕೋರ್ಟಿನ ಕಾರ್ಯದಲ್ಲಿ ಜಯ. ಸ್ತ್ರೀಯರೆಗಳಲ್ಲಿ ಕಾತರ ತಾ| ೩೦, ೩೧ ಕಾರ್ಯದ ಸಫಲತೆ ಅಲ್ಪ ಪ್ರವಾಸ

ವೃಷಭ — ರಣಕಾರಿನ ವೃತ್ತಿಯಿಂದ ವಾದ ಒಳ್ಳೆಯದು ಆರೋಗ್ಯ ನೆಟ್ಟಗೆ ಇಚ್ಛಿತ ಕಾರ್ಯಗಳ ಸಿದ್ಧಿ ಜವಾನ ತಕರಾರಿನ ಪರಿಹಾರ. ತಾ| ೧, ೨, ಪ್ರವಾಸ ಮತ್ತು ಪತ್ರಾಗಮನ

ಮಿಥುನ—ಸಧ್ಯದ ವಾರ ಅನುಕೂಲ ವೃಷ್ಟಿ ಆದ್ದರಿಂದ ಎಚ್ಚರಿಕೆ ಬೇಕು. ಆರೋಗ್ಯದ ಕಡೆಗೆ ಗಮನವಿರಲಿ ಶತ್ರುಗಳು ಹೆಚ್ಚುವರು ಆಪ್ತರಾಗಳ ಸಂಬಂಧ ಆಸ್ತಿ ಪಾಸ್ತಿಗಳ ತಕರಾರು ವ್ಯಾಪಾರಾದಿಗಳಲ್ಲಿ ಗೊಂದಲ ಬಿಟ್ಟನಿಸ್ಸ ತ್ರಿ ಸ ತಾ| ೨೯, ೩೦ ಪ್ರಿಯ ಜನ ವಿಯೋಗ, ಕಷ್ಟ ಅಗ್ನಿ ಭಯ

ಕರ್ಕ —ಬಂಧುವಾದ ಸಾಧುಕರ ಮ ರಣ್ಣ ಕಾರ್ಯಗಳ ಸಿದ್ಧಿ ವಿವಾಹಗಳ ನಿಶ್ಚಿತಾರ್ಥ ಸರ್ಕಾರದವರಿಂದ ನಿಮಗೆ ಅನುಕೂಲವಾದ ಕ್ಷಿಪ್ರ ನೌಕರಿ ದಂಧೆಗಳಲ್ಲಿ ಉತ್ಸಾಹದ ಘಟನೆ ತಾ| ೩೦, ೩೧ ಅತಿ ೯, ಬರವಣಿಗ ಸಹಾಯ

ಸಿಂಹ —ವಾರ ಮಿಶ್ರವಾದುದು ಪ್ರಯತ್ನಗಳಿಗ ಫಲವು ಚ ಅನಾರೋಗ್ಯ ಆರೋಗ್ಯ ನೆಟ್ಟಗ ನೌಕರಿ ವ್ಯಾಪಾರಾದಿಗಳಲ್ಲಿ ಇಚ್ಛಿತ ಘಟನೆಗಳು ನಡೆಯುವವು ಹಣದ ಲಾಭ ತಾ|| ೧ ೨ ಅಕಸ್ಮಾತ್ ಖರ್ಚು

ಕನ್ಯಾ — ಹಿಂದಿನ ಜಾಗರೂಕತೆಯು ಅವಶ್ಯಕ ಆರೋಗ್ಯಕ್ಕೆ ಗಮನ ಕೊಡಿ ಅಕಸ್ಮಿಕ ಜವಾಬ್ದಾರಿ [illegible] ದೂ ಸಲ್ಲಿಸಲ್ಲ ತಾ|| ೨೯, ೩ ಸಂಕಟನಾ [illegible]

ತುಲಾ —ವ್ಯಾಪಾರಾದಿಗಳಲ್ಲಿ ಅಕಸ್ಮಿಕ [illegible] ನೌಕರಿಯಲ್ಲಿ ಕಲ್ಪದ ಕೇಂದರಿ. ಆರೋಗ್ಯಕ್ಕೆ ಕ್ಷೇಮ [illegible] ತಾ|| ೩೦ ೩೧ ಚಿಂತಾ ವಾರ ಮಿತ್ರ ಸಹಾಯ

ವೃಶ್ಚಿಕ — [illegible] ಉತ್ಸಾಹ, [illegible] ಸಹಕಾರ [illegible] ಆರೋಗ್ಯ ನೆಟ್ಟಗ ಧನಲಾಭ ತಾ ೩೦ ೩೧ ಮಿತ್ರ ಜನರ ಭೇಟಿ ಧರ್ಮ ಸಂಕಟ ವಿಶೇಷ ಖರ್ಚು

ಧನು — ಜಭಾವರೇ ವ್ಯಾಪಾರಾದಿಗಳಲ್ಲಿ ಉತ್ಕರ್ಷ ವಾಹನ ಸೌಖ್ಯ ಶುಭ ಸಂದರ್ಭ ವಿವಾಹ ಪ್ರಯತ್ನ ತಾ|| ೧, ೨ ತಾ ತ್ರಿಕ ವ [illegible] ಖರ್ಚು

ಮಕರ— ಬಾರವನ್ನೂ ಭಾವಿಸಿದ್ದು ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಪ್ರಗತಿ, ತಾ ೧, ೨ ಧನಲಾಭ ಶುಭವಾರ್ತೆ

ಕುಂಭ — ಅನಿರೀಕ್ಷಿತ ಘಟನೆಯು ಸಂಭವ ಆರೋಗ್ಯ ನೆಟ್ಟಗಿರದು. ವ್ಯಾಪಾರ ವ್ಯವಹಾರಗಳಲ್ಲಿ ಗ ಡಾಂತರ ಅಲ್ಪ ಕಷ್ಟ [illegible] ತಾ|| ೨೯ [illegible]

ಮೀನ — ಹಿಂದಿನ [illegible] ನಡೆವ [illegible] ಆರೋಗ್ಯ ನೆಟ್ಟಗ [illegible] [illegible] ತಾ|| [illegible]

## ಪ್ರಧಾನಿಯವರಿಂದ ಶ್ರೀ ರೆಡ್ಡಿಯವರಿಗೆ ಅಭಿನಂದನೆ

ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂರವರು ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರಿಗೆ ಮೊನ್ನೆ ತಂತಿಯನ್ನು ಕಳುಹಿಸಿ ಅವರಿಗೆ, ಅವರ ಸರಕಾರಕ್ಕೆ ಮತ್ತು ಪ್ರಜೆಗಳಿಗೆ ಸ್ವಾತಂತ್ರ್ಯ ಮತ್ತು ಅಭೀಷ್ಟ ಸಿದ್ಧಿಯ ದಿನದ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ ಇದಕ್ಕೆ ಉತ್ತರವಾಗಿ ಶ್ರೀ ರೆಡ್ಡಿಯವರು ಕೃತಜ್ಞತಾ ವಂದನೆಗಳನ್ನು ಸಲ್ಲಿಸಿ, ದರ್ಬಾರು ಚೆನ್ನಾಗಿ ನಡೆಯಿತೆಂದು ತಿಳಿಸಿರುವರು

ಇದಲ್ಲದೆ ಭಾರತದ ಗೌರ್ನರ್ ಜನರಲ್ಲಾಗಿದ್ದ ಶ್ರೀ ಸಿ ರಾಜಗೋಪಾಲಾಚಾರಿಯವರಿಗೂ, ನೂತನ ಅಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದರಿಗೂ ಅಭಿನಂದನಾ ತಂತಿಗಳನ್ನು ಕಳುಹಿಸಿದ್ದಾರೆ

ಭಾರತದ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರು ಶ್ರೀಮನ್ಮಹಾರಾಜರವರಿಗೆ ಶುಭಾಶಯಗಳನ್ನು ಕಳುಹಿಸಿ ಅವರು ಸಂಸ್ಥಾನದ ರಾಜ ಪ್ರಮುಖರಾದುದಕ್ಕಾಗಿ ಸಂತೋಷವನ್ನು ವ್ಯಕ್ತಗೊಳಿಸಿದ್ದಾರೆ. ಶ್ರೀಮನ್ಮಹಾರಾಜರವರು ಸಹ ಧನ್ಯವಾದವನ್ನು ಸೂಚಿಸಿರುತ್ತಾರೆ

### ವಿವಿಧ ವಿನೋದಾವಳಿ

ರಾಜಭಾಷೆಯ. ಶಿಲ್ಪ ಸಂಘದ ಸಹಾಯಾರ್ಥವಾಗಿ ಈ ಸಂಜೆ ೬ ಘಂಟೆಗೆ ಟೌನ್‌ಹಾಲಿನಲ್ಲಿ ವಿವಿಧ ವಿನೋದಾವಳಿಯನ್ನು ಏರ್ಪಡಿಸಲಾಗಿದೆ ಟಿಕೆಟು ಮೂಲಕ ಪ್ರವೇಶ ಸರ್ವರೂ ಉದಾರವಾಗಿ ಸಹಾಯ ನೀಡಬೇಕೆಂದು ಕೋರಲಾಗಿದೆ.

### ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಲಾವಣಿ ವಿಶಕಂಠರಾಯರು

ಮೈಸೂರು ಜಿಲ್ಲೆಯ ಗ್ರಾಮಾಭಿವೃದ್ಧಿ ಪ್ರಚಾರಕ್ಕಾಗಿ ಲಾವಣಿ ವಿದ್ವಾಂಸರಾದ ಶ್ರೀ ಎಸ್ ವಿಶಕಂಠರಾಯರನ್ನು ಹಂಗಾಮಿಯಾಗಿ ನೇಮಿಸಲಾಗಿದೆ

### ಕ್ಯಾಲೆಂಡರುಗಳ ಸ್ವೀಕಾರ

ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀ ಶಿವಾನಂದ ಎಲೆಕ್ಟ್ರಿಕ್ ಸ್ಟೋರ್ಸಿನವರೂ ಹಳ್ಳದಕೇರಿಯಲ್ಲಿರುವ ಆನಂದ ಪವರ್ ಪ್ರೆಸ್ಸಿನವರೂ ಬೆಂಗಳೂರಿನಲ್ಲಿರುವ ಶ್ರೀ ರಂಗನಾಥ ಟೈಪ್ ಫೌಂಡ್ರಿಯವರೂ ಕಳುಹಿಸಿಕೊಟ್ಟಿರುವ ನೂತನ ವರ್ಷದ ಕ್ಯಾಲೆಂಡರುಗಳನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ


# ರಾಜಕಮಲ್

ಮೈಸೂರು

**27—1—50 ರಿಂದ**

ಜನಭರಿತವಾದ ೬ನೇ ವಾರ

ದಿನವಹಿ 3 ಪ್ರದರ್ಶನಗಳು

# ಜೀವನ

— ಭೂಮಿಕೆ —

ವೈಜಯಂತಿಮಾಲಾ, ಟಿ ಆರ್ ರಾಮಚಂದ್ರ, ಲಲಿತ-ಪದ್ಮಿನಿ


Edited, Printed and published by A R Nagaraja at Sadhvi Press, D Subbiah Road, Mysore

## ಕಲ್ಕತ್ತದಲ್ಲಿ ರಿಪಬ್ಲಿಕ್ ವಿರುದ್ಧ ಪ್ರದರ್ಶನ

ಕಲ್ಕತ್ತಾದಲ್ಲಿ ಮೊನ್ನೆ ಎಡ ಕಮ್ಯೂನಿಸ್ಟರು ರಿಪಬ್ಲಿಕ್ ವಿರುದ್ಧ ಮೆರವಣಿಗೆಯನ್ನು ನಡೆಸಲು ಏರ್ಪಡಿಸಿದ್ದರು ಈ ಸಂದರ್ಭದಲ್ಲಿ ಗಲಭೆ ನಡೆದು ಪೊಲೀಸರು ಟಿಯರ್ ಗ್ಯಾಸ್, ಲಾಠಿ ಮತ್ತು ಗುಂಡುಗಳ ಪ್ರಯೋಗ ಮಾಡಲಾಗಿ ಇಬ್ಬರು ಮರಣ ಹೊಂದಿದರು ೭೫ ಮಂದಿ ಗಾಯಗೊಂಡಿದ್ದಾರೆ [illegible] ಪೋಲೀಸರ ಮೇಲೆ ಕಲ್ಲುಗಳನ್ನೂ ಬಾಂಬುಗಳನ್ನೂ ಎಸೆದರೆಂದು ವರದಿಯಾಗಿದೆ

## ಮಸೀದಿ ಮುಂದೆ ವಾದ್ಯದ ನಿರ್ಬಂಧ ತಪ್ಪಿತು

ಹೈದರಾಬಾದು ಸಂಸ್ಥಾನದ ಮಸೀದಿಗಳ ಹತ್ತಿರ ವಾದ್ಯ ಬಾರಿಸಬಾರದೆಂದ ಹಾಕಲಾಗಿದ್ದ ನಿಷೇಧವನ್ನು ಮಿಲಿಟರಿ ಗವರ್ನರ್ ವೆಲ್ಲೋಡಿಯವರು ತೆಗೆದುಹಾಕಿರುತ್ತಾರೆ

## ನಿಜಾಮರ ಮೋಟಾರ್ ಬಾಂಬಿನ ಬಗ್ಗೆ ವಿಚಾರಣೆ

ಹಿಂದೂ ಮಹಾ [illegible] ನೆನ್ನೆ ಬೊಂಬಾಯಿಯಲ್ಲಿ [illegible] ನಿಜಾಮರ ಮೋಟಾರ್ ಬಾಂ [illegible] ವನ ಕೃತ್ಯವನ್ನು ಖಂಡಿಸಿ [illegible] ಮಹಾಸಭೆಯವರು [illegible]

ಮೈಸೂರು [illegible] ನೆಂಬ [illegible]

ಶ್ರೀಮನ [illegible] ಕರೆದ ಬ [illegible] ಭವಾರೆ ಬಂದ [illegible] ನ್ನ [illegible] ರಾಜ್ಯ [illegible] ಸಭೆ [illegible] ಪ್ರಜಾಪ್ರಭುತ್ವ ಗೂ ತೃಪ್ತಿಬೇಂದು [illegible]

### ಸೋದರಿ— ವಾರ ಪತ್ರಿಕೆ

ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರು ಮಹಿಳೆಯರಿಗಾಗಿ 'ಸೋದರಿ' ಎಂಬ ಹೆಸರಿನ ಕನ್ನಡ ವಾರಪತ್ರಿಕೆಯನ್ನು ಬೆಂಗಳೂರಿನಿಂದ ಹೊರಡಿಸುವರು ಇದು ಪ್ರತಿ ಭಾನುವಾರವೂ ಪ್ರಕಟವಾಗುವುದು ಇದರ ವಾರ್ಷಿಕ ಚಂದಾ ರೂ ೬-೦-೦ ಈ ಪತ್ರಿಕೆಗೆ ಮಹಿಳೆಯರ ಅಭ್ಯುದಯದಲ್ಲಿ ಆಸಕ್ತಿಯುಳ್ಳವರೆಲ್ಲರೂ ಪ್ರೋತ್ಸಾಹ ನೀಡಬೇಕೆಂದು ಕೋರಲಾಗಿದೆ

### ಶಾರದಾ ಪೂಜೆ

ಎ ಡಿ ಜೈನ ಬ್ರಾಹ್ಮಣ ವಿದ್ಯಾರ್ಥಿನಿಲಯದ ವಿದ್ಯಾರ್ಥಿ [illegible] ಆಶ್ರಯದಲ್ಲಿ ನೆನ್ನೆ ಸಂಜೆ ಶಾರದಾ ಪೂಜೆಯು ವಿಜೃಂಭಣೆಯಿಂದ [illegible] ಈ ಸಮಾರಂಭದಲ್ಲಿ [illegible] [illegible] [illegible] [illegible] ಮಾಡಿದರು


[illegible]

NEW [illegible]

Double Crown [illegible]

Newsprint [illegible] at

SADHVI OFFICE

[illegible]


## ಬಹಿರಂಗ ಸಭೆ

ಮೈಸೂರು ೨೮

ಪೌರಸಭಾಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೊಂದು ಟವರ್ ಹಾಲಿನಲ್ಲಿ ನಡೆಯಿತು ರಿಪಬ್ಲಿಕ್ ಸ್ಥಾಪನೆಯ ಸಮಾರಂಭದಲ್ಲಿ ಪೌರಸಭೆಯವರು ಏರ್ಪಡಿಸಿದ್ದ ಕಾರ್ಯಕ್ರಮಗಳ ಬಗ್ಗೆ ನಡೆದ ವಿಷಯಗಳನ್ನು ವಿಮರ್ಶಿಸಿ ಭಾಷಣಗಳಾದವು ಶ್ರೀಮತಿ ಬೆಳ್ಳಿಯಪ್ಪ, ಎಸ್. ರಂಗರಾಮಯ್ಯ, ಮಿಸ್ಟರ್ ನೂರ್ ಅಹಮದ್ ಸೇಠ್, ರಾವ್ ಬಹದ್ದೂರ್ ರಾಮಸ್ವಾಮಿ, ಸಿ ಆರ್ ನರಸಿಂಹಶಾಸ್ತ್ರಿ, ಎಂ ಎನ್ ಜೋಯಿಸ್ ಮುಂತಾದವರಿಂದ ಭಾಷಣಗಳಾದವು ಕ್ರೀಡೆ ಮುಂತಾದವುಗಳಿಗೆ ಗೆದ್ದವರಿಗೆ ಬಹುಮಾನ ವಿನಿಯೋಗವಾಯಿತು

### ಮಧ್ವನವಮಿ ಆಚರಣೆ

ಸುಬ್ರಾಯನ ಕೆರೆ ಏರಿಯ ಮೇಲಿರುವ ಶ್ರೀರಾಮ ದೇವರ ದೇವಸ್ಥಾನದಲ್ಲಿ ಮಧ್ವನವಮಿಯು ಆಚರಿಸಲ್ಪಟ್ಟಿತು ಪ್ರಾತಃಕಾಲ ದೇವರಿಗೆ ಮತ್ತು ರಾಘವೇಂದ್ರ ಗುರುಗಳ ಬೃಂದಾವನಕ್ಕೆ ಅಭಿಷೇಕ ಪಾರಾಯಣ, ಪೂಜೆ ಮಂಗಳಾದಿಗಳು ನಡೆದವು ಸಂಜೆ ೬|| ಘಂಟೆಗೆ ಉಪನಿಷತ್ತು [illegible] ಚೇ [illegible] ಪಳ್ಳಿ, ರಘುನಾಥಾಚಾರ್ಯರಿಂದ ಆಚಾರ್ಯರ ಮಹಿಮೆ ವಿಷಯವಾಗಿ ಅಮೋಘವಾದ ಭಾಷಣವಾಯಿತು ಶ್ರೀ [illegible] ಗುರುರಾಜಾಚಾರ್ಯರ ಧನ್ಯವಾದ ಮಂಗಳಾರತಿಗಳಾದ ನಂತರ ಕಾರ್ಯಕ್ರಮಗಳು ಮುಕ್ತಾಯವಾದವು

### "ನಿತ್ಯಾನುಸಂಧಾನಂ"

ಮೇಲುಕೋಟೆಯ ಶ್ರೀಶಾನ ದಾಸ [illegible] ಅನೇಕ ಕುಸುಮವಾಗಿ ಪ್ರಕಟವಾಗಿರುವ 'ನಿತ್ಯಾನುಸಂಧಾನಂ' [illegible] ನಮ್ಮ ಹಸ್ತಗತವಾಗಿದೆ ಆಳ್ವಾರುಗಳ ಕೆಲವು ಪ್ರಬಂಧಗಳು ಇದರಲ್ಲಿ ಕೊಡಲ್ಪಟ್ಟಿವೆ ಭಗವದ್ಭಕ್ತರು ಪ್ರತಿದಿನವೂ ಪೂಜೆಯಕಾಲದಲ್ಲಿ ಪಾರಾಯಣ ಮಾಡಲು ಈ ಗೀತೆಗಳು ಅನುಕೂಲವಾಗಿವೆ ಶ್ರೀ ಆ ನ ಶ್ರೀನಿವಾಸ [illegible] ಇದರ ಅನುವಾದಕರು ಬೆಲೆ ೧ ರೂ

## ಬೆಂಗಳೂರಿನಲ್ಲಿ ರಿಪಬ್ಲಿಕ್ ಸಡಗರ

ಬೆಂಗಳೂರು ೨೮

ರಿಪಬ್ಲಿಕ್ಕಿನ ಆರಂಭೋತ್ಸವದ ಅಂಗವಾಗಿ ರಾಜಪ್ರಮುಖರು ನೆನ್ನೆ ಇಲ್ಲಿನ [illegible] ಮೈದಾನದಲ್ಲಿ ಕೊಡಗಿನಾದ [illegible] ವನ್ನು ವೀಕ್ಷಿಸಿದ್ದರು ೨ ಸಾವಿರ ಮಂದಿ ಅತಿಥಿಗಳು ಆಗಮಿಸಿದ್ದರು

ರೆಡ್ಡಿಯವರ ದೇಹಸ್ಥಿತಿ ಉತ್ತಮ

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಕೊಂಚ ಗುಣಮುಖರಾಗಿದ್ದಾರೆಂದು ಹೇಳಲಾಗಿದೆ


# ಗಾಯತ್ರೀ ಟಾಕೀಸ್

29-1 50 ರಿಂದ [illegible] ದಿನಗಳು ಮಾತ್ರ,

ದಿನವಹಿ 3 ಆಟಗಳು

[illegible] ಪತ್ತೇದಾರಿ ಚಿತ್ರ

# ದಿ ವೆಬ್

[illegible], [illegible]

ರೀ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಸೋಮವಾರ ೩೦-೧-೫೦ [ಸಂಚಿಕೆ ೧೫೫

# ನಾಡಿನಲ್ಲೆಲ್ಲಾ ಇಂದು ಸರ್ವೋದಯ ಆಚರಣೆ

## ಧ್ವಜಾರೋಹಣ

ಮೈಸೂರು ೩೦

ಸುಭಾಷ್ಚಂದ್ರ ಬೋಸರ ಜನ್ಮದಿನದ ಸಂಬಂಧವಾಗಿ ಈ ದಿನ ಟೌನ್ ಹಾಲ್ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿಯವರು ರಾಷ್ಟ್ರಧ್ವಜರೋಹಣವನ್ನು ಏರ್ಪಡಿಸಿದ್ದರು. ಶ್ರೀ ಚನ್ನಯ್ಯನವರ ಧ್ವಜವನ್ನು ಹಾರಿಸಿದರು.

ಈ ಸಂಜೆ ೫ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಸರ್ವೋದಯ ದಿನಾಚರಣೆ ಸಂಬಂಧವಾಗಿ ಸಾಮೂಹಿಕ ಪ್ರಾರ್ಥನೆ ಸಭೆಯನ್ನು ಏರ್ಪಡಿಸಲಾಗಿದೆ. ಸರ್ವರೂ ಇದರಲ್ಲಿ ಭಾಗವಹಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯವರು ಕೋರಿರುತ್ತಾರೆ.

## ರಿಪಬ್ಲಿಕ್ ದಿನಾಚರಣೆ

ಚಾಮುಂಡಿಪುರದ ಬಾಲ ಪ್ರಪಂಚದ ಮಕ್ಕಳು ಮೊನ್ನೆ ಶ್ರೀ ಎಂ. ಎಸ್. ಶಂಕರ್ ರವರ ಅಧ್ಯಕ್ಷತೆಯಲ್ಲಿ ರಿಪಬ್ಲಿಕ್ ದಿನಾಚರಣೆಯನ್ನು ನೆರವೇರಿಸಿದರು. ಧ್ವಜಾರೋಹಣವಾದ ನಂತರ ಶ್ರೀಮತಿ [illegible] ರವರಿಂದ ರಾಷ್ಟ್ರಗೀತೆಗಳೂ, "ಪ್ರಜಾಪ್ರಭುತ್ವ"ದ ವಿಷಯವಾಗಿ ಭಾಷಣವೂ ಜರಗಿದವು. ರಾಷ್ಟ್ರಗೀತೆ ಮತ್ತು ಮಕ್ಕಳಿಗೆ ಸಿಹಿ ಹಂಚಿಕೆಯಾದ ನಂತರ ಸಮಾರಂಭವು ಮುಕ್ತಾಯವಾಯಿತು.

ಕಳೆದ ಬುಧವಾರ ನಂಜನಗೂಡು [illegible] ಹೆಮ್ಮರಗಾಲಲ್ಲಿ ಗ್ರಾಮ [illegible] ಶ್ರೀ [illegible] ರವರ ಅಧ್ಯಕ್ಷತೆಯಲ್ಲಿ ದಿನ ಜರುಗಿತು. [illegible] ರಾಜಪ್ರಭುತ್ವ [illegible] ಮೆರವಣಿಗೆ ನಡೆಯಿತು. [illegible] ಶ್ರೀರಂಗ [illegible] ಪ್ರಜಾಪ್ರಭುತ್ವದ ವಿಷಯವಾಗಿ ಭಾಷಣ ಮಾಡಿದರು. ಮಕ್ಕಳಿಗೆ ಸಿಹಿ ತಿಂಡಿ ಹಂಚಿಕೆಯಾದ ನಂತರ ಸಮಾರಂಭವು ಮುಕ್ತಾಯವಾಯಿತು.

## ಅಗ್ನಿಹೋತ್ರ ಸಮಾರಂಭ

ಮೈಸೂರು ೩೦

ರಾಜಧಾನಿಯ ಚಾಮುಂಡಿಪುರದ [illegible] ನೇ ನಂಬರ್ ಮನೆಯಲ್ಲಿ ವೇ॥ ಶ್ರೀ ಯಜ್ಞೇಶ್ವರ ಸೋಮಯಾಜಿಗಳು ಲೋಕಕಲ್ಯಾಣಾರ್ಥವಾಗಿ ಆಸ್ತಿಕ ಸಜ್ಜನರುಗಳ ಸಹಕಾರದಿಂದ ಅಗ್ನಿಹೋತ್ರ ಪುನರುಜ್ಜೀವನದ ಸಮಾರಂಭ ಕೈಗೊಂಡಿರುತ್ತಾರೆ. ಇವರು [illegible] ಅಗ್ನಿಹೋತ್ರ [illegible] ವರ್ಷಗಳಿಂದ [illegible] ಇದನ್ನು ಪುನಃ [illegible] ಮೊನ್ನೆ [illegible] ಕಾರ್ಯಕ್ರಮಗಳು ಜರುಗಿದವು. [illegible] ಅಗ್ನಿ [illegible] ಗುರುವಾರ ಬೆಳಿಗ್ಗೆ [illegible] ನಡೆಯುವವು. [illegible] ಭಾಗವಹಿಸಬೇಕೆಂದು ಶ್ರೀ [illegible] ಕೋರಿರುತ್ತಾರೆ.

## ನೇತಾಜಿ ಫುಟ್‌ಬಾಲ್ ಕ್ಲಬ್

ಮೈಸೂರು ೩೦

ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿರುವ ನೇತಾಜಿ ಫುಟ್‌ಬಾಲ್ ಕ್ಲಬ್ಬಿನ ದ್ವಿತೀಯ ವಾರ್ಷಿಕೋತ್ಸವವು ನಿನ್ನೆ ಶ್ರೀ ಎಸ್. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀರಂಗಪಟ್ಟಣದ ವಿರ್ಧ [illegible] ಶಿಸ್ತಿನಿಂದ [illegible] ನಡೆಯಿತು. ಬೆಳಿಗ್ಗೆ ಧ್ವಜಾರೋಹಣವಾಯಿತು. [illegible] ಕ್ಲಬ್ಬಿನ [illegible] ಶ್ರೀ [illegible] ಭಾಷಣ ಮಾಡಿ [illegible] ಕರೆಕೊಟ್ಟರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ [illegible] ಭಾವನೆಯನ್ನು ಬೆಳೆಸಬೇಕೆಂದು ಹೇಳಿದರು. ಆನಂತರ ಫೋಟೋ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

### ಆರ್ಕೆಸ್ಟ್ರಾ ವಾದನ

ಶ್ರೀ ದೊಡ್ಡರಾಮ ದೇವಸ್ಥಾನದಲ್ಲಿ ನಾಳೆ ಸಂಜೆ ಆರು ಘಂಟೆಗೆ ಪ್ರದೋಷದ ಪ್ರಯುಕ್ತ ಭಕ್ತಾದಿಗಳಿಂದ ಆರ್ಕೆಸ್ಟ್ರಾ ವಾದನವು ನಡೆಯುತ್ತದೆ.

## ಅಶೋಕ ಸ್ಥಂಭದ ನೋಟುಗಳು

ಅಶೋಕ ಸ್ಥಂಭದ ನೋಟುಗಳನ್ನು ಭಾರತದ ಎಲ್ಲಾ ಕಡೆಗಳಲ್ಲೂ ಮೊನ್ನೆಯಿಂದ ಚಲಾವಣೆಗೆ ತರಲಾಗಿದೆ. ಒಂದು ರೂಪಾಯಿನ ನೋಟನ್ನು ಭಾರತ ಸರಕಾರದ ಹಣಕಾಸಿನ [illegible] [illegible] ಹತ್ತು [illegible] ನೋಟುಗಳನ್ನು ರಿಸರ್ವ್ ಬ್ಯಾಂಕಿನವರು ಹೊರಡಿಸಿದ್ದಾರೆ.

## ಅಸ್ಸಾಂ ಮೇಲೆ ಪಾಕಿಸ್ತಾನ ಸರಕಾರದ ದೂರು

ಅಸ್ಸಾಂ ಸರಕಾರದವರು ತನ್ನ ಪ್ರಾಂತದಲ್ಲಿನ [illegible] ಪಾಕಿಸ್ತಾನ [illegible] ದಾರರಿಂದ [illegible] ಭಾರತಕ್ಕೆ ದೂರು ಕೊಟ್ಟಿರುತ್ತಾರೆ.

## ರಾಜಘಾಟಿನಲ್ಲಿ ಅಖಂಡ ಸೂತ್ರಯಜ್ಞ

ಮಹಾತ್ಮ ಗಾಂಧಿಯವರ ದ್ವಿತೀಯ ವರ್ಷಾಬ್ಧಿಕದ ಸಂಬಂಧವಾಗಿ ಸರ್ವೋದಯ ಸಮಾಜದವರು ದಹಲಿಯ ರಾಜಘಾಟ್ ಮತ್ತು ಬಿರ್ಲಾಭವನಗಳಲ್ಲಿ ಈ ಪ್ರಾತಃಕಾಲದಿಂದ ೨೪ ಘಂಟೆಗಳ ಕಾಲದ ಅಖಂಡ ಸೂತ್ರಯಜ್ಞವನ್ನು ಆರಂಭಿಸಿದ್ದಾರೆ. [illegible] ಗಾಂಧೀಜಿಯವರ [illegible] ಇಂದಿನ [illegible] ವಿಶ್ವಪ್ರಪಂಚದ ಅನೇಕ [illegible]

### ಪೂಜ್ಯ ಬಾಪೂಜಿ

ಲಜ್ಜಿತರಾಗಿ ಬಂದಿಗೆ ಎರಡು ವರ್ಷಗಳಾದುವು

[illegible]

## ರೈಲ್ವೆ ಅಪಘಾತದಿಂದ ೫೦ ಜನರ ಮರಣ

ನೆನ್ನೆ ದಿನ ಅಂಬಾಲಾ ಬಳಿ ಸಿರ್‌ಹಿಂದ್ ಎಂಬಲ್ಲಿ ಪ್ರಯಾಣಿಕರ ಒಂದು ರೈಲು ಅಪಘಾತಕ್ಕೆ ಈಡಾಗಿ ೫೦ ಮಂದಿ ಮೃತಪಟ್ಟು, ೧೦೦ ಜನರಿಗೂ ಮೇಲ್ಪಟ್ಟು ಗಾಯಗೊಂಡಿರುವರೆಂದು ವರದಿಯಾಗಿದೆ. ಗೂಡ್ಸ್ ರೈಲಿನ ಇಂಜನ್ನಿಗೆ ಪ್ರಯಾಣಿಕರ ರೈಲಿನ ಇಂಜನ್ನು ಢಿಕ್ಕಿ ಹೊಡೆಯಿತು. ಪ್ರಯಾಣಿಕರ ಮೂರು ಗಾಡಿಗಳು ಮಗುಚಿಕೊಂಡವು.

## ಭೂಕಂಪದಿಂದ ಸಾವಿರ ಮಂದಿಯ ಮರಣ

ಈಗ್ಗೆ ಐದು ದಿವಸಗಳ ಕೆಳಗೆ ಪರ್ಷಿಯಾ ಕೊಲ್ಲಿಯ ಪೂರ್ವ ತೀರಕ್ಕೆ ೨೦೦ ಮೈಲಿ ದೂರದಲ್ಲಿ ಭಾರಿ ಭೂಕಂಪ ಸಂಭವಿಸಿತು. ಅದರ ಪರಿಣಾಮವಾಗಿ ಒಂದು ಸಾವಿರ ಮಂದಿ ಮೃತಪಟ್ಟು, ಏಳುನೂರು ಮಂದಿಗೂ ಮೇಲ್ಪಟ್ಟು ಗಾಯಗೊಂಡರೆಂದು ವರದಿಯಾಗಿದೆ. ಅಲ್ಲಿನ ನದಿಗಳಲ್ಲಿ ಪ್ರವಾಹವು ವಿಪರೀತ ಹೆಚ್ಚಿದೆ. ಸಂಚಾರ ಮತ್ತು ಸಮಾಚಾರ ವ್ಯವಸ್ಥೆಗಳು ಕಡಿದು ಹೋಗಿವೆ.

## ಪೂರ್ವ ಪಾಕಿಸ್ತಾನದಲ್ಲಿ ಘೋರ ಅತ್ಯಾಚಾರ

ಪೂರ್ವ ಪಾಕಿಸ್ತಾನದ ಖುಲ್ನಾ ಜಿಲ್ಲೆಗೆ ಸೇರಿದ ಹಳ್ಳಿಗಳಲ್ಲಿ ಘೋರ ಅತ್ಯಾಚಾರಗಳನ್ನು ಮುಸ್ಲಿಮರು ಎಸಗುತ್ತಿರುವುದಾಗಿಯೂ ಅದರಿಂದ ೫೦ ಸಾವಿರ ನಾಮಶೂದ್ರರು ಬಾಧಿತರಾಗಿ ನೊಂದಿರುವರೆಂದೂ ಹೇಳಲಾಗಿದೆ. ನವಾಖಲಿಯಲ್ಲಿ ಹಿಂದೆ ನಡೆದ ಘಟನೆಗಳು ನಡೆಯುತ್ತಿವೆಯೆಂದೂ, ೩೫ ಹಳ್ಳಿಗಳನ್ನು ನೆಲಸಮ ಮಾಡಲಾಗಿದೆಯೆಂದೂ, ಕೊಲೆ, ಸುಲಿಗೆ, ಸ್ತ್ರೀಯರ ಮಾನಭಂಗ, ಬಲಾತ್ಕಾರದ ಮತಾಂತರ ಇವುಗಳು ಆಗುತ್ತಿರುವುದಾಗಿ ಹಿಂದೂ ಮಹಾಸಭೆಯ ಪಾರ್ಲಿಮೆಂಟರಿ ಸಮಿತಿ ಅಧ್ಯಕ್ಷರಾದ ಆಶುತೋಷ ಲಹರಿಯವರು ತಿಳಿಸಿದ್ದಾರೆ.

## ಪಾಕಿಸ್ತಾನದಲ್ಲಿರುವ ಕಾಶ್ಮೀರಿ ಅಧಿಕಾರಿಗಳ ವಜ

ಪಾಕಿಸ್ತಾನಕ್ಕೆ ಹೋಗಿರುವ ಎಲ್ಲಾ ಕಾಶ್ಮೀರದ ಅಧಿಕಾರಿಗಳನ್ನೂ ಅಲ್ಲಿನ ಸರಕಾರದವರು ವಜಾ ಮಾಡಿರುತ್ತಾರೆ. ಅವರಿಗೆ ಕೊಡಬೇಕಾಗಿದ್ದ ಪ್ರಾವಿಡೆಂಟ್ ಫಂಡ್ ಮುಂತಾದ ಹಣಗಳನ್ನು ಸರಕಾರದ ಅನುಮತಿಯಿಲ್ಲದೆ ಕೊಡಲಾಗುವುದಿಲ್ಲ.

## ರಾಷ್ಟ್ರಗೀತೆ ಹಾಡಲು ನಿಯಮ

ರಾಷ್ಟ್ರಗೀತೆಯಾದ 'ಜನಗಣಮನ'ವನ್ನು ಎಲ್ಲಾ ಸಂದರ್ಭಗಳಲ್ಲಿಯೂ ಹಾಡದಿರಬೇಕೆಂದು ಪ್ರಚಾರವು ಪ್ರತಿಬಂಧಿಸುವುದಾಗಿ ವರದಿಯಾಗಿದೆ. ರಾಷ್ಟ್ರಾಧ್ಯಕ್ಷರು, ಗವರ್ನರುಗಳು ಮತ್ತು ರಾಜಪ್ರಮುಖರುಗಳು ಭಾಗವಹಿಸುವ ವಿಶೇಷ ಸಮಾರಂಭಗಳಲ್ಲೂ ಮತ್ತು ಆಗಸ್ಟ್ ೧೫ ಮತ್ತು ಜನವರಿ ೨೬ನೇ ತಾರೀಖುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಮತ್ತು ರಿಪಬ್ಲಿಕ್ ದಿನೋತ್ಸವಗಳನ್ನು ನೆರವೇರಿಸುವಾಗ ಮಾತ್ರವೂ ಇದನ್ನು ಹಾಡಬೇಕೆಂದೂ ಸೂಚಿಸಲಾಗಿದೆ. ಈ ಬಗ್ಗೆ ಎಲ್ಲಾ ಸರ್ಕಾರಗಳಿಗೂ ತಿಳುವಳಿಕೆ ಕೊಟ್ಟು, ಪತ್ರಿಕೆಗಳಿಗೆ ನಿಯಮ [illegible] ಹೇಳಲಾಗಿದೆ.

## ಪಾರ್ಲಿಮೆಂಟ್ ಸದಸ್ಯರ ಪ್ರಮಾಣ ವಚನ

ಕೇಂದ್ರದ ಹೊಸ ಪಾರ್ಲಿಮೆಂಟಿನ ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸಿದರು. ನೆನ್ನೆ ಮೊದಲು ಸಭೆಯ ಉಪ ಅಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರ್ಯರು ತೆಗೆದುಕೊಂಡರು. ನಂತರ ನೆಹರೂ, ಪಟೇಲರು ಮುಂತಾದವರು ತೆಗೆದುಕೊಂಡಮೇಲೆ ಪ್ರಾಂತವಾರು ಸಭಾಸದಸ್ಯರುಗಳು ಪ್ರಮಾಣವಚನ ಸ್ವೀಕರಿಸಿದರು. ಭಾರತದ ರಾಜ್ಯಾಂಗಕ್ಕೆ ಸಹಿ ಹಾಕದೆ ಇದ್ದ ದಾಮೋದರ ಸ್ವರೂಪರೂ ಸಹ ಅದನ್ನು ತೆಗೆದುಕೊಂಡಾಗ ಸಭೆಯಲ್ಲಿ ಲಘು ಪ್ರಶ್ನೆಗಳಾದವು.

## ಪೋಲೀಸ್ ಠಾಣೆಯ ಮೇಲೆ ೨ ಸಾವಿರ ಜನರ ಧಾಳಿ

ಕಲ್ಕತ್ತದ ವಿಷ್ಣುಪುರ ಜಿಲ್ಲೆಯ ಪೋಲೀಸ್ ಠಾಣೆಯ ಮೇಲೆ ಮೊನ್ನೆ ದಿನ ಸುಮಾರು ಎರಡು ಸಾವಿರ ಮಂದಿ ಗ್ರಾಮಸ್ಥರು ಭರ್ಜಿ, ಬಿಲ್ಲು, ಬಾಣಗಳನ್ನು ಪ್ರಯೋಗಿಸಿ ಧಾಳಿ ನಡೆಸಿದರೆಂದು ವರದಿಯಾಗಿದೆ. ಪೋಲೀಸರು ಗುಂಡು ಹಾರಿಸಿ ಧಾಳಿಕಾರರನ್ನು ಓಡಿಸಿದರು. ಅವರ ಪೈಕಿ ಒಬ್ಬನು ಮಡಿದನು.

## ಬ್ಯಾಂಕಾಕ್ ಆಸ್ಪತ್ರೆಯಲ್ಲಿ ಬೋಸರ ಹೆಸರಿನ ವಾರ್ಡು

ಬ್ಯಾಂಕಾಕಿನ ಆಸ್ಪತ್ರೆಯೊಂದರ ಕೊಠಡಿಗೆ ಸುಭಾಷ್ ಚಂದ್ರ ಬೋಸರ ಹೆಸರನ್ನು ಇಡಲಾಗಿದೆ. ಈ ಸ್ಮಾರಕದ ವಾರ್ಡನ್ನು ಅಲ್ಲಿರುವ ಭಾರತದ ರಾಯಭಾರಿ ಭಗವತ್ ದಯಾಳರು ತೆರೆದರು.

## ಚೀನಾಕ್ಕೆ ಹಿಂತಿರುಗಲು ಚಿಯಾಂಗರ ಆಸೆ

ಕಮ್ಯೂನಿಸ್ಟರೊಡನೆ ಕಡೆಯವರೆಗೂ ಹೋರಾಟ ನಡೆಸುವುದಾಗಿ ಫಾರ್ಮೋಸಾ ದ್ವೀಪದ ಚೀನೀ ರಾಷ್ಟ್ರೀಯ ಸರಕಾರದ ಮುಖಂಡರಾದ ಚಿಯಾಂಗ್ ಕೈಷೇಕರು ಪ್ರಮಾಣಮಾಡಿರುವುದಲ್ಲದೇ, ರಾಷ್ಟ್ರೀಯ ಸೈನಿಕರು ಚೀಣವನ್ನು ಪುನಃ ಆಕ್ರಮಿಸಿಕೊಳ್ಳುವವರೆಗೆ ಫಾರ್ಮೋಸಾದ್ವೀಪವನ್ನು ಬಿಡುವುದಿಲ್ಲವೆಂದು ತಿಳಿಸಿದ್ದಾರೆ.

ಥೈಲ್ಯಾಂಡಿನ ಸೈನ್ಯಗಳ ಡೆಪ್ಯುಟಿ ಕಮಾಂಡರ್ ೩೯ ಚೀನರು ಅಲ್ಲಿನ ಸರಕಾರವನ್ನು ಉರುಳಿಸಲು ಪಿತೂರಿ ನಡೆಸಿದರೆಂಬ ಆಪಾದನೆಯ ಮೇಲೆ ಅವರನ್ನು ಗಡೀಪಾರು ಮಾಡಲಾಗಿದೆ.


|| ಶ್ರೀ ||

ಗಣೇಶಾ ಟಾಕೀಸ್

31-1-50ರಿಂದ ಪ್ರತಿ ದಿನ 3 ಆಟಗಳು

ರಿಪಬ್ಲಿಕ್‌ನವರ ಸಾಹಸಮಯ ಸ್ಪೆಷಲ್ ಸೀರಿಯಲ್

FEDERAL OPERATOR 99

ಫೆಡರಲ್ ಆಪರೇಟರ್ 99


## ಭಾರತಕ್ಕೆ ಸೋಕರ್ನೋರ ಕೃತಜ್ಞತೆ

ದೆಹಲಿ ರೇಡಿಯೋದಲ್ಲಿ ಮೊನ್ನೆ ರಾತ್ರಿ ಭಾಷಣ ಮಾಡುತ್ತಾ, ಇಂಡೋನೇಷ್ಯದ ರಿಪಬ್ಲಿಕ್ಕಿನ ಅಧ್ಯಕ್ಷರಾದ ಡಾ|| ಸೋಕರ್ನೋರವರು ಭಾಷಣ ಮಾಡಿ, ತಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತವು ಮಾಡಿದ ಸಹಾಯವನ್ನು ನೆನೆಸಿಕೊಂಡು ಇದರಿಂದ ಇಡೀ ಏಷ್ಯಾ ದೇಶದ ಸಂಘಟನೆಗೆ ಸಹಾಯವಾಗುವುದೆಂದರು. ಮಹಾತ್ಮಾ ಗಾಂಧಿಯವರ ತತ್ವಗಳನ್ನು ಕೊಂಡಾಡಿದರು. ಭಾರತವು ರಿಪಬ್ಲಿಕ್ಕಾದಾಗಿನಿಂದ ಇಡೀ ಏಷ್ಯಾವು ಸಂತೋಷಿಸುತ್ತಿದೆ ಎಂದು ಹೇಳಿದರು.

## ೨ ಲಕ್ಷ ರೂ. ನೆಹರೂ ವಜ್ರೋತ್ಸವ ಗ್ರಂಥ

ಸುಮಾರು ೨ ಲಕ್ಷ ರೂ.ಗಳ ವೆಚ್ಚ ತಗುಲಿನ ಸಾವಿರಪುಟಯುಳ್ಳ ವಜ್ರೋತ್ಸವ ಗ್ರಂಥವೊಂದನ್ನು ಪಂಡಿತನೆಹರೂರವರಿಗೆ ಅರ್ಪಿಸಲಾಗುವುದು. ಇದರಲ್ಲಿ ಪ್ರಪಂಚದ ಪ್ರಸಿದ್ಧ ೧೫೦ ಮಂದಿ ಲೇಖಕರ ಲೇಖನಗಳಿವೆ. ಡಿವೇಲರಾ, ಪೆಥಿಕ್‌ಲಾರೆನ್ಸ್, ರಾಜಾಜಿ, ರಾಜೇಂದ್ರಬಾಬು, ಆಗಾಖಾನ್ ಮುಂತಾದವರು ಆ ಪೈಕಿ ಇದ್ದಾರೆ.

## ಪಾಟಿಯಾಲಾದಲ್ಲಿ ಚಲಿಸುವ ಬ್ಯಾಂಕು

ಪಾಟಿಯಾಲಾದಲ್ಲಿ ಅಲ್ಲಿನ ಸರ್ಕಾರಿ ಸಂಸ್ಥೆಯಾದ ಪಾಟಿಯಾಲಾ ಬ್ಯಾಂಕಿನವರು ಗ್ರಾಮಾಂತರ ಪ್ರದೇಶಗಳ ಜನರಿಗೆ ಬ್ಯಾಂಕಿನ ಸೌಲಭ್ಯಗಳನ್ನು ಒದಗಿಸುವಂತೆ ನಿರ್ಧರಿಸಿದ್ದಾರೆ. ಬಹಳ ಬಲಯುತವಾದ ರಕ್ಷಣಾ ವ್ಯವಸ್ಥೆಗಳಿಂದ ಕೂಡಿದ ಒಂದು ವಾಹನವನ್ನು ಇದಕ್ಕಾಗಿ ಕೊಳ್ಳಲಾಗಿದೆಯೆಂದೂ, ಇದು ಎಲ್ಲ ಗ್ರಾಮಗಳಿಗೂ ಹೋಗಿ ಬ್ಯಾಂಕಿನ ವ್ಯವಹಾರ ನಡೆಸುವುದೆಂದೂ ಹೇಳಲಾಗಿದೆ.

## 'ಅಖಂಡ ಭಾರತ' ಹಿಂದೂ ಮಹಾಸಭೆಯ ಗುರಿ

ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯು ಮೊನ್ನೆ ಬೊಂಬಾಯಿಯಲ್ಲಿ ಸೇರಿದ್ದಾಗ ಅಖಂಡ ಭಾರತವೇ ಪ್ರತಿಯೊಬ್ಬ ಹಿಂದುವಿನ ಗುರಿಯೆಂಬುದನ್ನು ಪುನಃ ಒತ್ತಿಹೇಳುವ ನಿರ್ಣಯವನ್ನು ಅಂಗೀಕರಿಸಲಾಯಿತು.

## ಕಮ್ಯೂನಿಸ್ಟ್ ಚೀನಾಕ್ಕೆ ಆಸ್ಟ್ರೇಲಿಯಾ ಮನ್ನಣೆಯಿಲ್ಲ

ಆಸ್ಟ್ರೇಲಿಯವು ಕಮ್ಯೂನಿಸ್ಟ್ ಚೀಣಕ್ಕೆ ಮನ್ನಣೆಯೀಯುವುದಿಲ್ಲವೆಂದು ಆ ದೇಶದ ವಿದೇಶಾಂಗ ಮಂತ್ರಿಗಳು ತಿಳಿಸಿರುತ್ತಾರೆ.

## ರಾಜಪ್ರಮುಖ ವಿರೋಧ ದಿನಾಚರಣೆ

ಹೈದರಾಬಾದಿನ ಮಜ್ದೂರ್ ಸಂಘದ ಆಶ್ರಯದಲ್ಲಿ ಮುಷ್ಕರ ಹೂಡಿರುವ ವಾರಂಗಲ್ಲಿನ ಬೋಧನ್ ಸಕ್ಕರೆ ಕಾರ್ಖಾನೆಯ ಕೆಲಸಗಾರರು ಮೊನ್ನೆ ದಿನ ರಾಜಪ್ರಮುಖ ವಿರೋಧ ದಿನಾಚರಣೆ ನಡೆಸಿ, ಮೆರವಣಿಗೆ ನಡೆಸಲು ಪ್ರಯತ್ನಿಸಿದರು. ಆ ಸಂದರ್ಭದಲ್ಲಿ ಪೋಲೀಸರು ಲಾಠಿ ಪ್ರಯೋಗಿಸಿದರು ಮತ್ತು ೨೯ ಮಂದಿಗಳನ್ನು ದಸ್ತಗಿರಿ ಮಾಡಿದರು.

## ಆಗಾಖಾನರ ನಗ ದೊರಕಿತು

೩ ಲಕ್ಷ ಡಾಲರಿನ ಬೆಲೆಯುಳ್ಳ ನಗನಾಣ್ಯಗಳು ಆಗಾಖಾನರಿಂದ ಕಳುವಾಗಿದ್ದುದು ಸರಿಯಷ್ಟೆ. ಅವುಗಳ ಪೈಕಿ ಅರ್ಧವನ್ನು ಯಾರೋ ಮಾರ್ಸೆಲ್ಸ್ ಪೋಲೀಸು ಸ್ಟೇಷನ್ ಬಳಿ ಇಟ್ಟು, ಅವುಗಳನ್ನು ತೆಗೆದುಕೊಳ್ಳಬೇಕೆಂದು ಪೋಲೀಸರಿಗೆ ಫೋನ್ ಮೂಲಕ ತಿಳಿಸಿದರೆಂದೂ ಹೇಳಲಾಗಿದೆ.

## ಉ. ಅಟ್ಲಾಂಟಿಕ್ ರಕ್ಷಣೆ ಏರ್ಪಾಡು

ಉತ್ತರ ಅಟ್ಲಾಂಟಿಕ್ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡಿರುವ ಏಳು ರಾಷ್ಟ್ರಗಳಿಗೆ ೧೦೦ ಕೋಟಿ ಡಾಲರುಗಳ ಶಸ್ತ್ರಾಸ್ತ್ರಗಳನ್ನು ಒದಗಿಸಲು ಸಾಧ್ಯವಾಗುವ ರಹಸ್ಯದ ರಕ್ಷಣಾ ಯೋಜನೆಗೆ ಅಮೇರಿಕದ ಅಧ್ಯಕ್ಷ ಟ್ರೂಮನ್ನರು ಸಹಿ ಹಾಕಿರುತ್ತಾರೆ. ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್, ಲಕ್ಸೆಂಬರ್ಗ್, ನಾರ್ವೆ ಮತ್ತು ಡೆನ್ಮಾರ್ಕ್‌ಗಳಿಗೆ ಈ ಸೌಲಭ್ಯಗಳನ್ನು ಒದಗಿಸಲಾಗುವುದು.

## ದೆಹಲಿಯಲ್ಲಿ ಸೈನಿಕರ ಮೆರವಣಿಗೆ

ಭಾರತದ ನೌಕೆ, ಸೈನ್ಯ ಮತ್ತು ವಿಮಾನ ದಳಗಳ ಪಡೆಗಳು ಮೊನ್ನೆ ದಿನ ದೆಹಲಿಯ ಮುಖ್ಯ ಬೀದಿಗಳಲ್ಲಿ ಬಾವುಟಗಳನ್ನು ಹಿಡಿದು ಮೆರವಣಿಗೆಯಲ್ಲಿ ನಡೆದವು.

## ಹೊಳೆಯುವ ಗೋಡೆ

ಅಮೇರಿಕದ ವಿದ್ಯುಚ್ಛಕ್ತಿಯ ಕಂಪೆನಿಯೊಂದು ಮಾಡುತ್ತಿರುವ ಪ್ರಯತ್ನವು ಯಶಸ್ವಿಯಾದರೆ ವಿದ್ಯುಚ್ಛಕ್ತಿಯ ದೀಪವು ಹಳೆಯ ಕಾಲದ್ದಾಗುವುದೆಂದು ತಿಳಿದುಬರುತ್ತದೆ. ರಂಜಕದ ಪುಡಿಯಿಂದ ಗೋಡೆಗಳಿಗೆ ಬಣ್ಣ ಹೊಡೆದರೆ, ಅದು ಹಗಲು ಹೊತ್ತಿನಲ್ಲಿ ಬೆಳಕನ್ನು ಆಕರ್ಷಿಸಿ ರಾತ್ರಿ ಹೊತ್ತು ಬೆಳಕನ್ನು ಚೆಲ್ಲುವುದೆಂದು ಹೇಳಲಾಗಿದೆ.

## ಊರಿಗೆಲ್ಲಾ ಒಂದೇ ಸಂಸಾರ

ರಷ್ಯದ ಅಜರ್ ಬೈಜಾನ್ ಪರ್ಗಣದ ಒಂದು ಗ್ರಾಮದಲ್ಲಿ ೧೪೧ ವರ್ಷ ವಯಸ್ಸಿನ ವೃದ್ಧನು ಸಂಸಾರ ಸಮೇತ ವಾಸಿಸುತ್ತಿರುವನೆಂದು ವರದಿಯಾಗಿದೆ. ಅವನಿಗೆ ೧೨೬ ವರ್ಷದ ಪತ್ನಿಯೂ, ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮಕ್ಕಳೂ ಇರುವರೆಂದೂ, ಇಡೀ ಗ್ರಾಮವು ಮೇಲ್ಕಂಡ ವೃದ್ಧನ ಸಂಸಾರದವರಿಂದ ಆಕ್ರಮಿಸಲ್ಪಟ್ಟಿರುವುದೆಂದೂ ಹೇಳಲಾಗಿದೆ.

## ನಾಳೆ ರಾಷ್ಟ್ರಾಧ್ಯಕ್ಷರ ಭಾಷಣ

ಭಾರತದ ಪಾರ್ಲಿಮೆಂಟನ್ನು ಉದ್ದೇಶಿಸಿ, ಪ್ರಥಮಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನಾಳೆ ಭಾಷಣ ಮಾಡುವರು.

## ಡಾ||ರಾಜೇಂದ್ರ ಪ್ರಸಾದರಿಗೆ ಇಸ್ರೇಲಿನ ಅಭಿನಂದನೆ

ಇಸ್ರೇಲ್ ಸಂಸ್ಥಾನದ ಅಧ್ಯಕ್ಷರಾದ ಡಾ|| ವೈಜ್‌ಮನ್ನರು ಭಾರತದ ಅಧ್ಯಕ್ಷ ರಾಜೇಂದ್ರ ಪ್ರಸಾದರನ್ನು ಅಭಿನಂದಿಸಿ ತಂತಿ ಕಳುಹಿಸಿದ್ದಾರೆ.


## ಬೈಸಿಕಲ್ ಕಳವು

—:o:—

ಇದರಿಂದ ಸಮಸ್ತರಿಗೂ ತಿಳಿಸುವುದೇನೆಂದರೆ - ಇದೇ ಜನವರಿ ೨೩ನೇ ತಾ|| ಸೋಮವಾರ ನಂಜನಗೂಡಿನ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನ ಕಾಂಪೌಂಡಿನಲ್ಲಿ ನಿಲ್ಲಿಸಿದ್ದ ನನ್ನ ರ್‍ಯಾಲಿ ಸೈಕಲ್ ನಂ. A. G. 53519 ಕಳುವಾಗಿರುತ್ತದೆ. ಇದಕ್ಕೆ ಫುಲ್ ಗೇರ್‌ಕೇಸ್ ಇದೆ. ಫೆಡಲ್ ಹತ್ತಿರ ಓವಲ್ ಆಗಿರುತ್ತದೆ. ಫ್ರೀವೀಲ್ ಹತ್ತಿರ ಸ್ಕ್ರಾಚ್ ತೆಗೆದಿದೆ. ಒಂದು ಕುಪ್ಪು ಸಹ ಇದರಲ್ಲಿ ತಗುಲಿಸಿದೆ. ಬ್ರೇಕ್ ಸೆಟ್ಟು. ಇದನ್ನು ಪತ್ತೆಮಾಡಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಿದವರಿಗೆ ಉಚಿತ ಬಹುಮಾನ ಕೊಡಲಾಗುವುದು.

ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ ನೇರಳೆ ಗ್ರಾಮದಲ್ಲಿರುವ ನಂಜಪ್ಪನವರ ಮಗ ಪುಟ್ಟಪ್ಪ



## ಗೃಹಕೃತ್ಯದ ನೋಟೀಸು

ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಬೆಳವಾಡಿ ಗ್ರಾಮದ ಗಂ|| ವಕ್ಕಲಿಗರ ಬೋರೈಗೌಡನವರ ಜೋಗೌಡ ಉರುಫ್ ಕಾಳೇಗೌಡರಹೆಂಡತಿ ನಿಂಗಮ್ಮ ತಿಳಿಯಪಡಿಸುವದೇನೆಂದರೆ - ನನ್ನ ಗಂಡ ಪಿತ್ರಾರ್ಜಿತವಾದ ಬೆಳವಾಡಿ ತೊಟ್ಟಿ ಮನೆ, ಸರ್ವೆ ೧೯೬. ೩, ೧೯೭. ೨೦೪ ಕೃಷಿ ಮಾಡಿದಗದ್ದೆ, ಸರ್ವೆ ೧೩೪ ನೇ ತೋಟಗಳ ಬಾಬ್ತು ಮಾಡಿರುವ, ಮಾಡಬಹುದಾದ ಸಾಧನಗಳು ಅವಶ್ಯಕತೆಯಾಯಿದೆ ಇಲ್ಲವ ಸಬೂಬು ಊರ್ಜಿತವಾಗಲಾರದೆಂದು ಎಚ್ಚರಿಸಿದೆ

ಮೈನರ್ ಜೋಗಿ ವಗೈರೆ ಮಕ್ಕಳ ಪರ ಗಾರ್ಡಿಯನ್ ತಾಯಿ ನಿಂಗಮ್ಮನ ಎಡಗೈ ಹೆಬ್ಬೆಟ್ಟಿನ ಗುರುತು



A BOON TO PADDY & RICE TRANSPORTERS

Your problem of transportation of goods is solved. Under our skilled and well-organised Daily running Lorry Service between Mysore and Bangalore we undertake to transport all your goods. Paddy and Rice

Bangalore Transit Company, Clearing & Forwarding Agents, Sri Narasimharaja Road, Bangalore City.

Mysore office—Narayana Sastry Road, Mysore


Edited, Printed and published by A. R. Nagarajan at Sadhvi Press, P. Subbiah Road, Mysore.

ರಿ॥ ನಂ. 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ ೩ ಕಾಸು



ಸಂಪುಟ ೮] ಮಂಗಳವಾರ ೩೧-೧-೫೦ [ಸಂಚಿಕೆ ೧೫೨

# ಲಾಯರೊಬ್ಬರಿಗೆ ೩ ತಿಂಗಳ ಸಸ್ಪೆಂಡು

## ಅ॥ ಭಾ॥ ನಗರಾಭಿವೃದ್ಧಿ ಅಧಿಕಾರಿಗಳ ಸಮ್ಮೇಳನ

ಮೈಸೂರು ೩೧

ಅಖಿಲ ಭಾರತ ನಗರಾಭಿವೃದ್ಧಿ ಸಮಿತಿಗಳ ಅಧ್ಯಕ್ಷರು ಮತ್ತು ಇಂಜನಿಯರುಗಳ ಸಮ್ಮೇಳನವು ಈ ಏಪ್ರಿಲ್ ತಿಂಗಳಲ್ಲಿ ದೆಹಲಿಯಲ್ಲಿ ನಡೆಯುವುದಾಗಿ ತಿಳಿದು ಬಂದಿದೆ ಸಮ್ಮೇಳನದಲ್ಲಿ ಅಖಿಲ ಭಾರತದ ಮನೆಗಳ ನಿರ್ಮಾಣ ಯೋಜನೆಯನ್ನು ಪರಿಶೀಲಿಸಲಾಗುವುದು. ಈ ಸಮ್ಮೇಳನದಲ್ಲಿ ಸಂಸ್ಥಾನಗಳ ನಗರಾಭಿವೃದ್ಧಿ ಸಮಿತಿ ಅಧಿಕಾರಿಗಳನ್ನು ಆಹ್ವಾನಿಸಿರುವುದು ಇದೇ ಮೊದಲನೆಯ ಬಾರಿಯೆಂದು ಹೇಳಲಾಗಿದೆ

### ಗಂಡಸರೇ ವೀಳೆಯದೆಲೆ ಮಾರುವರು

ರಾಜಧಾನಿಯ ಮಾರ್ಕೆಟ್ಟುಗಳಲ್ಲಿ ಇನ್ನು ಮೇಲೆ ಆದಿಕರ್ನಾಟಕ ಜಾತಿಯ ಹೆಂಗಸರು ವೀಳೆಯದೆಲೆಯನ್ನು ಮಾರಕೂಡದೆಂದೂ, ಗಂಡಸರೇ ಅದನ್ನು ಮಾರಬೇಕೆಂದೂ, ಆ ಮತಸ್ಥರ ಸಭೆಯಲ್ಲಿ ಮೊನ್ನೆ ಆದಿಕರ್ನಾಟಕ ಪುರದಲ್ಲಿ ಶ್ರೀ ಕೆ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಾಗ ತೀರ್ಮಾನಿಸಲಾಯಿತು ಅದರ ಪ್ರಕಾರ ನೆನ್ನೆ ಮಧ್ಯಾಹ್ನ ದಿಂದ ಈ ಬೇಗ್ಗೆಯಿಂದ ಗಂಡಸರೇ ಮಾರುತ್ತಿರುವರು ಸ್ತ್ರೀಯರು ಗೃಹಕೆಲಸದಲ್ಲಿ ನಿರತರಾಗಬೇಕೆಂದು ತೀರ್ಮಾನ ಮಾಡಲಾಗಿದೆ

### ಬೆಳಕು—ರಿಪಬ್ಲಿಕ್ ಸಂಚಿಕೆ

ವಯಸ್ಕರ ಶಿಕ್ಷಣ ಸಮಿತಿಯವರು ಹೊರಡಿಸುತ್ತಿರುವ ಬೆಳಕು ವಾರಪತ್ರಿಕೆಯ ರಿಪಬ್ಲಿಕ್ ದಿನದ ವಿಶೇಷ ಸಂಚಿಕೆಯು ನಮ್ಮ ಕೈಸೇರಿದೆ ಇದರಲ್ಲಿ ರಿಪಬ್ಲಿಕ್ ರಾಜ್ಯಾಂಗದ ವಿವರಣೆಯೂ ಸ್ವಾತಂತ್ರ್ಯ, ರಾಷ್ಟ್ರಧ್ವಜ, ರಾಮರಾಜ್ಯ, ಅಶೋಕ ಚಕ್ರ, ಅಸ್ಪೃಶ್ಯತೆಯ ನಿರ್ಮೂಲ, ರಾಜೇಂದ್ರ ಪ್ರಸಾದರ ಪರಿಚಯ ಮುಂತಾದುವುಗಳ ಬಗ್ಗೆ ಎಲ್ಲರಿಗೂ ತಿಳಿಯುವಂತಹ ಲೇಖನಗಳು ಪ್ರಕಟವಾಗಿವೆ ರಾಷ್ಟ್ರ ನಾಯಕರ ಸುಂದರ ಚಿತ್ರಗಳೂ ಕೊಡಲ್ಪಟ್ಟಿವೆ

### ಚಿಟ್ಟದಪುರದ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ

ನಾಳೆ ಸಂಜೆ ೬ ಘಂಟೆಗೆ ವೈಸರಾಯ್ ರಸ್ತೆಯಲ್ಲಿರುವ ಚಿಟ್ಟದಪುರದ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ ವಿದ್ಯಾರ್ಥಿನಿಲಯದ ಸಂಘದ ೨ನೇ ವಾರ್ಷಿಕೋತ್ಸವವು ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಎಂ ನಾಗರಾಜರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು ಸರದಾರ್ ಕೆ ಬಸವರಾಜೇ ಅರಸಿನವರು ರಾಜೇಂದ್ರ ಪ್ರಸಾದರ ಭಾವಚಿತ್ರವನ್ನು ಅನಾವರಣ ಮಾಡುವರು ಡಾ॥ವೆ॥ ಬಿ ಶಿವಮೂರ್ತಿ ಶಾಸ್ತ್ರಿಗಳು ಭಾಷಣ ಮಾಡುವರು

### ಉಪನ್ಯಾಸ ಮತ್ತು ವೀಣಾವಾದನ

೨ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಪ್ರಸನ್ನಾನಂದ ಔಷಧಾಲಯದ ಕಟ್ಟಡದಲ್ಲಿ ಅಹಿಂಸೆಯ ಸ್ವರೂಪ ಎಂಬ ವಿಷಯವಾಗಿ ಕಾಲೇಜಿನ ತತ್ವಶಾಸ್ತ್ರದ ಅಧ್ಯಾಪಕರಾದ ಶ್ರೀ ಸಿ ವಿ. ಶ್ರೀನಿವಾಸಮೂರ್ತಿಯವರಿಂದ ಉಪನ್ಯಾಸವೂ, ಆ॥ ಸಿ ದೊರೆಸ್ವಾಮಿ ಅಯ್ಯಂಗಾರ್‌ರವರು ವೀಣಾವಾದನವೂ, ವ್ಯ॥ ವಿ। ರಾಮಯ್ಯನವರ ಸಂಗೀತವೂ ನಡೆಯುವುವು

### ಒಂದು ಸಾವಿರ ವರ್ಷ ಇರಬಲ್ಲ ರಾಜ್ಯಾಂಗದ ಪ್ರತಿ

ಭಾರತ ರಾಜ್ಯಾಂಗದ ಸದಸ್ಯರ ರುಜುವಿನಿಂದ ಕೂಡಿದ ರಾಜ್ಯಾಂಗದ ಪ್ರತಿಯು ೨೫೫ ಪುಟಗಳನ್ನು ಹೊಂದಿ ೪೫ ಪೌಂಡಿಗಿಂತಲೂ ಹೆಚ್ಚು ತೂಕವಿರುವುದೆಂದು ಹೇಳಲಾಗಿದೆ ಅದನ್ನು ಉತ್ತಮವಾದ ಕಾಗದದ ಮೇಲೆ ಮುದ್ರಿಸಿರುವುದಾಗಿಯೂ ಮತ್ತು ಒಂದು ಸಾವಿರ ವರ್ಷಗಳಿಗೂ ಮೇಲ್ಪಟ್ಟು ಆ ಪ್ರತಿಯು ಸ್ವಲ್ಪವೂ ಮಾಸದೆ ಇರುವುದೆಂದೂ ವರದಿಯಾಗಿದೆ ರಾಜ್ಯಾಂಗ ಶಾಸನದ ಹಿಂದಿ ಮತ್ತು ಇಂಗ್ಲಿಷಿನ ಇತರ ಎರಡು ಸಂಪುಟಗಳು ಕೈಯಿಂದ ಬರೆಯಲ್ಪಡುತ್ತಿವೆ ಅವುಗಳ ಎಲ್ಲ ಪುಟಗಳ ಸುತ್ತಲೂ ಕನಕವರ್ಣದ ಮೊಗಲಾಯರ ಕಾಲದ ಚಿತ್ರಗಳ ಚೌಕಟ್ಟನ್ನು ಬರೆಯಲಾಗುವುದು. ಅವುಗಳನ್ನು ಶಾಂತಿನಿಕೇತನಕ್ಕೆ ಕಳುಹಿಸಿ ಅವುಗಳ ಪ್ರತಿಯೊಂದು ಅಧ್ಯಾಯದ ಮೊದಲನೇ ಪುಟದಲ್ಲೂ ಭಾರತ ಚರಿತ್ರೆಯನ್ನು ನಿರೂಪಿಸುವ ಹಲವು ಚಿತ್ರಗಳನ್ನು ಬರೆಯಿಸಲಾಗುವುದು

### ಸಯಾಂ ಸರಕಾರದ ವಿರುದ್ಧ ಪಿತೂರಿ

ಸಯಾಂನ ಸರಕಾರದ ವಿರುದ್ಧವಾಗಿ ಪಿತೂರಿ ನಡೆಸುತ್ತಿರುವುದು ಪತ್ತೆಯಾಗಿ ಈಗ ಹಲವು ಸೈನ್ಯದ ಹಿರಿಯ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆ. ಈ ಪಿತೂರಿಗೆ ಕಾರಣರಾದ ಕಚ ಸಂಗ್ರಾಮರು ಹಾಂಕಾಂಗಿಗೆ ಹೋಗಿದ್ದಾರೆ

### ಜೂಜಾಡಿದುದಕ್ಕೆ ಜುಲ್ಮಾನೆ

ಸ್ವಂ ಸು] ಶ್ರೀರಂಗಪಟ್ಟಣ ೩೧

ಇಲ್ಲಿನ ಚೆನ್ನಗೇರಿಯ ಸಿನ್ನಪ್ಪನ ಗರಡಿ ಹತ್ತಿರ ಇಸ್ಪೀಟು ಜೂಜಾಡುತ್ತಿದ್ದರೆಂಬ ಆಪಾದನೆ ಮೇಲೆ ವೆಂಕಟಯ್ಯ ಬಿನ್ ಗೋಪಾಲಯ್ಯ, ಗೋವಿಂದಯ್ಯ ಭದ್ರಯ್ಯ, ಜವರೇಗೌಡ, ಅಹಮದ್ ಪೀರ್, ಸೋಮಯ್ಯ, ಚಿಕ್ಕಣ್ಣ ಮುಂತಾದವರಿಗೆ ತಲಾ ೭೫ ರೂ ನಂತೆ ಒಟ್ಟು ೭೫೦ ರೂ ಜುಲ್ಮಾನೆ ವಿಧಿಸಲಾಯಿತು ಗೋವಿಂದಯ್ಯ ಮತ್ತು ಭಾಸ್ಕರಾಚಾರಿ ಎಂಬುವರು ಜುಲ್ಮಾನೆ ಕೊಡಲೊಪ್ಪದಿದ್ದುದರಿಂದ ಒಂದು ತಿಂಗಳ ಕಾಲ ಸಜವನ್ನು ಅನುಭವಿಸಬೇಕಾಗಿದೆ

### ನಂಜನಗೂಡು ಲಾಯರೊಬ್ಬರಿಗೆ ಸಸ್ಪೆಂಡು

ಸ್ವಂ. ಸು ಪ್ರೋ॥] ಬೆಂಗಳೂರು ೩೧

ಮುನ್ಸಿಫ್ ಪಂಚಾಕ್ಷರಿ ಬಾಪುರೆಡ್ಡಿಯವರ ಮೇಲೆ ನಿರಾಧಾರವಾದ ಮತ್ತು ಕಲ್ಪಿತವಾದ ಆಪಾದನೆಗಳನ್ನು ಮಾಡಿದ್ದರೆಂಬ ಕಾರಣದಮೇಲೆ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಶ್ರೀಗಳು ಆರ್. ವೆಂಕಟರಾಮಯ್ಯ ಮತ್ತು ಎಂ ಬಾಲಕೃಷ್ಣಯ್ಯನವರು ನಂಜನಗೂಡಿನ ಪ್ಲೀಡರಾದ ಶ್ರೀ ಸದಾಶಿವಯ್ಯನವರನ್ನು ೩ ತಿಂಗಳ ಕಾಲ ವಕೀಲವೃತ್ತಿಯಿಂದ ಸಸ್ಪೆಂಡ್ ಮಾಡಿರುತ್ತಾರೆ ಮತ್ತು ಕೋರ್ಟು ವೆಚ್ಚಕ್ಕಾಗಿ ೧೦೦ರೂ ಕಟಬೇಕೆಂದೂ ತಿಳಿಸಿರುತ್ತಾರೆ. ಸದರಿ ಆಪಾದನೆಗಳ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾ ಜಡ್ಜರಿಗೆ ಕಳುಹಿಸಿಕೊಡಲಾಗಿತ್ತು ಅವರು ಆಪಾದನೆಗಳಿಗೆ ಆಧಾರವಿಲ್ಲವೆಂದು ವರದಿ ಮಾಡಿದ್ದರು

○ ಶ್ರೀ ಕೆ ಸಿ ರೆಡ್ಡಿಯವರ ದೇಹಸ್ಥಿತಿ ಸ್ವಲ್ಪ ಉತ್ತಮಗೊಂಡಿದೆ ಆದರೂ ಅವರು ಯಾರನ್ನೂ ನೋಡುತ್ತಿಲ್ಲ. ಇನ್ನೈದು ದಿನಗಳನಂತರ ಅವರು ಪುನಃ ವಿಶ್ರಾಂತಿಗಾಗಿ ಪ್ರೇಜರ್‌ಟೌನಿಗೆ ಹೋಗಬಹುದೆಂದು ಹೇಳಲಾಗಿದೆ

### ಸರ್ಕಾರಿ ಖರ್ಚಿನಿಂದ ಉಪಾಹಾರ ಪಡೆಯಲು ಅನುಮತಿ ಬೇಕು

ಸರ್ಕಾರದ ಸಮಿತಿಗಳ ಸಭೆಗಳು, ಅಧಿಕಾರಿಗಳ ಸಭೆಗಳು ಮತ್ತು ಗಣ್ಯವ್ಯಕ್ತಿಗಳ ಸತ್ಕಾರ ಮುಂತಾದ ಸಂದರ್ಭಗಳಲ್ಲಿ ಸರ್ಕಾರದ ಖರ್ಚಿನಿಂದ ಉಪಾಹಾರ ನಡೆಸಕೂಡದೆಂದು ಸರ್ಕಾರೀ ಇಲಾಖೆಗಳ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ ಅಂತಹ ಸಂದರ್ಭಗಳಲ್ಲಿ ಉಪಾಹಾರ ನಡೆಸುವ ಅಗತ್ಯ ಕಂಡು ಬಂದಲ್ಲಿ ಅದಕ್ಕೆ ಸರ್ಕಾರಿ ಹಣವನ್ನು ವೆಚ್ಚ ಮಾಡಲು ಪೂರ್ವಭಾವಿಯಾಗಿ ಸರ್ಕಾರದ ಅನುಮತಿ ಪಡೆಯಬೇಕೆಂದೂ ಸೂಚಿಸಲಾಗಿದೆ

### ಹೈದರಾಬಾದು ಮುಷ್ಕರದ ಮುಕ್ತಾಯ

ಹೈದ್ರಾಬಾದು ಮಜ್ದೂರ್ ಸಂಘದ ಆಶ್ರಯದಲ್ಲಿ ಕಳೆದ ೨೨ ದಿನಗಳಿಂದ ನಡೆಯುತ್ತಿದ್ದ ಅಲ್ಲಿನ ಜವಳಿ ಕೈಗಾರಿಕಾ ಸಂಸ್ಥೆಗಳ ಮುಷ್ಕರವು ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ನಿನ್ನೆ ರಾತ್ರಿ ಮುಕ್ತಾಯವಾಗಿದೆ

### ಸುಪ್ರೀಂ ಕೋರ್ಟಿನ ಮುಂದೆ ಗಾಂಧಿ ಕೊಲೆ ಮೊಕದ್ದಮೆ

ಭಾರತದ ರಾಜ್ಯಾಂಗದ ಮೂಲಭೂತ ಹಕ್ಕಿನ ಅಧ್ಯಾಯದ ೨೨ ನೇ ನಿಬಂಧನೆ ಪ್ರಕಾರ, ದೆಹಲಿಯ ಸುಪ್ರೀಂ ಕೋರ್ಟಿನ ಮುಂದೆ ಮಹಾತ್ಮ ಗಾಂಧಿಯವರ ಕೊಲೆ ಸಂಬಂಧವಾಗಿ ಸಜಾ ಅನುಭವಿಸುತ್ತಿರುವ ಮದನಲಾಲ್ ಮತ್ತು ಕರಕರೆಯವರ ಪರವಾಗಿ ಗಾಂಧಿಜಿ ಸಕ್ಕತ್ ವರ್ಮಳ್ಳಿ ಸರಿಯಾಗಿ ನೆನ್ನೆ ಅರ್ಜಿ ಸಲ್ಲಿಸಲಾಯಿತು. ಅರ್ಜಿಯಲ್ಲಿ ಮೊಕದ್ದಮೆಯನ್ನು ತನಿಖೆ ನಡಿಸಲು ವಿಶೇಷ ನ್ಯಾಯಾಸ್ಥಾನದ ಸ್ಥಾಪನೆಯ ನಡವಳಿಕೆಯನ್ನು ಆಕ್ಷೇಪಿಸಲಾಗಿದೆ. ಈ ಅರ್ಜಿಯೊಡನೆ ಕೈಫಿಯತ್ತು ಇಲ್ಲದಿರುವುದರಿಂದ ಅದು ಪರಿಶೀಲಿಸಲು ಅರ್ಹವೇ ಎಂಬುದನ್ನು ತರ್ಮಾನಿಸಲಾಗುತ್ತದೆ.

### ದೂರ ಪ್ರಾಚ್ಯದಲ್ಲಿ ರಷ್ಯದ ಸಬ್‌ಮೆರಿನ್ ಪಡೆ

ದೂರಪ್ರಾಚ್ಯದಲ್ಲಿ ರಷ್ಯವು ಸಬ್‌ಮೆರಿನ್ ಪಡೆಯನ್ನು ನಿರ್ಮಾಣ ಮಾಡುತ್ತಿರುವುದಾಗಿ ಜಪಾನ್ ಅಮೆರಿಕಾಗಳಿಗೆ ಸುದ್ದಿ ಬಂದಿದೆ ಈಗಾಗಲೇ ಹದಿನೆಂಟು ಸಬ್‌ಮೆರೀನುಗಳು ಬಂದಿರುವುದಾಗಿಯೂ, ಯಾವ ರೀತಿ ರಷ್ಯವು ಈ ಪಡೆಯನ್ನು ಸೇರಿಸುತ್ತಿದೆಯೆಂಬುದುಗೂಢವಾಗಿದೆಯೆಂದೂ ಹೇಳಲಾಗಿದೆ

### ರಿಪಬ್ಲಿಕ್ ದಿನಾಚರಣೆ

ಬನ್ನೂರು ಹೋಬಳಿ ಕೊಡಗಹಳ್ಳಿ ಗ್ರಾಮದಲ್ಲಿ ರಿಪಬ್ಲಿಕ್ ದಿನಾಚರಣೆಯು ರೈತರ ಸಂಘದ ಉಪಾಧ್ಯಕ್ಷ ಶ್ರೀ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು ರಾಷ್ಟ್ರನಾಯಕರ ಭಾವಚಿತ್ರಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು ಶ್ರೀಗಳಾದ ರಾಘವೇಂದ್ರರಾವ್ ಕೃಷ್ಣಮಾಚಾರ್ ಮತ್ತು ದೊಡ್ಡ ಸಿದ್ಧನಾಯಕರು ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ರಾಷ್ಟ್ರ ನಾಯಕರ ತ್ಯಾಗ ಶೀಲತೆಯನ್ನು ಕೊಂಡಾಡಿ, ದೇಶದ ಮುಂದೆ ಇರುವ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಅವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನನುಸರಿಸಬೇಕೆಂದು ಹೇಳಿದರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನವಿನಿಯೋಗ ಮತ್ತು ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು

### ರಾಮಶಾಸ್ತ್ರಿಗಳ ದಿನಾಚರಣೆ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ಮಂದಿರದಲ್ಲಿ ನಾಳೆ ಸಂಜೆ ೬। ಘಂಟೆಗೆ ಸಂಗೀತ ತ್ರಿಮೂರ್ತಿಗಳಲ್ಲೊಬ್ಬರಾದ ಶ್ರೀ ಶ್ಯಾಮಶಾಸ್ತ್ರಿಗಳ ದಿನಾಚರಣೆಯು ವಿ॥ ರಾಳ್ಳಪಳ್ಳಿ ಅನಂತಕೃಷ್ಣಶರ್ಮರವರ ಅಧ್ಯಕ್ಷತೆಯಲ್ಲಿ ನಡೆಯುವುದು ಶ್ರೀ ಶಾಮಾಶಾಸ್ತ್ರಿಗಳ ಕೃತಿಗಳ ಗಾನವೂ ಮತ್ತು ಭಾಷಣವೂ ಏರ್ಪಾಡಾಗಿದೆ. ಈ ಸಮಾರಂಭಕ್ಕೆ ಶಾಸ್ತ್ರಿಗಳವರ ಮರಿಮಕ್ಕಳಾದ ಶಾಂಚೀಪುರದ ರಾಜಮಾತರಂ ಶಾಸ್ತ್ರಿಗಳವರು ದಯಮಾಡಿ ಉತ್ಸವವನ್ನು ನೆರವೇರಿಸಿಕೊಡುವರು

### ರಥೋತ್ಸವ

ತಾ॥ ೨-೨-೫೦ನೇ ಗುರುವಾರ ಹೊಸೆನಸರ್ಪುರದ ಉತ್ತರ ಮಾದಿವಳರಿ ಕ್ಷೇತ್ರದಲ್ಲಿ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವವು ಜರುಗುವುದು. ಮಾರ್ಚಿ ೪ನೇ ತಾರೀಖು ಮುತಾ ಜನರಿಗೆಲ್ಲ ಸಂತರ್ಪಣೆಯನ್ನು ಏರ್ಪಡಿಸಲಾಗಿದೆ.

## ವ್ಯಕ್ತಿ ಗೋಚರವಾಗುವ ಟೆಲಿಫೋನ್

ಅಮೆರಿಕದ ಅಧ್ಯಕ್ಷರ ನಿವಾಸ ಸ್ಥಾನದಲ್ಲಿ ವ್ಯಕ್ತಿಗಳನ್ನು ಕಾಣಬಹುದಾದ ಟೆಲಿವಿಷನ್ ಟೆಲಿಫೋನನ್ನು ಇಡಲಾಗುವುದು. ಯಾರೊಡನೆ ಅಧ್ಯಕ್ಷರು ಸಂಭಾಷಣೆ ನಡೆಸಬೇಕೆಂದು ಇಚ್ಛಿಸುವರೋ ಅವರೊಡನೆ ಮಾತನಾಡುವುದಲ್ಲದೇ ಅವರನ್ನು ನೋಡಲೂ ಸಾಧ್ಯವಾಗುವುದು.

## ವಿಭಜನೆ ದಿನಾಚರಣೆಯಾಗಬೇಕೆಂದು ಸಾವರ್‌ಕರ್

ಭಾರತವು ಒಂದು ದಿನವನ್ನು ಗೋಳಾಟದ ದಿನ ಎಂದು ವಿಭಜನಾ ದಿನಾಚರಣೆಯನ್ನು ನಡೆಸಬೇಕೆಂದು ವಿ. ಡಿ. ಸಾವರ್‌ಕರ್‌ರವರು ಸೂಚಿಸುತ್ತಾರೆ. ಅಂದು ಅಖಂಡ ಹಿಂದೂಸ್ಥಾನದ ಸ್ಥಾಪನೆಗೆ ಪ್ರತಿಯೊಬ್ಬರೂ ದುಡಿಯಲು ಪ್ರತಿಜ್ಞೆ ಕೈಗೊಳ್ಳಬೇಕೆಂದು ಅವರು ಹೇಳುತ್ತಾರೆ.

### ಅಂಗಡಿ ಕೆಲಸಗಾರರ ಸಂಘ

ಮೈಸೂರು ಅಂಗಡಿ ಕೆಲಸಗಾರರ ಸಂಘದ ದಶವಾರ್ಷಿಕೋತ್ಸವದ ಕಾರ್ಯವನ್ನು ಸಲವರ ಅಧ್ಯಕ್ಷತೆಯಲ್ಲಿ ವೈಭವದಿಂದ ಆಚರಿಸಲಾಯಿತು. ಇದುವರೆಗೂ ಸಂಘವು ಮಾಡಿರುವ ಕೆಲಸ ಕಾರ್ಯಗಳನ್ನು ಸಂಘವನ್ನು ಬಲಪಡಿಸಿ ಸಂಘಟನೆ ಮಾಡಬೇಕೆಂದೂ ಈಗ ಜಾರಿಯಲ್ಲಿರುವ ಸರ್ಕಾರದ ಶಾಸನವನ್ನು ಕಡ್ಡಾಯವಾಗಿ ಜಾರಿ ಮಾಡಬೇಕೆಂದೂ ಸಂಘದ ಕಾರ್ಯದರ್ಶಿಗಳು ಕೋರುತ್ತಾರೆ.

### ಸರ್ವೋದಯ ಮೇಳ

ಪೂಜ್ಯ ಬಾಪೂಜಿಯವರ ಚಿತಾಭಸ್ಮ ವಿಸರ್ಜನವಾದ ಕಡೆಗಳಲ್ಲಿ ಸರ್ವೋದಯ ಮೇಳವನ್ನು ಫೆಬ್ರವರಿ 12ನೇ ತಾ॥ ನಡೆಸಲು ಶ್ರೀ ವಿನೋಬಾ ಭಾವೆಯವರು ಕೋರಿದ್ದಾರೆ. ಸಂಯುಕ್ತ ಸೇವಾ ಸಂಘದವರು ಮೇಳವನ್ನು ಶ್ರೀರಂಗಪಟ್ಟಣದಲ್ಲಿ ನಡೆಸಲು ವ್ಯವಸ್ಥೆ ಮಾಡಿದ್ದಾರೆ. ಕಾರ್ಯಕ್ರಮವನ್ನು ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಟಿ. ಕೃಷ್ಣನ್ ಎಸ್. ಎಸ್. ಶಾಸ್ತ್ರಿ, ಕೆ. ಎಸ್. ನಾರಾಯಣ ಸ್ವಾಮಿ ಮತ್ತು ಕೆ. ಸಿದ್ದರಾಮಯ್ಯನವರನ್ನೊಳಗೊಂಡ ಉಪಸಮಿತಿಯನ್ನು ರಚಿಸಿದ್ದಾರೆ. ಶ್ರೀ ಎಸ್. ಸುಬ್ಬಣ್ಣನವರು ಉಪಸಮಿತಿಯ ಸಂಚಾಲಕರು.

॥ ಶ್ರೀ ॥

## ಗಣೇಶ ಟಾಕೀಸ್

31-1-50 ರಿಂದ ಪ್ರತಿದಿನ 3 ಆಟಗಳು

ಪ್ರೇಕ್ಷಕರನ್ನು ನಿರೀಕ್ಷಿಸುತ್ತಿದೆ

# FEDERAL OPERATOR 99

# ಫೆಡರಲ್ ಆಪರೇಟರ್ 99

## ಪೌರಸಭೆ ಮುಂದುವರಿಯಿತು

ಮೈಸೂರು 29

ಪೌರಸಭೆಯ ಸಾಮಾನ್ಯ ಅಧಿವೇಶನವು ನಿನ್ನೆ ಶ್ರೀ ಎಲ್. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಸರ್ವೋದಯ ದಿನಾಚರಣೆ ಪ್ರಯುಕ್ತ ಸಭೆಯನ್ನು 4ನೇ ತಾ॥ಗೆ ಮುಂದುವರಿಸಲಾಯಿತು. ಸರ್ವೋದಯದ ಮಹತ್ವವನ್ನು ಕುರಿತು ಶ್ರೀಗಳಾದ ಪಿ. ಸೀತಾರಾಮಯ್ಯ ಮತ್ತು ಎ. ವೆಂಕಟೇಶಯ್ಯನವರು ಭಾಷಣ ಮಾಡಿದರು.

### ಸರ್ವೋದಯ ಪ್ರಾರ್ಥನಾ ಸಭೆ

ಸರ್ವೋದಯ ದಿನಾಚರಣೆಯ ಸಂಬಂಧವಾಗಿ ನಿನ್ನೆ ಪ್ರಾರ್ಥನಾ ಸಭೆಯು ಟೌನ್‌ಹಾಲ್‌ನಲ್ಲಿ ಜರುಗಿತು. ಕುರಾನ್, ಬೈಬಲ್, ಗೀತೆ ಮತ್ತು ರಾಮಭಜನೆ ನಡೆದನಂತರ ವಂದೇ ಮಾತರಂ ಗೀತೆಯೊಡನೆ ಸಭೆ ಮುಕ್ತಾಯವಾಯಿತು.

### ವನಿತಾ ಸದನ

ಕಳೆದ ಗುರುವಾರ ಹುತಾತ್ಮರ ದಿನಾಚರಣೆಯ ಪ್ರಯುಕ್ತ ಸದನದ ಆವರಣದಲ್ಲಿ ಶ್ರೀ ಅಗರಂ ರಂಗಯ್ಯನವರ ನೇತೃತ್ವದಲ್ಲಿ ಧ್ವಜಾರೋಹಣ ಭಾಷಣ ಮತ್ತು ಪ್ರಾರ್ಥನೆ ಜರುಗಿದವು. ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು.

ಈ ದಿನ ಸಂಜೆ ಗಾಂಧಿ ದಿನಾಚರಣೆಯು ಶ್ರೀಮತಿ ಸುನಂದಮ್ಮನವರ ಅಧ್ಯಕ್ಷತೆಯಲ್ಲಿ ಜರುಗುವುದು. ಶ್ರೀಮತಿ ಗ್ರೇಸ್ ಟಕ್ಕರ್ ಮುತ್ತಣ್ಣನವರು ಭಾಷಣ ಮಾಡುವರು.

### ಶ್ರೀ ಸಪ್ರೂರವರ ಆಗಮನ

ದೆಹಲಿ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಸಪ್ರೂರವರು ನಿನ್ನೆ ಇಲ್ಲಿಗೆ ಆಗಮಿಸಿ ನಗರಾಭಿವೃದ್ಧಿ ಸಮಿತಿಯ ಕಾರ್ಯಕಲಾಪಗಳನ್ನು ಪರಿಶೀಲಿಸಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

### ಮಾರ್ಕೆಟ್ಟಿಗೆ ಬೆಂಕಿ

ತಿರುಚಿರಾಪಳ್ಳಿಯಲ್ಲಿರುವ ಗಾಂಧಿ ಮಾರ್ಕೆಟ್ಟಿನಲ್ಲಿ ಮೊನ್ನೆ ಬೆಂಕಿಯುಂಟಾಗಿ 26 ಅಂಗಡಿಗಳು ಸುಟ್ಟುಹೋದವು. 4 ಸಾವಿರ ರೂ. ಗಳ ನಷ್ಟವಾಗಿದೆ. ಹಿಂದಿನ ರಾತ್ರಿ ಹಚ್ಚಿದ ದೀಪವನ್ನು ಆರಿಸದೆ ಬಿಟ್ಟುಹೋದ ಅಂಗಡಿಯು ಮೊದಲು ಹತ್ತಿಕೊಂಡು, ಉಳಿದ ಅಂಗಡಿಗಳಿಗೆ ಬೆಂಕಿ ವ್ಯಾಪಿಸಿತು.

## ರಷ್ಯದಲ್ಲಿ ಕಮ್ಯೂನಿಸ್ಟ್ ವಿರುದ್ಧ ಚಟುವಟಿಕೆ

ರಷ್ಯದಲ್ಲಿ ಕಮ್ಯೂನಿಸ್ಟ್ ವಿರುದ್ಧ ಚಟುವಟಿಕೆಗಳು ರಹಸ್ಯವಾಗಿ ಸುವ್ಯವಸ್ಥೆಯಿಂದ ಸಾಗುತ್ತಿವೆಯೆಂದು ಅಲ್ಲಿ ಅನೇಕ ವರ್ಷ ರಾಯಭಾರಿಯಾಗಿದ್ದ ವಾಲ್ಟರ್ ಬಿಡಲ್ ಸ್ಮಿತ್‌ರವರು ನ್ಯೂಯಾರ್ಕಿನಲ್ಲಿ ತಿಳಿಸಿರುತ್ತಾರೆ.

### ಸರ್ವೋದಯ ದಿನಾಚರಣೆ

ಮೈಸೂರು ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ನಿನ್ನೆ ಬೆಳಿಗ್ಗೆ ಸರ್ವೋದಯ ದಿನಾಚರಣೆಯನ್ನು ನೆರವೇರಿಸಿದರು. ಶ್ರೀ ಆರ್. ರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ ಮತ್ತು ಮಹಾತ್ಮರ ಗುಣಕಥನ ಮಾಡಿದ ನಂತರ ಪ್ರತಿಯೊಬ್ಬ ಭಾರತೀಯನೂ ದೇಶದ ಪ್ರಗತಿಗಾಗಿ ಪಣತೊಟ್ಟು, ಮಹಾತ್ಮರ ಸತ್ಯಾನುಷ್ಠಾನ ಮಾಡಬೇಕೆಂಬ ನಿರ್ಣಯವನ್ನು ಮಾಡಲಾಯಿತು.

## ರಾಷ್ಟ್ರಧ್ವಜದ ಉಪಯೋಗ

ರಿಪಬ್ಲಿಕ್ ದಿನೋತ್ಸವದ ಸಂದರ್ಭದಲ್ಲಿ ಸಾರ್ವಜನಿಕರು ತಮ್ಮ ವಾಹನಗಳು, ಭವನಗಳು ಮೊದಲಾದುವುಗಳ ಮೇಲೆ ಹಾರಿಸಿದ ಬಾವುಟವನ್ನು ಆ ಸಮಾರಂಭವು ಕಳೆದ ನಂತರವೂ ಹಾಗೆಯೇ ಹಾರಿಸುತ್ತಿರುವರೆಂದೂ, ಇದರಿಂದ ಧ್ವಜಕ್ಕೆ ಅಪಮಾನ ಮಾಡಿದಂತಾಗುವುದೆಂದೂ, ಆದುದರಿಂದ ರಾಷ್ಟ್ರಧ್ವಜವನ್ನು ಉಪಯೋಗಿಸುವುದರ ಬಗ್ಗೆ ಸರ್ಕಾರದವರು ಸಾರ್ವಜನಿಕರಿಗೆ ಸರಿಯಾದ ತಿಳಿವಳಿಕೆ ಕೊಡಬೇಕೆಂದೂ ಪ್ರಾರ್ಥಿಸಿ ಎ. ಎಂ. ಪಿ. ಸಿ. ದಕ್ಷರಾದ ಗುಂಡ್ಲುಪೇಟೆ ಶ್ರೀ ಎಚ್. ಎಸ್. ರಾಮಣ್ಣನವರು ಪತ್ರ ಬರೆದಿದ್ದಾರೆ.

## ರಾಜಕಮಲ್ ಮೈಸೂರು

27—1—50 ರಿಂದ

ಜನಭರಿತವಾದ 5ನೇ ವಾರ

ದಿನವಹಿ 3 ಪ್ರದರ್ಶನಗಳು

# ಜೀವನ

ಭೂಮಿಕೆ:

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

## ಅಲಹಾಬಾದಿನಲ್ಲಿ ಬೆರಿಬೆರಿ ವ್ಯಾಧಿ ಹೆಚ್ಚುತ್ತಿದೆ.

ಅಲಹಾಬಾದಿನಲ್ಲಿ ಇತ್ತೀಚೆಗೆ ಬೆರಿಬೆರಿ ಎಂಬ ವ್ಯಾಧಿಯು ಬಹಳವಾಗಿ ಹರಡುತ್ತಿದೆ. ಅಲ್ಲಿ ಒದಗಿಸುತ್ತಿರುವ ಕೀಳುದರ್ಜೆಯ ಆಹಾರವೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಅನೇಕರಿಗೆ ದೃಷ್ಟಿಯು ಸಹ ಹೋಗುತ್ತಿದೆ. ರೇಷನ್ ಅಂಗಡಿಗಳಲ್ಲಿ ಉತ್ತಮವಾದ ಆಹಾರ ಮತ್ತು ಶುದ್ಧವಾದ ಹಾಲು ಸರಬರಾಜು ಮಾಡುವುದಕ್ಕೆ ಏರ್ಪಡಿಸಬೇಕೆಂದು ವೈದ್ಯರುಗಳು ಸರ್ಕಾರದವರನ್ನು ಒತ್ತಾಯಪಡಿಸುತ್ತಿದ್ದಾರೆ. ಅಮೆರಿಕದಿಂದ ಪುಷ್ಟಿಕರವಾದ ಒಂದು ಆಹಾರವನ್ನು ಸರ್ಕಾರದವರು ತರಿಸಿ, ಪ್ರಯೋಗಾರ್ಥವಾಗಿ ಅದನ್ನು ಬಾಲಕರಿಗೆ ಒದಗಿಸಲಾಗುತ್ತಿದೆಯೆಂದೂ ಇದರ ಉಪಯೋಗದಿಂದ ಬೆರಿಬೆರಿ ವ್ಯಾಧಿಯು ಹರಡುವುದನ್ನು ತಡೆಗಟ್ಟಲಾಗುತ್ತಿದೆಯೆಂದೂ ವರದಿಯಾಗಿದೆ.

### ಹೋಟೆಲ್ ಕೆಲಸಗಾರರ ಸಂಘದ ವಾರ್ಷಿಕೋತ್ಸವ

ಮೈಸೂರು ನಗರದ ಹೋಟೆಲ್ ಕೆಲಸಗಾರರ ಸಂಘದ ತೃತೀಯ ವಾರ್ಷಿಕೋತ್ಸವವು ತಾ॥ 2-2-50ನೇ ಶುಕ್ರವಾರ ಟೌನ್‌ಹಾಲಿನಲ್ಲಿ ನಡೆಯುವುದು. ಶ್ರೀ ಕೆ. ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಆ ದಿನ ಎಲ್ಲ ಹೋಟೆಲುಗಳಿಗೂ ರಜಾ ಇರುವುದರಿಂದ ಕೆಲಸಗಾರರೆಲ್ಲರೂ ಸಭೆಯಲ್ಲಿ ತಪ್ಪದೇ ಭಾಗವಹಿಸಬೇಕೆಂದು ಸಂಘದ ಕಾರ್ಯದರ್ಶಿಗಳು ಕೋರುತ್ತಾರೆ.

### ನೂಲುವ ಸಂಘಗಳ ಸಂಚಾಲಕರ ಆಗಮನ

ಅಖಿಲ ಭಾರತ ಚರಖಾ ಸಂಘದ ಕರ್ನಾಟಕ ಪ್ರಾಂತದ ಶಾಖೆಯ ನೂಲುವ ಸಂಘಗಳ ವ್ಯವಸ್ಥಾಪಕರಾದ ಶ್ರೀ ಅನಂತರಾವ್ ಸಾಸ್‌ಕರ್ ಮತ್ತು ಮೈಸೂರು ಪ್ರಾಂತದ ನೂಲುವ ಶಾಖೆಯ ವ್ಯವಸ್ಥಾಪಕರಾದ ಶ್ರೀ ವೆಂಕಟರಮಣ ಅಯ್ಯಂಗಾರರವರು ಇಲ್ಲಿಗೆ ಆಗಮಿಸಿರುವರು. ಈ ದಿನ ಸಂಜೆ 6 ಘಂಟೆಗೆ ಅವರು ಖದ್ದರ್ ಪರಸ್ಪರ ಸಹಾಯ ಸಂಘದಲ್ಲಿ ಖಾದಿ ಪ್ರೇಮಿಗಳನ್ನು ಕಂಡು ವಿಚಾರ ವಿನಿಮಯ ಮಾಡಿಕೊಳ್ಳುವರು.

## ಗಾಯತ್ರೀ ಟಾಕೀಸ್

31-1-50 ರಿಂದ 2 ದಿನಗಳು ಮಾತ್ರ

ದಿನವಹಿ 3 ಆಟಗಳು

ಜೀವನದಲ್ಲಿ ನಡೆಸಿದ ಸಾಹಸಮಯ

ಚಿತ್ರ

# ರಾಚೆಲ್ ಅಂಡ್ ದಿ ಸ್ಟ್ರೇಂಜರ್

ಪಾತ್ರ:— ಲಾರೆಟ್ಟ ಯಂಗ್, ವಿಲಿಯಂ ಹೋಲ್ಡನ್

FOR SALE

NEWSPRINT

Double Crown Rough Newsprint available at

SADHVI OFFICE

MYSORE

## ಪ್ರಭಾ ★

3—2 50 ರಿಂದ

ಅನೋಖ ಪ್ರಾರಂಭ

ದಿನವಹಿ 3 ಆಟಗಳು

ನ್ಯೂಥಿಯೇಟರ್ಸ್‌ರವರ ಹಿಂದಿಚಿತ್ರ

# ಘೋಷಾ - ಘಾಯಲ್

ಸಂಗೀತ: ಪಂಕಜ್ ಮಲ್ಲಿಕ್

ಪಾತ್ರ

ಮೋತಿಲಾಲ್, ನರ್ಗೀಸ್, ರಾಜಾಸುಲೋಚನ

ಎಲ್ಲಾ ಹಿಂದಿ ಪ್ರಿಯರು ನೋಡಲೇಬೇಕಾದ ಚಿತ್ರ

Edited, Printed and published by A. R. Nagarajan at Sadhvi Press, D. Subbiah Road Mysore

ಶೋ॥ ನಂ. 792 ಗಿಂಡೀ ಗೌಕರೆ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಬುಧವಾರ ೧-೩-೫೦ [ಸಂಚಿಕೆ ೧೫೩

# ಮುಖ್ಯಮಂತ್ರಿ ಮನೆ ಮುಂದೆ ಪ್ರದರ್ಶನವೇ?

## ಮುಖ್ಯ ಮಂತ್ರಿಗಳ ಮನೆ ಮುಂದೆ ಪ್ರದರ್ಶನ

ಬೆಂಗಳೂರು ೧

ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈ ತಿಂಗಳು ೧೦ ನೇ ತಾರೀಖಿನೊಳಗೆ ಹೊಸ ಮಂತ್ರಿ ಮಂಡಲವನ್ನು ರಚಿಸದೇ ಇದ್ದ ಭಾಗದಲ್ಲಿ ಅವರ ನಿವಾಸದ ಎದುರಿನಲ್ಲಿ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಹೆಚ್ ಎಸ್ ದೊರೆಸ್ವಾಮಿ ಮುಂತಾದ ಹಲವರು ಪ್ರದರ್ಶನ ನಡೆಸುವುದಾಗಿ ತಿಳಿಸಿರುತ್ತಾರೆ

## ಟ್ರಸ್ಟ್ ಬೋರ್ಡಿಗೆ ನೇಮಕ

ಆರೋಗ್ಯ ಇಲಾಖೆಯ ಡೈರೆಕ್ಟರವರನ್ನು ನ್ಯೂ ನಗರಾಭಿವೃದ್ಧಿ ಸಮಿತಿಗೆ ಸದಸ್ಯರನ್ನಾಗಿ ನೇಮಕ ಮಾಡಿರುತ್ತಾರೆ.

## ಬಟ್ಟೆ ಮೇಲಿನ ಸುಂಕ ಇಳಿಯಿತು

ಭಾರತ ಸರ್ಕಾರದವರು ಬಟ್ಟೆಯ ಬೆಲೆಯನ್ನು ಪುನಃ ಪರಿಶೀಲಿಸಿ ಉತ್ತಮ ಮಾದರಿ ಬಟ್ಟೆಯ ಮೇಲಿನ ಸುಂಕವನ್ನು ಶೇಕಡ [illegible] ರಷ್ಟು ಇಳಿಸಿ [illegible] ಮಧ್ಯಮ ರೀತಿಯ ಬಟ್ಟೆಯ ಮೇಲಿನ [illegible] [illegible] ಕೆ ಪ [illegible] ನ ಬಟ್ಟೆಗಳಿಗೆ [illegible] ರ ಉತ್ಪತ್ತಿಯಿಂದ [illegible] [illegible] ರೀತಿಯ [illegible] [illegible] ನ [illegible] ಬಿಡಿ [illegible] [illegible] ಪಡಿಸಲಾಗಿದೆ [illegible]

## ಹೊಚ್ಚಿ ಸರಕಾರಕ್ಕೆ ರಷ್ಯದ ಮನ್ನಣೆ

ಇಂಡೋ ಚೀನಾದಲ್ಲಿ [illegible] ಸ್ಥಾಪಿತವಾಗಿರುವ ಡಾ॥ ಹೋಚಿಮಿನ್‌ರವರ ವೀಟ್‌ಮಿನ್ ಸರಕಾರಕ್ಕೆ ಈ ಸರಕಾರದ ಪ್ರಾರ್ಥನೆಯ ಪ್ರಕಾರ ರಷ್ಯವು ಮನ್ನಣೆಯಿತ್ತಿದೆ

## ಸರ್ವೋದಯ ದಿನಾಚರಣೆ

ದೇಶದ ರಾಜಧಾನಿಯ ಸಾರ್ವಜನಿಕ ರೀತಿ ಸಿಲ್ಲಿಯಾದ ವಿದ್ಯಾರ್ಥಿಗಳು [illegible] [illegible] ನವರ [illegible] ತಿಂಗಳ ದಿನಾಚರಣೆಯನ್ನು ನಿನ್ನೆ ನಡೆಸಿದರು. ಸಾರ್ವಜನಿಕ ಪ್ರಾರ್ಥನೆಯೂ ನಡೆಯಿತು [illegible] ಭಾಷಣ ಮಾಡಿ ಮಹಾತ್ಮರ ಕಾಲವಾದ ದಿನ ಪ್ರತಿಯೊಬ್ಬರೂ [illegible] ರಾಷ್ಟ್ರಪತಿಗಾಗಿ ದುಡಿಯುವೆವೆಂದು ಪಣತೊಟ್ಟು ನಿತ್ಯವೂ ಮಹಾತ್ಮರ [illegible] ಧ್ಯಾನ ಮಾಡಬೇಕೆಂದು [illegible]

## [illegible] ಕಂಟ್ರೋಲ್ ಸರಿಮಾಡಬೇಕು

[illegible] ಕಾಲೇಜಿನಲ್ಲಿ ದಿವಾನರ [illegible] ಕೃಷ್ಣಸ್ವಾಮಿ [illegible] ಅಧ್ಯಕ್ಷತೆಯಲ್ಲಿ [illegible] ಪ್ರಶ್ನೆ ಬೋಧನಾ ಪಕ್ಷ [illegible] ಸರಕಾರ [illegible] ರವರು [illegible] ವಿಷಯವನ್ನು ವಿಚಾರಣೆ [illegible] ಬಗೆಯ [illegible] ನಡೆಯುತ್ತಲೇ ಇವೆ [illegible] ನಲ್ಲಿ ಬಂದ, ಕಳ್ಳರ [illegible] [illegible] ಪಕ್ಷ [illegible] ಸೂರ ಕಚೇರಿಯವರೂ, ವಿದ್ಯಾ [illegible] ಮಾಡುವವರೂ ಕೊಡಲೇ ಗಮನ [illegible] [illegible] ಬಾಚಕರೊಬ್ಬರು [illegible] ತ್ತಾರೆ

## ಟೈಗರ್ ವರದಾಚಾರ್ಯರ ನಿಧನ

ಮದರಾಸಿನಲ್ಲಿರುವ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಿನ್ಸಿಪಾಲರಾಗಿದ್ದ [illegible] ಸಂಗೀತ ವಿದ್ವಾಂಸರಾದ ಟೈಗರ್ ವರದಾಚಾರ್ಯ [illegible] [illegible] ನಿನ್ನೆ [illegible] [illegible] ದಲ್ಲಿ ನಿಧನರಾದರೆಂದು ವರದಿ [illegible] ದಿದೆ

## ಜಿಲ್ಲೆಯ ಬಾಬು [illegible] [illegible] ಕೆಗ [illegible] [illegible]

[illegible] [illegible] ಮಾಡುವ [illegible] ಜನ [illegible] ನ್ನು ತಯಾರಿಸುವ [illegible] [illegible] ದ ಪರಿಣ ಬೇಕೆಂದು [illegible] ರವರು ನಿನ್ನೆ [illegible] ದಕ್ಷಣೆಗೆ ಇದು ಅತ್ಯಗತ್ಯವೆಂದು [illegible] ರು ತಿಳಿಸಿರುವರು

## ಭಾಷಣ ಮತ್ತು ಹರಿಕಥೆ

ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ರಾಜಧಾನಿಯ ೩ ನೆಯ [illegible] ಶ್ರೀ ಬ್ರಹ್ಮಾನಂದ [illegible] ಇದೇ ಬುಧವಾರ ಸಂಜೆ ೬ ಘಂಟೆಗೆ ಶ್ರೀ ಪಂಡಿತ [illegible] ರವರಿಂದ "ಗೀತಾ ರಹಸ್ಯ" ಎಂಬ ವಿಷಯವಾಗಿ ಭಾಷಣವೂ ಮತ್ತು ೭ ಘಂಟೆಗೆ ಶ್ರೀ [illegible] ಹರಿದಾಸರಿಂದ ಭಾರತೀಯರವರಿಂದ [illegible] ಎಂಬ ಹರಿಕಥೆಯೂ ನಡೆಯುವುದು

## ರಿಪಬ್ಲಿಕ್ ದಿನಾಚರಣೆ

ಕಳೆದ ಭಾನುವಾರ ಜಲದರ್ಶಿನಿಯ [illegible] ಹತ್ತಿರ ಕೇಂದ್ರದಲ್ಲಿ ರಿಪಬ್ಲಿಕ್ ದಿನಾಚರಣೆಯು ವಿಜೃಂಭಣೆಯಿಂದ ನೆರವೇರಿತು [illegible] ಶ್ರೀಮತಿ [illegible] ದೇವಿಯವರ [illegible] [illegible] ಅಧ್ಯಕ್ಷತೆಯಲ್ಲಿ [illegible] ರಾಷ್ಟ್ರಧ್ವಜವನ್ನು ಪ್ರಜಾ ಪ್ರತಿನಿಧಿ [illegible] ಗಳು ನಡೆದವು [illegible] ಮಕ್ಕಳ ಆಟ [illegible] ಗಳನ್ನು ಪ್ರದರ್ಶಿಸಿದರು [illegible] [illegible] ಕ್ರೀಡೆಗಳನ್ನು [illegible] ನಡೆದವು [illegible] ಹರಿದಾಸರಿಂದ [illegible] ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು

## ಮೋಂಪೆರರ ಪ್ರಾರ್ಥನೆ ಸಲ್ಲಿಸಲಿಲ್ಲ

ಬೆಂಗಳೂರು ೧

ಇಲ್ಲಿನ [illegible] ಕೋರ್ಟಿನ ಅಧಿಕಾರಿಗಳ [illegible] ಪೇಪರಿನ [illegible] [illegible] ರವರು [illegible] [illegible] ಕೊಟ್ಟಿದ್ದ ನೋಟೀಸಿನ [illegible] [illegible] [illegible] [illegible] [illegible]

[illegible] ಮುಖ್ಯ [illegible] ಕೋರ್ಟು [illegible] [illegible] [illegible] ತೀರ್ಪು [illegible] ತ್ತಿದೆ

## ರಷ್ಯಕ್ಕೆ ಫ್ರಾನ್ಸಿನ ಪ್ರತಿಭಟನೆ

ಇಂಡೋ ಚೈನಾದಲ್ಲಿರುವ ಹೋಚಿಮಿನ್‌ರವರ ಸರಕಾರಕ್ಕೆ ರಷ್ಯವು ಮನ್ನಣೆ ಯಿತ್ತಿರುವುದನ್ನು ಫ್ರಾನ್ಸ್ ಪ್ರತಿಭಟಿಸಿ ರಷ್ಯಕ್ಕೆ ಪತ್ರ ಬರೆದಿದೆ. ಇದರಿಂದ ಫ್ರಾನ್ಸ್-ರಷ್ಯದ ಸಂಬಂಧವು ಕೆಡುವುದೆಂದು ಹೇಳಲಾಗಿದೆ

## ಎಲ್ಲರೊಡನೆ ಶಾಂತಿ ಮತ್ತು ಸಖ್ಯವೇ ಭಾರತದ ನೀತಿ

ಪ್ರಪಂಚದ ಎಲ್ಲಾ ರಾಜ್ಯಗಳೊಡನೆಯೂ ಶಾಂತಿ ಮತ್ತು ಸಖ್ಯಗಳಿಂದ ಇರಬೇಕೆಂಬುದೇ ಭಾರತದ ನೀತಿಯೆಂದು ನಿನ್ನೆ ಪಾರ್ಲಿಮೆಂಟನ್ನು ಉದ್ದೇಶಿಸಿ ಮಾತನಾಡುತ್ತಾ ಅಧ್ಯಕ್ಷ ರಾಜೇಂದ್ರಪ್ರಸಾದರವರು ತಿಳಿಸಿದರು. ರಿಪಬ್ಲಿಕ್ ಸರಕಾರವು ಪ್ರಜಾಸತ್ತಾತ್ಮಕ ಗಿರುವ ಧ್ಯೇಯವನ್ನು ಯಾವ ರಾಜ್ಯದ ಮೇಲೂ ಹೊಂದಿಲ್ಲ. ಪ್ರಪಂಚಕ್ಕೆ ಶಾಂತಿಯನ್ನು ತರುವುದೇ ನಮ್ಮ ಸರಕಾರದ ಅಭಿಲಾಷೆಯೆಂದು ಅವರು ಹೇಳಿದರು

## ಅಮೆರಿಕದಲ್ಲಿ ವಿಶೇಷ ಜನಾಂಗ [illegible] ನೀತಿ

[illegible] [illegible] [illegible] [illegible] [illegible] [illegible] ರವರ [illegible] ಸೂಚನೆಗಳನ್ನು [illegible] ಪರಿಗಣಿಸಿ [illegible] [illegible] ಸ್ಟೇಟ್ [illegible] [illegible] ಮಾಡಿದೆ

## ಇನಾಂತಿಗಳ ರದ್ದು

ಬೆಂಗಳೂರು ೧

ಸಂಸ್ಥಾನದಲ್ಲಿರುವ ಎಲ್ಲ ಬಗೆಯ ಇನಾಂದಾರಿಗಳನ್ನು ರದ್ದುಪಡಿಸುವಂತೆ [illegible] ಇನಾಂದಾರರಿಗೆ ಒಂದು ನಿಗದಿಯಾದ ಪ್ರಮಾಣದಲ್ಲಿ ಪರಿಹಾರ ಕೊಡುವಂತೆಯೂ ಭೂ [illegible] ಪರಿಶೀಲನಾ ಸಮಿತಿಯವರು ಸರಕಾರಕ್ಕೆ ಶಿಫಾರಸ್ ಮಾಡಿದ್ದಾರೆ. ಸರ್ಕಾರದವರು ವ್ಯವಸಾಯಗಾರರಿಗೂ ಮಧ್ಯೆ ಯಾವ ಮಧ್ಯವರ್ತಿಗಳೂ ಇರಬಾರದೆಂಬ ತತ್ವವನ್ನು ಅಂಗೀಕರಿಸುವಂತೆ ಅವರು ಸೂಚಿಸಿದ್ದಾರೆ ಆರು ವರ್ಷಕ್ಕೆ ಮೀರಿ ಸಾಗುವಳಿ ಮಾಡುತ್ತಿರುವ ಜಮೀನುದಾರನಿಗೇ ಅದರ ಮೇಲಿನ ಹಕ್ಕುದಾರಿಯನ್ನು ಕೊಡಿಸಬೇಕೆಂದೂ ಅವರು ಶಿಫಾರ್ಸು ಮಾಡಿದ್ದಾರೆ ದೇವಾಲಯಗಳಿಗೆ ಕೊಡಲ್ಪಟ್ಟಿ ಇನಾಮುಗಳನ್ನೂ ಸಹ ವಶಪಡಿಸಿಕೊಂಡು ರೈತರಿಗೆ ಅವನ್ನು ಮಾರಿ, ದೇವಾಲಯಗಳ ಪೂಜೆಗೆ ಬೇಕಾಗುವ ಮೊಬಲಗನ್ನು ಸಾವತಿ ಮಾಡಬೇಕೆಂದೂ ಸಹ ಅವರು ಸಲಹೆ ಮಾಡಿರುತ್ತಾರೆ

## ಮಠ, ದೇವಾಲಯಗಳಿಗೆ ನೀಡುವಿಕೆಯ ಧಾನ್ಯ

ಮಠ ದೇವಾಲಯ ಗಳಿಗೆ ಆಹಾರ ಧಾನ್ಯವನ್ನು ಬಾಗಿ ಜನರು ದಾನವನ್ನಾಡುವ [illegible] [illegible] ಪ್ರತಿಬಂಧಕವಾಗಿ ಈ [illegible] ಬೇಕಾಗಿರದಂತೆ ರಹ [illegible] ಬೇಕೆಂದು ಸರಕಾರದ [illegible] [illegible] ತಿಳಿಸುತ್ತಾರೆ

## ಸೆಂಟ್ರಲ್ ಚೀನಾ ಭಾರತದ ಮೇಲೆ ಬೀಳುವುದೇ?

ಚೀನಾ ಕಮ್ಯೂನಿಸ್ಟರು ಭಾರತದ [illegible] [illegible] ಯೋಚಿಸುತ್ತಿರುವುದಾಗಿ [illegible] ಕೈದೀಕರು [illegible] [illegible] [illegible] ತಮಗೆ ಈಗ [illegible] ವನ್ನು ಭದ್ರಗೊಳಿಸುವ ಸಲುವಾಗಿ [illegible] ಪತ್ರಿಕೆಯು ಎಷ್ಟು [illegible] ಹೊರಟಿರುವುದಾಗಿ ತಿಳಿಸಿದ್ದಾರೆ

## ಆದಾಯದ ತೆರಿಗೆಯ ಪ್ರಾಂತಗಳಿಗೆ ಹಂಚಿಕೆ

ಭಾರತದ ಸಮಸ್ತ ಪ್ರಾಂತಗಳ ಆದಾಯ ತೆರಿಗೆಯ ಬಗ್ಗೆ ಸಿ. ಡಿ. ದೇಶಮುಖ್‌ರವರು ಮಾಡಿರುವ ತೀರ್ಮಾನವನ್ನು ಭಾರತ ಸರಕಾರದವರು ಅಂಗೀಕರಿಸಿದ್ದಾರೆ ಇದರಿಂದ ಮುಂಬಯಿಗೆ ಎಲ್ಲ ಪ್ರಾಂತಗಳಿಗಿಂತ ಹೆಚ್ಚು ಆದಾಯ ತೆರಿಗೆಯ ಭಾಗವು ದೊರಕುತ್ತದೆ ಈ ತೀರ್ಮಾನದ ಪ್ರಕಾರ ಬೊಂಬಾಯಿಗೆ [illegible], [illegible], ಉತ್ತರ ಪ್ರದೇಶಕ್ಕೆ [illegible], [illegible], ಮದ್ರಾಸಿಗೆ [illegible], ಮಧ್ಯ ಪ್ರದೇಶಕ್ಕೆ [illegible], [illegible], ಅಸ್ಸಾಂ ಮತ್ತು ಒರಿಸ್ಸಾಗಳಿಗೆ [illegible] ರಷ್ಟು ಹಂಚಲಾಗುವುದು

## ರಾಜಾಜಿಯವರಿಗೆ ೧೧೦೦೦ ರೂ [illegible] ವೇತನ

[illegible] [illegible] ಗವರ್ನರ್ ಜನರಲ್ ರಾಜಾಜಿ [illegible] [illegible] ರೂ ವಿರಾಮ [illegible] [illegible] ವೇತನವೊಂದು [illegible] [illegible] ಲಿದೆ

[illegible] ರಾಷ್ಟ್ರೋತ್ಸವ [illegible] ನ ಎಲ್ಲಾ [illegible] [illegible] ನಲ್ಲಿ ನೊ [illegible] ರಾಷ್ಟ್ರೀಯ [illegible] [illegible] ಪ್ರತಿನಿಧಿಗಳು [illegible]

## ಜಯಪ್ರಕಾಶರ ಉಪವಾಸ ಮುಷ್ಕರವಿಲ್ಲ

ಕೆಲವು ದಿವಸಗಳ ಕೆಳಗೆ ಅಂಚೆ ನೌಕರರು ಮುಷ್ಕರ ಹೂಡಿದ್ದ ಕಾಲದ ಸಂಬಳವನ್ನು ಅವರಿಗೆ ತಾತ್ಕಾಲಿಕ ಪಂಚಾಯಿತಿಯನ್ನು ಇನ್ನೂ ಕೊಡದಿರುವುದಕ್ಕಾಗಿ ಅಂಚೆ ನೌಕರರ ಸಂ॥ ಅಧ್ಯಕ್ಷ ಜಯಪ್ರಕಾಶ ನಾರಾಯಣರು ಉಪವಾಸ ಮುಷ್ಕರ ಕೈಗೊಳ್ಳುವುದಾಗಿ ಹೇಳಿದ್ದರಷ್ಟೆ. ಅಂಚೆ ನೌಕರರ ಸಂಘದವರಿಗೂ ಭಾರತ ಸರ್ಕಾರದ ವಾರ್ತಾ ಶಾಖೆಗೂ ಮಾತುಕತೆ ನಡೆದ ಒಂದು ಒಪ್ಪಂದವಾಗಿರುವುದರಿಂದ ಅವರು ಮುಷ್ಕರವನ್ನು ಕೈಗೊಳ್ಳುವುದಿಲ್ಲವೆಂದು ತಿಳಿದುಬಂದಿದೆ

## ಹಳೆಯ ದೆಹಲಿಯಲ್ಲಿ ಅಧ್ಯಕ್ಷರ ಮೆರವಣಿಗೆ

ಹಳೆಯ ದೆಹಲಿ ನಗರದಲ್ಲಿ ಇರುವ ಭಾರತದ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು ಮೆರವಣಿಗೆಯಲ್ಲಿ ಬರುವಾಗ ಅಲ್ಲಿನ ಪೌರಸಭೆಯವರು ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸುವರು. ಈ ಮೆರವಣಿಗೆಯ ಮುಂಭಾಗದಲ್ಲಿ ಟ್ಯಾಂಕುಗಳೂ, ಶಸ್ತ್ರಸಜ್ಜಿತ ವಾಹನಗಳೂ ಇರುವುವು

## ೧೧ ಸಾವಿರ ಜನ ರೇಷನ್ ದಾರರು ಅಕ್ಕಿ ಬಿಟ್ಟರು

ಭಾರತದ ದಕ್ಷಿಣ ಭಾಗದಲ್ಲಿ ಆಹಾರದ ಕೊರತೆಯನ್ನು ನಿಲ್ಲಿಸುವ ಸಲುವಾಗಿ ಬೊಂಬಾಯಿನ ೧೧ ಸಾವಿರ ನಾಗರಿಕರು ತಮ್ಮ ಒಂದು ವಾರದ ಅಕ್ಕಿಯ ರೇಷನನ್ನು ಬಿಟ್ಟುಕೊಟ್ಟಿದ್ದಾರೆ ... ಅಕ್ಕಿ ಉಳಿಸಲಾಗಿದೆ

## ದಕ್ಷಿಣ ಆಫ್ರಿಕದಲ್ಲಿ ಪುನಃ ಗಲಭೆ

ಪೋಲೀಸರಿಗೂ ... ದಕ್ಷಿಣ ಆಫ್ರಿಕದ ... ನಿನ್ನೆ ... ದಂಗೆಗಳು ನಡೆದವೆಂದು ವರದಿಯಾಗಿದೆ ... ಆಫ್ರಿಕನ್ನರು ... ಬಂದೂಕಿನಿಂದ ... ಹೇಳಲಾಗಿದೆ ... ಪತ್ತೆಹಚ್ಚಿ ...

## ಭೂಕಂಪದಿಂದ ೨೦ ಊರುಗಳ ನಾಶ

... ಭೂಕಂಪದ ... ೨೦ ಊರುಗಳು ನಾಶವಾದುವು ... ಜನ ... ವರದಿಯಾಗಿದೆ ... ನಗರವನ್ನು ... ಹೇಳಲಾಗಿದೆ

## ಸಕ್ಕರೆ ಪತ್ತೋಟ ತಪ್ಪಿಸಲು ಪ್ರಾರ್ಥನೆ

... ಸಕ್ಕರೆ ... ಕಾರ್ಖಾನೆ ... ಅಧ್ಯಕ್ಷರು ... ದೇವರಲ್ಲಿ ... ಪ್ರಾರ್ಥಿಸಿದ್ದಾರೆ

## ಲಕ್ಷಾಂತರ ರೂಪಾಯಿನ ಖೋಟಾ ನೋಟುಗಳು

ಲಕ್ನೋ ನಗರದಲ್ಲಿ ... ಬೆಲೆ ಬಾಳುವ ಸ್ಯಾನು ನೂರು ರೂಪಾಯಿನ ಖೋಟಾ ನೋಟುಗಳೂ, ಮತ್ತು ಅವುಗಳ ತಯಾರಿಕೆಗೆ ಉಪಯೋಗವಾಗುವ ಸಾಮಾನುಗಳೂ ಪೊಲೀಸರಿಗೆ ಸಿಕ್ಕಿವೆ. ಈ ಸಂಬಂಧದಲ್ಲಿ ಹಲವರ ದಸ್ತಗಿರಿ ಆಗಿದೆ

## ಪಶ್ಚಿಮ ಮತ್ತು ಆಫ್ಘನ್ ದೊರೆಯ ಭೇಟಿ

ಆಫ್ಘಾನಿಸ್ಥಾನದ ... ರಾಯಭಾರಿಯವರು ... ಭೇಟಿ ಮಾಡಿದರು.

## ಭಾರತದ ಗೀತೆ

ಏಪ್ರಿಲ್ ದಿನಕ್ಕಾಗಿ ಮದ್ರಾಸು ವಿಶ್ವವಿದ್ಯಾಲಯದ ಸಂಸ್ಕೃತ ಪ್ರೊಫೆಸರಾದ ಡಾ॥ ಕುನ್ಹನ್ ರಾಜರವರು ಸಂಸ್ಕೃತ ಭಾಷೆಯಲ್ಲಿ ಭಾರತದ ಗೀತೆಯೊಂದನ್ನು ರಚಿಸಿರುತ್ತಾರೆ. ಭಾರತದ ಪ್ರಾಚೀನ ಸಂಸ್ಕೃತಿಯು ಗ್ರೀಕ್, ರೋಮನ್, ಮುಂತಾದ ಇತರ ಸಾಮ್ರಾಜ್ಯಗಳು ಪ್ರವರ್ಧಮಾನದಲ್ಲಿದ್ದಾಗ ಭಾರತವೂ ಬಲಶಾಲಿಯಾಗಿದ್ದುದನ್ನು ಗೀತೆಯಲ್ಲಿ ಕೊಂಡಾಡಲಾಗಿದೆ

## ರೈಲ್ವೆಯವರಿಂದ ಸರ್ವೋದಯ ದಿನಾಚರಣೆ

ರಾಜಧಾನಿಯ ಮೈಸೂರು ರೈಲ್ವೆ ನೌಕರರ ಸಂಘದವರು ಮೊನ್ನೆ ದಿನ ಜನಾಬ್ ಗುಲಾಬ್ ... ರವರ ಅಧ್ಯಕ್ಷತೆಯಲ್ಲಿ ಸರ್ವೋದಯ ದಿನಾಚರಣೆಯನ್ನು ನೆರವೇರಿಸಿದರು. ಶ್ರೀಗಳಾದ ಕ್ಷೀರಸಾಗರ, ಬಿ. ಎನ್. ಶ್ರೀಕಂಠಯ್ಯ ಮತ್ತು ಸಿ. ಆರ್. ... ಮೂರ್ತಿಯವರುಗಳು ಮಹಾತ್ಮರ ಗುಣಕಥನ ಮಾಡಿದರು

## ಭಾರತದ ಸಾಲ ತೀರಿಸಲು ಬ್ರಿಟನ್ನಿಗೆ ಅಮೆರಿಕದ ಸಾಲ

ಭಾರತಕ್ಕೆ ತೆರಬೇಕಾಗಿರುವ ಸಾಲವನ್ನು ತೀರಿಸುವ ಸಲುವಾಗಿ ಬ್ರಿಟನ್ನು ಅಮೆರಿಕಕ್ಕೆ ಮನವಿಮಾಡಿ ೩ ಸಾವಿರ ಮಿಲಿಯ ಡಾಲರುಗಳ ಸಾಲವನ್ನು ಕೇಳಲಿರುವುದೆಂದು ಹೇಳಲಾಗಿದೆ

## ಕಾಂಗ್ರೆಸ್ಸಿಗರನ್ನು ದಾರಿಗೆ ತರಲು ಉಪವಾಸ ವ್ರತ

ಕಾಶಿಯಲ್ಲಿ ದುರ್ಮಾರ್ಗ ಪ್ರವರ್ತಕರಾಗಿರುವ ಹಲವರು ಕಾಂಗ್ರೆಸ್ಸಿಗರನ್ನು ಸನ್ಮಾರ್ಗಕ್ಕೆ ಎಳೆಯುವ ಉದ್ದೇಶದಿಂದ ಶ್ರೀ ಮನುವರ್ಮಾ ಪ್ರಸಾದ್ ಎಂಬುವರು ಚಿರಾವಧಿ ಉಪವಾಸ ವ್ರತ ಕೈಗೊಳ್ಳಲು ನಿರ್ಧರಿಸಿರುವರೆಂದು ವರದಿಯಾಗಿದೆ

## ಹೆಣದ ಮನೆಗೆ ಕಳ್ಳನ ಪ್ರವೇಶ

ಜಲಂಧರದ ಶವಗೃಹವೊಂದಕ್ಕೆ ಮೊನ್ನೆ ರಾತ್ರಿ ಕಳ್ಳನೊಬ್ಬನು ನುಗ್ಗಿ ಅಲ್ಲಿದ್ದ ವೈದ್ಯರ ಚಿಕಿತ್ಸಾ ಶಸ್ತ್ರಗಳನ್ನೂ ಅವರು ಹಾಕಿಕೊಳ್ಳುವ ನಿಲುವಂಗಿಯನ್ನೂ ಹೊತ್ತುಕೊಂಡು ಹೋಗಿರುವನೆಂದು ವರದಿಯಾಗಿದೆ

## ಹರಿಕಥೆ

ದೇವರಾಜ ಮೊಹಲ್ಲಾ ಆನೆಸಾರೋಟು ಬೀದಿಯಲ್ಲಿರುವ ಭಜನೆ ವೆಂಕಟಪ್ಪನವರ ರಾಮಮಂದಿರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ ಆರ್. ಎಸ್. ಕೇಶವದಾಸರಿಂದ "ಭಕ್ತ ಗೋರಕುಂಬಾರ" ಎಂಬ ಹರಿಕಥೆ ನಡೆಯುವುದು

○ ಪೌರಸಭೆಗಳಿಗೂ ಏಪ್ರಿಲ್ ಒಂದರಿಂದಲೇ ಹೊಸ ವರ್ಷವು ಆರಂಭವಾಗತಕ್ಕದ್ದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ

## ಅಮೆರಿಕಕ್ಕೆ ಆರ್ಕಾಟರ ಪ್ರಯಾಣ

ವಿಶ್ವಸಂಸ್ಥೆಯ ವಾಣಿಜ್ಯ ಸಮ್ಮೇಳನದಲ್ಲಿ ಭಾಗವಹಿಸಲು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ನಿನ್ನೆ ಭಾರತದ ನಿಯೋಗದವರೊಡನೆ ಬೊಂಬಾಯಿಯಿಂದ ಪ್ರಯಾಣ ಬೆಳೆಸಿದರು

## ೧೦ ಸಾವಿರ ಕರಾಚಿ ವಿದ್ಯಾರ್ಥಿಗಳಿಗೆ ಪಾಠವಿಲ್ಲ

ಮೈಸೂರ ರೇಷ್ಮೆ ಕಾರ್ಖಾನೆಯ ನೌಕರ ಶ್ರೀ ಜಯರಾಜ ಪ್ರಶೆಟ್ಟಿ ಎಂಬುವರು ... ರಿಗೆ ಕೊಟ್ಟಿದ್ದ ... ಚೆಕ್ಕಿಗೆ ... ನೌಕರನಿಗೆ ಹಣ ತೆಗೆದುಕೊಳ್ಳಲು ಅವರು ಶ್ರೀ ... ಎಂಬುವರೊಡನೆ ನೆನ್ನೆ ಬೆಳಗ್ಗೆ ... ಹೋಗಿ ಚೆಕ್ಕಿಗೆ ... ಹಣ ಪಡೆದು ... ಶೆಟ್ಟರು ಎಲ್ಲಿಗೋ ಹೋಗಿದ್ದಾಗ ... ನೌಕರನು ಶ್ರೀ ... ಹೇಳಲಾಗಿದೆ ... ಕೈಲಿಗೆ ಪ್ರಯಾಣ ಮಾಡಬೇಕಾಗಿದ್ದ ಆತುರದಲ್ಲಿ ... ಬ್ಯಾಂಕಿನಲ್ಲಿ ಶ್ರೀ ... ಶೆಟ್ಟರ ... ಹಣ ಪಡೆಯಲು ಪ್ರಯತ್ನಿಸಿದನು ... ವ್ಯತ್ಯಾಸವಿದ್ದದನ್ನು ... ನೌಕರನನ್ನು ... ಪೋಲೀಸರ ... ಲಕ್ಷ್ಮೀಪುರಂ ಪೋಲೀಸರು ... ದಸ್ತಗಿರಿ ಮಾಡಿ ...

## ಬೆಂಗಳೂರಿನಲ್ಲಿ ಷೇಕ್ ಅಬ್ದುಲ್ಲಾ

[ಸ್ವಂ ಸು ವರದಿ] ಬೆಂಗಳೂರು ೧೮

ಈ ಬೆಳಗ್ಗೆ ೯ ಗಂಟೆಗೆ ಕಾಶ್ಮೀರದ ಮುಖ್ಯಮಂತ್ರಿ ಷೇಕ್ ಅಬ್ದುಲ್ಲಾರವರು ಮದರಾಸಿನಿಂದ ವಿಮಾನದಲ್ಲಿ ಆಗಮಿಸಿದರು ಅವರನ್ನು ನಿಲ್ದಾಣದಲ್ಲಿ ವಿದ್ಯಾಮಂತ್ರಿಗಳೂ ಮತ್ತು ಕಾಂ|| ಅಧ್ಯಕ್ಷರೂ ಆದ ಶ್ರೀ ಟಿ ಸಿದ್ದಲಿಂಗಯ್ಯ, ಮೇಯರ್ ಶ್ರೀ ಕೇಶವಯ್ಯಂಗಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ... ಯ್ಯಂಗಾರ್, ಡಾ|| ಎ ಎಸ ಖಲೀಲ್ ಮೊದಲಾದವರು ಸ್ವಾಗತಿಸಿದರು ಅವರು ... ಭವನದಲ್ಲಿ ತಂಗಿದ್ದಾರೆ

ಇಲ್ಲಿನ ನ್ಯಾಷನಲ್ ಕಾಲೇಜಿನಲ್ಲಿ ಈ ದಿನ ಸಂಜೆ ಷೇಕ್ ಅಬ್ದುಲ್ಲಾರವರು ಭಾಷಣ ... ಸಭೆಯ ... ತ್ಯಾಗ ... ವತಂತ್ರ್ಯ ... ನಡೆಸಿ ... ಶ್ರೀನಗರದಿಂದ ... ಕಾಶ್ಮೀರ ... ಮುಂದಾಗಿ ... ಮೈಸೂರಿನವರು ... ಸೂಚಿಸಿದರು

### ಪಂಚಾಂಗ ಸ್ವೀಕಾರ

ಕೊಳ್ಳೇಗಾಲದಲ್ಲಿರುವ ... ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ವೆಂಕಟಸುಬ್ಬ ... ಪ್ರಕಟಿಸಿರುವ ಶ್ರೀ ... ಪಂಚಾಂಗವನ್ನು ... ಸ್ವೀಕರಿಸಿದ್ದಾರೆ ... ಅನೇಕ ಉಪಯುಕ್ತ ... ಕೊಡಲ್ಪಟ್ಟಿವೆ ಮತ್ತು ಕರ್ನಾಟಕ ... ಶ್ರೀಮನ್ನ ... ಆಂಧ್ರ ಪ್ರಾಂತದ ರಚನೆ ... ಬೆಲೆ ೮ ಆಣೆ

### ಹೊಸ ಸಿಟಿ ಮ್ಯಾಜಿಸ್ಟ್ರೇಟರು

... ಸಿಟಿ ಮ್ಯಾಜಿಸ್ಟ್ರೇಟ್ ... ಶ್ರೀ ... ಜಿಲ್ಲೆಗೆ ... ಹೋಗಿರುವುದರಿಂದ ಶ್ರೀ ... ಸಿಟಿ ಮ್ಯಾಜಿಸ್ಟ್ರೇಟರಾಗಿ ... ಅಧಿಕಾರ ...

### ಕಾಶ್ಮೀರ ಪ್ರಶ್ನೆ ಬಗ್ಗೆ ಈಜಿಪ್ಟಿನ ಸಂಧಾನ

ಕಾಶ್ಮೀರದ ಪ್ರಶ್ನೆ ಸಂಬಂಧವಾಗಿ ಈಜಿಪ್ಟಿನ ಸರಕಾರವು ಕರಾಚಿಯಲ್ಲಿಯೂ ದೆಹಲಿ ಮತ್ತು ವಿಶ್ವ ಸಂಸ್ಥೆಗಳಲ್ಲಿರುವ ತನ್ನ ಪ್ರತಿನಿಧಿಗಳನ್ನು ಕರೆಕಳುಹಿಸಿದೆ. ಭಾರತ ಮತ್ತು ಪಾಕಿಸ್ಥಾನಗಳೊಡನೆ ಈಜಿಪ್ಟಿಗೆ ಹೆಚ್ಚಿನ ಮಿತ್ರತ್ವವಿರುವುದರಿಂದ ಉಭಯರಿಗೂ ಇರುವ ವ್ಯತ್ಯಾಸಗಳನ್ನು ನಿವಾರಿಸಲು ಈಜಿಪ್ಟು ಸಕಲ ಪ್ರಯತ್ನಗಳನ್ನೂ ಮಾಡುವುದೆಂದು ಹೇಳಲಾಗಿದೆ

### ಅಲಹಾಬಾದಿನಲ್ಲಿ ಜಲಜನಕ ಬೆಲೂನ್

ಕೆಲವು ದಿವಸಗಳ ಹಿಂದೆ ಅಲಹಾಬಾದಿನ ಬಳಿ ಬಾಯುಗೂರ್ ಎಂಬ ಹಳ್ಳಿಯ ಲ್ಲಿ ಜನರು ೬ ಅಡಿ ಎತ್ತರದ ಒಂದು ಜಲಜನಕ ಬೆಲೂನನ್ನು ಕಂಡು ಆಶ್ಚರ್ಯ ಚಕಿತರಾದ ವರದಿ ಬಂದಿದೆ. ಅದಕ್ಕೊಂದಿಗೆ ಒಂದು ಯಂತ್ರವನ್ನೂ ಮತ್ತು ಒಂದು ಡ್ರೈಸೆಲ್ಲನ್ನೂ ಜೋಡಿಸಲಾಗಿತ್ತೆಂದು ಹೇಳಲಾಗಿದೆ ಮುಂದಾಗರೂಕರಾಗಿರುವ ಉದ್ದೇಶದಿಂದ ಪೋಲೀಸರು ಬೆಲೂನನ್ನು ವಶಪಡಿಸಿಕೊಂಡಿರುವರೆಂದೂ, ಅದರ ಬಗ್ಗೆ ತನಿಖೆ ನಡೆಯುತ್ತಿದೆ ಯೆಂದೂ ತಿಳಿಸಲಾಗಿದೆ

### ಬೊಂಬಾಯಿ ಬ್ಯಾಂಕಿನ ದರೋಡೆಗಾರನ ಬಂಧನ

ಬೊಂಬಾಯಿನ ಸೆಂಟ್ರಲ್ ಬ್ಯಾಂಕಿನಲ್ಲಿ ಕೆಲವು ತಿಂಗಳ ಹಿಂದೆ ಆದ ... ಲಕ್ಷ ರೂಗಳ ದರೋಡೆ ಸಂಬಂಧವಾಗಿ ಮುಲ್ಕಿ ... ಪೋಲೀಸರು ಅನುಮಾನದ ಮೇಲೆ ಸೈಕಲ್ ಸವಾರನೊಬ್ಬನನ್ನು ... ದಸ್ತಗಿರಿ ಮಾಡಿದಾಗ ಅವನ ಹತ್ತಿರ ... ಸಾವಿರ ರೂ ... ನೋಟುಗಳ ದೊರೆತವು

### ಹೆಂಡತಿ ಗಂಡನಿಗೆ ವಿಧೇಯಳಾಗಿರಬೇಕು

ತನ್ನ ಅಪ್ಪಣೆ ಇಲ್ಲದೆ ಮನೆಯಿಂದ ಹೊರಗೆ ಹೋಗುವುದಾಗಲೀ, ರೇಡಿಯೋ ಕೇಳುವುದಾಗಲೀ, ಪುಸ್ತಕ ಓದುವುದಾಗಲೀ, ಅಥವಾ ತಾನು ತರುವಾಣಿ ... ಕೊಳ್ಳುವುದಾಗಲೀ ಯಾವುದೂ ಮಾಡಕೂಡದೆಂದು ಕೈರೋವಿನ ಗಂಡನೊಬ್ಬನು ಮಾಡಿದ ಆಜ್ಞೆಯನ್ನು ಪ್ರತಿಭಟಿಸಿ ಆತನ ಹೆಂಡತಿಯು ನ್ಯಾಯಾಸ್ಥಾನಕ್ಕೆ ಹೋದಳು. ನ್ಯಾಯಾಧೀಶರು ಗಂಡನ ಆಜ್ಞೆಗೆ ಪ್ರವರ್ತಕರವಾಗಿ ತೀರ್ಪಿತ್ತು ... ಹೆಂಡತಿ ಗಂಡನಿಗೆ ವಿಧೇಯಳಾಗಿರಬೇಕೆಂದೂ ಆಜ್ಞೆ ಮಾಡಿದರೆಂದು ವರದಿಯಾಗಿದೆ

### ಚರ್ಚಿಲ್ಲರ ಚುನಾವಣಾ ಪ್ರಚಾರದ ಪ್ರಾರಂಭ

ಚರ್ಚಿಲ್ಲರು ಎಸ್ಸೆಕ್ಸ್‌ನಲ್ಲಿನ ವುಡ್ ಫೋರ್ಡ್ ... ಕ್ಷೇತ್ರದಲ್ಲಿ ಚುನಾವಣಾ ಪ್ರಚಾರವನ್ನು ಆರಂಭಿಸಿದರು ಹೇಳಿಕೊಳ್ಳಲು ತಮಗೆ ಹೊಸದಾದ ಯಾವ ಸಿದ್ಧಿಯೂ ಇಲ್ಲದಿದ್ದರೂ ರಾಷ್ಟ್ರವನ್ನು ಸರಿಯಾದ ದಾರಿಯಲ್ಲಿ ಹೋಗುವಂತೆ ಮಾಡುವುದೇ ತಮ್ಮ ಗುರಿ ಎಂದು ಹೇಳಿದರು.

### ನಕ್ಷತ್ರಗಳ ಫೋಟೋ

ಇದುವರೆಗೂ ಸಾಧ್ಯವಾಗದ ನಕ್ಷತ್ರಗಳ ಫೋಟೋಗಳನ್ನು ಇನ್ನು ಮೇಲೆ ತೆಗೆಯಲು ಸಾಧ್ಯವಾಗುವುದು ... ನಲ್ಲಿ ... ನಕ್ಷತ್ರಗಳ ಚಿತ್ರವನ್ನು ತೆಗೆದ ...

## ಸೇಲಂ ಜೈಲಿನ ದುರಂತ ಪ್ರಕರಣ

ಕಳೆದ ಶನಿವಾರ ಸೇಲಂ ಜೈಲಿನಲ್ಲಿ ನಡೆದ ಗುಂಡಿನ ಪ್ರಕರಣದಿಂದ ಒಟ್ಟು ೨೧ ಮಂದಿ ಸತ್ತು, ೧೦೬ ಮಂದಿ ಗಾಯಗೊಂಡಿರುವರೆಂದು ಈಚಿನ ವರದಿ ತಿಳಿಸುತ್ತದೆ. ಕಮ್ಯೂನಿಸ್ಟ್ ಬಂದಿಗಳು ಜೈಲಿನ ನಿಯಮಗಳನ್ನು ನಿರಾಕರಿಸಿ ದುಷ್ಕೃತ್ಯದಲ್ಲಿ ತೊಡಗಿದುದರಿಂದ ಇಷ್ಟು ನಡೆಯಿತೆಂದು ಸೇಲಂ ಜಿಲ್ಲಾ ನ್ಯಾಯಾಧೀಶರ ಹೇಳಿಕೆಯಿಂದ ತಿಳಿದುಬರುತ್ತದೆ.

## ಹೋಳ್ಕರರ ಭತ್ಯದ ಬಗ್ಗೆ ವ್ಯವಹಾರ

ಮಧ್ಯಭಾರತದ, ಉಪ ರಾಜಪ್ರಮುಖರಾದ ಹೋಳ್ಕರರಿಗೆ ಬರುವ ಜುಲೈನಿಂದ ಕೊಡಬೇಕಾಗುವ ೨೫ ಲಕ್ಷ ರೂ ಭತ್ಯದ ಬಗ್ಗೆ ಭಾರತ ಸರಕಾರದೊಡನೆ ಪತ್ರವ್ಯವಹಾರ ನಡೆಯುತ್ತಿದೆ. ರಾಜ್ಯಾಂಗದಲ್ಲಿ ಉಪ ರಾಜಪ್ರಮುಖರಿಗೆ ಕೊಡುವ ಭತ್ಯದ ಬಗ್ಗೆ ಸಂಧಿಯಲ್ಲಿ ಈ ನಿಬಂಧನೆಯಿಲ್ಲವಾದರೂ ಅವರ ಭತ್ಯವನ್ನು ನಿರ್ಧರಿಸಲಾಗುವುದು. ಹೋಳ್ಕರರಿಗೆ ಈಗಿನ ೧೦ ಲಕ್ಷ ರೂ ಜೊತೆ ಬರುತ್ತದೆ.

## ಏಷ್ಯಾ ರಾಷ್ಟ್ರಗಳಲ್ಲಿ ಮಿತ್ರತ್ವ

ಏಷ್ಯಾ ರಾಷ್ಟ್ರಗಳನ್ನು ಪ್ರಾದೇಶಿಕ ಮಿತ್ರತ್ವಕ್ಕೆ ಏರ್ಪಡಿಸುವುದನ್ನು ಅಮೆರಿಕವು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಅಮೆರಿಕದ ರಾಯಭಾರಿ ಜೆಸಪ್ ಅವರು ಹೇಳಿದ್ದಾರೆ. ಅವರು ಈಗ ಎಲ್ಲ ಏಷ್ಯಾ ದೇಶಗಳ ಅಮೆರಿಕಾ ರಾಯಭಾರಿಗಳನ್ನು ಈ ಬಗ್ಗೆ ರಹಸ್ಯವಾಗಿ ಭೇಟಿ ಮಾಡುವರು.


### ಜಯಲಕ್ಷ್ಮಿ ಟಾಕೀಸ್

ಶ್ರೀರಂಗಪಟ್ಟಣ

ತಾ॥ 11-2-50 ರಿಂದ

ಟಿ ಆರ್ ಮಹಾಲಿಂಗಂ, ಟಿ ಆರ್ ರಾಜಕುಮಾರಿ, ಲಲಿತ-ಪದ್ಮಿನಿ, ಕೃಷ್ಣನ್ ಮಧುರಂ ಮೊದಲಾದವರು ನಟಿಸಿರುವ ತಮಿಳು ಚಿತ್ರ

### ಮಂಗಯಾರ್ ಕರಸಿ

ಮುಂದಿನ ಚಿತ್ರ

ಭಕ್ತ ಶ್ರೀ ತ್ಯಾಗರಾಜ

U T C Publications

1531 VANI VILAS ROAD

MYSORE

Very useful to B Sc

INTERMEDIATE A

EXAMINATION


## ಅಣು ಶಸ್ತ್ರಗಳ ಬಗ್ಗೆ ಒಪ್ಪಂದಕ್ಕೆ ಅಮೆರಿಕದ ಪ್ರಯತ್ನ

ಅಣು ಶಸ್ತ್ರಾಸ್ತ್ರಗಳ ಹತೋಟಿ ಬಗ್ಗೆ ಸಕಾಲದಲ್ಲಿ ಅಮೆರಿಕವು ರಷ್ಯದೊಡನೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಯತ್ನಿಸಬಹುದೆಂದು ಅಲ್ಲಿನ ಸೆನೇಟಿನ ವಿದೇಶಾಂಗ ಸಮಿತಿಯ ಅಧ್ಯಕ್ಷರಾದ ಟಾಂ ಕಾನಾಲಿಯವರು ತಿಳಿಸಿದರು. ನೇರವಾಗಿ ಒಪ್ಪಂದಕ್ಕಾಗಿ ಪ್ರಯತ್ನಿಸಲಾಗುವುದಿಲ್ಲವೆಂದೂ, ವಿಶ್ವಸಂಸ್ಥೆಯ ಮೂಲಕ ಮಾಡಲಾಗುವುದೆಂದೂ ಅವರು ಹೇಳಿದರು.

## ಎ. ಐ. ಸಿ. ಸಿ.ಗೆ ತಮಿಳರ ಪ್ರಾರ್ಥನೆ

ಮದ್ರಾಸನ್ನು ಆಂಧ್ರದವರು ಬೇಡುತ್ತಿರುವ ಬಗ್ಗೆ ಹಲವು ಆಂಧ್ರ ಕಾಂಗ್ರೆಸ್ಸಿನ ಮುಖಂಡರು ನಡೆಸುತ್ತಿರುವ ಚಳುವಳಿಯನ್ನು ನಿಲ್ಲಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯನ್ನು ಪ್ರಾರ್ಥಿಸುವ ನಿರ್ಣಯವು ಮದ್ರಾಸಿನಲ್ಲಿ ನಡೆದ ತಮಿಳು ನಾಡ ರಾಜಕೀಯ ಸಮ್ಮೇಳನದಲ್ಲಿ ಅಂಗೀಕೃತವಾಯಿತು.

## ಪೂ॥ ಮತ್ತು ಪ॥ ಬಂಗಾಳ ಗಲಭೆ ಬಗ್ಗೆ ವಿಚಾರಣೆ

ಪೂರ್ವ ಮತ್ತು ಪಶ್ಚಿಮ ಬಂಗಾಳಗಳಲ್ಲಿ ನಡೆದ ಗಲಭೆಗಳ ಬಗ್ಗೆ ವಿಚಾರಣಾ ನ್ಯಾಯಾಲಯವನ್ನು ಏರ್ಪಡಿಸಬೇಕೆಂದು ಪೂರ್ವ ಪಾಕಿಸ್ತಾನ ಪ್ರಜೆಯಾಗಿರುವ ಮತ್ತು ಮಾಜಿ ಬಂಗಾಳ ಪ್ರಧಾನ ಮಂತ್ರಿ ಫಜಲ್ಲುಲ್ ಹಕ್‌ರವರು ಪ್ರಾರ್ಥಿಸಿದ್ದಾರೆ.

## ದಕ್ಷಿಣ ಆಫ್ರಿಕಾ ಮಾತುಕತೆ ಮುಕ್ತಾಯ

ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರು ಮತ್ತು ಪಾಕಿಸ್ತಾನಿಗಳ ಭವಿಷ್ಯದ ಬಗ್ಗೆ ಮೂರು ರಾಷ್ಟ್ರಗಳ ಪ್ರತಿನಿಧಿಗಳ ಸಮ್ಮೇಳನವು ಮುಕ್ತಾಯವಾಯಿತು. ಈ ಸಮಸ್ಯೆ ಬಗ್ಗೆ ಚಕ್ರಗೋಷ್ಠಿಯನ್ನು ಸೇರಿಸಲು ನಿರ್ಧರಿಸಲಾಯಿತು.

೦ ಸಿಟೋನಿನ ಆವರು ರಷ್ಯ ಹಕೋಟಿ ಇಲಾಖೆಯ ೭ ಸಾವಿರ ಜಾಗಗಳಿಗೆ ಅರ್ಜಿಗಳು ಬಂದವು. ಅರ್ಜಿದಾರರ ಪರೀಕ್ಷೆಯನ್ನು ಅಧಿಕಾರಿಗಳು ನಡೆಸಲಾಗಿ ಎಲ್ಲರೂ ತೇರ್ಗಡೆಯಾದರು. ಯಾರಿಗೆ ಉದ್ಯೋಗ ಕೊಡಬೇಕೆಂಬ ಪ್ರಶ್ನೆ ಅಧಿಕಾರಿಗಳಿಗೆ ಸಮಸ್ಯೆಯಾಗಿದೆಯೆಂದು ಹೇಳಲಾಗಿದೆ.

## ಅಮೆರಿಕದ ಸ್ಟಾಲಿನ್ ಯುದ್ಧದ ಕಳವಳ

ಅಮೆರಿಕದ ಸಂಯುಕ್ತ ಸಂಸ್ಥಾನಗಳ ಅತ್ಯಂತ ಹೊಸ ಯುದ್ಧದ ಕಳವಳ ಉಂಟಾಗಿದೆಯೆಂದು ಅಲ್ಲಿನ ರಾಜಕೀಯ ಸಲಹೆಗಾರರು ವರದಿ ಮಾಡಿರುತ್ತಾರೆ. ಹಠಾತ್ತನೆ ರಷ್ಯವು ಮೇಲೆ ಬೀಳುವ ಪ್ರಸಂಗದ ಬಗ್ಗೆ ಅಮೆರಿಕದ ಭಯವನ್ನು ಪತ್ರಿಕೆಗಳೂ, ರೇಡಿಯೋಗಳೂ, ಪ್ರಕಟಪಡಿಸಿವೆ. ಹಲವು ಸೆನೇಟರುಗಳೂ, ವಿಜ್ಞಾನಿಗಳೂ ಜಾಗರೂಕತೆಯಿಂದಿರಲು ಎಚ್ಚರಿಕೆ ಇತ್ತಿರುವರು. ಅಧ್ಯಕ್ಷ ಟ್ರೂಮನ್, ಡೀನ್ ಏಚಸನ್, ಮತ್ತು ಹಲವು ವಿದೇಶ ನೀತಿಯ ಸಲಹೆಗಾರರು ರಷ್ಯವು ಆಕ್ರಮಣ ಮಾಡುವುದರಲ್ಲಿದೆಯೆಂದು ನಂಬಿರುವುದಾಗಿ ನ್ಯೂಯಾರ್ಕ್ ಪೋಸ್ಟ್ ಪತ್ರಿಕೆ ಬರೆದಿದೆ.

## ಕಮ್ಯೂನಿಸ್ಟ್ ಚೀಣಾದ ಆಕ್ರಮಣ ನೆಲೆಗಳ ಮೇಲೆ ಧಾಳಿ

ಫಾರ್ಮೋಸ ದ್ವೀಪವನ್ನು ಆಕ್ರಮಿಸುವ ನೆಲೆಯಾಗಿ ಕಮ್ಯೂನಿಸ್ಟ್ ಚೀಣದವರು ಉಪಯೋಗಿಸುತ್ತಿದ್ದ ಶಾಂಘಾ, ದೋಣಿ ಮುಂತಾದವುಗಳ ಮೇಲೆ ರಾಷ್ಟ್ರೀಯ ಚೀಣ ವಿಮಾನಗಳು ಧಾಳಿ ನಡೆಸಿದವೆಂದು ವರದಿಯಾಗಿದೆ. ಈ ಆಕ್ರಮಣಕ್ಕೆ ೨ ಲಕ್ಷ ಕಮ್ಯೂನಿಸ್ಟ್ ಸೈನಿಕರು ಮತ್ತು ಸಾವಿರ ಹಡಗುಗಳು ಸಿದ್ಧವಾಗಿದ್ದವೆಂದು ಹೇಳಲಾಗಿದೆ.


### ರಾಜಕಮಲ್

ಮೈಸೂರು

10—2—50 ರಿಂದ

ಜನಭರಿತವಾದ ೨ನೇ ವಾರ

ದಿನವಹಿ 3 ಪ್ರದರ್ಶನಗಳು

### ಜೀವನ

— ಭೂಮಿಕೆ —

ವೈಜಯಂತಿಮಾಲಾ, ಟಿ ಆರ್ ರಾಮಚಂದ್ರ, ಲಲಿತ-ಪದ್ಮಿನಿ


## ಬರ್ಮಾಕ್ಕೆ ೧೦ ಲಕ್ಷ ಪೌಂಡು ಭಾರತದ ಸಾಲ

ಬರ್ಮಾಕ್ಕೆ ಭಾರತ ಸರ್ಕಾರದವರು ೧೦ ಲಕ್ಷ ಪೌಂಡುಗಳ ಸಾಲ ಕೊಡಲು ನಿರ್ಧರಿಸಿರುವುದಾಗಿ ತಿಳಿದುಬರುತ್ತದೆ. ಅಲ್ಲದೆ ಅಕ್ಕಿಯ ಆಮದಿಗಾಗಿ ೫೦ ಲಕ್ಷ ರೂಗಳನ್ನು ಮುಂಗಡವಾಗಿ ಕೊಡಲಾಗುವುದು. ಬರ್ಮಾಕ್ಕೆ ಆರ್ಥಿಕವಾಗಿ ಸಹಾಯ ಮಾಡುವ ಬಗ್ಗೆ ಕೊಲಂಬೊ ಸಮ್ಮೇಳನದಲ್ಲಿ ನಿರ್ಧಾರವಾಗಿತ್ತು.


### ಗಾಯತ್ರೀ ಟಾಕೀಸ್

ಮಹಾಶಿವರಾತ್ರಿ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

ನಿತ್ಯದ ೩ ಪ್ರದರ್ಶನಗಳ ಜೊತೆಗೆ ಶಿವ ರಾತ್ರಿ 12-30 ಕ್ಕೆ 1 ಪ್ರದರ್ಶನವುಂಟು

ಯೂನಿವರ್ಸಲ್ ರವರ ಅಮೋಘ ಮತ್ತು ಸಾಹಸಮಯ ಚಿತ್ರ

### ಫೈಟಿಂಗ್ - — ಓ ಫ್ಲಿನ್

ಪಾತ್ರ:-ಡಗ್ಲಾಸ್ ಫೇರ್‌ಬ್ಯಾಂಕ್ಸ್ ಜೂನಿಯರ್

### ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಗೂರಲು, ಉಬ್ಬಸ, ಪರಿಣಾಮ ಕಾರಿ ಮತ್ತು ಗಲಗ್ರಂಥಿ (TONSIL) ವಾಸಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರ ಸರ್ಟಿಫಿಕೇಟು ಮತ್ತು ಬಂಗಾರದ ಪದಕಗಳನ್ನು ಕೊಟ್ಟಿರುತ್ತಾರೆ.

ಆರ್. ಎಸ್. ಪಂಡಿತರು, ರಾಮಗೋಪಾಲ ವೈದ್ಯಶಾಲಾ ದಿವಾನರ ರಸ್ತೆ ಮೈಸೂರು.


Edited, Printed and published by A. R. Nagarajan at Sadhvi Press, D Subbiah Road, Mysore


### ರಣಜಿತ್ ಟಾಕೀಸ್

ಮಹಾಶಿವರಾತ್ರಿ ಪ್ರಯುಕ್ತ ಸ್ಪೆಷಲ್ ಪ್ರದರ್ಶನ

ರಾತ್ರಿ 12-30ಕ್ಕೆ ಇರುತ್ತೆ

15—2—50ನೇ ಬುಧವಾರದಿಂದ

ಕುಲ್‌ದೀಪ್ ಪಿಕ್ಚರ್ಸ್‌ರವರ ಅಮೋಘ ಹಿಂದಿ ಚಿತ್ರ

— ಪಾತ್ರ —

### ನಾಚ್ — ಸುರೈಯ್ಯಾ, ಶ್ಯಾಮ್

### ಲಕ್ಷ್ಮೀ ಥಿಯೇಟರ್

ದಿನವಹಿ 3 ಪ್ರದರ್ಶನಗಳು

ತಾ॥ 15-2-50 ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 1-30 ಕ್ಕೆ ಸ್ಪೆಷಲ್ ಪ್ರದರ್ಶನ ಇದೆ ಇದಿಕೆ

ಜ್ಯೂಪಿಟರ್ ರವರ ತಮಿಳು ಚಿತ್ರ - ಶ್ರೀ ಸೇಲಂ ರಾಣಿ

ಎಂ ಜಿ ರಾಮಚಂದ್ರನ್, ವಿ ಎನ್ ಜಾನಕಿ, ಎಸ್ ಬಾಲಯ್ಯ, ಲಲಿತ-ಪದ್ಮಿನಿ ಮುಂತಾದವರು

15-2-50 ಬೆಳಿಗ್ಗೆ ೧೦-೩೦ ಕ್ಕೆ ಪ್ರದರ್ಶನ

Morning Shows from 17—2—50

### Lady From Shanghai

Starring - Rita Hayworth & Orson Welles

ಮಹಾಶಿವರಾತ್ರಿ ಸ್ಪೆಷಲ್ ಪ್ರೋಗ್ರಾಂ

### ಪ್ರಭುದೇವಾ ಟಾಕೀಸ್

15-2-50ನೇ ಬುಧವಾರದ ದಿವಸ

4 ಪ್ರದರ್ಶನಗಳು

### ವಾಲಿ - ಸುಗ್ರೀವ

(ತೆಲುಗು)

ಮ್ಯಾಟಿನಿ ೩ಕ್ಕೆ, 1ನೇ ಆಟ 6-15ಕ್ಕೆ, 2ನೇ ಆಟ 9.30, 3ನೇ ಆಟ 12 30

ಫೋನ್ ನಂ. ೭೪೭ ಶಿರಂಡೇ ಮಹಾಕರಂ ಅಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೮] ಬುಧವಾರ ೧೫-೨-೫೦ [ಸಂಚಿಕೆ ೧೭೭

# ಇಟಲಿ ಪಾರ್ಲಿಮೆಂಟಿನ ಸದಸ್ಯರ ಮುಷ್ಟಿಕಾಳಗ

## ಪೂ|| ಬಂಗಾಳದಲ್ಲಿ ಪ್ರತ್ಯೇಕ ಚುನಾವಣೆಗೆ ಒತ್ತಾಯ

ಪೂರ್ವ ಬಂಗಾಳದಲ್ಲಿ ಅಲ್ಪ ಸಂಖ್ಯಾತರ ಹಿತರಕ್ಷಣೆಯು ಸಾಧಿಸಲ್ಪಡುತ್ತಿಲ್ಲವಾದದರಿಂದ ಅಲ್ಲಿ ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ಜಾರಿಗೆ ತರಬೇಕೆಂದೂ, ಮತ್ತು ಪ್ರತ್ಯೇಕ ಧಾರ್ಮಿಕ (ಸೆಕ್ಯುಲರ್) ರಾಜ್ಯ ಸ್ಥಾಪಿಸಬೇಕೆಂದೂ, ಇತ್ತೀಚೆಗೆ ಅಲ್ಲಿ ನಡೆದ ಅಲ್ಪ ಸಂಖ್ಯಾತರ ಸಭೆಯಲ್ಲಿ ನಿರ್ಣಯ ಮಾಡಲಾಯಿತು.

## ಪಾಕಿಸ್ತಾನದಲ್ಲಿ ೧ ಲಕ್ಷ ಮಂದಿಗೆ ರೈಫಲ್ ತರಪೇತು

ಪಾಕಿಸ್ತಾನಕ್ಕೆ ಸೇರಿದ ಪಶ್ಚಿಮ ಪಂಜಾಬಿನಲ್ಲಿ ಒಂದು ಲಕ್ಷ ಮಂದಿಗೆ ರೈಫಲ್ ತರಪೇತನ್ನು ಕೊಡಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ ರೈಫಲ್ಲುಗಳನ್ನು ಸರ್ಕಾರದವರೇ ಒದಗಿಸುವರೆಂದೂ ಹೇಳಲಾಗಿದೆ.

## ಜಲಜನಕ ಬಾಂಬಿನಿಂದ ಜಗತ್ತಿನ ನಾಶ

ಜಲಜನಕ ಬಾಂಬನ್ನು ಆಸ್ಫೋಟಿಸಿದರೆ ವಾಯುಮಂಡಲವೆಲ್ಲಾ ವಿಷಮಿಶ್ರಿತವಾಗಿ ಎಲ್ಲ ಪ್ರಾಣಿಗಳೂ ನಾಶವಾಗುವುವೆಂದು ಅಮೆರಿಕದ ವೈಜ್ಞಾನಿಕರಾದ ಡಾ|| ಐನ್‌ಸ್ಟೀನ್‌ರವರು ಎಚ್ಚರಿಸಿದ್ದಾರೆ ಏಲಿ ಬುಲೆಟಿನ್ಸ್ ಎಂಬ ಪತ್ರಿಕಾ ಸಂಪಾದಕರು ಜಲಜನಕ ಬಾಂಬನ್ನು ತಯಾರಿಸಿದಲ್ಲಿ ಮತ್ತೊಂದು ಸೂರ್ಯನನ್ನೇ ತಯಾರಿಸಿ ಅದರಿಂದ ದಿಕ್ಕು ಸರ್ವನಾಶವಾಗುವುದೆಂದು ಹೇಳಿದ್ದಾರೆ

## ರಾಜ ಪ್ರಮುಖ್ ವಿರುದ್ಧ ದಿನಾಚರಣೆ

ಹೈದರಾಬಾದ ಸಂಸ್ಥಾನದ ಕಾಂಗ್ರೆಸ್ಸಿನವರು ಏರ್ಪಡಿಸುವ ರಾಜ ಪ್ರಮುಖ್ ವಿರುದ್ಧದ ದಿನಾಚರಣೆಯು ಪ್ರಾರಂಭವಾಗಿ ಹೆಚ್ಚು ದಿನದಲ್ಲಿ ಮೆರವಣಿಗೆಯನ್ನು ಮಾಡಲಾಯಿತು ನಿಜಾಮರನ್ನು ಖಂಡಿಸುವ ಕೂಗುಗಳಾದವು

## ನರ್ಮದಾ ತೀರದಲ್ಲಿ ಗಾಂಧಿ ಘಟ್ಟ

ತ್ರಿಪುರಿಯ ಹತ್ತಿರ ಹರಿಯುವ ನರ್ಮದಾ ನದಿಯ ತೀರದಲ್ಲಿ ೮೦ ಸಾವಿರ ರೂಗಳ ಖರ್ಚಿನಿಂದ ಮಧ್ಯಪ್ರದೇಶದ ಸರಕಾರದವರು ಗಾಂಧಿ ಘಟ್ಟವನ್ನು ನಿರ್ಮಿಸುವರು

## ಕಲ್ಕತ್ತದ ಪರಿಸ್ಥಿತಿ

ಕಲ್ಕತ್ತದ ಪರಿಸ್ಥಿತಿ ಈಗ ಉತ್ತಮಗೊಳ್ಳುತ್ತಿದೆ. ಹಲವು ಕಡೆಗಳಲ್ಲಿ ಕರ್ಫ್ಯೂ ಆಜ್ಞೆಯನ್ನು ಸಡಿಲಿಸಲಾಗಿದೆ ಹೊಸದಾಗಿ ಹಲವು ಘಟನೆಗಳು ನಡೆದ ಎಂಟಾಲಿ ಪೊಲೀಸ್ ಠಾಣೆ ಪ್ರದೇಶದಲ್ಲಿ ಹೆಚ್ಚು ಕರ್ಫ್ಯೂ ವಿಧಿಸಲಾಗಿದೆ ಕಲಿಂಗಾ ಪ್ರದೇಶದಲ್ಲಿ ಹತ್ತಿಪ್ಪತ್ತು ಮಂದಿಯ ಗುಂಪೊಂದು ಆಯುಧಗಳೊಡನೆ ಪೊಲೀಸರ ಮೇಲೆ ಧಾಳಿ ನಡೆಸಲು ಅವರ ಮೇಲೆ ಗುಂಡು ಹಾರಿಸಲಾಯಿತು ಪರಿಣಾಮವಾಗಿ ಒಬ್ಬನು ಮಡಿದನು ಅ ೮ ಮೇ ೩೦ ಗಳಲ್ಲೇ ವಿಧಿ ಮನ್ನು ಜಾರಿಗೊಳಿಸಲಾಗಿದೆ.

## ಶಿವರಾತ್ರಿ ಮಹೋತ್ಸವ

ರಾಜಧಾನಿಯ ಶ್ರೀ ಸದ್ಗುರು ಸೇವಾ ಮಂಡಲಿಯವರು ನಾಳೆ ೯ ಘಂಟೆಗೆ ಶಿವರಾತ್ರಿ ದಿನ "ಶಿವರಾತ್ರಿ ಮಹೋತ್ಸವ" ವನ್ನು ಬಹಳ ವಿಜೃಂಭಣೆಯಿಂದ ನಡೆಸಲು ಏರ್ಪಡಿಸಿದ್ದಾರೆ ಸರ್ವರಿಗೂ ಸ್ವಾಗತವುಂಟು

## ಅಮೃತಸರದಲ್ಲಿ ಗುಂಡಿನ ಕಾಳಗ

ಕಮ್ಯೂನಿಸ್ಟರಿಂದ ಕೂಡಿದ ವಿದ್ಯಾರ್ಥಿ ಫೆಡರೇಷನ್ನಿನ ಮೆರವಣಿಗೆಯೊಂದು ಅಮೃತಸರದಲ್ಲಿ ನಡೆದಾಗ ಪೊಲೀಸರಿಗೂ ಮೆರವಣಿಗೆಕಾರರಿಗೂ ಗುಂಡಿನ ಕಾಳಗ ನಡೆದನಂತರ ೪೩ ಜನರನ್ನು ಪೊಲೀಸರು ದಸ್ತಗಿರಿ ಮಾಡಿದರು. ಒಂಬತ್ತು ವಿದ್ಯಾರ್ಥಿಗಳು ಸ್ಥಳೀಯ ಕಾಂಗ್ರೆಸ್ ಕಛೇರಿ ಮೇಲೆ ಧಾಳಿ ಮಾಡಿದರೆಂದೂ, ಈ ಸಂದರ್ಭದಲ್ಲಿ ಪೊಲೀಸ್ ಸೂಪರಿಂಟೆಂಡೆಂಟರಿಗೂ, ಇನ್ಸ್‌ಪೆಕ್ಟರಿಗೂ ಗಾಯವಾಯಿತೆಂದೂ ನಂತರ ಅವರನ್ನು ಚದುರಿಸಲು ಲಾಠಿ ಮತ್ತು ಟಿಯರ್ ಗ್ಯಾಸ್ ಪ್ರಯೋಗ ಮಾಡಿದರೂ, ಅವರುಗಳು ಗುಂಡು ಹಾರಿಸಿದರೆಂದೂ, ಪೊಲೀಸರು ಅದಕ್ಕೆ ಪ್ರತಿಯಾಗಿ ಗುಂಡು ಹಾರಿಸಿದರೆಂದೂ ಹೇಳಲಾಗಿದೆ ದಸ್ತಗಿರಿಯಾದವರಲ್ಲಿ ೧೦ ಮಂದಿ ವಿದ್ಯಾರ್ಥಿನಿಯರಿದ್ದಾರೆ

### ಸರ್ಕಾರಿ ನೌಕರರು ನೇರವಾಗಿ ಅರ್ಜಿ ಸಲ್ಲಿಸಕೂಡದು

ಸರ್ಕಾರಿ ನೌಕರರು ಇನ್ನು ಮುಂದೆ ತಮ್ಮ ಅರ್ಜಿಗಳನ್ನು ನೇರವಾಗಿ ಸರ್ಕಾರಕ್ಕೆ ಕಳುಹಿಸದೆ ತಮ್ಮ ಇಲಾಖಾ ಮುಖ್ಯಾಧಿಕಾರಿಗಳ ಮೂಲಕ ಕಳುಹಿಸಬೇಕೆಂದು ಆಜ್ಞೆ ಹೊರಡಿಸಲಾಗಿದೆ ಈ ಆಜ್ಞೆಯನ್ನು ಉಲ್ಲಂಘಿಸುವವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದೂ ಇಲಾಖಾ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ

### ಪರೀಕ್ಷಾ ವಿದ್ಯಾರ್ಥಿಗಳಿಗೆ ಹಿಂದಿ ಉಪನ್ಯಾಸಮಾಲೆ

ಮೈಸೂರು ಪಟ್ಟಣದಲ್ಲಿರುವ ಹಿಂದಿ ಪ್ರಚಾರ ಸಭಾ ಭವನದಲ್ಲಿ ಹಿಂದೀ ರಾಷ್ಟ್ರಭಾಷೆ ಮತ್ತು ಇತರ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ೨ ದಿನಗಳು ೧೬ನೇ ತಾರೀಖಿನಿಂದ ೨೬ನೇ ತಾರೀಖಿನ ವರೆಗೆ ಉಪನ್ಯಾಸಮಾಲೆಯನ್ನು ಏರ್ಪಡಿಸಲಾಗಿದೆ ಎಲ್ಲ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಇದರ ಉಪಯೋಗ ಪಡೆಯಬೇಕಾಗಿ ಕೋರಲಾಗಿದೆ

○ ಪಣಜಿಯ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರೊಡನೆ ಕೋಲಾರದ ಚಿನ್ನದ ಗಣಿಗಳ ಬೋರ್ಡಿನವರು ಚಿನ್ನದ ಮೇಲಿನ ಸುಂಕದ ಬಗ್ಗೆ ಮಾತುಕತೆ ನಡೆಸಿದರು.

## ಪಾಕಿಸ್ತಾನದ ನಾಯಕರಿಗೆ ಹಿಟ್ಲರ್-ಮುಸೊಲಿನಿಗಳ ಗತಿಯಾದೀತು

### ಷೇಕ್ ಅಬ್ದುಲ್ಲಾರವರ ಭಾಷಣ

[ಸ್ವಂತ ವರದಿ] ಬೆಂಗಳೂರು ೧೫

ಬೆಂಗಳೂರು ಕಾರ್ಪೊರೇಷನ್ನಿನವರು ನೆನ್ನೆ ಸಂಜೆ ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾರವರ ಗೌರವಾರ್ಥವಾಗಿ ಕಬ್ಬನ್ ಪಾರ್ಕ್ ಬ್ಯಾಂಡ್ ಸ್ಟ್ಯಾಂಡಿನಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿ ಅವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು ದೇಶಸೇವೆಗಾಗಿ ಅಪರಿಮಿತವಾದ ಸ್ವಾರ್ಥತ್ಯಾಗ ಮಾಡಿರುವವರಲ್ಲಿ ಷೇಕ್ ಅಬ್ದುಲ್ಲಾರವರು ಅಗ್ರಗಣ್ಯರೆಂದು ಬಿನ್ನವತ್ತಳೆಯಲ್ಲಿ ನಮೂದಿಸಲಾಗಿತ್ತು ಕಾರ್ಪೊರೇಷನ್ನಿನ ಮೇಯರವರಾದ ಶ್ರೀ ಎ. ಕೇಶವಯ್ಯಂಗಾರ್ಯರು ಬಿನ್ನವತ್ತಳೆಯನ್ನು ಓದಿದರು ಸಮಾರಂಭದಲ್ಲಿ ಪ್ರಧಾನ ಸಚಿವ ಶ್ರೀ ಕೆ. ಸಿ. ರೆಡ್ಡಿ ಮತ್ತು ಇತರ ಸಚಿವರುಗಳೂ, ಅನೇಕ ಮಂದಿ ಪಾರಗಣ್ಯ ಮಹನೀಯರೂ ಭಾಗವಹಿಸಿದ್ದರು

ಷೇಕ್ ಅಬ್ದುಲ್ಲಾರವರು ಬಿನ್ನವತ್ತಳೆಗೆ ಉತ್ತರ ಕೊಟ್ಟು ಕಾಶ್ಮೀರದ ಹೋರಾಟದಲ್ಲಿ ನೆರವು ನೀಡಿದ ದಕ್ಷಿಣ ಭಾರತೀಯರಿಗೆಲ್ಲ ತಮ್ಮ ವಂದನೆಗಳನ್ನು ಸಲ್ಲಿಸಿ ಈ ತನಕ ಇಲ್ಲಿಗೆ ಬಂದಿರುವುದಾಗಿ ಹೇಳಿದರು ಭಾರತಕ್ಕೂ ಕಾಶ್ಮೀರಕ್ಕೂ ಬಹಳ ಹಿಂದಿನಿಂದಲೂ ಸಾಂಸ್ಕೃತಿಕ ಸಂಬಂಧ ವಿಚ್ಛಿನ್ನವಾಗಿದೆ. ಕಾಶ್ಮೀರದ ವಿಭಾಗವನ್ನಾಗಲೀ ಅಥವಾ ಅದು ಪಾಕಿಸ್ತಾನದೊಡನೆ ಸೇರುವುದನ್ನಾಗಲೀ ಅಲ್ಲಿನ ಪ್ರಜೆಗಳು ಒಪ್ಪುವುದಿಲ್ಲವೆಂದೂ ಅವರು ಹೇಳಿದರು ಭಾರತವನ್ನು ಧಾರ್ಮಿಕವಾಗಿ ವಿಭಾಗಿಸುತ್ತುವನ್ನು ತಾವು ಒಪ್ಪುವುದಿಲ್ಲವೆಂದೂ, ಈ ವಿಭಜನೆಯನ್ನು ಪ್ರತಿಪಾದಿಸಿದಲ್ಲಿ ಭಾರತದಲ್ಲಿ ಮುಸ್ಲಿಮರಿಗೆ ಸ್ಥಾನವೇ ಇಲ್ಲವೆಂದು ಹೇಳಬೇಕಾಗುತ್ತದೆಂದೂ ಷೇಕ್ ಸಾಹೇಬರು ತಿಳಿಸಿದರು

ಪಾಕಿಸ್ತಾನದ ನಾಯಕರನ್ನು ಕುರಿತು ಅವರು ಕಾಶ್ಮೀರದ ಸ್ವಾತಂತ್ರ್ಯ ಹರಣವನ್ನು ತಮ್ಮದಾಗಿ ಮಾಡಿಕೊಳ್ಳುವ ಮುಂದೆ ಈ ದೇಶದ ಅವರ ಧಾಳಿ ಪ್ರಯತ್ನವನ್ನು ಕೈಗೊಂಡಿದ್ದರೆ ಈ ಜಗತ್ತಿನಲ್ಲಿ ಕೊಡಗಿನ ಪಾಕಿಸ್ತಾನದ ನಾಯಕರುಗಳು ಹಿಟ್ಲರ್ ಮುಸೊಲಿನಿಗಳ ಗತಿಯನ್ನೇ ಹೊಂದುವರೆಂದೂ ಕಾಶ್ಮೀರದ ಪ್ರಜೆಗಳು "ಪ್ರಾಣ ಬಿಟ್ಟಾರು ಕಾಶ್ಮೀರ ಬಿಡೆವು" ಎಂದರು

## ಷೇಕ್ ಅಬ್ದುಲ್ಲಾರವರ ಆಗಮನ

ಮೈಸೂರು ೧೫

ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾರವರು ಈ ದಿನ ಮಧ್ಯಾಹ್ನ ೧-೩೦ ಘಂಟೆಗೆ ಮೋಟಾರಿನಲ್ಲಿ ಬೆಂಗಳೂರಿನಿಂದ ಆಗಮಿಸಿದರು ಅವರನ್ನು ಪ್ರಧುಮ್ನ ಭವನದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರೂ, ಪುರ ಸಭಾಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರೂ, ಕಮಿಷನರ್ ಶ್ರೀ ಸಿ. ಸಿ ಸಿಂಹಮೂರ್ತಿ, ಆಕಾಶವಾಣಿ ಡೈರೆಕ್ಟರ್ ಶ್ರೀ ಬಿ ನಾರಾಯಣಸ್ವಾಮಿ, ಮೈಸೂರು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಎ ಜಿ ರಾಮಚಂದ್ರ ರಾಯರು ಮತ್ತು ಇತರ ಹಲವು ಸರ್ಕಾರಿ ಮತ್ತು ಪಾಗರ ಮಹನೀಯರುಗಳು ಸ್ವಾಗತಿಸಿದರು

ಮಧ್ಯಾಹ್ನ ಮೂರು ಘಂಟೆಯ ನಂತರ ಅವರು ನಗರದ ಹಲವು ಗಣ್ಯ ಮಹನೀಯರಿಗೆ ಭೇಟಿಕೊಟ್ಟಿದ್ದರು ೩-೪೫ ಘಂಟೆಗೆ ಶ್ರೀ ಮುನ್ಷಿ ಮಹಾರಾಜರನ್ನು ಭೇಟಿ ಮಾಡಿದರು ೪ ಘಂಟೆಗೆ ಅವರು ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ ಕೊಟ್ಟು, ಟೀಪಾರ್ಟಿ ನಂತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟರು ೭ ಘಂಟೆಗೆ ಪುರ ಸಭೆಯಲ್ಲಿ ಸತ್ಕಾರ, ೮-೩೦ಕ್ಕೆ ಟೌನ್ ಹಾಲಿನಲ್ಲಿ ಬಹಿರಂಗಸಭೆ ಇವೇ ಮೊದಲಾದ ಕಾರ್ಯಕ್ರಮಗಳು ಏರ್ಪಟ್ಟಿವೆ.

## ಕ್ಷೈತ್ಯದಿಂದ ನರರ ಮರಣ

ಕ್ಷೈತ್ಯಾಧಿಕ್ಯದಿಂದ ಗುಜರಾತಿನಲ್ಲಿ ಆರು ಮಂದಿ ಮರಣಹೊಂದಿದರೆಂದು ವರದಿಯಾಗಿದೆ ಈ ಶೈತ್ಯ ಸೌರಾಷ್ಟ್ರದಲ್ಲಿ ಒಂದು ಕಡೆ ಮೆರವಣಿಗೆಯಲ್ಲಿ ಹೋಗುತ್ತಿದ್ದ ಮದುವಣಿಗನೊಬ್ಬನು ದಾರಿಯಲ್ಲಿಯೇ ಪ್ರಾಣಬಿಟ್ಟನೆಂದು ತಿಳಿದುಬಂದಿದೆ

## ಆಕಾಶವಾಣಿಯಲ್ಲಿ ಷೇಕ್ ಅಬ್ದುಲ್ಲಾರವರ ಭಾಷಣ

ಮೈಸೂರು ೧೫

ಈದಿನ ರಾತ್ರಿ ೭-೪೫ಕ್ಕೆ ಆಕಾಶವಾಣಿಯಲ್ಲಿ ಷೇಕ್ ಅಬ್ದುಲ್ಲಾರವರ ಭಾಷಣವನ್ನು ಏರ್ಪಡಿಸಲಾಗಿದೆ

## ಇಟಲಿ ಪಾರ್ಲಿಮೆಂಟಿನಲ್ಲಿ ಸದಸ್ಯರ ಮುಷ್ಟಿ ಕಾಳಗ

ಇಟಲಿಯ ಪಾರ್ಲಿಮೆಂಟ್ ಸಭೆಯು ನೆನ್ನೆ ಸೇರಿದ್ದಾಗ ಮಾಜಿ ಮಂತ್ರಿಗಳಾದ ಡಿಗಾಸ್‌ಪಾರಿಯವರು ವಿರೋಧಪಕ್ಷದವರನ್ನು ವ್ಯಂಗ್ಯವಾಗಿ ಟೀಕಿಸುತ್ತಿದ್ದರೆಂಬ ಕಾರಣದ ಮೇಲೆ ವಿರೋಧ ಪಕ್ಷದ ಕಮ್ಯೂನಿಸ್ಟ್ ಸದಸ್ಯರು ಒಟ್ಟಿಗೆ ಎದ್ದು ೨೦ ನಿಮಿಷಗಳ ಕಾಲ ಮುಷ್ಟಿಗಳಿಂದ ಇವರನ್ನು ಹೊಡೆದು ಕಾಲಿನಿಂದ ಒದೆದು ಮತ್ತು ಉಗುರಿನಿಂದ ಚೂಗುಟಿದರೆಂದೂ ವರದಿಯಾಗಿದೆ ಇದರಿಂದ ೬ ಜನ ಸದಸ್ಯರುಗಳಿಗೆ ಅನ್ಯಾಗಳಿಗೆ ಬಾಧೆಯಾಗಿ ಆಸ್ಪತ್ರೆಗೆ ಸಾಗಿಸಬೇಕಾಗಿಬಂದಿತು. ಸಭೆಯ ಗೊಂದಲವನ್ನು ತಡೆಯುವಿಗೆ ಕಾವಲು ಸಿಪಾಯಿಗಳನ್ನೂ, ಅಧ್ಯಕ್ಷರು ಸಭೆಯನ್ನು ಮುಂದೂಡಿದರೂ ಕಳುಹಿಸಿದರು

## ಸೂಚನೆ

ಶಿವರಾತ್ರಿ ಹಬ್ಬದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

ವ್ಯವಸ್ಥಾಪಕ

## ಮದ್ರಾಸಿನಲ್ಲಿ ಮಹಿಳಾ ಸಬ್ ರಿಜಿಸ್ಟ್ರಾರರುಗಳು

ಬರುವ ಸಾರಿ ಮದ್ರಾಸಿನಲ್ಲಿ ಮಹಿಳೆಯರನ್ನು ಸರಕಾರದವರು ಸಬ್ ರಿಜಿಸ್ಟ್ರಾರರುಗಳನ್ನಾಗಿ ನೇಮಿಸುವರೆಂದು ತಿಳಿದು ಬಂದಿದೆ ಆದರೆ ಇನ್ನು ಆರು ತಿಂಗಳವರೆಗೆ ಯಾವ ಜಾಗವೂ ಖಾಲಿಯಾಗದೆಂದು ಹೇಳಲಾಗಿದೆ

## ಉತ್ತರ ದೇಶದಲ್ಲಿ ಶೈತ್ಯ

ಉತ್ತರ ದೇಶದಲ್ಲಿ ಶೈತ್ಯವು ಪೂರ್ವಾರ್ಧವಾಗಿ ಹರಡುತ್ತಿದೆ. ಬೊಂಬಾಯಿ, ದೆಹಲಿ, ಮಧ್ಯಪ್ರದೇಶ, ಬಿಹಾರ, ... ಮತ್ತು ಅಸ್ಸಾಂ ಪ್ರಾಂತಗಳಿಗೆ ಚಳಿಯು ಹಬ್ಬಿದ ೧೫ ಡಿಗ್ರಿಗಳನ್ನು ಮಾತ್ರ ಕಾಣಬರುತ್ತದೆ

### ಹರಿಕಥೆ

ಈ ರಾತ್ರಿ ೧೧ ಘಂಟೆಗೆ ಕೊತ್ವಾಲ್ ... ನವರ ಬೀದಿ ... ರಾಮರಾಯರ ಮನೆಯ ಮುಂದೆ ಹಾಕಿರುವ ಚಪ್ಪರದಲ್ಲಿ ಶ್ರೀ ಉಗ್ರನರಸಿಂಹ ಭಾಗವತರಿಂದ "ಕಿರಾತಾರ್ಜುನ" ಎಂಬ ಹರಿಕಥೆ ನಡೆಯುವುದು.

● ಶ್ರೀ ಹೆಚ್. ಸಿ. ದಾಸಪ್ಪನವರು ಈ ತಿಂಗಳು ಎನೇ ವಾರದಲ್ಲಿ ದೆಹಲಿಗೆ ಹೋಗುವ ಸಂಭವವಿದೆ


C T C Publications
1531, VANIVILAS ROAD, MYSORE

Ten papers of Inter Exams answered in
TRIGONOMETRY 0-8-0
ANALYTICAL GEOMETRY 0-8-0


## ೫ ಲಕ್ಷ ಮುಸ್ಲಿಮರಿಗೆ ಅಸ್ಸಾಮಿನಿಂದ ಉಚ್ಚಾಟನ

ಅಸ್ಸಾಂ ಪ್ರಾಂತದಲ್ಲಿ ನೆಲೆಸಿರುವ ಪೂರ್ವ ಬಂಗಾಳದ ೫ ಲಕ್ಷ ಮಂದಿ ಅನುಚಿತ ಮುಸ್ಲಿಮರನ್ನು ಹೊರದೂಡಬೇಕೆಂಬ ಬಗ್ಗೆ ಭಾರತ ಪಾರ್ಲಿಮೆಂಟಿನಲ್ಲಿ ಮಸೂದೆಯು ಅಂಗೀಕಾರವಾಯಿತು ಈ ಕಾರ್ಯವು ಇನ್ನು ೬ ತಿಂಗಳೊಳಗಾಗಿ ಪೂರೈಸಲ್ಪಡುವುದೆಂದು ಹೇಳಲಾಗಿದೆ

## ಹಿಂದೂ ಮತ್ತು ಮುಸ್ಲಿಂ ಪಲಾಯನಗಳಿಗೆ ಪ್ರತಿಬಂಧಕ

ಪೂರ್ವ ಬಂಗಾಳಾ ಸರ್ಕಾರದವರು ಹಿಂದೂಗಳು ವಲಸೆ ಹೋಗುವುದನ್ನು ಪ್ರತಿಬಂಧಿಸಬೇಕೆಂದು ಹೂಡಿಸಿದ್ದಾರೆ ಇದೇ ಮಾದರಿಯಲ್ಲಿ ಪಶ್ಚಿಮ ಬಂಗಾಳದಿಂದ ಮುಸಲ್ಮಾನರು ಹೋಗದಂತೆ ಅಲ್ಲಿನ ಸರ್ಕಾರದವರು ಆಜ್ಞೆ ಮಾಡಲಿರುವರೆಂದು ಗೊತ್ತಾಗಿದೆ. ಪೂರ್ವ ಮತ್ತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಿಗೆ ಆದ ಟೆಲಿಫೋನ್ ಮಾತುಕತೆಗಳ ನಂತರ ಈ ಕಾರ್ಯಾಚರಣೆ ಮಾಡಲಾಗಿದೆ

## ಜಯಲಕ್ಷ್ಮೀ ಟಾಕೀಸ್

ಶ್ರೀರಂಗಪಟ್ಟಣ

ತಾ॥ 11-2-50 ರಿಂದ

ಪಿ. ಯು. ಚಿನ್ನಪ್ಪ, ಪಿ. ಕಣ್ಣಾಂಬ, ಅಂಜಲಿದೇವಿ, ಲಲಿತ-ಪದ್ಮಿನಿ, ಕೃಷ್ಣನ್ ಮಧುರಂ, ದೊರೈರಾಜ್ ನಟಿಸಿರುವ ತಮಿಳು ಚಿತ್ರ

# ಮಂಗಯಾರ್ ಕರಸಿ

—ಮುಂದಿನ ಚಿತ್ರ—

ಭಕ್ತ ಶ್ರೀ ಯಾಳ

## ಸೇವಕ ವಾರ ಪತ್ರಿಕೆ

ರಾಜಧಾನಿಯ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳೂ ಕನ್ನಡ ಟ್ರಿಬ್ಯೂನ್ ಪತ್ರಿಕೆಯ ನಿರ್ವಾಹಕರೂ ಆದ ಶ್ರೀ ಕೆ. ಅನಂತ ಸುಬ್ಬರಾಯರ ಸಂಪಾದಕತ್ವದಲ್ಲಿ ಸೇವಕ ಎಂಬ ವಾರ ಪತ್ರಿಕೆಯು ಮೊನ್ನೆಯಿಂದ ಹೊರಟಿದೆ ಪತ್ರಿಕೆಯು ಚಿಕ್ಕದಾದರೂ ವಿಷಯಗಳ ಪ್ರತ್ಯೇಕ ಸಂಬಂಧವಾಗಿ ಅನೇಕ ವಿಚಾರಗಳು ಬರೆಯಲ್ಪಟ್ಟಿವೆ ವಾರ್ಷಿಕ ಚಂದಾ ೧-೮-೦ ರೂ ಪತ್ರಿಕೆಗೆ ನಮ್ಮ ಸಹಾಯಗಳು

### ಟೆನ್ನಿಸ್ ಪಂದ್ಯ

ಮೈಸೂರು ಚಾಂಪಿಯನ್‌ಷಿಪ್ಪಿನ ಟೆನ್ನಿಸ್ ಪಂದ್ಯಗಳು ಮಹಾರಾಜಾ ಕಾಲೇಜಿನ ಅಂಗಣಗಳಲ್ಲಿ ನಡೆಯುವುವು ಈ ಬಗ್ಗೆ ರಚಿತವಾಗಿರುವ ಸಮಿತಿಗೆ ಶ್ರೀಮನ್ಮಹಾರಾಜರ ಆಪ್ತ ಕಾರ್ಯದರ್ಶಿ ಶ್ರೀ ನಫಿ ದಾರಾಪುರವರು ಅಧ್ಯಕ್ಷರಾಗಿದ್ದಾರೆಂದು ಸಿಟಿ ಇನ್‌ಸ್ಟಿಟ್ಯೂಟಿನ ಕಾರ್ಯದರ್ಶಿ ಶ್ರೀ ರಾಜಮನ್ನಾರರು ತಿಳಿಸಿದ್ದಾರೆ.

# ರಾಜಕಮಲ್ ಟಾಕೀಸ್

ಮಹಾಶಿವರಾತ್ರಿ ಪ್ರಯುಕ್ತ ಈ ದಿನ 4 ಪ್ರದರ್ಶನಗಳು

1 ನೇ ಆಟ 3-15, 2 ನೇ ಆಟ 6-30
3 ನೇ ಆಟ 9-15, 4ನೇ ಆಟ 12-30

# ಜೀವನ

ಭೂಮಿಕೆ —
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

ಬೆಳಗಿನ ಪ್ರದರ್ಶನಗಳು

17-2-50 ರಿಂದ 4 ದಿನಗಳು

# ಏಪ್ಟಿದ ವೀರ

ಪಾತ್ರ — ಮಾಸ್ಟರ್ ವಿಠಲ್, ಜೀನಾಬಾಯಿ, ಪವಾರ್

## ಸ್ಕಾಟ್ಲೆಂಡ್ ಯಾರ್ಡಿನ ಎಚ್ಚರಿಕೆಕ್ರಮ

ಬ್ರಿಟನ್ನಿನ ಅಣು ಶಕ್ತಿ ರಹಸ್ಯಗಳನ್ನು ರಕ್ಷಿಸಲು ಸ್ಕಾಟ್ಲೆಂಡ್‌ಯಾರ್ಡಿನ ವಿಶೇಷ ಗುಪ್ತ ಪೋಲೀಸರು ಹೊಸ ಯೋಜನೆಯಲ್ಲಿ ತೊಡಗಿದ್ದಾರೆ ಈ ಕಾರ್ಯದಲ್ಲಿ ಐಕ್ಯರಾಷ್ಟ್ರದ ಪೋಲೀಸರು ನೆರವಾಗಿದ್ದಾರೆ ಸಂಶೋಧಕ ಸ್ಥಳಗಳಲ್ಲಿರುವ ಪ್ರತಿಯೊಬ್ಬ ಉದ್ಯೋಗಿಯೂ ಇವರ ತನಿಖೆಗೆ ಒಳಗಾಗಬೇಕು ಅವರುಗಳ ಪೂರ್ವೇತಿಹಾಸಗಳನ್ನೂ ತೆಗೆದುಕೊಳ್ಳಲಾಗುವುದು

### ಹರಿಕಥೆ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ವಸ್ತ್ರ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಮಹಾಶಿವರಾತ್ರಿ ಪ್ರಯುಕ್ತ, ಈ ದಿನ ೯ ಘಂಟೆಗೆ ಶ್ರೀ ಲಕ್ಷ್ಮೀಪತಿ ಸಹೋದರರಿಂದ ಮೃತ್ಯುಂಜಯ ಎಂಬ ಹರಿಕಥೆ ನಡೆಯುವುದು

○ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಧ್ಯಕ್ಷನಿಗೆ ೨೫೦೦ರೂ ಸಂಬಳ ಸದಸ್ಯರಿಗೆ ೧೫೦೦ರೂ ಸಂಬಳವನ್ನು ನಿಶ್ಚಯ ಮಾಡಲಾಗುವುದೆಂದು ತಿಳಿದಿದೆ

# ತ್ರಿಭುವಳಿಕೆ

ಮೈಸೂರು ಸಿಟಿ ಅಶೋಕಾ ರೋಡ್ ಮೈಸೂರ್ ಬ್ಯಾಂಕ್ ಪಕ್ಕ ಜಗುಲಿಯ ಛತ್ರದ ಎದುರು ಭಾಗದಲ್ಲಿರುವ ಎ. ವಜನೀರ್ ಚಂದ್ ಪುಕರಾಜ್ ಅ. ಸನ್ಸ್‌ರವರು ಸಮಸ್ತ ಜನರಿಗೆ ತಿಳಿಪಡಿಸುವುದೇನೆಂದರೆ:—

ನಮ್ಮ ಅಂಗಡಿಯಲ್ಲಿ ಚಿನ್ನ, ಬೆಳ್ಳಿ ಒಡವೆಗಳನ್ನು ಗಿರವಿ ಇಟ್ಟುಕೊಂಡು ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡುತ್ತೇವೆ ಮತ್ತು ನಮ್ಮ ಅಂಗಡಿಯಲ್ಲಿ ಖಾತರಿಯಾದ ಚಿನ್ನ, ಬೆಳ್ಳಿ ಒಡವೆಗಳನ್ನು ಬಿಕರಿ ಮಾಡುತ್ತೇವೆ. ಮತ್ತು ಹಳೆಯದಿಗೆ ಸಹ ತೆಗೆದುಕೊಳ್ಳುತ್ತೇವೆ ಯಾವಾಗಲೂ ಒಂದು ಸಲ ಬಂದು ನೋಡಬೇಕು.

ಎಸ್. ವಜನೀರ್‌ಚಂದ್ ಪುಕರಾಜ್ ಅಂಡ್ ಸನ್ಸ್, ಮೈಸೂರು



ಈ ನಮೂನೆಯ ಮನೆಗಳು ನಗರಾಭಿವೃದ್ಧಿ ಸಮಿತಿಯವರಿಂದ 26 2 1950 ನೇ ಭಾನುವಾರ ದಿವಸ 9 ಗಂಟೆ ... ಕಟ್ಟಿದ ... ಮತ್ತು ... ಹರಾಜು ಮಾಡಲ್ಪಡುವ ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು

(ಸಹಿ) ಪಿ. ಗೋಪಾಲಕೃಷ್ಣ ಶೆಟ್ಟಿ,
ಅಧ್ಯಕ್ಷ,
ನಗರಾಭಿವೃದ್ಧಿ ಸಮಿತಿ, ಮೈಸೂರು

ಮಹಾಶಿವರಾತ್ರಿ ಸ್ಪೆಷಲ್ ಪ್ರೋಗ್ರಾಂ

# ಪ್ರಭುದೇವಾ ಟಾಕೀಸ್

## 15-2-50ನೇ ಬುಧವಾರದ ದಿವಸ 4 ಪ್ರದರ್ಶನಗಳು

# ವಾಲಿ - ಸುಗ್ರೀವ

(ತೆಲುಗು)

ಸಾಯಂಕಾಲ 1ನೇ ಆಟ 6-15ಕ್ಕೆ, 2ನೇ ಆಟ 9-30 3ನೇ ಆಟ 12-30

# ಲಕ್ಷ್ಮೀ ಥಿಯೇಟರ್

ದಿನವಹಿ 3 ಪ್ರದರ್ಶನಗಳು

ತಾ॥ 15-2-50 ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 1-30 ಕ್ಕೆ ಸ್ಪೆಷಲ್ ಪ್ರದರ್ಶನ ಏರ್ಪಡಿಸಿದೆ

ಜ್ಯೂಪಿಟರ್ ರವರ ತಮಿಳು ಚಿತ್ರ

# ವೇಲೈಕಾರಿ

ಕೆ. ಆರ್. ರಾಮಸ್ವಾಮಿ, ವಿ. ಎನ್. ಜಾನಕಿ, ಟಿ. ಎಸ್. ಬಾಲಯ್ಯ, ಲಲಿತ-ಪದ್ಮಿನಿ ಮುಂತಾದವರು

15-2-50 ಬೆಳಗ್ಗೆ ೧೧-೩೦ಕ್ಕೆ "ಜಿಗರ್"

Morning Shows : From 17—2—50

Lady From Shanghai

Starring Rita Hayworth & Orson Welles

# ರಂಜಿತ್ ಟಾಕೀಸ್

ಮಹಾಶಿವರಾತ್ರಿ ಪ್ರಯುಕ್ತ ಸ್ಪೆಷಲ್ ಪ್ರದರ್ಶನ

ರಾತ್ರಿ 12-30ಕ್ಕೆ ಇದೆ

15 2 50ನೇ ಬುಧವಾರದಿಂದ

... ಅಭಿನಯದ ಹಿಂದಿ ಚಿತ್ರ

—ಪಾತ್ರ:—

# ನಾಚ್

ಸುರೈಯ್ಯಾ, ... ಖಾನ್

Edited Printed and published by A. R. Nagaraj at Sadhvi Press, D. Subbiah Road, Mysore

ರಿ. ನಂ. 792 [illegible] ಇಂದಿನ ಪತ್ರಿಕೆ ೬ ಪುಟ

ಸಾಧ್ವಿ

[illegible] ಶುಕ್ರವಾರ ೧೭-೩-೫೦ [ಸಂಚಿಕೆ ೧೬೯

# ಜಪಾನ್ ತೀರದಲ್ಲಿ ೨೦ ನೌಕೆಗಳಿಗೆ ಬೆಂಕಿ

## ಶೇಕ್ ಅಬ್ದುಲ್ಲಾರವರಿಗೆ ಪುರಸಭೆಯ ಸತ್ಕಾರ

ಮೈಸೂರು ೧೭

ಮೊನ್ನೆ ಸಂಜೆ ರಾಜಧಾನಿಯ ಪೌರಸಭೆಯವರು ಕಾಶ್ಮೀರ್ ಪ್ರಧಾನಿ ಷೇಕ್ ಮಹಮದ್ ಅಬ್ದುಲ್ಲಾರವರನ್ನು ಸತ್ಕರಿಸಿದರು. ಪುರಸಭಾಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರ ಅವರನ್ನು ಸ್ವಾಗತಿಸಿ ಹಾರವನ್ನು ಅರ್ಪಿಸಿದರು. ಸಂಗೀತ, ಉಪಹಾರಗಳೊಡನೆ [illegible] ಷೇಕ್ ಅಬ್ದುಲ್ಲಾರವರು ಭಾಷಣ ಮಾಡಿ [illegible]

ದೇಶದ ವಿಭಜನೆಯಾದ ನಂತರ ಉತ್ಪನ್ನವಾದ ಸಮಸ್ಯೆಗಳು, ಸಂಭವಿಸಿದ ಘಟನೆಗಳು ಇವೆಲ್ಲಕ್ಕೂ ಪಾಕಿಸ್ತಾನದ ದ್ವಿರಾಷ್ಟ್ರ ತತ್ವವೇ ಕಾರಣ [illegible] ಮಾಡಿರುವುದು ಸರಿಯಾದ [illegible] ಭಾರತದಲ್ಲಿರುವ ಒಬ್ಬ ಮುಸ್ಲಿಮನೂ ಒಪ್ಪುವುದಿಲ್ಲ. ಒಂದು ವೇಳೆ ಯಾರಾದರೂ ಆ ಅಭಿಪ್ರಾಯವನ್ನು ಹೊಂದಿದ್ದರೆ ಅಂತಹವರು ತಕ್ಷಣ ಗಂಟು ಮೂಟೆ ಕಟ್ಟಿ ಪಾಕಿಸ್ತಾನಕ್ಕೆ ಹೊರಡಬೇಕು. ಹಾಗೆ ಮಾಡುವುದರಿಂದ ಶಾಂತಿ ಪ್ರಿಯರಾದ ಹಲವು ಮುಸ್ಲಿಮರು ಭಾರತದಲ್ಲಿ ನಿರಾತಂಕವಾಗಿ ಬಾಳಲು ಸಹಾಯ ಮಾಡಿದಂತಾಗುವುದು. ಪಾಕಿಸ್ತಾನ್ ಪ್ರೇರಿತ ಧಾಳಿಕೋರರು ಕಾಶ್ಮೀರದ ಮೇಲೆ ಧಾಳಿ ಮಾಡಿ ಹಿಂದೂ, ಸಿಖ್, ಮುಸಲ್ಮಾನರೆನ್ನದೆ ದೌರ್ಜನ್ಯ ಕೃತ್ಯಗಳಲ್ಲಿ ತೊಡಗಿದ್ದುದರಿಂದ, ಬೇರೆ ಮಾರ್ಗವಿಲ್ಲದೆ ಕಾಶ್ಮೀರವು ಭಾರತದಲ್ಲಿ ವಿಲೀನವಾಗಿ ಭಾರತ ಸರ್ಕಾರದ ಸಹಾಯವನ್ನು ಕೋರಬೇಕಾಯಿತು.

### ರಾಮಕೃಷ್ಣ ಪರಮಹಂಸರ ಜನ್ಮದಿನ

ವಾಣಿವಿಲಾಸ ಮೊಹಲ್ಲಾ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ನಾಳೆ [illegible] ಗಂಟೆಗೆ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನವನ್ನು ಆಚರಿಸಲಾಗುವುದು. ಸಾರ್ವಜನಿಕರಿಗೆ ಸ್ವಾಗತವು ಟು

### ಕಮ್ಯೂನಿಸ್ಟರ ಸಭೆ

ಸೇಲಂ, ಕೊಯಮತ್ತೂರು ಮತ್ತು [illegible] ಜೈಲುಗಳಲ್ಲಿ [illegible] ಗೋಲೀಬಾರ್ [illegible] ಕಮ್ಯೂನಿಸ್ಟರ [illegible] ಸಂತಾಪ ಸೂಚಕ ಮತ್ತು [illegible] ಶ್ರೀಗಳಾದ [illegible] ಕೃಷ್ಣಸ್ವಾಮಿ, ವೆಂಕಟಕೃಷ್ಣಸ್ವಾಮಿಯವರ ಗಳು [illegible] ಷಣ ಮಾಡಿದರು

### ಚೀಣಾ ರಷ್ಯ ಒಪ್ಪಂದದಲ್ಲಿ ರಹಸ್ಯ ಅಡಗಿದೆ

ರಷ್ಯ ಮತ್ತು ಚೀಣಾಗಳಿಗೆ ನಡೆದಿರುವ [illegible] ಅನಿರೀಕ್ಷಿತ [illegible] ರಹಸ್ಯವಾದ ವಿಷಯಗಳು ಅಡಗಿವೆ [illegible] ಚೀಣಕ್ಕೆ [illegible] ರಷ್ಯದ ೬೦ ಕೋಟಿ ಡಾಲರುಗಳ [illegible] ಮಾಡಲಾಗಿದೆಯೆಂದು ಅವರು [illegible] ದರು.

[illegible]

## ಮೈಸೂರು ಜಿಲ್ಲಾಧಿಕಾರಿಗಳು

ಸ್ವಂ ಸು ಶ್ರೋ] ಬೆಂಗಳೂರು ೧೭

ಚಿತ್ರದುರ್ಗದ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎಚ್ ಎಲ್ [illegible] ಮೈಸೂರು ಜಿಲ್ಲಾಧಿಕಾರಿಗಳನ್ನಾಗಿಯೂ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರನ್ನಾಗಿಯೂ ನೇಮಿಸಲಾಗಿದೆ

[illegible] ಶ್ರೀ ಎ [illegible] ರವರನ್ನು ಬೆಂಗಳೂರು ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಿ [illegible]

ಬೆಂಗಳೂರು [illegible]

### ಮದರಾಸಿಗೆ ಕೆ. ಸಿ. ರೆಡ್ಡಿಯವರ ಪ್ರಯಾಣ

ಪ್ರಧಾನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು [illegible] ಪ್ರಯಾಣ ಬೆಳೆಸಿದರು [illegible]

### ಸಿಲೋನಿಗೆ [illegible] ಪ್ರಯಾಣ

[illegible] ಶ್ರೀ [illegible] ಸಿಲೋನಿನ [illegible]

[illegible]

## ಕಾಶ್ಮೀರದಲ್ಲಿ ಜಿನ್ನರವರ ಕುತಂತ್ರ ಸಾಗಲಿಲ್ಲ

### ಬಹಿರಂಗ ಸಭೆಯಲ್ಲಿ ಷೇಕ್ ಅಬ್ದುಲ್ಲಾರವರ ಭಾಷಣ

ಮೈಸೂರು ೧೭

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಮೊನ್ನೆ ದಿನ [illegible] ಮೈದಾನದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ [illegible] ಪ್ರಧಾನಿ ಷೇಕ್ ಅಬ್ದುಲ್ಲಾರವರು [illegible]

[illegible] ಭಾರತದ ಮುಸ್ಲಿಮರಿಗಾಗಲೀ ಬೇಕಾಗಿಲ್ಲ [illegible] ಮುಂದಿನಲ್ಲಿ ನಡೆದ [illegible] ಪಾಕಿಸ್ತಾನದ [illegible]

[illegible]

## ಭಾರತದ ಆಡಳಿತ ವಿಚಾರಣಾ ಸದಸ್ಯರ ಆಗಮನ

ಸ್ವಂ ಸು ಶ್ರೋ] ಬೆಂಗಳೂರು ೧೭

ಭಾರತ ರಾಜ್ಯಾಂಗದ ಪ್ರಕಾರ ಸಂಸ್ಥಾನಗಳ ಆಡಳಿತ ವಿಚಾರಣೆ ಸಂಬಂಧವಾಗಿ ಏರ್ಪಟ್ಟಿರುವ ೪ ಜನ ಸದಸ್ಯರು ಇಲ್ಲಿಗೆ ಬರುವರು. ಇಲ್ಲಿಗೆ ಬರುವ ಶ್ರೀಲಕ್ಷ್ಣೆಯವರೆ ಇಲ್ಲಿನ ಮತ್ತು ಹೊರಗಿನ ಪೋಲೀಸು ಅಧಿಕಾರಿಗಳ ವರ್ಗ ಮತ್ತು ಅದಲು ಬದಲುಗಳ ಬಗ್ಗೆ ಈ ಸದಸ್ಯರು ಇಲ್ಲಿನ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟ್ ಮತ್ತು [illegible] ಗಳನ್ನು ಭೇಟಿ ಮಾಡಲಿರುವರು

### ಪಬ್ಲಿಕ್ ಸರ್ವೀಸ್ ಕಮಿಷನ್ನಿನ ನಿಬಂಧನೆ

ಈ ದಿನ ಸರಕಾರದವರು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ನಿಬಂಧನೆಗಳನ್ನು ಪ್ರಕಟಿಸಿದ್ದಾರೆ. ಅದರ ಮುಖ್ಯವಾದ ಅಂಶಗಳೆಂದರೆ ಒಬ್ಬ ಅಧ್ಯಕ್ಷ (೧೫೦೦ ರೂ ಸಂಬಳ), ಇಬ್ಬರು ಸದಸ್ಯರು (೧೨೦೦ ರೂ ಸಂಬಳ) ಇರತಕ್ಕದ್ದು. ಸದಸ್ಯರುಗಳು ಕನಿಷ್ಠಪಕ್ಷ ೬ ವರ್ಷ ಸರಕಾರದ ನೌಕರಿಯಲ್ಲಿ ಇರತಕ್ಕದ್ದು ಮತ್ತು ಅವರುಗಳು ೬೦ ವರ್ಷಕ್ಕಿಂತ ಹೆಚ್ಚಿನವರಾಗಿರಬಾರದ

## ಮಧುರೆಯಲ್ಲಿ ೪೦೦೦ ಮಂದಿ ಅಂಗಡಿ ಬಹಿಷ್ಕಾರ

ಮಧುರೆಯ ಪುರಸಭೆಯವರು ವಿಧಿಸಿದ್ದ ಹಲವು ನಿಬಂಧನೆಗಳನ್ನು ಪ್ರತಿಭಟಿಸಿ ಕೆಲವು ದಿವಸಗಳ ಹಿಂದೆ ಅಲ್ಲಿನ ಅಂಗಡಿಕಾರರು ಹೂಡಿದ ಬಹಿಷ್ಕಾರವು ಮುಂದುವರಿಯುತ್ತಲೇ ಇದೆಯೆಂದು ವರದಿಯಾಗಿದೆ. ಅಲ್ಲಿನ ಸುಮಾರು ೪ ಸಾವಿರ ಮಂದಿ ಅಂಗಡಿಯವರು ತಮ್ಮ ಮೇಲೆ ಪೌರಸಭೆಯವರು ಹಾಕಿರುವ ನಿಬಂಧನೆಗಳನ್ನು ಪ್ರತಿಭಟಿಸಿ ನೆನ್ನೆ ದಿನದಿಂದ ಬಹಿಷ್ಕಾರ ಹೂಡಲು ನಿರ್ಧರಿಸಿರುವ ಅಂಶವು ವರದಿಯಾಗಿದೆ

## ಟೋಕಿಯೊ ಬಳಿ ಭಾರಿ ಬೆಂಕಿ ಅನಾಹುತ

ಟೋಕಿಯೋ ಕೊಲ್ಲಿಯಲ್ಲಿರುವ [illegible] ಎಂಬಲ್ಲಿ ಮೊನ್ನೆ ಎಣ್ಣೆಯ ಡಿಪೋಕ್ಕೆ ಬೆಂಕಿ ಹತ್ತಿಕೊಂಡು ೫ ಕೋಟಿ ಡಾಲರ್ ಬೆಲೆಯಷ್ಟು ಸಾಮಗ್ರಿ ನಾಶವಾಗಿದೆಯೆಂದು ತಿಳಿದು ಬಂದಿದೆ. ಇದರಿಂದ ಕೊಲ್ಲಿಯ ತೀರದಲ್ಲಿದ್ದ ೨೦ ಹಡಗುಗಳು ಹತ್ತಿಕೊಂಡು ನಾಶವಾದ ವರದಿಯಾಗಿದೆ

ವ್ಯಾಪ್ತಿ

ಕಾಶ್ಮೀರದಲ್ಲಿ ಮತಗಣನೆ ನಡೆದು ಹೊರ ಜನರು ಭಾರತಕ್ಕೆ ಸೇರುವ ಬಗ್ಗೆ [illegible] ಸಂದೇಹವಿಲ್ಲ. ಸಂಸ್ಥಾನದ ಪ್ರಜೆಗಳು ಪಾಕಿಸ್ತಾನದ [illegible] ನ್ನು ತಾಳಿಸಿದ್ದರೆ ಸಂಸ್ಥಾನದ [illegible] ಇದ್ದಿದ್ದ ಮತ್ತು ಅಲ್ಲಿನ ಮಹಾರಾಜರೇ ದೇಶವನ್ನು ಬಿಟ್ಟು ಹೋಗಿದ್ದ ಕಾಲದಲ್ಲಿ [illegible] ಕಾಶ್ಮೀರವು ಭಾರತಕ್ಕೆ ಸೇರುವುದರ ಬಗ್ಗೆ ಅಲ್ಲಿನ ಪ್ರಜೆಗಳ [illegible] ಅಭಿಪ್ರಾಯವನ್ನು ಇಲ್ಲಿ [illegible] ಷೇಕ್ [illegible]

## ಪೂರ್ವ ಪಾಕಿಸ್ತಾನದಮೇಲೆ ಪೋಲೀಸ್ ಕಾರ್ಯಾಚರಣೆಯೆ?

ಹೈದರಾಬಾದಿನ ಮೇಲೆ ನಡೆಸಿದಂತೆ ಖುಲ್ನಾದಲ್ಲಿಯೂ ಪೋಲೀಸ್ ಕಾರ್ಯಾಚರಣೆಯನ್ನು ಕೈಗೊಳ್ಳಬೇಕೆಂದು ಪಶ್ಚಿಮ ಬಂಗಾಳ ಸರ್ಕಾರವು ಹೊರದೇಶಗಳಿಂದ ಮದ್ದು ಗುಂಡುಗಳನ್ನು ಆಮದು ಮಾಡಿಕೊಳ್ಳುತ್ತಿದೆಯೆಂದು ಪಾಕಿಸ್ತಾನದ ಡಾನ್ ಪತ್ರಿಕೆಯು ಪ್ರಕಟಿಸಿರುವುದನ್ನು ಪಶ್ಚಿಮ ಬಂಗಾಳ ಪ್ರಧಾನಿ ಬಿ. ಸಿ. ರಾಯ್‌ರವರು ನಿರಾಕರಿಸಿ, ಅದು ಶುದ್ಧ ಕಟ್ಟುಕತೆಯೆಂದ ಹೇಳಿದ್ದಾರೆ.

## ಬರ್ಮಾ, ಪಾಕಿಸ್ತಾನದ ಸಾಲ

ಕಾಮನ್‌ವೆಲ್ತ್ ರಾಷ್ಟ್ರಗಳು ಬರ್ಮಾಗೆ ಕೊಡಲಿರುವ ಸಾಲಗಳಲ್ಲಿ ಪಾಕಿಸ್ತಾನ ತನ್ನ ಪಾಲಿನಿಂದ ೫ ಲಕ್ಷ ಪೌಂಡುಗಳ ಸಾಲವನ್ನು ಕೊಡಲು ಒಪ್ಪಿದೆ ಎಂದು ವರದಿಯಾಗಿದೆ.

## ಫ್ರಾಂಕೋವಿರುದ್ಧ ದಂಗೆ

ಸ್ಪೈನಿನ ಮೊರಾಕ್ಕೊವಿನ ಗುಡ್ಡಗಾಡಿನ ಜನರು ಜ. ಫ್ರಾಂಕೋ ವಿರುದ್ಧ ದಂಗೆ ಎದ್ದಿದ್ದಾರೆಂದು ವರದಿಯಾಗಿದೆ. ದಂಗೆಕೋರರು ಆಧುನಿಕ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುತ್ತಿದ್ದಾರೆಂದೂ, ಪರಿಸ್ಥಿತಿಯು ಘೋರವಾಗಿರುವುದೆಂದೂ ಹೇಳಲಾಗಿದೆ.

### ಚಾಮುಂಡೇಶ್ವರಿ ಸಹಕಾರ ಸಂಘದ ಅಧಿಕಾರಿವರ್ಗ

ಜಲಪುರಿ ಚಾಮುಂಡೇಶ್ವರಿ ಕೋ ಆಪರೇಟಿವ್ ಸೊಸೈಟಿಯ ಸಾಮಾನ್ಯ ಸಭೆಯು ಕಳೆದ ಭಾನುವಾರ ಶ್ರೀ ಕೆ. ಟಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು ೧೯೫೦ನೇ ಸಾಲಿಗೆ ಅಧಿಕಾರಿವರ್ಗವನ್ನು ಚುನಾಯಿಸಿತು. ಶ್ರೀಗಳಾದ ಟಿ. ಪಿ. ರಾಮನ್ (ಅಧ್ಯಕ್ಷ) ಎಂ. ಪುಟ್ಟಸ್ವಾಮಿ (ಉಪಾಧ್ಯಕ್ಷ) ವಿ. ಮಾದೇವಯ್ಯ (ಕಾರ್ಯದರ್ಶಿ) ಎಸ್. ಜಿ. ಸಿದ್ದಯ್ಯ (ಸಹಕಾರ್ಯದರ್ಶಿ) ಎನ್. ಸಿಂಗಪ್ಪ (ಖಜಾಂಚಿ) ಡೈರೆಕ್ಟರುಗಳ ಚುನಾವಣೆಯೂನಡೆಯಿತು. ಜಲಪುರಿಯ ಪ್ಲಾಟುದಾರರ ವಿಭಾಗವನ್ನು ತೆರೆದು ... ಸಾಲದ ... ನಿರ್ಣಯವು ಅಂಗೀಕರಿಸಲ್ಪಟ್ಟಿತು.

C T C Publications
METALS 0 12 0
DYNAMICS 0 8 0
... ಎಂ ... ಕ್ರೈಸ್ 0 8 0
... COLLEGE,
MYSORE

## ಚೀಣ-ರಷ್ಯಾಗಳಿಗೆ ಒಪ್ಪಂದ

ಚೀಣಾ ರಷ್ಯಾಗಳಿಗೆ ೩೦ ವರ್ಷದ ಸ್ನೇಹ, ಸೌಹಾರ್ದ ಮತ್ತು ಪರಸ್ಪರ ಸಹಾಯದ ಒಪ್ಪಂದವು ಮಾಸ್ಕೋವಿನಲ್ಲಿ ನಡೆಯಿತು. ಇದರ ಪ್ರಕಾರ ೨ ರಾಷ್ಟ್ರಗಳಲ್ಲಿ ಒಂದರ ಮೇಲೆ ಬಿದ್ದರೂ ಮತ್ತೊಂದು ಅದರ ನೆರವಿಗೆ ಬರತಕ್ಕದ್ದೆಂದೂ, ಮಿತ್ರ ರಾಷ್ಟ್ರಗಳ ಶಾಂತಿ ಯೋಜನೆಯ ಶೀಘ್ರವಾಗಿ ಜಪಾನಿನಲ್ಲಿ ಜಾರಿಗೆ ಬರುವಂತೆ ಎರಡು ರಾಷ್ಟ್ರಗಳೂ ಪ್ರಯತ್ನಿಸತಕ್ಕದ್ದೆಂದೂ, ಜಪಾನಿನಲ್ಲಿ ಶಾಂತಿ ನೆಲೆಸಿದಕೂಡಲೇ, ತಾನು ವಹಿಸಿಕೊಂಡಿದ್ದ ಮಂಚೂರಿಯದ ರೈಲು ಮಾರ್ಗವನ್ನು ರಷ್ಯಾ ಚೀಣಾಕ್ಕೆ ವಹಿಸಿಕೊಡತಕ್ಕದ್ದೆಂದೂ ಸಹ ಒಪ್ಪಿಸಲಾಗಿದೆ.

## ಬ್ರಹ್ಮಪುತ್ರದಲ್ಲಿ ದೋಣಿ ಮುಗುಚಿ ಮರಣ

ಬ್ರಹ್ಮಪುತ್ರಾ ನದಿಯಲ್ಲಿ ಮೀನು ಹಿಡಿ... ಹೋಗಿ ಪಾಪಸ್ಸು ಬರುವಾಗ ದೋಣಿ ... ಬಂಡೆಯೊಂದಕ್ಕೆ ಸಿಕ್ಕಿ ತಲೆಕೆಳಗಾಗಿ ೪೦ ಜನರು ಮಡಿದ ಪ್ರಸಂಗ ಗೌಹಾತಿಯಿಂದ ವರದಿಯಾಗಿದೆ.

## ಖಾನ್ ಸಹೋದರರ ಬಗ್ಗೆ ವಿಶ್ವಸಂಸ್ಥೆಗೆ ಭಾರತ ದೂರು ಕೊಡಲಿ

ಪಾಕಿಸ್ತಾನವು ಸೆರೆ ಹಿಡಿದಿಟ್ಟಿರುವ ಗಡಿನಾಡಿನ ಖಾನ್ ಸಹೋದರರ ಆರೋಗ್ಯವು ಕೆಟ್ಟಿರುವುದರಿಂದ ಅವರುಗಳ ಬಗ್ಗೆ ಭಾರತವು ವಿಶ್ವಸಂಸ್ಥೆಗೆ ದೂರನ್ನು ಕೊಡಬೇಕೆಂದು ದೆಹಲಿಯಲ್ಲಿ ಸೇರಿದ್ದ ಪಠಾಣರ ಸಭೆಯಲ್ಲಿ ತೀರ್ಮಾನವಾಯಿತು. ಖಾನ್ ಸಹೋದರರ ಆರೋಗ್ಯ ಕೆಟ್ಟಿರೆ ಪಂಜಾಬ್ ... ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಡಲಾಯಿತು.

S. S. L. C EXAM
Papers 1940-47
(with illustrations)
1) General Science
(English) 1-8-0
2) Optional Algebra
(Kannada, English) 1-0-0
BY
C. S. Vijayaraghavachar
... 
VIJAYA INDUSTRIES,
... Road, Mysore
or Book Sellers

## ಆಹಾರದ ಉತ್ಪತ್ತಿ ಅತ್ಯಂತ ಕಡಿಮೆ

ವ್ಯವಸಾಯದ ಉತ್ಪತ್ತಿಯು ಹೀನ ಸ್ಥಿತಿಗೆ ಬಂದಿರುವುದರ ಕಾರಣ ಭಾರತವು ಆಹಾರದ ಬಗ್ಗೆ ಬಿಕ್ಕಟ್ಟಿಗೆ ಒಳಗಾಗಬೇಕಾಗಿದೆಯೆಂದು ಭಾರತದ ಆಹಾರದ ಕಮಿಷನರಾದ ಶ್ರೀ ಆರ್. ಕೆ. ಪಾಟೀಲರು ತಿಳಿಸಿದ್ದಾರೆ. ಆಹಾರದ ಉತ್ಪತ್ತಿಯು ಭಾರತದಲ್ಲಿ ಪ್ರಪಂಚದಲ್ಲೆಲ್ಲಾ ಅತ್ಯಂತ ಕನಿಷ್ಟದ್ದಾಗಿದೆಯೆಂದು ಅವರು ಹೇಳಿದರು.

○ ಪಾಕಿಸ್ತಾನದ ಪ್ರಜೆಯಾಗಿದ್ದ ರಾಮಲಾಲ್ ಎಂಬ ಕ್ರೈಸ್ತನು ಭಾರತಕ್ಕೆ ಬಂದು ಪುನಃ ಕಳೆದ ೧ನೇ ತಾರೀಖು ವಾಪಸು ಲಾಹೋರಿಗೆ ಹೋದಾಗ, ಪಾಕಿಸ್ತಾನದ ಅಧಿಕಾರಿಗಳು ಅವನಿಗೆ ಸೇರಿದ್ದ ಸುಣ್ಣದ ಗೂಡು ಮತ್ತು ಕಾರ್ಖಾನೆಯನ್ನು ಕಿತ್ತುಕೊಂಡು, ಮುಸಲ್ಮಾನನೊಬ್ಬನಿಗೆ ಕೊಟ್ಟು ರಾಮಲಾಲನ ೪೮ ಗಂಟೆಯೊಳಗೆ ದೇಶಬಿಟ್ಟು ಹೋಗುವ ಆಜ್ಞೆ ಮಾಡಿದರು.

○ ಶ್ರೀ ಕೆ. ಟಿ. ಭಾಷ್ಯಂಗವರು ಇತ್ತೀಚೆಗೆ ಧರ್ಮಸ್ಥಳಕ್ಕೆ ಭೇಟಿ ಕೊಡಲಿರುವರು.

## ಮೈಸೂರು ವಿಶ್ವವಿದ್ಯಾಲಯ

## ಪ್ರಕಟಣೆ

೧೯೫೦ನೇ ಮಾರ್ಚಿ ತಿಂಗಳಲ್ಲಿ ... ಯುವರ್ಸಿಟಿ ಪರೀಕ್ಷೆಗಳಿಗೆ ಪ್ರವೇಶ...

೧೯೫೦ನೇ ಮಾರ್ಚಿ ತಿಂಗಳಲ್ಲಿ ... ಯಲಿರುವ ವಿಶ್ವವಿದ್ಯಾನಿಲಯದ ... ಪರೀಕ್ಷೆಗಳಿಗೆ ಕಾಲೇಜುಗಳ ಮುಖಾಂತರವಾಗಲೀ, ಖಾಸಗಿಯಾಗಿ ಆಗಲೀ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರವೇಶ ಟಿಕೆಟ್ಟುಗಳನ್ನು ಅವರು ಅರ್ಜಿಯನ್ನು ಕಳುಹಿಸಿರುವ ಕಾಲೇಜುಗಳ ... ಪ್ರಾಧಿಕಾರಿಗಳಿಂದ ಪಡೆಯಬಹುದು. ಈ ಮೂಲಕ ಪ್ರಕಟಿಸಲಾಗಿದೆ.

ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಛೇರಿಯಿಂದ ನೇರವಾಗಿ ಕಳುಹಿಸಲಾಗುವುದಿಲ್ಲ.

ಮೈಸೂರು ೧೪-೨-೫೦

ಆಜ್ಞೆ ಮೇರೆಗೆ
ವಿ. ರಂಗಾಚಾರಿ
ಆಫೀಸಿಂಗ್ ರಿಜಿಸ್ಟ್ರಾರ್

ಪ್ರಭಾ ☆ 17-2-50 ರಿಂದ
ಅಮೋಘ ಪ್ರಾರಂಭ ದಿನವಹಿ 3 ಆಟಗಳು
ಶ್ರೀ ವಿಜಯ ಪಿಕ್ಚರ್ಸ್‌ರವರ
* ಸೀತಾ ಸ್ವಯಂವರ * (ಹಿಂದಿ)
| ದುರ್ಗಾ ಖೋಟೆ | ಅನಂತ ಮರಾಠೆ | ಶಕುಂತಲ

ಪ್ರಭುದೇವಾ ಟಾಕೀಸ್
17-2-50 ರಿಂದ ಅಮೋಘ 2ನೇ ವಾರ
ವಾಲಿ - ಸುಗ್ರೀವ
(ತೆಲುಗು)
ಮ್ಯಾಟಿನಿ 3ಕ್ಕೆ, 1ನೇ ಆಟ 6-15ಕ್ಕೆ, 2ನೇ ಆಟ 9-30.

ರಸಿಕರಿಗೆ ಅಚ್ಚುಮೆಚ್ಚಾದುವು
ಮೈಸೂರು ರೇಷ್ಮೆ ವಸ್ತ್ರಗಳು
ಮಿತವ್ಯಯ-ಬಾಳಿಕೆ, ಸುರುಚಿ.
ಮೈಸೂರು ರೇಷ್ಮೆ — ಸಮಾಜದಲ್ಲಿ ಮೆಚ್ಚಿಗೆ ಕೊಡುವ ಮುಖ್ಯವಾದ ಅನುಭವನಾದುದು
ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನ ಸೆಳೆವ ಮಾದರಿಗಳು
ಅಂದಿನ ಅಂದದ ರಂಗುಗಳು.
ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,
ಮೈಸೂರು.

ಶ್ರೀ ಗಣೇಶ ಮತ್ತು ಚಾಮುಂಡೇಶ್ವರಿ
ಟಾಕೀಸುಗಳಲ್ಲಿ
10-2-50 ಶುಕ್ರವಾರದಿಂದ ಅಮೋಘ ಪ್ರಾರಂಭ
ದಿನವಹಿ 3 ಆಟಗಳು
... ಅಮೋಘ ... ಚಿತ್ರ
— ರತ್ನಕುಮಾರ್ —
...

Edited, Printed and published by A. R. Nagarajan ... Sadhvi Press, D. Subbaiah Road, Mysore

ಸಂಪುಟ ೮] ಶನಿವಾರ ೧೫-೩-೫೦ [ಸಂಚಿಕೆ ೧೬೦

# ಪೂರ್ವ ಬಂಗಾಳ ಹಿಂದುಗಳ ಮೇಲೆ ಆರ್ಥಿಕ ಬಹಿಷ್ಕಾರ

## ದಕ್ಷಿಣ ಆಫ್ರಿಕದ ಕಲ್ಲಿದ್ದಲು ಪಾಕಿಸ್ತಾನಕ್ಕೆ

ದಕ್ಷಿಣ ಆಫ್ರಿಕವು ಪಾಕಿಸ್ತಾನಕ್ಕೆ ಭಾರತದ ಬೆಲೆಗಿಂತಲೂ ಕಡಿಮೆ ಧಾರಣೆಯಲ್ಲಿ ಕಲ್ಲಿದ್ದಲನ್ನು ಸರಬರಾಜು ಮಾಡುವುದೆಂಬ ಶಂಕೆಯನ್ನು ಭಾರತ ಸರ್ಕಾರವು ನಿರಾಕರಿಸಿದೆ. ಪ್ರತಿ ತಿಂಗಳೂ ಭಾರತವು ರೈಲಿನಲ್ಲಿ ಪಾಕಿಸ್ತಾನಕ್ಕೆ ೩ ಲಕ್ಷ ಟನ್ನಿನಷ್ಟು ಕಲ್ಲಿದ್ದಲನ್ನು ಕಳುಹಿಸುತ್ತಿರುವುದರಿಂದ, ದಕ್ಷಿಣ ಆಫ್ರಿಕದಿಂದ ಅಲ್ಲಿಗೆ ಹಡಗಿನಲ್ಲಿ ೫೦ ಸಾವಿರ ಟನ್ ಮಾತ್ರ ಕಳುಹಿಸಲು ಸಾಧ್ಯವೆಂದೂ, ಇವರ ಬೆಲೆಯು ಹೆಚ್ಚಾಗಿಯೇ ಇರುವುದೆಂದೂ ಹೇಳಲಾಗಿದೆ.

### ವಿಶ್ವೇಶ್ವರಯ್ಯ ನಾಲೆ ರೈತರಿಗೆ ನೆರವು

ವಿಶ್ವೇಶ್ವರಯ್ಯ ನಾಲೆಯ ಪ್ರದೇಶದಲ್ಲಿ ಸುಮಾರು ೮೫೦೦ ಎಕರೆ ಜಮೀನಿನಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಕಡಿಮೆಯಾಗಿರುವುದರಿಂದ ಮೇಲ್ಕಂಡ ಪ್ರಾಂತ್ಯದ ರೈತರಿಗೆ ಭಾವಿ ತೋಡಿಕೊಳ್ಳುವ ಸಲುವಾಗಿ ಸರ್ಕಾರದವರು ಮತ್ತು ಸಕ್ಕರೆ ಕಂಪೆನಿಯವರು ಹಣಸಹಾಯ ಮಾಡಲಿರುವರು.

### ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ಇದೇ ತಿಂಗಳು ೨೬ನೇ ತಾರೀಖು ಬೆಂಗಳೂರಿನಲ್ಲಿ ಸಮಾವೇಶಗೊಳ್ಳುವುದು.

### ಇಂಟರ್ ಗಣಿತ ಪರೀಕ್ಷೆ

[illegible] ಮಾರ್ಚಿ ಇಂಟರ್ ಪರೀಕ್ಷೆಯ ವಿದ್ಯಾರ್ಥಿಗಳಿಗೋಸ್ಕರ ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳ ಆಧಾರದ ಮೇಲೆ ಗಣಿತದಲ್ಲಿ ಮಾದರಿ ಪ್ರಶ್ನೆ ಪತ್ರಿಕೆಯನ್ನು [illegible] ಕಾಲೇಜಿನ ಅಧ್ಯಾಪಕರಾದ ಶ್ರೀಮಾನ್ ಎ. ಕೆ. [illegible] ಯವರು [illegible] ಇತರೆ ಕಾಲೇಜಿನಲ್ಲಿ ಎಲ್ಲಾ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಇಡಲಾಗಿದೆಯೆಂದೂ ತಿಳಿದುಬಂದಿದೆ.

### ವಾರ್ಷಿಕೋತ್ಸವ

ರಾಜಧಾನಿ [illegible] ಶಿವರಾಮ ಶ್ರೀಸ್ವರ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವು ಈ [illegible] ಗಂಟೆಗೆ ನಡೆಯುವುದು. ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು. ಪಂಡಿತ ನೆಹರೂ, [illegible] ಭಾವಚಿತ್ರಗಳ ಅನಾವರಣ ಮಾಡಲಾಗುವುದು.

### ಹರಿಕಥೆ

ರಾಜಧಾನಿ ಚಾಮರಾಜ ಮೊಹಲ್ಲ [illegible] ಹಾಲಿನಲ್ಲಿ ಪ್ರತಿ ದಿನ ರಾತ್ರಿ ೯ ಗಂಟೆಗೆ ವಿದ್ವಾನ್ ಶ್ರೀ ಲಕ್ಷ್ಮೀಪತಿ ಸಹೋದರರಿಂದ [illegible] ಹರಿಕಥೆಯು ನಡೆಯುತ್ತದೆ. [illegible] ಆಹ್ವಾನವುಂಟು.

ರಾಜಧಾನಿಯ [illegible] ಶ್ರೀ ಕೃಷ್ಣ [illegible] ಹರಿಕಥೆ ನಡೆಯುತ್ತದೆ.

### ಕ್ಯಾಲೆಂಡರ್ ಸ್ವೀಕಾರ

ಮೈಸೂರು, ಚಾಮರಾಜ ಮಾರ್ಕೆಟ್ಟಿನಲ್ಲಿ [illegible] ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

## ಕನ್ನಡ ನಾಡಿನ ಶ್ರೇಯಸ್ಸಾಗ ಬೇಕಾದರೆ ಬಣ ಹೆಮ್ಮೆ ಬೇಡ

ಹೊಳಲ್ಕೆರೆ ೧೮

ಅಖಿಲ ಕರ್ನಾಟಕ ಸಾಹಿತ್ಯ ಪರಿಷತ್ತಿನ ಮೂವತ್ತ[illegible] ನೆಯ ಸಭೆ [illegible] ಹೊಳಲ್ಕೆರೆಯಲ್ಲಿ ನಡೆದ ಕನ್ನಡ [illegible] ಶ್ರೀ ಎಂ. ಆರ್. ಶ್ರೀನಿವಾಸ ಮೂರ್ತಿಯವರ ಅಧ್ಯಕ್ಷತೆಯಲ್ಲಿ [illegible] ಕರ್ನಾಟಕ [illegible] ಸ್ವಾಗತ [illegible] ದಾರರ ಪ್ರಾರಂಭೋತ್ಸವವನ್ನು ನೆರವೇರಿಸಿದರು.

[illegible] ವರ್ಷಗಳಿಂದ [illegible] ಕನ್ನಡಿಗರ [illegible] ಜನತೆಯ [illegible] ಕಂಡು [illegible] ಕನ್ನಡಿಗರು [illegible] ಕರ್ನಾಟಕವು [illegible] ಬಣ ಹೆಮ್ಮೆಗಳನ್ನು [illegible] ನಾಡಿನ ಪ್ರಗತಿಯ [illegible].

[illegible] ಕನ್ನಡ [illegible] ಬೇಕು ಎಂದು ಅಧ್ಯಕ್ಷರು [illegible].

### ಪ್ರಮುಖ ಕೇಂದ್ರಗಳೊಡನೆ ಟೆಲಿಫೋನ್ ಸಂಪರ್ಕ

[illegible]

## ಪೆಟ್ರೋಲು ಕೂಪನ್ನುಗಳ ದುರುಪಯೋಗವೆ?

### ಕಳ್ಳ ಸ್ಟೋರಿನಿಂದ ೧೬,೪೦೦ ರೂ ವಶಪಡಿಸಿಕೊಳ್ಳಲಾಯಿತು

[illegible] ಬೆಂಗಳೂರು ೧೮

ಪೆಟ್ರೋಲು ಕೂಪನ್ನುಗಳು ದುರುಪಯೋಗವಾಗುತ್ತಿರುವುವೆಂಬ ಅನುಮಾನದ ಮೇಲೆ ನಿನ್ನೆ ಇಲ್ಲಿನ ಪೊಲೀಸರು [illegible] ಶ್ರೀ [illegible] ರವರ ಮನೆಯನ್ನು ಶೋಧಿಸಿದರು [illegible] ೧೬,೪೦೦ ರೂಗಳನ್ನು ವಶಪಡಿಸಿಕೊಂಡು ಅವನನ್ನು ಬಂಧಿಸಿ [illegible] ವಿಚಾರಣೆ ನಡೆಸುತ್ತಿದ್ದಾರೆ.

### ಕಾರ್ಖಾನೆಯಲ್ಲಿ ಆಕಸ್ಮಿಕ ಮರಣ

ನಿನ್ನೆ [illegible] ಪಂಪನ್ನು [illegible] ಒಂದಿಷ್ಟು [illegible] ಸ್ಥಳದಲ್ಲೇ ಮರಣಹೊಂದಿದನು.

### ಕಾಂಗ್ರೆಸ್ ಅಧಿವೇಶನ

ಬೆಂಗಳೂರಿನಲ್ಲಿ ನಡೆಸಲು ಆಹ್ವಾನ

[illegible] ಕಾಂಗ್ರೆಸ್ ಅಧಿವೇಶನವನ್ನು [illegible] ಬೆಂಗಳೂರಿನಲ್ಲಿ [illegible] ಭಾರತ ಕಾಂಗ್ರೆಸ್ ಅಧ್ಯಕ್ಷರಾದ [illegible] ರವರಿಗೆ [illegible] ತಿಳಿದಿದೆ.

### ಟಿಬೆಟ್ಟಿಗೆ ಸಾಹಸಿಗಳ [illegible]

[illegible]

## ಪೂರ್ವ ಬಂಗಾಳದಲ್ಲಿ ಹಿಂದೂಗಳ ಮೇಲೆ ಆರ್ಥಿಕ ಬಹಿಷ್ಕಾರ

ಪೂರ್ವ ಬಂಗಾಳದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಅತ್ಯಾಚಾರವು ಮೇರೆ ಮೀರುತ್ತಿದೆ. ಹಿಂದುಗಳಿಗೆ ಯಾವ ವಿಧವಾದ ಪುರಸ್ಕಾರವೂ ಇಲ್ಲ. ಇತ್ತೀಚೆಗೆ ನಡೆದ ಅಲ್ಲಿನ ಕಾರ್ಮಿಕ ಸಲಹಾ ಸಮಿತಿಯ ಸಭೆಯಲ್ಲಿ, ಕಾರ್ಮಿಕ ಸಂಸ್ಥೆಗಳ ಮಾಲೀಕರು ತಮ್ಮ ಸಂಸ್ಥೆಗಳಲ್ಲಿ ಮುಸ್ಲಿಮರನ್ನೇ ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನು ಅಲ್ಲಿನ ಕಾರ್ಮಿಕ ಸಚಿವರೇ ತಂದಿದ್ದರು. ಅಲ್ಲಿ ನೆಲೆಸಿರುವ ಹಿಂದೂಗಳಿಗೆ, ಮುಖ್ಯವಾಗಿ ವ್ಯಾಪಾರದಲ್ಲಿ ನಿರತರಾಗಿರುವವರ ಮೇಲೆ ಆರ್ಥಿಕ ಬಹಿಷ್ಕಾರ ಹಾಕುವಂತೆ ಮಾಡಲು ಪ್ರಬಲ ಪ್ರಚಾರಗಳು ನಡೆಯುತ್ತಿರುವುದು ಕಂಡು ಬರುತ್ತಿದೆ.

### ಗವರ್ನರುಗಳು ಮತ್ತು ರಾಜಪ್ರಮುಖರ ಸಮ್ಮೇಳನ

ಭಾರತದ ಗವರ್ನರುಗಳು ಮತ್ತು ರಾಜಪ್ರಮುಖರ ಸಮ್ಮೇಳನವನ್ನು ಬರುವ ಮೇ ತಿಂಗಳು ೧೮ ಮತ್ತು [illegible] ನೇ ತಾರೀಖುಗಳಂದು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ದೆಹಲಿಯಲ್ಲಿ ಕರೆದಿದ್ದಾರೆ.

### ಅಕೋಲಾ ತಾಲ್ಲೂಕಿನಲ್ಲಿ ಸಾಮೂಹಿಕ ದಂಡ

[illegible] ಜಿಲ್ಲೆಯ ಅಕೋಲಾ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಕಮ್ಯೂನಿಸ್ಟ್ [illegible] ಒಂದನ್ನು [illegible] ಹೋಟೆಯಾಡಿ [illegible] ಮಂತ್ರಿಗಳು ತಿಳಿಸಿದರು. ಅಲ್ಲದೆ [illegible] ಹಿಂಸಾ ಕೃತ್ಯಗಳು [illegible] ಸರ್ಕಾರವು [illegible] ಹಳ್ಳಿಗಳ ಮೇಲೆ ಸಾಮೂಹಿಕ ದಂಡವನ್ನು ವಿಧಿಸಲಾಗುವುದೆಂದೂ ತಿಳಿಸಿದರು.

### ಜೋಧಪುರದ ಮಂತ್ರಿಗಳ ಮೇಲಿನ ಆಪಾದನೆ ವಜಾ

ಜೋಧಪುರ [illegible] ಮಾಜಿ ಹಣಕಾಸು [illegible] ಮತ್ತು ವಿದ್ಯಾ ಸಚಿವರ [illegible] ಮೊಕದ್ದಮೆ [illegible] ಹೂಡಲಾಗಿತ್ತು. [illegible] ಶ್ರೀ [illegible] ಮೇಲಿನ ಆಪಾದನೆ [illegible] ನ್ಯಾಯಾಧೀಶರು [illegible] ವಜಾ ಮಾಡಿದರು.

### [illegible] ವೇಟಿಂಗ್ ರೂಮು [illegible]

[illegible]

## ಯುದ್ಧ ನಿಂತ ಬಗ್ಗೆ ಅರಿವು ಇಲ್ಲದ ಸೈನಿಕರು

ಕಳೆದ ಮಹಾ ಯುದ್ಧದಲ್ಲಿ ಭಾಗವಹಿಸಿ, ನ್ಯೂಗಿನಿಯ ಅರಣ್ಯಗಳಲ್ಲಿ ಅಜ್ಞಾತವಾಸದಲ್ಲಿದ್ದ ಎಂಟು ಮಂದಿ ಜಪಾನ್ ಸೈನಿಕರನ್ನು ಪೋಲೀಸರು ಕಳೆದ ವರ್ಷ ಸೆಪ್ಟೆಂಬರಿನಲ್ಲಿ ಪತ್ತೆ ಹಚ್ಚಿ ಸ್ವದೇಶಕ್ಕೆ ಕಳುಹಿಸಿದರೆಂದು ವರದಿಯಾಗಿದೆ. ಯುದ್ಧವು ಪರಿಸಮಾಪ್ತಿಗೊಂಡ ನಾಲ್ಕು ವರ್ಷಗಳ ನಂತರ ಅವರಿಗೆ ಆ ಬಗ್ಗೆ ಅರಿವುಂಟಾಯಿತೆಂದೂ, ಅಜ್ಞಾತ ವಾಸದಲ್ಲಿ ಅವರುಗಳು ಗೆಡ್ಡೆಗೆಣಸು ಮತ್ತು ಇಲಿಗಳನ್ನು ತಿಂದು ಜೀವಿಸುತ್ತಿದ್ದರೆಂದೂ ಹೇಳಲಾಗಿದೆ

## ಕೆಂಪುಚೀಣಾ, ಪಾಕಿಸ್ತಾನಗಳ ಸಂಬಂಧ

ಪಾಕಿಸ್ತಾನ ಮತ್ತು ಕಮ್ಯೂನಿಸ್ಟ್ ಚೀಣಾ ರಿಪಬ್ಲಿಕ್ ಸರಕಾರಗಳು ಪರಸ್ಪರ ರಾಜತಾಂತ್ರಿಕ ಸಂಬಂಧ ಬೆಳೆಸುವುದರ ಬಗ್ಗೆ ಪತ್ರವ್ಯವಹಾರಗಳನ್ನು ನಡೆಸುತ್ತಿರುವುದಾಗಿ ಹೇಳಲಾಗಿದೆ

## ರಷ್ಯದೊಡನೆ ಸುಲಭ ಶಾಂತಿ ಮಾರ್ಗವಿಲ್ಲ

ಅಧ್ಯಕ್ಷ ಟ್ರೂಮನ್ ಮತ್ತು ಡೀನ್ ಎಚಿಸನ್ ಇವರಿಬ್ಬರೂ ರಷ್ಯದೊಡನೆ ಸುಲಭ ಶಾಂತಿಯ ಮಾರ್ಗವು ಇಲ್ಲವೆಂದು ಹೇಳುವುದಾಗಿಯೂ ಆದ್ದರಿಂದ ಅಮೆರಿಕವು ತನ್ನ ಶಕ್ತಿಯನ್ನು ಬೆಳೆಸಿಕೊಂಡೇ ಮುಂದುವರಿಯಬೇಕೆಂದೂ, ಕ್ರಾಂತಿಕಾರಕವಾದ ಯಾವ ಹೊಸ ಸಲಹೆಗಳಿಂದಲೂ ಪ್ರಯೋಜನವೇನೂ ಇರದೆಂದೂ ಅಲ್ಲಿನ ಎದೇಶಾಂಗ ಇಲಾಖೆಯು ತಿಳಿಸಿದೆ

## ಪಾಕಿಸ್ತಾನ ವಿಜ್ಞಾನಿಗಳ ಸಂಕುಚಿತ ಮನೋಭಾವ

ಕರಾಚಿಯಲ್ಲಿ ಬರುವ ತಿಂಗಳು ನೇರುವ ವಿಜ್ಞಾನಿಗಳ ಸಮ್ಮೇಳನಕ್ಕೆ ಭಾರತದ ವಿಜ್ಞಾನಿಗಳಿಗೆ ಆಹ್ವಾನ ಕಳುಹಿಸಲಾಗುವುದಿಲ್ಲವೆಂದು ಹೇಳಲಾಗಿದೆ. ಇತರ ರಾಷ್ಟ್ರಗಳವರಿಗೆ ಆಹ್ವಾನವಿತ್ತಿರಲಾಗಿದೆ. ಭಾರತಕ್ಕೆ ಪ್ರತ್ಯೇಕವಾದ ಮಾನವರೀ ನಿರ್ಣಯ ಮಾಡಲಾಗಿದೆಯೆಂದು ಹೇಳಲಾಗಿದೆ

## ದೆಹಲಿಗೆ ನೇಪಾಳದ ಪ್ರಧಾನಿಯ ಆಗಮನ

ನೇಪಾಳದ ಪ್ರಧಾನಿ ಮಹಾರಾಜ ಮೋಹನ್ ಷಂಷೇರ್ ಜಂಗ್ ಬಹದ್ದೂರ್ ರಾಣಾರವರು ಅಲ್ಲಿನ ಪ್ರಧಾನ ದಂಡನಾಯಕರೊಡನೆ ನಿನ್ನೆ ದೆಹಲಿಗೆ ಬಂದಿರುವರೆಂದು ವರದಿಯಾಗಿದೆ. ದೆಹಲಿಯಲ್ಲಿ ಭಾರತದ ರಕ್ಷಣಾ ಸಚಿವ ಸರ್ದಾರ್ ಬಲದೇವಸಿಂಗರವರು ಅವರಿಗೆ ಸಡಗರದ ಸ್ವಾಗತ ನೀಡಿ ಅತಿಥ್ಯವನ್ನು ಅರ್ಪಿಸುವರೆಂದು ಹೇಳಲಾಗಿದೆ. ನೇಪಾಳದ ಪ್ರಧಾನಿಗಳು ಪಂಡಿತ ನೆಹರೂರವರೊಡನೆ ಮಾತುಕತೆ ನಡೆಸಿ ನೇಪಾಳ ಮತ್ತು ಭಾರತಕ್ಕೆ ಸಂಬಂಧಪಟ್ಟ ಅನೇಕ ಅಂಶಗಳ ಬಗ್ಗೆ ಸಮಾಲೋಚನೆ ನಡೆಸುವರೆಂದು ಹೇಳಲಾಗಿದೆ

## ಹೈನಾನ್ ದ್ವೀಪದ ಆಕ್ರಮಣ ಪ್ರಯತ್ನ

ಚೀಣಾ ತೀರಕ್ಕೆ ಹತ್ತಿರ ಇರುವ ಹೈನಾನ್ ದ್ವೀಪವನ್ನು ಆಕ್ರಮಿಸುವ ಸಲುವಾಗಿ ಕಮ್ಯೂನಿಸ್ಟ್ ಚೀಣೀಯರು ಕಳೆದ ವಾರ ಮತ್ತು ಮಂಗಳವಾರಗಳಲ್ಲಿ ನಡೆಸಿದ ಪ್ರಯತ್ನಗಳು ವಿಫಲವಾದುವೆಂದೂ ಅವುಗಳನ್ನು ಬಲವಾಗಿ ಮುರಿಯಲಾಯಿತೆಂದೂ ಹೇಳಲಾಗಿದೆ. ರಾಷ್ಟ್ರೀಯ ಚೀಣಾ ವಿಮಾನಗಳು ಆಕ್ರಮಣ ಹಡಗುಗಳ ಮೇಲೆ ಬಲವಾದ ಧಾಳಿಗಳನ್ನು ನಡೆಸುತ್ತಿವೆಯೆಂದು ವರದಿಯಾಗಿದೆ

## ರಾಷ್ಟ್ರೀಯ ಚೀಣಾಗೆ ಗಲ್ಲು

ಏಳು ಜನ ರಾಷ್ಟ್ರೀಯ ಚೀಣಾ ಪ್ರತಿನಿಧಿಗಳನ್ನು ಕ್ಯಾಂಟನ್ನಿನ ಕಮ್ಯೂನಿಸ್ಟರು ಗಲ್ಲಿಗೆ ಏರಿಸಿದರೆಂದು ಹೇಳಲಾಗಿದೆ. ಇದೇ ಕಮ್ಯೂನಿಸ್ಟರಿಂದ ನಡೆದ ಪ್ರಥಮ ಸಾಮೂಹಿಕ ಘಾಸಿ

## ಅಕ್ಯಾಡೆಮಿಕ್ ಕೌನ್ಸಿಲ್ ಸಭೆ

ವಿಶ್ವವಿದ್ಯಾಲಯದ ಅಕ್ಯಾಡೆಮಿಕ್ ಕೌನ್ಸಿಲ್ ಸಭೆಯು ನಾಳಿದ್ದು ಮಧ್ಯಾಹ್ನ ೧೨ ಘಂಟೆಗೆ ವಿಶ್ವವಿದ್ಯಾಲಯದ ಕಛೇರಿಯಲ್ಲಿ ಸಮಾವೇಶಗೊಳ್ಳುವುದು

## ಪ್ರಾಂತಗಳಲ್ಲಿ ೧೫ ಲಕ್ಷ ಟನ್ ಕಳೆದ ವರ್ಷದ ಧಾನ್ಯವಿದೆ

ಕಳೆದವರ್ಷದಲ್ಲಿ ಪ್ರಾಂತಗಳಿಗೆ ಕೊಟ್ಟ ಆಹಾರ ಧಾನ್ಯಗಳಲ್ಲಿ ಇನ್ನೂ ೧೫ ಲಕ್ಷ ಟನ್ನಿನಷ್ಟು ಧಾನ್ಯ ಇರುವುದಾಗಿ ಕೇಂದ್ರ ಆಹಾರ ಮಂತ್ರಿ ಹೇಳಿದ್ದಾರೆ. ಕಳೆದ ನವಂಬರ್ ತಿಂಗಳವರೆಗೆ ೧೪೨ ಕೋಟಿ ರೂ ಆಗುವಷ್ಟು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಲಾಗುವುದೆಂದು ಹೇಳಲಾಗಿದೆ

## ರೈತರಿಗೆ ಉತ್ತೇಜನ ಬೇಕು

ಇಂದಿನ ಆಹಾರ ಮುಗ್ಗಟ್ಟಿನಲ್ಲಿ ವ್ಯವಸಾಯಗಾರರಿಗೆ ಕೊಡಬಹುದಾದ ಸಾಲಗಳು ಮತ್ತು ಇತರ ವಿಧವಾದ ಸೌಲಭ್ಯಗಳನ್ನು ನಮ್ಮ ಘನ ಸರ್ಕಾರದವರು ಮುಖ್ಯ ದೃಷ್ಟಿಯಿಂದ ನಿಲ್ಲಿಸಿರುವರೆಂಬ ವರ್ತಮಾನ ಕೇಳಿ ಬಡ ವ್ಯವಸಾಯಗಾರರಿಗೆ ಲ್ಲಾ ಬಹಳ ಖೇದವನ್ನುಂಟುಮಾಡಿದೆ. ಈಗಿನ ಕಾಂಗ್ರೆಸ್ ಸರ್ಕಾರದವರು ಪ್ರಜೆಗಳ ಕ್ಷೇಮವೇ ಅದರಲ್ಲೂ ಬಡರೈತರ ಕ್ಷೇಮವೇ ಮುಖ್ಯ ಧ್ಯೇಯವೆಂದು ಗುರಿಯಿಟ್ಟುಕೊಂಡು ರಾಜ್ಯಾಡಳಿತವನ್ನು ವಹಿಸಿರುವ ಕಾಲದಲ್ಲಿ ಕಾರ್ಯತಃ ವ್ಯವಸಾಯಗಾರರಿಗೆ ಉತ್ತೇಜನ ಕೊಡುವುದು, ತಪ್ಪಿರುವುದು ಖಂಡಿತವಾಗಿಯೂ ಸೂಕ್ತವಾಗಿ ತೋರುವುದಿಲ್ಲ ಆದಕಾರಣ ಈಗ ಜಾರಿ ಮಾಡಿರುವ ಆಜ್ಞೆಯನ್ನು ಕೂಡಲೆ ರದ್ದುಪಡಿಸಿ ಹಿಂದಿನಂತೆ ಬಡ ವ್ಯವಸಾಯಗಾರರಿಗೆ ಎಲ್ಲಾ ವಿಧವಾದ ಸೌಲಭ್ಯಗಳನ್ನೂ ಕಲ್ಪಿಸಿಕೊಡುವರೆಂದು ನಂಬಿದ್ದೇನೆ-ಎಂದು ಟಿ ನರಸೀಪುರ ತಾಲ್ಲೂಕಿನ ರೈತರೊಬ್ಬರು ಪತ್ರ ಬರೆದಿದ್ದಾರೆ


LATEST

**C T C Publications**

METALS 0—12—0

DYNAMICS 0—8—0

"ಆಧುನಿಕ ಮಾನವನ ಹೋರಾಟ" ಎಂಬ ಗ್ರಂಥದ ಕೈಪಿಡಿ 0-8-0

CITY TUTORIAL COLLEGE &

NANUMAL & SONS, MYSORE


## ಯುದ್ಧ ನಿರೋಧ ಸಲಹೆಗೆ ಪಾಕಿಸ್ತಾನದ ಉತ್ತರ

'ಭಾರತವು ಪಾಕಿಸ್ತಾನಕ್ಕೆ ಕಳುಹಿಸಿದ ಯುದ್ಧ ನಿರೋಧ ಸಲಹೆಗೆ ಪಾಕಿಸ್ತಾನವು ಅಲ್ಲಿರುವ ಭಾರತದ ಹೈಕಮಿಷನರ್ ಉತ್ತರವನ್ನು ಕಳೆದ ಮಂಗಳವಾರ ಕೊಟ್ಟಿರುವುದಾಗಿ ವರದಿಯಾಗಿದೆ

## ಸೋಮಾಲಿಲ್ಯಾಂಡಿಗೆ ಇಟಲಿ ಸೈನ್ಯ

ಆಫ್ರಿಕದಲ್ಲಿರುವ ಸೋಮಾಲಿಲ್ಯಾಂಡಿಗೆ ಇಟಲಿಯ ಸೈನ್ಯದ ೧೦೦೦ ಜನರ ತಂಡವೊಂದು ಹಡಗಿನಲ್ಲಿ ಪ್ರಯಾಣ ಬೆಳೆಸಿದೆ. ಈಗಾಗಲೇ ಸಾವಿರ ಜನರು ಹೋಗಿದ್ದಾರೆ ಇನ್ನೂ ೩ ಸಾವಿರ ಸೈನ್ಯ ಹೋಗಲಿದೆ

## ತಮಿಳು ಮುಸ್ಲಿಮರಿಂದ ಅತ್ಯಾಚಾರಗಳ ಖಂಡನೆ

ಕಳೆದ ಭಾನುವಾರ ಮದರಾಸಿನ ಗ್ರೀನ್ ಮೈದಾನದಲ್ಲಿ ತಮಿಳುನಾಡ ಮುಸ್ಲಿಮರ ಸಭೆಯೊಂದು ಜರುಗಿ ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾತ ಹಿಂದೂಗಳ ಮೇಲೆ ನಡೆಸಲಾಗುತ್ತಿರುವ ಅತ್ಯಾಚಾರಗಳನ್ನು ಖಂಡಿಸಿತು

## ನರನ ಆಯುಷ್ಯವನ್ನು ದ್ವಿಗುಣ ಮಾಡುವ ಔಷಧಿ

ಮಾನವನ ಆಯುಷ್ಯವನ್ನು ಈಗಿನ ಆಯುಷ್ಯದಷ್ಟು ಅಂದರೆ ಸುಮಾರು ೨೦೦ ವರ್ಷಗಳವರೆಗೆ ಹೆಚ್ಚಿಸುವ ಔಷಧಿಯನ್ನು ಲಂಡನ್ನಿನ ರಸಾಯನಶಾಸ್ತ್ರಜ್ಞರೊಬ್ಬರು ಕಂಡುಹಿಡಿದಿದೆ. ಈ ಔಷಧಿಯನ್ನು ಇಂಜಕ್ಷನ್ ಮೂಲಕ ಕೊಡಲಾಗುವುದು. ಒಂದು ಇಂಜಕ್ಷನ್ನಿಗೆ ಸಾವಿರಗಳು ಖರ್ಚು ತಗಲುವುದು


ಪ್ರಭಾ ★ 17-2-50 ರಿಂದ

ಅಮೋಘ ಪ್ರಾರಂಭ ದಿನವಹಿ 3 ಆಟಗಳು

ಶ್ರೀ ವಿಜಯ ಪಿಕ್ಚರ್ಸ್‌ರವರ

* ಸೀತಾ ಸ್ವಯಂವರ * (ಹಿಂದಿ)

ದುರ್ಗಾ ಖೋಟೆ । ಅನಂತ ಮರಾಠೆ । ಶಕುಂತಲ

ಶ್ರೀ ಗಣೇಶಾ ಮತ್ತು ಚಾಮುಂಡೇಶ್ವರಿ ಟಾಕೀಸುಗಳಲ್ಲಿ

17-2-50 ರಿಂದ ಅಮೋಘ 2ನೇ ವಾರ

ದಿನವಹಿ 3 ಆಟಗಳು

ಮಧುರೈ ಟಾಕೀ ಫಿಲಂಸ್ ಕಂಪೆನಿ ಯವರ ಅಮೋಘ ತಮಿಳು ಚಿತ್ರ

ರತ್ನಕುಮಾರ್ –

ಪಿ ಯು ಚಿನ್ನಪ್ಪ ಪಿ ಭಾನುಮತಿ, ಮಾಲತಿ ಎನ್ ಎಸ್ ಕೃಷ್ಣನ್ ಟಿ ಎ ಮಧುರಂ

ರಾಜಕಮಲ್ ಟಾಕೀಸ್

17 2-50 ರಿಂದ

ಜನಭರಿತವಾದ ೮ನೇ ವಾರ

ದಿನಕ್ಕೆ ೩ ಪ್ರದರ್ಶನಗಳು

ಜೀವನ

ಭೂಮಿಕೆ

ವೈಜಯಂತಿಮಾಲಾ, ಟಿ ಆರ್ ರಾಮ ಚಂದ್ರನ್ ದಕ್ಷಿಣ

ಒಳಗಿನ ಪ್ರದರ್ಶನಗಳು

17-2-50 ರಿಂದ 4 ದಿನಗಳು

ಪುಷ್ಪದ ವೀರ

ಪಾಟ ಮಾಸ್ಟರ್ ವಿಠಲ್

ಜೇನುಬಾಯಿ ಕಮಲ

ಗಾಯತ್ರೀ ಟಾಕೀಸ್

18-2-50 ರಿಂದ 3 ದಿನಗಳು ಮಾತ್ರ

ದಿನವಹಿ 3 ಪ್ರದರ್ಶನಗಳು

ಅಮೋಘ ಮನೋರಂಜಕ ಚಿತ್ರ

ROPE - ರೋಪ್

ಪಾತ್ರ:- ಜೇಂಸ್ ಸ್ಟುವರ್ಟ್, ಜಾನ್ ಡ್ಯಾಲ್

Morning Shows at CHAMUNDESWARI TALKIES

From 17-2-50 For 3 days at 10 30 a m

20th Century Fox Corporation's outstanding motion marvel

**The Ghost & Mrs. Muir**

With - Rex Harrison & George Sanders

C T C Publications 1531, Vanivilas Road MYSORE

Very useful to - BS Intermediate & SSL Examinations


Edited Printed and published by A R Nagarajan at Sadhvi Press D Subbiah Road, Mysore

ಪುಟ ಸಂ. 792 WEEKLY EDITION ಸಂಚಿಕೆ ಪತ್ರಿಕೆ ೬ ಕಾಸು

ಸಂಪುಟ ೧೪] ಭಾನುವಾರ ೧೯-೩-೫೦ [ಸಂಚಿಕೆ ೩೧

# ಸಂಸ್ಥಾನದಲ್ಲಿ ೪೭ ಗೆಜೆಟೆಡ್ ಹುದ್ದೆ ರದ್ದು

## ಪೌರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಸ್ಪರ್ಧೆ

ನಂಜನಗೂಡು ೧೯

ಇಲ್ಲಿನ ಪೌರ ಸಭೆಗೆ ನಡೆಯುವ ಚುನಾವಣೆಯಲ್ಲಿ ಸ್ಥಳೀಯ ಕಾಂಗ್ರೆಸ್ಸಿನವರು ಸ್ಪರ್ಧಿಸಲು ನಿಶ್ಚಯಿಸಿದ್ದಾರೆ. ಈ ಬಗ್ಗೆ ರಚಿಸಲಾಗಿರುವ ಉಪಸಮಿತಿಗೆ ಶ್ರೀ ಎಸ್. ನಾರಾಯಣರಾಯರು ಅಧ್ಯಕ್ಷರಾಗಿದ್ದಾರೆ. ಶ್ರೀಗಳಾದ ರಾಜಶ್ಯಾಮ ಮತ್ತು ಮಹದೇವಪ್ಪನವರು ಸದಸ್ಯರಾಗಿದ್ದಾರೆ. ಕಾಂಗ್ರೆಸ್ ಪರ ಉಮೇದುವಾರರಾಗಲು ಇಚ್ಛಿಸುವವರು ... ನೇ ತಾರೀಖಿನೊಳಗೆ ಅರ್ಜಿಗಳನ್ನು ೫೦ ರೂ. ಗಳ ಸಮೇತ ಹಾಜರು ಮಾಡಬೇಕೆಂದು ಶ್ರೀ ಬೆಜ್ಜಿಗೆ ... ಲಿಂಗಣ್ಣ, ಮತ್ತು ಶ್ರೀ ಪಿ. ಸಿ. ಶಿವಶಂಕರ್ ಇವರುಗಳು ಪ್ರಾರ್ಥಿಸಿದ್ದಾರೆ.

### ವಾರ್ಷಿಕೋತ್ಸವ

ರಾಜಧಾನಿಯ ಸುತ್ತೂರು ವಿದ್ಯಾರ್ಥಿ ನಿಲಯದ ಸಂಘದ ವಾರ್ಷಿಕೋತ್ಸವವು ನಿನ್ನೆ ಸಂಜೆ ಡಾ|| ಟಿ. ಎ. ಪುರುಷೋತ್ತಮರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ, ಸ್ವಾಗತ ಭಾಷಣ ವಾರ್ಷಿಕ ವರದಿ ಮತ್ತು ವಿಚಿತ್ರ ವೇಷ ಸ್ಪರ್ಧೆಗಳಾದ ನಂತರ ಸಂಘಕ್ಕೆ ಶ್ರೀ ಬೇಲೂರು ... ಲಿಂಗಪ್ಪನವರು ಅರ್ಪಿಸಿದ ಪಂಡಿತ ಜವಾಹರ್‌ಲಾಲ್‌ರವರ ಭಾವಚಿತ್ರವನ್ನು ಅಧ್ಯಕ್ಷರು ಅನಾವರಣ ಮಾಡಿದರು.

ನಂತರ ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಹನುಮಂತಯ್ಯನವರು ಪರಿಸಮಾಪ್ತಿ ಭಾಷಣ ಮಾಡುತ್ತಾ ನಿಲಯದ ನಾಯಕರಾದ ಶ್ರೀ ಸುತ್ತೂರು ಶಿವರಾತ್ರೀಶ್ವರ ಸ್ವಾಮಿಗಳವರು ವಿದ್ಯಾರ್ಥಿಗಳ ಪ್ರಾಪಂಚಿಕ ಜ್ಞಾನವನ್ನು ವೃದ್ಧಿಪಡಿಸಲು ... ಶಕ್ತಿ ... ದ ... ಒಗ್ಗೆ ... ದ ... ಈ ಜಗತ್ತು ... ಕ್ರಿಯೆಯ ... ದರೂ, ಸರ್ಕಾರದಲ್ಲಿ ಲೋಪದೋಷಗಳಿದ್ದರೆ ಜನರ ರಚನಾತ್ಮಕ ಟೀಕೆ ಮತ್ತು ಸಲಹೆಗಳಿಂದ ಅದನ್ನು ಸರಿಪಡಿಸಬೇಕೆಂದೂ ಹೇಳಿದರು. ಅಧ್ಯಕ್ಷರು ಪಂಡಿತ ನೆಹರೂರವರ ಗುಣಗಾನ ಮಾಡಿದರು.

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

## ಕತ್ತು ಕಿವುಚಿದಂತಾಗಿ ಭೀತಿಯಿಂದ ಮರಣ

ಈಗ್ಗೆ ಕೆಲವು ದಿನಗಳ ಹಿಂದೆ ಹೊಳೇನರಸೀಪುರದ ಬಳಿ ನಡೆದ ಬಸ್ ಅಪಘಾತದಲ್ಲಿ ಸತ್ತವರನ್ನೂ ಮತ್ತು ಅವರ ಸಾಮಾನುಗಳನ್ನೂ ಕಾಯುತ್ತಿದ್ದ ಪೋಲಿಸ್ ಕಾನ್ಸ್‌ಟೇಬಲ್ ಒಬ್ಬನನ್ನು ಅರ್ಧರಾತ್ರಿಯಲ್ಲಿ ಯಾರೋ ಕತ್ತು ಹಿಸುಕಿದಂತಾಗಿ ಆತನು ಹೆದರಿದನೆಂದೂ ಮಾರನೇ ದಿನ ರಾತ್ರಿ ಆಸ್ಪತ್ರೆಯಲ್ಲಿ ಸತ್ತನೆಂದೂ ... ಈ ರೀತಿಯಾಗಿ ... ಹೆದರಿ ಆತನು ಮೃತನಾದನೆಂದು ತಿಳಿದು ಬಂದಿದೆ.

○ ಕಾರ್ಖಾನೆಗಳ ಕಾನೂನಿನ ಪ್ರಕಾರ ... ಸರ್ಕಾರ ... ಕೇಂದ್ರವನ್ನು ... ತೆರೆಯಬೇಕೆಂದು ವಿಧಾಯಕ ಮಾಡಲಾಗಿದೆ.

## ಸಂಸ್ಥಾನದಲ್ಲಿ ೪೭ ಗೆಜೆಟೆಡ್ ಹುದ್ದೆಗಳ ರದ್ದು

ಸ್ವಂ. ಸು. ಪ್ರೋ] ಬೆಂಗಳೂರು ೧೯

ಮೈಸೂರು ಸಂಸ್ಥಾನದಲ್ಲಿ ೧೧ ಅಸಿಸ್ಟೆಂಟ್ ಕಮಿಷನರುಗಳ ಮತ್ತು ೩೬ ಅಮಲ್ದಾರರುಗಳ ಹುದ್ದೆಗಳು ರದ್ದಾಗಲಿವೆ.

ವಿಶ್ವವಿದ್ಯಾಲಯಕ್ಕೆ ಪೂರ್ಣ ಆಡಳಿತ ಸ್ವಾತಂತ್ರ್ಯವಿರಬೇಕೆಂದೂ ಮತ್ತು ಅದರ ಖರ್ಚಿಗಾಗಿ ... ಹಣವನ್ನು ಒದಗಿಸಬೇಕೆಂದೂ ಡಾ|| ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿರುವ ವಿಶ್ವವಿದ್ಯಾಲಯ ಪುನರ್ವ್ಯವಸ್ಥೆಯ ಉಪಸಮಿತಿಯು ಹೇಳಿದೆ. ಈ ಅಂಶವನ್ನು ಸರ್ಕಾರವು ಪರ್ಯಾಲೋಚಿಸುತ್ತಿದೆ.

### ಖಾಸಗಿ ಸಂಸ್ಥೆಗೆ ಟೆಲಿಫೋನ್ ಕಾರ್ಖಾನೆಯ ವರ್ಗ

ಬೆಂಗಳೂರಿನ ಟೆಲಿಫೋನ್ ಕಾರ್ಖಾನೆಯನ್ನು ಕೆಲವು ದಿನಗಳ ಹಿಂದೆ ಬೆಂಗಳೂರಿನಲ್ಲಿ ಸ್ಥಾಪಿತವಾದ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಸಂಸ್ಥೆಗೆ ವರ್ಗಾಯಿಸಲು ಭಾರತ ಸರ್ಕಾರವು ಆಲೋಚಿಸಿದೆ. ಈ ಕಂಪೆನಿಯಲ್ಲಿ ಮೈಸೂರು ಮತ್ತು ಭಾರತ ಸರ್ಕಾರಗಳೂ ಮತ್ತು ಲಿವರ್‌ಪೂಲಿನ ಒಂದು ಟೆಲಿಫೋನ್ ಸಂಸ್ಥೆಯೂ ಷೇರುಗಳನ್ನು ಪಡೆಯುವುವು.

### ವಾರ್ಷಿಕ ಸಮಾರಂಭ

ಬೆಂಗಳೂರು ಕೆಲ್ಸ್ ... ಬಡವರ ಬಳಗದ ವಾರ್ಷಿಕ ಸಮಾರಂಭವು ಕಳೆದ ... ಬೆಂಗಳೂರು ಸಿಟಿ ಡೆಪ್ಯುಟಿ ಎಜುಕೇಷನಲ್ ಆಫೀಸರ್ ಶ್ರೀ ಎ. ಪಿ. ... ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

○ ಶ್ರೀ ಎಸ್. ಎನ್. ಎಸ್. ... ಅವರನ್ನು ... ಕಾಂಗ್ರೆಸ್ ... ಅಧಿಕಾರಿಯನ್ನಾಗಿ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯವರು ನೇಮಿಸಿದ್ದಾರೆ.

## ಕಾಶ್ಮೀರದ ಮಂತ್ರಿಮಂಡಲ ಸಂಖ್ಯೆಯಲ್ಲಿ ಏರಿಕೆ

ಕಾಶ್ಮೀರ ಸರ್ಕಾರದ ಆಡಳಿತ ಕೆಲಸವನ್ನು ಕಡಿಮೆ ಮಾಡುವ ಉದ್ದೇಶದಿಂದ ಮಂತ್ರಿಮಂಡಲದ ಸದಸ್ಯರ ಸಂಖ್ಯೆಯನ್ನು ... ಹೆಚ್ಚಿಸಲಾಗುತ್ತದೆಂದು ... ಶ್ರೀನಗರದ ... ತಿಳಿಸಿದೆ.

## ಹಿರಿಯ ಅಧಿಕಾರಿಗಳಿಗೆ ಕೇಂದ್ರದ ಪ್ರಶ್ನಾವಳಿಗಳು

ಮೈಸೂರು ೧೯

ಸಂಸ್ಥಾನದ ಇಲಾಖೆಗಳ ಮುಖ್ಯಾಧಿಕಾರಿಗಳೇ ಆದಿಯಾಗಿ ಹಲವು ಹಿರಿಯ ಅಧಿಕಾರಿಗಳಿಗೆ ಕೇಂದ್ರ ಸರಕಾರದವರು ಪ್ರಶ್ನಾವಳಿಯೊಂದನ್ನು ಕಳುಹಿಸಿಕೊಟ್ಟು ಅವರು ಸೇವೆ ಮಾಡುತ್ತಿರುವ ಇಲಾಖೆ, ವಯಸ್ಸು, ಅವರ ಅರ್ಹತೆಗಳು ಮುಂತಾದುವನ್ನು ಕೇಳಿರುತ್ತಾರೆ. ಅಧಿಕಾರಿಗಳು ತಮ್ಮ ಉತ್ತರಗಳನ್ನು ಸರಕಾರದ ಕ್ರಿಯಾಕಾರ್ಯದರ್ಶಿಗಳ ಮೂಲಕ ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ.

### ಹೊಸ ಜಿಲ್ಲಾಧಿಕಾರಿಗಳು

ಜಿಲ್ಲಾಧಿಕಾರಿಗಳಾಗಿ ನೇಮಕರಾಗಿರುವ ಶ್ರೀ ಹೆಚ್. ಎನ್. ... ಅವರು ನಿನ್ನೆ ದಿನ ಅಧಿಕಾರವನ್ನು ವಹಿಸಿಕೊಂಡಿರುವರೆಂದು ತಿಳಿದು ಬಂದಿದೆ.

### ರಾಮಕೃಷ್ಣ ಪರಮಹಂಸರ ಜನ್ಮ ದಿನ

ವಾಣೀವಿಲಾಸ ಮೊಹಲ್ಲಾದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಿನ್ನೆ ಸಂಜೆ ವಿಶ್ವವಿದ್ಯಾಲಯದ ಪ್ರೋ ಚಾನ್ಸಲರಾದ ಡಾ. ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮದಿನವನ್ನು ಆಚರಿಸಲಾಯಿತು. ... ಬೇಲೂರು ... ವರದರಾಜಯ್ಯಂಗಾರ್ ... ಗಾಯನ ... ಕೃಷ್ಣಮೂರ್ತಿ ... ರಂಗನಾಥನ್‌ರವರ ... ಮತ್ತು ... ಕಾರ್ಯಕ್ರಮ ... ನಡೆಯಿತು.

ಅನಂತರ ಅಧ್ಯಕ್ಷರು ಭಾಷಣ ಮಾಡಿ ರಾಮಕೃಷ್ಣಾಶ್ರಮವು ದೊರೆಯುವ ... ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ನಂತರ ಶ್ರೀಗಳಾದ ಎಂ. ಎ. ... ಮತ್ತು ... ಶ್ರೀರಾಮಕೃಷ್ಣರ ... ಜೀವನದ ... ಬಗ್ಗೆ ... ಮಾಡಿದರು.

● ಬ್ರಿಟನ್ನಿನ ... ಮಂತ್ರಿಗಳಾದ ... ಚರ್ಚಿಲ್‌ರು ... ಅವರ ... ಅನೇಕ ಜನರು ... ಪ್ರದರ್ಶನಗಳು ... ನಡೆಯಿತು ... ೩೦೦ ... .

## ಚುನಾವಣೆಯಲ್ಲಿ ಗಂಡ ಹೆಂಡರಿಗೆ ಸ್ಪರ್ಧೆ

### ಪತ್ನಿಗೆ ಜಯ

ಮದರಾಸ್ ಕಾರ್ಪೊರೇಷನ್ನಿಗೆ ... ಪ್ರದೇಶದಿಂದ ನಿನ್ನೆ ನಡೆದ ಉಪ ಚುನಾವಣೆಗೆ ಅಲ್ಲಿನ ಶ್ರೀ|| ರಘುರಾಜ ಭಾರತಿಯವರು, ಅವರ ಪತ್ನಿ ಶ್ರೀಮತಿ ರಾಜಂ ಭಾರತಿ ಮತ್ತು ಶ್ರೀ ದಾಮೋದರಂ ನಾಯ್ಡು ಅಂಬುವವರುಗಳು ಸ್ಪರ್ಧಿಸಿದ್ದರು. ಶ್ರೀ ನಾಯ್ಡುರವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದರು. ಉಳಿದ ದಂಪತಿಗಳಿಬ್ಬರಿಗೆ ಸ್ಪರ್ಧೆ ನಡೆದು ಶ್ರೀಮತಿ ರಾಜಂ ಭಾರತಿಯವರು ... ವೋಟು ಪಡೆದು ಜಯಶೀಲರಾದರು. ಅವರ ಪತಿ ಶ್ರೀ ರಘುರಾಜ ಭಾರತಿಯವರಿಗೆ ಕೇವಲ ೧೪ ವೋಟುಗಳು ಬಂದುವು.

## ಬ್ರಿಟನ್ನಿಗೆ ಭಾರತದ ತೀವ್ರ ಪ್ರತಿಭಟನೆ

ಪಾಕಿಸ್ತಾನದ ಪ್ರಧಾನ ಸೇನಾಪತಿಯಾದ ಜ|| ಗ್ರೇಸಿಯವರು ಭಾರತದ ಮೇಲೆ ಪಾಕಿಸ್ತಾನವು ದಂಡಯಾತ್ರೆ ಮಾಡಬಹುದು ಕೊಟ್ಟಿರುವ ಸಲಹೆಯ ಬಗ್ಗೆ ಬ್ರಿಟನ್ನಿಗೆ ಭಾರತವು ಬಲವಾದ ಪ್ರತಿಭಟನೆಯನ್ನು ಕೊಟ್ಟಿರುವುದಾಗಿ ಹೇಳಲಾಗಿದೆ. ಕೊಮನ್‌ವೆಲ್ತ್‌ನ ... ಒಂದಾದ ಭಾರತದ ಮೇಲೆ ಹೀಗೆ ಸೂಚಿಸಿರುವುದನ್ನು ಖಂಡಿಸಲಾಗಿದೆ. ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆಯು ಬಂದಾಗ, ಪಾಕಿಸ್ತಾನದ ಪ್ರತಿನಿಧಿ ಜಫರುಲ್ಲಾರವರಿಗೆ ಗ್ರೇಸಿಯವರು ಈ ರೀತಿ ಸಲಹೆಯಿತ್ತರೆಂದು ತಿಳಿಸಿದ್ದರು.

## ಬಸ್ಸಿನಲ್ಲಿ ಶಿಶುವಿನ ಜನನ

ಮೊನ್ನೆ ದಿನ ಬೆಳಿಗ್ಗೆ ಕೋಲಾರದಿಂದ ಬೆಂಗಳೂರಿಗೆ ಹೋಗುತ್ತಿದ್ದ ಸರ್ಕಾರಿ ಬಸ್ಸಿನಲ್ಲಿ ಒಬ್ಬ ಮುಸಲ್ಮಾನಳಾದ ಯುವತಿಯು ಒಂದು ಗಂಡು ಮಗುವನ್ನು ಪ್ರಸವಿಸಿದ ವಾರ್ತೆ ಬಂದಿದೆ. ಆಕೆಯನ್ನು ಡ್ರೈವರನು ಅರಕೆರೆಯ ಗೂಡಿನ ಒಬ್ಬ ಮುಸಲ್ಮಾನ ಬಂಧುಗಳ ರಕ್ಷಣೆಯಲ್ಲಿ ಬಿಟ್ಟು ಬಂದಿರುವನೆಂದೂ ಹೇಳಲಾಗಿದೆ.

## ಮಲ ವಿಸರ್ಜನೆಯಲ್ಲಿ ಕದ್ದ ಹಾರದ ಪತ್ತೆ

ಬರೋಡಾದಲ್ಲಿ ಕೆಲವು ದಿವಸಗಳ ಹಿಂದೆ ಒಬ್ಬನು ಒಂದು ಚಿನ್ನದ ಸರವನ್ನು ಕದ್ದನೆಂಬ ಆಪಾದನೆ ಮೇಲೆ ಅವನನ್ನು ಬಂಧಿಸಿ ಶೋಧಿಸಲಾಗಿ ಹಾರವು ದೊರಕದ ಪ್ರಯುಕ್ತ ಅನುಮಾನದ ಮೇಲೆ ಅವನಿಗೆ ಭೇದಿ ಔಷಧಿಯನ್ನು ಕುಡಿಸಲಾಗಿ, ಮಲ ವಿಸರ್ಜನೆಯಲ್ಲಿ ಹಾರವು ಸಿಕ್ಕಿತೆಂದು ವರದಿಯಾಗಿದೆ.

### ಸೈನೋ ಟೈಪಿಸ್ಟುಗಳಿಗೆ ೧೦೦ ರೂ. ಪ್ರಾರಂಭವೇತನ

ಬೆಂಗಳೂರು ೧೯

... ಜನವರಿ ೧ನೇ ತಾರೀಖಿನಿಂದ ಜಾರಿಗೆ ಬರುವಂತೆ ಸೆಕ್ರೆಟರಿಯೇಟಿನಲ್ಲಿ, ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸ್ಟೆನೋ ಟೈಪಿಸ್ಟುಗಳಿಗೆ ಪ್ರಾರಂಭ ವೇತನವು ೧೦೦ ರೂ. ಇರಬೇಕೆಂದು ಸರ್ಕಾರದವರು ಆಜ್ಞೆಯಾಗಿದೆ.

○ ... ಉತ್ತಮವಾದ ಶಿಕ್ಷಣ ... ಕರಡೀ ... ಸರ್ಕಾರದವರು ಆಲೋಚಿಸುತ್ತಿದ್ದಾರೆ ... ಪ್ರದೇಶದಲ್ಲಿ ... ಜಮೀನನ್ನು ಇದಕ್ಕಾಗಿ ... ಅಲ್ಲಿ ಸದ್ಯಕ್ಕೆ ... ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲಾಗುವುದೆಂದು ಹೇಳಲಾಗಿದೆ.

## ವಾರ ಭವಿಷ್ಯ

ತಾ|| ೧೯-೨-೫೦ರಿಂದ ೨೫-೨-೫೦ರ ವರೆಗೆ

ಮೇಷ—ಅನೇಕ ಮಹತ್ವ ಕಾರ್ಯಗಳ ಸಿದ್ಧಿ. ಆರೋಗ್ಯ ನೆಟ್ಟಗೆ. ವ್ಯಾಪಾರಾದಿಗಳಲ್ಲಿ ಹಿತ ಘಟನೆಗಳು. ವಿವಾಹದ ನಿಶ್ಚಿತಾರ್ಥ. ತಾ|| ೧೯, ೨೦, ಗೊಂದಲ ಖರ್ಚು.

ವೃಷಭ—ಗ್ರಹಗಳು ಸಹಾಯಕವಾಗಿವೆ. ಆಶೆ ಅಪೇಕ್ಷೆಗಳ ಸಿದ್ಧಿ. ಆರೋಗ್ಯ ನೆಟ್ಟಗೆ. ಮಿತ್ರ ಸಹವಾಸದಿಂದ ಆನಂದ. ನೌಕರಿಯಲ್ಲಿ ಮೇಲಿನವರ ತೃಪ್ತಿ. ವ್ಯಾಪಾರಾದಿಗಳಲ್ಲಿ ಧನಿಕರ ಸಹಾಯ. ಪ್ರವಾಸ ಇಷ್ಟದಂತೆ. ಆರ್ಥಿಕ ತ್ರಾಸವಿರದು. ತಾ|| ೨೧, ೨೨, ೨೩ ಮನರಂಜನೆ ಖರ್ಚು.

ಮಿಥುನ—ಗಡಿಬಿಡಿ ವಾರ. ಯೋಚನಾಗ್ರಸ್ತರಾದಾಗ ಎತ್ತರದಿಂದ ಬೀಳುವ ಪ್ರಸಂಗ. ನೌಕರಿಯಲ್ಲಿ ಮೇಲಿನವರ ಕೋಪ. ಆದರೆ ನಿಮ್ಮ ಶಾಂತಿಯಿಂದ ನಿವಾರಣೆ. ತಾ|| ೨೪, ೨೫ ನೆಮ್ಮದಿ. ಧನಚಿಂತಾ ನಾಶ.

ಕರ್ಕ—ಆರೋಗ್ಯ ಮತ್ತು ಮಾನಸಿಕ ಸ್ಥಿತಿ ನೆಟ್ಟಗೆ. ಬಾವಿ, ಮನೆ ಮುಂತಾದ ಕಾರ್ಯಗಳಲ್ಲಿ ಸಿರತರಾಗಲು ಉತ್ತಮ ಕಾಲ. ವಿಕ್ರಯಗಳು ನಡೆಯುವುವು. ನೌಕರಿಯಲ್ಲಿ ನಿಮ್ಮ ಮೇಲೆ ಒಳ್ಳೆ ಭಾವನೆಯುಂಟಾಗುವುದು. ವ್ಯಾಪಾರಾದಿಗಳಲ್ಲಿ ಲಾಭ. ತೀರ್ಥಕ್ಷೇತ್ರ ಸಂದರ್ಶನ. ತಾ|| ೧೯, ೨೦, ೨೧ ಲಾಭ ಸುವಾರ್ತೆ.

ಸಿಂಹ—ಆರೋಗ್ಯ ನೆಟ್ಟಗೆ. ಹಣಕಾಸಿನ ತೊಂದರೆ ಹೆಚ್ಚಿರುವುದಿಲ್ಲ. ಧನಲಾಭ ರಾಜ ದರ್ಬಾರುಗಳಲ್ಲಿ ಸ್ಥಾನಮಾನ. ನೌಕರಿ ಸ್ಥಾಯಿ. ಪ್ರವಾಸ ಸುಖಕರ. ತಾ|| ೨೨, ೨೩ ಕೌಟುಂಬಿಕ ಖರ್ಚು ಹೆಚ್ಚು.

ಕನ್ಯಾ—ಮನಶಾಂತಿ ದುರ್ಲಭ. ಮನೆಯವರಿಗೆ ತೊಂದರೆ. ನೌಕರಿಯಲ್ಲಿ ಕ್ಲೇಶ. ವ್ಯಾಪಾರಾದಿಗಳಲ್ಲಿ ವಿಶ್ವಾಸಘಾತ. ತಾ|| ೨೪, ೨೫ ಅನಾರೋಗ್ಯ. ತಲೆಗೆ ಪೆಟ್ಟು. ಧನ ಚಿಂತೆ. ಪ್ರಯೋಜನ ವಿರಹ.

ತುಲಾ—ಹಣಕಾಸಿನ ಸ್ಥಿತಿ ಅನಿಶ್ಚಿತ. ಎದುರಾಳಿಗಳ ಉಪಟಳ. ಸಾಲ ಸಿಗಲು ನಿರಾಶೆಯಾಗಿ, ನಿಮಗೆ ತೊಂದರೆಯುಂಟು. ಪ್ರವಾಸಕ್ಕೆ ಅಡ್ಡಿ. ತಾ|| ೧೯, ೨೦, ೨೧ ಕಾಲಿಗೆ ಜಖಂ.

ವೃಶ್ಚಿಕ—ಯೋಜನೆಗಳ ಸಾಫಲ್ಯ. ಗೆಳೆಯರ ಹೆಚ್ಚುವಿಕೆ. ಧನಲಾಭ. ಆರೋಗ್ಯ ನೆಟ್ಟಗೆ. ಮೇಲಧಿಕಾರ ಪ್ರಾಪ್ತಿ. ಮಂಗಳ ಕಾರ್ಯ. ತಾ|| ೧೯, ೨೦, ಆಕಸ್ಮಿಕ ಲಾಭ. ಮಹತ್ವದ ಪತ್ರ ಮತ್ತು ಭೇಟಿಗೆ ಸುದಿನಗಳು.

ಧನು—ಮನಸ್ಸಿನ ಆಲೋಚನೆಯ ಸಿದ್ಧಿ. ಜನರೆಯ ಸಹಾಯ. ತೀರ್ಥಕ್ಷೇತ್ರ ದರ್ಶನಯೋಗ. ವ್ಯಾಪಾರಾದಿಗಳಲ್ಲಿ ಹಿತದಾಯಕ ಘಟನೆ. ತಾ|| ೨೧, ೨೨, ೨೩ [illegible] ಪರಿಚಯ, ಅಪ್ತರ ಭೇಟಿ.

ಮಕರ—ಆರೋಗ್ಯ ನೆಟ್ಟಗೆ. ನೌಕರಿಯಲ್ಲಿ ಶತ್ರುಗಳ ಕೋಟಲೆ. [illegible] ತಾ|| ೧೯, ೨೦, ೨೧ [illegible] ಲಾಭ. ಮಹತ್ವದ ಪತ್ರಾಗಮನ.

ಕುಂಭ—[illegible]

## ಮಹಾತ್ಮರಿಗೆ ನೇಪಾಳದ ಪ್ರಧಾನಿಗಳ ಗೌರವ

ನಿನ್ನೆ ದಿನ ದೆಹಲಿಗೆ ಆಗಮಿಸಿದ ನೇಪಾಳದ ಮಹಾಪ್ರಧಾನರ ಗೌರವಾರ್ಥವಾಗಿ ದೆಹಲಿಯಲ್ಲಿ ೨೧ ಕುಶಾಲು ತೋಪುಗಳನ್ನು ಹಾರಿಸಲಾಯಿತು. ನೇಪಾಳದ ಪ್ರಧಾನಿಗಳು ದೆಹಲಿಯಲ್ಲಿ ೬ ದಿನಗಳಿರುವರು. ಅವರು ನಾಳೆ ದಿನ ರಾಜಘಾಟಿಗೆ ತೆರಳಿ ಅಲ್ಲಿ ಮಹಾತ್ಮ ಗಾಂಧಿಯವರ ಸಮಾಧಿಗೆ ಪುಷ್ಪಹಾರವನ್ನಿರಿಸಿ ಅವರ ಬಗ್ಗೆ ತಮ್ಮ ಗೌರವವನ್ನು ವ್ಯಕ್ತಪಡಿಸುವರು.

## ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಮಿಲಿಟರಿ ಸಹಾಯ

ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಮಿಲಿಟರಿ ಸಹಾಯವನ್ನು ಕೊಡುವ ಅಂಶವನ್ನು ಅಮೇರಿಕವು ಪರಿಶೀಲಿಸುತ್ತಿದೆಯೆಂದು ವರದಿಯಾಗಿದೆ. ಈ ಉದ್ದೇಶದಿಂದ ಈಗಾಗಲೇ ಇಂಡೋನೇಷಿಯಾ, ಸಯಾಂ, ಮಲಯಾ ಮುಂತಾದ ರಾಷ್ಟ್ರಗಳಿಗಾಗಿ ೭೦ ಮಿಲಿಯನ್ ಡಾಲರುಗಳ ಸಹಾಯವನ್ನು ಮಂಜೂರು ಮಾಡಿದೆ. ಇತರ ರಾಷ್ಟ್ರಗಳಿಂದ ಬರುವ ಸಹಾಯದ ಅರ್ಜಿಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದೂ ವರದಿಯಾಗಿದೆ.

## ಜಿಲ್ಲಾ ಮತ್ತು ನಗರ ಕಾಂಗ್ರೆಸ್ ಅರ್ಹತಾ ಸಮಿತಿ ಸದಸ್ಯರು

ಮೈಸೂರ್ ಪರಸ್ಪರ ಸಹಾಯ ಸಂಘದ ಶ್ರೀ ಎಸ್. ಶ್ರೀಕಂಠಯ್ಯನವರನ್ನು ನಗರ ಮತ್ತು ಜಿಲ್ಲೆಯ ಅರ್ಹತಾ ಪರಿಶೀಲನಾ ಸದಸ್ಯರನ್ನಾಗಿ ಕರ್ಣಾಟಕ ಪ್ರಾಂತ್ಯ ಕಾಂಗ್ರೆಸ್ಸಿನವರು ನೇಮಿಸಿರುತ್ತಾರೆ.

○ ಅಮೇರಿಕದ ಸೈನಿಕರಿಗಾಗಿ ಜಪಾನಿನಲ್ಲಿ ಸುಮಾರು ೪೦೦೦ ಮನೆಗಳನ್ನು ಕಟ್ಟಲು ಆಲೋಚಿಸಲಾಗಿದೆಯೆಂದು ವರದಿಯಾಗಿದೆ. ಇದರಿಂದ ಸದ್ಯದಲ್ಲೇ ಅಮೇರಿಕದ ಸೈನ್ಯಗಳು ಜಪಾನಿನಿಂದ ವಾಪಸ್ಸಾಗುವ ಸಂಭವವಿಲ್ಲವೆಂದು ಹೇಳಲಾಗಿದೆ.

---

ಪ್ರಸಂಗ ತಾ|| ೨೪, ೨೫ ವಾಹನ ಘಾತ. ಉಗ್ರ ಕಲಹ.

ಮೀನ—ಕೆಲ ಅವ್ಯಕ್ತ ಕಾರಣಗಳಿಂದ ಮನಸ್ಸಿಗೆ ಕಳವಳ. ಆರೋಗ್ಯ ನೆಟ್ಟಗೆ. ಸ್ತ್ರೀಯರೊಡನೆ ಅಸಂತುಷ್ಟಿ. ಅಳತೆಗೆಟ್ಟ ಖರ್ಚು. ನೌಕರಿಯಲ್ಲಿ ತೊಂದರೆ. ಎಚ್ಚರಿಕೆ. ಇರಲಿ. ತಾ|| ೨೪, ೨೫ ಧನಚಿಂತೆ ದೂರ. ಮಾನಸಿಕ ಶಾಂತಿ.

---


ಶ್ರೀ ಚಾಮುಂಡಾಂಬಾ ಟಾಕೀಸ್

ಚಾಮರಾಜನಗರ

19-2-50 ರಿಂದ

5 ನೇ ವಾರ

ಚಂದ್ರಲೇಖ

(ತಮಿಳ್)

ನಾಯಕ—ಟಿ. ಆರ್. ರಾಜಕುಮಾರಿ

ರಂಜನ

---

C T C Publications
[illegible]
MYSORE
Very useful to — B Sc
Intermediate & S S L C
Examinations


## ಸೇಲಂ ಜೈಲಿನಲ್ಲಿ ಕಮ್ಯೂನಿಸ್ಟರ ಉಪವಾಸ

ಕೆಲವು ದಿವಸಗಳ ಹಿಂದೆ ಸೇಲಂ ಜೈಲಿನಲ್ಲಿ ನಡೆದ ಗುಂಡಿನ ಪ್ರಕರಣವನ್ನು ಪ್ರತಿಭಟಿಸಿ, ಅಲ್ಲಿನ ಇತರ ಕಮ್ಯೂನಿಸ್ಟ್ ಬಂದಿಗಳು ಕಳೆದ ಮಂಗಳವಾರ ಉಪವಾಸ ಮುಷ್ಕರ ಹೂಡಿದ್ದಾರೆಂದು ವರದಿಯಾಗಿದೆ.

## ದನಗಳಿಗೆ ಗೋಮಾಳದ ಅಭಾವ

ಮೈಸೂರು ತಾಲ್ಲೂಕು ಇಲವಾಲದ ಹೋಬಳಿ ಕೊಮ್ಮಾರನಹಳ್ಳಿ(?) ಗ್ರಾಮದ ಸರ್ವೆ ೫ನೇ ನಂಬರು ಜಮೀನನ್ನು ಹೆಚ್ಚು ಬೆಳೆ ಯೋಜನೆಯ ಪ್ರಕಾರ ಸರ್ಕಾರದವರು ಸಾಗುವಳಿ ಬಗ್ಗೆ ವಿಲೆ ಮಾಡಿರುತ್ತಾರೆ. ಇದರಿಂದ ಈ ಗ್ರಾಮದ ಜಾನುವಾರುಗಳಿಗೆ ಗೋಮಾಳವೇ ಇಲ್ಲದೆ ಬಹಳ ತೊಂದರೆಯಾಗಿದೆ. ಈ ಬಗ್ಗೆ ಕಳೆದ ೫-೬ ವರ್ಷಗಳಿಂದಲೂ ಸರ್ಕಾರದವರಿಗೆ ಸಲ್ಲಿಸಿದ ಅಹವಾಲುಗಳಿಂದ ಏನೂ ಪ್ರಯೋಜನವಾಗಿಲ್ಲ. ಆದುದರಿಂದ ಅಲ್ಲಿನ ಗ್ರಾಮಸ್ಥರು ಪ್ರಧಾನ ಸಚಿವರಲ್ಲಿ ನಿಯೋಗ ಹೋಗಿ ಈ ಬಗ್ಗೆ ತಮ್ಮ ಕುಂದುಕೊರತೆಗಳನ್ನು ಕುರಿತು ಅಹವಾಲು ಹೇಳಿಕೊಳ್ಳಲು ನಿರ್ಧರಿಸಿದ್ದಾರೆ.

## ಭಾರತದ ಬಟ್ಟೆಗೆ ಆಸ್ಟ್ರೇಲಿಯದಲ್ಲಿ ಗಿರಾಕಿ

ಆಸ್ಟ್ರೇಲಿಯದ ಕ್ವೀನ್ಸ್‌ಲ್ಯಾಂಡಿನಲ್ಲಿ ಭಾರತದ ಬಟ್ಟೆಗಳಿಗೆ ಹೆಚ್ಚಿನ ಗಿರಾಕಿಗಳಿರುವರೆಂದೂ, ಆದುದರಿಂದ ಅಲ್ಲಿಗೆ ಅಧಿಕವಾಗಿ ಬಟ್ಟೆಯನ್ನು ಕಳುಹಿಸಬೇಕೆಂದೂ ಭಾರತದ ಗಿರಣಿಗಳವರಿಗೆ ಸರ್ಕಾರದವರು ಸೂಚನೆ ಕೊಟ್ಟಿರುವರೆಂದು ವರದಿಯಾಗಿದೆ.

## ಬಾಬಾಬುಡನ್‌ಗಿರಿ ಜಾತ್ರೆ

ಸ್ವಂ ಸು|| ಚಿಕ್ಕಮಗಳೂರು ೧೪

ಬರುವ ಮಾರ್ಚಿ ತಿಂಗಳು ೫ ಮತ್ತು ೬ನೇ ತಾರೀಖಿನ ದಿವಸಗಳಲ್ಲಿ ಇಲ್ಲಿಯ ದತ್ತಾತ್ರೇಯ ಪೀಠದ ಬಾಬಾಬುಡನ್‌ಗಿರಿ ಜಾತ್ರೆಯು ಮಾಮೂಲಿನಂತೆ ನೆರವೇರುವುದಾಗಿ ಜಿಲ್ಲೆಯ ಮೊಕ್ತೇಸರರು ತಿಳಿಸುತ್ತಾರೆ.

---


LATEST

C T C Publications

METALS 0—12—0
DYNAMICS 0—8—0

"ಆಧುನಿಕ ಮಾನವನ ಹೋರಾಟ"

ಎಂಬ ಗ್ರಂಥದ ಕ್ರಯಪಡಿ 0-8-0

CITY TUTORIAL COLLEGE &
NANUMAL & SONS MYSORE

---

ರಾಜಕಮಲ್

ಟಾಕೀಸ್

17—2—50 ರಿಂದ

ಜನಭರಿತವಾದ ೯ನೇ ವಾರ

ದಿನವಹಿ ೩ ಪ್ರದರ್ಶನಗಳು

ಜೀವನ

ಭೂಮಿಕೆ

ವೈಜಯಂತಿಮಾಲಾ, ಟಿ. ಆರ್ ರಾಮಚಂದ್ರ, ಲಲಿತ ಪದ್ಮಿನಿ


## ರಷ್ಯದ ಯುದ್ಧ ಸಿದ್ಧತೆ ಬಗ್ಗೆ ಟ್ರೂಮನ್ನರಿಗೆ ಕಳವಳ

ರಷ್ಯವು ಅಮೇರಿಕದ ಅಣು ಮತ್ತು ಜಲಜನಕ ಬಾಂಬುಗಳ ರಹಸ್ಯವನ್ನು ಸಂಪೂರ್ಣವಾಗಿ ಅರಿತಿರುವ ಬಗ್ಗೆ ಟ್ರೂಮನ್ನರು ಬಹಳ ಕಳವಳಗೊಂಡಿದ್ದಾರೆಂದೂ, ಈ ಆಧಾರದ ಮೇಲೆ ಅವರು ತಮ್ಮ ವಿದೇಶಾಂಗ ನೀತಿಯನ್ನು ಪುನರ್ ಪರಿಶೀಲಿಸಿ ಹೊಸ ರಕ್ಷಣಾ ವ್ಯವಸ್ಥೆಗಳನ್ನು ಕೈಗೊಳ್ಳಲಿರುವರೆಂದೂ ಅಲ್ಲಿನ ಅತಿ ವಿಖ್ಯಾತ ಪತ್ರಿಕೋದ್ಯೋಗಿ ಡ್ರ್ಯೂಪಿಯರ್ಸನ್ನರು ಬರೆದಿರುತ್ತಾರೆ.

## ಪಾಕೀಸ್ತಾನಕ್ಕೆ ಚೀಣದ ಕಲ್ಲಿದ್ದಲು

ವರ್ಷಂಪ್ರತಿ ೧೦ ಲಕ್ಷ ಟನ್ನಿನಷ್ಟು ಕಲ್ಲಿದ್ದಲನ್ನು ಚೀಣವು ಪಾಕಿಸ್ತಾನಕ್ಕೆ ಕೊಡುವುದಾಗಿ ತಿಳಿಸಿದೆ. ಈ ಬಗ್ಗೆ ಪಾಕಿಸ್ತಾನದ ಅಧಿಕಾರಿಗಳು ಚೀಣೀ ಮಂಡಲದೊಡನೆ ಮಾತುಕತೆ ನಡೆಸುವರು.

## ಕೆಳ ಸಿಂಧು ಅಣೆಕಟ್ಟು

೨೬ ಕೋಟಿ ರೂ. ವೆಚ್ಚದ ಕೆಳ ಸಿಂಧು ಅಣೆಕಟ್ಟಿನ ಶಂಕುಸ್ಥಾಪನೆಯನ್ನು ಪಾಕಿಸ್ತಾನದ ಗೌರ್ನರ್ ಜನರಲ್ಲರು ಮಾಡಿದರು. ಈ ಅಣೆಕಟ್ಟಿನ ನಿರ್ಮಾಣವಾದ ನಂತರ ೨೭ ಲಕ್ಷ ಎಕರೆ ಜಮೀನು ಸಾಗುವಳಿಗೆ ಬರಬಹುದೆಂದು ಹೇಳಲಾಗಿದೆ.

## ರೈಲ್ವೆ ಇಲಾಖೆಗಳಲ್ಲಿ ೪೬೦೦ ಜನರ ಖೋತಾ

ಈ ವರ್ಷದ ಮೊದಲನೆ ತಿಂಗಳು ಜನವರಿಯಲ್ಲಿ ಭಾರತದ ನಾನಾ ರೈಲುಗಳ ಒಟ್ಟು ೪೬೩೫ ಮಂದಿ ನೌಕರರನ್ನು ಖೋತಾ ಮಾಡಲಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು.

○ ಕಾಳಸಂತೆ ಮಾಡುವವರನ್ನು ಸಾರ್ವಜನಿಕ ನೆಮ್ಮದಿ ಭಂಗದ ಶಾಸನದ ಬಾಧನೆಗಳಿಗೆ ಒಳಪಡಿಸುವ ವಿಷಯವನ್ನು ಬೊಂಬಾಯಿ ಸರಕಾರದವರು ಪರ್ಯಾಲೋಚಿಸುತ್ತಿರುವರು.

---


WANTED

Applications will be received by the President District Board, Mysore till 20th February 1950 for the post of a Temporary stenographer on pay of Rs. 75-per mensem with the usual dearness allowance. The qualifications prescribed are: S.S.L.C Senior Short-hand & Senior Typewriting.

H M Channabasappa
President,
Mysore District Board


Edited, Printed and published by A. R. Nagarajan at Sadhvi Press, I Subbiah Road, Mysore.

ರೆ॥ ನಂ. 792 ॥ವಂದೇ ಮಾತರಂ॥ ಬಿಡಿಪ್ರತಿ ೬ ಕಾಸು

ಸಿದ್ಧ

ಸಂಪುಟ ೮] ಸೋಮವಾರ ೨೦-೩-೫೦ [ಸಂಚಿಕೆ ೧೭೧

# ಕಾಶ್ಮೀರ, ಬಂಗಾಳ ಗಡಿ ಬಳಿ ಪಾಕ್ ಸೈನ್ಯ ಸಿದ್ಧ

## ಕಾಂಗ್ರೆಸ್ ಅಧ್ಯಕ್ಷ ಚುನಾವಣೆ

ಮೈಸೂರು ೨೦

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಬರುವ ಸಾರಿ ನಡೆಯಲಿರುವ ಚುನಾವಣೆಗೆ ಶ್ರೀಗಳಾದ ಎಂ. ಎಸ್. ಜೋಯಿಸ್, ಎ. ಜಿ. ರಾಮಚಂದ್ರರಾವ್ ಮತ್ತು ಎಸ್ ಚನ್ನಯ್ಯನವರುಗಳು ಸ್ಪರ್ಧಿಸಬಹುದೆಂದು ಹೇಳಲಾಗಿದೆ

### ಆ ಗ ಮ ನ

ಸ್ವಿಟ್ಸರ್ಲೆಂಡಿನ ರೆನ್ನರ್ ಜಿವ್ಸ್ಟರ್ ಎಂಬುವರು ಇದೇ ೨೬ನೇ ತಾರೀಖಿನಲ್ಲಿಗೆ ಆಗಮಿಸುವರು ಅವರು ವಿಶ್ವವಿದ್ಯಾಲಯದ ಎಕ್ಸ್‌ಟೆನ್ಷನ್ ಉಪನ್ಯಾಸಗಳನ್ನು ಕೊಡುವರು.

### ಮೂರಿಗಳಲಿ ಬೆಲೆ ನಿಗದಿ

ಜಿಲ್ಲಾಧಿಕಾರಿಗಳು ನಗರದಲ್ಲಿ ನೂರ್ಸ್‌ರಿನ ಸಲ್ಲಾಗಿಕ್ಕೆ ೪೭-೭-೦ ಮತ್ತು ಸೇರಿಗೆ ೮ ಆಣೆಯಂತೆಯೂ, ಇತರ ತಾಲ್ಲೂಕು ಮತ್ತು ರೈಲ್ವೆ ಸ್ಟೇಷನ್ನುಗಳಿರುವ ಸ್ಥಳಗಳಲ್ಲಿ ೮॥ ಆಣೆಯಂತೆಯೂ, ಹಳ್ಳಿಗಳಲ್ಲಿ ೧೦ ಆಣೆಯಂತೆಯೂ ಮಾರಿಗಡಲೆಯನ್ನು ಮಾರಬೇಕೆಂದು ವಿಧಾಯಕ ಮಾಡಿದ್ದಾರೆ

## ಕಳುವಿಗಾಗಿ ಹೋದ ಕಳ್ಳನ ಕಿವಿಯು ಛೇದನ

ಪಾಟ್ನಾ ಬಳಿ ಮಾಂಘೀರ್ ಜಿಲ್ಲೆಯ ಒಂದು ಹಳ್ಳಿಯಲ್ಲಿ ಒಬ್ಬ ಕಳ್ಳನು ಕಳುವಿಗಾಗಿ ಹೋಗಿ ಒಂದು ಮನೆಯ ಗೋಡೆಯಲ್ಲಿ ಕನ್ನ ಕೊರೆದು ಅದರ ಮುಖಾಂತರ ಒಳಹೋಗಲು ತನ್ನ ತಲೆಯನ್ನು ತೂರಿದನು ಆಗ ಒಳಗಿದ್ದ ಒಬ್ಬ ಹೆಂಗಸು ಅವನ ಒಂದು ಕಿವಿಯನ್ನು ಕತ್ತಿಯಿಂದ ಕತ್ತರಿಸಲು ಅವನು ಗಟ್ಟಿಯಾಗಿ ಕೂಗಿದನು ಅಕ್ಕ ಪಕ್ಕದ ಜನರು ಓಡಿ ಬಂದು ಅವನನ್ನು ಹಿಡಿದು ಪೋಲೀಸರ ವಶಕ್ಕೊಪ್ಪಿಸಿದರು

## ದೆಹಲಿಗೆ ನೆಹರೂರವರನ್ನು ಹೋಲಿಸಿದುದಕ್ಕೆ ಶಿಕ್ಷೆ

ಪಂಡಿತ ನೆಹರೂ ವರನ್ನು ಚರ್ಚಿಲರಿಗೆ ಹೋಲಿಸಿ ಮಾತನಾಡಿದ ಕಾರಣದಿಂದ ಉತ್ತರ ಭಾರತದ ಒಬ್ಬ ಕಮ್ಯೂನಿಸ್ಟ್ ಯುವಕನು ವಿಚಾರಣೆಗೆ ಗುರಿಯಾಗಿ ಶಿಕ್ಷಿಸಲ್ಪಟ್ಟಿದ್ದನು ಈ ಅಂಶವನ್ನು ಪಂಡಿತ ನೆಹರೂರವರ ಗಮನಕ್ಕೆ ತರಲಾಗಿ ಅವರು ತಮಗೆ ಸಂಗತಿಯು ಗೊತ್ತೇ ಇಲ್ಲವೆಂದೂ, ಯಾರು ಬೇಕಾದರೂ ತಮ್ಮನ್ನು ಯಾರೊಡನಾದರೂ ಹೋಲಿಸಲು, ಟೀಕಿಸಲು ಅಥವಾ ಅವಹೇಳನ ಮಾಡಲೂ ಸ್ವತಂತ್ರರಾಗಿರುವುದಾಗಿಯೂ ಹೇಳಿ ಈ ಬಗ್ಗೆ ತಾವು ವಿಚಾರಿಸುವುದಾಗಿ ಹೇಳಿದರು

## ಪೂರ್ವ ಬಂಗಾಳ ಗಡಿಯಲ್ಲಿ ಪಾಕಿಸ್ತಾನ ಸೈನ್ಯ ಶೇಖರಣೆ

ಪೂರ್ವ ಬಂಗಾಳ ಮತ್ತು ತ್ರಿಪುರ ಸಂಸ್ಥಾನದ ಗಡಿಗಳಲ್ಲಿ ಪಾಕಿಸ್ತಾನ ಸೈನ್ಯಗಳು ಶೇಖರವಾಗುತ್ತಿರುವುದಾಗಿ ಕಲ್ಕತ್ತೆಗೆ ವರ್ತಮಾನ ಬಂದಿವೆ ಶಸ್ತ್ರ ಸಜ್ಜಿತ ಕಾರುಗಳು, ಟ್ಯಾಂಕ್ ಗನ್ನುಗಳು, ಜೀಪ್ ಕಾರುಗಳನ್ನೊಳಗೊಂಡ ಸೈನ್ಯಗಳು ಹೋದಿನ್ನುವು ಈ ಸೈನ್ಯದಲ್ಲಿ ಪಠಾಣರು ಮತ್ತು ಪಂಜಾಬಿಗಳು ಸೈನಿಕರು ಇದ್ದಾರೆ "ತ್ರಿಪುರ ನಮ್ಮದು" ಎಂಬ ಕೂಗುಗಳು ಅನೇಕ ಬಾರಿ ಅಲ್ಲಿ ಏಳುತ್ತಿವೆ

## ಕಾಶ್ಮೀರದ ಗಡಿ ಬಳಿ ಪಾಕಿಸ್ತಾನದ ಯುದ್ಧ ಸಿದ್ಧತೆಗಳು

ಕಾಶ್ಮೀರದ 'ಯುದ್ಧ-ನಿಲ್ಲಿಸುವ ಗಡಿ' ಬಳಿ ಪಾಕಿಸ್ತಾನದವರು ಯುದ್ಧ ಸಿದ್ಧತೆಗಳನ್ನು ತರಾತುರಿಯಾಗಿ ಮಾಡಿಕೊಳ್ಳುತ್ತಿರುವ ಬಗ್ಗೆ ಬೆದರಿಸುವ ಸುದ್ದಿಯನ್ನು ಕಾಶ್ಮೀರದೊಳಗೆ ಬಂದ ಇಬ್ಬರು ಮುಸಲ್ಮಾನರು ತಿಳಿಸಿರುತ್ತಾರೆ. ಶಸ್ತ್ರಗಳನ್ನೂ ಮದ್ದುಗಳನ್ನೂ ಯಥೇಚ್ಛವಾಗಿ ಗಡಿಗಳ ಬಳಿ ಶೇಖರಿಸಲಾಗುತ್ತಿದೆ ಜನರು ಶೀಘ್ರದಲ್ಲೇ ಯುದ್ಧ ನಡೆಯುತ್ತದೆಂದು ಎಲ್ಲೆಲ್ಲೂ ಮಾತನಾಡಿಕೊಳ್ಳುತ್ತಿರುವುದಾಗಿ ಅವರು ತಿಳಿಸಿದ್ದಾರೆ

## ಪೂರ್ವ ಆಫ್ರಿಕದಲ್ಲಿ ಭಾರತದ ಪರ್ವತಾರೋಹಿಗಳು

ಪೂರ್ವ ಆಫ್ರಿಕದ ಕೆನ್ಯಾ ಪರ್ವತದ ಅತ್ಯಂತ ಎತ್ತರದ ಶಿಖರವಾದ ಬೆನಾನಾ ಎಂಬುದನ್ನು ಅಲ್ಲಿರುವ ಭಾರತ ಸರ್ಕಾರದ ಕಮಿಷನರ ಸಮಾಚಾರ ವಿಭಾಗಾಧಿಕಾರಿ ಶ್ರೀ ಪನಾನೆ ಎಂಬುವರು ಕಳೆದ ೧೪ನೇ ತಾರೀಖು ಹತ್ತಿದರೆಂದು ವರದಿಯಾಗಿದೆ ಇವರೊಡನೆ ಶ್ರೀಮತಿ ಸಂತ್ ಎಂಬ ಮಹಿಳೆಯೂ ಮತ್ತು ೧೪ ವರ್ಷ ವಯಸ್ಸಿನ ಅವರ ಮಗ ದೇಸಾಯಿ ಎಂಬ ಯುವಕನೂ ಪರ್ವತವನ್ನು ಸ್ವಲ್ಪದೂರ ಹತ್ತಿದರೆಂದು ಹೇಳಲಾಗಿದೆ ಪರ್ವತ ಶಿಖರವು ೧೭,೩೦೦ ಅಡಿ ಎತ್ತರವಿದೆ

## ಜಗತ್ತನ್ನೇ ನಾಶಪಡಿಸಬಲ್ಲ 'ಎಕ್ಸ್ ಬಾಂಬ್'

ಅಮೆರಿಕದಲ್ಲಿ ವಾಷಿಂಗ್ಟನ್ನಿನ ಸನೇಟರ್ ಮಿಲರ್ಡ್ ಟೈಡಿಂಗ್ಸ್ ರವರು ವಿಶ್ವ ಶಸ್ತ್ರಸನ್ನಾಹಕ್ಕಾಗಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡೀನ್ ಅಚಿಸನ್ನರು ತ್ವರಿತವಾಗಿ ಪ್ರಯತ್ನಿಸಬೇಕೆಂದೂ, ತಡವಾದರೆ 'ಎಕ್ಸ್ ಬಾಂಬ್' ಎಂಬ ಇಡೀ ಮಾನವ ಕುಲ ನಾಶಕವಾದ ಹೊಸ ಬಾಂಬಿನ ಸೃಷ್ಟಿಯಾಗಬಹುದೆಂದೂ ಎಚ್ಚರಿಸಿದ್ದಾರೆ

## ಕಾಶ್ಮೀರದ ಲಂಚ-ನಿರೋಧದ ಶಾಖೆ ರದ್ದು

ಮಿತವ್ಯಯಕ್ಕಾಗಿ ಕಾಶ್ಮೀರದ ಸರಕಾರದವರು ಹಲವು ಇಲಾಖೆಗಳನ್ನು ಹೊಸದಾಗಿ ವ್ಯವಸ್ಥೆ ಮಾಡುವರೆಂದೂ ಲಂಚ ನಿರೋಧ ಮತ್ತು ಪುನರ್ವ್ಯವಸ್ಥೆ ಶಾಖೆಗಳನ್ನು ರದ್ದು ಮಾಡಿರುವರೆಂದೂ ಹೇಳಲಾಗಿದೆ

## ಎಂ. ಎಸ್. ಎಂ. ರೈಲಿನ ವಶಕ್ಕೆ ಮೈ॥ ರೈಲ್ವೆ ಆಡಳಿತ

ಸ್ವಂ. ವ. ಫೋನ್] ಬೆಂಗಳೂರು ೨೦

ಮೈಸೂರು ರೈಲ್ವೆಯ ಆಡಳಿತವನ್ನು ಏಪ್ರಿಲ್ ೧ರಿಂದ ಎಂ. ಎಸ್. ಎಂ. ರೈಲ್ವೆಯವರ ವಶಕ್ಕೆ ವಹಿಸಿಕೊಡಲಾಗುವುದೆಂದು ತಿಳಿದುಬಂದಿದೆ.

### ಚೀಫ್ ಸೆಕ್ರೆಟರಿಗಳ ಸಮ್ಮೇಳನ

ಈ ತಿಂಗಳು ೨೮ನೇ ತಾರೀಖು ನಡೆಯುವ ನಾನಾ ಪ್ರಾಂತ ಮತ್ತು ಸಂಸ್ಥಾನಗಳ ಚೀಫ್ ಸೆಕ್ರೆಟರಿಗಳ ಸಮ್ಮೇಳನಕ್ಕೆ ಚೀಫ್ ಸೆಕ್ರೆಟರಿಗಳಾದ ಶ್ರೀ ಕೆ ಶ್ರೀನಿವಾಸನ್ನರು ಹೋಗುವರು

### ಮೈಸೂರಿಗೆ ಹೊಸ ವರಮಾನ ತೆರಿಗೆ ಅಧಿಕಾರಿ

ಬರುವ ಏಪ್ರಿಲ್ ೧ರಿಂದ ಮದ್ರಾಸು ಪ್ರದೇಶದಲ್ಲಿರುವ ಶ್ರೀ ಚೌಧುರಿಯವರ ವಶಕ್ಕೆ ಮೈಸೂರು ಸಂಸ್ಥಾನದ ವರಮಾನ ತೆರಿಗೆ ಶಾಖೆಗಳನ್ನು ವಹಿಸಿಕೊಡಲಾಗುವುದು.

○ ಭಾರತ ಸಂಚಾರ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್ ಜನರಲ್ ಶ್ರೀ ರಂಗನಾಥನ್ ಮತ್ತು ಶ್ರೀ ರಂಗರಾವ್ ಇವರುಗಳು ಮೊನ್ನೆ ಶ್ರೀ ಕೆ ಟಿ ಭಾಷ್ಯಂರವರನ್ನು ಭೇಟಿ ಮಾಡಿ, ಸಂಸ್ಥಾನದ ಟೆಲಿಫೋನ್ ವ್ಯವಸ್ಥೆಯನ್ನು ಕೇಂದ್ರಕ್ಕೆ ತೆಗೆದುಕೊಳ್ಳುವ ವಿಧಾನದ ಬಗ್ಗೆ ಚರ್ಚೆ ನಡೆಸಿದರೆಂದು ತಿಳಿದುಬಂದಿದೆ

○ ಬೆಂಗಳೂರು ದೂರವಾಣಿ ಮತ್ತು ಇತರ ಪ್ರದೇಶಗಳನ್ನು ಒಂದು ಮಾಡುವ ಆಜ್ಞೆಯಾಗಿದೆ

○ ಈ ತಿಂಗಳು ೩೧ಕ್ಕೆ ಮೈ॥ ರಾಜ್ಯ ಕಾರ್ಯಕಾರಿ ಸಮಿತಿ ಸಭೆ ನಡೆಯುವುದು.

## ರೇಷನ್ ಡಿಪೋನಿಂದ ೩ ಮೂಟೆ ಅಕ್ಕಿ ಕಳ್ಳತನ

ಮೈಸೂರು ೨೦

ದೇವರಾಜ ಮೊಹಲ್ಲಾ ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಒಂದು ರೇಷನ್ ಡಿಪೋಗೆ ಯಾರೋ ನುಗ್ಗಿ ೩ ಮೂಟೆ ಅಕ್ಕಿ ಮತ್ತು ೧೦ ರೂ ಗಳನ್ನು ನೆನ್ನೆ ರಾತ್ರಿ ಕಳುವು ಮಾಡಿರುವುದಾಗಿ ವರದಿಯಾಗಿದೆ ಡಿಪೋ ಬಾಗಿಲಿನ ಬೀಗವನ್ನು ಮುರಿದು ಸಾಮಾನುಗಳನ್ನು ಸಾಗಿಸಲಾಗಿದೆ ಹಲವು ಕಾಗದಪತ್ರಗಳನ್ನು ಚೆಲ್ಲಾಪಿಲ್ಲಿ ಮಾಡಲಾಗಿದೆ ದೇವರಾಜ ಪೋಲೀಸರು ತನಿಖೆ ನಡೆಸುತ್ತಿದ್ದಾರೆ

## ಅಕ್ಯಾಡಮಿಕ್ ಕೌನ್ಸಿಲ್ ಸಭೆ

ಮೈಸೂರು ೨೦

ಈ ದಿನ ಮಧ್ಯಾಹ್ನ ೧ ಗಂಟೆಗೆ ವಿಶ್ವವಿದ್ಯಾಲಯದ ಅಕ್ಯಾಡಮಿಕ್ ಕೌನ್ಸಿಲ್ ಸಭೆಯು ವೈಸ್-ಛಾನ್ಸಲರಾದ ಶ್ರೀ ಆರ್ ಕಸ್ತೂರಿ ರಾಜ ಚೆಟ್ಟಿರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಕಸ್ತೂರಿ ರಾಜ ಚೆಟ್ಟರು ವೈಸ್ ಛಾನ್ಸಲರಾಗಿ ನೇಮಕರಾದ ಬಗ್ಗೆ ಶ್ರೀ ಟಿ ಎಸ್ ವೆಂಕಣ್ಣಯ್ಯ ... ರವರು ಅವರನ್ನು ಅಭಿನಂದಿಸಿ ಭಾಷಣ ಮಾಡಿದರು

ಸ್ತ್ರೀಯರ ಉಚ್ಚ ಶಿಕ್ಷಣಕ್ಕಾಗಿ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಸ್ಥಾಪಿಸಿರುವ ೧೭,೫೦೦ ರೂ ಗಳ ಶ್ರೀಮತಿ ಸೀತಾ ಲಕ್ಷ್ಮಿ ವಿದ್ಯಾರ್ಥಿ ವೇತನದ ನಿಧಿ ಮತ್ತು ಶ್ರೀಮತಿ ಕೋಮಲಮ್ಮನವರು ಕೊಟ್ಟಿರುವ ೧೦೦೦ ರೂ ನ ರಂಗನಾಯಕಮ್ಮ ಸ್ಮಾರಕ ಬಹುಮಾನ ನಿಧಿಗಳನ್ನು ಅಂಗೀಕರಿಸಲಾಯಿತು. ಈ ಮೊಬಲಗಿನಿಂದ ಬರುವ ಬಡ್ಡಿಯನ್ನು ಗಣಿತಶಾಸ್ತ್ರದ ವಿದ್ಯಾರ್ಥಿನಿಯರಿಗೆ ಪಾರಿತೋಷಕವಾಗಿ ಕೊಡಲಾಗುವುದು.

### ಸಂತೆಪೇಟೆ ವರ್ತಕರಿಗೆ ವಂಚನೆ

ಸಂತೆಪೇಟೆಯ ಮಂಡಿ ವರ್ತಕರಾದ ಶ್ರೀ ವಿ ಎಸ್ ಸುಬ್ಬಣ್ಣನವರಿಗೆ ೨೫ ಸಾವಿರ ರೂ ಉದ್ದನ್ನು ರವಾನಿಸಿರುವ ಬಗ್ಗೆ ಒಂದು ರೈಲ್ವೆ ರಶೀತಿಯನ್ನು ಭಾರತ ಬ್ಯಾಂಕಿನ ಮೂಲಕ ಕಳುಹಿಸಿರುವುದಾಗಿ ಉತ್ತರ ಭಾರತದ ಫರೂಕಾಬಾದಿನ ಗೋವಿಂದರಾಂ ಎಂಬಾತನು ತಿಳಿಸಿದನೆಂದೂ, ಅದರಂತೆಯೇ ಶ್ರೀ ಸುಬ್ಬಣ್ಣನವರು ೨೫ ಸಾವಿರ ರೂ.ಗಳನ್ನು ಬ್ಯಾಂಕಿಗೆ ಕಟ್ಟಿ, ರೈಲ್ವೆ ರಶೀತಿಯನ್ನು ತೆಗೆದುಕೊಂಡರೆಂದೂ ಅದು ಸುಳ್ಳು ರಶೀತಿಯಾಗಿ ಕಂಡುಬಂದು, ಈಗ ದೇವರಾಜ ಪೋಲೀಸರಿಗೆ ದೂರು ಕೊಡಲಾಗಿದೆಯೆಂದೂ ಗೊತ್ತಾಗಿದೆ.

## ಆನೆ ಮಾವುತನನ್ನು ಅಪ್ಪಳಿಸಿ ಸಾಯಿಸಿತು

ಉಡುಪಿಯ ಮಠದ ದೊಡ್ಡ ಆನೆಯೊಂದನ್ನು ಕಳೆದ ೧೦ನೇ ತಾರೀಖು ಕಾರ್ಕಳದಲ್ಲಿ ನಡೆದ ಗೌಡ ಸಾರಸ್ವತ ಗುರುಗಳ ಮೆರವಣಿಗೆ ಸಂಬಂಧದಲ್ಲಿ ಕಾರ್ಕಳಕ್ಕೆ ಕಳುಹಿಸಲಾಗಿತ್ತು ಅಲ್ಲಿ ಆನೆಯು ಮಾವುತನನ್ನು ಸೊಂಡಿಲಿನಿಂದ ತಿವಿದು ಸಾಯಿಸಿ, ಅವನ ಮೇಲಿನ ... ತೀರಿಸಿಕೊಳ್ಳಲು ಶವವನ್ನು ನೆಲಕ್ಕೆ ಅಪ್ಪಳಿಸಿ ಚೂರುಚೂರು ಮಾಡಿತೆಂದು ವರದಿಯಾಗಿದೆ. ಸ್ವಲ್ಪ ಹೊತ್ತಿನ ಮೇಲೆ ತನ್ನ ಬಳಿಗೆ ಬಂದ ಒಂದು ದನವನ್ನೂ ಸಹ ಆನೆಯು ಅಪ್ಪಳಿಸಿ ಕೊಂದಿತೆಂದೂ ಹೇಳಲಾಗಿದೆ

## ಸ್ಟಾಲಿನ್ನರನ್ನು ಉರುಳಿಸಲು ವಿಫಲ ಪ್ರಯತ್ನ

ರಷ್ಯದ ಸರ್ವಾಧಿಕಾರಿ ಸ್ಟಾಲಿನ್ನರನ್ನು ಉರುಳಿಸಲು ಸಂಚು ... ಅಲ್ಲಿನ ಕೆಲವು ... ಉನ್ನತ ಅಧಿಕಾರಿಗಳ ಪ್ರಯತ್ನ ನಡೆದು ವಿಫಲವಾದರೆಂದು ವರದಿಯಾಗಿದೆ ... ದಂಡನಾಯಕರನ್ನಾಗಿದ್ದ ... ಮಾರ್ಷಲ್ ... ಈ ಸಂಚಿನಲ್ಲಿ ... ಈ ಪಿತೂರಿಯನ್ನು ... ಮರಣ ದಂಡನೆಗೆ ಗುರಿಪಡಿಸಲಾಗಿದೆ ದೂ ವರದಿಯಾಗಿದೆ

## ಹೈದರಾಬಾದು ಕಾಂಗ್ರೆಸ್ ಕಾರ್ಯದರ್ಶಿಗಳ ರಾಜೀನಾಮೆ

ಹೈದರಾಬಾದು ಸಂಸ್ಥಾನದ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಜಿ. ಕೆ. ವ್ಯಾಸೇಶ್ವರಾಚಾರ್ಯರು ಸಂಸ್ಥಾನದ ಕಾಂಗ್ರೆಸ್ಸು ಅನುಸರಿಸುತ್ತಿರುವ ನೀತಿಯ ಬಗ್ಗೆ ಭಿನ್ನಾಭಿಪ್ರಾಯ ಬಂದಿರುವುದರಿಂದ ಕಾರ್ಯದರ್ಶಿ ಮತ್ತು ವರ್ಕಿಂಗ್ ಕಮಿಟಿ ಸದಸ್ಯತ್ವಗಳಿಗೆ ರಾಜೀನಾಮೆಯಿತ್ತಿರುವರು.

## ಟರ್ಕಿಯಲ್ಲಿ ಹಲವು ರಾಯಭಾರಿಗಳ ಮೇಲೆ ಪ್ರತಿಬಂಧ

ರಷ್ಯದ ಹಿಂಬಾಲಕ ರಾಷ್ಟ್ರಗಳ ರಾಯಭಾರಿಗಳ ಓಡಾಟವನ್ನು ಟರ್ಕಿಯ ರಾಜಧಾನಿಯಿಂದ ಹೊರಗೆ ಮಿತಿಗೊಳಿಸಲಾಗುತ್ತಿದೆ. ವಿದೇಶೀ ಏಜೆಂಟರುಗಳ ಗೂಢಚಾರಿಕೆಯು ಜಾಸ್ತಿಯಾಗುತ್ತಿರುವುದೇ ಇದಕ್ಕೆ ಕಾರಣವಾಗಿದೆ

## ಜೂಲೈ ತಿಂಗಳಿನಲ್ಲಿ ಕಾಂ॥ ಅಧಿವೇಶನ

ಬರುವ ಜೂಲೈ ತಿಂಗಳಿನ ಪ್ರಥಮ ವಾರದಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನವು ಬೆಂಗಳೂರು ಅಥವಾ ಮದ್ರಾಸಿನಲ್ಲಿ ಸೇರಲಿರುವುದು.

## ವೈಮಾನಿಕರ ಖುಲಾಸೆ

ಪೂರ್ವ ಪಾಕಿಸ್ತಾನದ ಢಾಕಾದಲ್ಲಿ ಕೆಲವು ದಿವಸಗಳ ಹಿಂದೆ ಬಂಧಿಸಲಾಗಿದ್ದ ಭಾರತೀಯ ವೈಮಾನಿಕರನ್ನು ಈಗ ಖುಲಾಸ್ ಮಾಡಿರುವುದಾಗಿ ವರದಿಯಾಗಿದೆ.

## ಜರ್ಮನಿಯಲ್ಲಿ ಪುನಃ ಗುಪ್ತ ನಾಜಿ ಚಳುವಳಿ

ಜರ್ಮನಿಯ ನಾಜಿಗಳಿಗೆ ಉಗಮಸ್ಥಾನವಾದ ಮ್ಯೂನಿಕ್ ನಗರದಲ್ಲಿ ಈಗ ಪುನಃ ಗುಟ್ಟಿನಲ್ಲಿ ನಾಜಿ ಚಳುವಳಿಯು ನಡೆಯುತ್ತಿರುವುದಾಗಿಯೂ, ಹಳೆಯ ಚಾಣಾಕ್ಷ ನಾಜಿಗಳ ಮುಖಂಡತ್ವದಲ್ಲಿ ಇದು ಸಾಗುತ್ತಿರುವುದೆಂದೂ ಅಮೆರಿಕದ ಅಧಿಕಾರಿಯೊಬ್ಬರು ಹೇಳಿದ್ದಾರೆ

### ವಾರ್ಷಿಕೋತ್ಸವ

ರಾಜಧಾನಿಯ ಕೊಪ್ಪಿನಕೊಳದ ಬೀದಿಯಲ್ಲಿರುವ ಫ್ರೆಂಡ್ಸ್ ಅಸೋಸಿಯೇಷನ್ನಿನ ವಾರ್ಷಿಕೋತ್ಸವವು ನೆನ್ನೆ ಶ್ರೀ ಎಂ. ಎಸ್. ನರಸಿಂಹೈರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ಅಧ್ಯಾಪಕರುಗಳಾದ ಶ್ರೀಗಳ ಎಂ. ಕೇಶವ್ ಮತ್ತು ಎಸ್. ಅನಂತನಾರಾಯಣರವರುಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.


ಗಾಯತ್ರೀ ಟಾಕೀಸ್

20-2-50 ರಿಂದ 3 ದಿನಗಳು ಮಾತ್ರ

ದಿನವೂ 3 ಪ್ರದರ್ಶನಗಳು

ಪ್ರೇಮ, ಹಾಸ್ಯ ಮತ್ತು ವಿನೋದಪೂರ್ಣ ಚಿತ್ರ

ಡಾ॥ ಸಿಂಗಾಪುರ ಮತ್ತು

ಮೇಮ್ ಸಾಹೇಬ್

ಮಾತ್ರ ವಿಶಿಷ್ಟ ಸ್ಪೆಷಲ್ ಮತ್ತು ಸಿನಿ ಪ್ರೆಸ್

ನಿಮ್ಮನ್ನು ಕರೆಯುವವರು:-

ಶೇಖ್ ಕ್ಯಾಪ್ಟನ್


## ಓಡಿಬರುತ್ತಿರುವ ಹಿಂದುಗಳಿಗೆ ಇನ್ನೂ ಹಿಂಸೆ

ಪೂ॥ಪಾಕಿಸ್ತಾನದ ಚಿತ್ತಗಾಂಗ್, ನವಾಖಲಿ, ಬ್ರಹ್ಮಣಬೇರಿಯ ಮುಂತಾದ ಸ್ಥಳಗಳಿಂದ ಭಾರತಕ್ಕೆ ಬರುತ್ತಿರುವ ಹಿಂದೂ ಅಲ್ಪ ಸಂಖ್ಯಾತ ನಿರಾಶ್ರಿತರುಗಳ ಮೇಲೆ ದುರಾಚಾರಗಳು ನಡೆಯುತ್ತಿರುವ ವರದಿಗಳು ಬರುತ್ತಿವೆ. ಪೂರ್ವ ಬಂಗಾಳದಿಂದ ವಿಮಾನಗಳು ಭರ್ತಿಯಾಗಿ ಬರುತ್ತಿವೆ. ಆದರೆ ರೈಲುಗಳು ಮಾತ್ರ ಖಾಲಿಯಾಗಿವೆ. ಅಲ್ಲಿನ ಸರಕಾರದವರು ಪಾಕಿಸ್ತಾನದಿಂದ ಹೊರಕ್ಕೆ ಹೋಗಲು ಯಾವ ಅಡ್ಡಿಯೂ ಇಲ್ಲವೆಂದು ತಿಳಿಸಿದ್ದಾರೆ ಆದರೆ ದುಷ್ಕೃತ್ಯಗಾರರಿಂದ ತೊಂದರೆಗಳು ವಿಪರೀತವಾಗಿ ರೈಲುಗಳಲ್ಲಿ ನಿರಾಶ್ರಿತರು ಬರಲು ಸಾಧ್ಯವಿಲ್ಲವೆಂದು ಹೇಳಲಾಗುತ್ತಿದೆ.

## ಫಜಲುಲ್ ಹಕ್, ಅಜಾದ್ ಭೇಟಿ

ಭಾರತದ ವಿದ್ಯಾ ಮಂತ್ರಿಯ ಸಚಿವರಾದ ಮೌಲಾನಾ ಅಜಾದರು ಕಲ್ಕತ್ತದಲ್ಲಿ ಬಂಗಾಳದ ಮಾಜಿ ಪ್ರಧಾನಿ ಎ. ಕೆ. ಫಜಲುಲ್ ಹಕ್ ರವರನ್ನು ಮೊನ್ನೆ ದಿನ ಭೇಟಿ ಮಾಡಿ ಕಲ್ಕತ್ತದ ಪರಿಸ್ಥಿತಿ ಬಗ್ಗೆ ಸಮಾಲೋಚನೆ ನಡೆಸಿದರು.

## ರಾಜೇಂದ್ರ ಪ್ರಸಾದರಿಗೆ ಗೌರವ ಪ್ರಶಸ್ತಿ

ಈ ತಿಂಗಳು ೨೦ರಲ್ಲಿ ಕಾಶಿ ವಿಶ್ವವಿದ್ಯಾಲಯದ ವಿಶೇಷ ಘಟಿಕೋತ್ಸವವು ನಡೆದು ಡಾ॥ ರಾಜೇಂದ್ರ ಪ್ರಸಾದರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಕೊಡಲಾಗುವುದು.

## ಸಿಲೋನ್ ಮಂತ್ರಿಮಂಡಲದ ಮೇಲೆ ಅವಿಶ್ವಾಸ

ಸಿಲೋನ್ ಮಂತ್ರಿ ಮಂಡಲದ ಮೇಲೆ ಶಾಸನ ಸಭೆಯಲ್ಲಿ ತರಲಾಗಿದ್ದ ಅವಿಶ್ವಾಸ ನಿರ್ಣಯವು ೪೫-೨೫ ಓಟುಗಳಿಂದ ಬಿದ್ದು ಹೋಯಿತು. ಸಿಲೋನ್ ಭಾರತ ಕಾಂಗ್ರೆಸ್ಸಿನ ಸದಸ್ಯರು ವಿರೋಧಿಗಳೊಡನೆ ಸೇರಿದ್ದರು


C. T. C. Publications
1531, VANIVILAS ROAD,
MYSORE
Very useful to:- B Sc
Intermediate & S.S L.C.
Examinations

ನಾಯಿ ಕೆಮ್ಮಿಗೆ ಔಷಧಿ
WHOOPING COUGH REMEDY

ಗೂರಲು, ಉಬ್ಬಸ, ಕಠಿಣವಾದ ಕೆಮ್ಮು ಮತ್ತು ಗಲಗ್ರಂಥಿ (TONSIL) ಖಚಿತ ಗುಣದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಪದಕಗಳನ್ನು ಕೊಟ್ಟಿರುತ್ತಾರೆ

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ವಿನಾಯಕ ರಸ್ತೆ, ಮೈಸೂರು.



Edited, Printed and published by A. R. Nagarajan at Sadhvi Press, D Subbiah Road, Mysore


## ಚುನಾವಣೆ ನಡೆಸುವ ಬಗ್ಗೆ ನೆಹರೂರವರ ಕಾತುರತೆ

ದೆಹಲಿಯಲ್ಲಿ ಪಂಡಿತ ನೆಹರೂರವರು ಮೊನ್ನೆ ಅಖಿಲ ಭಾರತ ಕಾಂಗ್ರೆಸ್ ಸಭೆಯಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸ್ ಚುನಾವಣೆಯು ಬಹಳ ದಿನಗಳಿಂದಲೂ ಮುಂದುವರಿಸಲ್ಪಡುತ್ತಿದೆಯೆಂದೂ ಬರುವ ಜೂನ್ ತಿಂಗಳೊಳಗಾಗಿ ಅದನ್ನು ನಡೆಸಬೇಕೆಂದೂ ಹೇಳಿದರು ಭಾರತ ರಾಜ್ಯಾಂಗದ ಪ್ರಕಾರ ಮಹಾಚುನಾವಣೆಯನ್ನು ಬರುವ ವರ್ಷ ನಡೆಸಬೇಕೆಂದು ಅವರು ಹೇಳಿದರು ಕಾಂಗ್ರೆಸ್ಸಿಗರು ಅಧಿಕಾರ ಬಿಟ್ಟುಕೊಡಲು ಇಷ್ಟಪಡದಿರುವುದೇ ಈ ತಾಮಸಕ್ಕೆ ಕಾರಣವೆಂದೂ ಅವರು ಅಭಿಪ್ರಾಯಪಟ್ಟರು.

## ಸೂಳೆಕೆರೆ ಹತ್ತಿರ ಜನವಾಸದ ಕಾಲೋನಿ

ಲಕ್ಕವಳ್ಳಿ ಯೋಜನೆ ಸಂಬಂಧವಾಗಿ ಸೂಳೆಕೆರೆಯ ಏಳು ಮೈಲಿ ಉದ್ದದ ಬಯಲಿನಲ್ಲಿರುವ ಗುಡ್ಡ ಪ್ರದೇಶವನ್ನು ಫಲವತ್ತನ್ನಾಗಿ ಮಾಡಿ ಸಾವಿರ ಎಕರೆ ಜಮೀನನ್ನು "ಹೆಚ್ಚು ಆಹಾರ ಬೆಳೆ" ಯೋಜನೆಯ ಅಂಗವಾಗಿ ಉಪಯೋಗಿಸುವ ಬಗ್ಗೆ ಪ್ರಪಂಚದ ಆರೋಗ್ಯಾಧಿಕಾರಿಗಳಾದ ಡಾ॥ ಕಾರ್ಲ್ಸರವರು ಪರಿಶೀಲನೆ ನಡೆಸಿದರು. ಸೊಳ್ಳೆಗಳನ್ನು ವಿಶೇಷ ರೀತಿಯ ಡೈನಾಮೈಟಿನಿಂದ ಕೊಲ್ಲಬಹುದೆಂದೂ, ಅಲ್ಲಿ ಜನರು ವಾಸಿಸುವ ಕಾಲೋನಿಯನ್ನು ನಿರ್ಮಿಸಬಹುದೆಂದೂ ಅಭಿಪ್ರಾಯ ಪಡಲಾಗಿದೆ

## ಪಾಕಿಸ್ತಾನದಲ್ಲಿ ರಜಾಕರರ ಶಿಕ್ಷಣ

ಕಾಶ್ಮೀರದ ಶಿಕ್ಷಣ ಸಂಬಂಧವಾಗಿ ಭಾರತ ಮತ್ತು ಪಾಕಿಸ್ತಾನಗಳಿಗೆ ನಡೆಯುತ್ತಿರುವ "ಮುಸುಕಿನ ಯುದ್ಧ"ದ ದೆಸೆಯಿಂದ ಪಾಕಿಸ್ತಾನ ಸರಕಾರದವರ ನಾಗರಿಕ ರಕ್ಷಣಾ ಕಾರ್ಯದ ಭರವನ್ನು ಹೆಚ್ಚಿಸುತ್ತಿದ್ದಾರೆ ಪಶ್ಚಿಮ ಪಂಜಾಬಿನ ಜನರು ರಜಾಕರರ ಶಿಕ್ಷಣ ಪಡೆಯಲು ಉತ್ತೇಜನವೀಯಲಾಗುತ್ತಿದೆ ಇಂತಹ ಶಿಕ್ಷಣ ಪಡೆದ ಯುವಕರಿಗೆ ದಕ್ಷತೆಯ ಸರ್ಟಿಫಿಕೇಟುಗಳನ್ನು ಕೊಡಲಾಗುತ್ತಿದೆ.

## "ಲೀಗ್ ಅಧ್ಯಕ್ಷ" ನಿಗೆ ೨ ವರ್ಷ ಸಜಾ

ಮುಸ್ಲಿಂ ಲೀಗಿನ ಅಧ್ಯಕ್ಷನೆಂದು ಹೇಳಿಕೊಂಡು ಒಬ್ಬ ರೆವಿನ್ಯೂ ಅಧಿಕಾರಿಗಳನ್ನು ಹೆದರಿಸಿದುದಕ್ಕಾಗಿ ಮಲಿಕ್ ಮುಜಫರ್ ಎಂಬುವನೊಬ್ಬನಿಗೆ ೨ ವರ್ಷ ಕಠಿಣ ಶಿಕ್ಷೆಯಾಗಿದೆ.


S. S. L. C. EXAM.
Papers 1940-49
(with illustrations)
1) General Science (English) 1-8-0
2) Optional Algebra (Kannada, English) 1-0-0
BY
C S Vijayaraghavachar
B SC A. M. I. S. E.,
VIJAYA INDUSTRIES,
VanivilasRoad, Mysore
or Book Sellers.


## ಅಲ್ಪಸಂಖ್ಯಾತರನ್ನೆಲ್ಲಾ ಅದಲು ಬದಲಿಗೆ ಸಲಹೆ

ಭಾರತ ಮತ್ತು ಪಾಕಿಸ್ತಾನಗಳಲ್ಲಿರುವ ಮುಸ್ಲಿಂ ಮತ್ತು ಹಿಂದೂ ಅಲ್ಪ ಸಂಖ್ಯಾತರೆಲ್ಲರನ್ನೂ ಪರಸ್ಪರ ಅದಲು ಬದಲು ಮಾಡಬೇಕೆಂದು ಪಾಕಿಸ್ಥಾನದ ಮುಸ್ಲಿಂ ಲೀಗಿನ ಅಧ್ಯಕ್ಷ ಚೌಧುರಿ ಖಲಿಕ್ ಉಜ್ಜಮಾನರು ಸೂಚನೆಮಾಡಿರುತ್ತಾರೆ. ಈ ಸಲಹೆಯನ್ನು ದೆಹಲಿಯ ಜಮೈತ್ ಉಲೇಮಾದಲ್ಲಿ ಸೇರಿದ್ದ ಮುಸ್ಲಿಮರು ಖಂಡಿಸಿ, ಭಾರತವು ಪಾಕಿಸ್ತಾನದನ್ನು ತೃಪ್ತಿಪಡಿಸುವ ನೀತಿಯನ್ನು ಬಿಟ್ಟು ಬಿಡಬೇಕೆಂದೂ, ಎರಡು ರಾಜ್ಯಗಳಿಗೂ ಬೆಳೆಯುತ್ತಿರುವ ಬಿಕ್ಕಟ್ಟನ್ನು ಕೊನೆಗಾಣಿಸಬೇಕೆಂದೂ ಪ್ರಾರ್ಥಿಸಿದರು.

### ಶಿವ ಕೀರ್ತನೆ

ರಾಜಧಾನಿಯ ವಾಣೀವಿಲಾಸ ಮಾರ್ಕೆಟ್ ಚೌಕದ ಶ್ರೀ ವೀರಭದ್ರಪ್ಪನವರ ಅಂಗಡಿ ಮುಂಭಾಗದಲ್ಲಿ ಹಾಕಿರುವ ಚಪ್ಪರದಲ್ಲಿ ಈ ರಾತ್ರಿ ೧೦ ಘಂಟೆಗೆ ಶ್ರೀ ಲಕ್ಷ್ಮಿಪತಿ ಸಹೋದರರಿಂದ "ಗಿರಿಜಾ ಕಲ್ಯಾಣ" ಎಂಬ ಕೀರ್ತನೆ ನಡೆಯುವುದು

### ಯೋಗ್ಯತಾ ಪತ್ರಗಳ ವಿನಿಯೋಗ ಸಮಾರಂಭ

ದೇವರಾಜ ಮೊಹಲ್ಲಾದಲ್ಲಿರುವ ಮಹಿಳಾ ಸದನದಲ್ಲಿ ನಿನ್ನೆ ಸಂಜೆ ಶ್ರೀ ರಾಜಸೇವಾಸಕ್ತ ಎಂ. ವೆಂಕಟೇಶ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಭಕ್ತಿ ಗೀತೆಗಳ ಹಾಡುಗಾರಿಕೆ ಪರೀಕ್ಷೆಯ ಯೋಗ್ಯತಾ ಪತ್ರ ವಿನಿಯೋಗ ಸಮಾರಂಭವು ನಡೆಯಿತು ಪ್ರಾರ್ಥನೆ, ಸ್ವಾಗತ ಭಾಷಣ, ಭಕ್ತಿಗೀತೆ ಮತ್ತು ಕಾರ್ಯಕ್ರಮಗಳ ವರದಿ ಇವುಗಳಾದನಂತರ ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.


LATEST
C.T.C. Publications
METALS 0—12—0
DYNAMICS 0—8—0
"ಆಧುನಿಕ ಮಾನವನ ಹೋರಾಟ" ಎಂಬ ಗ್ರಂಥದ ಕ್ರಯಿಪಿ 0-8-0
CITY TUTORIAL COLLEGE & NANUMAL & SONS, MYSORE


### ಮೈಸೂರು ವಿಶ್ವವಿದ್ಯಾಲಯ

## ಪ್ರಕಟಣೆ

೧೯೫೦ನೇ ಮಾರ್ಚಿ ತಿಂಗಳಿನಲ್ಲಿ ನಡೆಯುವ ಟಿಕೆಟ್ಟು ಪರೀಕ್ಷೆಗಳಿಗೆ ಪ್ರವೇಶಗಳು

೧೯೫೦ನೇ ಮಾರ್ಚಿ ತಿಂಗಳಿನಲ್ಲಿ ನಡೆಯಲಿರುವ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಿಗೆ ಕಾಲೇಜುಗಳ ಮುಖಾಂತರವಾಗಿಯಾಗಲೀ, ಖಾಸಗಿಯಾಗಿ ಆಗಲೀ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರವೇಶ ಟಿಕೆಟ್ಟುಗಳನ್ನು ಅವರು ಅರ್ಜಿಗಳನ್ನು ಕಳುಹಿಸಿರುವ ಕಾಲೇಜುಗಳ ಮುಖ್ಯಾಧಿಕಾರಿಗಳಿಂದ ಪಡೆಯಬಹುದೆಂದು ಈ ಮೂಲಕ ಪ್ರಕಟಿಸಲಾಗಿದೆ

ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯ ಕಛೇರಿಯಿಂದ ನೇರವಾಗಿ ಕಳುಹಿಸಲಾಗುವುದಿಲ್ಲ.

ಮೈಸೂರು ೧೮-೨-೫೦ } ಅಪ್ಪಣೆ ಮೇರೆ, ಸಿ. ರಂಗಾಚಾರ್, ಅಸ್ಸಿಸ್ಟೆಂಟ್ ರಿಜಿಸ್ಟ್ರಾರ್

ರೋ. ನಂ. 792 · ಬೆಲೆ: ಒಂದಾಣೆ · ಇಂದಿನ ಪತ್ರಿಕೆ ೬ ಪುಟ



ಸಂಪುಟ ೮] · ಮಂಗಳವಾರ ೨೧ ೨-೫೦ · [ಸಂಚಿಕೆ ೧೬೩

# ಶರಚ್ಚಂದ್ರ ಬೋಸರು ನಿಧನರಾದರು

## ಪುರಸಭೆ ಮತ್ತು ನಗರಾಭಿವೃದ್ಧಿ ಸಭೆಗಳಿಗೆ ಅಧ್ಯಕ್ಷರು

### ವಿಶೇಷ ಸಭೆಗೆ ನಿರ್ಣಯ

ಮೈಸೂರು ೨೧

ಪುರಸಭೆಯ ಕಾಂಗ್ರೆಸ್ ಪಕ್ಷದವರು ನಗರಾಭಿವೃದ್ಧಿ ಬೋರ್ಡು ಮತ್ತು ನಗರ ಸಭೆಗೆ ಅಧ್ಯಕ್ಷರು ಒಬ್ಬರೇ ಆಗಿರಬೇಕೆಂಬ ನಿರ್ಣಯವನ್ನು ಅಧ್ಯಕ್ಷರಿಗೆ ಕಳುಹಿಸಿ ಇದಕ್ಕಾಗಿ ಒಂದು ವಿಶೇಷ ಸಭೆಯನ್ನು ಕರೆಯುವಂತೆ ಕೇಳಿರುವರೆಂದೂ ಈ ನಿರ್ಣಯಕ್ಕೆ ೧೦ ಜನ ಸದಸ್ಯರು ಸಹಿ ಹಾಕಿರುವರೆಂದೂ ತಿಳಿದುಬಂದಿದೆ

## ಹಂಗಾಮಿ ಮರಾಮತ್ತು ಇಲಾಖೆ ಸಿಬ್ಬಂದಿಗಳ ಸಂಬಳ

ಚೀಫ್ ಇಂಜನಿಯರರು ಹಂಗಾಮಿ ಮರಾಮತ್ತು ಇಲಾಖೆಯ ನೌಕರರ ಸಂಬಳದ ಬಗ್ಗೆ ಪುನರ್ವಿಮರ್ಶೆ ಮಾಡಿ ಕಳುಹಿಸಿದ ಪಟ್ಟಿಯನ್ನು ಸರಕಾರದವರು ಮಂಜೂರು ಮಾಡಿರುತ್ತಾರೆ

## ೧೪ ಎಂ. ಎ. ಡಿಗ್ರಿಗಳನ್ನು ಪಡೆದ ಅಧ್ಯಾಪಕರು

ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಅಧ್ಯಾಪಕರಾದ ಶ್ರೀ ರಾಮಕೃಷ್ಣರಾವ್ ತ್ರಿಪಾಠಿ ಎಂಬುವರು ೧೪ ಎಂ. ಎ. ಡಿಗ್ರಿ ಪದವಿಗಳನ್ನು ಪಡೆದು ಉತ್ತೀರ್ಣರಾಗಿರುವರ ಜ್ಞಾನಾರ್ಜನೆಯಲ್ಲಿ ಅವರಿಗಿರುವ ಆಸಕ್ತಿಯನ್ನು ಪ್ರಶಂಸಿಸಿ ಹೇಗ್ ವಿಶ್ವವಿದ್ಯಾನಿಲಯದವರು ಅವರಿಗೆ ಗೌರವ ಎಲ್. ಎಲ್. ಡಿ. ಪ್ರಶಸ್ತಿಯನ್ನು ಕೊಡಲು ನಿರ್ಧರಿಸಿದ್ದಾರೆ

## ಮಂತ್ರಿಗಳ ಮೇಲಿನ ಆಪಾದನೆಗಳಿಗೆ ಆಧಾರ ಸಾಲದು

ಮದ್ರಾಸು ಮಂತ್ರಿ ಮಂಡಲದ ಹಲವು ಮಂತ್ರಿಗಳ ಮೇಲೆ ಶ್ರೀ ಟಿ. ಪ್ರಕಾಶಂರವರು ಮಾಡಿರುವ ಆಪಾದನೆಗಳಿಗೆ ಆಧಾರಗಳು ಸಾಲವೆಂದೂ, ಕೇವಲ ಅನುಮಾನದ ಮೇಲೆ ವಿಚಾರಣೆ ನಡೆಸುವುದು ಸಾಧ್ಯವಿಲ್ಲವೆಂದೂ ರಾಜೇಂದ್ರಪ್ರಸಾದ್, ಸೀತಾರಾಮಯ್ಯ ಮತ್ತು ಪಟೇಲರನ್ನೊಳಗೊಂಡ ಸಮಿತಿಯು ಈ ವಿಷಯವನ್ನು ಅಲ್ಲಿಗೇ ಬಿಡಬೇಕೆಂದು ಶಿಫಾರಸು ಮಾಡಿರುವ ವರದಿಯು ಈಗ ಪ್ರಕಟವಾಗಿದೆ. ಮಂತ್ರಿಗಳ ಮೇಲೆ ತಮ್ಮವರಿಗೆ ಸಾಲ, ಸರಕಾರದ ಸಹಾಯ, ಬಸ್ಸುಗಳ ಖರೀದಿ, ಗುತ್ತಿಗೆಗಳ ವಹಿವಾಟು, ಹಲವು ವ್ಯಕ್ತಿಗಳಿಗೆ ಅನುಕೂಲ ಮಾಡುವುದಕ್ಕಾಗಿಯೇ ಶಾಸನ ಮಾಡಿದ್ದು ಇವೇ ಮುಂತಾದ ಆಪಾದನೆಗಳನ್ನು ಮಾಡಲಾಗಿತ್ತು

## ಮುಸ್ಲಿಂ ಯುವತಿಯ ಅಪಹರಣಕ್ಕಾಗಿ ಕಮ್ಯೂನಿಸ್ಟನ ಕೊಲೆ

ರಾವಲ್ಪಿಂಡಿಯ ಬಳಿ ಮೋಗಾ ಪರಗಣೆಯ ಒಂದು ಹಳ್ಳಿಯಲ್ಲಿ ಹರಚರಣ್ ಸಿಂಗ್ ಎಂಬ ಕಮ್ಯೂನಿಸ್ಟನು ಒಬ್ಬ ಕಮ್ಯೂನಿಸ್ಟನ ಮುಸ್ಲಿಮನ ಹೆಂಡತಿಯನ್ನು ಅಪಹರಿಸಿಟ್ಟುಕೊಂಡಿದ್ದನು ಅವನ ಸಹೋದ್ಯೋಗಿಗಳು ಆಕೆಯನ್ನು ಗಂಡನ ಮನೆಗೆ ಕಳುಹಿಸಬೇಕೆಂದು ಎಷ್ಟು ಹೇಳಿದರೂ ಅವನು ಕೇಳಲಿಲ್ಲ ಆದ್ದರಿಂದ ಒಂದು ದಿನ ಅವನನ್ನು ಕಮ್ಯೂನಿಸ್ಟ್ ಅಂತರಂಗ ಸಮಿತಿ ಕೆಲವರನ್ನು ಭೇಟಿ ಮಾಡಬೇಕಾಗಿ ಕರೆದು ಒಂದೇ ಗುಂಡಿನಿಂದ ಕೊಲ್ಲಲಾಯಿತು

## ಶರತ್ ಚಂದ್ರಬೋಸರ ನಿಧನ

ಸುಭಾಷ್ ಚಂದ್ರಬೋಸರ ಅಣ್ಣಂದಿರೂ, ಜಾನಕಿನಾಥಬೋಸರವರ ಪುತ್ರರೂ ಆದ ಶ್ರೀ ಶರತ್ ಚಂದ್ರಬೋಸರ ನೆನ್ನೆ ರಾತ್ರಿ ೧೧-೧೦ಕ್ಕೆ ಮೃತಪಟ್ಟರು. ಹೃದಯದ ಬೇನೆಯಿಂದ ನರಳುತ್ತಿದ್ದ ಇವರ ಆರೋಗ್ಯ ಒಂದೆರಡು ದಿವಸಗಳಿಂದ ಕೆಟ್ಟು ಎರಡು ವರ್ಷಗಳಿಂದಲೂ ಅಸ್ವಸ್ಥರಾಗಿದ್ದು ಇತ್ತೀಚೆಗೆ ಉತ್ತಮಗೊಳ್ಳುತ್ತಿದ್ದರು. ನೆನ್ನೆ ರಾತ್ರಿ ೧೧ ಘಂಟೆ ವೇಳೆಯಲ್ಲಿ ಅವರು ... [illegible] ... ಇಹಲೋಕ ವ್ಯಾಪಾರವನ್ನು ನೀಗಿದರು

ದಿವಂಗತ ಶರತ್ ಚಂದ್ರಬೋಸರು ೧೮೮೯ನೇ ಇಸವಿಯಲ್ಲಿ ಕಟಕ್ಕಿನಲ್ಲಿ ಜನ್ಮತಾಳಿದರು. ಇವರು ಕಟಕ್ ನಗರಗಳಲ್ಲಿ ವಿದ್ಯಾಭ್ಯಾಸ ಮಾಡಿ ... [illegible] ... ಅನುಯಾಯಿಗಳಾಗಿದ್ದರು ೧೯೩೬ರಿಂದ ಎರಡು ವರ್ಷಕಾಲ ಬಂಗಾಳ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು. ೧೯೪೬ರವರೆಗೆ ಅವರು ಕೇಂದ್ರ ಶಾಸನ ಸಭೆಯ ಸದಸ್ಯರಾಗಿದ್ದು, ಅನಂತರ ಅದಕ್ಕೆ ರಾಜೀನಾಮೆ ಕೊಟ್ಟರು. ... [illegible] ... ಪ್ರತಿನಿಧಿ ಮತ್ತು ... [illegible] ... ಮಂತ್ರಿ ... [illegible]

... [illegible] ...

## ವಿದ್ಯಾ ಸಚಿವರ ಭಾಷಣ

ಮೈಸೂರು ೨೦

ಸಂಸ್ಥಾನದ ವಿದ್ಯಾ ಮತ್ತು ಆರೋಗ್ಯ ಮಂತ್ರಿಗಳಾದ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ... [illegible] ... ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯ ವಾರ್ಷಿಕೋತ್ಸವವು ನಡೆಯಿತು ... [illegible] ... ನೂತನ ಶ್ರೀ ... [illegible] ... ಸ್ವಾಮಿಗಳು ... ಶ್ರೀ ಶ್ರೀ ... ಶಂಕರ ಸ್ವಾಮಿಗಳು ಉಪದೇಶ ಮಾಡಿದರು ... [illegible] ... ಶ್ರೀ ಅ. ನಾ. ಕೃಷ್ಣರಾಯರು ... ಈಗಿನ ವಾತಾವರಣದ ... [illegible] ... ಮನೋಭಾವವನ್ನು ಬೆಳೆಸಿಕೊಂಡು ಮುಂದುವರೆಯಬೇಕೆಂದು ಹೇಳಿದರು

ಅಧ್ಯಕ್ಷರು ... [illegible] ... ಭಾಷಣ ಮಾಡುತ್ತಾ ವಿದ್ಯಾರ್ಥಿಗಳು ... [illegible] ... ಗಮನದಲ್ಲಿಡಬೇಕೆಂದರು

○ ಇದೇ ತಿಂಗಳು ... [illegible] ... ನಡೆಯಲಿರುವ ... [illegible] ... ಸಮ್ಮೇಳನದಲ್ಲಿ ಭಾಗವಹಿಸಲು ... [illegible] ... ತೆರಳುವರು

## ದೇವಾಲಯದಲ್ಲಿ ಮಹಾತ್ಮರ ವಿಗ್ರಹ

ಮದರಾಸಿನ ಶ್ರೀ ಕಂದಸ್ವಾಮಿ ದೇವಾಲಯದಲ್ಲಿ ಅಲ್ಲಿನ ಪುರಪ್ರಮುಖರು ... [illegible] ... ವಿಗ್ರಹವನ್ನು ಸ್ಥಾಪಿಸಲು ನಿರ್ಧರಿಸಿದ್ದರು. ನೆನ್ನೆ ಅದರ ಅನಾವರಣೋತ್ಸವವನ್ನು ಅಲ್ಲಿನ ಗವರ್ನರರು ನೆರವೇರಿಸಿ ... [illegible]

... [illegible] ...

○ ... [illegible] ...

## ದಾಸಪ್ಪನವರು ದೆಹಲಿಗೆ

ಸ್ವಂ. ವ. ಫೋ.] ಬೆಂಗಳೂರು ೨೧

ಹಣಕಾಸಿನ ಸಚಿವ ಶ್ರೀ ಎಚ್. ಸಿ. ದಾಸಪ್ಪನವರು ಇದೇ ೨೫ನೇ ತಾರೀಖು ದೆಹಲಿಗೆ ತೆರಳುವರು. ಸಂಸ್ಥಾನದ ಹಣಕಾಸಿನ ವ್ಯವಸ್ಥೆಯು ಕೇಂದ್ರದೊಡನೆ ಐಕ್ಯವಾಗುವ ಬಗ್ಗೆ ಅಲ್ಲಿ ವ್ಯವಹಾರ ನಡೆಯಲಿದೆ. ಮೈಸೂರಿನ ಕೈಗಾರಿಕೆಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದವರು ಕೊಡಲಿರುವ ಹಣದ ಸಹಾಯದ ಬಗ್ಗೆಯೂ ಮಾತುಕತೆ ನಡೆಯುವುದು

ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ಈ ದಿನ ಹೈದರಾಬಾದಿನಿಂದ ಹಿಂದಿರುಗಿದರು. ಶ್ರೀ ಮರಿಯಪ್ಪನವರೂ ಮತ್ತು ಬೆಂಗಳೂರು, ಕೋಲಾರ ಜಿಲ್ಲಾಧಿಕಾರಿಗಳೂ ಮಾಜಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಭೇಟಿ ಮಾಡಿ ಸರ್ ವಿಶ್ವೇಶ್ವರಯ್ಯನವರ ಗ್ರಾಮ ಕೈಗಾರಿಕಾ ಯೋಜನೆಗಳನ್ನು ಕೋಲಾರ ಜಿಲ್ಲೆಗಳಲ್ಲಿ ಕೂಡಲೇ ಕಾರ್ಯರೂಪಕ್ಕೆ ತರುವ ಬಗ್ಗೆ ಮಾತುಕತೆ ನಡೆಸಿದರು.

○ ಪೆನಲ್ಪೆಮೇಟ್ ಕಾರ್ಖಾನೆಯ ರಚನೆ... [illegible] ... ಮಾಡಿರುವುದರಿಂದ ಇನ್ನು ಮುಂದೆ ಸರಕಾರಿ ಕಛೇರಿಗಳಲ್ಲಿ ಪ್ರತಿ ಶನಿವಾರವೂ ಬೆಳಗ್ಗೆ ೮ ರಿಂದ ಮಧ್ಯಾಹ್ನ ೧ ಘಂಟೆವರೆಗೆ ಕೆಲಸ ಮಾಡುವಂತೆ ಏರ್ಪಡಿಸಲು ಸರ್ಕಾರದವರು ಆಲೋಚಿಸುವರೆಂದು ವರದಿಯಾಗಿದೆ

○ ೧೯೫೦ನೇ ಇಸವಿಯಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜರ್ಮನ್, ರಷ್ಯನ್, ಸ್ಪಾನಿಷ್, ಮತ್ತು ಇಟಾಲಿಯನ್ ಭಾಷೆಗಳಲ್ಲಿ ಶಿಕ್ಷಣ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಅಕ್ಯಾಡಮಿಕ್ ಕೌನ್ಸಿಲ್ ಸಭೆಯಲ್ಲಿ ತೀರ್ಮಾನವಾಗಿದೆ

○ ಎಸೆನ್ಷಿಯಲ್ ಸರ್ವೀಸಸ್ ಶಾಸನದ ಪ್ರಕಾರ ಸಂಸ್ಥಾನದ ಸರಕಾರಿ ಮೋಟಾರು ಸಂಚಾರ ವ್ಯವಸ್ಥೆಯನ್ನು ಎಸೆನ್ಷಿಯಲ್ ಸರ್ವೀಸೆಂದು ಸರ್ಕಾರದವರು ಘೋಷಿಸಿರುತ್ತಾರೆ

## ಸುಬ್ಬಣ್ಣನವರ ಜೊತೆಗೆ ಇನ್ನಿಬ್ಬರಿಗೆ ಮೋಸ

ರಾಜಧಾನಿಯ ಸಂತೇಪೇಟೆಯ ವರ್ತಕರಾದ ಶ್ರೀ ಬಿ. ಎಸ್. ಸುಬ್ಬಣ್ಣನವರಿಗೆ ಸುಳ್ಳು ಕೈಲಿಪಿ ರಶೀತಿಯನ್ನು ಕಳುಹಿಸಿ ೨೦ ಸಾವಿರ ರೂ. ಗಳಿಗೆ ಮೋಸಮಾಡಿದ ಹೈದರಾಬಾದಿನ ರಾಮಸ್ವರೂಪ್ ಗೋವಿಂದರಾಂ ಎಂಬುವನು, ಟ್ಯುಟಿಕೋರಿನ್ನಿನ ವರ್ತಕರಾದ ವಿ. ಪಿ. ಧನುಷ್ಕೋಡಿ ನಾದರ್ ಎಂಬುವರಿಗೆ ಇದೇ ರೀತಿ ೧೬ ಸಾವಿರ ರೂ. ಗಳಿಗೆ ಮೋಸ ಮಾಡಿರುವನೆಂದೂ ಮತ್ತು ಹೈದರಾಬಾದಿನವರೊಬ್ಬರಿಗೂ ಮೋಸ ಮಾಡಿರುವನೆಂದೂ ವರದಿಯಾಗಿದೆ

## ರೇಷ್ಮೆ ಅಂಗಡಿ ಕಳುವಿನ ಬಗ್ಗೆ ಇಬ್ಬರ ದಸ್ತಗಿರಿ

ಮೈಸೂರು ೨೧

ನೆನ್ನೆ ದಿನ ಕೆಂಪಣ್ಣನ ರಾಮಯ್ಯನವರ ... [illegible] ... ನಂಬರ್ ಡಿಪೋವಿನಲ್ಲಿ ... [illegible] ... ಕಳುವಿನ ಸಂಬಂಧವಾಗಿ ... [illegible] ... ಪೋಲೀಸರು ... [illegible] ... ಮತ್ತು ... [illegible] ... ಇವರಿಬ್ಬರನ್ನು ... [illegible] ... ಮೇಲೆ ಮೊಕದ್ದಮೆ ನಡೆಯುತ್ತಿದೆ

## ರಾಷ್ಟ್ರಾಧ್ಯಕ್ಷರಿಗೆ ಹುಲ್ಲಿನ ಛಾಪೆ

ಕಲಾ ಕೌಶಲ್ಯಯುಕ್ತವಾದ ಹುಲ್ಲಿನಿಂದ ಮಾಡಿದ ಛಾಪೆಯೊಂದನ್ನು ರಾಷ್ಟ್ರಾಧ್ಯಕ್ಷರಿಗೆ ಮದ್ರಾಸು ಪ್ರಾಂತ್ಯದ ತಿರುನೆಲ್ವೇಲಿಯ ಮುಸಲ್ಮಾನರೊಬ್ಬರು ರಿಪಬ್ಲಿಕ್ ದಿನೋತ್ಸವದಲ್ಲಿ ಕಳುಹಿಸಿದುದನ್ನು ರಾಜೇಂದ್ರ ಬಾಬುಗಳುಅದರ ಬಿಂದ ಸ್ವೀಕರಿಸಿರುತ್ತಾರೆ ರೇಷ್ಮೆ ಮತ್ತು ಬಣ್ಣಗಳಿಂದ ಈ ಛಾಪೆಯಮೇಲೆ "ಭಾರತದ ರಾಷ್ಟ್ರಾಧ್ಯಕ್ಷ" ಎಂದು ನೇಯಲಾಗಿದೆ.

## ಇಸ್ರೇಲ್ ರಾಜ್ಯದ ಮೇಲೆ ಅರಬರ ಆಕ್ರಮಣವೇ?

ಇಸ್ರೇಲ್ ರಾಜ್ಯದ ಮೇಲೆ ಎರಡನೇ ಆವರ್ತಿ ಅರಬ್ ರಾಜ್ಯಗಳು ದಂಡೆತ್ತಿಕೊಂಡು ಹೋಗಲಿರುವರೆಂದು ವಾಷಿಂಗ್ಟನ್ನಿನಲ್ಲಿ ಹೇಳಲಾಗಿದೆ ಈ ಬಗ್ಗೆ ಸಿದ್ಧತೆಗಳಿಗಾಗಿ ಬ್ರಿಟನ್ನು ಅರಬ್ ರಾಜ್ಯಗಳಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿರುವುದಾಗಿ ಹೇಳಲಾಗಿದೆ

## ಪರ್ಮಿಟ್ಟು, ಲೈಸೆನ್ಸುಗಳು ಕಾಂಗ್ರೆಸ್ಸಿನವರಿಂದ ವಾಪಸು

ಬಿಹಾರ್ ಪ್ರಾಂತ ಕಾಂಗ್ರೆಸ್ಸಿನ ಸಮಿತಿಯು ನಿರ್ಣಯವನ್ನು ಮಾಡಿ ಭಾರತ ಮತ್ತು ಪ್ರಾಂತೀಯ ಶಾಸನಸಭೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಕಾಂಗ್ರೆಸ್ ಸಮಿತಿಗಳ ಸದಸ್ಯರುಗಳಿಗೆ ಕಂಟ್ರೋಲಿಗೆ ಒಳಪಟ್ಟ ಪದಾರ್ಥಗಳ ಬಗ್ಗೆ ಕೊಡಲಾಗಿರುವ ಲೈಸೆನ್ಸು ಮತ್ತು ರಹದಾರಿಗಳನ್ನು ಅವರು ವಾಪಸುಕೊಡಬೇಕೆಂದು ತಿಳಿಸಿದೆ

## ಹಾರುವ ತಟ್ಟೆಗಳು

ಅರ್ಜಂಟೈನಾ ಮತ್ತು ಡೆನ್ಮಾರ್ಕ್ ಆಕಾಶಗಳಲ್ಲಿ "ಹಾರುವ ತಟ್ಟೆಗಳು" ಕಾಣಿಸಿಕೊಂಡವು. ಈ ತಟ್ಟೆಗಳಿಂದ ಹೊರಟ ಬೆಳಕು ಹಲವು ನಗರಗಳ ಕತ್ತಲೆಯನ್ನು ಹೋಗಲಾಡಿಸಿತೆಂದು ಹೇಳಲಾಗಿದೆ

## ಕುಷ್ಠ ರೋಗದ ನಿವಾರಣೆ ಬಗ್ಗೆ ಕಾರ್ಯಕ್ರಮ

ಬೊಂಬಾಯಿ ಪ್ರಾಂತದ ಮಹಿಳೆಯರ ಮಂಡಲಿಯು ಆ ಪ್ರಾಂತದಲ್ಲಿರುವ ಕುಷ್ಠ ರೋಗ ಸಮಸ್ಯೆ, ಅದರ ಉತ್ಪನ್ನ ಕಾರಣ ಮತ್ತು ಗುಣ ಇವುಗಳ ಬಗ್ಗೆ ಜನರಿಗೆ ತಿಳುವಳಿಕೆ ಕೊಡುವ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿದೆ

## ಬೊಂಬಾಯಿ ಪೋಲೀಸರು ಹಿಂದಿ ಕಲಿಯಬೇಕು

ಬೊಂಬಾಯಿ ನಗರದ ಪೋಲೀಸು ಕಚೇರಿಗಳಲ್ಲಿ ಬರುವ ದೂರುಗಳನ್ನು ಇನ್ನು ಮೇಲೆ ಹಿಂದಿ ಭಾಷೆಯಲ್ಲೇ ತೆಗೆದುಕೊಳ್ಳಲು ಸಾಧ್ಯವಾಗುವಂತೆ ಅಲ್ಲಿನ ಪೋಲೀಸರು ಹಿಂದೀ ಭಾಷೆಯನ್ನು ಅಭ್ಯಸಿಸಬೇಕೆಂದು ಆಜ್ಞಾಪಿಸಲಾಗಿದ್ದಾರೆ

## ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸ

ಭಾರತದಸ್ವಾತಂತ್ರ್ಯದಸಂದರ್ಭವಾಗಿ ನಡೆದ ಚಳುವಳಿಯ ಬಗ್ಗೆ ಹಿಂದಿನಾದ ಶಸಿಕೆ ಮತ್ತು ಸಂಶೋಧನೆ ನಡೆಸಲು ಭಾರತ ಸರ್ಕಾರದವರು ಏರ್ಪಡಿಸುವವರಿಂದ ದ್ವಾರ ಮತ್ತು ಒಂದು ಚರಿತ್ರೆಯನ್ನು ಬರೆಯಲಾಗುವುದು.

## ರಷ್ಯ ಕಮ್ಯೂನಿಸ್ಟರ ಪ್ರಣಾಳಿಕೆ

ರಷ್ಯದ ಪಾರ್ಲಿಮೆಂಟಿಗೆ ನಡೆಯುವ ಚುನಾವಣೆಗಳಲ್ಲಿ ಕಮ್ಯೂನಿಸ್ಟ್ಪಂಗಡದವರು ಭಾಗವಹಿಸುವ ಸಂದರ್ಭದಲ್ಲಿ ಹೊರಡಿಸಲಾಗಿರುವ ಪ್ರಣಾಳಿಕೆಯಲ್ಲಿ, ರಷ್ಯದ ಸೈನ್ಯ ಬಲಗಳನ್ನು ಕ್ರಮವಾಗಿ ಹೆಚ್ಚಿಸಲಾಗುವುದೆಂದು ತಿಳಿಸಲಾಗಿದೆ ಬಂಡವಾಳ ಶಾಹಿಯು ಪ್ರಪಂಚದಲ್ಲಿರುವವರೆಗೆ ರಷ್ಯದ ಮೇಲೆ ಅವರು ಬೀಳುವ ಸಂಭವ ಇದ್ದೇ ಇದೆಯೆಂದು ಜ. ಸ್ಟಾಲಿನ್‌ರವರು ಹೇಳಿರುವುದನ್ನು ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ.

## ಮಗನಿಂದ ಅಪ್ಪನ ಕೊಲೆ

ತಾಯಿಯಿಂದ ಪ್ರೇರಿತನಾದ ಮಗನು ಪೂರ್ಣವಾಗಿ ಕುಡಿದು ತನ್ನ ತಂದೆಯನ್ನೇ ಕೊಂದ ಪ್ರಸಂಗವು ಅಸ್ಸಾಮಿನಿಂದ ವರದಿಯಾಗಿದೆ ಗಂಡ ಹೆಂಡಿರಿಗೆ ಮನಸ್ತಾಪವಿದ್ದು ಆಗಾಗ್ಗೆ ಕಲಹಗಳಾಗುತ್ತಿದ್ದುವೆಂದೂ ಕುಪಿತಳಾದ ಹೆಂಡತಿಯು ಒಂದು ದಿನ ತನ್ನ ಮಗನಿಗೆ ಪೂರ್ಣವಾಗಿ ದ್ರಾಕ್ಷಾರಸ ಕುಡಿಸಿ ಆತನ ಕೈಗೆ ದೊಡ್ಡ ಚೂರಿಯೊಂದನ್ನು ಕೊಟ್ಟು ಗಂಡನನ್ನು ಕೊಲ್ಲುವಂತೆ ಪ್ರೇರೇಪಿಸಿದಳೆಂದೂ ಕುಡಿತದಿಂದ ಮತ್ತನಾಗಿದ್ದ ಮಗನು ನೇರವಾಗಿ ಹೋಗಿ ತಂದೆಯನ್ನು ತುಂಡು ತುಂಡಾಗಿ ಕತ್ತರಿಸಿದನೆಂದೂ ಹೇಳಲಾಗಿದೆ. ಪೋಲೀಸರು ಅವರನ್ನು ದಸ್ತಗಿರಿ ಮಾಡಿರುವರೆಂದು ತಿಳಿದುಬಂದಿದೆ.

## ಆಲಿಖಾನರ ಬಲಗಾಲಿಗೆ ಜಖಂ

ಆಗಾಖಾನರ ಮಗ ಆಲಿಖಾನರು ಸ್ವಿಟ್ಸರ್ಲೆಂಡಿನ ಪರ್ವತವೊಂದರ ಇಳಿಜಾರಿನಲ್ಲಿ ಮಂಜಿನ ಮೇಲೆ ಆಡುತ್ತಿದ್ದಾಗ, ಬಲಗಾಲನ್ನು ಮುರಿದುಕೊಂಡರು. ಒಂದೇ ಮೂಳೆಯು ಎರಡು ಕಡೆ ಮುರಿದಿದೆ. ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

## ನೇಪಾಳ-ಭಾರತದ ಒಪ್ಪಂದ ಸರಿಯಾದುದಲ್ಲ

ಈಗಿನ ನೇಪಾಳದ ಸರಕಾರದೊಡನೆ ಭಾರತ ಮಾಡಿಕೊಳ್ಳುವ ಒಪ್ಪಂದವು ಅಲ್ಲಿನ ಪ್ರಜಾಪ್ರಭುತ್ವದಕಾಂಗ್ರೆಸ್ಸಿಗೆ ಒಪ್ಪಿಗೆಯಾಗದೆಂದು ನೇಪಾಳ ಕಾಂಗ್ರೆಸ್ಸಿನ ಅಧ್ಯಕ್ಷ, ನರೇಂದ್ರ ವಿಕ್ರಮ ಷಹಾರವರು ತಿಳಿಸಿರುತ್ತಾರೆ.

## ಸೋಮಾಲಿಲ್ಯಾಂಡ್ ಇಟಲಿ ಆಡಳಿತಕ್ಕೆ

ಇಟಲಿಯ ವಸಾಹತಾಗಿದ್ದ ಸೋಮಾಲಿಲ್ಯಾಂಡನ್ನು ಬ್ರಿಟಿಷ್ ಸರ್ಕಾರದವರು ೧೦ ವರ್ಷಕಾಲ ಇಟಲಿಯ ಟ್ರಸ್ಟೀಷಿಪ್ ಆಡಳಿತಕ್ಕೆ ಒಪ್ಪಿಸಲು ತೀರ್ಮಾನಿಸಿರುತ್ತಾರೆ ನನ್ನೆಯಿಂದ ಇಟಲಿ ಸೈನ್ಯಗಳು ಅದನ್ನು ಆಕ್ರಮಿಸಿಕೊಳ್ಳುತ್ತವೆ ಎಂದು ವರದಿಯಾಗಿದೆ

C. T. C Publications
1531, VANIVILAS ROAD,
MYSORE
Very useful to:- B Sc
Intermediate & S.S.L.C
Examinations

## ಅಮೇರಿಕದಲ್ಲಿ ಕಲ್ಲಿದ್ದಲಿಗೆ ಅಭಾವ

ಅಮೇರಿಕದ ನಾಲ್ಕು ಲಕ್ಷ ಮಂದಿ ಕಲ್ಲಿದ್ದಲು ಗಣಿ ಕೆಲಸಗಾರರು ಮುಷ್ಕರ ಕೈಗೊಂಡಿರುವುದರಿಂದ ಅಲ್ಲಿ ಕಲ್ಲಿದ್ದಲಿನ ಅಭಾವ ತಲೆದೋರಿದೆಯೆಂದೂ ಈಗ ಇರುವ ದಾಸ್ತಾನು ಕೆಲವು ದಿವಸಗಳಿಗೆ ಮಾತ್ರ ಸಾಕಾಗುವುದೆಂದೂ ಹೇಳಲಾಗಿದೆ ಇದರಿಂದ ಹಲವು ವಿದ್ಯುಚ್ಛಕ್ತಿ ಕೇಂದ್ರಗಳ ಕೆಲಸವೂ ನಿಂತಿರುವುದಾಗಿ ಗೊತ್ತಾಗಿದೆ ಕಲ್ಲಿದ್ದಲು ಅಗತ್ಯವಾಗಿ ಬೇಕಾದವರು ಪರ್ಮಿಟ್ ಪಡೆದುಕೊಳ್ಳಬೇಕೆಂದು ಸೂಚಿಸಲಾಗಿದೆ

## ಜಪಾನಿನಲ್ಲಿ ಭೂಕಂಪದ ಸಂಭವ

ಉತ್ತರ ಜಪಾನಿನ ಅಜುಮಾ ಪರ್ವತ ಪ್ರದೇಶದಲ್ಲಿ ಇಷ್ಟರಲ್ಲೇ ಭಾರಿ ಭೂಕಂಪ ಸಂಭವಿಸುವುದಾಗಿ ಅಲ್ಲಿನ ವಿಜ್ಞಾನಿಗಳು ಎಚ್ಚರಿಸಿದ್ದಾರೆ ಈ ಪರ್ವತದಲ್ಲಿ ಈಗ್ಗೆ ೫೦ ವರ್ಷಗಳ ಹಿಂದೆ ಭೂಕಂಪ ಸಂಭವಿಸಿತ್ತೆಂದೂ ಹೇಳಲಾಗಿದೆ.

## ಭಾರತ ಸುದ್ದಿ ಸಂಸ್ಥೆಯ ಬಾತ್ಮಿದಾರರಿಗೆ ನೋಟೀಸು

ಪೂರ್ವ ಬಂಗಾಳದಲ್ಲಿರುವ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ ಸುದ್ದಿ ಸಂಸ್ಥೆಯ ಸುದ್ದಿಗಾರರಿಗೆ ಪೂರ್ವ ಬಂಗಾಳ ಸರಕಾರವು ನೋಟೀಸು ಕೊಟ್ಟು ಪಾಕಿಸ್ತಾನ ಸರಕಾರದವರು ಅನುಮತಿ ಕೊಡುವವರೆಗೂ ಅವರ್‍ಯಾರೂ ಪತ್ರಿಕಾ ವರದಿಗಳನ್ನು ಕಳುಹಿಸುವ ಉದ್ಯೋಗದಲ್ಲಿ ತೊಡಗಬಾರದೆಂದು ತಾಕೀತು ಮಾಡಿರುತ್ತಾರೆ.

## ಅಮೇರಿಕಾದೊಳಗೆ ಜಪಾನನ್ನು ಸೇರಿಸಿಕೊಳ್ಳಿರಿ

ಜಪಾನಿನ ಪ್ರಮುಖ ಕತೆಗಾರರಾದ ಮಸಾಜಿ ಕೂಮೆಯವರು ಅಮೇರಿಕವು ತನ್ನ ೪೯ ಸಂಸ್ಥಾನಗಳ ಜೊತೆಗೆ ಜಪಾನನ್ನು ೫೦ನೆಯದನ್ನಾಗಿ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದಾರೆ ಶಾಂತಿ ಕಾಲಿಗಿಂತಲೂ ಇದು ಉತ್ತಮವೆಂದು ಅವರು ಹೇಳಿದ್ದಾರೆ.

## ಜೋಹಾನ್ಸ್‌ಬರ್ಗಿನಲ್ಲಿ ಮತ್ತೆ ಗಲಭೆ

ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗಿನಲ್ಲಿ ಮತ್ತೆ ಗಲಭೆ ಸಂಭವಿಸಿ ಆಫ್ರಿಕನರು ಒಬ್ಬ ಬ್ರಿಟಿಷ್ ಸಾರ್ಜೆಂಟನನ್ನು ಕೊಂದರೆಂದು ವರದಿಯಾಗಿದೆ ಪರಿಸ್ಥಿತಿಯನ್ನು ತಹಬಂದಿಗೆ ತರಲು ಪೋಲೀಸರು ಗುಂಡುಹಾರಿಸಿದರು ಒಬ್ಬ ಆಫ್ರಿಕನ್ನನು ಮಡಿದನು, ೧೦೦ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ

ರಾಜಕಮಲ್
ಟಾಕೀಸ್
17—2—50 ರಿಂದ
ಜನಭರಿತವಾದ ೯ನೇ ವಾರ
ದಿನವಹಿ ೩ ಪ್ರದರ್ಶನಗಳು
ಜೀವನ
ಭೂಮಿಕೆ
ವೈಜಯಂತಿಮಾಲಾ, ಟಿ ಆರ್ ರಾಮಚಂದ್ರ್, ಲಲಿತ-ಪದ್ಮಿನಿ

## ಇಸ್ಲಾಂ ಮತದ ಸೋಗಿನಲ್ಲಿ ಗುಲಾಮಗಿರಿ ಕೂಡದು

ಸ್ವತಂತ್ರ ಪಠಾಣ ರಾಜ್ಯದ ಸ್ಥಾಪನೆಯ ಬೇಡಿಕೆಯು ಪ್ರಾಮಾಣಿಕವಾದುದಾಗಿದೆಯೆಂದೂ,ಬ್ರಿಟಿಷರು ಹೋದ ಮೇಲೆ ಸ್ವಾತಂತ್ರ್ಯಕ್ಕಾಗಿರಕ್ತಚೆಲ್ಲಿದ, ಪಠಾಣರು ಸಮಾನ ಹಕ್ಕು ಪಡೆದಿರುವರೆಂದೂ, ಇಸ್ಲಾಂ ಮತದ ಸೋಗಿನಲ್ಲಿ ಲಕ್ಷಗಟ್ಟಲೆ ಇರುವ ಪಠಾಣ ಗುಡ್ಡಗಾಡಿನವರನ್ನು ಗುಲಾಮತನಕ್ಕೆ ಗುರಿಮಾಡಿರುವುದು. ಪಾಕಿಸ್ತಾನಕ್ಕೆ ತರವಲ್ಲವೆಂದೂ, ಭಾರತದಲ್ಲಿರುವ ಆಫ್ಘಾನಿಸ್ತಾನದ ರಾಯಭಾರಿಗಳಾದ ಸರದಾರ್ ನಜೀಬುಲ್ಲಾಖಾನರು ತಿಳಿಸಿರುತ್ತಾರೆ ಈ ಅಂಶವು ಬಗೆಹರಿದರೆ. ಪಾಕಿಸ್ತಾನಕ್ಕೆ ಆಫ್ಘನ್ನರಿಗಿಂತ ಬೇರೊಬ್ಬ ಹಿತೈಷಿ ಸ್ನೇಹಿತರಿಲ್ಲವೆಂದು ಅವರು ಹೇಳಿದರು

## ಮೀನು ಸಾಕುವುದರಲ್ಲಿ ಶಿಕ್ಷಣ

ಕಲ್ಕತ್ತಾ ಬಳಿ ಬರಕ್‌ಪುರದಲ್ಲಿ ಮೀನು ಸಾಕುವುದರ ಶಿಕ್ಷಣವನ್ನು ಕೊಡಲು ಕೇಂದ್ರ ಸರಕಾರದವರು ಆಲೋಚಿಸಿದ್ದಾರೆ ಬರುವ ತಿಂಗಳು ೨೦ನೇ ತಾರೀಖಿನಿಂದ ಶಿಕ್ಷಣವು ಆರಂಭವಾಗಿ ೧೦ ತಿಂಗಳುಕಾಲ ತರಪೇತು ಕೊಡಲಾಗುವುದು.

## ಕಳ್ಳ ಸೇಂದಿ ವ್ಯಾಪಾರ ಕಡಿಮೆಯಾಗುತ್ತಿದೆ

ಅಗರ

ಬಹಳ ದಿನಗಳಿಂದಲೂ ಈ ಊರಿಗೆ ಕಳ್ಳತನದಲ್ಲಿ ಸೇಂದಿ ರವಾನೆಯಾಗುತ್ತಿದ್ದುದು ಈ ಊರಿಗೆ ಹೊಸದಾಗಿ ಬಂದಿರುವ ಪೋಲೀಸ್ ಅಧಿಕಾರಿಗಳ ತರದೂದಿನಿಂದ ಬಹಳ ಮಟ್ಟಿಗೆ ಕಮ್ಮಿಯಾಗಿರುವುದೆಂದೂ ಅವರು ಇನ್ನೂ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಿದರೆ ಈ ದುರ್ವ್ಯಾಪಾರವು ನಿರ್ಮೂಲವಾಗುವುದೆಂದೂಬಾತ್ಮೀದಾರರೊಬ್ಬರು ತಿಳಿಸಿರುತ್ತಾರೆ

### ಆಕಾಶವಾಣಿಯಲ್ಲಿ ಈ ರಾತ್ರಿ ವಿಶೇಷ ಕಾರ್ಯಕ್ರಮ

ಈ ರಾತ್ರಿ ೯-೩೦ ರಿಂದ ೧೦ ಘಂಟೆವರೆಗೆ ಶ್ರೀ ಬಿ. ಆರ್. ಸುಬ್ಬರಾವ್, ಶ್ರೀಮತಿ ಎಂ. ಆರ್. ಲಕ್ಷಮ್ಮ, ಶ್ರೀ ಸಿ. ನರಸಿಂಹಮೂರ್ತಿ, ಶ್ರೀ ಎಲ್. ಶ್ರೀ ಕಂಠಯ್ಯ ಮತ್ತು ಡಾ॥ಎ ಎಂ ನಟೇಶ್ ಇವರುಗಳಿಂದ ಭಾರತದ ನೂತನ ರಾಜ್ಯಾಂಗದ ಬಗ್ಗೆ ವಾದವಿವಾದಗಳ ಪ್ರಸಾರ ಕಾರ್ಯಕ್ರಮವು ಆಕಾಶವಾಣಿಯಲ್ಲಿ ಏರ್ಪಟ್ಟಿದೆ

ನಾಯಿ ಕೆಮ್ಮಿಗೆ ಔಷಧಿ
WHOOPING COUGH REMEDY
ಗೂರ್ಲು, ಉಬ್ಬಸ, ಪಂಠಾಮಾಲೆ ಮತ್ತು ಗಲಗ್ರಂಥಿ (TONSIL) ಖಾತರಿಯಾದ ಔಷಧಿ ದೊರೆಯುತ್ತದೆ, ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ರಿಗಾರದ ಸೆಡಲ್‌ಗಳನ್ನು ಕೊಟ್ಟಿರುತ್ತಾರೆ
ಆರ್. ಎಸ್. ಪಂಡಿತರು,
ಬಾವ.ಗೋಪಾಲ ವೈದ್ಯಶಾಲೆ,
ದಿವಾನರ ರಸ್ತೆ, ಮೈಸೂರು.

Edited, Printed and published by A. R Nagarajan at Sadhvi Press I Subbaiah Road, Mysore

ನೋ॥ ನಂ. 792 ಗೆಜೆಟ್ ನೋಂದಣಿ ಅಂಚೆ ಪತ್ರಿಕೆ ೩ ಕಾಸು

ಸಂಪುಟ ೮] ಬುಧವಾರ ೨೫ ೨-೫೦ [ಸಂಚಿಕೆ ೧೯೩

# ಬ್ರಿಟನ್ ಮೇಲೆ ವಿಶ್ವಸಂಸ್ಥೆಯಲ್ಲಿ ಈಜಿಪ್ಟ್ ದೂರು

## ಶರಚ್ಚಂದ್ರ ಬೋಸರ ಅಂತ್ಯಕ್ರಿಯೆ

ದಿವಂಗತ ಶರಚ್ಚಂದ್ರಬೋಸರ ಅಂತ್ಯಕ್ರಿಯೆಯು ನೆನ್ನೆ ದಿನ ಪ ಘ್ಯಾಟ್ನ ಕಲ್ಕತ್ತಾದಲ್ಲಿ ನಡೆಯಿತು. ಮೂರು ಮೈಲಿ ಉದ್ದದ ಅವರ ಸ್ಮಶಾನ ಯಾತ್ರೆ ಮೆರವಣಿಗೆಯಲ್ಲಿ ಸುಮಾರು ಎರಡು ಲಕ್ಷ ಜನ ನೆರೆದು ದಿವಂಗತರಿಗೆ ತಮ್ಮ ಅಂತ್ಯ ಗೌರವವನ್ನು ಸಲ್ಲಿಸಿದರು.

ಶರಚ್ಚಂದ್ರಬೋಸರ ನಿಧನದ ಬಗ್ಗೆ ದೇಶ ವಿದೇಶಗಳಿಂದ ಸಂತಾಪ ಸೂಚಕ ಪತ್ರಗಳು ಬಹಳವಾಗಿ ಬಂದಿವೆ. ಭಾರತದ ಅಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ... ಸಂತಾಪ ಸೂಚಕ ಪತ್ರವನ್ನು ಬರೆದು ದಿವಂಗತ ಬೋಸರು ... ರಾಜಕೀಯದಲ್ಲಿ ... ಅವರ ... ಸಿಂತಿದ್ದರೆಂದು ... [illegible]

ಸಂಪಿತ ನೆಹರೂರವರ ಸಂತಾಪ

ಪ್ರಧಾನ ಪಂಡಿತ ಜವಾಹರಲಾಲ ನೆಹರೂರವರು ನೆನ್ನೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಶರಚ್ಚಂದ್ರಬೋಸರ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿ ... ಸ್ವಾತಂತ್ರ್ಯ ಸಾಧನೆಗೆ ... ಸೇವೆಯನ್ನು ... ಬಂಗಾಳದ ... ಮರಣದಿಂದ ಭಾರತಕ್ಕೆ ... ನಷ್ಟವುಂಟಾಗಿದೆಯೆಂದು ... ನಿರ್ಣಯವನ್ನು ಅಂಗೀಕರಿಸಿತು. [illegible]

## ನಾರ್ಕಿಂಗ್ ಮೇಲೆ ಪಾಕಿಸ್ತಾನಿಯ ಜೆಟ್ ವಿಮಾನ ದಾಳಿ

[illegible]

## ನರ್ಕಿಷಾವ್ ಪತ್ತಿರಕ್ಕೆ ಬೊಂಬು ಬಜಾರಿನ ವರ್ಗ

[illegible]

ಉಪನ್ಯಾಸಮಾಲೆ

[illegible]

ಸಾಕ್ಷೀನಾರಾಯಣ ಮೇಲೆ ಶಿಸ್ತಿನ ಕ್ರಮ

[illegible]

ಶರತ್ ಬಾಬುಗೆ ... ಮಾಲೆ

[illegible]

## ಮಂತ್ರಿಗಳೇ ಟ್ರೈಕರ್ ಕಿತ್ತುಕೊಂಡರು

[illegible]

ಜಿಲ್ಲಾಬೋರ್ಡು ಅಧ್ಯಕ್ಷರ ಸಮ್ಮೇಳನ

[illegible]

ಸಂಸ್ಥಾನದ ... ಜಿಲ್ಲೆಗಳು ... ವಾಗುವುವೇ?

[illegible]

ಬೆಂಗಳೂರಿನ ಸ್ತ್ರೀಯರಿಂದ ... ಪ್ರಯತ್ನ

[illegible]

## ಕಲ್ಕತ್ತಾ ಮತ್ತು ಢಕ್ಕಾ ಗಲಭೆ ಪ್ರಕರಣ

### ಶಾಂತಿಸ್ಥಾಪನಾ ಕಾರ್ಯ

### ಪೂರ್ವ ಬಂಗಾಳದಲ್ಲಾಗಲಿಲ್ಲ

ಕಲ್ಕತ್ತಾದಲ್ಲಿ ೧೮೨ ಮರಣ, ೧೯೫೦ ದಸ್ತಗಿರಿ

ಕಳೆದ ವಾರ ಕಲ್ಕತ್ತದಲ್ಲಿ ನಡೆದ ಕೋಮುವಾರು ಗಲಭೆಯ ಬಗ್ಗೆ ಪೂರ್ವ ಮತ್ತು ಪಶ್ಚಿಮ ಬಂಗಾಳಗಳವರು ಜಂಟಿ ಪರಿಶೀಲನೆ ನಡೆಸಲು ಆಲೋಚಿಸಿದ್ದಾರೆ. ಗಲಭೆಯ ಪರಿಣಾಮವಾಗಿ ಕಲ್ಕತ್ತ ನಗರದಲ್ಲಿ ೯೦ ಮಂದಿ ಮೃತಪಟ್ಟಿರುವರೆಂದೂ, ಮತ್ತು ಅದರ ಸುತ್ತ ಮುತ್ತಲ ಪ್ರದೇಶಗಳಲ್ಲಿ ೮೦ ಮಂದಿ ಮೃತಪಟ್ಟರೆಂದೂ ವರದಿಯಾಗಿದೆ. ಗಲಭೆಯನ್ನು ಹತೋಟಿಗೆ ತರುವ ಪ್ರಯತ್ನದಲ್ಲಿ ಪಶ್ಚಿಮ ಬಂಗಾಳ ಸರಕಾರದವರು ೧೨೦೦ ಜನ ಮುಸ್ಲಿಮೇತರರನ್ನೂ ೧೫೫೦ ಮಂದಿ ಮುಸ್ಲಿಮರನ್ನೂ ದಸ್ತಗಿರಿ ಮಾಡಿದ್ದಾರೆ.

ಪೂರ್ವ ಬಂಗಾಳದ ಢಕ್ಕಾದಲ್ಲಿ ಗಲಭೆ ಪರಿಣಾಮವು ಕಠೋರವಾಗಿದೆ. ಗಲಭೆಯು ಆರಂಭವಾದ ೨-೩ ದಿನಗಳಲ್ಲೇ ೨೦೦ ಕ್ಕೂ ಮೇಲ್ಪಟ್ಟು ಹಿಂದುಗಳ ಶವ ಸಂಸ್ಕಾರವು ನಡೆಯಿತೆಂದು ಹೇಳಲಾಗಿದೆ. ಅಲ್ಲಿನ ಮುಸ್ಲಿಂ ಲೀಗಿನವರು ಅಲ್ಪ ಸಂಖ್ಯಾತರ ವಿರುದ್ಧವಾಗಿ ಘೋಷಿಸುವುದು, ಹಸ್ತ ಪತ್ರಿಕೆಗಳನ್ನು ಹಂಚುವುದು ಮತ್ತು ಬಹಿರಂಗವಾಗಿ ಮೆರವಣಿಗೆ ನಡೆಸುವುದು- ಮುಂತಾದ ಕಾರ್ಯಗಳಲ್ಲಿ ತೊಡಗಿ ಗಲಭೆಗಳನ್ನು ಪ್ರಚೋದಿಸುತ್ತಿದ್ದರು. ಈ ಬಗ್ಗೆ ಪೂರ್ವ ಬಂಗಾಳ ಸರ್ಕಾರದವರು ಯಾವ ಶಾಂತಿ ಸ್ಥಾಪನಾ ಕಾರ್ಯವನ್ನೂ ಕೈಗೊಳ್ಳಲಿಲ್ಲ. ಢಾಕ್ಕಾದಲ್ಲಿ ಭಾರತದ ಡೆಪ್ಯುಟಿ ಹೈ ಕಮಿಷನರು ತಮ್ಮ ಭವನದ ಮೇಲೆ ಭಾರತದ ಧ್ವಜವನ್ನು ಹಾರಿಸಕೂಡದೆಂದೂ, ಹಾಗೆ ಹಾರಿಸಿದಲ್ಲಿ ಗಲಭೆ ಸಂಭವಿಸಬಹುದೆಂದೂ ಅಲ್ಲಿನ ಸರಕಾರದವರು ಸೂಚನೆ ಕೊಟ್ಟಿದ್ದರು. ಮೂರು ದಿನಗಳ ಕಾಲ ಭಾರತದ ಡೆಪ್ಯುಟಿ ಹೈ ಕಮಿಷನರು ತಮ್ಮ ಭವನದಿಂದ ಹೊರಗೆ ಬರಲು ಅವಕಾಶವೇ ದೊರೆಯಲಿಲ್ಲ- ಎಂದು ಭಾರತ ಸರ್ಕಾರದವರು ಪಾರ್ಲಿಮೆಂಟಿನಲ್ಲಿ ತಿಳಿಸಿದಾರೆ.

## ದಾವಣಗೆರೆ ಬಳಿ ಗೂಡ್ಸ್ ರೈಲಿನ ಮೇಲೆ ಧಾಳಿ.

ಮೊನ್ನೆ ರಾತ್ರಿ ದಾವಣಗೆರೆ ಹರಿಹರದ ಮಧ್ಯೆ ಹೋಗುತ್ತಿದ್ದ ಗೂಡ್ಸ್ ರೈಲಿನ ಮೇಲೆ ಯಾರೋ ಧಾಳಿ ನಡೆಸಿ, ಹಲವು ಎಲೆ ಮೂಟೆಗಳನ್ನು ಅಪಹರಿಸಿಕೊಂಡು ಹೋದರೆಂದು ವರದಿಯಾಗಿದೆ. ರೈಲು ಹಾದಿಯಲ್ಲಿ ಇಡಲಾಗಿದ್ದ ಕಲ್ಲುಗಳನ್ನು ಕಂಡು ... ರೈಲು ನಿಂತಾಗ ಎಲೆ ಮೂಟೆಗಳು ಕಳುವಾದುವು ಎಂದು ಪತ್ತೆಯಾಯಿತು.

## ಬ್ರಿಟನ್ನಿನ ಮೇಲೆ ಈಜಿಪ್ಟಿನ ದೂರು

ಬ್ರಿಟಿಷ್ ಸೈನ್ಯಗಳನ್ನು ಈಜಿಪ್ಟಿನಿಂದ ವಾಪಸು ಕರೆಸುವ ಬಗ್ಗೆ ವಿಶ್ವಸಂಸ್ಥೆಗೆ ದೂರನ್ನು ಕೊಡಲು ಈಜಿಪ್ಟ್ ಸರಕಾರವು ಯೋಚಿಸುತ್ತಿರುವುದಾಗಿ ಅಲ್ಲಿನ ... ಮಂತ್ರಿ ಮಹಮದ್ ಸಾಲೆ ... ತಿಳಿಸಿದ್ದಾರೆ. ... ಈಜಿಪ್ಟ್ ... ವಿಶ್ವಸಂಸ್ಥೆ ... [illegible]

## ಆಜಾದ್ ಕಾಶ್ಮೀರಕ್ಕೆ ಪಾಕಿಸ್ತಾನದ ಹಣವಿಲ್ಲ

ಆಜಾದ್ ಕಾಶ್ಮೀರ ಸರಕಾರವು ಹಲವು ಬಾರಿ ಪ್ರಾರ್ಥಿಸಿಕೊಂಡರೂ ಸಹ ಪಾಕಿಸ್ತಾನ ಸರಕಾರವು ಹಣಕಾಸಿನ ಸಹಾಯವನ್ನು ಮಾಡಲು ನಿರಾಕರಿಸಿರುವುದಾಗಿ ಹೇಳಲಾಗಿದೆ ಆದ್ದರಿಂದ ಈ "ಸರಕಾರ" ಕ್ಕೆ ಬಿಕ್ಕಟ್ಟು ಪ್ರಾಪ್ತವಾಗಿದೆ ಕರಾಚಿ ಮತ್ತು ಲಾಹೋರುಗಳಲ್ಲಿ ಒಳ ಪ್ರಿರುವ ಹಲವು ಕಾಶ್ಮೀರ ವಿದ್ಯಾರ್ಥಿಗಳು ಈಗ ವ್ಯಾಸಂಗ ಮಾಡಲು ಎಡವಾಗದಿಲ್ಲ ದಂತಾಗಿದೆ

## ಮಲ್ಪೆ ಬಂದರಿನ ಅಭಿವೃದ್ಧಿ ಈಗ ಇಲ್ಲ

ಕರ್ನಾಟಕ ಬಂದರುಗಳ ಪೈಕಿ ಒಂದಾದ ಮಲ್ಪೆಯನ್ನು ಅಭಿವೃದ್ಧಿ ಪಡಿಸಬೇಕೆಂದು ಶಿಫಾರಸು ಮಾಡಿದ್ದರೂ ಸಹ, ಈಗ ಅದನ್ನು ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲವೆಂದು ಗೊತ್ತಾಗಿದೆ

## ಬ್ರಿಟಿಷ್ ಚುನಾವಣೆಯಲ್ಲಿ ೧೦೦೦೦ ಭಾರತ ಮತದಾರರು

ನಾಳೆ ಬ್ರಿಟನ್ನಿನಲ್ಲಿ ನಡೆಯುವ ಮಹಾ ಚುನಾವಣೆಗಳಲ್ಲಿ ೧೦ ಸಾವಿರ ಮಂದಿ ಭಾರತೀಯ ಮತದಾರರು ತಮ್ಮ ಹಕ್ಕನ್ನು ಚಲಾಯಿಸುವರೆಂದು ಹೇಳಲಾಗಿದೆ

## ಅಂತರ ರಾಷ್ಟ್ರೀಯ ಚಹಾ ಒಪ್ಪಂದ

ಭಾರತ, ಪಾಕಿಸ್ತಾನ, ಸಿಲೋನ್ ಮತ್ತು ಇಂಡೋನೇಷ್ಯಗಳ ಚಹಾ ತಯಾರಿಕೆಗಾಗಿ ರುವ ಅಂತರರಾಷ್ಟ್ರೀಯ ಒಪ್ಪಂದವಾಗಿರುವುದನ್ನು ಭಾರತದ ಪಾರ್ಲಿಮೆಂಟು ಅಂಗೀಕರಿಸಿದೆ

## ಚೀಣದ ಮೇಲೆ ರಾಷ್ಟ್ರೀಯ ಚೀಣದ ಮರುದಂಡಯಾತ್ರೆ

ಒಡನಾಗಿ ಯುದ್ಧ ಮಾಡಿದ ರಾಷ್ಟ್ರೀಯ ಚೀಣರು ಈಗ ಪುನಃ ಚೀಣವನ್ನು ಆಕ್ರಮಿಸಿಕೊಳ್ಳುವ ಸಂಭವವಿದೆ ಎಂದು ಹೇಳಲಾಗಿದೆ ರಾಷ್ಟ್ರೀಯ ಸೈನ್ಯಗಳ ವಿಮಾನ ಮತ್ತು ನೌಕಾ ಮುತ್ತಿಗೆಗಳಿಗೆ ಅನುತ್ತರವ ಜನ ... ರ ವಿರುದ್ಧವಾಗಿ ಚೀಣದಲ್ಲಿ ... ವಿಚಿತ್ರ ... ಇವೆಲ್ಲ ಸಹಾಯವನ್ನು ಪಡೆ... ಮಾಡುತ್ತಿರುವ ... ದ ಇವರ ಪುನಃ ದಂಡಯಾತ್ರೆ ಮಾಡ ವರೆಂಬ ಭಾವನೆಗೆ ಪುರಸ್ಕಾರ ದೊರೆಕಿರು ವುದಾಗಿ ಹೇಳಲಾಗಿದ

## ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಗಾಳಿ, ಉಬ್ಬಸ, ಪಡಿಶಾವರ ... ಮತ್ತು ಗಳಲೆಂಬಾತಕ್ಕೆ ( ... ) ಪಾಕಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ವ ಮನುಷ್ಯರು, ... ಮತ್ತು ಅಂಗಡಿಯವರುಗಳನ್ನು ಕೇಳಿ ... ರುತ್ತಾರೆ

ಆರ್. ಎಸ್. ... ರವರು,
... ವೈದ್ಯಶಾಲಾ,
... ಕೆ ...

## ಪೂರ್ವ ಬಂಗಾಳ ಸ್ಥಿತಿ ಬಗ್ಗೆ ಎ. ಐ. ಸಿ. ಸಿ. ಯಲ್ಲಿ ಚರ್ಚೆ

ಪೂರ್ವ ಪಾಕಿಸ್ತಾನದಲ್ಲಿರುವ ಅಲ್ಪ ಸಂಖ್ಯಾತರ ಸ್ಥಿತಿಗತಿಗಳ ಬಗ್ಗೆ ಮೊನ್ನೆ ದಿನ ದೆಹಲಿಯಲ್ಲಿ ಸೇರಿದ್ದ ಎ ಐ ಸಿ ಸಿ. ಯ ಸಭೆಯು ರಹಸ್ಯವಾಗಿ ಚರ್ಚಿಸಿತು. ಅಸ್ಸಾಮಿಗೆ ಪಾಕಿಸ್ತಾನದಿಂದ ಬರುತ್ತಿರುವ ವ ... ವಿಷಯವೂ ಚರ್ಚಿಸಲ್ಪಟ್ಟಿತ ಈ ಬಗೆ ಪ್ರಧಾನ ಮಂತ್ರಿ ಜವಹರಲಾಲ್ ನೆಹರೂರವರು ... ಗಳ ಕಾಲ ಮಾತನಾಡಿ, ಪ್ರತಿನಿಧಿಗಳು ಶಾಂತಿಯನ್ನು ತರಬೇಕೆಂದೂ, ಭಾರತದಲ್ಲಿ ... ಅನ್ನು ... ಪಾಕಿಸ್ತಾನದ ... ಅಲ್ಪ ಸಂಖ್ಯಾತರನ್ನು ರಕ್ಷಿಸಲು ಭಾರತಕ್ಕೆ ಸಾಧ್ಯವೆಂದೂ ಹೇಳಿದರು.

## ಟಿಕೆಟ್ಟು ಕೊಳ್ಳುವವನ ಕೈ ಕಚ್ಚಿ ಬೆರಳು ಹೋಯಿತು

ಕಾಶಿಯ ಸಿನಿಮಾ ಒಂದನ್ನು ನೋಡಲು ಹೋದ ಪ್ರೇಕ್ಷಕರಲ್ಲಿ "ಕೃಷ್ಣ" ನೆಂಬ ಇಬ್ಬರು ಸಿನಿಮಾ ಪ್ರೇಮಿಗಳಿಗೆ ಟಿಕೆಟ್ಟು ಕೊಳ್ಳುವ ಸ್ಥಳದ ಬಳಿ ಜಗಳ ಮೊದಲು ಕೊಳ್ಳಬೇಕೆಂಬ ಬಗ್ಗೆ ಜಗಳವಾಗಿ ಒಬ್ಬನ ಬೆರಳನ್ನು ಮತ್ತೊಬ್ಬನ ಕಚ್ಚಿದುದರಿಂದ ಅದು ಬಿದ್ದು ಹೋಯಿತು

## ಸ್ಟಾಲಿನ್ ಭೇಟಿ ಒತ್ತಾಯಕ್ಕೆ ಟ್ರೂಮನ್ ಜಗ್ಗುವುದಿಲ್ಲ

ರಷ್ಯದ ಮಾ॥ ಸ್ಟಾಲಿನರವರೊಡನೆ ಒಪ್ಪಂದಕ್ಕೆ ಬರಲು ಅಧ್ಯಕ್ಷ ಟ್ರೂಮನ್ನರ ಪ್ರಯತ್ನ ಪಡಬೇಕೆಂದು ಕಾಂಗ್ರೆಸ್ಸಿನ ಒತ್ತಾಯ ಹೆಚ್ಚುತ್ತಿರುವುದೆಂದು ಹೇಳಲಾಗಿದೆ ಆದರೆ ಟ್ರೂಮನ್ನರು ಈ ಒತ್ತಾಯಕ್ಕೆ ಜಗ್ಗುವುದಿಲ್ಲವೆಂದು ನಂಬಲಾಗಿದೆ

## ಭಾರಿ ಡೈನಾಮೈಟ್ ಕಾರ್ಖಾನೆಯ ಆಸ್ಫೋಟನ

ದಕ್ಷಿಣ ಯೂಗೋಸ್ಲಾವಿಯದ ... ಬಳಿ ದೊಡ್ಡ ಡೈನಾಮೈಟ್ ಕಾರ್ಖಾನೆಯ ... ಸ್ಫೋಟನಕ್ಕೆ ತುತ್ತಾದುದರಿಂದ ... ಅನೇಕ ... ನಷ್ಟವಾಗಿ ... ವಿನ ಕೃತ್ಯವೇ ಇದರ ಕಾರಣವಾಗಿರ ಬೇಕೆಂದು ಊಹಿಸಲಾಗಿದೆ

## ಅಸ್ಸಾಂನಲ್ಲಿ ಪೆಟ್ರೋಲ್ ಗಣಿ

... ಸಿಸ್ಟೋಯಿ ನಗರದಿಂದ ಕೊಂಚ ದೂರದಲ್ಲಿ ಹೊಸ ಪೆಟ್ರೋಲ್ ಪ್ರದೇಶವು ದೊರೆಕಿದೆ ... ತಿಳಿದ ವರ್ಷ ಮಾಚಿ ... ಯಿಂದ ಈ ಬಗ್ಗೆ ಇಲ್ಲಿ ಶೋಧನೆ ನಡೆಯುತ್ತಿತ್ತು

ಶ್ರೀ ಎಂ ಎ ವೆಂಕಟಸ್ವಾಮಿಯವರು ... ನಡೆಯುತ್ತಿರುವ ಮೈಸೂರು ನಗರ ಕಾಂಗ್ರೆಸ್ ಚುನಾವಣೆ ... ಯ ಅಧಿಕಾರಿಗಳನ್ನಾಗಿ ... ನಾಟಕ ... ಕಾಂಗ್ರೆಸ್ ... ವರು ನೇಮಿಸಿದ್ದಾರೆ

## ಸುಪ್ರೀಂ ಕೋರ್ಟಿನ ಜಡ್ಜಿ ಯಿಂದ ವಿಚಾರಣೆ ನಡೆಯಲಿ

### ಜಿ॥ ಪುಟ್ಟರಾಜೇಅರಸರ ಬಗ್ಗೆ ವಕೀಲರ ನಿರ್ಣಯ

ಸ್ವಂ ಪು] ನಂಜನಗೂಡು ೨೧

ಇಲ್ಲಿನ ವಕೀಲರುಗಳ ಸಂಘದ ವಿಶೇಷ ಸಭೆಯು ಕಳೆದ ಶುಕ್ರವಾರ ಶ್ರೀ ಎಸ್. ತಿಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ನ್ಯಾಯಮೂರ್ತಿ ಪುಟ್ಟರಾಜೇ ಅರಸ್‌ನ್ನು ಅವರ ಸ್ಥಾನದಿಂದ ನಿಲುವನ್ನು ವಿವರಿಸಿಕೊಳ್ಳಲು ಅವಕಾಶವಿಲ್ಲದಂತೆ, ಹಠಾತ್ತನೆ ನಿವೃತ್ತಿ ಮಾಡಿದ ವಿಧಾನದ ಬಗ್ಗೆ ಅಸಮಾಧಾನ ಮತ್ತು ವಿಷಾದವನ್ನು ವ್ಯಕ್ತಪಡಿಸಿ ಮತ್ತು ಸದರಿ ಆಜ್ಞೆಯನ್ನು ರಾಷ್ಟ್ರಾಧ್ಯಕ್ಷರು ಪುನರ್ವಿಮರ್ಶೆ ಮಾಡಿ, ಈ ಬಗ್ಗೆ ಸಾರ್ವಜನಿಕ ನಂಬಿಕೆ ಗಳಿಸುವ ಸಲುವಾಗಿ ರಹಿತ ನಡೆಸಿ ವರದಿ ಮಾಡಲು ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ನೇಮಿಸಬೇಕೆಂದು ಅಧ್ಯಕ್ಷರನ್ನು ಪ್ರಾರ್ಥಿಸುವ ನಿರ್ಣಯವು ಶ್ರೀ ಬಿ. ಎಲ್. ಎಸ್. ರಾವ್‌ರವರಿಂದ ಮಂಡಿಸಲ್ಪಟ್ಟು, ಸರ್ವಾನುಮತದಿಂದ ಅಂಗೀಕೃತವಾಯಿತು

## ಕಾಳ ಸಂತೆಯಲ್ಲಿ ಬಟ್ಟೆ ಮಾರಾಟ

ಇಲ್ಲಿನ ಪುಂಡರೀಕರಾವ್ ಜವಳಿ ಅಂಗಡಿಯಲ್ಲಿ ಕಳೆದ ಶುಕ್ರವಾರ ಗಜ ೧ಕ್ಕೆ ೧೧ ಆಣೆ ಬೆಲೆಯ ಬಟ್ಟೆಯನ್ನು ೧ ರೂ. ನಂತೆ ಮಾರಿದುದನ್ನು ಸ್ಥಳೀಯ ಟೆಕ್ಸ್‌ಟೈಲ್ ಇನ್ಸ್‌ಪೆಕ್ಟರರು ಪತ್ತೆಹಚ್ಚಿ ಮುಂದಿನ ಕ್ರಮ ಜರುಗಿಸುತ್ತಿದ್ದಾರೆ

## ಜಾತಿ ಸೂಚಕ ಪದಗಳ ವರ್ಜ

ಅಯ್ಯಂಗಾರ್, ಮೆನನ್, ಪಿಳ್ಳೆ ಮುಂತಾದ ಜಾತಿ ಸೂಚಕ ಪದಗಳನ್ನು ತಮ್ಮ ಹೆಸರುಗಳೊಡನೆ ಉಪಯೋಗಿಸುವುದಿಲ್ಲವೆಂದು ನಿರ್ಧರಿಸಿ ಕ್ವಿಲಾನಿನ ೩೦ ಮಂದಿ ವಕೀಲರುಗಳು ಒಂದು ಹೇಳಿಕೆ ಹೊರಡಿಸಿದ್ದಾರೆ

## ತಿಳುವಳಿಕೆ

ಮೈಸೂರು ಸಿಟಿ ಅಶೋಕಾ ರೋಡ್ ಮೈಸೂರ್ ಬ್ಯಾಂಕ್ ಪಕ್ಕ ಜಗ್ಗೂಲಾಲ ಛತ್ರದ ಎದುರು ಭಾಗದಲ್ಲಿರುವ ಎಸ್ ಮಾಣಿಕ್‌ಚಂದ್ ಪುಕರಾಜ್ ಜೈನ್ ಸನ್ಸ್‌ರವರು ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ.—

ನಮ್ಮ ಅಂಗಡಿಯಲ್ಲಿ ಚಿನ್ನ, ಬೆಳ್ಳಿ ವಗೈರೆ ಒಡವೆಗಳನ್ನು ಗಿರವಿ ಇಟ್ಟುಕೊಂಡು ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡುತ್ತೇವೆ ಮತ್ತು ನಮ್ಮ ಅಂಗಡಿಯಲ್ಲಿ ಖಾತರಿಯಾದ ಚಿನ್ನ, ಬೆಳ್ಳಿ ಒಡವೆಗಳನ್ನು ವಿಕ್ರಯ ಮಾಡುತ್ತೇವೆ. ಮತ್ತು ಬದಲಿಗೆ ಸಹ ತೆಗೆದುಕೊಳ್ಳುತ್ತೇವೆ. ದಯವಿಟ್ಟು ಒಂದುಸಲ ಬಂದು ಪರೀಕ್ಷಿಸಿರಿ.

ಎಸ್ ಮಾಣಿಕ್‌ಚಂದ್ ಪುಕರಾಜ್ ಜೈನ ಸನ್ಸ್, ಮೈಸೂರು

## ಮದರಾಸಿನಲ್ಲಿ ಗಾಂಧಿಸ್ಮಾರಕ

ಮದರಾಸಿನ ವಿಶ್ವವಿದ್ಯಾನಿಲಯದ ದುರಿಗೆ ೩ ಲಕ್ಷ ರೂ ವೆಚ್ಚದಲ್ಲಿ ಒಂದು ಗಾಂಧಿ ಸ್ಮಾರಕವನ್ನು ಕಟ್ಟಲು ಸಂಕಲ್ಪಿಸಲಾಗಿದೆ. ಇದಕ್ಕಾಗಿ ಸರ್ಕಾರದವರು ೨೫ ಸಾವಿರ ರೂ ಗಳನ್ನು ಕೊಟ್ಟಿರುವರು ಸ್ಮಾರಕವು ಅಷ್ಟ ಮೂಲೆಗಳುಳ್ಳ ಕೂಡಿರುವುದೆಂದು ಹೇಳಲಾಗಿದೆ

## ಕಲ್ಕತ್ತದ ಸಣ್ಣ ಬ್ಯಾಂಕುಗಳ ಒಕ್ಕೂಟ

ಕಲ್ಕತ್ತದ ಹಲವು ಸಣ್ಣ ಬ್ಯಾಂಕುಗಳನ್ನು ಒಂದುಗೂಡಿಸಲು ರಿಜರ್ವ್ ಬ್ಯಾಂಕಿನವರು ನಿರ್ಧರಿಸಿರುತ್ತಾರೆ. ಹಲವು ಬ್ಯಾಂಕುಗಳು ಡಿಪಾಜಿಟ್ಟು ಮೊಬಲಗನ್ನು ವಾಪಸು ಕೊಡಲು ನಿರಾಕರಿಸಿದುದರಿಂದ ಈ ರೀತಿ ಮಾಡಲಾಗುವುದೆಂದು ಗೊತ್ತಾಗಿದೆ

## ಬಲಿಜ ಸಂಘದ ಸದಸ್ಯರ ವಿಶೇಷ ಸಭೆ

ರಾಜಧಾನಿಯ ಬಲಿಜ ಸಂಘದ ಸದಸ್ಯರ ವಿಶೇಷ ಸಭೆಯು ಬರುವ ೨೬ನೇ ತಾ॥ ಭಾನುವಾರ ಮಧ್ಯಾಹ್ನ ೩ ಗಂಟೆಗೆ ಮಹಾರಾಜ ಚೌಕದಲ್ಲಿರುವ ಕಾಲದಾವಿರಾ ಪ್ರೈಮರಿ ಶಾಲೆಯಲ್ಲಿ ನಡೆಯುವುದು. ಸಂಘಕ್ಕೆ ಹೊಸದಾಗಿ ಅಧ್ಯಕ್ಷರನ್ನು ಆರಿಸಿದ ಮೇಲೆ ಹಲವು ಸದಸ್ಯರು ವಿರೋಧವನ್ನು ವ್ಯಕ್ತಪಡಿಸಿ ಪತ್ರ ಬರೆದಿರುವುದ ಅದಕ್ಕೆ ಅಧ್ಯಕ್ಷರ ಉತ್ತರ ಇವುಗಳನ್ನು ಸಭೆಯಲ್ಲಿ ಪರಿಶೀಲಿಸಲಾಗುವುದು

### ಮೈಸೂರು ವಿಶ್ವವಿದ್ಯಾಲಯ

## ಪ್ರಕಟಣೆ

೧೫೦ನೇ ಮಾರ್ಚಿ ತಿಂಗಳಿನಲ್ಲಿ ನಡೆಯುವ ಟೆಕೆಟ್ಟು ಪರೀಕ್ಷೆಗಳಿಗೆ ಪ್ರವೇಶಗಳು ೧೯೫೦ನೇ ಮಾರ್ಚಿ ತಿಂಗಳಿನಲ್ಲಿ ನಡೆಯಲಿರುವ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಿಗೆ ಕಾಲೇಜುಗಳ ಮುಖಾಂತರವಾಗಿಯಾಗಲೀ, ಖಾಸಗಿಯಾಗಿ ಅರ್ಜಿ ಕಳಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರವೇಶ ಟಿಕೆಟ್ಟುಗಳನ್ನು ಅವರು ಅರ್ಜಿಗಳನ್ನು ಕಳುಹಿಸಿರುವ ಕಾಲೇಜುಗಳ ಮುಖ್ಯಾಧಿಕಾರಿಗಳಿಂದ ಪಡೆಯಬಹುದು. ಈ ಮೂಲಕ ಪ್ರಕಟಿಸಲಾಗಿದೆ

**ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯ ಕಛೇರಿಯಿಂದ ನೇರವಾಗಿ ಕಳುಹಿಸಲಾಗುವುದಿಲ್ಲ.**

ಮೈಸೂರು ೧೯-೨-೫೦ — ಆಜ್ಞೆ ಮೇರೆ, ಸಿ. ರಂಗಾಚಾರ್, ಆಫೀಸಿಯೇಟಿಂಗ್ ರಿಜಿಸ್ಟ್ರಾರ್


S. S. L. C. EXAM
Papers 1940-49
(with illustrations)
1) General Science (English) 1-8-0
2) Optional Algebra (Kannada, English) 1-0
BY
C S Vijayaraghavachar B. SC., A. M. I. S. E.
VIJAYA INDUSTRIES,
Vanivilas Road, Mysore
or Book Sellers



ಪ್ರಭಾ ದಲ್ಲಿ 24-2-50 ರಿಂದ
ಎರಡನೆ 3 ಆಟಗಳು
ಮುಂಬಾಯಿ ಪಿಕ್ಚರ್ಸ್‌ರವರ ಅನುಪಮ ಐತಿಹಾಸಿಕ ಚಿತ್ರ
* ವಿಕ್ರಮಾದಿತ್ಯ ವಿಜಯ *
(ಹಿಂದಿ)
ಸುರೇಂದ್ರ | ರಾಜ್‌ಕಪೂರ್ ಮಧುಬಾಲ | ಮೇನಕಾ ಮತ್ತು
ಶಾಸ್ತ್ರಿ


Edited Printed and published by A R Nagaraj at Sadhvi Press, D Subbiah Road, Mysore

ಜಾ। ಸಂ. 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ ೬ ಕಾಸು

# ಸಾಧ್ವಿ

ಸಂಪುಟ ೮] ಗುರುವಾರ ೨೧-೨-೪೮ [ಸಂಚಿಕೆ ೧೬೪

# ಲೆನಿನ್‌ಗ್ರಾಡಿನಲ್ಲಿ ಮಾರ್ಷಲ್ ಲಾ ಜಾರಿ

## ಮೈಸೂರು ಕಾಂಗ್ರೆಸ್ ಅಧ್ಯಕ್ಷತೆಗೆ ಉಮೇದುವಾರರು

ಮೈಸೂರು ೨೦

ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನಕ್ಕೆ ಇದುವರೆಗೆ ಶ್ರೀಗಳಾದ ಎಸ್. ಚನ್ನಯ್ಯ, ಎ. ಜಿ. ರಾವ ಚಂದ್ರರಾವ್ ಮತ್ತು ಕೆ. ಹನುಮಂತಯ್ಯ ಇವರುಗಳ ಹೆಸರುಗಳನ್ನು ಸೂಚಿಸಲಾಗಿದೆ

## ತಿರುಚಾನೂರು ದೇವರಿಗೆ ಶ್ರೀಮನ್ಮಹಾರಾಣಿಯವರ ಉಡುಗೊರೆ

ತಿರುಚಾನೂರಿನ ಶ್ರೀ ಪದ್ಮಾವತಿ ತಾಯಾರ್ ದೇವಿಗೆ ನೂರು ರೂ ಬೆಲೆ ಬಾಳುವ ಕೆಂಪು ಜರತಾರಿ ರೇಷ್ಮೆ ಸೀರೆಯನ್ನು ಶ್ರೀಮನ್ಮಹಾರಾಣಿಯವರು, ಅಲ್ಲಿಗೆ ಹೋಗಿದ್ದ ಸರಕಾರಿ ಚೀಫ್ ಇಂಜನಿಯರ್ ಶ್ರೀ ಎಂ. ಎನ್. ಲಕ್ಷ್ಮಣರಾಯರ ಮೂಲಕ ಅರ್ಪಿಸಿದರು

## ಮಕ್ಕಳ ವಾರ

ಗುಣಾಂಟ ಗರ್ಭಿಣಿ ಮತ್ತು ಮಕ್ಕಳ ಯೋಗಕ್ಷೇಮದ ಟ್ರಸ್ಟಿನ ರಜತ ಮಹೋತ್ಸವದ ಸಂದರ್ಭದಲ್ಲಿ ಬರುವ ತಿಂಗಳು ೧೫ರಿಂದ ೨೧ರ ವರೆಗೆ ಮಕ್ಕಳವಾರವನ್ನು ಎಲ್ಲ ಮೊಹಲ್ಲಾಗಳಲ್ಲೂ ನಡೆಸಲಾಗುವುದು ಪ್ರದರ್ಶನದಲ್ಲಿ ಭಾಗವಹಿಸಲು ಶಿಶುಗಳನ್ನು ಕಳುಹಿಸಿಕೊಡಬೇಕೆಂದು ಸಾರ್ವಜನಿಕರಲ್ಲಿ ಬಿನ್ನವಿಸಲಾಗಿದೆ. ಪ್ರತಿ ಮೊಹಲ್ಲಾದ ಅತ್ಯುತ್ತಮ ಮಕ್ಕಳಿಗೆ ಬಹುಮಾನಗಳನ್ನು ಕೊಡಲಾಗುವುದು

## ಗುಂಭಳ್ಳಿ ಕೊಲೆ ಆಪಾದಿತರ ಮರಣ ದಂಡನೆ ರದ್ದು

ಗುಳೇಂದೂರು ತಾಲ್ಲೂಕು ಗುಂಭಳ್ಳಿ ಗ್ರಾಮದಲ್ಲಿ ಒಂದು ವರ್ಷದ ಕೆಳಗೆ ಸಂಭಾವದ ಸಂಬಂಧವಾಗಿ ನಡೆದ ವ್ಯಾಜ್ಯದಲ್ಲಿ ಮರಣ ದಂಡನೆಗೆ ಗುರಿಯಾಗಿದ್ದ ಮಹಂತ ದೇವರು ಮತ್ತು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಶಿವಬಸಪ್ಪ ಮತ್ತು ತಿಮ್ಮಯ್ಯ ಇವರುಗಳು ಸೆಷನ್ಸ್ ಕೋರ್ಟಿನ ತೀರ್ಪಿನ ಮೇಲೆ ಹೈಕೋರ್ಟಿನಲ್ಲಿ ಅಪೀಲು ಮಾಡಿದ್ದರು ಅಪೀಲಿನಲ್ಲಿ ಮೊದಲನೇ ಆಪಾದಿತರಾದ ಮಹಂತ ದೇವರಿಗೆ ಮರಣ ದಂಡನೆ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಿ, ಇನ್ನಿಬ್ಬರಿಗೆ ಕೆಳಗಿನ ಕೋರ್ಟಿನವರು ಇತ್ತ ಶಿಕ್ಷೆಯನ್ನು ಖಾಯಂ ಮಾಡಲಾಯಿತು. ಮೊದಲನೇ ಆಪಾದಿತರು ಇತರ ಇಬ್ಬರ ಸಹಾಯದಿಂದ ತ್ರಿಮೂರ್ತಿ ರುದ್ರಮ್ಮ ಎಂಬುವರನ್ನು ಕೊಲೆ ಮಾಡಿದರೆಂಬುದೇ ಅವರ ಮೇಲಿನ ಆಪಾದನೆ.

## ಪ್ರಾಣಿ ಬಲಿ

ರಾಜಧಾನಿಯ ಚಾಮುಂಡಿಪುರಂ ಹೊಸ ಬಂಡೀಕೇರಿ ಅರಳೀಕಟ್ಟೆ ಪಕ್ಕದಲ್ಲಿ ಕತ್ತರಿಸುವ ಗರಡಿ ಮುಂಭಾಗದಲ್ಲಿ ಶ್ರೀ ಕೆಂಚಮ್ಮ ಪುರದಮ್ಮ ಶ್ರೀ ಬಂದಮ್ಮ ಮುಂತಾದ ಗ್ರಾಮ ದೇವತೆಗಳ ಪೂಜೆಯು ೨೬-೨-೪೮ನೇ ಶುಕ್ರವಾರ ಪ್ರಾತಃಕಾಲ ಪ್ರಾರಂಭವಾಗುವ ಸಂಭವವಿದೆ ಈ ಸಮಯದಲ್ಲಿ ಕಾನೂನಿಗೆ ವಿರೋಧವಾಗಿ, ಕೋಣ, ಕುರಿ, ಮೇಕೆ, ಕೋಳಿ ಮುಂತಾದ ಪ್ರಾಣಿಗಳನ್ನು ಬಲಿ ಕೊಡಲು ಸಿದ್ಧತೆಗಳಾಗುತ್ತಿವೆ ಸರ್ಕಾರದವರು ಬೇಗನೆ ಗಮನಿಸಿ, ಈ ನೀಚ ಕೃತ್ಯಗಳನ್ನು ನಿಲ್ಲಿಸಬೇಕೆಂದು ಜನಾಬ್ ಬಿ ಎಂ ಎ ಖಾದರ್ ರವರು ಪ್ರಾರ್ಥಿಸುತ್ತಾರೆ

## ಶಾಸನ ಸಭಾ ಕಾರ್ಯಕಲಾಪ

### ನೇರವಾಗಿ ರಾಜ ಪ್ರಮುಖರೊಡನೆ ವ್ಯವಹಾರ

ಸ್ವಂ. ಸು ಫೋ॥] ಬೆಂಗಳೂರು ೨೦

ಸಂಸ್ಥಾನದ ಶಾಸನ ಸಭೆಯ ಪಡವಳಿಕೆ ಸಂಬಂಧವಾಗಿ ಹೊಸ ವಿಧಾನದ ಬಗ್ಗೆ ನಾಳೆ ದಿನ ಸರಕಾರದ ಪ್ರಕಟಣೆಯೊಂದು ಹೊರಬೀಳಲಿದೆ ಹೊಸ ಪಡವಳಿಕೆಯ ಪ್ರಕಾರ ಇನ್ನು ಮುಂದೆ ಶಾಸನ ಸಭೆಯ ಅಧ್ಯಕ್ಷರು ಸಭೆಯ ಕಲಾಪಗಳ ಸಂಬಂಧವಾಗಿ ಸರಕಾರದೊಡನೆ ವ್ಯವಹರಿಸುತ್ತಾರೆ. ನಿಂತುಹೋಗಿ ನೇರವಾಗಿ ರಾಜ ಪ್ರಮುಖ (ಶ್ರೀಮನ್ ಮಹಾರಾಜ) ರೊಡನೆ ನಡೆಸುವ ಅವಕಾಶವೇರ್ಪಡುವುದು ಸರಕಾರದವರು ಶಾಸನಗಳನ್ನು ಖಾಯಂ ಮಾಡುವ ವಿಧಾನವು ತಪ್ಪಿ, ರಾಜ ಪ್ರಮುಖರೇ ಇದನ್ನು ಮಾಡುವರು ಶಾಸನ ಸಭೆಗಳ ಆಡಳಿತ, ಕಾರ್ಯದರ್ಶಿಗಳನ್ನೇಮಕ ಸಂಬಳ ಸಾರಿಗೆ ಮುಂತಾದ ವಿಷಯಗಳು ಸ್ಪೀಕರ ಅಧಿಕಾರದೊಳಗೆ ಒಳಪಡುವುವು ಅಲ್ಲದೆ ಸರಕಾರದಿಂದ ಶಾಸನ ಸಭೆಗೆ ಒಂದು ನಿರ್ದಿಷ್ಟ ಮೊತ್ತ ಹಣವನ್ನು ಸಭಾ ಖರ್ಚಿಗೆ ಮಾಸಲಾಗಿಡಲಾಗುವುದು

### ನಿರಾಶ್ರಿತರ ಅಧಿಕಾರಿಗಳ ಆಗಮನ

ಭಾರತ ಸರಕಾರದ ನಿರಾಶ್ರಿತ ಮತ್ತು ಪುನರ್ವ್ಯವಸ್ಥಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಸಿ ಎನ್ ಚಂದ್ರರವರು ಈ ದಿನ ಇಲ್ಲಿಗೆ ಆಗಮಿಸಿದರು ರಾತ್ರಿ ರಾಜಧಾನಿಗೆ ತೆರಳಿ ಮಾರನೆ ದಿನ ವಾಪಸು ಬಂದು ದೆಹಲಿಗೆ ಹಿಂತಿರುಗುವರು

### ದಾಸಪ್ಪನವರು ದೆಹಲಿಗೆ

ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ಇಂದು ವಿಮಾನದಲ್ಲಿ ದೆಹಲಿಗೆ ತೆರಳಿದರು. ಹಣಕಾಸಿನ ಏಕ್ಯದ ಸಂಬಂಧವಾಗಿ ಅವರಿಗೆ ಸಲಹೆ ನೀಡಲು ಇಲ್ಲಿಂದ ರೈಲ್ವೆ ಜನರಲ್ ಮ್ಯಾನೇಜರ್ ಶ್ರೀ ಆರ್. ರಾವ ಕೃಷ್ಣ, ಆಬ್ಕಾರಿ ಕಮಿಷನರ್ ಶ್ರೀ ಕೆ ಸುಬ್ಬರಾವ್ ಮತ್ತು ಆದಾಯ ತೆರಿಗೆ ಅಧಿಕಾರಿಗಳಾದ ಶ್ರೀ ಎಂ. ಮಾಧವರಾವ್ ರವರುಗಳೂ ಪ್ರಯಾಣ ಮಾಡಿದರು

೧ ಶೃಂಗೇರಿ ಮಠದ ಆಡಳಿತದ ಬಗೆ ಒಂದು ಸಲಹಾ ಸಮಿತಿಯನ್ನು ನೇಮಿಸುವ ಅಂಶವನ್ನು ಸರ್ಕಾರದವರು ಶೀಘ್ರದಲ್ಲೇ ಪ್ರಕಟಣೆ ಹೊರಡಿಸಿದ್ದಾರೆ

## ಬೆಂಗಳೂರಿನಲ್ಲಿ ಭಾರತ ಕಾಂಗ್ರೆಸ್ ಅಧಿವೇಶನ

ಸ್ವಂ ಸು ಫೋ॥] ಬೆಂಗಳೂರು ೨೦

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ದಲಿಂಗಯ್ಯನವರ ಕೋರಿಕೆಯನ್ನು ಮನ್ನಿಸಿ ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಬರುವ ಅಕ್ಟೋಬರ್ ತಿಂಗಳಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನವು ಬೆಂಗಳೂರಿನಲ್ಲಿಯೇ ನಡೆಯತಕ್ಕದ್ದೆಂದು ನಿರ್ಧರಿಸಿದ್ದಾರೆ ಕಾಂಗ್ರೆಸ್ ಅಧಿವೇಶನಕ್ಕೆ ಚಾಲುಕಳ್ಳಿಯಲ್ಲಿ ನಗರ ನಿರ್ಮಾಣ ಮಾಡಲಾಗುವುದೆಂದೂ, ಪಂಡಿತ ನೆಹರೂರವರು ಈ ಅಧಿವೇಶನದಲ್ಲಿ ಭಾಗವಹಿಸುವರೆಂದೂ ಹೇಳಲಾಗಿದೆ.

### ವಾಷಿಂಗ್ಟನ್ ಮೃಗಾಲಯಕ್ಕೆ ಮೈಸೂರಿನ ಆನೆಗಳು

ಪಂಡಿತ ನೆಹರೂರವರ ಸೂಚನೆ ಮೇರೆ ವಾಷಿಂಗ್ಟನ್ ಮೃಗಾಲಯಕ್ಕೆ ಮೈಸೂರು ಸರ್ಕಾರದವರು ಎರಡು ಆನೆ ಮರಿಗಳನ್ನು ಕಳುಹಿಸಲಿರುವರು ಅವುಗಳನ್ನು ಬರುವ ಸೋಮವಾರ ರೈಲಿನಲ್ಲಿ ಬೊಂಬಾಯಿಗೆ ರವಾನಿಸಲಾಗುವುದು ಅಲ್ಲಿಂದ ಅವುಗಳನ್ನು ವಿಮಾನದಲ್ಲಿ ವಾಷಿಂಗ್ಟನ್ನಿಗೆ ಕಳುಹಿಸಲಾಗುವುದು.

### ರೈಲ್ವೆ ನೌಕರರ ಸಭೆ

ಮೈಸೂರು ೨೦

ಮೊನ್ನೆ ರೈಲ್ವೆ ಕೆಲಸಗಾರರ ಸಭೆಯು ಮಿ॥ ಪುಟ್ಟಸ್ವಾಮಿರವರ ಅಧ್ಯಕ್ಷತೆಯಲ್ಲಿ ನಡೆಯಿತು ಕೇಂದ್ರ ಸರಕಾರದ ರೈಲ್ವೆ ಮಂತ್ರಿಗಳೊಡನೆ ಮುಖಂಡರು ಚರ್ಚಿಸಿದ ವಿಷಯಗಳನ್ನು ಸಭೆಗೆ ತಿಳಿಸಿದರು ಕೇಂದ್ರ ಸರ್ಕಾರವು ಸಂಸ್ಥಾನದ ರೈಲ್ವೆ ಆಡಳಿತವನ್ನು ವಹಿಸಿಕೊಳ್ಳಲಿರುವುದರಿಂದ ಸಂಸ್ಥಾನದ ರೈಲ್ವೆ ವರಮಾನದಲ್ಲಿ ಉಳಿತಾಯವಿರುವ ಗಳಿಸಿದ ಲಕ್ಷ ರೂಗಳ ಪೈಕಿ ಒಂದು ಭಾಗವನ್ನು ಕೆಲಸಗಾರರ ಬೋನಸ್ಸು ರೂಪವಾಗಿ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವರೆಂದು ಉತ್ತರವನ್ನು ಮಾರ್ಚಿ ಗಡವಿನೊಳಗೆ ತಿಳಿಸುವುದಾಗಿ ಹೇಳಿದರು ಎಂದು ತಿಳಿಸಲಾಯಿತು.

○ ಇನ್ನು ಮುಂದೆ ಪ್ರತಿ ತಿಂಗಳು ಸರ್ಕಾರಿ ಕಛೇರಿಗಳು ಬೆಳಿಗ್ಗೆ ೧೧ರಿಂದ ಸಂಜೆ ೫ರವರೆಗೆ ಕೆಲಸ ನಡೆಸತಕ್ಕದ್ದೆಂದು ಸರ್ಕಾರಿ ಆಜ್ಞೆಯಾಗಿದೆ

## ಕೇಂದ್ರ ಮಂತ್ರಿ ಮಂಡಲದ ಸಂಖ್ಯೆಯಲ್ಲಿ ಬದಲಾವಣೆ

ಭಾರತ ಸರ್ಕಾರದ ಮಂತ್ರಿ ಮಂಡಲವನ್ನು ಇಷ್ಟರಲ್ಲೇ ಪುನರ್ರಚಿಸಲಾಗುವುದೆಂದು ವರದಿಯಾಗಿದೆ ಹೊಸ ಮಂತ್ರಿ ಮಂಡಲದ ಸದಸ್ಯರ ಸಂಖ್ಯೆಯೂ ಕಡಿಮೆಯಾಗುವುದೆಂದು ಹೇಳಲಾಗಿದೆ ಈಗಿನ ಮಂತ್ರಿ ಮಂಡಲದ ನಾಲ್ವರು ಸದಸ್ಯರು ರಾಜೀನಾಮೆ ಕೊಡುವ ಸಂಭವವಿದೆ ಹಲವು ಮಂದಿ ಸಚಿವರು ತಮ್ಮನ್ನು ಬಿಡುಗಡೆ ಮಾಡಬೇಕೆಂದು ಕೇಳಿ, ಆ ಮೂಲಕ ಕಾಂಗ್ರೆಸ್ ಮತ್ತು ಸರ್ಕಾರಗಳಿಗೆ ಇರುವ ಭಿನ್ನಾಭಿಪ್ರಾಯವು ನಿವಾರಿಸಲ್ಪಟ್ಟು ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲೆಂದು ಅಪೇಕ್ಷಿಸಿರುವುದಾಗಿಯೂ ಗೊತ್ತಾಗಿದೆ

ಪುನರ್ರಚಿಸಲಾಗುವ ಕೇಂದ್ರ ಮಂತ್ರಿ ಮಂಡಲಕ್ಕೆ ಒರಿಸ್ಸಾ ಪ್ರಧಾನಿ ಶ್ರೀ ಹರೇಕೃಷ್ಣ ಮೆಹತಾಬರನ್ನು ಸೇರಿಸಿಕೊಳ್ಳಲಾಗುವುದು.

## ಫಕ್ತೂನಿಸ್ತಾನ್ ಚಳುವಳಿ ತುಳಿಯಲು ಪಾಕಿಸ್ತಾನದ ಸಿದ್ಧತೆ

ಅಫ್ಘಾನಿಸ್ತಾನದ ಪ್ರಬಲವಾದ ಬೆಂಬಲವನ್ನು ಪಡೆಯುತ್ತಿರುವ ಫಕ್ತೂನಿಸ್ತಾನ್ ಚಳುವಳಿಯನ್ನು ಪೂರ್ಣವಾಗಿ ತುಳಿದು ಹಾಕಲು ಪಾಕಿಸ್ತಾನವು ಸಿದ್ಧತೆ ಮಾಡಿಕೊಳ್ಳುತ್ತಿದೆ ಖುರ್ರಂ ಪ್ರದೇಶದಲ್ಲಿ ಬಹು ಸಂಖ್ಯೆಯ ಸೈನ್ಯಗಳನ್ನು ಕೇಂದ್ರೀಕರಿಸಲಾಗಿದೆ ಅಲ್ಲದೆ ವಿಮಾನ ಪಡೆಗಳು ಸಿದ್ಧವಾಗಿದ್ದು, ಸೈನಿಕ ಕವಾಯತುಗಳು ನಡೆಯುತ್ತಿವೆ ಅಫ್ಘಾನಿಸ್ತಾನದ ವಿರುದ್ಧ ಹಿಂಸೆ ಮತ್ತು ದ್ವೇಷವನ್ನು ಕಾರಲಾಗುತ್ತಿದೆ. ಹಾಗೆಯೇ ಭಾರತದ ಮೇಲೂ ಸಹ ಅಪಪ್ರಚಾರವಾಗುತ್ತಿದೆ

## ತುಮಕೂರು ಪೌರಸಭಾಧ್ಯಕ್ಷರು

ನೆನ್ನೆ ದಿನ ನಡೆದ ತುಮಕೂರು ಪೌರಸಭಾಧ್ಯಕ್ಷ ಚುನಾವಣೆಯಲ್ಲಿ ಶ್ರೀ ಬಿ. ಸಿ. ನಂಜುಂಡಯ್ಯನವರು ಅವಿರೋಧವಾಗಿ ಚುನಾಯಿತರಾದರು.

## ಲೆನಿನ್‌ಗ್ರಾಡಿನಲ್ಲಿ ಮಾರ್ಷಲ್ ಲಾ ಜಾರಿ

ರಷ್ಯದಲ್ಲಿ ಇತ್ತೀಚೆಗೆ ನಡೆಯಿತೆಂದು ಹೇಳಲಾಗಿರುವ, ಸ್ಟಾಲಿನ್ನರನ್ನು ಉರುಳಿಸುವ ಪ್ರಯತ್ನದ ಸಂಬಂಧವಾಗಿ ಕಳೆದ ವಾರಾಂತ್ಯದಲ್ಲಿ ಲೆನಿನ್‌ಗ್ರಾಡ್ ನಗರದಲ್ಲಿ ಅಲ್ಲಿ ಮಾರ್ಷಲ್ ಲಾವನ್ನ ಜಾರಿ ಮಾಡಲಾಗಿತ್ತೆಂದು, ವರದಿಯಾಗಿದೆ. ರಷ್ಯದ ಸೈನ್ಯ ಕೇಂದ್ರವಾದ ಮೈಫಿ ಎಂಬಲ್ಲಿ ರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಆ ಸಮಯದಲ್ಲಿ ಯಾರೂ ಲೆನಿನ್‌ಗ್ರಾಡ್ ನಗರವನ್ನು ಬಿಟ್ಟುಹೋಗದಂತೆ ತಡೆಯಲಾಗಿತ್ತು ನಗರದ ಅಸಾಂಪ್ರದಾಯಿಕ ಜನರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ವಾಹನ ಸಂಚಾರಗಳನ್ನು ಪೂರ್ಣವಾಗಿ ನಿಲ್ಲಿಸಿ ಮುಂದಕ್ಕೆ ಬಿಡಲಾಗುತ್ತಿದೆಯೆಂದೂ ಹೇಳಲಾಗಿದೆ

○ ಶಿವಮೊಗ್ಗ ಜಿಲ್ಲೆಯಲ್ಲಿ ಮಸ್ತ ಮುಂಗಾರು ಆಹಾರ ಧಾನ್ಯಗಳ ಬೆಳೆಗೆ ನಷ್ಟವುಂಟುಮಾಡುತ್ತಿರುವುದರಿಂದ ಅಲ್ಲಿನ ಜನಗಳು ಅವುಗಳನ್ನು ಕೊಲ್ಲಬಹುದೆಂದು ಸರ್ಕಾರದವರು ಅನುಮತಿ ಕೊಟ್ಟಿರುತ್ತಾರೆ

## ರೈಲ್ವೆ ದರದಲ್ಲಿ ಬದಲಾವಣೆ ಇಲ್ಲ

ಬರುವ ಸಾಲಿನಲ್ಲಿ ರೈಲ್ವೆ ಸಂಚಾರ ಮತ್ತು ಸರಕು ಇವುಗಳ ದರಗಳ ಬಗ್ಗೆ ಯಾವ ಬದಲಾವಣೆಯೂ ಆಗದೆಂದು ತಿಳಿಸಲಾಗಿದೆ. ಅಲ್ಲದೆ ಈ ಸಾಲಿಗೆ ೧೪ ಕೋಟಿ ರೂ ಹೆಚ್ಚು ಆದಾಯ ಬರುವುದೆಂದೂ ಅಂದಾಜು ಮಾಡಲಾಗಿದೆ

## ಕರ್ನಾಟಕದ ವಿಶ್ವಕೋಶ

ಕರ್ನಾಟಕದ ವಿಶ್ವಕೋಶದ ರಚನೆಗೆ ಬೇಕಾಗುವ ೧೨ ಲಕ್ಷ ರೂ ಗಳನ್ನು ಬೊಂಬಾಯಿ, ಮದರಾಸು, ಮೈಸೂರು ಮತ್ತು ಹೈದರಾಬಾದು ಸರ್ಕಾರಗಳು ಸಹಾಯಾರ್ಥವಾಗಿ ಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವು ಸೋಲಾಪುರದಲ್ಲಿ ಸೇರಿದ್ದ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಅಂಗೀಕೃತವಾಯಿತು

## ನ್ಯಾಯಾಸ್ಥಾನದಲ್ಲಿ ನ್ಯಾಯಾಧೀಶರ ಬಟ್ಟೆ ಕಳವು

ಬೊಂಬಾಯಿನ ನ್ಯಾಯಾಸ್ಥಾನವೊಂದರಲ್ಲಿ ವಿಚಾರಣೆ ನಡೆಯುತ್ತಿದ್ದಾಗ ನ್ಯಾಯಾಧೀಶರು ತಮ್ಮ ನಿಲುವಂಗಿಯನ್ನು ಒಂದು ಪ್ರತ್ಯೇಕ ಕೊಠಡಿಯಲ್ಲಿ ಇಟ್ಟಿದ್ದರೆಂದೂ, ಕಳ್ಳನೊಬ್ಬನು ಅದನ್ನು ಬಹಳ ಜಾಗರೂಕತೆಯಿಂದ ಅಪಹರಿಸಿದನೆಂದೂ, ತಿಳಿದುಬಂದಿದೆ. ಅದರ ಜೇಬಿನಲ್ಲಿ ಬಹಳ ಮುಖ್ಯವಾದ ಕಾಗದ ಪತ್ರಗಳಿದ್ದವೆಂದು ಹೇಳಲಾಗಿದೆ

## ೧ ಪಲ್ಲಾ ರಾಗಿಗೆ ೨ ಪಲ್ಲಾ ಭತ್ತ ಬೆಲೆಯಾಗಲಿ

ದುಡಿಯುವ ರೈತರ ಬಗ್ಗೆ ಸಹಾನುಭೂತಿಯಿಂದ ಸರಕಾರದವರು ಹಳ್ಳಿಗಳಲ್ಲಿ ೩ ಪಲ್ಲ ಭತ್ತವನ್ನು ರೈತರಿಂದ ತೆಗೆದುಕೊಂಡು ಒಂದು ಪಲ್ಲಾ ರಾಗಿ ಕೊಡುತ್ತಿರುವುದು ನ್ಯಾಯವೆಂಬುದೂ ಇದರಿಂದ ಹೆಚ್ಚು ಭತ್ತವನ್ನು ಸರಕಾರದವರು ಸಂಗ್ರಹಿಸಿದಂತಾಗುವುದಿಲ್ಲವೆಂದೂ, ಭತ್ತವೇ ಸರಕಾರಕ್ಕೆ ಹೆಚ್ಚಾಗಿ ಅವಶ್ಯಕವಾಗಿರುವುದರಿಂದ ೧ ಪಲ್ಲಾ ರಾಗಿಗೆ ೨ ಪಲ್ಲಾ ಭತ್ತ ತೆಗೆದುಕೊಳ್ಳುವುದಾಗಿ ಸರಕಾರದವರು ರೈತರಿಗೆ ತಿಳಿಸಬೇಕೆಂದೂ ಬನ್ನೂರಿನ ಶ್ರೀ ಕೊಡಗಹಳ್ಳಿ ರಾಮಸ್ವಾಮಿಯವರು ಬರೆಯುತ್ತಾರೆ

## ಭಾರತದಲ್ಲಿ ಜನನ ಪ್ರಮಾಣ ಇಳಿಮುಖ

ಭಾರತದಲ್ಲಿ ಜನನದ ಪ್ರಮಾಣ ಕಡಿಮೆಯಾಗುತ್ತಿರುವುದಾಗಿ ಆರೋಗ್ಯ ಮಂತ್ರಿ ಅಮೃತಕೌರರು ಕೇಂದ್ರ ಪಾರ್ಲಿಮೆಂಟಿನಲ್ಲಿ ತಿಳಿಸಿದರು


# ಗಾಯತ್ರೀ ಟಾಕೀಸ್

23-2-50 ರಿಂದ 3 ದಿನಗಳು ಮಾತ್ರ

ದಿನವಹಿ 2 ಪ್ರದರ್ಶನಗಳು

ಸಾಹಸ ಮತ್ತು ವಿಸ್ಮಯಕಾರಕ ದೃಶ್ಯ

ಗಳಿಂದ ಕೂಡಿದ ವರ್ಣರಂಜಿತ ಚಿತ್ರ

# ರೆಡ್ ಕೆನ್ಯಾನ್

RED CANYON

ಅದ್ಭುತ! ...


## ಬಲ್ಗೇರಿಯಾ - ಅಮೆರಿಕಾ ಸಂಬಂಧದ ರದ್ದು

ಅಮೆರಿಕಾ ರಾಯಭಾರಿಯನ್ನು ಬಲ್ಗೇರಿಯದಿಂದ ಹಿಂದಕ್ಕೆ ಕರೆಸುವ ಬಗ್ಗೆ ಅಲ್ಲಿನ ಸರಕಾರದವರು ತಮ್ಮ ಬೇಡಿಕೆಯನ್ನು ವಾಪಸು ತೆಗೆದುಕೊಳ್ಳದಿದ್ದರೆ ರಾಜತಾಂತ್ರಿಕ ಸಂಬಂಧವನ್ನು ರದ್ದುಗೊಳಿಸುವುದಾಗಿ ಅಮೆರಿಕವು ಬಲ್ಗೇರಿಯಕ್ಕೆ ತಿಳಿಸಿರುವುದು.

## ನೇಪಾಳದಲ್ಲಿ ಏಪ್ರಿಲ್‌ನಿಂದ ಸಾಮೂಹಿಕ ಚಳುವಳಿ

ನೇಪಾಳದಲ್ಲಿ ಜವಾಬ್ದಾರಿ ಸರಕಾರವನ್ನು ಗಳಿಸಿಕೊಳ್ಳುವ ಸಲುವಾಗಿ ಅಲ್ಲಿನ ಕಾಂಗ್ರೆಸ್ಸಿನವರು ಸಾಮೂಹಿಕ ಚಳುವಳಿಯನ್ನು ಬರುವ ಏಪ್ರಿಲ್ ೧ರಿಂದ ನಡೆಸಲು ಆಲೋಚಿಸುತ್ತಿರುವುದಾಗಿ ನೇಪಾಳ ಕಾಂಗ್ರೆಸ್ ಅಧ್ಯಕ್ಷರಾದ ಬಿ ಪಿ ಕೋಯಿರಾಲಾರವರು ಹೇಳಿದ್ದಾರೆ

## ಗೋವಿಂದಾಪ್ರಂ ಮೋಸದ ಪ್ರಕರಣ

ಶ್ರೀ ಸುಬ್ಬಣ್ಣನವರನ್ನು ಮೋಸಗೊಳಿಸಿದ ಫರೂಕಾಬಾದಿನ ಗೋವಿಂದಾಪ್ರಂ ಕಂಪೆನಿಯವರು ಮದ್ರಾಸಿನ ವರ್ತಕರಿಗೂ, ಬೆಂಗಳೂರು, ಮಧುರ, ತಿರುಚನಾಪಳ್ಳಿ ವರ್ತಕರಿಗೂ ಸುಮಾರು ೨ ಲಕ್ಷ ರೂ ಗಳವರೆಗೆ ಮೋಸ ಮಾಡಿರುತ್ತಾರೆಂದು ಹೇಳಲಾಗಿದೆ

### ವಿವಾಹ ಮಹೋತ್ಸವ

ಹುಣಸೂರಿನಲ್ಲಿರುವ ಶ್ಯಾನುಭೋಗ ಶ್ರೀ ಶೇಷಗಿರಯ್ಯನವರು ತಮ್ಮ ದ್ವಿತೀಯ ಕುಮಾರ ಶ್ರೀ ರಾಮಯ್ಯಂಗಾರವರ ಪುತ್ರಿ ಚಿ॥ಸೌ॥ ಜಯಲಕ್ಷಮ್ಮನನ್ನು ಮೈಸೂರು ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ಕೆ ವೆಂಕಟರಾಮಾವಧಾನಿಗಳ ತಮ್ಮಂದಿರು ಶ್ರೀ ಎಸ್ ರಾಮಸ್ವಾಮಿಯವರ ಕುಮಾರ ಶ್ರೀ ಆರ್ ಕೃಷ್ಣರವರಿಗೆ ಕೊಟ್ಟು ಕಳೆದ ಸೋಮವಾರ ಹುಣಸೂರಿನಲ್ಲಿ ವಿವಾಹವನ್ನು ನೆರವೇರಿಸಿದರು

## ಜಾವಾ ದಂಗೆಕೋರರ ಮುಖಂಡ ಸಿಂಗಪುರಕ್ಕೆ

ಇಂಡೋನೇಷ್ಯದ ರಿಪಬ್ಲಿಕ್ಕಿನ ಮೇಲೆ ಈಚೆಗೆ ನುಗ್ಗಿದ್ದ ಮಾಜಿ ಡಚ್ ಸೇನಾ ಪಟುವಾದ ವೆಸ್ಟರ್‌ಲಿಂಗ್ ಎಂಬುವನು ಜಾವಾದಿಂದ ಸಿಂಗಪುರಕ್ಕೆ ಆಗಮಿಸಿರುತ್ತಾನೆ. ಈತನು ಸಿಂಗಪುರಕ್ಕೆ ಬರಲು ರಹದಾರಿ ಸಿಕ್ಕದಿದ್ದರೂ ಸಹ, ಕಳ್ಳತನದಲ್ಲಿ ಬಂದಿರುವುದಾಗಿ ಹೇಳಲಾಗಿದೆ

## ರೇಷನ್ ಅಂಗಡಿಗಳಲ್ಲಿ ದವಸವೇ ಇಲ್ಲ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ರೇಷನ್ ಅಂಗಡಿಗಳಲ್ಲಿ ಆಹಾರ ಧಾನ್ಯಗಳೇ ದೊರೆಯದೆ, ರೇಷನ್ ಕಾರ್ಡು ಹೋಲ್ಡರುಗಳು ಅಂಗಡಿಗಳಿಗೆ ಬಂದು ಸುಮ್ಮನೆ ಹಿಂತಿರುಗುವರೆಂದು ವರದಿಯಾಗಿದೆ. ಅಲ್ಲಿನ ಆಹಾರ ಪರಿಸ್ಥಿತಿಯು ಬಹಳ ಕೆಟ್ಟಿದೆಯೆಂದು ಹೇಳಲಾಗಿದೆ

### ಕಿವುಡ ಮತ್ತು ಕುರುಡರ ಪಾಠಶಾಲಾ ಸಂಘ

ಮೈಸೂರು ಕಿವುಡ ಮತ್ತು ಕುರುಡ ಪಾಠಶಾಲೆಯ ಸಂಘದ ಆಶ್ರಯದಲ್ಲಿ ನೆನ್ನೆ ಶಾಲಾ ಆವರಣದಲ್ಲಿ ಆಸ್ಥಾನ ವಿದ್ವಾನ್ ಎಂ ಎಸ್ ಚಂದ್ರಶೇಖರಯ್ಯನವರ ಸಂಗೀತವು ಆ॥ ವಿ॥ ಎಚ್. ವಿ ರಾಮರಾಯರ ಪಿಟೀಲು ಮತ್ತು ಆ॥ ವಿ॥ ಟಿ ಕೆ ಪಯ್ಯಾಪುರಂ ವೆಂಕಟರಾಮನರ ಮೃದಂಗಗಳೊಡನೆ ಸುಶ್ರಾವ್ಯವಾಗಿ ನಡೆಯಿತು. ಈ ಸಂದರ್ಭದಲ್ಲಿ ನಗರದ ಅನೇಕ ಗಣ್ಯ ಮಹನೀಯರನ್ನು ಆಹ್ವಾನಿಸಲಾಗಿತ್ತು

### ಆಕಾಶವಾಣಿಯಲ್ಲಿ ಈ ರಾತ್ರಿ ವಿಶೇಷ ಕಾರ್ಯಕ್ರಮ

ಈ ರಾತ್ರಿ ೯-೩೦ರಿಂದ ೧೦ ಘಂಟೆವರೆಗೆ ಡಾ॥ ಎಂ ಎಸ್ ಸಿದ್ದಲಿಂಗಯ್ಯ, ಶ್ರೀಮತಿ ಬಿ ಇಂದಿರಮ್ಮ, ಶ್ರೀ ಎಸ್ ವಿ ಪರಮೇಶ್ವರಭಟ್ಟ, ಶ್ರೀ ಎಂ ಗೋಪಾಲಕೃಷ್ಣ ಅಡಿಗ ಮತ್ತು ಡಾ॥ ಎ ಎಂ ನಟೇಶ್ ಇವರುಗಳಿಂದ ಸಹ ವಿದ್ಯಾಭ್ಯಾಸದ ಬಗ್ಗೆ ವಾದವಿವಾದಗಳ ಪ್ರಸಾರ ಕಾರ್ಯಕ್ರಮವು ಆಕಾಶವಾಣಿಯಲ್ಲಿ ಏರ್ಪಾಡಾಗಿದೆ

## ಸರ್ ಜಫರುಲ್ಲಾರವರ ಪ್ರಾಣಾಪಹರಣ ಯತ್ನವೇ!

ಕಾಶ್ಮೀರದ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ಲೇಕ್‌ಸಕ್ಸಸ್ಸಿಗೆ ತೆರಳಿದ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಸರ್ ಮಹಮದ್ ಜಫರುಲ್ಲಾಖಾನರವರು ಯಾರಾದರೂ ತಮ್ಮ ಪ್ರಾಣಾಪಹರಣ ಮಾಡಲು ಪ್ರಯತ್ನಿಸಬಹುದೆಂಬ ಭೀತಿಯಿಂದ ಪೋಲೀಸ್ ರಕ್ಷಣೆ ಕೇಳಿರುವರು. ವಿಶ್ವಸಂಸ್ಥೆಯ ಅಮೆರಿಕದ ಪ್ರತಿನಿಧಿಗಳು ಜಫರುಲ್ಲಾರವರ ಪ್ರಾರ್ಥನೆಯನ್ನು ಸಮರ್ಥಿಸಿದ್ದಾರೆ

### ಕೇಂದ್ರದಿಂದ ೩೨ ಸಾವಿರ ಟನ್ ಹೆಚ್ಚು ಆಹಾರಕ್ಕಾಗಿ ಬೇಡಿಕೆ

ಸಂಸ್ಥಾನದ ಸರ್ಕಾರದವರು ಕೇಂದ್ರದಿಂದ ಹೆಚ್ಚಾಗಿ ೩೨ ಸಾವಿರ ಟನ್ ಆಹಾರ ಧಾನ್ಯವನ್ನು ಕೊಡಬೇಕೆಂದು ಬೇಡಿದ್ದಾರೆ. ಈಗ ೭೫ ಸಾವಿರ ಟನ್ ಕೇಂದ್ರದಿಂದ ಬರುವುದು. ಸಂಸ್ಥಾನದಲ್ಲಿ ಈವರೆಗೆ ೧೧॥ ಲಕ್ಷ ಪಲ್ಲ ಭತ್ತ, ೬೧ ಸಾವಿರ ಪಲ್ಲ ರಾಗಿ, ೨೨ ಸಾವಿರ ಪಲ್ಲ ಜೋಳ ಮತ್ತು ೧೫೦೦ ಪಲ್ಲ ಇತರ ಧಾನ್ಯಗಳ ಖರೀದಿಯಾಗಿದೆ

ಕ್ಯಾ ೨೭ ನೇ ತಾ॥ ಪುದುಚೇರಿಯಿಂದ ಹಿಂದಿರುಗಿ ಬಂದಮೇಲೆ ಮುಖ್ಯ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಮಾರನೆಯ ರಾಜಧಾನಿಗೆ ತೆರಳುವರೆಂದು ಗೊತ್ತಾಗಿದೆ


## ಒಮ್ಮೆ ಸಂದರ್ಶಿಸಿರಿ

ಹೊಸ ಸ್ಟಾಕು ಬಂದಿದೆ

ಎಲ್ಲಾ ತರಹದ ವಾಯಿಲ್ ಬಟ್ಟೆಗಳು ಊಲ್ಲನ್ ಮತ್ತು ಸಿಲ್ಕ್ ಬಟ್ಟೆಗಳು ಯಥೇಚ್ಛವಾಗಿ ಸುಲಭ ದರದಲ್ಲಿ ದೊರೆಯುವುವು.

ಒಳ್ಳೆ ಕೆಲಸದ ಟೈಲರುಗಳು ಬೇಕಾಗಿದೆ

# ಪಟ್ಟು ಬ್ರದರ್ಸ್

ಕ್ಲಾತ್ ಮರ್ಚೆಂಟ್ಸ್,

ಲೇಡೀಸ್ ಮತ್ತು ಜಂಟ್ಸ್ ಟೈಲರ್

ಟೌನ್‌ಹಾಲ್ ಎದುರು ಮೈಸೂರು

# ಪ್ರಭಾ ★ 24-2-50 ರಿಂದ

ದಿನವಹಿ 3 ಆಟಗಳು

ಮುರಾರಿ ಪಿಕ್ಚರ್ಸ್‌ರವರ ಅನುಪಮ ಐತಿಹಾಸಿಕ ಚಿತ್ರ

# * ಚಿತ್ತೂರ್ ವಿಜಯ *

(ಹಿಂದಿ)

† ಸುರೇಂದ್ರ † ರಾಜ್‌ಕಪೂರ್ † ಮಧುಬಾಲ † ಮೋತಿಲಾ ಮತ್ತು † ಪಾ ಸ್ಟಿ

# ಪ್ರಭುದೇವಾ ಟಾಕೀಸ್

24-2-50ನೇ ಶುಕ್ರವಾರದಿಂದ ಅನೋಖ್ಲಾ ೩ನೇ ವಾರ

ದಿನವಹಿ ಮೂರು ಪ್ರದರ್ಶನಗಳು

# ವಾಲಿ - ಸುಗ್ರೀವ

(ತೆಲುಗು)

ಪಾತ್ರ:- ಎಸ್. ವರಲಕ್ಷ್ಮಿ, ಜಿ. ವರಲಕ್ಷ್ಮಿ, ಸಿ. ಎಸ್. ಆರ್. ಆಂಜನೇಯುಲು, ಶ್ರೀರಂಜನಿ, ರೇಲಂಗಿ

# ರಾಜಕಮಲ

ಟಾಕೀಸ್

24-2-50 ರಿಂದ

ಜನಭರಿತವಾದ ೧೦ನೇ ವಾರ

ದಿನವಹಿ 2 ಪ್ರದರ್ಶನಗಳು

# ಜೀವನ

— : ಭೂಮಿಕೆ. —

ವೈಜಯಂತಿಮಾಲಾ, ಟಿ. ಆರ್ ರಾಮಚಂದ್ರನ್, ಲಲಿತ-ಪದ್ಮಿನಿ

Morning Shows

From 24-2-50 for 4 days

# That Brennan Girl

With.-Mona Freeman James Dunn & June Duprez


Edited, Printed and published by A. R. Nagarajan at Sadhvi Press, D Subbiah Road, Mysore

ರೋ॥ ನಂ 792 ವಂದೇ ಮಾತರಂ ಬಿಡಿಪ್ರತಿಕೆ ೩ ಕಾಸು

# ಸಾಧ್ವಿ

ಸಂಪುಟ [illegible] ಶುಕ್ರವಾರ [illegible] [ಸಂಚಿಕೆ [illegible]

# ಈಜಿಪ್ಟಿನ ಮಧ್ಯಸ್ಥಿಕೆಗೆ ಭಾರತದ ತಿರಸ್ಕಾರವೇ?

## ಮೈಸೂರು ಸರಕಾರಕ್ಕೆ ರೈಲ್ವೆ ನೌಕರರ ನೋಟೀಸು

ಮೈಸೂರು [illegible]

ಮೈಸೂರು ಸಂಸ್ಥಾನದ ರೈಲ್ವೆ ನೌಕರ [illegible] ಸಭೆ [illegible] ನಡೆದಾಗ ಇಲ್ಲಿನ [illegible] ನೋಟೀಸನ್ನು ಕೊ [illegible] ಸರಕಾರದವರು [illegible] ಒಡನೆ [illegible] ಇವನ್ನು [illegible] ಹೇಳಲಾಗಿದೆ

ಭಾರತದ ರೈಲ್ವೆಯು ನೌಕರರಿಗೆ ಕೊಡುವ ದರ್ಜೆ, ಸಂಬಳ, ಮುಂತಾದ [illegible] ಸೌಲಭ್ಯಗಳನ್ನು ಮೈಸೂರಿನ ನೌಕರರಿಗೂ ಕಲ್ಪಿಸಿಕೊಡಬೇಕೆಂದು [illegible] ಯಿತು

### ಮಧ್ಯಾಹ್ನದ ವೇಳೆ ನೀರು ಸರಬರಾಜು ಇಲ್ಲ

ರಾಜಧಾನಿಯ ಒಳ ನಗರ [illegible] ಪುರಗಳಿಗೆ ನೀರು ಸರಬರಾಜು ಮಾಡಲು ಸ್ವಲ್ಪ ತೊಂದರೆಯಿ [illegible] ರಕ್ಷಣೆ [illegible] ದಿನಾನದ [illegible] ಹಾಳಿ ದಿನವೂ [illegible] ಸರಬರಾಜು ಮಾಡ [illegible] ಇನ್ನು ಮುಂದೆ [illegible]

[illegible]

### [illegible] ಸಂಪಾದ ದಿನ [illegible]

[illegible]

### ಕಾಂಗ್ರೆಸ್ [illegible] ಚುನಾವಣೆ [illegible]

[illegible]

## ಎ. ಐ. ಸಿ. ಸಿ. ಮುಂದೆ ಹೋಯಿತು

ಸ್ವಂ ಸು ವೋ॥] [illegible]

ಎ ಐ ಸಿ ಸಿ ಸಭೆಯು [illegible] ನಲ್ಲಿ ಮುಂದಿನ [illegible] ದಿನಗಳಲ್ಲಿ ನಡೆಯ [illegible] ಶ್ರೀ ಟಿ ಸಿದ್ಧಲಿಂಗಯ್ಯನವರು [illegible] ಚುನಾವಣೆ [illegible] ಚುನಾವಣೆ ಈ ರೀತಿ [illegible]

ಶ್ರೀ [illegible] ರವರ [illegible] ಅಧ್ಯಕ್ಷ [illegible] ಹೇಳಲಾಗಿದೆ

### ಕೇಂದ್ರ ಸರಕಾರಕ್ಕೆ ಮಹಿಳೆಯರ ಪ್ರತಿಭಟನೆ

[illegible] ಕೇಂದ್ರ ಸರಕಾರದವರು [illegible] ಯೋಜನೆ [illegible]

[illegible]

## ಬ್ರಿಟನ್ನಿನ ಚುನಾವಣೆಯಲ್ಲಿ ಲೇಬರ್ ಪಕ್ಷಕ್ಕೆ ಜಯ

ನೆನ್ನೆ ದಿನ ಬ್ರಿಟನ್ನಿನ ಮಹಾಚುನಾವಣೆಯು ನಡೆಯಿತು ಲೇಬರ್ ಪಕ್ಷಕ್ಕೆ ಒಳ್ಳೆ [illegible] ಜಯ ಲಭಿಸುವ ಸೂಚನೆ ಗಳಿವೆ [illegible] ಮಂತ್ರಿ ಮಂಡಲದಲ್ಲಿ [illegible] ಮಿ॥ ಅಟ್ಲಿ, ಬೆವಿನ್, ಕ್ರಿಪ್ಸ್ ಮತ್ತಿ ತರರೂ [illegible] ನಂಬಿಕೆ ಇದೆ ಕನ್ಸರ್‌ವೇಟಿವ್ ಪಕ್ಷಕ್ಕೆ ಸ್ವಲ್ಪ [illegible] ಲಿಬರಲ್ ಪಕ್ಷಕ್ಕೆ [illegible] ಚುನಾವಣೆಯ [illegible] ಪರೀಕ್ಷಿಸಲಾಗಿದೆ

### ನೆಹರೂ ಸಲಹೆಯನ್ನು ಅಂಗೀಕರಿಸಬೇಕೆಂದು ಮುಸ್ಲಿಮರ ಒತ್ತಾಯ

[illegible] ಸ್ಥಾನದ ಪ್ರಧಾನಿ [illegible] ನೆಹರೂರವರು [illegible] ಪ್ರವಾಸ ಮಾಡಿ ಅಲ್ಲಿನ [illegible] ಸ್ಥಿತಿಯನ್ನು ಪರಿಶೀಲಿಸಬೇಕೆಂದು [illegible] ಅಂಗೀಕರಿಸಬೇಕೆಂದು. ಕಲ್ಕತ್ತದ ಮುಸ್ಲಿಂ [illegible] ಪಾಕಿಸ್ತಾನದ ಪ್ರಧಾನಿ ಲಿಯಾಕತ್ ಅಲಿಖಾನರಿಗೆ ತಂತಿ ಕೊಟ್ಟು [illegible] ಪಡಿಸಿದ್ದಾರೆ

### ಸಮಾರಂಭಗಳಲ್ಲಿ ಅಧಿಕಾರಿಗಳ [illegible]

[illegible] ಸಮಾರಂಭಗಳು [illegible] ಸಂಘಗಳಲ್ಲಿ ಅಧಿಕಾರಿಗಳ [illegible] ಸರಕಾರಿ ಪ್ರಕಟಣೆಯಾ [illegible]

[illegible]

## ಸಂಸ್ಥಾನದ ವೈದ್ಯರ ಸಮ್ಮೇಳನ

### ಡಾ॥ ನಾಗೇಂದ್ರರವರ ಭಾಷಣ

ಸ್ವಂ ಸು ವೋ॥] ಬೆಂಗಳೂರು [illegible]

ಈದಿನ ಪ್ರಾತಃಕಾಲ ಸಂಸ್ಥಾನದ ವೈದ್ಯರುಗಳ [illegible] ಸಮ್ಮೇಳನವು ಡಾ॥ ಆರ್. ನಾಗೇಂದ್ರರವರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ಟಿ ಸಿದ್ಧಲಿಂಗಯ್ಯ ಮತ್ತು [illegible] ಮುಂತಾದ [illegible] ಪ್ರಮುಖರು [illegible]

ಅಧ್ಯಕ್ಷರು ಸಂಸ್ಥಾನದ ವೈದ್ಯರುಗಳ ಸ್ಥಿತಿ ಗತಿಗಳ ಸಂಬಂಧವಾಗಿ ಸಿಂಹಾವಲೋಕನವನ್ನು ಮಾಡುತ್ತಾ ಭಾಷಣ ಮಾಡಿದರು. ಆಸ್ಪತ್ರೆ ಗಳಲ್ಲಿ ತಕ್ಕಷ್ಟು ಚಿಕಿತ್ಸಾ ಸಾಮಗ್ರಿ ಮತ್ತು ಸಾಧನಗಳು ಕಡಿಮೆಯಾಗಿವೆಯೆಂದೂ [illegible] ಸಂಬಳ [illegible] ಬಗ್ಗೆ [illegible] ಧಾರಣೆಯಾಗಿಲ್ಲವೆಂದೂ [illegible] ಸಂಸ್ಥಾನದಲ್ಲಿ [illegible] ಯುಕ್ತವು ಅಗತ್ಯವೆಂದೂ, ವೈದ್ಯರುಗಳು [illegible] ಸಗಿಯಾಗಿ ನಡೆಸುವ ಚಿಕಿತ್ಸಾ ವಿಧಾನಗಳನ್ನು [illegible] ಬಗ್ಗೆ [illegible] ಸೂಚಿಸಿದರು

### ಪಬ್ಲಿಕ್ ಸರ್ವೀಸ್ ಕಮಿಷನ್

ಪಬ್ಲಿಕ್ ಸರ್ವೀಸ್ ಕಮಿಷನ್ನಿನ ರಚನೆ ಸಂಬಂಧವಾಗಿ ಶ್ರೀ ಎ [illegible] ಬಂಡಿಗೌಡರು (ಸಕ್ಕರೆ ಕಂಪನಿ ಅಧ್ಯಕ್ಷರು) ಶ್ರೀ ಜಾರ್ಜ್ ಮ್ಯಾಥ್ಯು, ಶ್ರೀ [illegible] ಎಸ್ ರುದ್ರಪ್ಪ ಸದಸ್ಯರು ಇವರುಗಳ ಹೆಸರುಗಳು ಕೇಳಬರುತ್ತಿವೆ

○ ಮೈಸೂರು ಸಂಸ್ಥಾನದ ರೈಲು [illegible] ಬರುವ ಏಪ್ರಿಲ್ ತಿಂಗಳಿನಿಂದ ಕೇಂದ್ರಕ್ಕೆ ಸೇರುವ ಸಂದರ್ಭದಲ್ಲಿ ಸಂಸ್ಥಾನದ ೫೦೦ ಮಂದಿ ರೈಲ್ವೆ ನೌಕರರು ನಿವೃತ್ತರಾಗಲಿರುವರೆಂದು ವರದಿಯಾಗಿದೆ ಮೈಸೂರು ಮದರಾಸುಗಳಲ್ಲಿ ರೈಲ್ವೆ [illegible] ವೆಂದೂ ಹೇಳಲಾಗಿದೆ

○ ಇನ್ನು ಮುಂದೆ ಜಾತಿ, ಮತ, ವರ್ಗಭೇದಗಳನ್ನು ತೊಡೆದುಹಾಕಲು [illegible] ಪ್ರತಿನಿಧಿ ಸಭೆಯಲ್ಲಿ ನಿರ್ಣಯಿಸಲಾಗಿದೆ

1 ರೈಲ್ವೆ ಡಪ್ಯುಟಿ ಚೀಫ್ [illegible] ರಾದ ಶ್ರೀ ಬಿ ಎಂ ಕೃಷ್ಣರವರನ್ನು [illegible] ಯನ್ನಾಗಿ ನೇಮಿಸಲಾಗಿದೆ

### ಕಲ್ಕತ್ತದಲ್ಲಿ ರೈಲ್ವೆ ಇಂಜನ್ನುಗಳ ತಯಾರಿ

ಕಲ್ಕತ್ತಾ [illegible] ಚಿತ್ತರಂಜನ್ ಪ್ರದೇಶದಲ್ಲಿ [illegible] ವಿದೇಶದಿಂದ [illegible] ರೈಲ್ವೆ ಇಂಜನ್ನುಗಳ ಭಾಗಗಳನ್ನು ಜೋಡಿಸುವ ಕಾರ್ಖಾನೆಯನ್ನು ಸ್ಥಾಪಿಸಲಾಗಿದೆ [illegible] ವೇಳೆಗೆ ಆ ಕಾರ್ಖಾನೆ [illegible] ಇಂಜನ್ನುಗಳ ಎಲ್ಲಾ ಭಾಗವನ್ನೂ ತಯಾರಿಸಲಾಗುವುದೆಂದು ವರದಿಯಾಗಿದೆ

### ಈಜಿಪ್ಟ್ ಮಧ್ಯಸ್ಥಿಕೆಗೆ ತಿರಸ್ಕಾರ

ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಈಜಿಪ್ಟ್ ಮುಂದೆ ಬಂದು ಮಧ್ಯಸ್ಥಿಕೆ ವಹಿಸುವುದಾಗಿ ಹೇಳಿರುವುದನ್ನು ಭಾರತವು ಅಂಗೀಕರಿಸಲಾರದೆಂದು ಹೇಳಲಾ [illegible] ನಡೆಯುತ್ತಿರುವ [illegible] ಫಲಿತಾಂಶವು ಹೊರಬಿದ್ದನಂತರ ಭಾರತವು ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸುವುದೆಂದು [illegible] ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಈಜಿಪ್ಟ್ ಮಧ್ಯಸ್ಥಿಕೆವಹಿಸಬೇಕೆಂದು [illegible] ಪಾಕಿಸ್ತಾನವು ಕೋರಿದಿ [illegible] ವರದಿಯಾಗಿದೆ

## ನೆಹರೂ ಸೂಚನೆಗೆ ಲಿಯಾಖತ್ತರ ನಿರಾಕರಣೆ

ಪೂರ್ವ ಮತ್ತು ಪಶ್ಚಿಮ ಬಂಗಾಳಗಳಲ್ಲಿರುವ ಪರಿಸ್ಥಿತಿಯನ್ನು ಪಾಕಿಸ್ತಾನ ಮತ್ತು ಭಾರತದ ಪ್ರಧಾನಿಗಳು ಒಟ್ಟಿಗೆ ಪರಿಶೀಲಿಸಬೇಕೆಂದು ಭಾರತದ ಪ್ರಧಾನಿಯವರು ಲಿಯಾಖತ್ ಅಲಿಖಾನರಿಗೆ ಸಲಹೆ ಮಾಡಿರುತ್ತಾರೆ. ಪಾಕಿಸ್ತಾನದ ಪ್ರಧಾನಿಯವರು ಈ ಸಲಹೆಯನ್ನು ನಿರಾಕರಿಸಿ, ಇದರಿಂದೇನೂ ಪ್ರಯೋಜನವಾಗುವುದಿಲ್ಲವೆಂದೂ, ಶಾಂತಿ ಸ್ಥಾಪನೆ ಬಗ್ಗೆ ಉಭಯತ್ರರೂ ಜಂಟಿ ಮನವಿ ಹೊರಡಿಸುವುದು ಸೂಕ್ತವಾಗಿರುವುದಾಗಿಯೂ ತಿಳಿಸಿದ್ದಾರೆ.

## ಮದ್ರಾಸ್ ಕೋಮುವಾರು ನೀತಿ ಬಗ್ಗೆ ರಾಷ್ಟ್ರಾಧ್ಯಕ್ಷರಿಗೆ ದೂರು

ಮದರಾಸ್ ಸರ್ಕಾರದವರು ಕೋಮುವಾರು ಪ್ರಾತಿನಿಧ್ಯದ ಆಧಾರದ ಮೇಲೆ ಸರ್ಕಾರಿ ಕೆಲಸಕ್ಕೆ ನೌಕರರನ್ನು ತೆಗೆದುಕೊಳ್ಳುತ್ತಿರುವುದನ್ನು ಪ್ರತಿಭಟಿಸಿ, ಸೇಲಮ್ಮಿನ ಬ್ರಾಹ್ಮಣ ಸೇವಾ ಸಂಘದವರು ಇಲ್ಲಿನ ಶ್ರೇಷ್ಠ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು. ಆ ಪತ್ರಕ್ಕೆ ಇನ್ನೂ ಜವಾಬು ಬರದಿದ್ದುದರಿಂದ, ಈ ಬಗ್ಗೆ ಭಾರತದ ಅಧ್ಯಕ್ಷರಿಗೆ ಒಂದು ಮನವಿಯನ್ನು ಸಲ್ಲಿಸಿ, ಭಾರತದ ಹೊಸ ರಾಜ್ಯಾಂಗಕ್ಕೆ ವಿರುದ್ಧವಾಗಿ ಮದರಾಸಿನಲ್ಲಿ ಜಾರಿಯಲ್ಲಿರುವ ಕೋಮುವಾರು ಪ್ರಾತಿನಿಧ್ಯದ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಸದರಿ ಸಂಘದವರು ಕೋರಿದ್ದಾರೆ.

## ಪಾಕಿಸ್ತಾನಿಗಳಿಗೂ, ಪಠಾಣರಿಗೂ ಘರ್ಷಣೆ

ಆಫ್ಘಾನಿಸ್ಥಾನದ ಹತ್ತಿರ ಬಿ.ಬಿ. ಕೋಟೆಯ ಮೇಲೆ ಪಾಕಿಸ್ತಾನ್ ಸರ್ಕಾರದವರ ತಮ್ಮ ಗಡಿ ನಿಬಂಧನೆಯನ್ನು ಹಾಕಿದುದರಿಂದ ಅಲ್ಲಿನ ಪಠಾಣರಿಗೂ ಪಾಕಿಸ್ತಾನದ ಸೈನಿಕರಿಗೂ, ಘರ್ಷಣೆಯಾಗಿ ಹಲವು ಪಾಕಿಸ್ತಾನದ ವಿಮಾನಗಳನ್ನು ಹಿಂದಕ್ಕೆ ಓಡಿಸಲಾಯಿತು. ದಾವಾರ್ ಎಂಬ ಗಡ್ಡಗಾಡು ಜನರ ನಾಯಕನನ್ನೂ ಮತ್ತು ಇತರರನ್ನೂ ಪಾಕಿಸ್ತಾನದವರು ಬಂಧಿಸಿದ್ದಾರೆ.

## ಪೂ|| ಬಂಗಾಳದಲ್ಲಿ ಹೈಕಮೀಷನರ ಪರಿಶೀಲನೆ

ಪೂರ್ವ ಬಂಗಾಳದ ಪರಿಸ್ಥಿತಿಯನ್ನು ಭಾರತದ ಹೈಕಮೀಷನರ್ ಪರಿಶೀಲಿಸುತ್ತಿರುವರು. ಕಂಡುಬರಲು ಢಕ್ಕಾಕ್ಕೆ ಹೋಗಿದ್ದಾರೆ. ಅಲ್ಲಿ ಅವರು ಪೂ|| ಬಂಗಾಳದ ಗೌರ್ನರ್ ಮತ್ತು ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಅವರ ಸಹಾಯಕ್ಕಾಗಿ ಪಶ್ಚಿಮ ಬಂಗಾಳ ಸರ್ಕಾರದವರು ಇಬ್ಬರು ಅಧಿಕಾರಿಗಳನ್ನು ನೇಮಿಸಿದ್ದಾರೆ.

## ಬ್ರಿಟಿಷ್ ಚುನಾವಣೆಯಲ್ಲಿ ಮಂತ್ರಿಮಂಡಲದ ಶಂಕೆ

ಬ್ರಿಟನ್ನಿನ [illegible] ಪಕ್ಷಗಳ ಸಂಖ್ಯಾ [illegible] ಪಕ್ಷಗಳ [illegible] ಹೇಳುವ [illegible] ಫಲಿತಾಂಶವನ್ನು [illegible] ಬಗ್ಗೆ [illegible] ಮತ್ತೆ ಒಂದೇ ಎಲ್ಲ [illegible]

## ಚಿಯಾಂಗರು ಪುನಃ ಅಧಿಕಾರ ಪಟ್ಟಕ್ಕೆ?

ರಾಷ್ಟ್ರೀಯ ಚೀಣದ ಮುಖಂಡತ್ವಕ್ಕೆ ಜ|| ಚಿಯಾಂಗ್ ಕೈಷೇಕರು ಬರಬಹುದೆಂದೂ, ಚೀಣದ ಮುಖ್ಯ ನಾಡಿನ ಮೇಲೆ ಮರು ಧಾಳಿಯನ್ನು ಮಾಡಲು ಪ್ರಮುಖ ಪಾತ್ರವನ್ನು ವಹಿಸಬಹುದೆಂದೂ, ಹೇಳಲಾಗಿದೆ. ಫಾರ್ಮೋಸಾದ ಚಿಯಾಂಗರ ಧಾಳಿ ನಡೆಸುವುದಾಗಿ ನವ ಚೀಣದ ಕ್ಯಾಂಟನ್ ನಗರದ ಮೇಲೆ ವಿಮಾನದ ಮೂಲಕ ಪತ್ರಿಕೆಗಳನ್ನು ಚೆಲ್ಲಲಾಯಿತು.

## ಎಲ್ಲ ಹೈಕೋರ್ಟುಗಳಿಗೂ ಒಂದೇ ರೀತಿಯ ಮುದ್ರೆ

ಭಾರತದ ಎಲ್ಲ ಹೈಕೋರ್ಟುಗಳಲ್ಲೂ ಒಂದೇ ವಿಧವಾದ ಮುದ್ರೆಯನ್ನು ಉಪಯೋಗಿಸಬೇಕೆಂದು, ಸರ್ದಾರ್ ವಲ್ಲಭಭಾಯಿ ಪಟೇಲರು ಕೇಂದ್ರ ಪಾರ್ಲಿಮೆಂಟಿನಲ್ಲಿ ತಂದ ಸಲಹೆಯು ಅಂಗೀಕಾರವಾಯಿತು. ಆ ಮುದ್ರೆಯಲ್ಲಿ ಅಶೋಕ ಸ್ತಂಭ, ಮತ್ತು "ಸತ್ಯಮೇವ ಜಯತೆ" ಎಂಬ ಧ್ಯೇಯ ಮಂತ್ರಗಳನ್ನು ಕೆತ್ತಲಾಗಿರುವದು.

## ಅಣು ಶಸ್ತ್ರಗಳ ಹತೋಟಿಗೆ ಟ್ರೂಮನ್ನರ ಷರತ್ತು

ಅಂತರರಾಷ್ಟ್ರೀಯ ಪರಿಶೀಲನೆಗೆ ಅವಕಾಶವಿಂದ ಅಣು ಶಸ್ತ್ರಗಳ ಹತೋಟಿಯ ಪದ್ಧತಿಯು ಒಂದು ತಪಾಸಣೆಯು ಒಪ್ಪಂದವಾಗುವುದೆಂದು ಅಮೆರಿಕದ ಅಧ್ಯಕ್ಷ ಟ್ರೂಮನ್ನರು ಹೇಳಿದ್ದಾರೆ. ರಷ್ಯವು ಅಂತರರಾಷ್ಟ್ರೀಯ ಪರಿಶೀಲನೆಯನ್ನು ನಿರಾಕರಿಸಿದೆಯೆಂದು ಅವರು ತಿಳಿಸಿದ್ದಾರೆ. ಅದಕ್ಕಿಂತಲೂ ಕಠಿಣವಾದ ಪರಿಸ್ಥಿತಿ ಹಾಕುವುದಾದರೆ ಜಲಜನಕ ಶಸ್ತ್ರದಿಂದ ಉತ್ಪನ್ನವಾದ ವಿಘಾತದ ಬುದ್ಧಿಸ್ಫೋಟ ಇನ್ನೂ ಹೆಚ್ಚುವುದೇ ಹೊರತು ಕಡಿಮೆಯಾಗಲಾರದೆಂದು ಅವರು ಅಭಿಪ್ರಾಯಪಟ್ಟರು.

## ಹೈದರಾಬಾದಿನಲ್ಲಿ ಹರತಾಳ

ಬಾಬು ಶರತ್ ಚಂದ್ರಬೋಸರ ನಿಧನಕ್ಕೆ ಸಂತಾಪಸೂಚಿಸಲು ಹೈದರಾಬಾದಿನಲ್ಲಿ ನೆನ್ನೆ ಸಂಪೂರ್ಣ ಹರತಾಳವನ್ನಾಚರಿಸಲಾಯಿತು.

## ೧೧೧ ತಿರುವಾಂಕೂರು ಅಧಿಕಾರಿಗಳ ನಿವೃತ್ತಿ

೫೫ ವರ್ಷ ವಯಸ್ಸು ಆದ ೧೧೧ ಜನ ಗೆಜೆಟೆಡ್ ಅಧಿಕಾರಿಗಳನ್ನು ತಿರುವಾಂಕೂರು–ಕೊಚ್ಚಿಯಲ್ಲಿ ನಿವೃತ್ತಿ ಮಾಡಲಾಗಿದೆ. ಇವರುಗಳು ೫೫ ವಯಸ್ಸಾಗಿರುವುದೇ ನಿವೃತ್ತಿಗೆ ಕಾರಣ


S. S. L. C. EXAM
Papers 1940-49
(with illustrations)
1. General Science (English) 1-8-0
2. Optional Algebra (Kannada English) 1-0-0
by
C. S. Vijayaraghavachar
[illegible]
Vijaya Industries,
or Book Sellers.


## ಈಜಿಪ್ಟ್ ಅರಸರ ಪ್ರಣಯ ಪ್ರಸಂಗದ ಬಗ್ಗೆ ಪ್ರತಿಭಟನೆ

ಈಜಿಪ್ಟಿನ ಅರಸರಾದ ಫರೂಕರು ಇತ್ತೀಚೆಗೆ ನರಿಮನ್ ಸಾದೆಕ್ ಎಂಬ ವಿವಾಹವಾಗಲಿದ್ದ ತರುಣಿಯನ್ನು ನೋಡಿ, [illegible] ಸ್ತ್ರೀಯನ್ನು ನೌಕರನಾಗಿದ್ದ ಜಾಕಿ ಹಾಸಿನ್ ಎಂಬ ತರುಣನಿಗೂ ನಡೆಯಬೇಕಾಗಿದ್ದ ವಿವಾಹಕ್ಕೆ ಅಡ್ಡಿ ಬಂದ ಸಂದರ್ಭದಲ್ಲಿ ಸ್ವಿಟ್ಸರ್ಲೆಂಡಿನ ಪತ್ರಿಕೆಗಳು ಮನಸ್ವಿ ದೊರೆಗಳನ್ನು ಟೀಕಿಸಿ ಬರೆದುದನ್ನು ಕುರಿತು ಸ್ವಿಟ್ಸರ್ಲೆಂಡಿನಲ್ಲಿರುವ ಈಜಿಪ್ಟಿನ ರಾಯಭಾರಿಯು ಅಲ್ಲಿನ ಸರಕಾರಕ್ಕೆ ಪ್ರತಿಭಟನೆಯನ್ನು ಮಾಡಿದ್ದಾರೆ.

## ಮಲಯದ ದ್ವಿತೀಯ ಡಕಾಯಿತನ ದಸ್ತಗಿರಿ

ಮಲಯದ ಎರಡನೆ ಡಕಾಯಿತನೆಂದು ಪ್ರಸಿದ್ಧನಾದ [illegible] ಎಂಬುವನು ಹನ್ನೊಂದು ದಿನಗಳ ಕಾಲ ಅನ್ನಾಹಾರವಿಲ್ಲದೆ ಕಾಡುಗಳಲ್ಲಿ ಅಲೆದು ಕೊನೆಗೆ ಅಧಿಕಾರಿಗಳ ವಶನಾದನು. ಈತನನ್ನು ಹಿಡಿದವರಿಗೆ ೫ ಸಾವಿರ ಡಾಲರ್ ಬಹುಮಾನ ಕೊಡುವುದಾಗಿ ತಿಳಿಸಲಾಗಿತ್ತು.

### ಇನಾಂತಿಗಳ ರದ್ದಿಗೆ ವಿರೋಧ

ಸಂಸ್ಥಾನದ ಭೂಕಂದಾಯದ ಪುನರ್ವಿಮರ್ಶೆಗಾಗಿ ನೇಮಿತವಾದ ಸಮಿತಿಯವರು ಸಂಸ್ಥಾನದ ನಾನಾ ಇನಾಮುಗಳನ್ನು ರದ್ದು ಮಾಡಬೇಕೆಂದು ಮಾಡಿರುವ ಶಿಫಾರಸ್ಸನ್ನು ನೆನ್ನೆ ದಿನ ಇಲ್ಲಿನ ಮೈಸೂರು ಇನಾಂದಾರರ ಸಂಘದ ಸಭೆಯಲ್ಲಿ ವಿರೋಧಿಸಿ ನಿರ್ಣಯ ಮಾಡಲಾಯಿತು. [illegible] ಹಲವರನ್ನು ಮಾತ್ರ ಪ್ರತ್ಯೇಕಿಸಿ ಅವರ ಮೇಲೆ ಕಾರ್ಯಕ್ರಮ ಕೈಗೊಳ್ಳುವುದು ಅನ್ಯಾಯ ವೆಂದು ತಿಳಿಸಲಾಯಿತು. [illegible] ಗುತ್ತಿಗಳಿಗೆ ಕೊಡಲಾಗಿರುವ ಇನಾಂದಾರರುಗಳ ಸ್ವಂತ ಜಮೀನುಗಳನ್ನು [illegible] ರೈತರ ಪಕ್ಷಕ್ಕೆ ಸೇರಿಸಬೇಕೆಂದು ಪ್ರಾರ್ಥಿಸಲಾಯಿತು.

### ರಹದಾರಿಯಿಲ್ಲದೆ ಸಾಗುತ್ತಿದ್ದ ಸಕ್ಕರೆ ಪತ್ತೆ

ನಾಲ್ಕು ಸಾಬೂನು ಪೆಟ್ಟಿಗೆಗಳಲ್ಲಿ ತುಂಬಲಾಗಿದ್ದ ಸಕ್ಕರೆಯನ್ನು ನೆನ್ನೆ ಪ್ರಾತಃಕಾಲ [illegible] ಮೋಟಾರು ಬಸ್ಸಿನಲ್ಲಿ [illegible] ಎಂಬುವನು ರಹದಾರಿಯಿಲ್ಲದೆ ಸಾಗಿಸಲು ಪ್ರಯತ್ನಿಸುತ್ತಿದ್ದನ್ನು [illegible] ಮಾರ್ಕೆಟ್ ಪಾರ್ಟಿಯ ಶ್ರೀ ಇ|| ಕಾರಿಯಪ್ಪನವರು ಪತ್ತೆ ಹಚ್ಚಿ ಆಪಾದಿತನನ್ನು ಮಾಲು ಸಮೇತ ಹಿಡಿದಿರುತ್ತಾರೆ. ತನಿಖೆ ನಡೆಯುತ್ತಿದೆ


ಒಮ್ಮೆ ಸಂದರ್ಶಿಸಿರಿ
ಹೊಸ ಸ್ಟಾಕು ಬಂದಿದೆ
ಎಲ್ಲಾ ತರಹದ [illegible] ಬಟ್ಟೆಗಳು, [illegible] ದರದಲ್ಲಿ ದೊರೆಯುತ್ತವೆ. [illegible]
[illegible]


## ಅಸ್ಮಾರಾ ಗಲಭೆಯಲ್ಲಿ ೪೧ ಮಂದಿಯ ಮರಣ

ಎಂಟ್ರಿಯಾದ ರಾಜಧಾನಿ ಅಸ್ಮಾರಾದಲ್ಲಿ ಕಳೆದ ನಾಲ್ಕುದಿನಗಳಿಂದಲೂ ಗಲಭೆ ನಡೆಯುತ್ತಲೇ ಇದೆ. ನೆನ್ನೆ ದಿನ ಗಲಭೆಯನ್ನು ಹತೋಟಿಗೆ ತರುವ ಸಲುವಾಗಿ ಮತ್ತು ಗುಂಡು ಹಾರಿಸಲಾಯಿತು. ೩ ಜನರು ಸತ್ತರು. ಅನೇಕರಿಗೆ ಗಾಯಗಳಾಗಿವೆ. ಕಳೆದ ನಾಲ್ಕು ದಿನಗಳಿಂದ ಮರಣಗೊಂಡವರ ಸಂಖ್ಯೆ ಒಟ್ಟು ೪೧ ಮತ್ತು ಗಾಯಗೊಂಡವರ ಸಂಖ್ಯೆ ೧೩೦ ಎಂದು ಗೊತ್ತಾಗಿದೆ

### ಹಿಂದೀ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದಿ ವಿಶಾರದ ಮತ್ತು ಪ್ರವೇಶಿಕಾ ಪರೀಕ್ಷೆಗಳು ಬನುಮಯ್ಯನವರ ಹೈಸ್ಕೂಲಿನಲ್ಲಿ ಇದೇ [illegible] ೨೫ನೇ ಶನಿವಾರ ಬೆಳಗ್ಗೆ ೧೦-೩೦ ಘಂಟೆಗೂ, ೨೬ನೇ ತಾರೀಕು ಬೆಳಗ್ಗೆ ೧೦-೩೦ ಗಂಟೆಗೆ ಪ್ರಾಥಮ, ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳೂ ನಡೆಯುವುವು. ಪುರುಷರಿಗೆ ಮಾತ್ರ ಪ್ರಾಥಮಿಕ ಪರೀಕ್ಷೆಯು ದಳವಾಯಿ ಹೈಸ್ಕೂಲಿನಲ್ಲಿ ನಡೆಯುತ್ತದೆ—ಎಂದು ಗೌ|| ಸಂಚಾಲಕರಾದ ವಿ. ಕೃ ರಾಜಗೋಪಾಲರವರು ತಿಳಿಸಿದ್ದಾರೆ. ಪ್ರವೇಶ ಪತ್ರಗಳನ್ನು ಸಭಾ ಕಾರ್ಯಾಲಯದಲ್ಲಿ ಸಂಜೆ ೫ರಿಂದ ೭ರವರೆಗೆ ಪಡೆಯಬಹುದು.


ಸಿಟಿ ಆಕ್ಷನೀರಿಂಗ್ ಕೊ.,
ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು
26-2-50ನೇ ಭಾನುವಾರ ಬೆಳಿಗ್ಗೆ
ಹರಾಜು
H M V. ಗ್ರಾಮಾಫೋನ್
(ಟೇಬಲ್ ಗ್ರಾಂಡ್)
ಬೆಂಚ್ ಶೀಟು, ಬೆಂಚುಗಳು, ಹಳೇ ಸೋಫಾ [illegible] ಸಾಮಾನುಗಳು
Terms:-Spot Cash

|| ಶ್ರೀ ||
ಗಣೇಶಾ ಟಾಕೀಸ್
25-2-50 ರಿಂದ ಪ್ರಾರಂಭ
ದಿನವೂ 3 ಪ್ರದರ್ಶನಗಳು
ಮಂಗಯಾರ್ ಕರಸಿ
(ತಮಿಳು)
ಭೂಮಿಕೆ:– ಕನ್ನಾಂಬ, ಅಂಜಲೀದೇವಿ, ಚಿನ್ನಪ್ಪ, ದೊರೆರಾಜ್, ಕೃಷ್ಣನ್, ಮಧುರಂ, ಲಲಿತಾಪದ್ಮಿನಿ

Morning Shows at
CHAMUNDESWARI
TALKIES
From 24-2-50 For 3 days
Paramount Picture's most Comedious Picture ever screened
ROAD TO RIO
(ರೋಡ್ ಟು ರಿಯೊ)
With - Bob Hope, Bing Crosby, Dorothy Lamour.

ರೀ ನಂ. 792 ॥ಸಂಚಿಕೆ · ಮೂರಾಣೆ॥ ಬಿಡಿಪ್ರತಿ ೬ ಕಾಸು

ಸಾಧ್ವಿ

ಸಂಪುಟ ೮] ಶನಿವಾರ ೨೫-೨-೫೦ [ಸಂಚಿಕೆ ೧೭೭

# ಆಲ್ಬಿಯನ್ ಬ್ಯಾನರ್ಜಿ ಮರಣ ಹೊಂದಿದರು

## ಅತ್ಯಲ್ಪ ಬಹುಮತದಿಂದ ಲೇಬರ್ ಪಕ್ಷಕ್ಕೆ ಜಯ

ಬ್ರಿಟನ್ನಿನಲ್ಲಿ ಚುನಾವಣೆಗಳು ನಡೆದು ಕಾರ್ಮಿಕ ಪಂಗಡಕ್ಕೆ ೩೧೮ ಸ್ಥಾನಗಳೂ, ಕನ್ಸರ್ವೇಟಿವ್ ಪಂಗಡಕ್ಕೆ ೨೯೮ ಸ್ಥಾನಗಳೂ, ಲಿಬರಲ್ ಪಂಗಡಕ್ಕೆ ೮ ಸ್ಥಾನಗಳೂ ದೊರೆತಿವೆ. ೩೪೦ ಮಂದಿ ಉಮೇದುವಾರರು ಠೇವಣಿ ಕಳೆದುಕೊಂಡಿರುವರು. ಚುನಾವಣೆಗೆ ನಿಂತಿದ್ದ ಇಬ್ಬರು ಭಾರತೀಯ ಉಮೇದುವಾರರು ಪರಾಜಿತರಾದರು. ಕಾರ್ಮಿಕ ಪಂಗಡಕ್ಕೆ ೧೩ ಕೋಟಿ ಜನರೂ, ಕನ್ಸರ್ವೇಟಿವ್ ಪಂಗಡಕ್ಕೆ ೧.೧೫ ಕೋಟಿ ಜನರೂ, ಲಿಬರಲ್ ಪಂಗಡಕ್ಕೆ ೨೫ ಲಕ್ಷ ಜನರೂ ಓಟು ಮಾಡಿದರು. ೨೭ ಜನ ಜೂನಿಯರ್ ಮಂತ್ರಿಗಳೂ ೧೩ ಜನ ಮಹಿಳೆಯರೂ ಚುನಾಯಿತರಾಗಿದ್ದಾರೆ. ಕಮ್ಯೂನಿಷ್ಟರೆಲ್ಲರೂ ಪರಾಜಿತರಾಗಿದ್ದಾರೆ. ಇಷ್ಟು ಅತ್ಯಲ್ಪ ಬಹುಮತದಿಂದ ಲೇಬರ್ ಪಕ್ಷವು ವಿಜಯವನ್ನು ಹೊಂದಿರುವುದು ಈ ಶತಮಾನದಲ್ಲಿ ಇದೇ ಮೊದಲನೇ ಬಾರಿಯೆಂದು ಹೇಳಲಾಗಿದೆ

## ಪಂಜಾಬಿನ ೮೦೦ ಮಂದಿ ಉಪಾಧ್ಯಾಯರ ಮುಷ್ಕರ

ಹೆಚ್ಚಿನ ಸಂಬಳ ಕೊಡಲು ನಿರಾಕರಿಸಿದುದರಿಂದ ಪಂಜಾಬಿನ ೮೦೦ ಮಂದಿ ಉಪಾಧ್ಯಾಯರುಗಳು ಬರುವ ತಿಂಗಳು ೨೧ ರಿಂದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ. ಮಾರ್ಚ್ ತಿಂಗಳು ೧೯ರ ಒಳಗೆ ಈ ಬೇಡಿಕೆಯನ್ನು ಸಲ್ಲಿಸದಿದ್ದರೆ, ಉಪಾಧ್ಯಾಯರುಗಳ ಸಂಘದ ಅಧ್ಯಕ್ಷ ಸರ್ದಾರ್ ಸಿಂಗರು ಸಿಮ್ಲಾದಲ್ಲಿರುವ ಪಂಜಾಬು ಶಾಸನ ಸಭೆಯ ಮುಂದಿನ ಎದುರಿನಲ್ಲಿ ಆಮರಣಾಂತ ಉಪವಾಸವನ್ನು ಕೈಗೊಳ್ಳಬೇಕೆಂದೂ, ಅವರಿಗೆ ಸಮಾನ ಭೂತಿ ತೋರಿಸಲು ೪ ಜನರ ಒಂದೊಂದು ಉಪಾಧ್ಯಾಯರ ತಂಡವು ೨೪ ಗಂಟೆಗಳ ಕಾಲ ಉಪವಾಸವನ್ನು ಕೈಗೊಳ್ಳತಕ್ಕದ್ದೆಂದೂ ನಿರ್ಧರವಾಯಿತು

## ಸಾರ್ವಜನಿಕ ರಕ್ಷಣಾ ಶಾಸನದ ಪ್ರತಿಭಟನೆಗೆ ಪ್ರದರ್ಶನ

ಬೊಂಬಾಯಿಯಲ್ಲಿ ಜಾರಿಯಲ್ಲಿರುವ ಸಾರ್ವಜನಿಕ ರಕ್ಷಣಾ ಶಾಸನದ ಅವಧಿಯನ್ನು ಮತ್ತೆ ಮೂರು ವರ್ಷ ಹೆಚ್ಚಿಸಿ ಅಲ್ಲಿನ ಸರ್ಕಾರದವರು ಶಾಸನ ಸಭೆಯಲ್ಲಿ ಒಂದು ಮಸೂದೆಯನ್ನು ತಂದಿದ್ದಾರೆ ಸಭೆಯ ವಿರೋಧ ಪಕ್ಷದವರು ಮಸೂದೆಯ ಬಗ್ಗೆ ಮಾತನಾಡಿ ಇಂತಹ ಶಾಸನದಿಂದ ಸರ್ಕಾರದವರು ನಾಗರಿಕ ಸ್ವಾತಂತ್ರ್ಯಗಳನ್ನು ತುಳಿಯಲು ಯತ್ನಿಸುತ್ತಿರುವರೆಂದು ಟೀಕಿಸಿದರು. ಸಾರ್ವಜನಿಕ ರಕ್ಷಣಾ ಶಾಸನವನ್ನು ರದ್ದುಗೊಳಿಸಬೇಕೆಂಬ ಬಗ್ಗೆ ಅಲ್ಲಿನ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು.

## ದರೋಡೆಕೋರರು [illegible] ಜೀವಂತ ಸುಟ್ಟರು

ಜೋಧಪುರ ಡಿವಿಜನ್ನಿನ ಬಲುಂದಾದ ದರೋಡೆಕೋರರ ತಂಡವೊಂದು ಒಬ್ಬನನ್ನು ಜೀವಸಹಿತ ನಿಷ್ಕರುಣೆಯಿಂದ ಸುಟ್ಟು, ಸುಮಾರು ೫೦ ಸಾವಿರ ಬೆಲೆಯ ಆಸ್ತಿಪಾಸ್ತಿಯನ್ನೂ ಅಪಹರಿಸಿರುವರೆಂದು ವರದಿಯಾಗಿದೆ.

ಬೆಂಗಳೂರಿನಲ್ಲಿರುವ ವಿಮಾನ ಶಿಕ್ಷಣಾಲಯದವರು

## ಕಲ್ಕತ್ತಾಕ್ಕೆ ನೆಹರೂ ಭೇಟಿ

ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂರವರು ಬರುವ ವಾರ ಕಲ್ಕತ್ತಾಕ್ಕೆ ತೆರಳಿ ಅಲ್ಲಿನ ಪರಿಸ್ಥಿತಿಯನ್ನು ಸ್ವತಃ ಪರಿಶೀಲಿಸುವ ಉದ್ದೇಶದಿಂದ ಮೂರು ದಿವಸಗಳ ಪ್ರವಾಸ ಕಾರ್ಯವನ್ನು ಇಟ್ಟುಕೊಂಡಿರುವರೆಂದು ಗೊತ್ತಾಗಿದೆ

## ಬಿ. ಜಿ. ಖೇರರಿಂದ ೧ ವರ್ಷದ ರೇಷನ್ ತ್ಯಾಗ

ಆಹಾರ ಧಾನ್ಯದ ಉಳಿತಾಯಕ್ಕೆ ಸಹಾಯ ಮಾಡುವ ಉದ್ದೇಶದಿಂದ ಬೊಂಬಾಯಿನ ಮುಖ್ಯ ಮಂತ್ರಿ ಶ್ರೀ ಬಿ ಜಿ. ಖೇರರು ತಮ್ಮ ಒಂದು ವರ್ಷದ ರೇಷನ್ನನ್ನು ಸರ್ಕಾರಕ್ಕೆ ಒಪ್ಪಿಸಿರುವರು.

## ಸೋಮನಾಥದೇವಾಲಯದ ಪುನಃಸ್ಥಾಪನೆ

ಪ್ರಾಚೀನಕಾಲದ ಸೋಮನಾಥ ದೇವಾಲಯದ ಪುನರುತ್ಥಾನದ ಬಗ್ಗೆ ೯ ಅಡಿ ಎತ್ತರದ ವಿಗ್ರಹವನ್ನು ಪ್ರತಿಷ್ಠೆ ಮಾಡಲು ಒಂದು ಸೂಕ್ತವಾದ ಶಿಲೆಯನ್ನು ಹುಡುಕಲಾಗುತ್ತಿದೆ. ಹಳೆಯ ಅಡಿಪಾಯಗಳ ಮೇಲೆ ಈ ದೇವಾಲಯವನ್ನು ನಿರ್ಮಿಸಲಾಗುವುದು ವಿಗ್ರಹವನ್ನು ಹಿಂದೆ ಇದ್ದ ಜಾಗದಲ್ಲೇ ಇಡಲಾಗುವುದು ಹಿಂದೆ ಗುಜರಾತಿನ ಅರಸರ ಪೈಕಿ ಒಬ್ಬನಾದ ಕುಮಾರ ಪಾಲನಿಂದ ಈ ಪ್ರಾಚೀನ ದೇವಾಲಯವು ನಿರ್ಮಿಸಲ್ಪಟ್ಟಿತ್ತು

## ಇಂಡೋಚೀಣ ಬಗ್ಗೆ ನೆಹರೂ ಮಧ್ಯಸ್ಥಿಕೆ

ಭಾರತದ ಮುಖ್ಯ ಮಂತ್ರಿ ಪಂಡಿತ ಜವಹರಲಾಲ್ ನೆಹರೂರವರಾಗಲಿ, ವಿಶ್ವಸಂಸ್ಥೆಯಾಗಲಿ ಇಂಡೋಚೀಣದ ಬಗ್ಗೆ ಮಧ್ಯಸ್ಥಿಕೆ ನಡೆಸಬೇಕೆಂದು ಫ್ರೆಂಚ್ ಸೋಷಲಿಸ್ಟ್ ಪಂಗಡದ ಪ್ರಧಾನ ಕಾರ್ಯದರ್ಶಿ ಗೈಮೋಲೆಯವರು ಹೇಳಿದ್ದಾರೆ

## ಈ ರಾತ್ರಿ ಆಕಾಶ-ವಾಣಿಯಲ್ಲಿ ವಿಶೇಷ ಕಾರ್ಯಕ್ರಮ

ಈ ರಾತ್ರಿ ೯-೩೦ ರಿಂದ ೧೦ ಘಂಟೆವರೆಗೆ ಡಾ॥ ಎಂ. ಸಿದ್ಧಲಿಂಗಯ್ಯ, ಶ್ರೀಮತಿ ಬಿ ಇಂದಿರಮ್ಮ, ಶ್ರೀ ರಂಗರಾಮಯ್ಯ, ಶ್ರೀ ಟಿ ಎಸ್ ರಾಜಗೋಪಾಲ, ಅಯ್ಯಂಗಾರ್ ಮತ್ತು ಡಾ॥ ಎ ಎಂ ನಟೇಶ್ ಇವರುಗಳಿಂದ ನವ ವಿದ್ಯಾಭ್ಯಾಸದ ಬಗ್ಗೆ ಚರ್ಚಾ ಕೂಟವೊಂದು ಆಕಾಶವಾಣಿಯಲ್ಲಿ ಏರ್ಪಾಡಾಗಿದೆ

## ೮ ಮಂದಿ ರಜಾಕರರಿಗೆ ಮರಣ ದಂಡನೆ

### ಪಾರ್ಲಿಮೆಂಟಿನಲ್ಲಿ ಪಟೇಲರ ಹೇಳಿಕೆ

ನೆನ್ನೆ ದಿನ ಕೇಂದ್ರ ಪಾರ್ಲಿಮೆಂಟಿನಲ್ಲಿ ಸರ್ದಾರ್ ಪಟೇಲರು ಹೈದರಾಬಾದ್ ರಜಾಕರರ ವಿಷಯವಾಗಿ ಮಾತನಾಡುತ್ತ, ಅಲ್ಲಿ ಬಂಧಿತರಾದ ೨೧೩೪ ಮಂದಿ ರಜಾಕರರ ಪೈಕಿ ೧೯೮೮ ಮಂದಿಯ ಮೇಲೆ ವಿಚಾರಣೆಯು ನಡೆಸಲಾಯಿತೆಂದೂ ಅವರ ಪೈಕಿ ೩೧೪ ಜನರು ಶಿಕ್ಷಿಸಲ್ಪಟ್ಟು ೮ ಮಂದಿ ಮರಣ ದಂಡನೆಗೆ ಗುರಿಯಾದರೆಂದೂ ತಿಳಿಸಿದರು ಅವರುಗಳು ಕೊಲೆ, ದರೋಡೆ, ಲೂಟಿ, ಮುಂತಾದ ಕೃತ್ಯಗಳಲ್ಲಿ ತೊಡಗಿದ್ದುದರಿಂದ ಅವರನ್ನು ವಿಚಾರಣೆಗೆ ಗುರಿಪಡಿಸಲು ಕಾರಣ, ರಜಾಕಾರ್ ಸಂಸ್ಥೆಯ ಸದಸ್ಯರುಗಳಾಗಿದ್ದ ಹೈದರಾಬಾದ್ ಅಧಿಕಾರಿಗಳ ವಿಚಾರವು ತನಿಖೆಯಲ್ಲಿದೆಯೆಂದೂ ಅವರು ನುಡಿದರು.

## ಪೌರಸಭೆಯ ವಿಶೇಷ ಅಧಿವೇಶನ

ಮೈಸೂರು ೨೪

ನಗರಾಭಿವೃದ್ಧಿ ಸಭೆಯ ಛೇರ್ಮನ್ ಮತ್ತು ನಗರ ಸಭಾಧ್ಯಕ್ಷರು ಒಬ್ಬರೇ ಆಗಿರಬೇಕೆಂದು ಪೌರಸಭೆಯ ಕಾಂಗ್ರೆಸ್ ಪಕ್ಷದವರು ತಂದಿರುವ ನಿರ್ಣಯದ ಮೇಲೆ ಚರ್ಚಿಸಲು ವಿಶೇಷ ಸಭೆಯೊಂದು ಮುಂದಿನ ತಿಂಗಳು ೩ನೇ ತಾ॥ ಜರಗುವುದು

## ಹರಿಕಥೆ

ರಾಜಧಾನಿಯ ಕೋತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಹನುಮಂತ ನಿಲಯದಲ್ಲಿ ನಾಳೆ ಮಧ್ಯಾಹ್ನ ೨ ೩೦ ಘಂಟೆಗೆ ಶ್ರೀ ಎಂ. ಎಲ್ ನಾರಾಯಣದಾಸರಿಂದ ಕುಚೇಲೋಪಾಖ್ಯಾನ ಅಥವಾ ಸುಧಾಮ ಎಂಬ ಹರಿಕಥೆ ನಡೆಯುವುದು

## ಶಾರದಾ ಪೂಜಾ ಮಹೋತ್ಸವ

ಈ ಸಂಜೆ ೬-೩೦ಕ್ಕೆ ಶ್ರೀ ವಿಶ್ವಕರ್ಮ ವಿದ್ಯಾರ್ಥಿ ನಿಲಯಕ್ಕೆ ಶಾರದಾ ಪೂಜಾ ಮಹೋತ್ಸವವು ನಿಲಯದ ಪ್ರಧಾನ ಪೋಷಕರಾದ ಶ್ರೀ ಟಿ ಚಲುವಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯುವುದು

ನೆ ಆಹಾರೋತ್ಪತ್ತಿ ಎಚ್ಚಿಗಾಗಿ ಮೈಸೂರು ಸರ್ಕಾರದವರ, ಕೇಂದ್ರ ಸರ್ಕಾರದವರನ್ನು ೫೪ ಲಕ್ಷ ರೂ ಸಾಲ ಕೇಳಿದರೆಂದೂ, ಆದರೆ ೪೦ ಲಕ್ಷ ರೂ ಮಾತ್ರ ಸಾಲ ದೊರೆಯುತ್ತದೆಂದೂ ಗೊತ್ತಾಗಿದೆ

## ಸರ್ ಆಲ್ಬಿಯನ್ ಬ್ಯಾನರ್ಜಿಯವರ ನಿಧನ

(ಸ್ವಂ. ಸು. ಪ್ರೇ.) ಬೆಂಗಳೂರು ೨೪

ಸಂಸ್ಥಾನದ ಮಾಜಿ ದಿವಾನರಾದ ಸರ್ ಆಲ್ಬಿಯನ್ ಬ್ಯಾನರ್ಜಿಯವರು ಇಂದಿನ ಬೆಳಿಗ್ಗೆ ತಮ್ಮ ೭೯ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಸುಮಾರು ೪ ತಿಂಗಳಿಂದಲೂ ಅಸ್ವಸ್ಥರಾಗಿದ್ದು ಕೆಲವು ದಿನಗಳ ಹಿಂದೆ ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದರು.

ಸರ್ ಆಲ್ಬಿಯನ್ ಬ್ಯಾನರ್ಜಿಯವರು ೧೮೭೧ನೇ ಇಸವಿಯಲ್ಲಿ ಇಂಗ್ಲೆಂಡಿನಲ್ಲಿ ಜನ್ಮತಾಳಿದರು. ಅವರು ತಮ್ಮ ಆರಂಭದ ವಿದ್ಯಾಭ್ಯಾಸವನ್ನು ಕಲ್ಕತ್ತದಲ್ಲೂ ಉಚ್ಚಶಿಕ್ಷಣವನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿಯೂ ಹೊಂದಿ ೧೮೯೫ರಲ್ಲಿ ಭಾರತ ಸರ್ಕಾರದ ಉನ್ನತ ಸಿವಿಲ್ ಸರ್ವಿಸ್ ಅಧಿಕಾರಿಯಾಗಿ ನೇಮಿಸಲ್ಪಟ್ಟರು ಮದರಾಸ್ ಪ್ರಾಂತ್ಯದ ಹಲವು ಜಿಲ್ಲೆಗಳಲ್ಲಿ ಕಲೆಕ್ಟರರಾಗಿ ಕೆಲಸ ಮಾಡಿದರು. ಅವರು ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಅಧಿಕಾರಕ್ಕೆ ಸೇರಿದರು ವಿಶ್ವೇಶ್ವರಯ್ಯನವರ ನಂತರ ೧೯೨೨ರಿಂದ ೨೬ರ ವರೆಗೆ ದಿವಾನರಾಗಿದ್ದರು ಕೆಲವು ಕಾಲ ಕೊಚ್ಚಿ ಸಂಸ್ಥಾನದ ದಿವಾನರಾಗಿದ್ದರು. ಕಾಶ್ಮೀರ ಸಂಸ್ಥಾನದಲ್ಲೂ ಉನ್ನತಾಧಿಕಾರದಲ್ಲಿದ್ದರು

ದಿವಂಗತ ಬ್ಯಾನರ್ಜಿಯವರು ಕಳೆದ ೬ ವರ್ಷಗಳಿಂದ ವಿಶ್ರಾಂತಿ ಪಡೆಯುವ ಉದ್ದೇಶದಿಂದ ಬೆಂಗಳೂರಿನಲ್ಲಿ ನೆಲೆಸಿದರು ಅವರಿಗೆ ಏಕಮಾತ್ರ ಪುತ್ರಿಯು ಇರುವರೆಂದು ಗೊತ್ತಾಗಿದೆ. ದಿವಂಗತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ ಅವರ ಗೌರವಾರ್ಥವಾಗಿ ಈ ದಿನ ಬೆಂಗಳೂರಿನಲ್ಲಿ ಎಲ್ಲಾ ಸರ್ಕಾರಿ ಕಛೇರಿಗಳಿಗೂ ರಜಾ ಕೊಡಲಾಗಿದೆ.

○ ಭಾರತ ಸರ್ಕಾರದ ಆಡಿಟರ್ ಜನರಲ್ ಶ್ರೀ ನರಹರಿರಾಯರು, ಬೆಂಗಳೂರಿಗೆ ಆಗಮಿಸಿದ್ದಾರೆ ಅವರು ಇದೇ ೨೮ ನೇ ತಾರೀಖು ರಾಜಧಾನಿಗೆ ತೆರಳಿ ಶ್ರೀಮನ್ಮಹಾರಾಜರನ್ನು ಭೇಟಿಮಾಡುವರು.

○ ಸಂಸ್ಥಾನದ ಎಂಟು ಜಿಲ್ಲೆಗಳಲ್ಲಿ ಸಿ ಪಿ ಯೋಗ್ಯದೊಡನೆ ಕಡೂರು ಜಿಲ್ಲೆ, ಮೈಸೂರಿನೊಡನೆ ಹಾಸನ ಮತ್ತು ಮಂಡ್ಯ ಜಿಲ್ಲೆಗಳು, ಬೆಂಗಳೂರಿನೊಡನೆ ತುಮಕೂರು ಜಿಲ್ಲೆ ಸೇರಿಸಿ ಒಟ್ಟುಗೂಡಿಸಲ್ಪಡುವುವೆಂದು ಹೇಳಲಾಗಿದೆ.

## ವಿಶ್ವ ಶಾಂತಿಗಾಗಿ ಸಹಸ್ರ ಚಂಡಿಕಾ ಮಹಾ ಯಜ್ಞ

ವಿಶ್ವ ಶಾಂತಿ ನೆಲೆಸುವಂತೆ ಭಗವಂತನನ್ನು ಪ್ರಾರ್ಥಿಸಲು ಮತ್ತು ಭಾರತವು ಗಳಿಸಿದ ಸ್ವಾತಂತ್ರ್ಯದ ಸವಿಯನ್ನು ಅನುಭವಿಸುವಂತಾಗಲೆಂದು ಪ್ರಾರ್ಥಿಸುವ ಸಲುವಾಗಿ ಕಾಶಿಯ ಶ್ರೀ ಶೃಂಗೇರಿ ಮಠದ ಶ್ರೀ ನೃಸಿಂಹಗಿರಿ ವಾಲುಕೇಶ್ವರ ಭಾರತಿ ಸ್ವಾಮಿಗಳವರು ಸಹಸ್ರ ಚಂಡಿಕಾ ಮಹಾ ಯಜ್ಞವನ್ನು ನೆರವೇರಿಸುವರು ಈ ಯಜ್ಞವು ಏಪ್ರಿಲ್ ಬಿಹಾರ, ಪರಿಷತ್ತಿನಲ್ಲಿ ಬರುವ ತಿಂಗಳು ೬ನೇ ತಾರೀಖು ಪ್ರಾರಂಭವಾಗಿ ೫ ದಿನಗಳ ಪರ್ಯಂತ ನಡೆಯುವುದು

## ಪಾಕಿಸ್ತಾನಕ್ಕೆ ನೆಹರೂ ಎಚ್ಚರಿಕೆ

ಪಾಕಿಸ್ತಾನದ ಅಪಪ್ರಚಾರದಿಂದ ಅಲ್ಲಿನ ಮುಸ್ಲಿಮರು ರೋಷಗೊಂಡುದರ ಪರಿಣಾಮವಾಗಿ ಪೂರ್ವಬಂಗಾಳದಲ್ಲಿ ಅನೇಕ ಹಿಂಸಾ ಕೃತ್ಯಗಳು ಸಂಭವಿಸಿವೆ. ಇದರಿಂದ ಢಾಕ್ಕಾ ನಗರವೊಂದರಲ್ಲೇ ಸುಮಾರು ಒಂದು ಸಾವಿರಮಂದಿ ಮಡಿದಿದ್ದಾರೆ. ಶಾಂತಿಪ್ರಿಯರಾದ ಭಾರತೀಯರು ಪಾಕಿಸ್ತಾನದೊಡನೆ ಶಾಂತಿ ಸೌಹಾರ್ದದಿಂದಿರಲು ಅಪೇಕ್ಷೆ ಪಡುತ್ತಾರೆ. ಶಾಂತಿ ನೆಲೆಸುವ ದೃಷ್ಟಿಯಿಂದ ಭಾರತವು ಸೂಚಿಸಿರುವ ಸಲಹೆಗಳನ್ನು ಪಾಕಿಸ್ತಾನವು ತಿರಸ್ಕರಿಸಿದರೆ ಆಗ ನಾವು ಬೇರೆ ಕ್ರಮಗಳನ್ನು ಕೈಗೊಳ್ಳಬೇಕಾಗುವುದು – ಎಂದು ಪಂಡಿತ ನೆಹರೂರವರು ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು. ಅಲ್ಲದೆ ಕಾಶ್ಮೀರ ಮತ್ತು ಬಂಗಾಳ ಸಮಸ್ಯಾ ಪರಿಹಾರಕ್ಕೆ ನಾವು ಸರ್ವತ್ಯಾಗ ಮಾಡಲೂ ಸಿದ್ಧರಿರುವುದಾಗಿಯೂ ಅವರು ತಿಳಿಸಿದರು.

ಂ ಮಧುರೆ ಪೌರಸಭೆಯವರು ವಿಧಿಸಿರುವ ಹಲವು ತೆರಿಗೆಯನ್ನು ಪ್ರತಿಭಟಿಸಿ ಅಲ್ಲಿನ ಏಳು ಸಾವಿರ ಮಂದಿ ಅಗಸರು ಸೋಮವಾರದಿಂದ ಹರತಾಳವನ್ನು ಆಚರಿಸುತ್ತಿದ್ದಾರೆ.


# ಮದುವೆಜವಳಿಗಳಿಗೆ

ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪುರ್ ಸೀರೆಗಳಿಗೆ

## M. V. ಭೋಜಯ್ಯಶೆಟ್ಟಿ

ಬಿ. ಎ. & ಬ್ರದರ್ಸ್

ಇಂಡಿಯನ್ ಬ್ಯಾಂಕ್ ಎದುರು,

ಮೈಸೂರು


## ಅಣು ಪ್ರಯೋಗ ಶಾಲೆಗೆ ಬೆಂಕಿ

ಅಮೇರಿಕದಲ್ಲಿ ಅಣು ಬಾಂಬು ತಯಾರಿಕೆಗೆ ಸಹಾಯಕವಾಗಿದ್ದ ಡಾಮರ್ ಪ್ರಯೋಗ ಶಾಲೆಗೆ ಬೆಂಕಿ ಬಿದ್ದು ೧೦ ಲಕ್ಷ ಡಾಲರುಗಳ ನಷ್ಟ ಸಂಭವಿಸಿರುವುದಾಗಿ ವರದಿಯಾಗಿದೆ.


|| ಶ್ರೀ ||

# ಗಣೇಶಾ ಟಾಕೀಸ್

25-2-50 ರಿಂದ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

# ಮಂಗಯಾರ್ ಕರಸಿ

(ತಮಿಳು)

ಭೂಮಿಕೆ:- ಕನ್ನಾಂಬ, ಅಂಜಲಿದೇವಿ, ಚಿನ್ನಪ್ಪ, ದೊರೆರಾಜ್, ಕೃಷ್ಣನ್, ಮಧುರಂ, ಲಲಿತಾ-ಪದ್ಮಿನಿ


ಮೈಸೂರು ಸಿಟಿ ರೇಷನಿಂಗ್ ಆಫೀಸು

## ಪ್ರಕಟಣೆ

ನಂ R 6-54/ 49-50

ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷನ್ ಡಿಪೋ, ಮೊಹಲ್ಲಾ ಸಬ್ ಗೋಡೌನ್ ನಂಬರ್ ಡಿಪೋ ಮತ್ತು ಸಹಕಾರ ಸಂಘಗಳಿಗೆ ಇದೇ ಮಾಹೆ ೨೮ನೇ ತಾರೀಖು ಮಂಗಳವಾರ ಆಹಾರ ದಿನಸಿಗಳ ಎಣಿಕೆ ಬಗ್ಗೆ ರಜಾ ಕೊಡಲ್ಪಟ್ಟಿರುತ್ತೆ.

(ಸಹಿ) ಎ. ಕೆ. ಬಾಲರಾಜ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

ಮೈಸೂರು
21-2-1950

## ಹರಿಕಥೆ

ಚಾಮರಾಜ ಮೊಹಲ್ಲಾ ಕುಂಬಾರಗೇರಿಯಲ್ಲಿ ಹಾಕಿರುವ ಚಪ್ಪರದಲ್ಲಿ ಈ ರಾತ್ರಿ ೯ ಘಂಟೆಗೆ ಲಕ್ಷ್ಮೀಪತಿ ಸಹೋದರರಿಂದ "ಭಕ್ತ ಮಯೂರಧ್ವಜ" ಎಂಬ ಹರಿಕಥೆ ನಡೆಯುವುದು.


Morning Shows at

# CHAMUNDESWARI

TALKIES

From 24-2-50 For 3 days

Paramount Pictures' most Comedious Picture ever screened

# ROAD TO RIO

(ರೋಡ್ ಟು ರಿಯೊ)

With:- Bob Hope, Bing Crossby, Dorothy Lamour.


ಮೈಸೂರು ಸ್ಟೇಟ್ ರೈಲ್ವೆ

## ನೋಟೀಸು

ಹರಿಹರ ಸ್ಟೇಷನ್ನಿನಲ್ಲಿ ರೈಲನ್ನು ಬದಲಾಯಿಸುವ ಆವಶ್ಯಕತೆಯನ್ನು ತಪ್ಪಿಸಲು, ಅರಸೀಕೆರೆಯಿಂದ ಹರಿಹರಕ್ಕೆ ಹೋಗುವ 55ನೇ ರೈಲು ಹಾಗೆಯೇ ಎಂ. ಎಸ್. ಎಂ. 109ನೇ ರೈಲಾಗಿ ಧಾರವಾಡಕ್ಕೆ ತಲುಪುವುದು, ಮತ್ತು ವಾಪಸು ಬರುವ ಹುಬ್ಬಳ್ಳಿಯ 110ನೇ ನಂಬರಿನ ಎಂ. ಎಸ್. ಎಂ. ರೈಲು ಹರಿಹರಕ್ಕೆ ಬಂದು ಅಲ್ಲಿಂದ ಮೈಸೂರು ರೈಲ್ವೆಯ 56ನೇ ರೈಲಾಗಿ ಅರಸೀಕೆರೆಗೆ ತಲುಪುವುದು. ಈ ಬದಲಾವಣೆಯು 1950ನೇ ಮಾರ್ಚಿ 1ರಿಂದ ಜಾರಿಗೆ ಬರುವುದು.

ಟ್ರಾಫಿಕ್ ಮ್ಯಾನೇಜರ್

ಟ್ರಾಫಿಕ್ ಮ್ಯಾನೇಜರರ ಕಛೇರಿ
ಮೈಸೂರು, 18 ಫೆಬ್ರವರಿ 1950

## ನಿರಾಶ್ರಿತರ ಆಸ್ತಿ ವಿಲೇವಾರಿ ಬಗ್ಗೆ ಪಾಕಿಸ್ತಾನದ ನೀತಿ

ನಿರಾಶ್ರಿತರ ಆಸ್ತಿಪಾಸ್ತಿಗಳ ವಿಲೇವಾರಿ ಬಗ್ಗೆ ಭಾರತ ಮತ್ತು ಪಾಕಿಸ್ತಾನ ಸರಕಾರಗಳಿಗೆ ವ್ಯವಹಾರವು ಇರಕೂಡದೆಂದೂ, ಪ್ರತಿಯೊಬ್ಬ ವ್ಯಕ್ತಿಯ ವಿಷಯವೂ ವ್ಯಕ್ತಿಗತವಾಗಿ ಪರಿಶೀಲಿಸಲ್ಪಡಬೇಕೆಂಬುದೇ ಪಾಕಿಸ್ತಾನದ ನೀತಿಯಾಗಿದೆಯೆಂದೂ, ಭಾರತದ ನೀತಿ ಸರಕಾರಗಳಿಂದಲೇ ನಡೆಸಲ್ಪಡಬೇಕೆಂದೂ ಇರುವುದಾಗಿ ಪಾಕಿಸ್ತಾನದ ಮಂತ್ರಿ ಡಾ|| ಇಷಾಕ್ ಖುರೇಷಿಯವರು ಹೇಳಿದರು. ಆದರೆ ತಮ್ಮ ತೀರ್ಮಾನವೇ ಕಡೆಯ ನಿರ್ಧಾರವೆಂದೂ ತಿಳಿಸಿದ್ದಾರೆ.


# ರಾಜಕಮಲ್

ಟಾಕೀಸ್

## 24—2—50 ರಿಂದ

ಜನಭರಿತವಾದ ೧೦ನೇ ವಾರ

ದಿನವಹಿ 2 ಪ್ರದರ್ಶನಗಳು

# ಜೀವನ

—: ಭೂಮಿಕೆ:—

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

Morning Shows

From 24-2-50 for 4 days

# That Brennan Girl

With:-Mona Freeman James Dunn & June Duprez

COMING! :: ಬರುತ್ತದೆ!

# ★ ಪ್ರಭುದೇವ ಟಾಕೀಸ್ ★

## ನಾಟಕಶಿರೋಮಣಿ ಕೀರ್ತಿಶೇಷ ಎ. ವಿ. ವರದಾಚಾರ್ಯರ ನಾಟಕವನ್ನು ಜ್ಞಾಪಿಸತಕ್ಕ ಚಿತ್ರ

# ನರಸಿಂಹ-ಅವತಾರ

ಸೊಹ್ರಾಬ್ ಮೋದಿಯವರಿಂದ ತಯಾರಿಸಲ್ಪಟ್ಟ ಅನುಪಮ ಕಲಾಕೃತಿ

ಶೋಭನಾ ಸಮರ್ಥ್, ಲಕ್ಷ್ಮಣ್, ನಿರಂಜನ ಶರ್ಮ ಮತ್ತು ಮಹಿಪಾಲ್ ಪಾತ್ರ ವಹಿಸಿರುವ ಹಿಂದಿ ಚಿತ್ರ

ಸಂ. 792 WEEKLY EDITION

ಸಾಧ್ವಿ

ಸಂಪುಟ ೧೮] ಭಾನುವಾರ ೨೬-೨-೫೦ [ಸಂಚಿಕೆ ೩೩

# ಚೀಣದ ಅಧ್ಯಕ್ಷತೆಗೆ ಚಿಯಾಂಗರಿಗೆ ಕರೆ

## ದ್ರಾವಕ ಕುಡಿದು ವ್ಯಾಪಾರಿಯ ಮರಣ

ಬೆಂಗಳೂರು, ೨೫

ಮಲ್ಲೇಶ್ವರದ ಗಡಿಯಾರಗಳ ವ್ಯಾಪಾರಿಗಳಾದ ಶ್ರೀ ಶೆಲ್ಲಂ ಎಂಬುವರು ಹೈಗ್ರೌಂಡ್ಸಿನಲ್ಲಿರುವ ಒಂದು ಹೋಟೇಲಿಗೆ ಮೊನ್ನೆ ರಾತ್ರಿ ಹೋಗಿ, ಮನೆಗೆ ಹೋಗಲು ಹೊತ್ತು ಬಹಳವಾಯಿತೆಂದು ತಿಳಿಸಿ, ಅಲ್ಲಿಯೇ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ದ್ರಾವಕವನ್ನು ಕುಡಿದರೆಂದೂ, ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದಾಗ ಅಲ್ಲಿ ಅವರು ಮರಣಹೊಂದಿದರೆಂದೂ ಹೇಳಲಾಗಿದೆ. ಅವರು ಬರೆದಿಟ್ಟು ಹೋಗಿರುವ ಕಾಗದಗಳಿಂದ ಅವರಿಗೆ ತುಂಬಾ ಸಾಲಸೋಲಗಳಿದ್ದು ಜಿಗುಪ್ಸೆಯಾಗಿತ್ತೆಂದು ತಿಳಿದುಬಂದಿದೆ.

## ಡಚ್ ಮತ್ತು ಇಂಡೋನೇಷ್ಯ ಸೈನ್ಯಗಳಿಗೆ ಘರ್ಷಣೆ

ಬಟೇವಿಯಾದಲ್ಲಿ ಡಚ್ ಸೈನ್ಯದ ಒಂದು ದಳಕ್ಕೂ ಇಂಡೋನೇಷ್ಯ ಸೈನಿಕರಿಗೂ ಮೊನ್ನೆ ಘರ್ಷಣೆಯಾಗಿ ಒಬ್ಬ ಸತ್ತನು. ಹಲವರಿಗೆ ಗಾಯವಾಗಿದೆ.

## ಕೊತ್ತಗೆರೆಯಲ್ಲಿ ವಿದ್ಯುದ್ದೀಪೋತ್ಸವ

ಸ್ವ. ಸು.] ಕುಣಿಗಲ್ ೨೪

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಶ್ರೀರುದ್ರಯ್ಯನವರು ಮೊನ್ನೆ ದಿನ ಕೊತ್ತಗೆರೆ ಗ್ರಾಮದ ವಿದ್ಯುದ್ದೀಪದ ಆರಂಭೋತ್ಸವವನ್ನು ನೆರವೇರಿಸಿದರು. ಆ ಬಗೆ ನಡೆದ ಸಮಾರಂಭದಲ್ಲಿ ಜಿಲ್ಲಾ ವಿವಿಧ ಅಧಿಕಾರಿಗಳೂ, ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಮೂಡ್ಲಗಿರಿಗೌಡ, ಶ್ರೀ ಪಟ್ಟಣಸ್ವಾಮಿಗೌಡ ಮುಂತಾದ ಅನೇಕ ಗಣ್ಯ ಮಹನೀಯರೂ ಭಾಗವಹಿಸಿದ್ದರು.

## ಪ್ರಾಣಿಗಳ ಬಲಿ ಕೊಡುವರೆಂಬುದು ನಿಜವಲ್ಲ

ರಾಜಧಾನಿಯ ಚಾಮುಂಡಿಪುರಂ ಹೊಸ ಬಡಾವಣೆ ಅರಳೀಕಟ್ಟೆ ಪಕ್ಕದಲ್ಲಿರುವ ಗರಡಿ ಮನೆಯ ಭಾಗದ ಶ್ರೀ ಕೋಲ್ಲಾಪುರದ ಶ್ರೀ ಅಂಬಿಕಾ ... ಮುಂತಾದ ಗ್ರಾಮದೇವತೆಗಳ ಪೂಜೆಯ ಸಂಬಂಧವಾಗಿ ಈ ... ತಾರೀಖು ಕೋಣ, ಕುರಿ, ಕೋಳಿ ಮುಂತಾದ ಪ್ರಾಣಿಗಳ ಬಲಿ ಕೊಡುವರೆಂದು ಜನಾಬ್ ... ವಾದಿಗಳು ಪತ್ರಿಕೆಯಲ್ಲಿ ... ಪ್ರಾಣಿಗಳ ... ಕೋಣಗಳನ್ನು ಬಲಿ ಕೊಡುವ ... ಹೀಗೆ ಪತ್ರಿಕೆಗಳಲ್ಲಿ ... [illegible]

## ವೀಳೆಯದೆಲೆ ತೋಟಗಳು ಪೌರಸಭೆಯ ವಶ

ಮೈಸೂರು ೨೬

ನೆನ್ನೆ ದಿನ ಪುರಸಭಾಧಿವೇಶನವು ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ನಗರದೊಳಗಿರುವ ವೀಳೆಯದೆಲೆ ತೋಟಗಳನ್ನು ಪುರಸಭೆಯವರು ವಹಿಸಿಕೊಂಡು ಅವುಗಳ ಮಾಲೀಕರುಗಳಿಗೆ ನಗರದಾಚೆ ತೋಟಕ್ಕೆ ಸೌಕರ್ಯವಾಗುವಂತೆ ಜಾಗಗಳನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು.

ಶ್ರೀ ಶರತ್ ಚಂದ್ರಬೋಸರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

### ವಾಚನಾಲಯ ಮತ್ತು ಹಿಂದೀ ತರಗತಿಗಳ ಆರಂಭೋತ್ಸವ

... ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ... ನಲ್ಲಿ ಈ ಸಂಜೆ ೬ ಘಂಟೆಗೆ ಶ್ರೀ ... ವಿ ... ಅವರ ಅಧ್ಯಕ್ಷತೆಯಲ್ಲಿ ... ಉಚಿತ ವಾಚನಾಲಯ ಮತ್ತು ಹಿಂದೀ ತರಗತಿಗಳು ಆರಂಭವಾಗುವುವು.

### ಸಹಕಾರ ಸಂಘ ಪ್ರಾರಂಭೋತ್ಸವ

ನಾಳೆ ದಿನ ಬೆಳಗ್ಗೆ ೬ ಘಂಟೆಗೆ ... ತಾಲ್ಲೋಕು ವಿವಿಧೋದ್ದೇಶ ಸಹಕಾರ ಸಂಘದ ಪ್ರಾರಂಭೋತ್ಸವವನ್ನು ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರು ನೆರವೇರಿಸುವರು.

### ವಿವಾಹ ಮಹೋತ್ಸವ

ನಂಜನಗೂಡಿನಲ್ಲಿರುವ ... ವೇದಮೂರ್ತಿ ಶ್ರೀ ... ಶ್ರೀಕಂಠಯ್ಯನವರಿಗೆ ... ರಾಜಾ ಕಾಲೇಜಿನ ... ಮಾಡಿದ ... ಸೌಭಾಗ್ಯವತಿ ... ವಧುವನ್ನು ... ಜರುಗಿತು.

## ಬ್ರಿಟಿಷ್ ಮಹಾ ಚುನಾವಣೆ ರದ್ದಾಗುವುದೇ?

ಮೊನ್ನೆ ದಿನ ನಡೆದ ಬ್ರಿಟನ್ನಿನ ಚುನಾವಣೆಗಳಲ್ಲಿ ... [illegible]

## ಬ್ರಿಟನ್ನಿನಲ್ಲಿ ಕೂಲಿಗಾರರ ಸರಕಾರವೇ ಇರುವುದು

ಬ್ರಿಟಿಷ್ ಚುನಾವಣೆಗಳಲ್ಲಿ ಬಹುಮತ ... ಕೂಲಿಗಾರರ ಪಕ್ಷದವರೇ ಮುಂದೆಯೂ ಸರಕಾರ ನಡೆಸುವರು. ಬ್ರಿಟನ್ ಪ್ರಧಾನಿ ಅಟ್ಲಿಯವರು ಬರುವ ವಾರದ ಮಧ್ಯದಲ್ಲಿ ತಮ್ಮ ಈಗಿನ ಮಂತ್ರಿಮಂಡಲದಲ್ಲಿ ಪುನರ್ವ್ಯವಸ್ಥೆ ಮಾಡಲಿರುವುದಾಗಿ ತಿಳಿಸಿದ್ದಾರೆ. ಈಗಾಗಲೇ ಎಲ್ಲಾ ಮಂತ್ರಿಗಳೂ ತಮ್ಮ ರಾಜೀನಾಮೆಗಳನ್ನು ಮುಖ್ಯ ಮಂತ್ರಿಗಳಿಗೆ ಒಪ್ಪಿಸಿರುವರು. ಸಮ್ಮಿಶ್ರ ಅಥವಾ ಇನ್ನಾವ ರೀತಿಯ ಇತರ ಪಕ್ಷಗಳ ಸಹಾಯದ ಮಂತ್ರಿಮಂಡಲ ಏರ್ಪಡುವುದಿಲ್ಲವೆಂದು ಕೂಲಿಗಾರರ ಪಕ್ಷದವರಿಂದ ಅಧಿಕಾರಯುತವಾಗಿ ತಿಳಿದುಬಂದಿದೆ.

## ಹಿಂದೂಸ್ಥಾನಿ ಸೇವಾದಳದ ಸ್ಥಿತಿ ಬಗ್ಗೆ ಹರ್ಡೀಕರರ ವ್ಯಸನ

ಹಿಂದೂಸ್ಥಾನಿ ಸೇವಾದಳದ ಸಂಸ್ಥಾಪಕರಾದ ಡಾ॥ ಎನ್. ಎಸ್. ಹರ್ಡೀಕರರು, ಬೊಂಬಾಯಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ ಶಿಸ್ತಿನ ಪಾಲನೆಯ ... ಸೇವಾ ಭಾವನೆಯ ... ಸೇವಾದಳವು ... ಕಾಂಗ್ರೆಸ್ ಕಾರ್ಯಕರ್ತರು ... ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದ ಸೇವಾದಳವನ್ನು ಬಲಪಡಿಸಬೇಕೆಂದು ತಿಳಿಸಿದರು.

### ಕೇಂದ್ರದಿಂದ ಸಂಸ್ಥಾನಕ್ಕೆ ೬೦ ಲಕ್ಷ ರೂ. ಸಾಲ

ಸಂಸ್ಥಾನದ ಆಹಾರ ಬೆಳೆಯ ಯೋಜನೆಯ ಕಾರ್ಯರೂಪಕ್ಕೆ ಬರಲು ೬೦ ಲಕ್ಷ ರೂಗಳನ್ನು ಕೇಂದ್ರ ಸರ್ಕಾರದವರು ಸಾಲವಾಗಿ ಕೊಡಲೊಪ್ಪಿದರೆಂದು ... ಇದ್ದಿನ ಸರಕಾರದವರು ... ಲಕ್ಷ ರೂ ಸಾಲವನ್ನು ಕೇಳಿದ್ದರು. ಈಗಾಗಲೇ ... [illegible]

## ಪೋಲೀಸ್ ಅತ್ಯಾಚಾರದಿಂದ ಸುಶೀಲಮ್ಮನು ಸಾಯಲಿಲ್ಲ

### ಹೊಸದುರ್ಗ ಪೋಲೀಸ್ ಅತ್ಯಾಚಾರದ ಬಗ್ಗೆ ಸರ್ಕಾರಿ ಪ್ರಕಟಣೆ

ಕಳೆದ ಅಕ್ಟೋಬರಿನಲ್ಲಿ ಹೊಸದುರ್ಗದ ಸುಶೀಲಮ್ಮ ಎಂಬಾಕೆಯು ಪೋಲೀಸ್ ಅತ್ಯಾಚಾರಕ್ಕೆ ಬಲಿಯಾಗಿ ಮಡಿದಳೆಂದು ವರದಿಯಾಗಿರುವುದರ ಬಗ್ಗೆ ಸರ್ಕಾರದವರು ದಾವಣಗೆರೆಯ ಸಬ್‌ಡಿವಿಜನ್ ಅಧಿಕಾರಿಗಳನ್ನೂ ಮತ್ತು ... ಒಡನೆಯೇ ... ಮ್ಯಾಜಿಸ್ಟ್ರೇಟರನ್ನೂ ವಿಚಾರಣೆ ನಡೆಸಲು ನೇಮಿಸಿದ್ದರು. ವಿಚಾರಣೆಯಿಂದ ಕೆಳಗೆ ಕಂಡ ಅಂಶವು ಹೊರಬಿದ್ದಿರುವುದಾಗಿ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.—

ಹೊಸದುರ್ಗದ ಬಳಿ ಸಂತೆಯಲ್ಲಿ ೧೦೦ ರೂ ಕಳುವಾದ ಸಂಬಂಧವಾಗಿ ಸುಶೀಲಮ್ಮನನ್ನೂ ಮತ್ತು ಆಕೆಯ ಅತ್ತಿಗೆಯನ್ನೂ ದಸ್ತಗಿರಿ ಮಾಡಲಾಯಿತು. ಆಕೆಯ ಮೊಣಕಾಲು ಕೀಲಿನಲ್ಲಿ ನೋವಾಗುತ್ತಿದೆಯೆಂದು ತಿಳಿಸಿದುದರ ಮೇಲೆ ವೈದ್ಯರು ಪರೀಕ್ಷಿಸಿ ಚಿಕಿತ್ಸೆ ನಡೆಸಿದರು. ೨೭-೧೦-೪೯ರಲ್ಲಿ ಆಕೆಯು ಮೃತಪಟ್ಟುದರಿಂದ, ಹಲವು ಗಣ್ಯವ್ಯಕ್ತಿಗಳ ಸಮ್ಮುಖದಲ್ಲಿ ಶವವನ್ನು ಪರೀಕ್ಷಿಸಲಾಗಿ ಸ್ವಾಭಾವಿಕವಾಗಿ ಒದಗಿದ್ದ ರೋಗದಿಂದ ಆಕೆಯು ಮೃತಪಟ್ಟಳೆಂದು ನಿರ್ಧರಿಸಲಾಯಿತು. ಆಕೆಯ ಮೈ ಮೇಲೆ ಗಾಯಗಳಿರಲಿಲ್ಲ. ಆಕೆಯ ಗಂಡನು ಅವಳ ಮೇಲೆ ದಸ್ತಗಿರಿ ನಡೆದಿರುವುದರ ಬಗ್ಗೆ ಯಾವ ದೂರನ್ನೂ ಕೊಟ್ಟಿಲ್ಲ. ಅವಳ ಮೇಲೆ ಅತ್ಯಾಚಾರ ನಡೆದಿರುವುದು ಆಧಾರರಹಿತವಾದುದು.

## ಅಮೆರಿಕದಲ್ಲಿ ಬಲ್ಗೇರಿಯ ಹಂಗೇರಿ ಪ್ರಜೆಗಳ ಆಸ್ತಿ ಸರ್ಕಾರದ ವಶ

ಅಮೆರಿಕದಲ್ಲಿರುವ ಬಲ್ಗೇರಿಯ, ಹಂಗೇರಿ ಮತ್ತು ರುಮೇನಿಯಾ ರಾಷ್ಟ್ರಗಳ ಪ್ರಜೆಗಳ ಆಸ್ತಿ ಮತ್ತು ಬ್ಯಾಂಕುಗಳಲ್ಲಿರುವ ಹಣಗಳನ್ನು ಅಮೆರಿಕ ಸರ್ಕಾರವು ತನ್ನ ವಶಪಡಿಸಿಕೊಳ್ಳಲು ನಿರ್ಧರಿಸಿ ಮೇಲ್ಕಂಡ ರಾಷ್ಟ್ರಗಳಲ್ಲಿ, ರಷ್ಯದ ಪ್ರಚೋದನೆಯ ಮೇರೆಗೆ, ಅಮೆರಿಕದ ಪ್ರತಿನಿಧಿಗಳು ಮತ್ತು ಪ್ರಜೆಗಳಿಗೆ ಕಿರುಕುಳ ಕೊಡುತ್ತಿರುವುದರಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ.

## ಬಿಹಾರಿನಲ್ಲಿ ಜೂರಿಗಳಿಂದ ವಿಚಾರಣೆ ತಪ್ಪಿತು

ಕೊಲೆ, ಅತ್ಯಾಚಾರ, ದರೋಡೆ, ಅಪಹರಣ, ನಂಬಿಕೆ ದ್ರೋಹ, ವಂಚನೆ ಮುಂತಾದವುಗಳ ಸಂಬಂಧವಾಗಿ ನಡೆಯುವ ಅಪರಾಧಗಳನ್ನು ಜೂರಿಗಳ ವಿಚಾರಣೆಯಿಂದ ತಪ್ಪಿಸಲು ಬಿಹಾರ್ ಸರ್ಕಾರದವರು ನಿರ್ಧರಿಸಿದ್ದಾರೆ.

## ಚಿಯಾಂಗರೇ ಮತ್ತೆ ರಾಷ್ಟ್ರೀಯ ಚೀಣಾ ಅಧ್ಯಕ್ಷರಾಗುವರೇ?

ರಾಷ್ಟ್ರೀಯ ಚೀಣದ ಶಾಸನ ಸಭೆಯು ಮೊನ್ನೆ ಸಮಾವೇಶಗೊಂಡು ಚಿಯಾಂಗ್ ಕೈಷೇಕರನ್ನು ಮತ್ತೊಮ್ಮೆ ರಾಷ್ಟ್ರೀಯ ಚೀಣದ ಅಧ್ಯಕ್ಷತೆ ವಹಿಸಬೇಕೆಂದು ಆಹ್ವಾನಿಸಲು ನಿರ್ಧರಿಸಿತು. ಈಗ ಅಲ್ಲಿನ ಅಧ್ಯಕ್ಷರಾಗಿರುವ ಲಿ ಸುಂಗ್ ಜೆನ್‌ರವರು ಉದರವ್ಯಾಧಿ ಚಿಕಿತ್ಸೆ ಪಡೆಯಲು ಅಮೆರಿಕಕ್ಕೆ ಹೋದವರು ಹಿಂದಕ್ಕೆ ತೆರಳಿದ್ದಾರೆ. ಅವರು ಮತ್ತೆ ಅಧಿಕಾರಕ್ಕೆ ಹಿಂತಿರುಗುವ ಸೂಚನೆಗಳೇ ಕಂಡು ಬರುತ್ತಿಲ್ಲವಾದ್ದರಿಂದ ... [illegible]

# ವಾರ ಭವಿಷ್ಯ

ಶ್ರೀ

ತಾ॥ ೨೬-೨ ರಿಂದ ೪-೩ ರವರೆಗೆ

ಮೇಷ—ಗ್ರಹಮಾನಗಳು ಅನುಕೂಲವಾಗಿವೆ ಶತ್ರು ಭೀತಿ ತಪ್ಪುವುದು ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ಮಾನ ಸನ್ಮಾನ ವ್ಯಾಪಾರ ವ್ಯವಹಾರಗಳಲ್ಲಿ ಲಾಭ ಸಜ್ಜನರ ಭೇಟಿ ತಾ॥೧-೩ ಧರ್ಮಕ್ಕಾಗಿ ಖರ್ಚು ಅತಿಥಿಗಳ ಆಗಮನ

ವೃಷಭ—ಶುಭಯೋಗವಾಯಿತು ಮಾನವನ್ನು ಮಂಗಳ ಕಾರ್ಯಕ್ಕಾಗಿ ಗದ್ದಲ ಖರ್ಚು ಆರೋಗ್ಯ ನೆಟ್ಟಗೆ ಮನಸ್ಸಿಗೆ ಅನೇಕ ಯೋಚನೆ ಹಲವರಿಂದ ಸಹಾಯಾಪೇಕ್ಷೆ ನೌಕರಿ ದಂಧೆಗಳಲ್ಲಿ ಅಲಕ್ಷ್ಯ ತಾ॥ ೧-೩ ಆಕಸ್ಮಿಕ ಪ್ರವಾಸ ಲಾಭ ವಸ್ತ್ರದ ಪತ್ರ ಆಗಮನ

ಮಿಥುನ ಚಿತ್ತಸ್ವಾಸ್ಥ್ಯ ಒಂದಿನ ತಿ ವ್ಯವಹಾರ ಸುಖವಾಗಿ ಸಾಗಲಾರವು ಆರೋಗ್ಯ ಕೊಂಚ ಹಾಗೆಯೇ ಪ್ರಿಯ ಮಾತೃ ಸ್ತ್ರೀ ... ಚಿಂತೆ ... ಸ್ತ್ರೀಯರ ಮೇಲೆ ಒಟ್ಟರ ಸಧನ ವಾಹನ ... ತಾ॥ ... ಸಂಕಟ ದಿಂದ ಪಾರು

ಕರ್ಕ—ಸಾಧು ಸಮಾಗಮ ಆರೋಗ್ಯ ನೆಟ್ಟಗೆ ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಇಷ್ಟದ ಘಟನೆಗಳು, ವಿವಾಹಕ್ಕೆ ಶುಭವಾರ ಪವಿತ್ರ ಕ್ಷೇತ್ರಗಳ ದರ್ಶನ ಯೋಗ ತಾ॥೨೬, ೨೭ ರ ಮತ್ತು ಅಪ್ತರಿಂದ ಮಂಗಳ ಕಾರ್ಯಕ್ಕೆ ಖರ್ಚು

ಸಿಂಹ ಆರೋಗ್ಯ ನೆಟ್ಟಗೆ ಅಪ್ತೇಷ್ಟರ ಭೇಟಿ ವಿವಾಹದ ಮಂಗಲ ಕಾರ್ಯ ಮೇಲಧಿಕಾರಿಗಳ ಸಹಕಾರ ವ್ಯಾಪಾರಾದಿಗಳಲ್ಲಿ ಧನ ಲಾಭ ತಾ॥೧, ೨ ಖರ್ಚು ಗರ್ಭಕೃತ್ಯದಲ್ಲಿ ಹೆಚ್ಚು ಜವಾಬ್ದಾರಿ

ಕನ್ಯಾ—ಆರೋಗ್ಯ ನೆಟ್ಟಗಿರದು, ಹಠಗೆ ಆಕಸ್ಮಿಕ ಚಿಂತೆ ... ಹೆಚ್ಚು ಮೇಲಧಿಕಾರಿಗಳ ಸಂತೋಷ, ವ್ಯಾಪಾರಾದಿಗಳಲ್ಲಿ ವಿರೋಧಿಗಳ ಪ್ರತಿಸ್ಪರ್ಧೆ ... ರ ಸಂಪರ್ಕ, ತಾ॥೧, ೨ ಸಂಕಟ ನಿವಾರಣೆ ಧನ ಲಾಭ

ತುಲಾ ಪ್ರವಾಸಿಗಳ ... ಸಾಹಸ ವ್ಯಾಪಾರ, ಉದ್ಯೋಗ, ವ್ಯವಹಾರಗಳಲ್ಲಿ ... ನೌಕರಿಯಲ್ಲಿ ... ಸೂಚನೆ ಪ್ರದೇಶಕ್ಕೆ ವರ್ಗ ... ರಿಗೆ ... ತಾ॥೨೭, ೨ ಚಿಂತಾ ... ವಿದೇನೆ

ವೃಶ್ಚಿಕ ನಿವೃತ್ತಿಗಾಗಿ ಮತ್ತು ಅಧಿಕಾರಿಗಳ ಹೆಚ್ಚಳ ... ಮತ್ತು ... ವ್ಯಾಪಾರ ವ್ಯವಹಾರಗಳಲ್ಲಿ ಧನಲಾಭ, ... ತಾ॥ ೧, ೨ ಧನ ... ಅಪ್ತರ ಭೇಟಿ.

ಧನು ಅನೇಕ ವಿಷಯ ... ದಾಯ.

# ಕಾಫಿ ಮೇಲಿನ ಸುಂಕ ಇಳಿಸಲು ಬಿನ್ನಹ

ಸ್ವಂ ವು] ಚಿಕ್ಕಮಗಳೂರು ೨೩

ಕಳೆದ ಸೋಮವಾರ ಇಲ್ಲಿಗೆ ಆಗಮಿಸಿದ ನ್ಯಾಯಾಂಗ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂರವರನ್ನು ಸ್ಥಳೀಯ ಪ್ಲಾಂಟರುಗಳ ಸಂಘದ ಸದಸ್ಯರು ಭೇಟಿ ಮಾಡಿ ಕಾಫಿ ಮೇಲೆ ಹಾಕಿರುವ ಸುಂಕವನ್ನು ಪೌಂಡಿಗೆ ೭ ಕಾಸಿಗೆ ಇಳಿಸಬೇಕೆಂದು ಪ್ರಾರ್ಥಿಸಿ ಈಗ ಇರುವ ೩ ಆಣೆ ದರವು ಬಹಳ ದುಬಾರಿಯೆಂದು ತಿಳಿಸಿದರು ಮೈಸೂರು ಸರಕಾರಕ್ಕೆ ಕಾಫಿ ಸುಂಕದಿಂದಲೇ ವರ್ಷಕ್ಕೆ ೬೫ ಲಕ್ಷ ರೂ ಆದಾಯ ಬರುತ್ತಿರುವುದಾಗಿಯೂ, ಭಾರತದಲ್ಲೆಲ್ಲಾ ಬೆಳೆಯುವ ಕಾಫಿಯಲ್ಲಿ ಮೈಸೂರಿನಲ್ಲಿ ಅರ್ಧದಷ್ಟು ಉತ್ಪತ್ತಿಯಾಗುತ್ತಿದೆಯೆಂದೂ, ಹೊರದೇಶಕ್ಕೆ ಕಾಫಿಯನ್ನು ಪ್ರತಿ ವರ್ಷವೂ ೧ ಸಾವಿರ ಟನ್ನಿನಂತೆ ಕಳುಹಿಸಿದರೆ ಡಾಲರ್ ಅಭಾವ ಕೊಂಚ ತಗ್ಗುವದೆಂದೂ ಮನವಿ ಮಾಡಿಕೊಳ್ಳಲಾಯಿತು.

---

ರ ಆರೋಗ್ಯ ನೆಟ್ಟಗೆ ಪತ್ನಿಯ ಸಹಕಾರ ನೌಕರಿಯಲ್ಲಿ ಹೊಸಘಟನೆ ವ್ಯಾಪಾರ, ವ್ಯವಹಾರಗಳಲ್ಲಿ ಜಯ ಕೆಲಸಗಾರರಿಗೆ ಅನುಕೂಲವಾದ ವಾರ ತಾ॥೩ ಗೊಂದಲ

ಮಕರ- ಧಾರ್ಮಿಕ ಜೀವನದ ಭಾಗ್ಯ ಆರೋಗ್ಯ ಸಮರ್ಪಕ ವಿಶೇಷ ಅಧಿಕಾರಗಳ ಪ್ರಾಪ್ತಿ ವ್ಯಾಪಾರ, ವ್ಯವಹಾರಗಳಲ್ಲಿ ಲಾಭ ಧನ ಲಾಭ ಪ್ರಸನ್ನತೆ ತಾ॥ ೨೭, ೩ ಖರ್ಚು ಮುಗ್ಗಟ್ಟು

ಕುಂಭ—ಎಲ್ಲವನ್ನೂ ಸಹಿಸಿ ರಿ. ಆರೋಗ್ಯ ನೆಟ್ಟಗಿರದು ನೌಕರಿದಂಧೆಗಳಲ್ಲಿ ನೂತನ ವೈರ ವಾಹನಾಪಘಾತ ತಾ॥೧, ೩ ಆಕಸ್ಮಿಕ ಖರ್ಚು ಕಲಹ ಪ್ರಾಣಹಾನಿ

ಮೀನ- ಅಸಂತುಷ್ಟಿಯ ಘಟನೆಗಳು ಅಶಾಂತಿ ಶೀತ ಮೀರಿದಖರ್ಚು. ಆರೋಗ್ಯ ನೆಟ್ಟಗೆ ಅಲ್ಪಮಾಧಾನ ಪ್ರವಾಸದಲ್ಲಿ ಹಾನಿ ತಾ॥ ೨೬, ೨೭ ಚಿಂತೆ ಪಿಶ್ವಾಸಘಾತ ಸ್ತ್ರೀಯೊಡನೆ ಕಲಹ

---

ಒಮ್ಮೆ ಸಂದರ್ಶಿಸಿರಿ

ಹೊಸ ಸ್ಟಾಕು ಬಂದಿದೆ

ಎಲ್ಲಾ ತರಹದ ಸೂಟು ಬಟ್ಟೆಗಳು, ಶರ್ಟಿಂಗ್ ಮತ್ತು ಸಿಲ್ಕ್ ಬಟ್ಟೆಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ

ಒಳ್ಳೆ ಕೆಲಸದ ಟೈಲರುಗಳು ಒಡನೆ ಬೇಕಾಗಿದೆ

ಪಟ್ಟು ಬ್ರದರ್ಸ್

ಶ್ರಾಬ್ ಮರ್ಚೆಂಟ್ಸ್,

ಲೇಡೀಸ್ ಮತ್ತು ಜೆಂಟ್ಸ್ ಟೈಲರ್ಸ್

ಚಾಮರಾಜ ಮೊಹಲ್ಲಾ ಮೈಸೂರು.

# ಪಾಕಿಸ್ತಾನ್ ಅಧಿಕಾರಿಗಳು ಯುದ್ಧದ ಆಜ್ಞೆಗಾಗಿ ಕಾದಿದ್ದಾರೆ

ಪಶ್ಚಿಮ ಪಾಕಿಸ್ತಾನ ಮತ್ತು ಅಜಾದ್ ಕಾಶ್ಮೀರ ಪ್ರದೇಶಗಳಲ್ಲೆಲ್ಲಾ ಯುದ್ಧದ ಸನ್ನಾಹಗಳು ಬಹುವಾಗಿ ನಡೆಯುತ್ತಿವೆ ಅಲ್ಲಿರುವ ಅಧಿಕಾರಿಗಳು ಯುದ್ಧಕ್ಕೆ ಆಪ್ತರು ಅಪ್ಪಣೆಗಾಗಿ ಕಾದಿದ್ದಾರೆಂಬುದಾಗಿ ಸರಕಾರಿ ಮುಖ್ಯೋಪಾಧ್ಯಾಯರಾಗಿದ್ದು ಅಲ್ಲಿಂದ ತಪ್ಪಿಸಿಕೊಂಡು ಶ್ರೀನಗರಕ್ಕೆ ಬಂದಿರುವ ಗುಲಾಂ ಮಹಮದ್ ಪಜಲ್‌ರವರು ಹೇಳಿದ್ದಾರೆ ಸ್ಕಾರ್ಡುವಿನಲ್ಲಿ ವಿಮಾನ ನಿಲ್ದಾಣವನ್ನು ಕಟ್ಟಲಾಗುತ್ತಿದೆ. ರಾವಲ್ಪಿಂಡಿ, ಪೆಶಾವರ್ ಮತ್ತು ಗಿಲ್ಗಿಟ್‌ಗಳಿಂದ ಯಥೇಚ್ಛವಾಗಿ ಸರಬರಾಜುಗಳು ಬರುತ್ತಿವೆಯೆಂದು ಅವರು ತಿಳಿಸಿರುವರು

## ಪರ್ಷಿಯಾ ಸರಕಾರದ ರಾಜೀನಾಮೆ

ಪರ್ಷಿಯಾ ಸರಕಾರದ ಮುಖ್ಯಮಂತ್ರಿ ಮಹಮದ್ ಸೈಯದ್‌ರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಸಲ್ಲಿಸಿದ್ದಾರೆ

## ವಿಶ್ವ ಕಾಶ್ಮೀರ ಸಮಿತಿ ರದ್ದಿಗೆ ಬ್ರಿಟನ್ನಿನ ಶಿಫಾರಸು

ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಕಾಶ್ಮೀರ ಸಮಸ್ಯೆ ಪರಿಹಾರದ ಬಗ್ಗೆ ನೇಮಿಸಿರುವ ಪರಿಶೀಲನಾ ಸಮಿತಿಯನ್ನು ರದ್ದುಗೊಳಿಸಿ, ಅದರ ಬದಲು ಒಬ್ಬ ಮಧ್ಯಸ್ಥಿಕೆಗಾರರನ್ನು ನೇಮಿಸಬೇಕೆಂದು ಭದ್ರತಾ ಸಮಿತಿಗೆ ಬ್ರಿಟನ್ನು ಸಲಹೆ ಮಾಡಿದೆ

## ಅಮೆರಿಕಾ ವಿದೇಶಾಂಗ ಶಾಖೆಯಲ್ಲಿ ಗೂಢಚಾರರು

ಅಮೆರಿಕದ ವಿದೇಶಾಂಗ ಇಲಾಖೆಯಲ್ಲಿ ಕಮ್ಯೂನಿಸ್ಟ್ ಗೂಢಚಾರರ ಒಂದು ಗುಂಪು ಇರುವುದಾಗಿ ಸೆನೇಟರ್ ಜೋಸೆಫ್ ಮೆಕಾರ್ಥಿಯವರು ಹೇಳಿರುವುದನ್ನು ಪರಿಶೀಲಿಸಲು ಸಮಿತಿಯೊಂದು ಏರ್ಪಾಡಾಗಿದೆ.

---

ಗಾಯತ್ರೀ ಟಾಕೀಸ್

26-2 50 ರಿಂದ 2 ದಿನಗಳು ಮಾತ್ರ

ದಿನವಹಿ 3 ಆಟಗಳು

ಎಲ್ಲವನ್ನೂ ಕಂಡು ಬಿಡಬಹುದಾದ ಕೊಂದರಿ ಹಾಗೂ ವಿನೋದಮಯದಿಂದೊಡಗೂಡಿದ

ವರ್ಣರಂಜಿತ ಚಿತ್ರ

ಯೆಸ್ ಸರ್ ದಟೀಸ್ ಮೈ ಬೇಬಿ

ಪಾತ್ರ.- ಡೊನಾಲ್ಡ್ ಓ ಕಾನ್ನರ್, ಗ್ಲೋರಿಯಾ ಡಿ ಹೇವನ್

ಮುಂದಿನ ಬದಲಾವಣೆ

ಆರ್ಕ್‌ಟಿಕ್ ಮ್ಯಾನ್ ಹಂಟ್

# ಪೂರ್ವ ಬಂಗಾಳ ದಿನಾಚರಣೆ

ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಡಾ॥ ಎನ್ ಬಿ ಖಾರೆಯವರು ಎಲ್ಲಾ ಹಿಂದೂ ಮಹಾ ಸಭೆಗಳೂ ಬರುವ ತಿಂಗಳು ೫ ನೇ ತಾ॥ ಪೂರ್ವ ಬಂಗಾಳ ದಿನಾಚರಣೆಯನ್ನು ನಡೆಸಬೇಕೆಂದೂ ಅಲ್ಲಿ ನಡೆಯುತ್ತಿರುವ ಘಟನೆಗಳನ್ನು ವಿವರಿಸಬೇಕೆಂದೂ ಪ್ರಾರ್ಥಿಸುತ್ತಾರೆ

## ಡೆಹಲಿ- ಕಲ್ಕತ್ತಾ ವಿಮಾನಗಳ ಜೂಜು

ಡೆಹಲಿ-ಕಲ್ಕತ್ತಾಗಳ ವಿಮಾನಗಳ ಜೂಜು ಗುರುವಾರ ನಡೆದು ಜೂಜಿನಲ್ಲಿ ಭಾಗವಹಿಸಿದ್ದ ಕ್ಯಾಪ್ಟನ್ ನಾಮ್ ಜೋಷಿ ಎಂಬುವರು ಇನ್ನು ಏಳು ಜನ ವೈಮಾನಿಕರಿಗಿಂತಲೂ ಅರ್ಧ ಘಂಟೆ ಮುಂಚಿತವಾಗಿ ಗುರಿಯನ್ನು ಮುಟ್ಟಿ ಗೆದ್ದರು

## ಹೃದಯ ಕೋಶಕ್ಕೆ ಶಸ್ತ್ರ ಚಿಕಿತ್ಸೆ

ಬರ್ಮಿಂಗ್‌ಹ್ಯಾಮಿನ ಮಕ್ಕಳ ಆಸ್ಪತ್ರೆಗೆ ಸೇರಿಸಲಾಗಿದ್ದ ೪ ವರ್ಷದ ಬಾಲಕನ ಹೃದಯ ಕೋಶದ ಶಸ್ತ್ರ ಚಿಕಿತ್ಸೆ ನಡೆಸಲಾಯಿತು ಅವನ ಶ್ವಾಸಕೋಶಗಳು ಸರಿಯಾಗಿ ಕೆಲಸ ಮಾಡುವುದಕ್ಕೆ ಹೃದಯಕೋಶದ ಒಂದು ಭಾಗವು ಅಡ್ಡಿಯಾಗಿತ್ತು. ಅದನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆಯಲಾಯಿತು ಹುಡುಗನು ಹುಷಾರಾಗಿದ್ದಾನೆ

§ ಬೆಂಗಳೂರು ನಗರದ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಡೆಯುತ್ತಿರುವ ವಸ್ತುಪ್ರದರ್ಶನವು ಅನೇಕರನ್ನು ಆಕರ್ಷಿಸುತ್ತಿದೆ ಅಲ್ಲಿ ಬರುವ ಗುರುವಾರ ಚಲನ ಚಿತ್ರ ಪ್ರಖ್ಯಾತರಾದ ಶ್ರೀ ಹೊನ್ನಪ್ಪ ಭಾಗವತರ ಸಂಗೀತವನ್ನು ಏರ್ಪಡಿಸಲಾಗಿದೆ

---

ರಾಜಕಮಲ್

ಟಾಕೀಸ್

24—2—50 ರಿಂದ

ಜನಭರಿತವಾದ ೧೦ನೇ ವಾರ

ದಿನವಹಿ 2 ಪ್ರದರ್ಶನಗಳು

ಜೀವನ

—.ಭೂಮಿಕೆ.—

ವೈಜಯಂತಿಮಾಲಾ, ಟಿ. ಆರ್ ರಾಮಚಂದ್ರ, ಲಲಿತ-ಪದ್ಮಿನಿ

॥ ಶ್ರೀ ॥

ಗಣೇಶಾ ಟಾಕೀಸು

25-2-50 ರಿಂದ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಮಂಗಯಾರ ಕರಸಿ

(ತಮಿಳು)

ಭೂಮಿಕೆ.- ಕನ್ನಾಂಬ, ಅಂಜಲಿ ದೇವಿ, ಜೆಮಿನಿ, ಪೂರ್ಲೆಂ, ಕೃಷ್ಣ, ಮಧುರಂ, ಲಲಿತ ಪದ್ಮಿನಿ

---

ಶ್ರೀ ಪ್ರಸನ್ನಾಂಬಾ ಟಾಕೀಸ್

ಚಾಮರಾಜನಗರ

26 2 50 ರಿಂದ ಜನಭರಿತವಾದ

6 ನೇ ವಾರ

ಚಂದ್ರಲೇಖ

(ತಮಿಳ್)

ನೃತ್ಯ ... ರಿಂದ ... ರಂಜಿಸು

---

ಪ್ರಭುದೇವಾ ಟಾಕೀಸ್

ದಿನವಹಿ 3 ಆಟಗಳು

27-2-50ನೇ ಸೋಮವಾರದಿಂದ

- ಭಕ್ತ ಕಲಾತ್ತಿ -

(ತಮಿಳು)

ರಂಜನ ಹೊನ್ನಪ್ಪ ಭಾಗವತರ್ ತಿರಗೆ ... ಜಾನಕಿ, ... ಎಸ್ ಕೃಷ್ಣ ಮತ್ತು ಓ ಎ ... ಮಧುರಂ

Edited, Printed and published by A. R Nagarajan at Sadhvi Press, Subbiah Road, Mysore

ಫೋನ್ ನಂ 792 ॥ವಂದೇ ಮಾತರಂ॥ ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೮] ಸೋಮವಾರ ೨೭-೨-೫೦ [ಸಂಚಿಕೆ ೧೭೭

# - ಜಪಾನಿಗೆ ಪಂಡಿತ - ನೆಹರೂರವರ ಭೇಟಿ

## ಕೆ. ಸಿ. ರೆಡ್ಡಿಯವರ ಆಗಮನ

ಸ್ವಂ ಸು ಪೋ॥] ಬೆಂಗಳೂರು ೨೭

ಪ್ರಧಾನ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಪುದುಚೇರಿ, ತಿರುವಣ್ಣಾಮಲೆ ಪ್ರವಾಸವನ್ನು ಮುಗಿಸಿಕೊಂಡು ನೆನ್ನೆ ದಿನ ಹಿಂದಿರುಗಿದರು ಅವರು ಈದಿನ ಮದ್ದೂರಿನಲ್ಲಿ ಶಾಸನಾ ಸಭಾಧ್ಯಕ್ಷ ಶ್ರೀ ಎ. ವೆಂಕಟಪ್ಪನವರ ಗೌರವಾರ್ಥವಾಗಿ ಏರ್ಪಡಿಸಿರುವ ಸಾರ್ವಜನಿಕ ಸ್ವಾಗತ ಸಮಾರಂಭದ ಅಧ್ಯಕ್ಷತೆ ವಹಿಸುವರು ಅಲ್ಲಿಂದ ಅವರು ಈ ದಿನವೇ ರಾಜಧಾನಿಗೆ ತೆರಳುವರು

## ಢಾಕಾ ಪರಿಸ್ಥಿತಿ ಬಗ್ಗೆ ಪಶ್ಚಿಮ ಬಂಗಾಳದ ಪ್ರಕಟಣೆ

ಪೂರ್ವ ಬಂಗಾಳದಲ್ಲಿ ನಡೆದ ಘಟನೆ ಬಗ್ಗೆ ಪಶ್ಚಿಮ ಬಂಗಾಳ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಈ ರೀತಿ ತಿಳಿಸಿದ್ದಾರೆ:- ಪೂರ್ವ ಬಂಗಾಳದ ಢಾಕಾ, ಖುಲ್ನಾ, ರಾಜಶಾಹಿ ಮುಂತಾದ ಪ್ರದೇಶಗಳಲ್ಲಿ ಭಾರತದ ಹೈಕಮೀಷನರ್ ಡಾ॥ ಸೀತಾರಾಮರವರು ಪ್ರವಾಸಮಾಡಿ ಅಲ್ಲಿ ಈಗ ಶಾಂತಿ ನೆಲೆಸಿರುವುದೆಂದು ವರದಿ ಮಾಡಿದ್ದಾರೆ. ಹಲವು ಕಡೆ ಸರ್ಕಾರದವರು ಪ್ರಜೆಗಳ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಪುಂಡರು ನಡೆಸುತ್ತಿರುವ ಗಲಾಟೆಯನ್ನು ತಹಬಂದಿಗೆ ತರುವುದರಲ್ಲಿ ಸರ್ಕಾರದವರು ಹಿಂದೆ ಬಿದ್ದಿದ್ದಾರೆ ಇತ್ತೀಚೆಗೆ ಅಲ್ಲಿನ ಪರಿಸ್ಥಿತಿಯು ಶಾಂತವಾಗಿದೆ.

## ಹಳ್ಳಿ ಅಂಚೆಯವನ ಮೇಲೆ ದರೋಡೆ

ಈಗತಾನೆ ಮೈಸೂರು ಸಂಸ್ಥಾನಕ್ಕೆ ಸೇರಿಸಲ್ಪಟ್ಟಿರುವ ಮಡಕಶಿರಾ ಎಂಬಲ್ಲಿಂದ ಕೋಲಾರ ಜಿಲ್ಲೆಯ ಗುಡಿಬಂಡೆಗೆ ಅಂಚೆ ಚೀಲವನ್ನು ಕಾಲುನಡಗೆಯಲ್ಲಿ ಕಳೆದ ಮಂಗಳವಾರ ಅಂಚೆಯವನು ತಕ್ಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ಒಬ್ಬನು ಒಂದು ಗೋಲು ಹಿಡಿದುಕೊಂಡು ಬಂದು ಅವನ ತಲೆಗೆ ಹೊಡೆದು ಅಂಚೆ ಚೀಲವನ್ನು ಕಿತ್ತುಕೊಂಡು ಹೋದನೆಂದು ವರದಿಯಾಗಿದೆ. ಅಂಚೆಯವನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

## ದೆಹಲಿಯಲ್ಲಿ ಕಳ್ಳರ ದಿ ನಾ ಚ ರ ಣೆ

ಮನೆಗಳಲ್ಲಿ ಸಣ್ಣ ಪುಟ್ಟ ಕಳವುಗಳ ಬಗ್ಗೆ ಅನೇಕ ವರದಿಗಳು ಪೋಲೀಸರಿಗೆ ಬಂದುದರಿಂದ ಜನರು ಕಳೆದ ಗುರುವಾರ 'ಕಳ್ಳರ ದಿನ' ವೆಂದು ಕರೆದ, ತೀವ್ರ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅನೇಕ ಕಳ್ಳರನ್ನು ಬಂಧಿಸಿದರೆಂದು ಗೊತ್ತಾಗಿದೆ

### ವಿವಾಹ ಮತ್ತು ಉಪನಯನ ಮಹೋತ್ಸವಗಳು

ರಾಜ್ಯಶಾಸ್ತ್ರಿ ಪ್ರವೀಣ ಅಗರಂ ಎ ಆರ್ ಸುಂದರೈಯ್ಯಂಗಾರರವರ ತಮ್ಮ ಶ್ರೀ ಗೋಪಾಲಕೃಷ್ಣ ಯ್ಯನವರ ಮಗ ವಿಶ್ವೇಶ್ವರನಿಗೆ ನಂಜನಗೂಡಿನಲ್ಲಿ ಈ ದಿನ ಬ್ರಹ್ಮೋಪದೇಶವೂ ಮತ್ತು ಜ್ಯೇಷ್ಠ ಪುತ್ರ ಶ್ರೀ ಸುಬ್ಬರಾಮಯ್ಯನವರಿಗೆ ಕೃಷ್ಣರಾಜಪೇಟೆ ತಾಲ್ಲೋಕು ಜೋಡಿ ಚೀಲದ ಕೆರೆ ಮಜ್ಕೂರಿನ ಜೋಡಿದಾರ್ ತಿಮ್ಮಪ್ಪನವರ ಪುತ್ರಿ ಚಿ॥ ಸೌ॥ ನಾಗರತ್ನಮ್ಮನನ್ನು ಕೊಟ್ಟು ವಿವಾಹವೂ ಚೀಲದ ಕೆರೆಯ ಲ್ಲಿಯೂ ಮುಂದಿನ ತಿಂಗಳು ೩ ನೇ ತೇ ಜರುಗುವುವು

## ಈಡಿಗ ಗೌಡರು ಮತ್ತು ಆದಿಕರ್ಣಾಟಕರ ಸಮ್ಮೇಳನ

ಮೈಸೂರು ೨೭

ನಂಜನಗೂಡು ತಾ॥ ಮಡಕೂರಿನ ಈಡಿಗ ಗೌಡರು ಮತ್ತು ಆದಿಕರ್ಣಾಟಕರ ಸಮ್ಮೇಳನವು ನಿನ್ನೆ ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಇದಕ್ಕಾಗಿ ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಲಾಗಿತ್ತು ಗ್ರಾಮದ ಬಳಿ ಇರುವ ಶಿಥಿಲವಾದ ಒಂದು ಕೆರೆಯನ್ನೂ ಮತ್ತು ಗ್ರಾಮ ನಿವಾಸಿಗಳ ವಸತಿಗಾಗಿ ನಿವೇಶನವನ್ನೂ ಪರಿಶೀಲಿಸಲಾಯಿತು.

ಊರಿನ ಪ್ರಜೆಗಳ ಕುಂದುಕೊರತೆಗಳನ್ನು ವಿಚಾರಿಸಿ. ಅಲ್ಲಿನ ಕೆರೆಯ ದುರಸ್ತು, ಬಾವಿಯ ನಿರ್ಮಾಣ, ಆಸ್ಪತ್ರೆ ಸೌಲಭ್ಯ ವಾಲಿಯ ಅಗತ್ಯ ಮುಂತಾದ ಅಂಶಗಳನ್ನು ನಿವೇದಿಸಿ ಅಧ್ಯಕ್ಷರಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಅಲ್ಲಿನ ಕೆಲವು ರೈತರು ತಮಗೆ ಬೇಕಾದ ಇತರ ಸೌಲಭ್ಯಗಳ ಬಗ್ಗೆ ಸಲ್ಲಿಸಿದ ಅರ್ಜಿಗಳನ್ನೂ ಸಹ ಅಧ್ಯಕ್ಷರು ಪರಿಶೀಲಿಸಿದರು

ಶ್ರೀ ಕೆ ಶೇಷಾದ್ರಿಯವರು ಎಲ್ಲರಿಗೂ ಸ್ವಾಗತವನ್ನು ಬಯಸಿ ಸಮ್ಮೇಳನದ ಉದ್ದೇಶಗಳನ್ನು ವಿವರಿಸಿದರು ಶ್ರೀಗಳಾದ ಎಸ್. ಶ್ರೀನಿವಾಸಮೂರ್ತಿ, ಅಗರಂ ರಂಗಯ್ಯ, ಜಿ ಲಿಂಗಪ್ಪ ಮತ್ತು ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ತಿರುಮಲ ಸ್ವಾಮಿಯವರು ಮಾತನಾಡಿ ಗ್ರಾಮಗಳ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಳ್ಳುತ್ತಿರುವ ಕಾರ್ಯಗಳಲ್ಲಿ ರೈತರು ಪೂರ್ಣವಾಗಿ ಭಾಗವಹಿಸಿ ತಮ್ಮ ಅಭ್ಯುದಯವನ್ನು ದೇಶದ ಹಿತವನ್ನೂ ಸಾಧಿಸಬೇಕೆಂದು ತಿಳಿಸಿದರು ಎಲ್ಲ ವಕ್ತೃಗಳೂ ಪ್ರಜೆಗಳ ಬೇಡಿಕೆಗಳ ಬಗ್ಗೆ ಸೂಕ್ತವಾದ ವಿಚಾರಣೆಗಳನ್ನು ಮಾಡುವುದಾಗಿ ಆಶ್ವಾಸನೆ ಕೊಡುತ್ತಿದ್ದರು.

## ಗ್ರೀಸಿನ ಚುನಾವಣೆ ಸ್ಪರ್ಧೆಗೆ ೪೪ ಪಕ್ಷಗಳು

ಬರುವ ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಗ್ರೀಸ್ ಮಹಾ ಚುನಾವಣೆಯಲ್ಲಿ ೪೪ ರಾಜಕೀಯ ಪಕ್ಷಗಳು ಭಾಗವಹಿಸುವುವೆಂದು ವರದಿಯಾಗಿದೆ ಈ ಪಕ್ಷಗಳಿಗೆ ಸ್ಥಾನ ನಿಗದಿಯಾಗಿದೆ

## ಜಪಾನಿಗೆ ಪಂಡಿತ ನೆಹರೂರವರ ಭೇಟಿಯೋ?

ಭಾರತದಲ್ಲಿ ೧೦೦ ದಿವಸಗಳ ಪ್ರವಾಸವನ್ನು ಕೈಗೊಂಡಿದ್ದ ಜಪಾನಿನ ಗ್ರಂಥಕರ್ತೆ ಶ್ರೀಮತಿ ಡಾ॥ ಟೋಮಿಕೋರವರು ಪಂಡಿತ ಜವಹರಲಾಲ್ ನೆಹರೂರವರನ್ನು ತಮ್ಮ ದೇಶಕ್ಕೆ ಆಹ್ವಾನಿಸಿದರೆಂದೂ, ಪಂಡಿತ ನೆಹರೂರವರು ಈ ಆಹ್ವಾನವನ್ನು ಸೌಹಾರ್ದಯುತವಾಗಿ ಮನ್ನಿಸಿ, ಅಲ್ಲಿಗೆ ಭೇಟಿ ಕೊಡುವ ಬಗ್ಗೆ ಆಸಕ್ತಿ ತೋರಿದರೆಂದೂ ವರದಿಯಾಗಿದೆ. ಜಪಾನ್ ಶಾಂತಿ ಶೌಲಿಗೆ ಸಿದ್ಧವಾಗುವ ಸಂದರ್ಭದಲ್ಲಿ ಪಂಡಿತ ನೆಹರೂರವರು ಅಲ್ಲಿ ಇರಬೇಕೆಂದು ಶ್ರೀಮತಿ ಡಾ॥ ಟೋಮಿಕೋರವರು ಆಶಿಸಿದ್ದಾರೆ

## ಮಧುರೆ ನಾಪಿತರ ಮತ್ತು ಅಗಸರ ಮುಷ್ಕರ ಮುಕ್ತಾಯ

ತಮಿಳು ನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕಾಮರಾಜ ನಾಡರ್‌ರವರ ಮಧ್ಯಸ್ಥಿಕೆಯಿಂದ ಕಳೆದ ೧೩ ದಿನಗಳಿಂದ ನಡೆಯುತ್ತಿದ್ದ ಅಲ್ಲಿನ ಕ್ಷೌರಿಕರ ಮತ್ತು ೫ ದಿನಗಳಿಂದ ನಡೆಯುತ್ತಿದ್ದ ಅಗಸರ ಮುಷ್ಕರಗಳು ಮುಕ್ತಾಯಗೊಂಡವು ಮಧುರೆ ಪೌರಸಭೆಯವರು ವಿಧಿಸಿದ್ದ ವಿಧಿಗಳ ಬಗ್ಗೆ ತೃಪ್ತಿಕರ ಇತ್ಯರ್ಥ ಕೈಗೊಳ್ಳಲಾಗಿದೆ

## ಲಿ ಸುಂಗ್ ಜೇಗರವರನ್ನು ವಿಚಾರಣೆಗೆ ಗುರಿ ಮಾಡಬೇಕು

ರಾಷ್ಟ್ರೀಯ ಚೀಣದ ಅಧ್ಯಕ್ಷತೆಯನ್ನು ಮತ್ತೆ ವಹಿಸಬೇಕೆಂದು ಚೀಣದ ಶಾಸನ ಸಭೆಯು ಇತ್ತಿರುವ ಆಹ್ವಾನವನ್ನು ಮನ್ನಿಸಿ ಈ ವಾರಾಂತ್ಯದೊಳಗೆ ಮಾರ್ಷಲ್ ಚಿಯಾಂಗ್ ಕೈಷೇಕರು ಅಧಿಕಾರ ಸ್ವೀಕರಿಸುವರೆಂದು ಹೇಳಲಾಗಿದೆ ಎಲ್ಲರ ಮಾಜಿ ಅಧ್ಯಕ್ಷ ಜನರಲ್ ಲಿ ಸುಂಗ್ ಜೇರವರು ತಮ್ಮ ಜವಾಬ್ದಾರಿ ಮತ್ತು ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂದೂ, ಆದ್ದರಿಂದ ಅವರನ್ನು ವಿಚಾರಣೆಗೆ ಗುರಿಪಡಿಸಬೇಕೆಂದೂ ಶಾಸನ ಸಭೆಯು ನಿರ್ಣಯಿಸಿದೆ

○ ಪಶ್ಚಿಮ ಪಂಜಾಬು ವಿಶ್ವವಿದ್ಯಾಲಯದವರು ಬರುವ ತಿಂಗಳು ೯ ರಂದು ಲಾಹೋರಿನಲ್ಲಿ ಏರ್ಪಡಿಸುವ ಘಟಿಕೋತ್ಸವ ಸಮಯದಲ್ಲಿ ಮಹಮ್ಮದಾಲಿಯವರಿಗೆ ಗೌರವ ಪದವಿಯನ್ನು ಕೊಡಲಿರುವರು

## ಪುಟ್ಟಸ್ವಾಮಿ ಅರಸರ ನಿವೃತ್ತಿ ಬಗ್ಗೆ ಖಂಡನಾ ಸಭೆ

ಸ್ವಂ. ಸು] ಬೆಂಗಳೂರು ೨೭

ಡಾ॥ ಪುಟ್ಟಸ್ವಾಮಿ ಅರಸಿನವರನ್ನು ಅವರ ಅವಧಿಗಿಂತಲೂ ಮುಂಚಿತವಾಗಿ ನಿವೃತ್ತಿ ಮಾಡಿದ ಸಂದರ್ಭದಲ್ಲಿ ನೆನ್ನೆ ಚಿಕ್ಕಲಾಲ್‌ಬಾಗಿನಲ್ಲಿ ಖಂಡನಾ ಸಭೆಯು ನಡೆಯಿತು. ಅಧ್ಯಕ್ಷತೆವಹಿಸಿದ್ದ ಶ್ರೀ ಡಿ. ವಿ ಗುಂಡಪ್ಪನವರು ಭಾಷಣ ಮಾಡುತ್ತಾ ಶ್ರೀ ಅರಸಿನವರ ನಿವೃತ್ತಿಗೆ ಕಾರಣ ಗೊತ್ತಿಲ್ಲವಾದುದರಿಂದ ಜನರಲ್ಲಿ ಕಳವಳವನ್ನು ಮೂಡಿದೆಯೆಂದೂ, ಶ್ರೀಯುತರು ನಿಷ್ಪಕ್ಷಪಾತ ಮತ್ತು ಸ್ವತಂತ್ರ ಮನೋಭಾವದವರಾಗಿದ್ದು ನ್ಯಾಯ ದೊರಕಿಸಿಕೊಡುತ್ತಿದ್ದರೆಂದೂ ತಿಳಿಸಿದರು. ಮುಂದುವರೆಯುತ್ತಾ ಆಡಳಿತ ಯಂತ್ರವು ದುರಸ್ತು ಅವಶ್ಯಕವೆಂದು ಅವರು ತಿಳಿಸಿದರು.

ರಾಷ್ಟ್ರಾಧ್ಯಕ್ಷರಿಂದ ಆದ ನಿವೃತ್ತಿ ಆಜ್ಞೆಯಿಂದ ಆ ವಿಧಿಯು ದುರುಪಯೋಗವಾಗಿದೆಯೆಂದೂ, ಈ ಕಾರಣದಿಂದ ಆಜ್ಞೆಯನ್ನು ಕೂಡಲೇ ರದ್ದುಗೊಳಿಸಬೇಕೆಂದೂ ಶ್ರೀ ಎ ಟಿ ಗುರು ಶ್ರೀನಿವಾಸರಾಯರಿಂದ ಮಂಡಿಸಲ್ಪಟ್ಟ ನಿರ್ಣಯವು ಅಂಗೀಕೃತವಾಯಿತು

### ಸಿ. ಸುಬ್ರಹ್ಮಣ್ಯ ಅಯ್ಯರ್‌ರವರು ನಿಧನರಾದರು

ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಸಿ. ಸುಬ್ರಹ್ಮಣ್ಯ ಅಯ್ಯರ್‌ರವರು ನೆನ್ನೆ ರಾತ್ರಿ ತಮ್ಮ ಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ೭೪ ವರ್ಷ ವಯಸ್ಸಾಗಿತ್ತು. ಅವರಿಗೆ ಪತ್ನಿ, ತಾಯಿ ಮತ್ತು ಏಕಮಾತ್ರ ಪುತ್ರಿ ಇವರುಗಳು ಇರುವರು ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲಿ.

## ಭಾರತದ ಗ್ರಾಮ ಕೈಗಾರಿಕಾ ವಸ್ತುಗಳಿಗೆ ವಿದೇಶೀ ಗಿರಾಕಿ

ಭಾರತ ದೇಶದ ಗ್ರಾಮ ಮತ್ತು ಗೃಹ ಕೈಗಾರಿಕೆಗಳಲ್ಲಿ ತಯಾರಾದ ವಸ್ತುಗಳನ್ನು ವಿದೇಶಗಳಿಗೆ ರಫ್ತು ಮಾಡಲು ಮತ್ತು ಅಲ್ಲಿ ಅವುಗಳಿಗೆ ಗಿರಾಕಿಗಳನ್ನು ಒದಗಿಸಲು ಒಂದು ಕಾರ್ಪೋರೇಷನ್ನನ್ನು ರಚಿಸಬೇಕೆಂದು ಜಯಪುರದಲ್ಲಿ ಸಮಾವೇಶಗೊಂಡ ಭಾರತ ಗೃಹ ಕೈಗಾರಿಕಾ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ.

## ಹರಿಕಥೆ ದಾಸರು ಹುಡುಗಿಗೆ ಹೊಡೆದ ಪ್ರಸಂಗ

ಮೈಸೂರು ೨೭

ಕೊತ್ವಾಲ್ ರಾಮಯ್ಯನ ಬೀದಿಯ ಕಮಲಾಂಬ ನಿಲಯದಲ್ಲಿ ನೆನ್ನೆ ಶ್ರೀ ನಾರಾಯಣ ದಾಸರಿಂದ ನಡೆಯಬೇಕಾಗಿದ್ದ ಹರಿಕಥೆಯು ನಡೆಯದೆ ನಿಂತಿತು ಶ್ರೀ ದಾಸರು ಹಿಂದಿನ ದಿನ ತಮ್ಮ ಉಂಗುರಗಳನ್ನು ಕಳೆದುಕೊಂಡ ಸಂದರ್ಭದಲ್ಲಿ ಒಬ್ಬ ಹುಡುಗಿಯನ್ನು ಹೊಡೆದರೆಂಬ ಕಾರಣದ ಮೇಲೆ ಆಕೆಗೆ ಸಂಬಂಧಪಟ್ಟವರು ಬಂದು ದಾಸರನ್ನು ಸಮಜಾಯಿಷಿ ಕೇಳುವ ಸಂದರ್ಭದಲ್ಲಿ ಗಲಾಟೆಯಾಗಿ ಪೋಲೀಸರ ಸಹಾಯ ಕೇಳಬೇಕಾಗಿ ಬಂದಿತು ದಾಸರನ್ನು ಅವರ ಸಹಾಯದಿಂದ ಕಳುಹಿಸಲಾಯಿತು.

○ ಶ್ರೀಮತಿ ಯಶೋಧರಾ ದಾಸಪ್ಪನವರ ಹೆಸರನ್ನು ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲಾಗಿದೆ

## ಕಮ್ಯೂನಿಸ್ಟ್ ಹಾವಳಿ ತಡೆಯಲು ಹೊಸ ಶಾಸನ

ಭಾರತದಲ್ಲಿ ಕಮ್ಯೂನಿಸ್ಟರ ಹಾವಳಿಯನ್ನು ತಡೆಯಲು ಪಾರ್ಲಿಮೆಂಟಿನಲ್ಲಿ ಉಪ ಪ್ರಧಾನಿ ಸರ್ದಾರ್ ಪಟೇಲರು ತಂದ ಪ್ರಿವೆಂಟಿವ್ ಡಿಟೆನ್ಷನ್ ಮಸೂದೆಯು ಅಂಗೀಕೃತವಾಯಿತು. ಈ ಮಸೂದೆಯನ್ನು ತಯಾರಿಸಲು ತಾವು ಎರಡು ದಿನಗಳ ವರೆಗೆ ನಿದ್ದೆಗೆಡಬೇಕಾಯಿತೆಂದು ಪಟೇಲರು ಹೇಳಿದರು. ಈಗ ಬಂಧಿತರಾಗಿರುವ ಹೆಚ್ಚಿನ ಸಂಖ್ಯೆಯ ಕಮ್ಯೂನಿಸ್ಟರು ದೇಶದ ಭದ್ರತೆಗೆ ಕಂಟಕಪ್ರಾಯರಾಗಿರುವರೆಂದೂ, ಲಕ್ಷಾಂತರ ಜನರ ತ್ಯಾಗಗಳಿಂದ ಗಳಿಸಲ್ಪಟ್ಟ ಸ್ವಾತಂತ್ರ್ಯವನ್ನು ನಾಶಮಾಡಲು ಹೊರಟಿರುವ ಅಲ್ಪ ಸಂಖ್ಯಾತ ಗುಂಪಿನವರನ್ನು ತಡೆಗಟ್ಟುವುದು ಅವಶ್ಯಕವೆಂದೂ ಅವರು ತಿಳಿಸಿದರು.

## ಚಿಕ್ಕಮಗಳೂರಿನಲ್ಲಿ ಟಾಪಿಯೋಕಾ ಬೆಳೆ

ಕಳೆದ ಮಂಗಳವಾರ ಚಿಕ್ಕಮಗಳೂರಿನ ಕಾಫಿ ಮತ್ತು ಅಡಿಕೆ ವ್ಯವಸಾಯಗಾರರ ಸಭೆಯು ಸಮಾವೇಶಗೊಂಡು ಚಿಕ್ಕಮಗಳೂರು ಮತ್ತು ಮಲೆನಾಡುಗಳಲ್ಲಿ ಟಾಪಿಯೋಕಾವನ್ನು ಬೆಳೆಯುವ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಒಂದು ಎಕರೆ ಪ್ರದೇಶದಲ್ಲಿ ೨೫೦ ರೂ ವೆಚ್ಚದಿಂದ, ೩೦೦ ಟನ್ನುಗಳಷ್ಟು ಟಾಪಿಯೋಕಾವನ್ನು ಬೆಳೆಯಬಹುದೆಂದು ಅಭಿಪ್ರಾಯ ಪಡಲಾಗಿದೆ. ಇದರಿಂದ ದೇಶದ ಆಹಾರ ಅಭಾವವು ಬಹುಮಟ್ಟಿಗೆ ನೀಗುವುದೆಂದು ನಂಬಲಾಗಿದೆ.

## ಪಾಕಿಸ್ತಾನ-ಅಫ್ಘಾನಿಸ್ತಾನಗಳಿಗೆ ಅರಬ್ ಮಧ್ಯಸ್ಥಿಕೆ

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನಗಳಿಗೆ ಇರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸುವ ಬಗ್ಗೆ ಅರಬ್ ಲೀಗಿನ ಹಿರಿಯ ಅಧಿಕಾರಿಗಳು ಈಚೆಗೆ ಅಫ್ಘಾನಿಸ್ತಾನದ ರಾಜಪ್ರತಿನಿಧಿಯವರನ್ನು ಭೇಟಿ ಮಾಡಿದ್ದರೆಂದು ಲಾಹೋರಿನ ಪಾಕಿಸ್ತಾನ್ ಅಸೋಸಿಯೇಟೆಡ್ ಪ್ರೆಸ್ ಸಂಸ್ಥೆ ತಿಳಿಸಿದೆ. ಕರಾಚಿಗೆ ಅವರುಗಳು ಈಗ ಬಂದಿರುವರು. ಪಾಗೆಯೇ ಕೈರೋ ಎಗೆ ತೆರಳುವರು.

## ಅಮೆರಿಕದಲ್ಲಿ ಅಣು ಬಾಂಬಿನಿಂದ ರಕ್ಷಣೆಗಾಗಿ ಶಿಕ್ಷಣ

ಅಮೆರಿಕದಲ್ಲಿ ಯುದ್ಧದ ಕಳವಳ ಹೆಚ್ಚುತ್ತಿರುವುದರಿಂದ ಅಣು ಬಾಂಬಿನಿಂದ ಜನರು ರಕ್ಷಣೆ ಪಡೆಯುವ ಬಗ್ಗೆ ಶಿಕ್ಷಣವನ್ನು ಕೊಡಲು ನಿರ್ಧರಿಸಲಾಗಿದೆ.

## ಕಲ್ಕತ್ತೆಯಲ್ಲಿ ಹರತಾಳ

ಪೂರ್ವಬಂಗಾಳ ನಿರಾಶ್ರಿತ ಅಲ್ಪ ಸಂಖ್ಯಾತ ಸಂಘದವರ ಘೋಷಣೆ ಮೇರೆ ಕಲ್ಕತ್ತೆಯಲ್ಲಿ ಮೊನ್ನೆ ನಡೆದ ಹರತಾಳದ ಸಂಬಂಧವಾಗಿ ಹಲವು ಘಟನೆಗಳು ನಡೆದು ಐದು ಜನರು ಸತ್ತು, ಹಲವರಿಗೆ ಗಾಯವಾಗಿದೆ. ಹಲವು ಪುಂಡುಜನರು ಅಂಗಡಿಗಳ ಮೇಲೆ ಬಿದ್ದರು ಮತ್ತು ವಾಹನಗಳ ಓಡಾಟಕ್ಕೆ ಅಡ್ಡಿಪಡಿಸಿದರು. ಪೂರ್ವಬಂಗಾಳದ ನೊಂದವರಲ್ಲಿ ಸಹಾನುಭೂತಿ ತೋರಿಸಲು ಈ ರೀತಿ ಹರತಾಳವನ್ನಾಚರಿಸಲಾಯಿತು. ಘಟನೆಗಳು ಹೆಚ್ಚದಂತೆ ಪೋಲೀಸರೂ ಮತ್ತು ಮಿಲಿಟರಿಯವರೂ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡುದಲ್ಲದೆ ಗುಂಪುಗಳನ್ನು ಚದುರಿಸಲು ಟಿಯರ್ ಗ್ಯಾಸನ್ನು ಉಪಯೋಗಿಸಿದರು.

## ವಿವಾಹ ಮುರಿದುದಕ್ಕೆ ವರನಿಂದ ಕನ್ಯೆಯ ಕೊಲೆ

ಬೊಂಬಾಯಿನ ಒಳ ಭಾಗ ಎಂಬಲ್ಲಿ ಯಶವಂತಭಿವಾ ಎಂಬ ೨೫ ವರ್ಷದ ಯುವಕನಿಗೂ ರಮಾ ಎಂಬ ಕನ್ಯೆಗೂ ವಿವಾಹ ನಿಶ್ಚಿತವಾಗಿತ್ತು. ಕಾರಣಾಂತರದಿಂದ ಅವರ ವಿವಾಹವು ರದ್ದಾಗಲು ಯಶವಂತಭಿವೆಯು ರಮಳನ್ನು ಅವಳು ಉಪಾಹಾರ ತೆಗೆದುಕೊಳ್ಳುತ್ತಿದ್ದಾಗ ಸಾಯಿಸಿದನು. ಅವನ ದಸ್ತಗಿರಿಯಾಗಿ, ಮುಂದಿನ ತನಿಖೆ ಸಾಗುತ್ತಿದೆ.

## ಬ್ರಿಟಿಷ್ ಚುನಾವಣೆ ಬಗ್ಗೆ ಚರ್ಚಿಲ್ಲರ ಅಭಿಪ್ರಾಯ

ಬ್ರಿಟನ್ನಿನಲ್ಲಿ ನಡೆದ ಚುನಾವಣೆಗಳ ಬಗ್ಗೆ ಟೋರಿ ಪಕ್ಷದ ಮುಖಂಡರಾದ ಚರ್ಚಿಲ್ಲರು ಒಂದು ಹೇಳಿಕೆಯನ್ನಿತ್ತು ಕೂಲಿಗಾರರ ಪಕ್ಷಕ್ಕೆ ಕೊಂಚ ಹೆಚ್ಚಿನ ಸ್ಥಾನಗಳು ದೊರೆತಿರುವುದರಿಂದ ಅವರ ಸರ್ಕಾರವು ದೃಢವಾಗಿರುವುದಕ್ಕಾಗುವುದಿಲ್ಲವೆಂದೂ, ಅನಿಶ್ಚಿತ ಪರಿಸ್ಥಿತಿಯು ಒದಗಿದೆಯೆಂದೂ ಹೇಳಿರುವರು.

## ವಿವಾಹ ಮಹೋತ್ಸವ

ಪ್ರಜಾಸಭಾ ಸದಸ್ಯರಾದ ಶ್ರೀ ಸಿ. ನರಸಿಂಹಮೂರ್ತಿಯವರ ಸೋದರ ಸೊಸೆ ಚಿ|| ಸೌ|| ನಾಗರತ್ನ ಎಂಬ ವಧುವನ್ನು ಶ್ರೀ ಕೆ. ವೆಂಕಟಾಚಲಯ್ಯನವರ ಪುತ್ರ ಶ್ರೀ ಪಿ. ವಿ. ವೆಂಕಟೇಶ್ ಎಂಬುವರಿಗೆ ಕೊಟ್ಟು ವಿವಾಹವು ನಿನ್ನೆ ದಿನ ರಾಜಧಾನಿಯ ನಂಜರಾಜ ಬಹದ್ದೂರ್ ಛತ್ರದಲ್ಲಿ ಜರುಗಿತು.

## ಮಕ್ಕಳಾಟಿಕೆಯಲ್ಲಿ ಬಾಲಕನು ಗುಂಡಿಗೆ ತುತ್ತಾದನು

ಉತ್ತರ ಭಾರತದ ಭಟಿಂಡಾ ಎಂಬಲ್ಲಿ ಒಬ್ಬಾತನು ಲೈಸನ್ಸ್ ಪಡೆಯದೆ ಮನೆಯಲ್ಲಿ ಇಟ್ಟುಕೊಂಡಿದ್ದ ಬಂದೂಕವನ್ನು ಅವನ ಮಕ್ಕಳಿಬ್ಬರು ಕುತೂಹಲದಿಂದ ಪರೀಕ್ಷಿಸಲು ತೆಗೆದುಕೊಂಡರು. ಹಾಗೆಯೇ ಅವರುಗಳು ಹುಡುಗಾಟವಾಗಿ ಆಡುತ್ತಿರುವಲ್ಲಿ ಬಂದೂಕವು ಹಾರಿ ಅವರ ಪೈಕಿ ಚಿಕ್ಕ ಹುಡುಗನು ಗುಂಡಿನ ಏಟಿಗೆ ತುತ್ತಾದನು. ಮತ್ತೊಬ್ಬ ಹುಡುಗನನ್ನೂ ಅವನ ತಂದೆಯನ್ನೂ ಪೋಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.

## ಬೀದಿಯಲ್ಲಿ ಕಾಗದದ ಚೂರು ಎಸೆದರೆ ೧ ವರ್ಷ ಜೈಲು

ಪ್ರಪಂಚದಲ್ಲೆಲ್ಲಾ ಅತಿ ಶುಭ್ರವಾದ ಪಟ್ಟಣವೆಂದು ಹೇಳಲಾಗಿರುವ ನ್ಯೂಯಾರ್ಕ್ ನಗರವು ಒಂದು ಹೊಸ ಶಾಸನವನ್ನು ಜಾರಿಗೆ ತಂದಿದೆಯೆಂದೂ, ಅದರ ಪ್ರಕಾರ ಯಾರಾದರೂ ಚೂರು ಕಾಗದ, ತಗಡಿನ ತುಂಡು ಅಥವಾ ಬೇರೆ ಯಾವ ವಸ್ತುವನ್ನಾದರೂ ರಸ್ತೆಯಲ್ಲಿ ಎಸೆದರೆ ಒಂದು ವರ್ಷ ಜೈಲು ವಾಸವನ್ನು ಅನುಭವಿಸಬೇಕಾಗುವುದೆಂದೂ ಅಥವಾ ೧೦೦ ಪೌಂಡು ಜುಲ್ಮಾನೆ ತೆರಬೇಕಾಗುವುದೆಂದೂ ಅಥವಾ ಎರಡನ್ನೂ ಅನುಭವಿಸಬೇಕಾಗುವುದೆಂದೂ ಹೇಳಲಾಗಿದೆ.

## ವಿಮಾನ ಸ್ಪರ್ಧೆಯಲ್ಲಿ ಮಹಿಳೆಗೆ ಜಯ

ಭಾರತದ ವಿಮಾನ ಸಂಸ್ಥೆಗಳವರು ಏರ್ಪಡಿಸಿದ್ದ ವಿಮಾನ ಹಾರಾಟ ಸ್ಪರ್ಧೆಯು ಮೊನ್ನೆ ಮುಕ್ತಾಯಗೊಂಡಿತು. ಮೊನ್ನೆ ದಿನದ ಸ್ಪರ್ಧೆಯಲ್ಲಿ ಕಾನ್ಪುರದ ಹಿಂದ್ ಫ್ಲೈಯಿಂಗ್ ಕ್ಲಬ್ಬಿನ ಶ್ರೀಮತಿ ಪ್ರೇಮ್ ಮಾಥುರ್ ಎಂಬ ೨೫ ವರ್ಷದ ತರುಣಿಯು ಜಯಶಾಲಿಯಾಗಿದ್ದಾಳೆ. ಆಕೆಗೆ ಮಹಿಳಾ ಸ್ಪರ್ಧಿಗಳ ಶ್ರೇಷ್ಠ ಬಹುಮಾನವನ್ನು ಕೊಡಲಾಗಿದೆ.

## ಲೂಧಿಯಾನಾದಲ್ಲಿ ಜಾಡಮಾಲಿಗಳ ಮುಷ್ಕರ

ಭಾರತ ರಿಪಬ್ಲಿಕ್ ದಿನಾಚರಣೆ ಸಂಬಂಧದಲ್ಲಿ ಲೂಧಿಯಾನಾ ಪೌರಸಭೆಯವರು ಮಂಜೂರ ಮಾಡಿದ್ದ ಅರ್ಧ ಸಂಬಳದ ಬೋನಸ್ಸನ್ನು ಕೊಡದಿದ್ದುದರಿಂದ ಅಲ್ಲಿನ ಸುಮಾರು ೬೫೦ ಮಂದಿ ಜಾಡಮಾಲಿಗಳು ಮುಷ್ಕರ ಹೂಡಿರುವರೆಂದು ವರದಿಯಾಗಿದೆ.

## ಲಾಹೋರು ರಸ್ತೆಗಳಿಗೆ ಮುಸಲ್ಮಾನರ ಹೆಸರುಗಳು

ಲಾಹೋರಿನಲ್ಲಿರುವ ರಸ್ತೆಗಳಮೇಲೆ ಎಲ್ಲೆಲ್ಲಿ ಮುಸಲ್ಮಾನೇತರರ ಹೆಸರುಗಳನ್ನು ಬರೆಯಲಾಗಿದೆಯೋ ಅಂತಹವುಗಳನ್ನೆಲ್ಲಾ ತೆಗೆದು ರಾಜಕೀಯ, ಮತೀಯ ಮತ್ತು ಸಾಹಿತ್ಯ ಪ್ರಪಂಚಗಳಲ್ಲಿ ಮುಂದಿರುವ ಮುಸ್ಲಿಮರುಗಳ ಹೆಸರುಗಳನ್ನು ಇಡಲಾಗುವುದು. ಇದಕ್ಕಾಗಿ ಒಂದು ಸಮಿತಿಯು ಏರ್ಪಾಡಾಗಿದೆ.

## ಫ್ರೆಂಚ್ ಭಾರತ ಮತಗಣನೆ ಬಗ್ಗೆ ಫ್ರೆಂಚ್ ಒಪ್ಪಿಗೆ

ಭಾರತದಲ್ಲಿರುವ ಫ್ರೆಂಚರ ಸ್ವಾಧೀನವಾದ ಪುದುಚೇರಿ, ಮಾಹಿ, ಯಾನಾಂ, ಕಾರಿಕಲ್‌ಗಳ ಬಗ್ಗೆ ಜನ ಮತಗಣನೆ ಮಾಡಲು ತಾರೀಕು ಮತ್ತು ವ್ಯವಸ್ಥೆಗಳನ್ನು ಫ್ರೆಂಚ್ ಸರಕಾರವು ಗೊತ್ತುಪಡಿಸತಕ್ಕದ್ದೆಂದು ಅಲ್ಲಿನ ರಾಷ್ಟ್ರೀಯ ಮಹಾಸಭೆ(ಪಾರ್ಲಿಮೆಂಟು) ನಿರ್ಧರಿಸಿದೆ.

## ವಿಶಾಖಪಟ್ಟಣದಲ್ಲಿ ನೌಕಾ ಕಾಲೇಜು

ವಿಶಾಖಪಟ್ಟಣದಲ್ಲಿ ನೌಕಾ ಕಾಲೇಜನ್ನು ತೆರೆಯುವ ಬಗ್ಗೆ ಭಾರತ ಸರಕಾರದವರು ೨೫೦ ಎಕರೆ ಜಮೀನನ್ನು ವಶಪಡಿಸಿಕೊಳ್ಳುವುದಕ್ಕೆ ಸೂಚನೆಯಿತ್ತಿರುವರೆಂದೂ, ಇದಕ್ಕಾಗಿ ೬೦ ಲಕ್ಷ ರೂಗಳನ್ನು ಖರ್ಚು ಮಾಡಲಿರುವರೆಂದೂ ಹೇಳಲಾಗಿದೆ.

### ಹೊಸ ಶಾಲೆ ಗಾಗಿ ಪ್ರಾರ್ಥನೆ

ವಾಣಿವಿಲಾಸ ಮೊಹಲ್ಲಾದಲ್ಲಿ ಈಗ ಒಂದು ಮಿಡಲ್ ಸ್ಕೂಲು ಇದೆ. ಇದರಲ್ಲಿ ಜಾಸ್ತಿ ವಿದ್ಯಾರ್ಥಿಗಳು ಇದ್ದಾರೆ. ಅವರಿಗೆ ಬೆಂಚು ವಗೈರೆ ಇಲ್ಲದೆ ತುಂಬಾ ತೊಂದರೆಯಾಗಿ ಪಾಠಹೇಳಲೂ ಕಷ್ಟವಾಗಿದೆ. ಈ ಶಾಲೆಗೆ ಮೇಟಗಳ್ಳಿ, ಕುಂಬಾರಕೊಪ್ಪಲು ಈ ಸ್ಥಳಗಳಿಂದ ವಿದ್ಯಾರ್ಥಿಗಳು ಬರುತ್ತಿರುತ್ತಾರೆ. ಈ ತೊಂದರೆಗಳನ್ನು ನಿವಾರಣೆ ಮಾಡಲು ಮತ್ತೊಂದು ಶಾಲೆಯನ್ನು ಅಧಿಕಾರಿಗಳು ಏರ್ಪಡಿಸಬೇಕೆಂದು ವಾಣಿವಿಲಾಸ ಮೊಹಲ್ಲಾ ನಿವಾಸಿಗಳೊಬ್ಬರು ಪ್ರಾರ್ಥಿಸಿರುತ್ತಾರೆ.

ನಾಯಿ ಕೆಮ್ಮಿಗೆ ಔಷಧಿ
WHOOPING COUGH REMEDY

ನಾಯಿ ಕೆಮ್ಮಿನ ರೋಗವನ್ನು ಶಮನಗೊಳಿಸಲು ನಮ್ಮ ... ರಸ್ತೆ ( ) ಹಾಕಿಸಿದ ಔಷಧಿ ದೊರೆಯುತ್ತದೆ. ಅನೇಕ ಮಂದಿ ಪ್ರಸಿದ್ಧ ಡಾಕ್ಟರುಗಳು ಮತ್ತು ... ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ.

ಆರ್. ಎಸ್. ಪಂಡಿತರು,
ಧನ್ವಂತರಿ ವೈದ್ಯಶಾಲಾ,
ರಾಮವಿಲಾಸ ರಸ್ತೆ, ಮೈಸೂರು.

ಮದುವೆ ಜವಳಿಗಳಿಗೆ M. V. ಭೋಜಯ್ಯ
ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪುರ ಸೀರೆಗಳಿಗೆ
ಬಿ. ಎ. ಕೆ. ಬ್ರದರ್ಸ್
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು

ಪ್ರಭುದೇವಾ ಟಾಕೀಸ್
ದಿನವಹಿ 3 ಆಟಗಳು
27-2-50ನೇ ಸೋಮವಾರದಿಂದ
- ಭಕ್ತ ಕಲಾತ್ರಿ -
(ತಮಿಳು)
ಪಾತ್ರ - ಹೊನ್ನಪ್ಪ ಭಾಗವತರ್, ಶಿರಗಳತ್ತೂರ್ ಸ್ವಾಮಿ, ಕಮಲಾದೇವಿ
ಕುಮುದಿನಿ ಎನ್. ಎಸ್. ಕೃಷ್ಣನ್ ಮತ್ತು ಟಿ. ಎ. ಮಧುರ

ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು
ರಮಣಿ ಹಲ್ಲುಪುಡಿ
ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ ಹಲ್ಲುಪುಡಿಯು ಅನೇಕ ಗುಣ ಹೊಂದಿದ್ದಾರೆ. ಬೆಲೆ 0-1-0
ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು
ರಮಣಿ ಟ್ರೇಡಿಂಗ್ ಕಂಪೆನಿ
೧೫೮/೫, ಕೃಷ್ಣಮೂರ್ತಿಪುರಂ,
ಮೈಸೂರು

Edited, printed and published by A. R. Nagarajan at Sadhvi Press, D Subbiah Road, Mysore

ಕೋ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಮಂಗಳವಾರ ೨೮-೨-೫೦ [ಸಂಚಿಕೆ ೧೬೮

# ಪಬ್ಲಿಕ್ ಸರ್ವಿಸ್ ಕಮಿಷನ್ ಬಗ್ಗೆ ಬರುವ ವಾರ ಆಜ್ಞೆ

## ಬೇಲೂರಿನಲ್ಲಿ ಎ. ಎಂ. ಸಿ. ಸಿ. ಅಧಿವೇಶನದ ಏರ್ಪಾಡು

ಪುರಾತನ ಶಿಲ್ಪಕಲಾ ಕೌಶಲ್ಯದಿಂದ ಕೂಡಿದ ಬೇಲೂರಿನಲ್ಲಿ ಈ ಬಾರಿ ನಡೆಯುವ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನಕ್ಕೆ ಅಲ್ಲಿನ ಸ್ವಾಗತ ಸಮಿತಿಯವರು ತ್ವರಿತ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಮುಸಾಫಿರ ಖಾನೆಯ ಎದುರುಭಾಗದಲ್ಲಿರುವ ಮೈದಾನದಲ್ಲಿ ಸಭೆಯು ನಡೆಯುವುದು. ಈ ಪ್ರದೇಶಕ್ಕೆ ಸರೋಜಿನಿನಾಯ್ಡುರವರ ಹೆಸರನ್ನು ಇಡಲಾಗಿದೆ. ಧ್ವಜಾರೋಹಣವೂ ಅದೇ ಸ್ಥಳದಲ್ಲಿ ಏರ್ಪಾಡಾಗುವುದಿದೆ.

ಶ್ರೀ ಚೆನ್ನಕೇಶವ ದೇವಸ್ಥಾನದ ಆವರಣದಲ್ಲಿ ಪಾಕಶಾಲೆ ಮತ್ತು ಭೋಜನಶಾಲೆಗಳ ಏರ್ಪಾಡಾಗುವುವು. ಎ. ಎಂ. ಸಿ. ಸಿ. ಸದಸ್ಯರು ಮತ್ತು ಇತರ ಮಾನ್ಯ ಅತಿಥಿಗಳಿಗೆ ಬಿಡಾರಗಳನ್ನು ಪ್ರತ್ಯೇಕವಾಗಿ ಮಾಡಲಾಗುವುದು. ಇದುವರೆಗೆ ನಡೆದಿರುವ ಕೆಲಸಕಾರ್ಯಗಳನ್ನು ಜನರಲ್ ಸೆಕ್ರೆಟರಿ ಶ್ರೀ ಎ. ಜಿ. ರಾಮಚಂದ್ರರಾಯರು, ಸ್ವಾಗತಸಮಿತಿ ಅಧ್ಯಕ್ಷ ಶ್ರೀ ಬಿ. ಎಲ್. ಬೋರಣ್ಣಗೌಡರು, ಆರ್. ಎಸ್. ಗುಂಡೂರಾಮಯ್ಯ, ಶ್ರೀ ಡಿ. ಆರ್. ಕರಿಗೌಡರ ಮುಂತಾದವರು ಕೆಲವು ದಿನಗಳ ಹಿಂದೆ ವೀಕ್ಷಿಸಿ ತೃಪ್ತಿಯನ್ನು ಸೂಚಿಸಿದರೆಂದು ಸ್ವಾಗತ ಸಮಿತಿ ಪ್ರಕಟಣಾಧಿಕಾರಿಗಳಾದ ಶ್ರೀ ಹೆಚ್. ವಿ. ನಂಜುಂಡಯ್ಯನವರು ತಿಳಿಸುತ್ತಾರೆ.

## ವಿಮಾನಗಳ ಮೂಲಕ ಮಂಜಿಯಾರ್ಡರು

ವಿಮಾನದ ಮೂಲಕ ಮನಿಯಾರ್ಡರುಗಳನ್ನು ಕಳುಹಿಸಲು ಸಾಧ್ಯವಾಗುವಂತೆ ಮನಿಯಾರ್ಡರು ಫಾರಂನ ಎಡಭಾಗದಲ್ಲಿ ನೀಲಿ ಚೀಟಿಯನ್ನು ಅಂಟಿಸಿದರೆ ಕಳುಹಿಸಲು ಸಾಧ್ಯವಾಗುವುದೆಂದು ಅಂಚೆ ಇಲಾಖೆಯ ಪ್ರಕಟಣೆಯು ತಿಳಿಸುತ್ತದೆ.

## ಹರಿಜನ ಪ್ರವೇಶ ನಡೆದ ದೇವಾಲಯದ ಸಂಪ್ರೋಕ್ಷಣೆ

ಕೋಲಾರ ಜಿಲ್ಲೆಯ ದೊಡ್ಡ ಬೊಮ್ಮನಹಳ್ಳಿಯ ಶ್ರೀ ಸೋಮೇಶ್ವರ ದೇವಾಲಯಕ್ಕೆ ಕಳೆದ ತಿಂಗಳು ೩ನೇ ತಾರೀಖು ಹರಿಜನ ಪ್ರವೇಶದ ಪ್ರಾರಂಭೋತ್ಸವವು ನಡೆಯಿತು. ಇದರಿಂದ ದೇವಾಲಯವು ಅಪವಿತ್ರವಾಯಿತೆಂದು ಪರಿಗಣಿಸಿ ಕಳೆದ ಶಿವರಾತ್ರಿ ದಿನ ಸಂಪ್ರೋಕ್ಷಣೆ ನಡೆಯಿತೆಂದು ವರದಿಯಾಗಿದೆ.

## ಅಪಪ್ರಚಾರ

ನಿನ್ನೆ ತಮ್ಮ ಪತ್ರಿಕೆಯಲ್ಲಿ ನನ್ನ ವಿಚಾರವಾಗಿ ಪ್ರಕಟವಾಗಿರುವ ಸಂಗತಿ ಆಶ್ಚರ್ಯಕರವಾಗಿರುತ್ತದೆ. ನಾನು ಯಾವ ಮನೆಯನ್ನೂ ಹೊಗಲಿಲ್ಲ. ಕೆಲವು ಜನರು ನನ್ನ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ. ಕಳೆದ ಗಿರವಿ ಗಲಾಟೆ ಮತ್ತು ಘರ್ಷಣೆಯ ಜ್ವಾಲೆಯು ಆರಿ ಹೋಗುತ್ತಿರುವಲ್ಲಿ ಸಜ್ಜನರ ಮನ ನೋಯಿಸುವುದು ... ಭಾರೀ ಅಪರಾಧವನ್ನು ಹೊರಿಸಿ ... ಪೋಲೀಸಿನ ವಿಚಾರಣೆ ... ಸರ್ಕಾರದವರು ... ಎಂದು ಪರಿಕಥಾ ವಿದ್ವಾಂಸರು ತಿಳಿಸುತ್ತಾರೆ.

## ಲೇಬರ್ ಪಕ್ಷಕ್ಕೆ ೭ ಹೆಚ್ಚು ಸ್ಥಾನ ಮಾತ್ರ

ಬ್ರಿಟನ್ನಿನಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಲೇಬರ್ ಪಕ್ಷದವರು ವಿರೋಧ ಪಕ್ಷಗಳವರಿಗಿಂತ ಕೇವಲ ೭ ಸ್ಥಾನಗಳನ್ನು ಮಾತ್ರ ಹೆಚ್ಚಾಗಿ ಗಳಿಸಿ ಜಯಶೀಲರಾಗಿದ್ದಾರೆ.

## ಪಶ್ಚಿಮ ಬಂಗಾಳದಲ್ಲಿ ೩೭೧ ಜನ ಬಂಧಿತರ ಬಿಡುಗಡೆ

ಪಶ್ಚಿಮ ಬಂಗಾಳದಲ್ಲಿ ಬಂಧನದಲ್ಲಿದ್ದ ೩೭೧ ಮಂದಿಯ ವಿಚಾರಣೆಯು ನಿನ್ನೆ ಕಲ್ಕತ್ತೆಯ ನ್ಯಾಯಸ್ಥಾನದಲ್ಲಿ ನಡೆದು ಭಾರತದ ಹೊಸ ರಾಜ್ಯಾಂಗ ಶಾಸನದ ಪ್ರಕಾರ ಅವರುಗಳನ್ನು ಬಂಧಿಸಲು ಅವಕಾಶವಿಲ್ಲವೆಂದೂ, ಈ ಶಾಸನವನ್ನು ಒದಲಾಯಿಸಲು ರಾಷ್ಟ್ರಾಧ್ಯಕ್ಷರಿಗೂ ಅಧಿಕಾರವಿಲ್ಲವೆಂದೂ ತೀರ್ಪುಕೊಟ್ಟು ಅವರನ್ನು ಬಿಡುಗಡೆ ಮಾಡಲಾಯಿತು. ಅವರನ್ನು ಬೇರೆ ಶಾಸನದ ಮೇರೆ ಮತ್ತೆ ಬಂಧಿಸಲಾಗಿದೆ.

## ಕೊಚ್ಚಿಯಲ್ಲಿ ಪ್ರಥಮ ನೌಕಾ ವಿಮಾನ ಕ್ಷೇತ್ರ

ಕೊಚ್ಚಿಯ ವಿಲ್ಲಿಂಗ್ಟನ್ ದ್ವೀಪದಲ್ಲಿ ಭಾರತದ ಪ್ರಥಮ ನೌಕಾ ವಿಮಾನ ಕ್ಷೇತ್ರವನ್ನು ತೆರೆಯಲಾಗುವುದೆಂದು ಇಲ್ಲಿಗೆ ಬಂದಿರುವ ಭಾರತದ ರಕ್ಷಣಾ ಮಂತ್ರಿ ಸರದಾರ್ ಬಲದೇವಸಿಂಗ್‌ರವರು ತಿಳಿಸಿದ್ದಾರೆ. ಈ ಸ್ಥಳವು ಭಾರತದ ನೌಕೆಯ ಶಿಕ್ಷಣ ಕೇಂದ್ರವಾಗಿ ಪರಿಣಮಿಸುವುದೆಂದು ಅವರು ಹೇಳಿದರು.

## ಪತ್ನಿ ಮತ್ತು ಮಗನ ಕೊಲೆ

ತನ್ನ ಹೆಂಡತಿಯ ನಡತೆಯ ವಿಷಯದಲ್ಲಿ ಅಸಮಾಧಾನವಿದ್ದು ಪಟಿಯಾಲದ ವಿಷ್ಣುನೆಂಬಾತನು ಆಕೆಯನ್ನೂ ಮಗನನ್ನೂ ಕೊಡಲಿಯಿಂದ ಹೊಡೆದು ಕೊಲೆ ಮಾಡಿದನೆಂದೂ ಮಗಳನ್ನು ತೀವ್ರವಾಗಿ ಗಾಯಗೊಳಿಸಿದನೆಂದೂ ವರದಿಯಾಗಿದೆ. ಪೋಲೀಸರು ಅವನನ್ನು ಬಂಧಿಸಿದ್ದಾರೆ.

## ರಷ್ಯದಲ್ಲಿ ನೌಕಾ ಖಾತೆಯ ಏರ್ಪಾಡು

ರಷ್ಯದ ಸರಕಾರವು ನೌಕಾ ಖಾತೆಯನ್ನು ಪ್ರತ್ಯೇಕವಾಗಿ ತೆಗೆದಿರುತ್ತದೆ. ಈ ಖಾತೆಗೆ ಅಡ್ಮಿರಲ್ ಯುಮ ... ರವರನ್ನು ಪ್ರಧಾನಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

## ಬರುವ ವಾರ ಪಬ್ಲಿಕ್ ಸರ್ವಿಸ್ ಕಮೀಷನ್ ಬಗ್ಗೆ ಪ್ರಕಟಣೆ

ಮೈಸೂರು ೨೮

ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಬಗ್ಗೆ ಪ್ರಕಟಣೆಯು ಬರುವ ವಾರ ಹೊರಬೀಳುವುದೆಂದು ಗೊತ್ತಾಗಿದೆ.

### ಶ್ರೀ ಕೆ. ಸಿ. ರೆಡ್ಡಿ

ಪ್ರಧಾನಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ಮಧ್ಯಾಹ್ನ ಬೆಂಗಳೂರಿಗೆ ತೆರಳಿದರು. ಶ್ರೀಮನ್ಮಹಾರಾಜರವರಿಗೆ ಕೊಂಚ ಅಸ್ವಾಸ್ಥ್ಯವಾದುದರಿಂದ ಅವರೊಡನೆ ಮುಖ್ಯ ಮಂತ್ರಿಗಳ ಭೇಟಿಯಾಗಲಿಲ್ಲ.

### ಶ್ರೀ ನರಹರಿರಾಯರು

ಭಾರತ ಸರ್ಕಾರದ ಆಡಿಟರ್ ಜನರಲ್ಲರಾದ ಶ್ರೀ ವಿ. ನರಹರಿರಾಯರು ನಿನ್ನೆ ಇಲ್ಲಿಗೆ ಆಗಮಿಸಿ ಗೌರ್ನ್‌ಮೆಂಟ್ ಹೌಸಿನಲ್ಲಿ ಇಳಿದಿರುವರು. ಸಂಸ್ಥಾನದ ಆಡಿಟ್ ಇಲಾಖೆಯನ್ನು ಕೇಂದ್ರದಲ್ಲಿ ಸೇರ್ಪಡಿಸುವ ಬಗ್ಗೆ ಇವರು ಮಾತುಕತೆ ನಡೆಸುತ್ತಿರುವರು. ಈ ಬಗ್ಗೆ ಇವರು ಶ್ರೀ ಕೆ. ಸಿ. ರೆಡ್ಡಿಯವರೊಡನೆ ಭೇಟಿ ಮಾಡಿದರು.

### ಶಾಸನ ಸಭೆ ಮಾರ್ಚಿ ೧೫ರಲ್ಲಿ

ಸಂಸ್ಥಾನದ ಶಾಸನ ಸಭೆಯು ಬರುವ ತಿಂಗಳು ೧೫ನೇ ತಾರೀಖು ಬೆಳಿಗ್ಗೆ ೧೧ ಗಂಟೆಗೆ ಬೆಂಗಳೂರು ಅಠಾರ ಕಛೇರಿಯಲ್ಲಿ ಸೇರುವುದು.

## ಸಿಡಿತದಿಂದ ಗ್ರೀಸ್ ರೇಡಿಯೋ ಕೇಂದ್ರ ನಾಶ

ಗ್ರೀಸಿನ ರಾಜಧಾನಿ ಅಥೆನ್ಸಿನಲ್ಲಿ ಮೊನ್ನೆ ದಿನ ಸಂಭವಿಸಿದ ಆಸ್ಫೋಟನೆಯಿಂದ ರೇಡಿಯೋ ಪ್ರಸಾರ ಕೇಂದ್ರವು ನಾಶವಾಗಿರುವುದಾಗಿ ವರದಿಯಾಗಿದೆ.

## ಪ್ರಾಣಿ ಬಲಿ ಈ ಸಾರಿ ಇಲ್ಲ

ಇದೇ ಏಳನೇ ತಾ|| ಚಾಮುಂಡಿ ಪುರದ ಹೊಸ ಬೀದಿ ಕೇರಿಯ ಶ್ರೀ ಕೋಟೆ ಮಾರಮ್ಮ ದೇವಸ್ಥಾನದ ಜಾತ್ರೆ ಸಂಬಂಧವಾಗಿ ಕಾನೂನಿಗೆ ವಿರೋಧವಾಗಿ ಪ್ರಾಣಿ ಬಲಿಯಾಗುವುದೆಂದು ಪ್ರಕಟಣೆಯಾಗಿತ್ತು. ಈ ಸಾರಿ ಇಲ್ಲ. ಹಬ್ಬದವರು ಕೇವಲ ಸಾತ್ವಿಕವಾಗಿ ಪೂಜೆಯನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲು ಏರ್ಪಾಡು ಮಾಡುತ್ತಿರುವರೆಂದೂ, ಇದು ಸಂತೋಷವಾದ ವಿಷಯವೆಂದೂ ಶ್ರೀ ... ಎಂ. ಎ. ... ತಿಳಿಸುತ್ತಾರೆ.

## ಜೂಜಾಟಕ್ಕೆ ಜುಲ್ಮಾನೆ

ಮೈಸೂರು ೨೮

ಮುಧ್ವಾಚಾರ್ ರಸ್ತೆಯಲ್ಲಿರುವ ೨೦೭೬ನೇ ನಂ. ಮನೆಯಲ್ಲಿ ಮೊನ್ನೆ ವೀರಪ್ಪ, ಸಿದ್ದಪ್ಪ, ನಾಗಪ್ಪ, ಮಾದಪ್ಪ, ಮತ್ತು ನಂಜಪ್ಪ ಇವರುಗಳು ಪಕೀಲಾಟವನ್ನು ಆಡುತ್ತಿದ್ದುದಕ್ಕಾಗಿ ೩ನೇ ಮ್ಯಾಜಿಸ್ಟ್ರೇಟರು ಮನೆಯನ್ನು ಕೊಟ್ಟ ವೀರಪ್ಪನಿಗೆ ೪೫ ರೂ ಜುಲ್ಮಾನೆ ತಪ್ಪಿದರೆ ಒಂದು ವಾರ ಸಾದಾ ಸಜವನ್ನೂ ಮತ್ತು ಇಲ್ಲಾ ಅಪರಾಧಿಗಳಿಗೂ ತಲಾ ೪೦ ರೂ ಜುಲ್ಮಾನೆ ತಪ್ಪಿದರೆ ೧ ವಾರ ಸಾದಾ ಸಜವನ್ನೂ ವಿಧಿಸಿರುತ್ತಾರೆ. ವಸೂಲಾದ ಜುಲ್ಮಾನೆ ಹಣದಲ್ಲಿ ಪೋಲೀಸ್‌ನವರಿಗೆ ೧೯೫ ರೂ. ಬಹುಮಾನ ಕೊಡುವಂತೆಯೂ ತಿಳಿಸಿರುತ್ತಾರೆ.

### ಬಕೆಟ್ ಷಾಪ್ ನಡೆಸಿದುದಕ್ಕೆ ಶಿಕ್ಷೆ

ಅಶೋಕಾ ರಸ್ತೆಯಲ್ಲಿರುವ ನಂಜುಂಡೇಶ್ವರ ಸೈಕಲ್ ಷಾಪಿನ ಮಾಲೀಕರಾದ ಆರ್. ಶಂಕರರಾಯರು ಎಂ. ಎಸ್. ಬಸವಣ್ಣ ಮಲ್ಲಪ್ಪಾಚಾರಿ ಮತ್ತು ರಾಮಣ್ಣ ಇವರುಗಳೊಡನೆ ೧೯-೯-೪೯ರಲ್ಲಿ ಪೂನಾ ಕುದುರೆ ಜೂಜಿನ ಬಕೆಟ್ ಷಾಪ್ ನಡೆಸುತ್ತಿದ್ದುದಕ್ಕಾಗಿ ಎರಡನೇ ಮ್ಯಾಜಿಸ್ಟ್ರೇಟರು ಶಂಕರರಾಯರಿಗೆ ೧ ತಿಂಗಳು ಸಜಾ ಮತ್ತು ೨೦೦ ರೂ. ಜುಲ್ಮಾನೆ, ತಪ್ಪಿದರೆ ೧ ವಾರ ಸಜವನ್ನೂ ಉಳಿದ ಮೂವರು ಅಪರಾಧಿಗಳಿಗೆ ತಲಾ ೨೦೦ ರೂ. ಜುಲ್ಮಾನೆ ತಪ್ಪಿದರೆ, ೧ ವಾರ ಸಜವನ್ನು ವಿಧಿಸಿರುತ್ತಾರೆ. ವಸೂಲಾದ ಜುಲ್ಮಾನೆ ಹಣದಲ್ಲಿ ಪೋಲೀಸರಿಗೆ ೪೦೦ ರೂ. ಬಹುಮಾನವಾಗಿ ಕೊಡುವಂತೆಯೂ ಆಜ್ಞೆ ಮಾಡಿರುತ್ತಾರೆ.

### ಅಶೋಕ ಚಕ್ರ ಸಂಸ್ಥೆ

ಭಾರತ ಧರ್ಮ, ಸಂಸ್ಕೃತಿಗಳ ಪುನರುಜ್ಜೀವನದ ಧ್ಯೇಯದಿಂದ ಮೇಲ್ಕಂಡ ಹೆಸರಿನಲ್ಲಿ ಸಂಸ್ಥೆಯನ್ನು ಭಾರತದಲ್ಲೆಲ್ಲಾ ಸ್ಥಾಪಿಸಲಾಗುವುದು. ಈ ಉದ್ದೇಶದಿಂದ ರಾಜಧಾನಿಯ ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ನಾಳೆ ಸಂಜೆ ಒಂದು ಸಭೆಯನ್ನು ಕರೆಯಲಾಗಿದೆ. ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸುವರು. ಎಲ್ಲರಿಗೂ ಸ್ವಾಗತವುಂಟು.

### ಕಾಶಿನಾಥಶಾಸ್ತ್ರಿಗಳ ನಿಧನ

ರಾಜಧಾನಿಯಲ್ಲಿ ಪ್ರಕಟವಾಗುತ್ತಿದ್ದ ಪಂಚಾಚಾರ್ಯ ಪ್ರಭಾ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಕಾಶಿನಾಥಶಾಸ್ತ್ರಿಗಳವರು ನಿನ್ನೆ ದಿನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೦ ವರ್ಷ ವಯಸ್ಸಾಗಿತ್ತು. ಅವರು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದರು. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ.

○ ನಿವೃತ್ತ ಚೀಫ್ ಜಸ್ಟೀಸ್ ಆದ ಶ್ರೀ ಆರ್. ಪುಟ್ಟರಾಜ ಅರಸಿನವರ ಸ್ಥಾನದಲ್ಲಿಟ್ಟು ನ್ಯಾಯಾಧೀಶರನ್ನು ನೇಮಿಸುವ ಬಗ್ಗೆ ಈ ವಾರದೊಳಗೆ ಸರ್ಕಾರದವರು ಒಬ್ಬರ ಹೆಸರನ್ನು ಸೂಚಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ ಕಳುಹಿಸಲಿರುವರೆಂದು ಗೊತ್ತಾಗಿದೆ.

† ಒಪ್ಪಿಗೆಯಾದೊಡನೆ ಅಮೇರಿಕದ ರಾಜತಾಂತ್ರಿಕ ಸಂಬಂಧವನ್ನು ತೊರೆದಿರುವುದರಿಂದ ಅಮೇರಿಕದ ಪ್ರಜೆಗಳು ಜಾಗರೂಕರಾಗಿ ಬಲ್ಗೇರಿಯಾಕ್ಕೆ ಹೋಗಬಾರದೆಂದು ತಿಳಿಸಲಾಗಿದೆ.

## ಸರ್ಕಾರಿ ಮುದ್ರಣಾಲಯದ ಉದ್ಯೋಗಸ್ಥರ ಬೇಡಿಕೆ

### ನ್ಯಾಯಮಂಡಳಿ ಸಭಿಕರ ತೀರ್ಪು

ಬೆಂಗಳೂರು ೨೫

ಸಂಸ್ಥಾನದ ನ್ಯಾಯಮಂಡಳಿ ಸಭಿಕರಾದ ಶ್ರೀ ಟಿ. ಭಾಷ್ಯಂರವರು ಸರ್ಕಾರಿ ಮುದ್ರಣಾಲಯದ ನೌಕರರ [illegible] ಬೇಡಿಕೆಗಳನ್ನು [illegible] ತೀರ್ಪನ್ನು ಪ್ರಕಟಿಸಿದ್ದಾರೆ. [illegible] ಮುದ್ರಣಾಲಯದ [illegible] ಕೆಲಸದ ವೇಳೆ [illegible] ಭತ್ಯೆಗಳನ್ನು [illegible] ಅನಾರೋಗ್ಯದ [illegible] ಗೊತ್ತುಪಡಿಸುವುದು, [illegible] ವರ್ಗಗಳನ್ನಾಗಿ ವಿಂಗಡಿಸುವುದು, ಪ್ರೆಸ್ ಮತ್ತು ಬೈಂಡಿಂಗ್ ಬ್ರಾಂಚುಗಳಲ್ಲಿ ಸಂಬಳಗಳನ್ನು [illegible] ಹೆಚ್ಚಿಸುವುದು, [illegible] ಸಂಬಳದ ಮೇಲೆ ಗೊತ್ತುಪಡಿಸುವುದು, ಕ್ಯಾಂಟೀನ್ ಮತ್ತು ಔಷಧಾಲಯಗಳನ್ನು ತೆರೆಯುವುದು, ಸಂಘಕ್ಕೆ ಹೊಸ ಕಟ್ಟಡ ಒದಗಿಸುವುದು ಮತ್ತು ಸಂಘದ ವಾಚನಾಲಯಕ್ಕೆ [illegible] ರೂ. ಗಳ ಗ್ರಾಂಟನ್ನು ಮಂಜೂರು ಮಾಡುವುದು — ಈ ಬೇಡಿಕೆಗಳು ಈಡೇರಿಸಲ್ಪಡುವುವು.

### ಅಮೇರಿಕಕ್ಕೆ ಹೋಗಲಿರುವ ಮೈಸೂರಿನ ಆನೆಗಳು

ಮೈಸೂರಿನಿಂದ ಅಮೇರಿಕಕ್ಕೆ ಹೊರಟ ಎರಡು ಆನೆ ಮರಿಗಳಿಗೆ ಪಂಡಿತ ನೆಹರೂ ರವರು 'ಶಾಂತಿ' ಮತ್ತು 'ಅಶೋಕ' ಎಂದು ನಾಮಕರಣ ಮಾಡಿದ್ದಾರೆ.

### ಹೆಚ್ಚು ಆಹಾರ ಬೆಳೆಗೆ ರೈಲ್ವೆ ಜಮೀನುಗಳ ವಶ

[illegible] ರೈಲ್ವೆಗೆ ಸೇರಿದ [illegible] ಜಮೀನುಗಳನ್ನು ಹೆಚ್ಚು ಆಹಾರ ಬೆಳೆಯುವ [illegible] ಸಂದರ್ಭದಲ್ಲಿ [illegible] ನಿರ್ಧರಿಸಿದ್ದಾರೆ.

## ಅನೀತಿಯುತ ಹೆಂಡತಿಗೆ ಜೀವನಾಂಶವಿಲ್ಲ

ಕುಂಭಕೋಣದ ಬಳಿ ಒಂದು ಊರಿನಲ್ಲಿ ಶ್ರೀ ರಘುನಾಥ ಮೊದಲಿಯಾರ್ ಎಂಬುವರು ಗಣಪತಿ [illegible] ಶಿವಕಾಮಿ ಅಮ್ಮಾಳ್ ಎಂಬಾಕೆಯನ್ನು ವಿವಾಹವಾದರು. [illegible] ತಿಂಗಳ ಕಾಲ ಆಕೆಯು ತನ್ನ ಗಂಡನ ಬಳಿ ಇದ್ದು ಅನಂತರ ಅಲ್ಲಿಂದ ಬಿಟ್ಟು ಹೊರಟ ನಂತರ ವಾಸಿಸುತ್ತಿದ್ದಳು. [illegible] ಆಕೆಯು ತನ್ನ ಗಂಡನ ಮೇಲೆ ಜೀವನಾಂಶಕ್ಕಾಗಿ ದಾವಾ ಹೂಡಿದಳು. ಆಕೆಯು ತನ್ನ ಬಳಿ ಕೇವಲ ಸ್ವಲ್ಪ ತಿಂಗಳ ಕಾಲ ಇದ್ದು ಅನಂತರ [illegible] ವರ್ಷಕಾಲ ಬೇರೆಯಾಗಿದ್ದು ಅನೀತಿಯುತ ನಡತೆಯಲ್ಲಿ ತೊಡಗಿದ್ದುದರಿಂದ ಅವಳಿಗೆ ಜೀವನಾಂಶ ಪಡೆಯುವ ಹಕ್ಕಿಲ್ಲವೆಂದು ರಘುನಾಥ ಮೊದಲಿಯಾರರು ವಾದಿಸಿದರು. ಆಕೆಯು ಅನೀತಿಯುತ ಮಾರ್ಗದಲ್ಲಿರುವಳಾದರೂ, ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡುವ ವೇಳೆಯಲ್ಲಿ ಅವಳ ಅನೀತಿ ವರ್ತನೆಯನ್ನು ಸಮರ್ಥಿಸಲಿಲ್ಲವಾಗಿ ಆಕೆಗೆ ಮಾಹೆಯಾನಾ ೨೦ ರೂ. ಜೀವನಾಂಶ ಕೊಡಬೇಕೆಂದು ತೀರ್ಪು ಕೊಡಲಾಯಿತು. ಮೊದಲಿಯಾರರು ತೀರ್ಪಿನ ಮೇಲೆ ಅಪೀಲು ಹೂಡಿದರು. ಆಕೆಯು ಅನೀತಿಯುತಳಾಗಿರುವುದರ [illegible] ನ್ಯಾಯಾಸ್ಥಾನಕ್ಕೆ ಮುಂದಿಟ್ಟಿರುವಾಗ್ಯೂ, ಮೊದಲು ಮೊಕದ್ದಮೆ ಹೂಡುವ ವೇಳೆಯಲ್ಲಿ ಆಕೆಯು ಅನೀತಿಯನ್ನು ಸಮರ್ಥನೆ ಮಾಡುವುದು ಅನವಶ್ಯಕವೆಂದು ಹೇಳಿ ಅಪೀಲು ಕೋರ್ಟಿನ ನ್ಯಾಯಾಧೀಶರು ತೀರ್ಪು ಕೊಟ್ಟು ಆಕೆಗೆ ಜೀವನಾಂಶ ಕೊಡಬೇಕಾಗಿಲ್ಲವೆಂದು ತಿಳಿಸಿದರು.

### ಸಿಂಗಪುರದಲ್ಲಿ ವೆಂಕಟಲಿಂಗನ ದಸ್ತಗಿರಿ

'ಇಂಡೋನೇಷ್ಯದ ರಿಪಬ್ಲಿಕ್ಕಿನ ವಿರುದ್ಧವಾಗಿ ದಂಗೆ ಎದ್ದಿದ್ದ ಟರ್ಕೊ ವೆಸ್ಟರ್‌ಲಿಂಗ್' ಎಂಬ ದಳಸೇನಾಧಿಕಾರಿಯು ಕೆಲವು ದಿನಗಳ ಹಿಂದೆ ಸಿಂಗಪುರಕ್ಕೆ ಹೋಗಿದ್ದನಷ್ಟೆ. ಅವನನ್ನು ಅಲ್ಲಿನ ಅಧಿಕಾರಿಗಳು ಮೊನ್ನೆ ಬೆಳಿಗ್ಗೆ ದಸ್ತಗಿರಿ ಮಾಡಿದರು. ರಹದಾರಿಯಿಲ್ಲದೆ ಸಿಂಗಪುರವನ್ನು ಪ್ರವೇಶಿಸಿದುದಕ್ಕಾಗಿ ಅವನ ವಿಚಾರಣೆಯಾಗುವುದು.

## ಚೆಕ್ ಕಮ್ಯೂನಿಸ್ಟ್ ಸದಸ್ಯರಿಗೆ ಕಡ್ಡಾಯದ ಧ್ಯೇಯ ಶಿಕ್ಷಣ

ಜೆಕೊಸ್ಲವೇಕಿಯಾದ ಕಮ್ಯೂನಿಸ್ಟ್ ಸಂಘದಲ್ಲಿರುವ ೨೫ ಲಕ್ಷ ಸದಸ್ಯರು ೮ ತಿಂಗಳು ಕಾಲ ಕಮ್ಯೂನಿಸ್ಟ್ ತತ್ವ ಪಾಠಗಳನ್ನು ಅಭ್ಯಾಸಮಾಡಬೇಕೆಂದು ಆ ಸಂಘವು ಆಜ್ಞೆ ಮಾಡಿದೆ. ಲೆನಿನ್ ಮತ್ತು ಸ್ಟಾಲಿನರವರುಗಳಿಂದ ರಚಿತವಾದ ಎಲ್ಲ ಗ್ರಂಥಗಳನ್ನೂ ಅವರು ಓದಬೇಕು. ಇಂತಹ ಪಾಠ ಕ್ರಮಗಳಲ್ಲಿ ಪದವಿಗಳನ್ನು ಗಳಿಸಿದವರು ಮಾತ್ರ ಸಂಘದ ಅಧಿಕಾರ ಸ್ಥಾನಕ್ಕೆ ಸ್ಪರ್ಧಿಸಲು ಅರ್ಹರಾಗುವರು.

### ಕೃತಕ ಪೆಟ್ರೋಲ್ ತಯಾರಿ

ಒರಿಸ್ಸಾ ಪ್ರಾಂತದ ಶಾಸನ ಸಭಾ ಸದಸ್ಯರಾದ ಶ್ರೀ ಬಿ. ದಯಾನಂದ ಪಟ್ನಾಯಕರವರ ಕೃತಕ ಪೆಟ್ರೋಲ್ ಯೋಜನೆಯನ್ನು ಭಾರತ ಸರ್ಕಾರದವರು ಒಪ್ಪಿ ಅದರ ತಯಾರಿಗೆ ಲೈಸನ್ಸನ್ನು ಕೊಟ್ಟಿರುತ್ತಾರೆ. ತಲ್ಚೇರಿನಲ್ಲಿ ಸಿಗುವ ತಲ್ಚಾರ್ ಎಂಬಲ್ಲಿ ಈ ಕಾರ್ಖಾನೆಯು ಏರ್ಪಾಡಾಗುವುದು. ಪ್ರಾರಂಭದಲ್ಲಿ ವರ್ಷಕ್ಕೆ ೩೦ ಲಕ್ಷ ಗ್ಯಾಲನ್ ಪೆಟ್ರೋಲನ್ನು ತಯಾರಿಸಬಹುದೆಂದು ಅಂದಾಜಾಗಿದೆ.

○ ನವದೆಹಲಿಯಲ್ಲಿದ್ದ ಭಾರತ ಮತ್ತು ಪಾಕಿಸ್ತಾನಗಳ ವ್ಯವಹಾರದ ಮಧ್ಯವರ್ತಿ ಕಛೇರಿಯನ್ನು ರದ್ದುಗೊಳಿಸಲು ಪಾಕಿಸ್ತಾನವು ನಿರ್ಧರಿಸಿದೆ.


ರಾಜಕಮಲ್

ಟಾಕೀಸ್

24—2—50 ರಿಂದ

ಜನಭರಿತವಾದ ೧೦ನೇ ವಾರ

ದಿನವಹಿ 2 ಪ್ರದರ್ಶನಗಳು

ಜೀವನ

—: ಭೂಮಿಕೆ :—

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ


Edited, printed and published by A. R. Nagarajan at Sadhvi Press, D. Subbiah Road, Mysore.

## ನ್ಯಾಯಾಧೀಶರ ನೇಮಕದ ಬಗ್ಗೆ ಅಪರಾಧಿನಿ ಸವಾಲ್

ಕೊಲೆಗಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಭವಾನಿ ಎಂಬ ಅಪರಾಧಿನಿ ತಿರುವಾಂಕೂರು-ಕೊಚ್ಚಿ ಹೈಕೋರ್ಟ್ ನ್ಯಾಯಾಧೀಶರಾದ ಕುಂಜಿರಾಮನ್‌ರವರ ನೇಮಕದ ಬಗ್ಗೆ ವಾದ ಹೂಡಿದ್ದಾಳೆ. ಸುಪ್ರೀಂ ಕೋರ್ಟಿಗೆ ಈ ವಿಷಯದಲ್ಲಿ ಅಪೀಲು ಹೋಗಲು [illegible] ಅಧಿಕಾರ ಮೂಲಕ ಅರ್ಜಿಯನ್ನು ಸಲ್ಲಿಸಿ ಅನುಮತಿ ಕೇಳಿರುತ್ತಾಳೆ. ನ್ಯಾಯಾಧೀಶರಿಗೆ [illegible] ವರ್ಷವಾಗಿದೆಯೆಂದೂ, ಅವರು ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ [illegible] ರಾಗಿರುವರೆಂದೂ ನ್ಯಾಯಾಧೀಶರಾಗಲು ಈ ಕಾರಣಗಳಿಂದ ಅರ್ಹತೆ ಹೊಂದಿಲ್ಲವೆಂದೂ ತಿಳಿಸಿರುತ್ತಾಳೆ.

### ನೀರಾವರಿ ಕೆಲಸಕ್ಕೆ ಅಂತರ್‌ರಾಷ್ಟ್ರೀಯ ಸಮಿತಿ

ನೀರಾವರಿ ಮತ್ತು ಕಾಲುವೆಗಳನ್ನು ತೋಡುವ ಬಗ್ಗೆ ಅಂತರ ರಾಷ್ಟ್ರೀಯ ಸಮಿತಿಯನ್ನು ನೇಮಿಸಲು ಭಾರತವು ಮಾಡಿರುವ ಸಲಹೆಯನ್ನು ಹನ್ನೊಂದು ರಾಷ್ಟ್ರಗಳು ಒಪ್ಪಿರುವುದಾಗಿ ಹೇಳಲಾಗಿದೆ. ಪಾಕಿಸ್ತಾನ, ಕೆನಡಾ, ಈಜಿಪ್ಟ್, ಬ್ರಿಟನ್, ಟರ್ಕಿ, ಹಾಲೆಂಡ್, ಯುಗೋಸ್ಲೇವಿಯಾ, ಇಂಡೋನೇಷ್ಯ, ಸಯಾಂ ಸ್ವಿಟ್ಸರ್‌ಲೆಂಡ್ ದೇಶಗಳ ಸದಸ್ಯರು ಈ ಸಮಿತಿಯಲ್ಲಿರುವರು.


ಗಾಯತ್ರೀ ಟಾಕೀಸ್

28-2-50 ರಿಂದ 2 ದಿನಗಳು ಮಾತ್ರ

ದಿನವಹಿ 3 ಆಟಗಳು

ಉತ್ತರಾರ್ಧ ಗೋಳದಲ್ಲಿ ನಡೆದ ಸಾಹಸಮಯ, ಆಶ್ಚರ್ಯ, ಭಯಂಕರದಿಂದ ಕೂಡಿದ ಚಿತ್ರ

ಆರ್ಕ್‌ಟಿಕ್ ಮ್ಯಾನ್ ಹಂಟ್

ಪಾತ್ರ:- ಮೈಕೇಲ್ ಕೋರ್ಡಾ, [illegible] ಫರ್ನಾರ್ಟ

—: ಮುಂದಿನ ಬದಲಾವಣೆ :-

ಡ್ರಮ್ಸ್ ಅಲಾಂಗ್ ದಿ ಅಮೋಹಾಕ್

ಮದುವೆ ಜವಳಿಗಳಿಗೆ

ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪುರ್ ಸೀರೆಗಳಿಗೆ

ಎಂ. ವಿ. ಭೋಜಯ್ಯ ಬಿ. ಎ. ಸ್ ಬ್ರದರ್ಸ್

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಮೈಸೂರು ಟೈರ್ಸ್

[illegible] ಸಯ್ಯಾಜಿರಾವ್ ರಸ್ತೆ, ಮೈಸೂರು

ಟೈರುಗಳ ರೀಟ್ರೆಡ್ಡಿಂಗ್ ಮತ್ತು ರೀಸೋಲಿಂಗುಗಳನ್ನು ಮಾಡಲಾಗುವುದು. ಗಿರಾಕಿಗಳ ತೃಪ್ತಿಯೇ ನಮ್ಮ ಆದರ್ಶ. ಒಂದು ಬಾರಿ ಪರೀಕ್ಷಿಸಿ ಮತ್ತು ಅದರಿಂದ ಪಿರಿಹಾಸ ಹೊಂದಿರಿ.

ರಸಿಕರಿಗೆ ಅಚ್ಚುಮೆಚ್ಚಾದುವು

ಮೈಸೂರು ರೇಷ್ಮೆ ವಸ್ತ್ರಗಳು

ಮಿತವ್ಯಯ-ಹಾಗೂ, ಸುರುಚಿ.

ಮೈಸೂರು ರೇಷ್ಮೆ — ಸಮಾಜದಲ್ಲಿ ಮೇಲ್ಮೆಯ ಕುರುಹು, ಮುತ್ತಂಜಿಯಲ್ಲಿ ಅನುಕೂಲವಾದುದು

ಜಾರ್ಜೆಟ್, ಕ್ರೇಪ್,

ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು

ಮನ ಸೆಳೆವ ಮಾದರಿಗಳು

ಇಂದಿನ ಅಂದದ ರಂಗುಗಳು.

ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ,

ಮೈಸೂರು.

ರಿಜಿ ನಂ. 792 ವಂದೇ ಮಾತರಂ!! ಬಿಡಿ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಬುಧವಾರ ೧-೩-೫೦ [ಸಂಚಿಕೆ ೧೭೯

# ಪೂರ್ವ ಪಾಕಿಸ್ತಾನಕ್ಕೆ ಪಂಡಿತನೆಹರೂಭೇಟಿ?

## ಎಸ್. ಕೃಷ್ಣಸ್ವಾಮಿರಾಯರ ನಿಧನ

ಮೈಸೂರು ೧

ರಾಜಧಾನಿಯ ಸುಪ್ರಸಿದ್ಧ ವಕೀಲರಾದ ಶ್ರೀ ಎಸ್. ಕೃಷ್ಣಸ್ವಾಮಿರಾಯರು ನಿನ್ನೆ [illegible] ಹನ್ನೆರಡೂವರೆ ಗಂಟೆಗೆ [illegible] ಅತ್ಯಂತ [illegible] ಅವರು ರಾತ್ರಿ ಊಟ ಮಾಡಿ [illegible] ಸ್ವಲ್ಪ ಕೆಮ್ಮು ಉಂಟಾಗಿ ಬಾಯಿಯಲ್ಲಿ ರಕ್ತವು ಬಂತೆಂದೂ ಕೂಡಲೇ ಹೃದಯ ಕ್ರಿಯೆ ನಿಂತು ವಿಧಿವಶರಾದರೆಂದೂ ತಿಳಿದು ಬಂದಿದೆ. ಅವರಿಗೆ ೬೩ ವರ್ಷ ವಯಸ್ಸಾಗಿತ್ತು. ಅವರು ಶಾಸನಸಭೆ, ಪೌರಸಭೆ, ಜಿಲ್ಲಾಬೋರ್ಡು ಮುಂತಾದವುಗಳ ಸದಸ್ಯರಾಗಿದ್ದರು. [illegible] ಜೀವಿಗಳೂ, ಪರೋಪಕಾರಿಗಳೂ, ಆಸ್ತಿಕ ಶಿರೋಮಣಿಗಳೂ ಆಗಿದ್ದರು. ಚಾಮುಂಡಿಪುರದಲ್ಲಿರುವ ಶಾರದಾ ನಿಕೇತನ ವಿದ್ಯಾರ್ಥಿನಿಲಯವು ಅವರ ಪ್ರಯತ್ನದ ಫಲವೇ ಆಗಿದೆ. ವಕೀಲರ ವೃಂದದಲ್ಲಿ ಅವರಿಗೆ ಗಣ್ಯಸ್ಥಾನವಿತ್ತು. ಮೃತರ ಆತ್ಮಕ್ಕೆ ಭಗವಂತನು ಶಾಂತಿಯೀಯಲೆಂದು ಬೇಡುತ್ತೇವೆ. ಅವರ ಬಂಧುವರ್ಗದವರಿಗೆ ನಮ್ಮ ಹೃತ್ಪೂರ್ವಕ ಸಂತಾಪಗಳು.

### ಪುದುಚೇರಿ, ಕಾರಿಕಲ್ಲಿಗೆ ಹೋಗುವವರಿಗೆ ರಹದಾರಿ

ಫ್ರೆಂಚ್ ಸ್ವಾಧೀನದ ಪುದುಚೇರಿ, ಕಾರಿಕಲ್ ನಗರಗಳಿಗೆ ಹೋಗುವವರಿಗೆ [illegible] ರಹದಾರಿಗಳನ್ನು ಕೊಡ [illegible] ನಿರ್ಧರಿಸಿ [illegible] ಮೈಸೂರು ಸಂಸ್ಥಾನದಿಂದ [illegible] ಕಾರ್ಯದರ್ಶಿಗಳಿಗೆ ಗೊತ್ತಾದ ನಗರಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಬೇಕೆಂದು ಸರಕಾರದ ಪ್ರಕಟಣೆ ತಿಳಿಸುತ್ತದೆ.

### ಕೈಮಗ್ಗದ ಕೈಗಾರಿಕೆಗೆ ಪ್ರೋತ್ಸಾಹ

ಕೈಮಗ್ಗದ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಲು ನಿರ್ಧರಿಸಿ ಕೇಂದ್ರ ಸರಕಾರದವರು ಕೈಮಗ್ಗ ನೇಕಾರರಿಗೆ ಹತ್ತಿಯನ್ನು ಕಡಿಮೆ ಬೆಲೆಯಿಂದ ಒದಗಿಸಿಕೊಡಲು ನಿರ್ಧರಿಸಿದ್ದಾರೆ. ಆರು ತಿಂಗಳ ಕಾಲ ಪರೀಕ್ಷಾರ್ಥವಾಗಿ ಈ ರೀತಿಯ ವ್ಯವಸ್ಥೆ [illegible] ಹಲವು ದರ್ಜೆಯ ಬಟ್ಟೆಗಳ [illegible] ಕೈಮಗ್ಗದವರಿಗೆ ತುಂಬಾ [illegible] ಹೇಳಲಾಗಿದೆ [illegible]

### [illegible] ಗ್ರೇಡ್ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರರು

[illegible]

## ತನ್ನೊಡನೆ ದ್ವಿತೀಯ ವಿವಾಹದ ಸ್ತ್ರೀಯ ವಿಚಾರಣೆ

ಲಂಡನ್ನಿನ ಅರ್ನೆಸ್ಟ್ ರಾಬರ್ಟ್ ಎಂಬ ೩೫ ವರ್ಷದ ತರುಣನು ಟಾನೇ ಜರ್ಮನಿಯಲ್ಲಿ ಯುದ್ಧಕೈದಿ ಶಿಬಿರದಿಂದ ವಾಪಸು ಬಂದ ನಂತರ ತನ್ನ ಪತ್ನಿ, ಐವಿ ಗೋಲ್ಡ್ ಎಂಬಾಕೆಯೊಡನೆ ನೆಮ್ಮದಿಯ ಸಂಸಾರ ಮಾಡಿಕೊಂಡಿದ್ದು ಪೋಲೀಸರ ಗಮನಕ್ಕೆ ಬಂದು, ಅವರು ದ್ವಿತೀಯ ವಿವಾಹದ ಅಪರಾಧಕ್ಕಾಗಿ ಆಕೆಯ ಮೇಲೆ ಮೊಕದ್ದಮೆ ಹೂಡಿದ್ದಾರೆ. ಆಕೆಗೆ ಮುಂಚೆಯೇ ವಿವಾಹವಾಗಿತ್ತು. ಈ ಹೊಸ ಸಂಪರ್ಕದಿಂದ ಎರಡು ಮಕ್ಕಳಾಗಿವೆ. ಆಕೆಯು ತನ್ನನ್ನು ಈ ಅಪರಾಧದಲ್ಲಿ ಆಕೆಗೆ ಸಹಾಯಕನಾಗಿದ್ದ ಎಂಬ ಬಗ್ಗೆ ಆತನ ಮೇಲೂ ಮೊಕದ್ದಮೆ ಹೂಡಲಾಗಿದೆ.

### ಆಬ್ಬಾ!! ಸೌಂದರ್ಯದ ಮಂಡಲಿ

ದೆಹಲಿಯಲ್ಲಿ ಅಖಿಲ ಭಾರತ ಸೌಂದರ್ಯ ಮಂಡಲಿಯೆಂಬ ಸಂಸ್ಥೆಯೊಂದು ಸ್ಥಾಪಿತವಾಗಿದೆ. ಈ ಹೊಸ ಸಂಸ್ಥೆಯ ಜನನ ಎಲ್ಲರನ್ನೂ ದಿಗ್ಭ್ರಮೆಗೊಳಿಸುತ್ತದೆ. ತಾನೊಬ್ಬ ವಿಶೇಷ ಕಲಾವಿದನೆಂದು ಭಾವಿಸುವವರಿಗೆ ತನ್ನ ವಿಶೇಷದ ಅರಿವನ್ನು ಮಾಡಿಕೊಡಲು ಯಾವನು ಪ್ರಯತ್ನಿಸುತ್ತಾನೋ, ಅಂತಹವನು ಅತಿ ಮೂರ್ಖನೆಂದು ಸಂಸ್ಥೆಯ ಭಾವನೆ. ವಿಶೇಷವಾಗಿ [illegible] ಗರ್ವವನ್ನು ವ್ಯಂಗ್ಯವಾಗಿ ಟೀಕಿಸುವುದು, ಹಾಸ್ಯ ಮಾಡುವುದೇ ಸಂಸ್ಥೆಯ ಗುರಿಯಾಗಿದೆ.

### ನಾಟಕ ಶಾಲೆ ಯ

ಮೈಸೂರು ನಗರದ ಕೃಷ್ಣರಾಜೇಂದ್ರ [illegible] ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ, ನಗರ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ [illegible] ನಾಟಕ ಶಾಲೆಯನ್ನು ತೆರೆಯಲಾಗಿದೆ [illegible]

### ಶ್ರೀರಾಮ ಸೇವಾ ಸಂಘ

ರಾಜಧಾನಿಯ [illegible] ಶ್ರೀರಾಮ ಸೇವಾ ಸಂಘದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ [illegible] ತಿಂಗಳ [illegible] ಶ್ರೀರಾಮೋತ್ಸವವನ್ನು ನೆರವೇರಿಸಲಾಗುವುದು. ಪ್ರತಿದಿನ ಬೆಳಿಗ್ಗೆ ಅಭಿಷೇಕ ಮಂಗಳಾರತಿ, ಸಂಜೆ ಭಜನೆ ಹರಿಕಥೆ [illegible] ಗಳ ವಿಶೇಷ [illegible]

## ಶಾಸನ ಸಭೆಯಲ್ಲಿ ಕೈಬಾಂಬಿನ ಪ್ರದರ್ಶನ

ಬೊಂಬಾಯಿನ ಶಾಸನ ಸಭೆಯಲ್ಲಿ ೬ ಕೈಬಾಂಬುಗಳು ಮತ್ತು ವಿಷಾನಿಲಗಳಿಗೆ ಉಪಯೋಗಿಸಬಹುದಾದ ಮದ್ದು ಇವು ಗಳಿದ್ದ ಚೀಲವನ್ನು ಗೃಹಮಂತ್ರಿಗಳಾದ ಮೊರಾರ್ಜಿ ದೇಸಾಯಿ ಯವರು ಪ್ರದರ್ಶಿಸಿದಾಗ ಸದಸ್ಯರು ಆಶ್ಚರ್ಯಭರಿತರಾದರು. ಸಾರ್ವಜನಿಕ ರಕ್ಷಣಾ ಮಸೂದೆಯ ಮೇಲೆ ಬಂದಿದ್ದ ಟೀಕೆಗಳಿಗೆ ಉತ್ತರವಾಗಿ ಈ ಶಸ್ತ್ರವನ್ನು ತೋರಿಸಿ ಅಂತಹ ಒಂದು ಬಾಂಬಿನಿಂದ ಇಡೀ ಶಾಸನ ಸಭೆಯನ್ನೇ ನಾಶಪಡಿಸಬಹುದೆಂದೂ, ಇದನ್ನು ಉಪಯೋಗಿಸುವವರನ್ನು ತಡೆಯುವುದಕ್ಕಾಗಿಯೇ ತಾವು ಈ ಮಸೂದೆಯನ್ನು ತಂದಿರುವುದಾಗಿಯೂ ಅವರು ಹೇಳಿದರು.

### ಭಾರತದ ಆಯವ್ಯಯದಲ್ಲಿ ೩ ಕೋಟಿ ಉಳಿತಾಯ

ಪ್ರಜಾಪ್ರಭುತ್ವ ಭಾರತದ ಪ್ರಥಮ ಆಯವ್ಯಯ ಪಟ್ಟಿ ಪ್ರಕಾರ ಪ್ರಸಕ್ತ ಸಾಲಿನಲ್ಲಿ ೩ ೦೬೮ ಕೋಟಿ ರೂ ಉಳಿತಾಯವಾಗುವುದೆಂದು ಅಂದಾಜು ಇದೆ.

ಆಯವ್ಯಯದ ಮುಖ್ಯಾಂಶಗಳ ಪ್ರಕಾರ ಈ ವರ್ಷ ಹೊಸ ತೆರಿಗೆಯಿಲ್ಲ. ವ್ಯಾಪಾರ ಲಾಭ ತೆರಿಗೆಯು ರದ್ದು. ಕಾರ್ಪೊರೇಷನ್ ತೆರಿಗೆ ೨ ಆಣೆಯಿಂದ ೧॥ ಆಣೆಗೆ ಇಳಿಸಲ್ಪಡುವುದು. ಆದಾಯ ತೆರಿಗೆ ದರ ೫ ಆಣೆಯಿಂದ ೪ ಆಣೆಗೆ ಇಳಿಸುವುದು. [illegible] ಕಾರ್ಡ್ ಕವರುಗಳ ಬೆಲೆ [illegible] ಆಣೆಯಿಂದ [illegible] ಇಳಿಸುವುದು, ತಂತಿ ದರ [illegible] ಆಣೆಯಿಂದ [illegible] ಇಳಿಸುವುದು, ಟ್ರಂಕ್ ಟೆಲಿಫೋನ್ ದರ [illegible] ಇಳಿಸುವುದು— ಮುಂತಾದ ಸೌಲಭ್ಯಗಳು ಒದಗುವುವು.

### ಸ್ವಿಸ್ ಶಾಂತಿವಾದಿಗಳ ಆಗಮನ

ಸೇವಾಗ್ರಾಮದಲ್ಲಿ ನಡೆದ ವಿಶ್ವ ಶಾಂತಿವಾದಿಗಳ ಸಮ್ಮೇಳನಕ್ಕೆ ಸ್ವಿಟ್ಜರ್ಲೆಂಡಿನ ಪ್ರತಿನಿಧಿಯಾಗಿ ಬಂದಿದ್ದ [illegible] ನಿನ್ನೆ ಮೈಸೂರಿಗೆ ಆಗಮಿಸಿದರು. [illegible] ಮತ್ತು [illegible] ವರಿಗೆ [illegible] ಪ್ರದೇಶದಲ್ಲಿರುವ ವಯಸ್ಕರ ಶಿಕ್ಷಣ [illegible] ಭೇಟಿ ನೀಡುವರು.

## ಢಕ್ಕಾನಿಗೆ ನೆಹರೂ ಭೇಟಿ ಕೊಡುವರೇ?

## ವಿಶ್ವಸಂಸ್ಥೆಯಲ್ಲಿ ರಷ್ಯ ಪ್ರತಿನಿಧಿಯ ಸಭಾತ್ಯಾಗ

ಚೀಣದ ಕೋಮಿಂಟಾಂಗ್ ಪಕ್ಷದ ಪ್ರತಿನಿಧಿಗೆ ವಿಶ್ವಸಂಸ್ಥೆಯಲ್ಲಿ ನೆನ್ನೆ ಹಾಜರಾಗಲು ಅವಕಾಶ ಕೊಟ್ಟಿದನ್ನು ಪ್ರತಿಭಟಿಸಿ ರಷ್ಯ, ಪೋಲೆಂಡ್, ಜೆಕೊಸ್ಲೋವೇಕಿಯಾ ಪ್ರತಿನಿಧಿಗಳು ಸಭಾತ್ಯಾಗ ಮಾಡಿದರು.

## ಸಕ್ಕರೆ ಕೈಗಾರಿಕೆಗೆ ರಕ್ಷಣೆ ರದ್ದು

ಒದುವ ತಿಂಗಳಿನಿಂದ ಭಾರತ ಸರ್ಕಾರದವರು ಸಕ್ಕರೆ ಕೈಗಾರಿಕೆಗೆ ರಕ್ಷಣೆಯನ್ನು ರದ್ದುಗೊಳಿಸುವರೆಂದೂ, ಸಕ್ಕರೆ ಆಮದಿನ ಮೇಲೆ ಹಲವು ಸುಂಕ ... [illegible]

## ಜಪಾನಿನಲ್ಲಿ ಅಧಿಕ ಸಂಖ್ಯೆಯಲ್ಲಿ ಆತ್ಮಹತ್ಯ

ಜಪಾನಿನಲ್ಲಿ ಆತ್ಮಹತ್ಯವು ಈಚೆಗೆ ... ದಿನಕ್ಕೆ ಸರಾಸರಿ ೭೦ ಆತ್ಮಹತ್ಯ ಪ್ರಸಂಗಗಳು ನಡೆಯುತ್ತಿವೆಂದೂ ... ನಿರುದ್ಯೋಗ ಮತ್ತು ... [illegible]

### ಅಧಿಕಾರಾವಧಿ ಹೆಚ್ಚಿತು

... ಕಾಲೇಜಿನ ಪ್ರಿನ್ಸಿಪಾಲರಾದ ಡಾII ಎಂ ಸಿದ್ದಲಿಂಗಯ್ಯನವರ ... ಅಧಿಕಾರಾವಧಿಯನ್ನು ... [illegible]

### ... ಚುನಾವಣೆ ಕ್ಷೇತ್ರಗಳ ವಿಭಜನೆ

[illegible] ... ಮುನಿಸಿಪಲ್ ಕೌನ್ಸಿಲುಗಳಿಗೆ ... ಬೆಂಗಳೂರು ... ಬಗ್ಗೆ ... ಸರ್ಕಾರದ ... ಗೊತ್ತಾಗಿದೆ

# ಸಾಧ್ವಿ

ಸಂಪುಟ ೮] ಮಂಗಳವಾರ ೭-೩-೫೦ [ಸಂಚಿಕೆ ೧೮೮

# ಸಂಸಾರ ಸಮೇತವಾಗಿ ಲಾಯಕ್‌ಅಲಿ ಪರಾರಿ

### ನಿಜಾಮ್ ಲಾಯಕ್ ಅಲಿ ... ತಪ್ಪಿಸಿಕೊಂಡರು

ಹೈದರಾಬಾದಿನ ... ಬಂಧನದಲ್ಲಿದ್ದ ... ಲಾಯಕ್‌ಅಲಿ ... [illegible] ... ಲಾಯಕ್‌ಅಲಿಯವರು ತಪ್ಪಿಸಿಕೊಂಡಿರುವ ಬಗ್ಗೆ ಹೈದರಾಬಾದಿನ ಎಲ್ಲ ರೈಲ್ವೆ ಮತ್ತು ವಿಮಾನ ನಿಲ್ದಾಣಗಳಿಗೂ ... [illegible]

ಲಾಯಕ್‌ಅಲಿ ... [illegible]

### ... ಬಹುಮಾನ

[illegible]

### ಶಾಸನ ಸಭೆಗೆ ನಿಜಲಿಂಗಪ್ಪನವರ ರಾಜೀನಾಮೆ

ಸ್ವಂ ವ[ ] ಬೆಂಗಳೂರು ೬

ಪ್ರಧಾನ ಕಚೇರಿ ಶ್ರೀ ಕೆ ಸಿ ರೆಡ್ಡಿ ... ಶ್ರೀ ನಿಜಲಿಂಗಪ್ಪನವರು ... ಶಾಸನ ಸಭೆಗೆ ರಾಜೀನಾಮೆ ... [illegible] ... ಗೊತ್ತಾಗಿದೆ

ಇನ್ನು ಮುಂದೆ ... ನೆನ್ನೆ ದಿನ ... [illegible]

### ರಾಜ್ಯಾಧ್ಯಕ್ಷರಲ್ಲಿ ವಕೀಲರ ನಿಯೋಗಕ್ಕೆ ಅನುಮತಿ ಸಿಗಲಿಲ್ಲ

ನ್ಯಾಯವಾದಿ ... ಬೆಂಗಳೂರಿನ ... ರಾಜ್ಯಾಧ್ಯಕ್ಷ ... [illegible]

### ಜಪಾನಿನಲ್ಲಿ ಕಮ್ಯೂನಿಸ್ಟರ ... ದಿನಗಳ ಮುಷ್ಕರ

[illegible]

## ಗ್ರಾಮಾಧಿಕಾರಿಗಳಿಗೆ ಸಂಬಳ

ಸ್ವಂ ವ[ ] ಬೆಂಗಳೂರು ೬

ಸಂಸ್ಥಾನದ ಭೂ ಕಂದಾಯ ಸುಧಾರಣಾ ಸಮಿತಿಯವರು ನೆನ್ನೆ ಮತ್ತು ಮೊನ್ನೆ ಸಭೆ ಸೇರಿ ಈಗಿರುವಂತೆ ಪಟೇಲ್ ಮತ್ತು ಶಾನುಭೋಗರ ನೇಮಕದ ಬದಲು ಬದಲಿನ ಕ್ರಮವನ್ನು ರದ್ದುಪಡಿಸಿ ಅವರಿಗೆ ಸಂಬಳ ಗೊತ್ತುಮಾಡುವಂತೆ ೧೧-೮ ಓಟುಗಳಿಂದ ನಿರ್ಣಯ ಮಾಡಿದರು

† ಶ್ರೀ ಹೆಚ್. ಎಸ್ ರುದ್ರಪ್ಪನವರು ಪಬ್ಲಿಕ್ ಸರ್ವೀಸ್ ಕಮೀಷನ್ ಸದಸ್ಯತ್ವಕ್ಕೆ ತಮ್ಮ ನಿರಾಕರಣೆಯನ್ನು ಸೂಚಿಸಿರುವರೆಂದು ಗೊತ್ತಾಗಿದೆ

### ಮುಖ್ಯ ಮಂತ್ರಿಯವರ ವಾಸಕ್ಕೆ ಕಾರ್ಲ್‌ಟನ್ ಭವನ

ಇದುವರೆಗೆ ದಿವಾನರುಗಳ ವಾಸಕ್ಕಾಗಿ ಕೊಡಲಾಗುತ್ತಿದ್ದ ಕಾರ್ಲ್‌ಟನ್ ಭವನವನ್ನು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ಕೊಡಲಾಗಿದೆ. ಇದುವರೆಗೆ ಅವರು ಇದ್ದ ಬಾಲಬ್ರೂಯಿ ಭವನದಿಂದ ಅಲ್ಲಿಗೆ ತೆರಳಿದ್ದಾರೆ. ಬಾಲಬ್ರೂಯಿ ಭವನವನ್ನು ಪ್ರೊಫೆಸರರಾದ ಶ್ರೀ ಸಿ ಆರ್. ರೆಡ್ಡಿಯವರಿಗೆ ಕೊಡಲಾಗುವುದು.

○ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ಶ್ರೀಮತಿ ... ದಾಸಪ್ಪನವರು, ಶ್ರೀ ಎಸ್ ಚನ್ನಯ್ಯನವರು ಮತ್ತು ಶ್ರೀ ಕೆ ಹನುಮಂತಯ್ಯನವರುಗಳನ್ನು ಬಿಡು ಇತರ ... ಅರ್ಜಿಯನ್ನು ವಾಪಸು ತೆಗೆದುಕೊಳ್ಳುವ ಸಂಭವವಿದೆ

### ಶಾಲಾ ವಾರ್ಷಿಕೋತ್ಸವ

ಮೈಸೂರು ಮುನಿಯಪ್ಪನವರ ಸ್ಕೂಲು ... ವಾರ್ಷಿಕೋತ್ಸವವು ಈ ದಿನ ಮತ್ತು ನಾಳೆ ನಡೆಯುವುದು: ... ಗಂಟೆಗೆ ಪ್ರೊಫೆಸರ್ ಎ ಸಿ ದೇವೇಗೌಡರವರಿಂದ ವಸ್ತು ಪ್ರದರ್ಶನದ ಪ್ರಾರಂಭೋತ್ಸವವು ನಡೆಯುವುದು. ನಾಳೆ ಸಾಯಂಕಾಲ ... ಗಂಟೆಗೆ ಟೀಚರ್ಸ್ ಕಾಲೇಜ್ ಪ್ರಿನ್ಸಿಪಾಲರವರಾದ ಡಾಕ್ಟರ್ ಎಂ ಸಿದ್ದಲಿಂಗಯ್ಯನವರು ಅಧ್ಯಕ್ಷತೆಯನ್ನು ವಹಿಸಿ ಬಹುಮಾನವನ್ನು ಹಂಚುವರು. ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳು ನಡೆಯುವುವು

### ಶ್ರೀರಾಮ ನವರಾತ್ರಿ ಉತ್ಸವ

ಗೀತಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ... ಸ್ವಾಮಿ ದೇವಸ್ಥಾನದಲ್ಲಿ ... ಶ್ರೀರಾಮ ನವರಾತ್ರಿ ಮಹೋತ್ಸವವನ್ನು ನಡೆಸುವರು. ಪ್ರತಿನಿತ್ಯ ... ರಾಮಾಯಣ ಪಾರಾಯಣ, ಸಹಸ್ರನಾಮ, ... ಭಜನೆಗಳೂ ... ಮಂಗಳೋತ್ಸವಗಳು ನಡೆಯುವುವು

### ರಿಕ್ರೂಟಿಂಗ್ ಅಧಿಕಾರಿಗಳ ಆಗಮನ

ಭಾರತ ... [illegible]

## ದಿನಕ್ಕೆ ೬೦ ಸಾವಿರದಂತೆ ಪ್ರಜಾ ಸಂಖ್ಯೆ ಹೆಚ್ಚುತ್ತಿದೆ.

ಆಹಾರವನ್ನು ಹೆಚ್ಚಾಗಿ ಬೆಳೆಯುವ ಯೋಜನೆಯು ನಿರೀಕ್ಷಿಸಿದಷ್ಟು ಯಶಸ್ವಿಯಾಗದಿರಲು ಪ್ರಪಂಚದ ಜನಸಂಖ್ಯೆಯು ಆಹಾರದ ಬೆಳೆಗಿಂತಲೂ ಅಧಿಕವಾಗಿ ವೃದ್ಧಿಯಾಗುತ್ತಿರುವುದೇ ಕಾರಣವೆಂದು ಸುಪ್ರಸಿದ್ಧ ವಿಜ್ಞಾನಿಗಳಾದ ಪ್ರೊ|| ಜೂಲಿಯನ್ ಹಕ್ಸ್ಲೆಯವರು ಹೇಳುತ್ತಾರೆ ಪ್ರತಿ ದಿನವೂ ೬೦ ಸಾವಿರದಂತೆ ಪ್ರಪಂಚದ ಪ್ರಜಾ ಸಂಖ್ಯೆಯು ಹೆಚ್ಚುತ್ತಿದೆಯೆಂದು ಅವರು ತಿಳಿಸಿದ್ದಾರೆ ಇದು ಒಂದು ದೊಡ್ಡ ನಗರದಷ್ಟೇ ಆಗುವುದು

## ಕಾಮನ ಹಬ್ಬದ ಓಕಳಿಯಿಂದ ನಾಲ್ವರ ಮರಣ

ಆಲಿಘಡದಲ್ಲಿ ಕಾಮನ ಹಬ್ಬದ ದಿವಸ ಬಣ್ಣ ಎರಚಾಡುವ ಸಂದರ್ಭದಲ್ಲಿ ಗಲಭೆಯುಂಟಾಗಿ ನಾಲ್ಕು ಜನರು ಮರಣ ಹೊಂದಿದರೆಂದು ವರದಿಯಾಗಿದೆ. ಮೆರವಣಿಗೆಯಲ್ಲಿ ಕಾಮನ ಮೆರವಣಿಗೆ ನಡೆಯುತ್ತಿದ್ದಾಗ ಅದನ್ನು ತಡೆದುದರಿಂದ ಘರ್ಷಣೆಯುಂಟಾಯಿತೆಂದೂ ಹಲವು ಸತ್ತು ಅನೇಕರಿಗೆ ಗಾಯವಾಯಿತೆಂದೂ ತಿಳಿದುಬಂದಿದೆ

## ಭಾರತದ ಹಡಗು ಸಂಸ್ಥೆ

ಭಾರತ ಸರ್ಕಾರದವರು ಇಷ್ಟರಲ್ಲೇ ಒಂದು ಹಡಗಿನ ಸಂಸ್ಥೆಯನ್ನು ಸ್ಥಾಪಿಸಿ [illegible] ಅದರ ಮೇಲ್ವಿಚಾರಣೆಗೆ ಒಬ್ಬ ಅಧಿಕಾರಿಯನ್ನಾಗಿ ನೇಮಿಸುವರೆಂದು ಗೊತ್ತಾಗಿದೆ. ಪಶ್ಚಿಮಕ್ಕೆ ಭಾರತದಿಂದ ವಿದೇಶಗಳಿಗೆ ಆ ಹಡಗಿನ ಪ್ರಯಾಣ ಸಂಬಂಧವನ್ನು ಕಲ್ಪಿಸಲಾಗುವುದೆಂದೂ ತಿಳಿದುಬಂದಿದೆ

## ಬೀದಿಯಲ್ಲಿ ಸಂಚಾರಕ್ಕೆ ಅಡ್ಡಿ

ಕುಣಿಗಲ್ ೫

ಈ ಊರಿನ ಪೇಟೆ ಬೀದಿಯ ರಸ್ತೆಗೆ ಜಲ್ಲಿ ಹಾಕಿಸಲು ಕಲ್ಲನ್ನು ಒಂದು ತಿಂಗಳ ಹಿಂದೆ ರಾಶಿ ಹಾಕಿದ್ದಾರೆ ಇದರಿಂದ ಈ ಚಿಕ್ಕ ರಸ್ತೆಯಲ್ಲಿ ಜನ ಮತ್ತು ವಾಹನ ಸಂಚಾರಕ್ಕೆ ಬಹಳ ತೊಂದರೆಯಾಗಿದೆ [illegible] ಅಧಿಕಾರಿಗಳು ಬೇಗ ರಸ್ತೆಯನ್ನು ಸರಿಪಡಿಸಿ ತೊಂದರೆಯನ್ನು ತಪ್ಪಿಸಬೇಕೆಂದು ಕೋರಲಾಗಿದೆ

ಇಲ್ಲಿನ ಕೋಟೆ [illegible] ಪ್ರತಿ ವರ್ಷ [illegible] ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸುವರು

## ದಕ್ಷಿಣ ಏಷ್ಯದ ಮೇಲೆ ರಷ್ಯದ ಕಣ್ಣು

ಪಾಶ್ಚಾತ್ಯ ರಾಷ್ಟ್ರಗಳ ಪರಿಸ್ಥಿತಿಯನ್ನು ಪರಿಶೀಲಿಸಲು ರಚಿಸಲಾಗಿರುವ ಅಂತರರಾಷ್ಟ್ರೀಯ ಸಮಿತಿಯು, ರಷ್ಯವು ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು ಇತರ [illegible] ಬರ್ಮಾ, ಸಯಾಂ ಮತ್ತು ಭಾರತಗಳನ್ನು ಆಕ್ರಮಿಸಿಕೊಳ್ಳುವ ಸಂಭವವಿದೆಯೆಂದೂ, ಆದ್ದರಿಂದ ಅಮೆರಿಕವು ದೂರಪ್ರಾಚ್ಯ ರಾಷ್ಟ್ರಗಳಿಗೆ ಹೆಚ್ಚಿನ ಶಸ್ತ್ರಾಸ್ತ್ರಗಳನ್ನು ಒದಗಿಸಿ ಅವುಗಳು ಕಮ್ಯೂನಿಸ್ಟರ ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕೆಂದೂ ಸೂಚಿಸಿದ್ದಾರೆ. ಸಯಾಂ ನಬಾಂಗ್ ಕಾಕ್‌ನಲ್ಲಿ ರಷ್ಯವು ತನ್ನ ರಾಯಭಾರಿಯನ್ನು ನೇಮಿಸಿರುವುದೂ ಅದರ ದಕ್ಷಿಣ ಏಷ್ಯ ಆಕ್ರಮಣ ಗುರಿಯನ್ನು ಸಮರ್ಥಿಸಲು ನಿದರ್ಶನವಾಗಿದೆಯೆಂದೂ ಆ ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ

## ಭೂತಕನ್ನಡಿ ಶಾಖದಿಂದ ಹುಲ್ಲುಮೆದೆ ಹತ್ತಿಕೊಂಡಿತು

ಮೊನ್ನೆ ದಿನ ಹೊಸಕೋಟೆ ಗ್ರಾಮದಲ್ಲಿ ಕೆಲವು ಬಾಲಕರು ಹುಲ್ಲುಮೆದೆಯ ಬಳಿ ಆಟವಾಡುತ್ತಿದ್ದಾಗ ಒಂದು ಭೂತಗನ್ನಡಿಯನ್ನು ಅಲ್ಲಿಯೇ ಬಿಟ್ಟು ಹೋದರೆಂದೂ ಸ್ವಲ್ಪ ಹೊತ್ತಿನಮೇಲೆ ಸೂರ್ಯನ ರಶ್ಮಿಗಳು ಕನ್ನಡಿಯ ಮೂಲಕ ಕೇಂದ್ರೀಕೃತವಾಗಿ ಹುಲ್ಲಿನ ಮೇಲೆ ಬಿದ್ದು ಬೆಂಕಿ ಹತ್ತಿ [illegible] ಉರಿದುಹೋಯಿತೆಂದೂ ವರದಿಯಾಗಿದೆ

## ಗ್ರಾಮಾಂತರದ ವಿಶ್ವ ವಿದ್ಯಾಲಯ

ಬಿಹಾರ್ ಸಂಸ್ಥಾನದಲ್ಲಿ ಪುರಾತನ ಕಾಲದ ಬೌದ್ಧ ಸಂಸ್ಕೃತಿ ಮತ್ತು ವಿದ್ಯಾಕೇಂದ್ರಗಳ ರಾಜಧಾನಿಯು ಬಳಿ ಇರುವ ರಾಜಗೃಹದಲ್ಲಿ [illegible] ಸರ್ಕಾರದವರು ಗ್ರಾಮಾಂತರದ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದಿರುವರೆಂದು ತಿಳಿದುಬಂದಿದೆ

## ವಿಮಾನದಿಂದ ಹಾರಿ ಮರಣ

ಯುಗೋಸ್ಲಾವಿಯದ ನಿರಾಶ್ರಿತನೊಬ್ಬನು ಇಂಗ್ಲೆಂಡನ್ನು ಪ್ರವೇಶಿಸಬಾರದೆಂದು ಪ್ರತಿಬಂಧಿಸಲ್ಪಟ್ಟು ಕಳೆದ ಶನಿವಾರ ಒಂದು ವಿಮಾನದಲ್ಲಿ ಹಿಂದಿರುಗಿ ಕಳುಹಿಸಲ್ಪಟ್ಟನು. [illegible] ವಿಮಾನ ಹಾರುತ್ತಿದ್ದಾಗ [illegible] ವಿಮಾನದ ಬಾಗಿಲನ್ನು ತೆಗೆದು ಕೆಳಕ್ಕೆ ಹಾರಿ ಮರಣಹೊಂದಿದನೆಂದು ವರದಿಯಾಗಿದೆ

## ಸಿನಿಮಾಗಳ ರಾಷ್ಟ್ರೀಕರಣ

[illegible] ಸರ್ಕಾರದವರು [illegible] ಸಿನಿಮಾಗಳನ್ನು [illegible] ರಾಷ್ಟ್ರೀಕರಣ [illegible] ವರದಿಯಾಗಿದೆ.

## ಬ್ರಿಟನ್ನಿಗೂ ಅಣುಬಾಂಬಿದೆಯೇ?

ಬ್ರಿಟನ್ನಿನ ಮೇಲೆ ನಡೆಯಬಹುದಾದ ಅಣುಬಾಂಬು ಧಾಳಿ ಬಗ್ಗೆ ಎಲ್ಲ ರಕ್ಷಣಾ ಕ್ರಮಗಳನ್ನೂ ಸೊಟ್ಟಮೊದಲನೆಯದಾಗಿ ಕೈಗೊಳ್ಳಬೇಕೆಂದು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಸರ್ಕಾರಕ್ಕೆ ಸಲಹೆ ಮಾಡಿದೆ

## ಹರಿಜನರಿಗೆ ಕ್ಷೌರ ಮಾಡದುದಕ್ಕಾಗಿ ಜುಲ್ಮಾನೆ

ಹರಿಜನನೊಬ್ಬನಿಗೆ ಕ್ಷೌರ ಮಾಡಲು ನಿರಾಕರಿಸಿದನೆಂಬ ಆಪಾದನೆಯ ಮೇಲೆ ಕಲ್ಲಿಕೋಟೆಯ ಒಬ್ಬ ನಾಪಿತನಿಗೆ [illegible] ಕಲ್ಲಿನ ನ್ಯಾಯಾಧೀಶರು ೨೦ ರೂ ಜುಲ್ಮಾನೆ ವಿಧಿಸಿದರೆಂದು ತಿಳಿದುಬಂದಿದೆ

## ವಿಚಿತ್ರ ಶಿಶುವಿನ ಜನನ

ಚಾಮರಾಜನಗರ ೫

ಈಗ್ಗೆ ೪-೫ ದಿನಗಳ ಕೆಳಗೆ ಇಲ್ಲಿನ ಉಪ್ಪಲಿಗರ ಕೇರಿಯ ಒಬ್ಬ ಹೆಂಗಸು ಒಂದು ವಿಚಿತ್ರ ಹೆಣ್ಣು ಮಗುವಿಗೆ ಜನ್ಮವಿತ್ತಳು ಅದಕ್ಕೆ ಎರಡು ಕೈಗಳ ಹಸ್ತಗಳಲ್ಲೂ ಮತ್ತು ಪಾದಗಳಲ್ಲೂ ಬೆರಳುಗಳೇ ಇರಲಿಲ್ಲ ಮುಖದಲ್ಲಿ ಮೂಗು ಇರಲೇ ಇಲ್ಲ, ಬಹಳ ದೊಡ್ಡ ಬಾಯಿ ಮಾತ್ರ ಇತ್ತು ಎರಡು ಕಣ್ಣುಗಳಲ್ಲೂ ಸುಮಾರು ಎರಡು ಅಂಗುಲ ಉದ್ದದ ಸಣ್ಣ ಕೊಂಬಿನ ಆಕಾರದ ಮಾಂಸ ಖಂಡವು ಬೆಳೆದಿತ್ತು ಮೈಯೆಲ್ಲಾ ಕಪ್ಪು ಪಟ್ಟೆಗಳಿಂದ ಕೂಡಿತ್ತು ಮಗುವು ಬಹಳ ಚಟುವಟಿಕೆಯಿಂದಿದ್ದಿತು ಅದು ಮೂರು ದಿನಗಳ ನಂತರ ಮೃತಪಟ್ಟಿತು ಸ್ಥಳೀಯ ಅಧಿಕಾರಿಗಳೂ ಮತ್ತು ಸ್ಥಳ ಪರಸ್ಥಳಗಳ ಅನೇಕ ಮಂದಿ ಜನರೂ ಆಗಮಿಸಿ ಈ ವಿಚಿತ್ರ ಶಿಶುವನ್ನು ನೋಡಿಕೊಂಡು ಹೋದರು

## ಯುದ್ಧಕಾಲದ ರಕ್ಷಣೆಗಾಗಿ ಭಾರತ ಆಸ್ಟ್ರೇಲಿಯಾಗಳಿಂದ ಪರಿಹಾರವೇ?

ಬ್ರಿಟನ್ನಿನ ಪ್ರಧಾನಿ ಅಟ್ಲೀಯವರು ನೆನ್ನೆ ದಿನ ಇಲ್ಲಿನ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ ಬ್ರಿಟನ್ನಿನ ಸ್ಟರ್ಲಿಂಗ್ ಸಾಲದ ಬಾಕಿಯನ್ನು ಸಾಧ್ಯವಾದಷ್ಟು ಬೇಗ ತಗ್ಗಿಸಬೇಕಾಗುವುದೆಂದೂ [illegible] ಇಲ್ಲಿನ ಉತ್ಪನ್ನ ಕೈಗಾರಿಕೆಗಳನ್ನು ಇಷ್ಟರಲ್ಲೇ ರಾಷ್ಟ್ರೀಕರಣ ಮಾಡಲಾಗುವುದೆಂದೂ ಹೇಳಿದರು. ಮಿ|| ಚರ್ಚಿಲರು ಸ್ಟರ್ಲಿಂಗ್ ಸಾಲದ ವಿಚಾರವಾಗಿ ಮಾತನಾಡುತ್ತಾ ಭಾರತ ಮತ್ತು ಆಸ್ಟ್ರೇಲಿಯಗಳನ್ನು ಯುದ್ಧಕಾಲದಲ್ಲಿ ರಕ್ಷಿಸಿದುದಕ್ಕಾಗಿ ಅವುಗಳಿಂದ ಪ್ರತಿಫಲ ಕೇಳಬೇಕೆಂದು ಸೂಚಿಸಿದರು ಮಿ|| ಅಟ್ಲೀಯವರು ಉತ್ತರವಿತ್ತು ಸ್ಟರ್ಲಿಂಗ್ ಬಾಕಿಯನ್ನು ತಗ್ಗಿಸಲು ಇದು ಉಚಿತ ಮಾರ್ಗವಲ್ಲವೆಂದು ಹೇಳಿದರು.

## ಕಾಮನ ಹಬ್ಬದ ಸಂದರ್ಭದಲ್ಲಿ ಗಲಭೆ ಮಂದಿ ಮರಣ

ಜಬ್ಬಲ್ಪುರದ ಬಳಿ ಕಟ್ನಿ ಎಂಬಲ್ಲಿ ಕಾಮನ ಹಬ್ಬದ ಸಂಬಂಧವಾಗಿ ಬಣ್ಣ ಎರಚಿದುದರಿಂದ ಎರಡು ಗುಂಪುಗಳವರಿಗೆ ಘರ್ಷಣೆ ಸಂಭವಿಸಿ ಆರು ಜನರು ಸತ್ತು ಹಲವು ಜನರು ಗಾಯಗೊಂಡರು. ಪೋಲೀಸರು ಗುಂಡುಹಾರಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು


SRI GAYATHRI
TALKIES
Daily 3 Shows
LAST DAY
An unforgettable love story which you must never miss
WARNER'S
The Fountain Head
From 8-3-50 for 2 days
PARAMOUNT'S
Alias Nick Beal
ಅಲಿಯಾಸ್ ನಿಕ್ ಬೀಲ್
Starring-Ray Milland and Audrew Toller
- Coming -
MIGHTY JOE YOUNG

ನಾಯಿ ಕೆಮ್ಮಿಗೆ ಔಷಧಿ
WHOOPING COUGH REMEDY
[illegible] (TRY) [illegible] ರೂ. 2-00
ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ
ದಿವಾನರ ರಸ್ತೆ ಮೈಸೂರು.

|| ಶ್ರೀ ||
ಗಣೇಶಾ ಟಾಕೀಸ್
ದಿನವಹಿ 3 ಪ್ರದರ್ಶನಗಳು
7-3-50 ರಿಂದ 3 ದಿನ ಮಾತ್ರ
ಪಾಟಿಯಕ್ ರಾಖಿ
(ಹಿಂದಿ)
ಭೂಮಿಕೆ [illegible] ನರ್ಗೀಸ್ ಮತ್ತು [illegible]
- ಮುಂದಿನ ಚಿತ್ರ -
ಚಕ್ರಧಾರಿ
(ತೆಲುಗು)
[illegible]

ರಾಜಕಮಲ್
ಟಾಕೀಸ್
[illegible] 8-50 ರಿಂದ
ಜನಭರಿತವಾದ ೧೧ನೇ ವಾರ
ದಿನವಹಿ 3 ಪ್ರದರ್ಶನಗಳು
ಜೀವನ
(ತಮಿಳು)
ವೈಜಯಂತಿಮಾಲಾ, [illegible]
[illegible]

ಮದುವೆ ಪತ್ರಿಕೆಗಳಿಗೆ
[illegible] ಮೈಸೂರು [illegible]
ಎಂ. ವಿ. [illegible]
[illegible] ಮೈಸೂರು.


Edited, printed and published by A. R. Nagarajan at Sadhvi Press, D. Subbiah Road, Mysore.

ಫೋನ್ ನಂ. 176 ॥ವಂದೇ ಮಾತರಂ॥ ಬಿಡಿಪ್ರತಿಗೆ ೩ ಕಾಸು

ಸಂಪುಟ ೮] ಬುಧವಾರ ೮-೩-೫೦ [ಸಂಚಿಕೆ ೧೮೫

# ಲಾಯಕಾಲಿಯು ಪಾಕಿಸ್ತಾನದಲ್ಲಿರುವನೇ

## ಲಾಯಕಾಲಿ ಪಾಕಿಸ್ತಾನಕ್ಕೆ ಓಡಿಹೋಗಿರುವರೇ ?

### ಕಳೆದ ಶನಿವಾರ ತಪ್ಪಿಸಿಕೊಂಡರೆಂದು ಸುದ್ದಿ

ಕಳೆದ ಶನಿವಾರ ಬೆಳಗ್ಗೆ ಲಾಯಕಾಲಿ ಪ್ರಧಾನರು ಬೇಗಂ ಲಾಯಕಾಲಿಯು ಅವರು ಬಂಧನದಲ್ಲಿದ್ದ ಭವನದಿಂದ ತಮ್ಮ ಸ್ನೇಹಿತರುಗಳನ್ನು ನೋಡಲು ಹೋಗುವರೆಂದು ಸುದ್ದಿ ಹರಡಿತು. ಅಲ್ಲಿಂದ ಹೋಗುವ ಮೋಟಾರುಗಳನ್ನು ಶೋಧಿಸಲು ಎಂಟು ಮಂದಿ ಕಾವಲುಗಾರರನ್ನು ನೇಮಿಸಲಾಗಿತ್ತು. ಫೋರ್ಡ್ ಕಾರುಗಳನ್ನು ಶೋಧಿಸಲು ಒಬ್ಬ ಮಹಿಳಾ ಪೊಲೀಸನನ್ನು ನೇಮಿಸಲಾಗಿತ್ತು. ಆ ದಿನ ರಾತ್ರಿ ಬೇಗಂ ಲಾಯಕಾಲಿಯವರು ಹೋಗುವರೆಂದು ಸುದ್ದಿ ಹರಡುತ್ತಿದ್ದಂತೆ ಗಡಿ ಗಾರ್ಡುಗಳು ಆ ಮೋಟಾರನ್ನು ಶೋಧಿಸಲಿಲ್ಲ. ಆದರೆ ಮಹಿಳಾ ಪೊಲೀಸನನ್ನು ಮರೆಮಾಚಿ ಅವರು ಹೊರಕ್ಕೆ ಹೋಯಿತು. ಮಧ್ಯಾಹ್ನದ ವೇಳೆಗೆ ಅದು ಹಿಂದಿರುಗಿದಾಗ ಅದರಲ್ಲಿ ಯಾರೂ ಇರಲಿಲ್ಲ. ಬೇಗಂ ಲಾಯಕಾಲಿಯವರು ನಗರದ ತಮ್ಮ ಮನೆಗೆ ಹೋದರೆಂದು ಭಾವಿಸಲಾಗಿತ್ತು. ಮಾರನೆ ದಿನ ಲಾಯಕಾಲಿಯವರು ಪರಾರಿಯಾದ ಸುದ್ದಿ ತಿಳಿದಕೂಡಲೇ ಎಲ್ಲಾ ಕಡೆ ಶೋಧಿಸಲಾಯಿತು. ಅವರು ಪತ್ತೆಯಾಗಲಿಲ್ಲ. ಅವರ ಭವನದ ಬಳಿ ಇದ್ದ ಎಂಟು ಮಂದಿ ಕಾವಲುಗಾರರನ್ನೂ ಮಹಿಳಾ ಪೊಲೀಸಳನ್ನೂ ಮತ್ತು ಲಾಯಕಾಲಿ ಅವರ ಕಾರ್ ಡ್ರೈವರನನ್ನೂ ದಸ್ತಗಿರಿ ಮಾಡಲಾಗಿದೆ. ಲಾಯಕಾಲಿ ಮತ್ತು ಕಳೆದ ತಿಂಗಳು ಒಬ್ಬ ಕೈದಿ ತಪ್ಪಿಸಿಕೊಂಡು ಹೋದನೆಂದು ಹೇಳಲಾಗಿದೆ.

ಲಾಯಕಾಲಿಯವರು ಪಾಕಿಸ್ತಾನ ಪ್ರವೇಶ ಮಾಡಿರಬಹುದೆಂದು ಶಂಕಿಸಲಾಗಿದೆ. ಜರ್ನಲ್ ಚೌಧರಿ ಸಂಸ್ಥಾನದ ಸಂಸ್ಥೆಯಲ್ಲಿ ಅವರು ಮೊದಲು ಪ್ರಧಾನಿ ಪದವಿಯನ್ನು ವಹಿಸಿದ್ದರು. ಹೈದರಾಬಾದಿನ ಪ್ರಧಾನ ಪದಕ್ಕೆ ಮುಂಚೆ ಅವರು ಪೋಲೀಸ್ ಸಿಂಡಿಕೇಟ್ ನ ಡೈರೆಕ್ಟರಾಗುವುದರಲ್ಲಿ ...

ಅವರ ಪರಾರಿಯು ಒಂದು ಬಾರಿ ... ಭಾಗವೆಂದು ಹೇಳಲಾಗಿದೆ. ಅವನಿಗೆ ಅತ್ಯವಶ್ಯಕವಾದ ಹಾಲು, ... ತರಕಾರಿ ಮತ್ತೆ ಬೇಕಾದವನ್ನು ಮಾತ್ರ ಬಿಡಲಾಗುತ್ತಿತ್ತು. ಅವರ ಕೆಲವು ದಿನಗಳಿಂದ ಗಡ್ಡವ ಬೆಳೆಸಿದ್ದರೆಂದು ಹೇಳಲಾಗಿದೆ. ಇದೇ ... ಅವರ ಸಂಸಾರದವರನ್ನು ನೋಡಲು ... ಪೋಲೀಸ್ ಸ್ಟೇಷನ್ನಿನ ... ಅವರ ವೇಷದಲ್ಲಿ ಒಂದು ... ಮೋಟಾರಿನಲ್ಲಿ ಲಾಯಕಾಲಿಯವರು ತಪ್ಪಿಸಿಕೊಂಡಿರಬೇಕೆಂದು ಹೇಳಲಾಗಿದೆ.

### ಶಿರಚ್ಛೇದಕ್ಕೆ ಮ್ಯಾಗ್ನೆಟೋ ಎನ್ನುವ ನೆಂಟಿಗನ ಪ್ರಯಾಣ

... ಇಡೀ ... ಪ್ರಯಾಣ ... ಒಂದು ... ಬೊಂಬಾಯಿ ... ಟ್ರಾನ್ಸ್ ... ವಿಮಾನದಲ್ಲಿ ಅವನಿಕ ... ಹೋಗುವುದು

## ಮೋಯರರಿಗೆ ಪ್ರತ್ಯೇಕ ಧ್ವಜ

ಸ್ವಂ ಸು ಪೋ] ಬೆಂಗಳೂರು ೮

ಕಾರ್ಪೊರೇಷನ್ನಿನ ಮೇಯರರು ಕಾರಿನ ಮೇಲೆ ತಮ್ಮದೇ ಆದ ಪ್ರತ್ಯೇಕ ಬಾವುಟವನ್ನು ಹಾಕಿಕೊಳ್ಳಬಹುದೆಂದು ಸೂಚಿಸಲಾಗಿದೆ. ಅಲ್ಲದೆ ಅವರು ನಗರದ ಪ್ರಥಮ ಪ್ರಜೆಯೆಂಬುದನ್ನು ಸೂಚಿಸಲು ಅವರಿಗೆ ಗೌರವಾರ್ಥವಾಗಿ ಒಂದು ಚಿನ್ನದ ಸರಪಣಿ ಮತ್ತು ದಂಡವನ್ನು ಕೊಡಲು ಕಾರ್ಪೊರೇಷನ್ನಿನವರು ಆಲೋಚಿಸಿದ್ದಾರೆ. ಇವುಗಳು ಯಾವ ಮಾದರಿಯಲ್ಲಿರಬೇಕೆಂಬುದರ ಬಗ್ಗೆ ಪರ್ಯಾಲೋಚಿಸಲಾಗುತ್ತಿದೆ.

### ರೈಲುಗಳು ತಡವಾಗಿ ಬರುತ್ತಿವೆ

ರೈಲ್ವೆ ಲೈನುಗಳಲ್ಲಿ ಸಂಭವಿಸಬಹುದಾದ ಅಪಘಾತವನ್ನು ತಡೆಯುವ ಸಲುವಾಗಿ ಹಲವು ರೈಲುಗಳ ವೇಗವನ್ನು ಕಡಿಮೆ ಮಾಡಲಾಗಿದೆ. ಆದುದರಿಂದ ಬೆಂಗಳೂರಿಗೆ ಓಡುವ ಪೂನ, ಮದರಾಸ್ ಮತ್ತು ಗುಂತಕಲ್ ರೈಲುಗಳು ತಡವಾಗಿ ಓಡುತ್ತಿವೆ.

### ಮಹಾ ಚುನಾವಣೆಗೆ ಓಟರುಗಳ ಪಟ್ಟಿ

ಬರುವ ಡಿಸೆಂಬರ್ ತಿಂಗಳಲ್ಲಿ ಕೇಂದ್ರ ಮತ್ತು ಸಂಸ್ಥಾನದ ಶಾಸನ ಸಭೆಗಳಿಗೆ ನಡೆಯುವ ಮಹಾ ಚುನಾವಣೆಗೆ ವಯಸ್ಕರ ಮತದಾನ ಪದ್ಧತಿಯಂತೆ ಓಟರುಗಳ ಪಟ್ಟಿಯನ್ನು ತಯಾರಿಸುವ ವಿಚಾರವನ್ನು ಪರಿಶೀಲಿಸಲು ನಿನ್ನೆ ನ್ಯಾಯಾಂಗ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳು, ಸೆನ್ಸಸ್ ಅಧಿಕಾರಿಗಳು ಮತ್ತು ಮುದ್ರಣಾಲಯದ ಡೈರೆಕ್ಟರುಗಳ ಸಭೆ ನಡೆಯಿತು. ಏಪ್ರಿಲ್ ೧ನೇ ತಾರೀಖಿನೊಳಗೆ ಓಟರುಗಳ ಹಸ್ತಲಿಖಿತ ಪ್ರತಿಯನ್ನೂ ಜುಲೈ ೧ನೇ ತಾರೀಖಿನೊಳಗೆ ಮುದ್ರಣವಾದ ಪ್ರತಿಗಳನ್ನೂ ಸಿದ್ಧಗೊಳಿಸುವಂತೆ ಸೂಚನೆ ಕೊಡಲಾಯಿತು.

### ಇಟಲಿಯಲ್ಲಿ ರೈತರ ದಂಗೆ

ಇಟಲಿಯಲ್ಲಿ ರೈತರ ಭಾರಿ ದಂಗೆಯೊಂದು ಆರಂಭವಾಗಿ ಅವರುಗಳು ೫೦,೦೦೦ ಎಕರೆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ವರದಿಯಾಗಿದೆ. ದಕ್ಷಿಣ ಇಟಲಿಯಲ್ಲಿ ದಂಗೆಯು ಬಹಳ ಪ್ರಬಲವಾಗಿದೆಯೆಂದು ಹೇಳಲಾಗಿದೆ.

## ನಾಳೆ ದಿನ ಕಮ್ಯೂನಿಸ್ಟರ ಆಂದೋಳನವೇ?

ನಾಳೆ ದಿನ ಭಾರತದ ಅತ್ಯಂತ ಭಾರಿ ಆಂದೋಳನವನ್ನು ಎಬ್ಬಿಸಬೇಕೆಂದು ಕಮ್ಯೂನಿಸ್ಟರು ಹಂಚಿಕೆ ಹಾಕಿರುವುದಾಗಿ ಪತ್ತೆಹಚ್ಚಿದೆ. ಈ ಸಂಬಂಧದಲ್ಲಿ ದೆಹಲಿ, ಬೊಂಬಾಯಿ ಮುಂತಾದ ಕಡೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಬಲವಾದ ಪೊಲೀಸ್ ಮತ್ತು ಮಿಲಿಟರಿ ಕಾವಲನ್ನು ಇರಿಸಲಾಗಿದೆ. ಬೊಂಬಾಯಿನಲ್ಲಿ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದ ೫ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. ರೈಲ್ವೆ ವಿಘಾತವನ್ನುಂಟುಮಾಡತಕ್ಕ ಈ ಆಂದೋಳನದಲ್ಲಿ ಸಮಾಜವಾದಿಗಳು ಯಾವ ಮುಷ್ಕರಗಳಿಗೂ ನೆರವು ನೀಡಬಾರದೆಂದು ಸಮಾಜವಾದಿ ನಾಯಕ ಶ್ರೀ ಜಯಪ್ರಕಾಶ ನಾರಾಯಣರು ಹೇಳಿಕೆ ಹೊರಡಿಸಿದ್ದಾರೆ.

### ೧೧೧ ವರ್ಷದ ಶಿಕ್ಷೆ ೧೧ ವರ್ಷದಲ್ಲಿ ಪರ್ಯವಸಾನ

ಅಮಾನತ್ ಉಲ್ಲಾ ಎಂಬ ಪಂಜಾಬಿನ ೩೧ ವರ್ಷ ವಯಸ್ಸಿನ ಪದವೀಧರ ತರುಣನೊಬ್ಬನು, ಪರದೇಶ ವ್ಯಾಸಂಗಕ್ಕೆ ಹೋಗಲು ಹಣದ ಅಭಾವದಿಂದ ಫೋರ್ಜರಿ ಮಾಡಿ ೧೧೧ ವರ್ಷದ ಶಿಕ್ಷೆಗೆ ಗುರಿಯಾದ ಪ್ರಸಂಗವು ವರದಿಯಾಗಿದೆ. ಅವನು ಪಂಜಾಬಿನ ಅಕೌಂಟೆಂಟ್ ಜನರಲ್ಲರ ರುಜುವನ್ನು ಫೋರ್ಜ್ ಮಾಡಿ ಹಲವು ಖಜಾನೆಗಳಿಗೆ ಪತ್ರ ಬರೆದು ಅಮಾನತ್ ಉಲ್ಲಾ(ತನ್ನನ್ನು)ನನ್ನು ಖಜಾನೆ ಲೆಕ್ಕದ ತನಿಖೆಗಾಗಿ ಕಳುಹಿಸಲಾಗಿದೆಯೆಂದೂ, ಅವನ ಸಂಬಳ ಮತ್ತು ಭತ್ಯಗಳನ್ನು ಆಯಾ ಖಜಾನೆಯವರು ಕೊಡತಕ್ಕದ್ದೆಂದೂ ನಮೂದಿಸಿದ್ದನು. ಅದರಂತೆ ಹಲವು ಖಜಾನೆಗಳಿಗೆ ಹೋಗಿ ಸುಮಾರು ೧೬ ಸಹಸ್ರ ರೂಗಳನ್ನು ಸಂಗ್ರಹಿಸಿದನು. ಕಡೆಗೆ ಕ್ಯಾಂಬೆಲ್‌ಪುರದ ಖಜಾನೆಯಲ್ಲಿ ತನಿಖೆ ನಡೆಸುತ್ತಿದ್ದಾಗ ಸಿಕ್ಕಿಬಿದ್ದನು. ಅವನು ವಿಚಾರಣೆಗೆ ಗುರಿಯಾಗಿ ವಿವಿಧ ಅಪಾದನೆಗಳಿಗಾಗಿ ಒಟ್ಟು ೧೧೧ ವರ್ಷ ಶಿಕ್ಷೆಗೊಳಗಾದನು. ... ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸತಕ್ಕದ್ದೆಂದು ತೀರ್ಪು ಇತ್ತುದರಿಂದ ೧೧ ವರ್ಷದ ಶಿಕ್ಷೆಯು ೧೧ ವರ್ಷದಲ್ಲೇ ಪರ್ಯವಸಾನಗೊಳ್ಳುವುದೆಂದು ಹೇಳಲಾಗಿದೆ.

## ಸಕ್ಕರೆ ಕಳ್ಳ ರವಾನೆಗೆ ಶಿಕ್ಷೆ

ಮೈಸೂರು ೮

ಕಳೆದ ಭಾನುವಾರ ಮಧ್ಯರಾತ್ರಿಯಲ್ಲಿ ಸುನ್ನಿ ಚೌಕದಲ್ಲಿ ೬ ಮಂದಿ ಕಾರಾಗಳು ೧೬ ಮಣ ಸಕ್ಕರೆಯನ್ನು ಸಾಗಿಸುತ್ತಿದ್ದರೆಂಬ ಆಪಾದನೆ ಮೇಲೆ ವಿಚಾರಣೆಗೆ ಗುರಿಯಾಗಿ ಅವರುಗಳಿಗೆ ತಲಾ ೪ ದಿನಗಳು ಕಾರಾಗೃಹ ವಾಸ ಮತ್ತು ೧೦೦ರೂ. ಜುಲ್ಮಾನೆ ವಿಧಿಸಲಾಯಿತು. ಜುಲ್ಮಾನೆ ಕೊಡಲು ತಪ್ಪಿದಲ್ಲಿ ಮತ್ತೆ ಒಂದು ತಿಂಗಳ ಸಜಾ ಅನುಭವಿಸಬೇಕೆಂದು, ಶಿಕ್ಷೆ, ೧೬ ಮಣ ಸಕ್ಕರೆಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಯಿತು.

### ಗೋವಧೆಗಾಗಿ ಶಿಕ್ಷೆ

ಲತೀಫ್ ಎಂಬಾತನು ಶಕ್ಷ ಸಕ್ಕಿ ... ರಿಯಾ ಮತ್ತು ಪುತ್ರ ಪಂಷುದೀನ್ ಎಂಬಾತನ ಸಹಾಯದಿಂದ ಗೋವಧೆ ನಡೆಸಿದ ಆಪಾದನೆಗಾಗಿ ದಂಪತಿಗಳಿಬ್ಬರೂ ತಲಾ ೬ ದಿನ ಸಜಾ ಮತ್ತು ೧೦೦ರೂ ಜುಲ್ಮಾನೆ ಶಿಕ್ಷೆಗೆ ಗುರಿಯಾಗಿದ್ದಾರೆ. ಅವರ ಪುತ್ರನಿಗೆ ೭೫ ರೂ ಜುಲ್ಮಾನೆ ಬಿದ್ದಿತು.

### ಮಂತ್ರಿಗಳ ಮೇಲಿನ ದೂರಿನ ಬಗ್ಗೆ ರಹಸ್ಯ ಪರಿಶೀಲನೆ

ಮೈಸೂರು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ಇದೇ ೧೧ನೇ ತಾರೀಖು ಬೆಳಗ್ಗೆ ೧೦ ಘಂಟೆಗೆ ಬೆಂಗಳೂರಿನಲ್ಲಿ ರಹಸ್ಯವಾಗಿ ಸಮಾವೇಶಗೊಂಡು ಮಂತ್ರಿಗಳ ಮೇಲೆ ಬಂದಿರುವ ದೂರುಗಳನ್ನು ಪರಿಶೀಲಿಸುವುದೆಂದು ಹೇಳಲಾಗಿದೆ. ಶ್ರೀ ಎಂ. ವಿ. ರಾಮರಾಯರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ಹಾಕಿದ್ದ ಅರ್ಜಿಯನ್ನು ವಾಪಸು ತೆಗೆದುಕೊಂಡಿದ್ದಾರೆ.

## ಲಾಯಕಾಲಿಯನ್ನು ಹಿಡಿದು ಕೊಟ್ಟವರಿಗೆ ಬಹುಮಾನ

ಹೈದರಾಬಾದ್ ಸರ್ಕಾರದವರು ನೆನ್ನೆ ಒಂದು ಪ್ರಕಟಣೆಯನ್ನು ಹೊರಡಿಸಿ ಮೀರ್ ಲಾಯಕಾಲಿಯನ್ನು ಹಿಡಿದು ಕೊಟ್ಟವರಿಗೆ ಅಥವಾ ದಸ್ತಗಿರಿಗೆ ಅನುಕೂಲಿಸುವಂತೆ ಅವರ ಚಲನವಲನಗಳ ಬಗ್ಗೆ ಸುದ್ದಿ ಕೊಡುವವರಿಗೆ ಭಾರಿ ಬಹುಮಾನ ಕೊಡುವುದಾಗಿ ತಿಳಿಸಿದ್ದಾರೆ. ಲಾಯಕಾಲಿ ತಪ್ಪಿಸಿಕೊಂಡಿರುವ ಬಗ್ಗೆ ಕೇಂದ್ರ ಪಾರ್ಲಿಮೆಂಟಿನಲ್ಲಿ ನೆನ್ನೆ ಒಂದು ನಿಲುವಳಿ ಸೂಚನೆಯನ್ನು ತರಲಾಗಿತ್ತು. ನಿಲುವಳಿ ಸೂಚನೆಗೆ ಉತ್ತರ ಕೊಟ್ಟು ಅದು ಭಾರತ ಸರ್ಕಾರಕ್ಕೆ ಸಂಬಂಧಪಟ್ಟ ಅಂಶವಲ್ಲವೆಂದೂ, ಹೈದರಾಬಾದಿಗೆ ಸಂಬಂಧಿಸಿದುದೆಂದೂ ತಿಳಿಸಲಾಯಿತು.

### ಸಶಸ್ತ್ರ ಪೊಲೀಸರಿಂದ ರೈಲ್ವೆ ಲೈನುಗಳ ಕಾವಲು

ಫಿಷ್ ಪ್ಲೇಟುಗಳನ್ನು ಕೀಳುವುದೇ ಮೊದಲಾಗಿ ಘಾತುಕರಿಂದ ನಡೆಯಬಹುದಾದ ಅನಾಹುತಗಳನ್ನು ತಡೆಗಟ್ಟುವ ಸಲುವಾಗಿ ದಕ್ಷಿಣ ಭಾರತ ರೈಲ್ವೆಯು ಎಲ್ಲ ವಿಭಾಗಗಳ ಉದ್ದಕ್ಕೂ ಸಶಸ್ತ್ರ ಪೊಲೀಸರ ಕಾವಲು ಮತ್ತು ಗಸ್ತುಗಳನ್ನು ಏರ್ಪಡಿಸಲಾಗಿದೆ. ತಿರುಚನಾಪಳ್ಳಿಯಲ್ಲಿ ೫೦ ಜನರನ್ನು ಬಂಧಿಸಲಾಗಿದೆ.

ರಂಗೂನಿನಲ್ಲಿ ಲೋಹಗಳ ಕೈಗಾರಿಕೆಯಲ್ಲಿ ಕೆಲಸ ಮಾಡುವ ಸುಮಾರು ೬೬ ಸಹಸ್ರ ಮಂದಿ ಕಾರ್ಮಿಕರು ನೆನ್ನೆಯಿಂದ ಮುಷ್ಕರ ಹೂಡಿರುವರೆಂದು ಗೊತ್ತಾಗಿದೆ. ಇದರಿಂದ ದಿನಂಪ್ರತಿ ಏಳು ಕೋಟಿ ಯೆನ್ (ಜಪಾನ್ ನಾಣ್ಯ) ಗಳಷ್ಟು ನಷ್ಟ ಸಂಭವಿಸುವುದೆಂದು ಅಂದಾಜು ಮಾಡಲಾಗಿದೆ.

## ಶಸ್ತ್ರಗಳನ್ನು ಒದಗಿಸಲು ಮಹಿಳೆಯರ ಬೇಡಿಕೆ

ಇತ್ತೀಚೆಗೆ ಪೂರ್ವ ಬಂಗಾಳದಲ್ಲಿ ಗಲಭೆ ನಡೆದ ಪ್ರದೇಶಗಳ ಪರಿಸ್ಥಿತಿಯನ್ನೂ ಮತ್ತು ಅಲ್ಲಿನ ಜನರ ಸ್ಥಿತಿಗತಿಗಳನ್ನೂ ಅರಿವು ಮಾಡಿಕೊಳ್ಳಲು ತೆರಳಿರುವ ಪ್ರಧಾನಿ ನೆಹರೂರವರ ಭವನದ ಮುಂದೆ ಅಲ್ಲಿನ ಸುಮಾರು ೫೦೦ ಜನ ಮಹಿಳಾ ನಿರಾಶ್ರಿತರ ತಂಡವೊಂದು ಪ್ರದರ್ಶನ ಮಾಡಿ ತಮಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿದರೆ ತಾವು ಸರ್ಕಾರದ ಸೇವೆ ಮಾಡಲು ಸಿದ್ಧರಿರುವುದಾಗಿ ತಿಳಿಸಿದರೆಂದು ಹೇಳಲಾಗಿದೆ

## ಕೋತಿಗಳ ಹಾವಳಿ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ

ಕೋತಿಗಳ ಹಾವಳಿಯಿಂದ ಬೆಳೆಗೆ ಬಹಳ ನಷ್ಟ ಸಂಭವಿಸುತ್ತಿರುವ ಬಗ್ಗೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಮೊನ್ನೆ ಪ್ರಶ್ನೋತ್ತರಗಳಾದವು. ಅವುಗಳ ಹಾವಳಿಯನ್ನು ತಡೆಗಟ್ಟಲು ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆಯೆಂದೂ, ಮನುಷ್ಯರು ತಿನ್ನುವುದಕ್ಕಿಂತಲೂ ಹೆಚ್ಚು ಆಹಾರವನ್ನು ಕೋತಿಗಳು ನಾಶಪಡಿಸುತ್ತಿರುವುದೆಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲವೆಂದೂ ಆಹಾರ ಸಚಿವ ಶ್ರೀ ಜೈರಾಂದಾಸರು ತಿಳಿಸಿದರು.

### ಆಡಿಟ್ ಶಾಖೆಯಲ್ಲಿ ಒತ್ತಾಯದ ನಿವೃತ್ತಿಯಿಲ್ಲ

ಭಾರತ ಸರ್ಕಾರದ ಆಡಿಟರ್ ಜನರಲ್ಲಾದ ಶ್ರೀ ನರಹರಿರಾಯರು ಬೆಂಗಳೂರಿನ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಮೈಸೂರಿನ ಆಡಿಟ್ ಮತ್ತು ಅಕೌಂಟ್ಸ್ ಶಾಖೆಯಲ್ಲಿ ಒತ್ತಾಯದ ನಿವೃತ್ತಿ ಮಾಡಲಾಗುವುದಿಲ್ಲವೆಂಬ ಭರವಸೆಯನ್ನಿತ್ತರು. ತಿರುವಾಂಕೂರು, ಹೈದರಾಬಾದು ಮತ್ತು ಮೈಸೂರುಗಳಲ್ಲಿ ಆಡಿಟ್ ಶಾಖೆಯು ತೃಪ್ತಿಕರವಾಗಿ ಕೆಲಸ ಮಾಡುತ್ತಿದೆಯೆಂದೂ ತಿಳಿಸಿದರು. ಸಂಸ್ಥಾನದ ಆಡಿಟ್ ದಾಖಲಾ ಮಟ್ಟವನ್ನು ಇತರ ಪ್ರಾಂತ್ಯಗಳ ಮಟ್ಟಕ್ಕೆ ಏರಿಸಲಾಗುವುದೆಂದೂ ಅವರು ನುಡಿದರು.

### ಕಮರ್ಷಿಯಲ್ ಪರೀಕ್ಷೆಗಳು

ಮೈಸೂರು ಸರ್ಕಾರದ ಕಮರ್ಷಿಯಲ್ ಪರೀಕ್ಷೆಗಳು ಬರುವ ಏಪ್ರಿಲ್ ೧೭ನೇ ತಾರೀಖಿನಿಂದ ಆರಂಭವಾಗುವುವು


## ತಿಳುವಳಿಕೆ

ಮೈಸೂರು ಸಿಟಿ ಅಶೋಕಾ ರೋಡ್ ಮೈಸೂರು ಬ್ಯಾಂಕ್ ಬಸ್ಸು ಸ್ಟ್ಯಾಂಡಿನ ಹತ್ತಿರ ಎದುರು ಭಾಗದಲ್ಲಿರುವ ಎಸ್. ಗಣೇಶ್ ಚಂದ್ ಪ್ರೇಮ್ ಚಂದ್ ಅಂಡ್ ಸನ್ಸ್‌ರವರು ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ.—

ನಮ್ಮ ಅಂಗಡಿಯಲ್ಲಿ ಚಿನ್ನ, ಬೆಳ್ಳಿ ವಗೈರೆ ಒಡವೆಗಳನ್ನು ಗಿರವಿ ಇಟ್ಟುಕೊಂಡು ಸುಲಭ ದರದ ಬಡ್ಡಿಯಲ್ಲಿ ಸಾಲ ಕೊಡುತ್ತೇವೆ ಮತ್ತು ನಮ್ಮ ಅಂಗಡಿಯಲ್ಲಿ ಖಾತರಿಯಾದ ಚಿನ್ನ, ಬೆಳ್ಳಿ ಒಡವೆಗಳನ್ನು ಬಿಕರಿ ಮಾಡುತ್ತೇವೆ ಮತ್ತು ಖರೀದಿಗೆ ಸಹ ತೆಗೆದುಕೊಳ್ಳುತ್ತೇವೆ. ದಯವಿಟ್ಟು ಬಂದು ನಮ್ಮ ಒಂದು ಸಲ ಪರೀಕ್ಷಿಸಿ

ಎಸ್. ಗಣೇಶ್ ಚಂದ್ ಪ್ರೇಮ್ ಚಂದ್ ಅಂಡ್ ಸನ್ಸ್, ಮೈಸೂರು.


## ಚೀನಾ ಯುದ್ಧದಿಂದ ನಷ್ಟ

ಚೈನಾದಿಂದ ಬಂದಿರುವ ವರದಿಯ ಪ್ರಕಾರ ಕಳೆದ ೩|| ವರ್ಷಗಳ ಅಂತರ್ಯುದ್ಧದಲ್ಲಿ ರಾಷ್ಟ್ರೀಯ ಚೀಣದ ೭|| ಲಕ್ಷ ಪ್ರಜೆಗಳು ಸತ್ತು ೪೯ ವಿಮಾನಗಳೂ, ೪೫ ಹಡಗುಗಳೂ ಕಮ್ಯೂನಿಸ್ಟರ ವಶವಾದವೆಂದೂ, ೮ ವಿಮಾನಗಳೂ ಮತ್ತು ೬ ಹಡಗುಗಳೂ ನಾಶವಾದುವೆಂದೂ ತಿಳಿದುಬಂದಿದೆ

### ಪ್ರಜಾ ಸಂಘ

ಮೈಸೂರು ಪ್ರಜಾ ಸಂಘದ ಕಾರ್ಯಕಾರಿ ಮಂಡಲಿಯು ಮೊನ್ನೆ ಸೇರಿ ರಾಷ್ಟ್ರಾಧ್ಯಕ್ಷ ರಾಜೇಂದ್ರಬಾಬುಗಳಿಗೆ ಅಭಿನಂದನೆಯನ್ನೂ, ಶುಭಾಶಯವನ್ನೂ ಕೋರುವ ನಿರ್ಣಯ ಮಾಡಲಾಯಿತು. ಬಾಬು ಶರಚ್ಚಂದ್ರಬೋಸರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು. ಮೈಸೂರು ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಆರ್. ಪುಟ್ಟರಾಜೇ ಅರಸಿನವರ ಬಗ್ಗೆ ಆಗಿರುವ ಆಜ್ಞೆಯಿಂದ ರಾಜ್ಯಾಂಗ ಶಾಸನದ ವಿಧಿಗಳಿಗೆ ಧಕ್ಕೆಯುಂಟಾಗಿದೆಯೆಂದು ಅಭಿಪ್ರಾಯ ಪಡಲಾಯ್ತು. ಸಂಘದ ನಿಧಿಯನ್ನು ಶೇಖರಿಸಲು ಒಂದು ಉಪಸಮಿತಿಯನ್ನು ರಚಿಸಿ ಶ್ರೀ ಎಸ್ ಕೃಷ್ಣಯ್ಯಂಗಾರ್ಯರನ್ನು ಖಜಾಂಚಿಯಾಗಿ ನೇಮಿಸಲಾಯಿತು.

### ಹೋಟೆಲುಗಳಲ್ಲೂ ಆಹಾರದ ಪ್ರತಿಬಂಧಕ

ಮದುವೆ ಮುಂತಾದ ಸಂದರ್ಭಗಳಲ್ಲಿ ೫೦ ಜನಕ್ಕಿಂತ ಹೆಚ್ಚಾಗಿ ಊಟಕ್ಕೆ ಕರೆಯಬಾರದೆಂಬ ಆಜ್ಞೆಯಲ್ಲಿ ಸರ್ಕಾರದವರು ತಿದ್ದುಪಡಿಯನ್ನು ಮಾಡಿ ಹೋಟೆಲುಗಳೂ ಸಹಾ ಒಂದುಬಾರಿಗೆ ಮೇಲ್ಕಂಡ ಸಂದರ್ಭಗಳಲ್ಲಿ ೫೦ ಜನಕ್ಕೆ ಮೀರಿ ರೇಷನ್ ಪದಾರ್ಥಗಳನ್ನು ಉಪಯೋಗಿಸಿ ಭೋಜನ ಸಮಾರಂಭಗಳನ್ನು ಏರ್ಪಡಿಸಕೂಡದೆಂದು ಸೂಚಿಸಿರುತ್ತಾರೆ

### ಪೋಲೀಸಿನವನ ಕೊಲೆ

ಹೈದರಾಬಾದಿನಲ್ಲಿ ಶಾಸನ ನಿರೋಧ ಕಾರ್ಯದಲ್ಲಿ ತೊಡಗಿದ್ದ ಒಬ್ಬ ಪೋಲೀಸ್ ಕಾನ್ಸ್‌ಟೇಬಲನನ್ನು ಕತ್ತರಿಸಿ ತುಂಡು ತುಂಡು ಮಾಡಿ ಬಿಸಾಡಿದ್ದ ಪ್ರಸಂಗವು ವರದಿಯಾಗಿದೆ

## ಜೋಗೇಂದ್ರನಾಥ ಮಂಡಲರು ರಾಜೀನಾಮೆ ಕೊಡಲಿ

ಪಾಕಿಸ್ತಾನದ ನ್ಯಾಯಾಂಗ ಮಂತ್ರಿಗಳಾಗಿರುವ ಶ್ರೀ ಜೋಗೇಂದ್ರನಾಥ್ ಮಂಡಲರವರು ಅಲ್ಲಿನ ನಿಮ್ನ ವರ್ಗದವರ ತೊಂದರೆಯನ್ನು ನಿವಾರಿಸಲಾಗದಿದ್ದರೆ [illegible] ರಾಜೀನಾಮೆ ಕೊಡಬೇಕೆಂದು ಅಖಿಲ ಭಾರತ ನಿಮ್ನ ವರ್ಗದ ಫೆಡರೇಷನ್ನಿನ ಕಾರ್ಯದರ್ಶಿ ಶ್ರೀ ರಾಜಭೋಜರವರು ಹೇಳಿಕೆ ಕೊಟ್ಟಿದ್ದಾರೆ

### ಸರ್ಕಾರದ ಬಸ್ಸು ಸಂಚಾರ ವ್ಯವಸ್ಥೆಯಿಂದ ೩ ಲಕ್ಷ ರೂ. ಲಾಭ

೧೯೪೮–೪೯ನೇ ಸಾಲಿನಲ್ಲಿ ಮೈಸೂರು ಸರ್ಕಾರದ ಬಸ್ಸು ಸಂಚಾರದಿಂದ ೩, ೭, ೧೧,೦೦೦ರೂ. ಲಾಭ ಬಂದಿರುವುದಾಗಿ ಸರ್ಕಾರದ ವರದಿಯಿಂದ ಗೊತ್ತಾಗಿದೆ. ಕಳೆದ ಸಾಲಿನಲ್ಲಿ ಒಟ್ಟು ೧೩೦ ಬಸ್ಸುಗಳು ೧೬೩ ಮಾರ್ಗಗಳಲ್ಲಿ ಸಂಚರಿಸುತ್ತಿದ್ದುವು. ಅವುಗಳು ದಿನ ೧ಕ್ಕೆ ೯,೫೦೦ ಮೈಲಿ ದೂರ ಸಂಚರಿಸುತ್ತಿದ್ದುವು. ಈ ವ್ಯವಸ್ಥೆಯಲ್ಲಿ ಇದುವರೆಗೆ ಯಾವ ಹೆಚ್ಚಿನ ದುರ್ಘಟನೆಗಳೂ ಸಂಭವಿಸಿಲ್ಲ. ಬಸ್ಸು ಕೆಲಸಗಾರರು ತಮ್ಮ ಸಂಘವನ್ನು ಸ್ಥಾಪಿಸಿಕೊಳ್ಳಲು ಅನುಮತಿ ಕೊಡಲಾಗಿದೆ. ಅವರಿಗೆ ಈಗ ಕೊಡಲಾಗಿರುವ ಹಲವು ಸೌಲಭ್ಯಗಳ ಜೊತೆಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರ್ಕಾರದವರು ಆಲೋಚಿಸುತ್ತಿದ್ದಾರೆ ಎಂದು ಆ ವರದಿಯಿಂದ ಗೊತ್ತಾಗುತ್ತದೆ

### ಟೆನಿಸ್ ಪಂದ್ಯ

ಮೈಸೂರು ಸಿಟಿ ಟೆನಿಸ್ ಇನ್ಸ್‌ಟಿಟ್ಯೂಟಿನ ಆಶ್ರಯದಲ್ಲಿ ಏರ್ಪಡಿಸಲಾಗಿರುವ ಟೆನಿಸ್ ಚಾಂಪಿಯನ್‌ಷಿಪ್ ಪಂದ್ಯದ ಪುರುಷರ ಜೂನಿಯರ್ ಸಿಂಗಲ್ಸ್ ಮತ್ತು ಡಬಲ್ಸ್ ಸ್ಪರ್ಧೆಗೆ ಪ್ರವೇಶ ಪತ್ರವನ್ನು ಇದೇ ೧೦ನೇ ತಾರೀಖು ಬುಧವಾರ ಸಂಜೆ ೫-೩೦ ವರೆಗೆ ಸ್ವೀಕರಿಸಲಾಗುವುದು. ಇದರಲ್ಲಿ ಸ್ಪರ್ಧಿಸುವವರು ಶುಲ್ಕದೊಡನೆ ಪ್ರವೇಶ ಪತ್ರವನ್ನು ಧನ್ವಂತರಿ ರಸ್ತೆಯಲ್ಲಿರುವ ಇಂದ್ರಭವನ ಬೋರ್ಡಿಂಗ್ ಮತ್ತು ಲಾಡ್ಜಿಂಗಿನಲ್ಲಿ ಕಳುಹಿಸಬೇಕೆಂದು ಕೋರಲಾಗಿದೆ.

## ಅಲ್ಯೂಮಿನಂ ತೊಳೆಯಲು ಆಲೂಗೆಡ್ಡೆಯ ನೀರು

ಆಲೂಗೆಡ್ಡೆಯನ್ನು ಬೇಯಿಸಿದ ನೀರಿನಿಂದ ತೊಳೆದರೆ ಅಲ್ಯೂಮಿನಂ ಪಾತ್ರೆಯಲ್ಲಿರುವ ಕಲೆಗಳು ಹೋಗುವುವೆಂದು ಗೊತ್ತಾಗಿದೆ. ಪಾತ್ರೆಯಲ್ಲಿ ಆ ನೀರನ್ನು ಕುದಿಸಿ ಸ್ವಲ್ಪ ಹೊತ್ತು ಬಿಟ್ಟಿರಬೇಕು.

### ಸಂಸ್ಥಾನದಲ್ಲಿ ಕ್ಷಯರೋಗ ನಿವಾರಣಾ ಕ್ರಮ

ಮೈಸೂರು ಸಂಸ್ಥಾನದಲ್ಲಿ ಕ್ಷಯರೋಗವನ್ನು ನಿವಾರಿಸುವ ಸಲುವಾಗಿ ಬಿ. ಸಿ. ಜಿ. ವ್ಯಾಕ್ಸಿನೇಷನ್ ಪ್ರಚಾರವನ್ನು ಕೈಗೊಳ್ಳುವ ಬಗ್ಗೆ ಒಂದು ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಇದಕ್ಕಾಗಿ ಸ್ಕಾಂಡಿನೇವಿಯದ ವೈದ್ಯರೂ ಮತ್ತು ನರ್ಸುಗಳೂ ಬೆಂಗಳೂರಿಗೆ ಆಗಮಿಸಿದ್ದಾರೆ. ಅವರು ಬಿ. ಸಿ. ಜಿ. ವ್ಯಾಕ್ಸಿನೇಷನ್ನಿನ ಶಿಕ್ಷಣವನ್ನು ಸ್ಥಳೀಯ ವೈದ್ಯರಿಗೆ ಕೊಡುವರು. ಇದರಲ್ಲಿ ತರಬೇತು ಹೊಂದಿದ ಸ್ಥಳೀಯ ವೈದ್ಯರು ಸಂಸ್ಥಾನದಲ್ಲೆಲ್ಲಾ ಪ್ರಚಾರ ಕೈಗೊಳ್ಳುವರು. ಈ ಬಗ್ಗೆ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ದೇಶದ ಮಕ್ಕಳನ್ನು ಕ್ಷಯರೋಗಕ್ಕೆ ತುತ್ತಾಗದಂತೆ ಮಾಡಲು ಎಲ್ಲ ಮಾತಾಪಿತೃಗಳೂ ಈ ಯೋಜನೆಗೆ ತಮ್ಮ ಸಹಕಾರ ನೀಡಬೇಕೆಂದು ಪ್ರಾರ್ಥಿಸಿದ್ದಾರೆ

### ಹರಿಕಥೆ

ರಾಜಧಾನಿಯ ದೇವರಾಜ ಮೊಹಲ್ಲಾ ಶ್ರೀ ಕಾಟಪ್ಪನವರ ಗರಡಿ ಒಳ ಹಾಕಿರುವ ಚಪ್ಪರದಲ್ಲಿ ಈ ರಾತ್ರಿ ೯-೩೦ಕ್ಕೆ ಶ್ರೀ ಮುಳಬಾಗಿಲು ನಾರಾಯಣದಾಸರಿಂದ "ಸತ್ಯವಾನ್ ಸಾವಿತ್ರಿ" ಎಂಬ ಹರಿಕಥೆ ನಡೆಯುವುದು.


ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು

## ರಮಣಿ ಹಲ್ಲುಪುಡಿ

ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ 'ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6 ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು.

ರಮಣಿ ಟ್ರೇಡಿಂಗ್ ಕಂಪೆನಿ,
೧೩೯೮/೩, ಕೃಷ್ಣಮೂರ್ತಿಪುರಂ,
ಮೈಸೂರು.



## ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಗೂರಲು, ಉಬ್ಬಸ, ಪಡಿಶಾಮಸೂಲೆ ಮತ್ತು ಗಲಾಯುಕಕ್ಕೆ (TCNSiL) ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-0-0

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.



## ಮದುವೆ ಜವಳಿಗಳಿಗೆ

ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪೂರ್ ಸೀರೆಗಳಿಗೆ

ಎಂ. ವಿ. ಭೋಜಯ್ಯ ಬಿ. ಎ. & ಬ್ರದರ್ಸ್

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು



## ಪ್ರಭುದೇವಾ ಟಾಕೀಸ್

ದಿನವಹಿ 3 ಆಟಗಳು

3-4-50ನೇ ಶನಿವಾರದಿಂದ ಆರಂಭ

ಶೋಭನಾಚಲರವರ

## ★ ಲಕ್ಷ್ಮಮ್ಮ ★

ಕೃಷ್ಣವೇಣಿ ಕುಮಾರಿ ರುಕ್ಮಿಣಿ, ಹೇಮಲತಾ, ನಾರಾಯಣ ರಾವ್, ಡಾ|| ಸುಬ್ಬರಾವ್ ಪಾತ್ರವಹಿಸಿರುವ ತೆಲುಗು ಚಿತ್ರ

ಈ ಭಾಗಾಯ್ತು 2 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ


Edited, printed and published by A. R. Nagarajan at Sadhvi Press, D Subbiah Road, Mysore

ರಿಜಿ ನಂ. 792 ವಂದೇ ಮಾತರಂ॥ ಬಿಡಿ ಪ್ರತಿಗೆ ೩ ಕಾಸು

ಸಂಪುಟ ೮] ಗುರುವಾರ ೯-೩-೫೦ [ಸಂಚಿಕೆ ೧೮೬

# ಕಾಶ್ಮೀರ ಸಮಸ್ಯೆ ಬಗ್ಗೆ ಬ್ರಿಟನ್ನಿನಲ್ಲಿ ಚಕ್ರಗೋಷ್ಠಿ

## ಖಾಸಿಂ ರಜ್ವಿಯನ್ನು ಪಾಕಿಸ್ತಾನಕ್ಕೆ ಕಳುಹಿಸಲು ಪಿತೂರಿ

ಹೈದರಾಬಾದಿನ ಅನಾಹುತಗಳಿಗೆ ಮೂಲ ಕಾರಣಕರ್ತನಾಗಿರುವ ರಜಾಕರ ನಾಯಕ ಖಾಸಿಂ ರಜ್ವಿಯನ್ನು ಬಂಧನದಿಂದ ತಪ್ಪಿಸಿ ಪಾಕಿಸ್ತಾನಕ್ಕೆ ರವಾನಿಸಲು ನಡೆದ ಪಿತೂರಿಯೊಂದು ಬಯಲಾಗಿ ಅವನ ಮೇಲೆ ಬಲವಾದ ಕಾವಲನ್ನಿಡಲಾದ ವಿಷಯವು ಹೊರಬಿದ್ದಿದೆ. ಭಾರತದಲ್ಲಿ ಪಾಕಿಸ್ತಾನದ ಗೂಢಚಾರರು ಸೇರಿಕೊಂಡು ಗುಪ್ತವಾದ ಚಳುವಳಿಯನ್ನು ನಡೆಸಿ ಜನರಲ್ಲಿ ಕಳವಳವನ್ನೂ, ಭಾರತದ ಮುಸಲ್ಮಾನರಲ್ಲಿ ಉದ್ರೇಕವನ್ನೂ ಉಂಟುಮಾಡುತ್ತಿರುವರೆಂದು ವರದಿಯಾಗಿದೆ. ಇದನ್ನು ತಟಿಗಟ್ಟಲು ಭಾರತ ಸರಕಾರದವರು ವಿಶೇಷ ಕಾರ್ಯಕ್ರಮಗಳನ್ನು ಕೈಗೊಂಡಿರುವರು.

## ಭಾರತದ ಮೇಲೆ ಪಾಕಿಸ್ತಾನದ ಯುದ್ಧ ಸಿದ್ಧತೆ

ಭಾರತದೊಡನೆ ಯುದ್ಧ ಘೋಷಿಸಲು ಈಗ ಪಾಕಿಸ್ತಾನವು ಸರ್ವ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿರುವುದಾಗಿ ತಿಳಿದುಬಂದಿದೆ. ಪೂರ್ವ ಮತ್ತು ಪಶ್ಚಿಮ ಬಂಗಾಳ ಗಡಿಯಲ್ಲಿ ಪಾಕಿಸ್ತಾನವು ಅಸಂಖ್ಯಾತ ಸೈನ್ಯವನ್ನು ಜಮಾಯಿಸುತ್ತಿರುವುದಾಗಿಯೂ, ರಕ್ಷಣಾ ಮುನ್ನೆಚ್ಚರಿಕೆಗಾಗಿ ದೊಡ್ಡ ದೊಡ್ಡ ಟ್ರೆಂಚುಗಳನ್ನು ಅಗೆದು ಸಿದ್ಧಪಡಿಸಿಕೊಳ್ಳುತ್ತಿದೆಯೆಂದೂ ಹೇಳಲಾಗಿದೆ. ಭಾರತದ ಗಡಿಯಲ್ಲಿರುವ ತ್ರಿನಾಥಪುರವೆಂಬ ಹಳ್ಳಿಯನ್ನು ಪಾಕಿಸ್ತಾನವು ಆಕ್ರಮಿಸಿ ಅಲ್ಲಿ ತನ್ನ ಸೈನ್ಯವನ್ನಿಟ್ಟಿರುವುದು ಯುದ್ಧ ಸೂಚನೆಯೆಂದೇ ಅಭಿಪ್ರಾಯಪಡಲಾಗಿದೆ. ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಗಡಿಗಳಿಗೆ ರೈಲುಗಳ ಮೂಲಕ ಶಸ್ತ್ರಗಳನ್ನೂ ಸೈನಿಕರನ್ನೂ ರವಾನೆ ಮಾಡುತ್ತಿರುವುದಾಗಿಯೂ, ವಿಮಾನ ನಿಲ್ದಾಣಗಳನ್ನು ಸಜ್ಜುಗೊಳಿಸುತ್ತಿರುವುದಾಗಿಯೂ ವರದಿಯಾಗಿದೆ.

## ಪಾಕಿಸ್ತಾನದಲ್ಲಿ ನಗ್ನವಾಗಿ ಮಹಿಳೆಯರ ಶೋಧನೆ

ಸುಂಕದ ನೌಕರರು ಮಹಿಳೆಯರಿಗೆ ಕೊಡುತ್ತಿರುವ ಚಿತ್ರಹಿಂಸೆಯ ವರದಿ ಪೂರ್ವ ಪಾಕಿಸ್ತಾನದಿಂದ ತಿಳಿದುಬಂದಿದೆ. ಅಲ್ಲಿಂದ ಪಶ್ಚಿಮ ಬಂಗಾಳಕ್ಕೆ ಹೋಗುವಾಗ ಕಡೆಯ ರೈಲ್ವೆ ನಿಲ್ದಾಣವಾದ ದರ್ಶನಾ ಎಂಬಲ್ಲಿ ಸುಂಕದ ಸಾಮಾನುಗಳ ಶೋಧನೆಯ ನೆಪದಿಂದ ನೌಕರರು ಕತ್ತಲೆ ಕೋಣೆಯಲ್ಲಿ ಮಹಿಳೆಯರನ್ನು ಬಲವಂತದಿಂದ ಬಿಚ್ಚಿಸಿ ಬೆತ್ತಲೆಯಾಗಿ ನಿಲ್ಲಿಸಿ ಶೋಧನೆ ಮಾಡುತ್ತಿರುವರೆಂದು ವರದಿಯಾಗಿದೆ. ಆ ಸಮಯದಲ್ಲಿ ಒಬ್ಬ ಮಹಿಳಾ ನೌಕರಳಲ್ಲದೆ ಇಬ್ಬರು ಪುರುಷರೂ ಸಹ ಇರುತ್ತಿದ್ದರೆಂದು, ಹೇಳಲಾಗಿದೆ. ಇದಕ್ಕೆ ತಕರಾರು ಮಾಡಿದ ಹೆಂಗಸರನ್ನು ನಾನಾ ವಿಧವಾಗಿ ಬೆದರಿಸಲಾಗುತ್ತಿತ್ತೆಂದೂ ವರದಿಯಾಗಿದೆ.

## ವೆಸ್ಟಲಿಂಗನಿಗೆ ಒಂದು ತಿಂಗಳು ಸಜಾ

ಸಿಂಗಪುರವನ್ನು ಅಕ್ರಮವಾಗಿ ಪ್ರವೇಶಿಸಿದ ಕೊರಿಯದ ದಂಗೆಕೋರ ನಾಯಕ ಕರ್ನಲ್ ವೆಸ್ಟಲಿಂಗನಿಗೆ ಅಲ್ಲಿನ ನ್ಯಾಯಾಧೀಶರು ಒಂದು ತಿಂಗಳು ಸಜಾ ಶಿಕ್ಷೆಯನ್ನು ವಿಧಿಸಿದ್ದಾರೆ.

## ಸಂಸ್ಥಾನಗಳಿಗೂ ಕೇಂದ್ರ ಸರ್ಕಾರದ ಸುಂಕದ ನಿಯಮ

ಮುಂದಿನ ತಿಂಗಳು ೧ನೇ ತಾರೀಖಿನಿಂದ ಭಾರತದ ಸುಂಕ, ಎಕ್ಸೈಜು ಮತ್ತು ವರಮಾನ ತೆರಿಗೆ ನಿಯಮಗಳು ಕಾಶ್ಮೀರವನ್ನು ಬಿಡು ಇತರ ಎಲ್ಲ ಸಂಸ್ಥಾನಗಳಿಗೂ ಅನ್ವಯಿಸುವುವೆಂದು, ಪ್ರಕಟಿಸಲಾಗಿದೆ.

## ಜಪಾನಿನಲ್ಲಿ ಕಲ್ಲಿದ್ದಲು ಗಣಿ ಕೆಲಸಗಾರರ ಮುಷ್ಕರ

ಹೆಚ್ಚು ಸಂಬಳ, ಭತ್ಯ ಮೊದಲಾದುವನ್ನು ಕೊಡಬೇಕೆಂದು ಒತ್ತಾಯಪಡಿಸಿ, ಜಪಾನಿನ ಸುಮಾರು ೪೦ ಸಾವಿರ ಮಂದಿ ಕಲ್ಲಿದ್ದಲು ಗಣಿ ಕೆಲಸಗಾರರು ಮುಷ್ಕರ ಹೂಡಿರುವರೆಂದು ವರದಿಯಾಗಿದೆ.

## ಬೊಂಬಾಯಿಯಲ್ಲಿ ಪವರ್ ಆಲ್ಕೊಹಾಲ್ ತಯಾರಿ

ಬೊಂಬಾಯಿಯಲ್ಲಿ ಸಾರಾಯಿ-ಭಟ್ಟಿ ಇಳಿಸುತ್ತಿದ್ದ ಕಾರ್ಖಾನೆಗಳಲ್ಲಿ ಇನ್ನು ಮುಂದೆ ಪವರ್ ಆಲ್ಕೊಹಾಲನ್ನು ತಯಾರಿಸಲಾಗುವುದೆಂದು ಹೇಳಲಾಗಿದೆ.

## ಗ್ರೀಸಿನಲ್ಲಿ ಮಿಶ್ರ ಮಂತ್ರಿ ಮಂಡಲ

ಗ್ರೀಸಿನಲ್ಲಿ ಮಿಶ್ರ ಮಂತ್ರಿ ಮಂಡಲವನ್ನು ಸ್ಥಾಪಿಸಲು ಅಲ್ಲಿನ ಚುನಾವಣೆಗೆ ನಿಂತಿರುವ ಮೂರು ಪ್ರಮುಖ ಪಕ್ಷಗಳವರು ಆಲೋಚಿಸುತ್ತಿರುವುದಾಗಿ ವರದಿಯಾಗಿದೆ.

§ ಮುಂದಿನ ಸಲ್ಲದ ಕಾಂಗ್ರೆಸಿನ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎ ರಾಮಣ್ಣನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರು.

## ನಗರ ಕಾಂಗ್ರೆಸ್ ಪಂಚಾಯಿತಿಗಳು

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸಂಗ್ರಹಣೆಯನ್ನು ಅನುಸರಿಸಿ ಮೈಸೂರು ನಗರವನ್ನು ವಿವಿಧ ಪಂಚಾಯಿತಿಗಳನ್ನಾಗಿ ವಿಂಗಡಿಸುವಾಗ ಕೆಲವು ಪಂಚಾಯಿತಿಗಳಲ್ಲಿ ಅಂತಹ ಕಮ್ಮಿ ಸಂಖ್ಯೆಯಲ್ಲಿ ಪ್ರಾಥಮಿಕ ಸದಸ್ಯರು ಇದ್ದುದರಿಂದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ಸೂಚನೆಯಂತೆ ಈ ಪಂಚಾಯಿತಿಗಳನ್ನೂ ಅವುಗಳ ಎಲ್ಲೆಗಳನ್ನೂ ಪುನರ್ರಚಿಸಿರುವುದಾಗಿ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಟಿ ನರಸಿಂಹಯ್ಯಂಗಾರ್ಯರು ತಿಳಿಸಿರುತ್ತಾರೆ.

## ಅಕ್ರಮ ಕಬ್ಬಿಣದ ದಾಸ್ತಾನಿನ ಪತ್ತೆ

ಮೈಸೂರು ೯

ರಾಜಧಾನಿಯ "ಎ" ಡಿವಿಜನ್ ಪೊಲೀಸರು ನೆನ್ನೆ ದಿನ ಅಶೋಕ ರಸ್ತೆಯಲ್ಲಿರುವ ಕಬ್ಬಿಣದ ವ್ಯಾಪಾರಿಗಳಾದ ಜನಾಬ್ ಲತೀಫ್ ಎಂಬುವರ ಅಂಗಡಿಯನ್ನು ಶೋಧಿಸಿ, ಅಲ್ಲಿ ರಹದಾರಿ ಪಡೆಯದೆ ಇಟ್ಟಿದ್ದ ೪೦ ಸಾವಿರ ರೂ ಬೆಲೆ ಬಾಳುವ ಕಬ್ಬಿಣವನ್ನು ಪತ್ತೆ ಹಚ್ಚಿ ಅವರನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡುಹೋಗಿ ಮುಂದಿನ ತನಿಖೆ ನಡೆಸುತ್ತಿದ್ದಾರೆ. ಕೆಲವು ದಿವಸಗಳ ಹಿಂದೆ ಕಾಳಸಂತೆ ವ್ಯಾಪಾರ ನಡೆಸಿದ ಅಪಾದನೆಗಾಗಿ ಜನಾಬ್ ಲತೀಫ್ ೫೦ ರೂ ಜುಲ್ಮಾನೆ ವಿಧಿಸಲ್ಪಟ್ಟಿದ್ದರು.

## ವಿದ್ಯಾವರ್ಧಕ ಹೈಸ್ಕೂಲ್ ವಾರ್ಷಿಕೋತ್ಸವ

ಬಸ್ ಸ್ಟ್ಯಾಂಡ್ ಬಳಿ ಇರುವ ಅವರಣದಲ್ಲಿ ವಿದ್ಯಾವರ್ಧಕ ಹೈಸ್ಕೂಲಿನ ಮೊದಲನೆಯ ವಾರ್ಷಿಕೋತ್ಸವವು ನಾಳೆ ಸಂಜೆ ೬ ಘಂಟೆಗೆ ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

## ಲಯಾಕಾಲಿ ಮೇಲೆ ಮೊಕದ್ದಮೆ ದಾಖಲು

ಹೈದರಾಬಾದಿನಲ್ಲಿ ಬಂಧನದಲ್ಲಿದ್ದ ಲಯಾಕಾಲಿಯು ಪರಾರಿಯಾಗಿರುವ ಬಗ್ಗೆ ಅವನ ಮೇಲೆ ಒಂದು ಮೊಕದ್ದಮೆ ದಾಖಲಾಗಿದೆ. ಅವರಿಗೆ ಸೇರಿದ ಚರ ಮತ್ತು ಸ್ಥಿರ ಆಸ್ತಿಗಳ ಬಗ್ಗೆ ನಿರಾತ್ರಿತರ ಆಸ್ತಿಪಾಸ್ತಿಗಳ ಅಧಿಕಾರಿಗೆ ವಿವರಗಳನ್ನು ಕೊಡಬೇಕೆಂದೂ ಅಲ್ಲಿನ ಸರ್ಕಾರಿ ಪ್ರಕಟಣೆ ಹೊರಟಿದೆ. ಲಯಾಕಾಲಿ ಸಹೋದ್ಯೋಗಿಗಳಾದ ಇತರ ಮಂತ್ರಿಗಳನ್ನೂ ಜೈಲಿಗೆ ವರ್ಗಾಯಿಸಿ ಅವರು ಮೊದಲು ಇದ್ದ ಭವನಗಳಿಗೆ ಪೊಲೀಸ್ ಕಾವಲು ಹಾಕಲಾಗಿದೆ.

ಲಯಾಕಾಲಿಯನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಹೈದರಾಬಾದಿನ ಅನೇಕ ಗೋಡೌನುಗಳು, ಮಸೀತಿಗಳು ಮತ್ತು ನೆಲಮಾಳಿಗೆಗಳನ್ನು ಶೋಧಿಸಲಾಗುತ್ತಿದೆ. ಈ ಸಂಬಂಧವಾಗಿ ಸಿಕಂದರಾಬಾದಿನಲ್ಲಿ ಇಬ್ಬರು ಪಾಕಿಸ್ತಾನದ ಏಜಂಟರುಗಳನ್ನು ದಸ್ತಗಿರಿ ಮಾಡಲಾಗಿದೆ.

## ಮೈಸೂರಿಗೆ ಉಳಿತಾಯದ ಬಜೆಟ್

### ಮಂತ್ರಿ ಮಂಡಳದ ಸಭೆಯಲ್ಲಿ ಪರಿಶೀಲನೆ

ಸ್ವಂ. ವಾ. ಫೋನ್] ಬೆಂಗಳೂರು ೯

ಸಂಸ್ಥಾನದ ಬಜೆಟ್ಟನ್ನು ಪರಿಶೀಲಿಸುವ ಸಲುವಾಗಿ ಮಂತ್ರಿ ಮಂಡಳದ ಸಭೆಯು ಕಳೆದ ನಾಲ್ಕು ದಿವಸಗಳಿಂದಲೂ ಸಮಾವೇಶಗೊಳ್ಳುತ್ತಿದೆ ಈ ದಿನ ಬಜೆಟ್ಟಿನ ಅಖೈರ್ ಪರಿಶೀಲನೆ ನಡೆಸುವುದಾಗಿ ಗೊತ್ತಾಗಿದೆ. ಈ ಸಾರಿಯ ಬಜೆಟ್ಟು ಉಳಿತಾಯದ ಬಜೆಟ್ಟಾಗಿರುವುದೆಂದು ಊಹಿಸಲಾಗಿದೆ. ವರಮಾನ ತೆರಿಗೆ ಬಾಬಿನಲ್ಲಿ ೧೩,೦೦೦,೦೦೦ ರೂ ಪರಿಹಾರ ಕಡಿಮೆ ಬೀಳುವುದೆಂದೂ, ಮಾರಾಟ ತೆರಿಗೆಯಿಂದ ೬೦ ಲಕ್ಷ ರೂ. ವರಮಾನ ಬರುವುದೆಂದೂ ನಿರೀಕ್ಷಿಸಲಾಗಿದೆ.

## ರೈಲ್ವೆ ಮುಷ್ಕರದ ಬಗ್ಗೆ ಮುಂಜಾಗ್ರತೆ ಕ್ರಮಗಳು

ಈ ದಿನ ಸಂಸ್ಥಾನಾದ್ಯಂತ ಕಮ್ಯೂನಿಸ್ಟರು ರೈಲ್ವೆ ಮುಷ್ಕರವನ್ನು ಏರ್ಪಡಿಸುವರೆಂಬ ಸುದ್ದಿ ಹರಡಿದ್ದುದರಿಂದ ಪೊಲೀಸರು ಎಲ್ಲ ಕಡೆಗಳಲ್ಲೂ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿರುವರೆಂದು ವರದಿಯಾಗಿದೆ. ಬೆಂಗಳೂರಿನ ವಿಭಾಗದ ಕಾರ್ಖಾನೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಜಿ. ಎನ್. ನಾಗರಾಜರಾಯರು ಭೇಟಿಯಿತ್ತು ರೈಲು ಗಾಡಿಗಳನ್ನು ತಯಾರಿಸುವ ಶಾಪಿನ ಪರಿಶೀಲನೆ ನಡೆಸಿದರು. ಅಲ್ಲಿ ಕೈಗೊಳ್ಳಲಾಗಿರುವ ಮುಂಜಾಗ್ರತೆ ಕ್ರಮಗಳನ್ನು ಅಜಮಾಯಿಷಿ ಮಾಡಿದರು.

## ಲಯಾಕಾಲಿ ಪರಾರಿ ಬಗ್ಗೆ ಮೈಸೂರು ಪೊಲೀಸರಿಗೆ ಆಜ್ಞೆ

ಹೈದರಾಬಾದಿನ ಮಾಜಿ ಪ್ರಧಾನಿ ಲಯಾಕಾಲಿಯು ತಪ್ಪಿಸಿಕೊಂಡಿರುವ ಬಗ್ಗೆ ಸಂಸ್ಥಾನದ ಪೊಲೀಸರಿಗೆ ಸೂಚನೆ ಕೊಟ್ಟು ಬಹಳ ಎಚ್ಚರಿಕೆಯಿಂದ ಕಾಯುತ್ತಿರಬೇಕೆಂದು ಆಜ್ಞೆ ಮಾಡಲಾಗಿದೆ.

○ ಪ್ರಧಾನ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ನಾಳೆ ದಿನ ರಾಜಧಾನಿಗೆ ತೆರಳುವರು ಅಲ್ಲಿಂದ ಬೇಲೂರಿಗೆ ಹೋಗಿ ಹಾಸನದ ಮಾರ್ಗವಾಗಿ ೧೫ ನೇ ತಾರೀಖು ಬೆಂಗಳೂರಿಗೆ ಹಿಂದಿರುಗುವರು.

○ ಕೇಂದ್ರ ಸರ್ಕಾರದ ರೈಲ್ವೆ ಚೀಫ್ ಕಮಿಷನರಾದ ಶ್ರೀ ಬಾಕ್ಲೆಯವರು ಇಲ್ಲಿಗೆ ಆಗಮಿಸಿದ್ದಾರೆ. ಇಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿದನಂತರ ಅವರು ತಿರುಪಾಂಕೂರಿಗೆ ಪ್ರಯಾಣ ಬೆಳೆಸುವರು.

○ ಶಾಸನ ಸಭಾಧ್ಯಕ್ಷರಾದ ಶ್ರೀ ವಿ. ವೆಂಕಟಪ್ಪನವರು ಶ್ರೀ ಜಿ. ಎಸ್ ವೆಂಕಟರಮಣರವರೊಡನೆ ಈ ದಿನ ಮದರಾಸಿಗೆ ಪ್ರಯಾಣ ಮಾಡಿದರು. ಅಲ್ಲಿನ ಶಾಸನ ಸಭೆಗಳ ನಡವಳಿಕೆಯನ್ನು ಪರಿಶೀಲಿಸಿ ಅವರು ಹಿಂದಿರುಗುವರು.

## ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಅಟ್ಲೀ ಪ್ರಯತ್ನ

ಕಾಶ್ಮೀರದ ಸಂಬಂಧವಾಗಿ ಭಾರತ ಪಾಕಿಸ್ತಾನಗಳ ನಡುವೆ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ಪ್ರಧಾನಿ ಅಟ್ಲೀಯವರು ಬ್ರಿಟನ್ನಿನಲ್ಲಿ ಒಂದು ಚಕ್ರಗೋಷ್ಠಿ ನಡೆಸಲು ಆಲೋಚಿಸಿರುವುದಾಗಿ ವರದಿಯಾಗಿದೆ ಈ ಬಗ್ಗೆ ಎರಡು ರಾಷ್ಟ್ರಗಳಿಗೂ ಅವರು ಪತ್ರ ಬರೆದು ಆಹ್ವಾನಿಸುತ್ತಿರುವರೆಂದೂ, ಉಭಯ ರಾಷ್ಟ್ರಗಳ ಪ್ರಧಾನಿಗಳೂ ತಮ್ಮ ತಮ್ಮ ರಾಜಧಾನಿಗಳಲ್ಲಿಲ್ಲದಿರುವುದರಿಂದ ಈ ಪ್ರಯತ್ನವು ಸ್ವಲ್ಪ ತಡವಾಗಿ ನಡೆಯಬಹುದೆಂದೂ ಹೇಳಲಾಗಿದೆ

## ಎ. ಐ. ಸಿ. ಸಿ. ಕಾರ್ಯಕ್ರಮ

### ಅಸ್ಪೃಶ್ಯತಾ ನಿವಾರಣೆಯ ಬೆಳ್ಳಿ ಮಹೋತ್ಸವ

ಬೇಲೂರು ೮

ಆಲ್ ಮೈಸೂರು ಕಾಂಗ್ರೆಸ್ ಸಮಿತಿಯ ಕಾರ್ಯಕ್ರಮಗಳು ಈ ರೀತಿ ಇವೆ — ೧೦ನೇ ತಾ॥ ಸಂಜೆ ಅಧ್ಯಕ್ಷರ ಮೆರವಣಿಗೆ, ೧೧ನೇ ತಾ॥ ಬೆಳಿಗ್ಗೆ ೮-೩೦ ಘಂಟೆಗೆ ಧ್ವಜ ವಂದನೆ, ೧೦ರಿಂದ ೧-೩೦ರ ವರೆಗೆ ಸಭೆ, ಮಧ್ಯಾಹ್ನ ೩ರಿಂದ ೫-೩೦ರ ವರೆಗೆ ಸಭೆ, ಸಂಜೆ ೬ ಘಂಟೆಗೆ ಬಹಿರಂಗ ಸಭೆ, ರಾತ್ರಿ ೧೦ ಘಂಟೆಗೆ ಶ್ರೀ ಚನ್ನಕೇಶವ ಸ್ವಾಮಿ ಸನ್ನಿಧಿಯಲ್ಲಿ ಬೆಳ್ಳಿ ಮಹೋತ್ಸವ, ೧೨ನೇ ತಾ॥ ಬೆಳಿಗ್ಗೆ ೮-೩೦ಕ್ಕೆ ಧ್ವಜವಂದನೆ ೧೦ರಿಂದ ೧-೩೦ರ ವರೆಗೆ ಸಭೆ, ಮಧ್ಯಾಹ್ನ ೩-೩೦ರಿಂದ ೫-೩೦ರ ವರೆಗೆ ಸಭೆ, ಸಂಜೆ ೬ ಘಂಟೆಗೆ ಬಹಿರಂಗ ಸಭೆ.

ಈ ಅಧಿವೇಶನವು ಪ್ರಪಂಚ ಪ್ರಸಿದ್ಧವಾದ ಬೇಲೂರಿನಲ್ಲಿ ನಡೆಯುವುದರಿಂದಲೂ, ಶಿಲ್ಪ ಕಲೆ ನೋಡುವ ಉದ್ದೇಶದಿಂದಲೂ ಮತ್ತು ಮಹತ್ವಪೂರ್ಣವಾಗಿರುವುದರಿಂದಲೂ ಅನೇಕ ಮಂದಿ ಬರಲಪೇಕ್ಷಿಸುವುದು ಸಹಜವಾಗಿಯೇ ಇದ್ದರೂ, ಬರುವವರಿಗೆಲ್ಲಾ ಊಟ ವಸತಿಗಳನ್ನು ಒದಗಿಸಲಾಗಿರುವುದಕ್ಕಾಗಿ ಸ್ವಾಗತ ಸಮಿತಿಯವರು ವಿಷಾದಿಸುತ್ತಾರೆ. ಆದರೂ ಬೇಲೂರಿನಲ್ಲಿರುವ ಭೋಜನ ಶಾಲೆಗಳಿಗೆ ಸಾಧ್ಯವಾದಮಟ್ಟಿಗೂ ಹೆಚ್ಚಿನ ಪ್ರತಿನಿಧಿಗಳನ್ನೊದಗಿಸಲು ಏರ್ಪಾಡು ಮಾಡಲಾಗಿದೆ. ಬೇಲೂರು ಹಾಸನದಿಂದ ೨೪ ಮೈಲಿ ದೂರದಲ್ಲೂ, ಅರಸೀಕೆರೆಯಿಂದ ೩೨ ಮೈಲಿ ದೂರದಲ್ಲೂ, ಚಿಕ್ಕಮಗಳೂರಿನಿಂದ ೧೪ ಮೈಲಿ ದೂರದಲ್ಲೂ ಇರುತ್ತದೆ. ಎ. ಐ. ಸಿ. ಸಿ. ಸದಸ್ಯರುಗಳಿಗಾಗಿ ಹಾಸನ ರೈಲ್ವೆ ನಿಲ್ದಾಣದಿಂದ ಬಸ್ ವ್ಯವಸ್ಥೆ ಮಾಡಲಾಗಿದೆ. ಅರಸೀಕೆರೆ ರೈಲ್ವೆ ನಿಲ್ದಾಣದಿಂದ ಬೇಲೂರಿಗೆ ಒಳ್ಳೆ ಬಸ್ಸುಗಳಿದ್ದೂ ಸಹ ಎಲ್ಲ ಸದಸ್ಯರೂ ಹಾಸನ ನಿಲ್ದಾಣಕ್ಕೆ ಬರಬೇಕೆಂದು ಪ್ರಾರ್ಥಿಸಲಾಗಿದೆ.

### ಕಾಶ್ಮೀರ ಸಮಸ್ಯೆಯಲ್ಲಿ ಈಜಿಪ್ಟಿನ ಮಧ್ಯಸ್ಥಿಕೆಯಿಲ್ಲ

ಕಾಶ್ಮೀರ ಜನಮತ ಸಂಗ್ರಹ ಸಂಬಂಧದಲ್ಲಿ ಈಜಿಪ್ಟು ಮಧ್ಯಸ್ಥಿಕೆ ವಹಿಸಬೇಕಾಗಿಲ್ಲವೆಂದು ಕೈರೋದಲ್ಲಿ ನಡೆದ ಈಜಿಪ್ಟಿನ ರಾಷ್ಟ್ರೀಯ ಸಭೆಯಲ್ಲಿ ತೀರ್ಮಾನಿಸಲಾಯಿತು.

## ಪರೀಕ್ಷೆಗಳ ಬಗ್ಗೆ ಹುಡುಗಿಯರಿಗಿಂತ ಹುಡುಗರಿಗೆ ಹೆಚ್ಚು ಗಾಬರಿ

ಲಂಡನ್ ವಿಶ್ವವಿದ್ಯಾನಿಲಯದ ವೈದ್ಯರೊಬ್ಬರು ೬೦೦೦ ಸಾವಿರ ವಿದ್ಯಾರ್ಥಿಗಳ ಆರೋಗ್ಯವನ್ನು ಪರೀಕ್ಷಿಸಿ ಕಾಲೇಜಿನ ವಿದ್ಯಾರ್ಥಿನಿಯರಿಗಿಂತಲೂ ವಿದ್ಯಾರ್ಥಿಗಳಿಗೆ ಪರೀಕ್ಷೆಗಳ ಸಮಯದಲ್ಲಿ ಹೆಚ್ಚು ಗಾಬರಿಯುಂಟಾಗುವುದೆಂದು ತಿಳಿಸಿರುತ್ತಾರೆ. ತಲೆನೋವು, ಪಿತ್ತ ವಿಕಾರ ಮುಂತಾದುವುಗಳಿಗೆ ವಿದ್ಯಾರ್ಥಿಗಳು ಗುರಿಯಾಗುತ್ತಾರೆ. ಆದರೆ ವಿದ್ಯಾರ್ಥಿನಿಯರಿಗೆ ಈ ಆತಂಕವಿರುವುದಿಲ್ಲ. ತನ್ನ ಭವಿಷ್ಯದ ಬಗ್ಗೆ ತರುಣನು ಹೆಚ್ಚು ಕಾತರನಾಗಿರುತ್ತಾನೆ. ಆದರೆ ಪರೀಕ್ಷೆಯಲ್ಲಿ ತೇರ್ಗಡೆಯಾಗದ ತರುಣಿಗೆ ಮದುವೆ ಮಾಡಿಕೊಂಡು ಸುಖವಾಗಿ ಬಾಳುವ ಅವಕಾಶವಿರುವುದೆಂಬ ಆಶೆಯಿರುವುದರಿಂದ ಆಕೆಗೆ ಅಷ್ಟು ಕಳವಳವಿರುವುದಿಲ್ಲವೆಂದು ಅವರು ಹೇಳಿರುತ್ತಾರೆ.

### ಅಲ್ಪ ಸಂಖ್ಯಾತರ ವಿನಿಮಯದ ಬಗ್ಗೆ ನೆಹರೂ ಸಲಹೆ

ಬಂಗಾಳದ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಕಲ್ಕತ್ತೆಯಲ್ಲಿ ಪಂಡಿತ ನೆಹರೂರವರು ಅನೇಕ ಅಧಿಕಾರಿ ಮತ್ತು ಪಾರ್ಟಿ ಪ್ರಮುಖರೊಡನೆ ಮಾತುಕತೆ ನಡೆಸಿ ಪೂರ್ವ ಮತ್ತು ಪಶ್ಚಿಮ ಬಂಗಾಳಗಳ ಅಲ್ಪ ಸಂಖ್ಯಾತರನ್ನು ವಿನಿಮಯ ಮಾಡುವುದು ಬಹಳ ಕಷ್ಟಸಾಧ್ಯವಾದ ಕೆಲಸವೆಂದು ತಿಳಿಸಿದರು. ವಿನಿಮಯವನ್ನು ಅಗತ್ಯವಾಗಿ ಮಾಡಬೇಕಾದಲ್ಲಿ ಆ ಬಗ್ಗೆ ಬಹಳ ಎಚ್ಚರಿಕೆಯಿಂದಲೂ ವ್ಯವಸ್ಥಿತವಾಗಿಯೂ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆಯೆಂದು ಸಲಹೆ ಮಾಡಿದರು.

## ಪಾಕಿಸ್ತಾನದ ಮೇಲೆ ಯುದ್ಧ ಹೂಡುವುದೊಂದೇ ಮಾರ್ಗ

ಪೂರ್ವ ಪಾಕಿಸ್ತಾನದ ಸಮಸ್ಯೆಯನ್ನು ಬಗೆಹರಿಸಲು ಯುದ್ಧವೊಂದೇ ಮಾರ್ಗ. ಭಾರತದೊಡನೆ ಯುದ್ಧ ಮಾಡಲು ಪಾಕಿಸ್ತಾನ ಸರ್ವ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದೆ, ಭಾರತ ಇನ್ನು ಸುಮ್ಮನೆ ಕುಳಿತುಕೊಳ್ಳುವುದು ಸರಿಯಲ್ಲ—ಎಂದು ಕೇಂದ್ರ ಪಾರ್ಲಿಮೆಂಟಿನಲ್ಲಿ ಮೊನ್ನೆ ಭಾಷಣ ಮಾಡುತ್ತಾ ಅಸ್ಸಾಮಿನ ಪ್ರತಿನಿಧಿ ಶ್ರೀ ರೋಹಿಣಿ ಕುಮಾರ ಚೌಧುರಿಯವರು ತಿಳಿಸಿದರು.

### ವ್ಯವಸಾಯದ ಪಂಪುಗಳಿಗೆ ರಿಯಾಯಿತಿ

ಹೆಚ್ಚು ಆಹಾರದ ಬೆಳೆಯ ಸಂಬಂಧದಲ್ಲಿ ವಿದ್ಯುಚ್ಛಕ್ತಿಯಿಂದ ನಡೆಯುವ ಪಂಪುಗಳನ್ನು ಉಪಯೋಗಿಸುವವರಿಗೆ ಸರ್ಕಾರದವರು ಹೊಸ ರಿಯಾಯಿತಿಗಳನ್ನು ಕೊಟ್ಟಿರುತ್ತಾರೆ. ರೈತರ ಸ್ವಂತ ಜಮೀನಿನ ಮೇಲೆ ಪಂಪುಗಳನ್ನು ಒದಗಿಸಲಾಗುವುದು. ವರ್ಷಕ್ಕೆ ೧೦೦ ರೂ.ನ ಕಂತುಗಳಂತೆ ಹಣವನ್ನು ತೆಗೆದುಕೊಳ್ಳಲಾಗುವುದು. ಬಡ್ಡಿ ದರವನ್ನು ಶೇ. ೪ರಿಂದ ೩ಕ್ಕೆ ಇಳಿಸಲಾಗುವುದು.

## ಪಾಕಿಸ್ತಾನಕ್ಕೂ ಜರ್ಮನಿಗೂ ವಾಣಿಜ್ಯ ಒಪ್ಪಂದ

೪ ಕೋಟಿ ಜರ್ಮನ್ ಮಾರ್ಕುಗಳ ಬೆಲೆಯ ವಾಣಿಜ್ಯ ಒಪ್ಪಂದಕ್ಕೆ ಪಾಕಿಸ್ತಾನ ಮತ್ತು ಜರ್ಮನಿಗಳು ರುಜು ಹಾಕಿವೆ. ಪಾಕಿಸ್ತಾನವು ಸೆಣಬು, ಹತ್ತಿ, ಗೋಧಿ ಮತ್ತು ಚರ್ಮವನ್ನು ರಫ್ತು ಮಾಡುತ್ತದೆ. ಜರ್ಮನಿಯು ತಯಾರಿಕಾ ಯಂತ್ರಗಳನ್ನೂ, ಉಪಕರಣಗಳನ್ನೂ, ಔಷಧಿ ಸಾಮಗ್ರಿಗಳನ್ನೂ ಒದಗಿಸುತ್ತದೆ.

### ಚರ್ಚಿಲರ ಕೋರಿಕೆಗೆ ನಿರಾಕರಣೆ

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ವಿರೋಧಪಕ್ಷದ ನಾಯಕರಾದ ಮಿ॥ ಚರ್ಚಿಲರು ಅಲ್ಲಿನ ಉಕ್ಕಿನ ಕೈಗಾರಿಕೆಗಳ ರಾಷ್ಟ್ರೀಕರಣವನ್ನು ಮುಂದಿನ ಮಹಾಚುನಾವಣೆಗಳು ನಡೆದ ೯ ತಿಂಗಳವರೆಗೆ ಮುಂದೆ ಹಾಕಬೇಕೆಂದು ಕೇಳಿದರು. ಅದು ಸಾಧ್ಯವಿಲ್ಲವೆಂದು ಉತ್ತರ ಕೊಡಲಾಯಿತು.


ಗಾಯತ್ರೀ ಟಾಕೀಸ್

10-3-50 ರಿಂದ 2 ದಿನಗಳು ಮಾತ್ರ
ದಿನವಹಿ 3 ಆಟಗಳು
20th ಸೆಂಚುರಿಯವರ
Cry of the City
ಕ್ರೈ ಆಫ್ ದಿ ಸಿಟಿ
With-Victor Mature, Richaad Conte
—ಮುಂದಿನ ಬದಲಾವಣೆ—
URUBU-ಉರುಬು

ಬೆಳಗಿನ ಪ್ರದರ್ಶನ
11 ಮತ್ತು 12ನೇ ತಾ॥
ನಜೀರ್ ನಿಯರ್

ರಾಜಕಮಲ್ ಟಾಕೀಸ್

10—3—50 ರಿಂದ
ಜನಭರಿತವಾದ ೧೨ನೇ ವಾರ
ದಿನವಹಿ 2 ಪ್ರದರ್ಶನಗಳು
ಜೀವನ
—ಭೂಮಿಕೆ:—
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರನ್, ಲಲಿತ-ಪದ್ಮಿನಿ

Morning Shows
From 10-3-50 For 4 days
Jesse James Rides Again
With-Clayton Moore, Linda Stirling
A Republic Serial in 13 Chapters

ರಣಜಿತ್ ಟಾಕೀಸ್

ಯಶಸ್ವಿಯಾದ ೨ನೇ ವಾರ
ಚಂದ್ರಾಕೆ ಚಾಂದನಿ

ಬೆಳಗಿನ ಪ್ರದರ್ಶನ
10-3-50ರಿಂದ 3 ದಿನಗಳು ಮಾತ್ರ,
ಬೆಳಿಗ್ಗೆ ೧೦-೩೦ ಘಂಟೆಗೆ
ಸಾದಿ

ಮದುವೆ ಜವಳಿಗಳಿಗೆ
ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪೂರ್ ಸೀರೆಗಳಿಗೆ
ಎಂ. ವಿ. ಭೋಜಯ್ಯ ಬಿ. ಎ. & ಬ್ರದರ್
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಚಾಮುಂಡೇಶ್ವರಿ. ಟಾಕೀಸ್
10—3—50ನೇ ಶುಕ್ರವಾರದಿಂದ ಪ್ರತಿದಿನ ೩ ಆಟಗಳು
ಸಿಟಾಡಲ್ ಪಿಕ್ಚರ್ಸ್‌ರವರ
ತಮಿಳು ಚಿತ್ರ
ಜ್ಞಾನ - - ಸುಂದರಿ





ಮುಖ್ಯಪಾತ್ರ — ಟಿ. ಆರ್. ಮಹಾಲಿಂಗಂ, ಎಂ. ವಿ. ರಾಜಮ್ಮ, ಸಿ. ಆರ್. ವಿಜ್ಜಿ, ಲಲಿತ — ಪದ್ಮಿನಿ

ಶ್ರೀ ಗಣೇಶಾ ಟಾಕೀಸ್
10—3—50 ರಿಂದ ದಿನವಹಿ ೩ ಪ್ರದರ್ಶನಗಳು
ಜೆಮಿನಿಯವರ ತಮಿಳು ಚಿತ್ರ
- ಚಕ್ರಧಾರಿ -
(ಭಕ್ತ ಗೋರ ಕುಂಬಾರ)
ಪಾತ್ರ - ನಾಗಯ್ಯ, ಪುಷ್ಪವಲ್ಲಿ, ನಾರಾಯಣರಾವ್ ಮತ್ತು ಸೂರ್ಯಪ್ರಭಾ


Edited, printed and published by A. R. Nagarajan at Sadhvi Press, D. Subbiah Road, Mysore

ರಿ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು



ಸಂಪುಟ ೮] ಶುಕ್ರವಾರ ೧೦-೩-೫೦ [ಸಂಚಿಕೆ ೧೮

# ಕೊಲಂಬೊ ಪೌರಸಭೆಯಲ್ಲಿ ೧೦೦೦ ಜನರ ಗಲಭೆ

## ೧೯,೩೧೭ ಕಳ್ಳ ರೇಷನ್ ಕಾರ್ಡುಗಳ ಪತ್ತೆ

ಸ್ವಂ ವಾ. ಪ್ರೋ] ಬೆಂಗಳೂರು ೧೦

ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ೧೯೪೯ನೇ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ೧೯,೩೧೭ ಕಳ್ಳರೇಷನ್‌ಕಾರ್ಡುಗಳನ್ನು ಪತ್ತೆ ಮಾಡಲಾಯಿತೆಂದೂ, ಅದರಿಂದ ಸುಮಾರು ೮೦,೦೦೦ ಜನರಿಗೆ ಕೊಡುತ್ತಿದ್ದ ೬ ಸಾವಿರ ಪಲ್ಲಗಳಷ್ಟು ಧಾನ್ಯವು ಉಳಿತಾಯವಾಗಿರುವುದೆಂದೂ ತಿಳಿಸಿದ್ದಾರೆ.

## ೯ ಬಾಲಗಳಿಂದ ಕೂಡಿದ ಭಾರಿ ಜಲಚರ ಪ್ರಾಣಿ

ಓರೆಗಾನ್ ಸಮುದ್ರ ತೀರದಲ್ಲಿ ಹಸುವಿನ ಆಕೃತಿಯಿಂದ ಕೂಡಿದ ಒಂದು ಬೃಹದಾಕಾರದ ಪ್ರಾಣಿಯು ಸತ್ತುಬಿದ್ದಿದ್ದುದನ್ನು ಪತ್ತೆ ಹಚ್ಚಲಾಗಿದೆ. ಅದಕ್ಕೆ ೯ ಬಾಲಗಳಿದ್ದುವೆಂದೂ, ಮುಂದದಿಂದ ಬಾಲದವರೆಗೂ ಗುಂಗುರು ಕೂದಲುಗಳು ಬೆಳೆದಿದ್ದುವೆಂದೂ ವರದಿಯಾಗಿದೆ. ಅದು ಒಂದು ಸಾವಿರ ಪೌಂಡು ತೂಕವಿದ್ದಿತು.

## ವಿಮಾನ ಮನೆಯ ಮೇಲೆ ಬಿದ್ದು ೧೫ ಮಂದಿಯ ಮರಣ

ಅಮೇರಿಕದ ಮಿನ್ನಿಸೋಟಾ ಎಂಬಲ್ಲಿ ೧೦ ಮಂದಿಯನ್ನು ಹೊತ್ತು ಹಾರುತ್ತಿದ್ದ ವಿಮಾನವೊಂದು ಹಿಮದ ಧಾಳಿಗೆ ಸಿಕ್ಕಿ ಒಂದು ಮನೆಯ ಮೇಲೆ ಬಿದ್ದಿತು. ಇದರ ಪರಿಣಾಮವಾಗಿ ಆ ಮನೆಯಲ್ಲಿ ಟೆಲಿವಿಷನ್ ನೋಡುತ್ತಿದ್ದ ಸಣ್ಣ ಮಕ್ಕಳಿಬ್ಬರೂ, ವಿಮಾನದಲ್ಲಿದ್ದ ೧೦ ಮಂದಿಯೂ ಸತ್ತರು.

## ರಷ್ಯವು ತನ್ನದೇ ಆದ ಅಣು ಬಾಂಬನ್ನು ಹೊಂದಿದೆ

ಸುಪ್ರೀಂ ಸೋವಿಯಟ್ ಚುನಾವಣೆಗೆ ಸ್ಪರ್ಧಿಸಿರುವ ಮಾರ್ಷಲ್ ವರೋಷಿಲೋವ್ ಎಂಬುವರು-ರಷ್ಯವು ಸಾಮ್ರಾಜ್ಯವಾದಿ ರಾಷ್ಟ್ರಗಳ ಗೊಡ್ಡು ಬೆದರಿಕೆಗೆ ತಲೆ ಬಾಗುವುದಿಲ್ಲವೆಂದೂ, ಅದು ತನ್ನದೇ ಆದ ಅಣು ಬಾಂಬಿನಿಂದ ಆ ರಾಷ್ಟ್ರಗಳನ್ನು ನಿರ್ನಾಮ ಮಾಡಬಲ್ಲದೆಂದೂ ಹೇಳಿದ್ದಾರೆ.

## ಶ್ಯಾನುಭೋಗರ ಮೇಲೆ ಪಾದರಕ್ಷಾ ಪ್ರಯೋಗವೇ?

ಹಾಸನದ ತಾಲ್ಲೂಕು ಇಬ್ಬದಾಣೆ ಗ್ರಾಮದ ಶ್ಯಾನುಭೋಗರಾದ ಶ್ರೀ ಎಸ್. ಕೃಷ್ಣಸ್ವಾಮಿ ಎಂಬುವರನ್ನು ಕಳೆದ ಶುಕ್ರವಾರ ತಾಲ್ಲೂಕು ಕಛೇರಿಯಲ್ಲಿ ಅಲ್ಲಿನ ಗುಮಾಸ್ತರಾದ ಶ್ರೀ ಗೌಡಯ್ಯ ಎಂಬುವರು ಬಹಿರಂಗವಾಗಿ ಪಾದರಕ್ಷೆಯಿಂದ ಹೊಡೆದರೆಂಬ ಆಪಾದನೆ ಮೇಲೆ ಮೊಕದ್ದಮೆ ಹೂಡಲಾಗಿದೆ.

## ಹಾಂಗ್‌ಕಾಂಗ್ ಮೇಲೆ ಹಾರುವ ವಿಮಾನಗಳಿಗೆ ಎಚ್ಚರಿಕೆ

ಹಾಂಗ್‌ಕಾಂಗಿನ ಮೇಲೆ ಹಾರಾಡುವ ಯಾವ ಅನಧಿಕೃತ ವಿಮಾನವನ್ನಾದರೂ ಹೊಡೆದು ಉರುಳಿಸಲಾಗುವುದೆಂದು ಅಲ್ಲಿನ ಸರ್ಕಾರವು ಪ್ರಕಟಿಸಿದೆ. ಯಾವ ವಿಮಾನವಾದರೂ ಸಿಗ್ನಲ್‌ಗಳನ್ನು ಕೊಡದಿದ್ದಲ್ಲಿ ಅಂತಹದನ್ನು ಅನಧಿಕೃತ ವಿಮಾನವೆಂದು ಭಾವಿಸಲಾಗುವುದು. ಈ ಕ್ರಮವನ್ನು ಕೈಗೊಳ್ಳಲು ಹಾಂಗ್‌ಕಾಂಗಿಗೆ ಬ್ರಿಟಿಷ್ ಸರ್ಕಾರವು ಸೂಚನೆ ಕೊಟ್ಟಿರುವುದಾಗಿ ವರದಿಯಾಗಿದೆ.

## ಲಾಯಖಾಲಿ ಸಿಕ್ಕಿಬಿದ್ದನೇ?

ಲಾಯಖಾಲಿಯನ್ನು ಹೋಲುವ ಹರ್ಷ ಅಹಮದ್ ಮೌಲಾ ಎಂಬೊಬ್ಬನು ಬೊಂಬಾಯಿನ ಬಳಿ ಲೋಂಡಾದಲ್ಲಿ ಪೊಲೀಸಿನವರ ವಶದಲ್ಲಿದ್ದಾನೆ. ತಾನು ವಿದ್ಯಾರ್ಥಿಯಾಗಿ ಗೋವಾಕ್ಕೆ ಹೋಗುತ್ತಿರುವುದಾಗಿ ಆತನು ಪೋಲೀಸಿನವರಿಗೆ ಹೇಳಿದನೆಂದೂ, ಮೊದಲು ಇಂಗ್ಲೀಷ್ ಭಾಷೆಯನ್ನಾಡುತ್ತಿದ್ದು ನಂತರ ಹಿಂದೀ ಆಡಲು ಪ್ರಾರಂಭಿಸಿದನೆಂದೂ ವರದಿಯಾಗಿದೆ. ಬೊಂಬಾಯಿನ ಮಂತ್ರಿ ಶ್ರೀ ದಿನಕರ ದೇಸಾಯಿಯವರು ಸಹ ನಗೆ ಹರಟೆ ಹೊಡೆಯುತ್ತಿದ್ದರೆಂದು ಆತನ ಚಹರೆಯಿಂದ ಅವನನ್ನು ಪರೀಕ್ಷಿಸಲು ಅಲ್ಲಿಗೆ ಕರೆದುಕೊಂಡು ಹೋಗಲಾಗುವುದು.

## ನೆಹರೂರವರಿಗೆ ಸಮಾಜವಾದಿಗಳ ಮನವಿ

ಪ್ರಧಾನಿ ನೆಹರೂರವರಿಗೆ ಸೋಷಲಿಸ್ಟರು ಒಂದು ವಿಜ್ಞಾಪನಾ ಪತ್ರವನ್ನು ಸಲ್ಲಿಸಿ ಪೂರ್ವ ಬಂಗಾಳದಲ್ಲಿರುವ ಹಿಂದೂ ಅಲ್ಪ ಸಂಖ್ಯಾತರನ್ನು ಭಾರತಕ್ಕೆ ರವಾನಿಸಲು ಸೌಕರ್ಯಗಳನ್ನು ಕಲ್ಪಿಸಬೇಕೆಂದೂ, ಭಾರತದಲ್ಲಿರುವ ಮುಸ್ಲಿಮರ ಪ್ರಾಣ ಮತ್ತು ಆಸ್ತಿಪಾಸ್ತಿಗಳಿಗೆ ಭರವಸೆ ನೀಡಬೇಕೆಂದೂ, ಭಾರತದಿಂದ ಪಾಕಿಸ್ತಾನಕ್ಕೆ ಹೋಗಿ ನೆಲೆಸಲಿಚ್ಛಿಸುವವರಿಗೆ ಸೌಲಭ್ಯಗಳನ್ನೊದಗಿಸಬೇಕೆಂದೂ ಮತ್ತು ಪೂರ್ವ ಮತ್ತು ಪಶ್ಚಿಮ ಬಂಗಾಳದಲ್ಲಿರುವ ದೌರ್ಜನ್ಯಕಾರರನ್ನು ಬಂಧಿಸಬೇಕೆಂದೂ ಸಲಹೆ ಮಾಡಿರುವುದಾಗಿ ವರದಿಯಾಗಿದೆ.

## ಪ್ರೇಮ ಭಂಗಕ್ಕಾಗಿ ಕೊಲೆ

ತಾನು ಪ್ರೀತಿಸುವ ತರುಣಿಯೊಬ್ಬಳು ತನ್ನನ್ನು ಪ್ರೀತಿಸಲಿಲ್ಲವೆಂದು ಆಕೆಯನ್ನು ಗುಂಡಿಕ್ಕಿ ಕೊಂದನೆಂಬ ಆಪಾದನೆ ಮೇಲೆ ಸಿಂಗಪುರದ ಕೆ. ರಾಜಾ ಎಂಬ ರಬ್ಬರ್ ಎಸ್ಟೇಟಿನ ಮ್ಯಾನೇಜರೊಬ್ಬನು ವಿಚಾರಣೆಗೆ ಗುರಿಯಾಗಿದ್ದಾನೆ.

## ಪತ್ರಿಕೆಗಳ ಮೇಲಿನ ಮಾರಾಟ ತೆರಿಗೆ ವಜಾ

ಕೇಂದ್ರ ಸರ್ಕಾರದಿಂದ ಸೂಚನೆ ಬರುವ ಪ್ರಸಕ್ತ ಮಂಡಿತವಾಗಿ ಮದರಾಸಿನಲ್ಲಿ ವೃತ್ತ ಪತ್ರಿಕೆಗಳ ಮೇಲಿನ ಮಾರಾಟ ತೆರಿಗೆಯನ್ನು ತೆಗೆದು ಹಾಕುವ ಬಗ್ಗೆ ಆಲೋಚಿಸಲಾಗುತ್ತಿದೆಯೆಂದು ಅಲ್ಲಿನ ಹಣಕಾಸಿನ ಮಂತ್ರಿ ಶ್ರೀ ಗೋಪಾಲ ರೆಡ್ಡಿಯವರು ಶಾಸನ ಸಭೆಯಲ್ಲಿ ತಿಳಿಸುತ್ತಾರೆ.

## ಕೊಲಂಬೊ ಪುರಸಭೆಯಲ್ಲಿ ಗಲಭೆ

ಕೊಲಂಬೊ ಮೇಯರು ಕಮ್ಯೂನಿಸ್ಟರ ವಿಚಾರದಲ್ಲಿ ಬಹಳ ಪಕ್ಷಪಾತವಾಗಿರುವುದನ್ನು ಖಂಡಿಸುವ ಬಗ್ಗೆ ಅವರ ಮೇಲೆ ಅಲ್ಲಿನ ಪೌರಸಭೆಯಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ತರಲಾಗಿತ್ತು. ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದ್ದಾಗ ಸುಮಾರು ಒಂದು ಸಾವಿರ ಜನರು ಸಭಾಭವನಕ್ಕೆ ನುಗ್ಗಿ ಗಲಭೆ ನಡೆಸಿದರು. ಇದರಲ್ಲಿ ಗುಂಪಿನವರು ಕುರ್ಚಿ ಮೇಜುಗಳನ್ನು ಎಸೆದರೆಂದೂ, ಗಲಭೆಯ ಪರಿಣಾಮವಾಗಿ ಸಭೆಯನ್ನು ನಿಲ್ಲಿಸಬೇಕಾಯಿತೆಂದೂ ವರದಿಯಾಗಿದೆ.

## ನೆಹರೂರವರ ನಾಯಕತ್ವದಲ್ಲಿ ಎಲ್ಲ ಪಕ್ಷಗಳ ಸಂಘಟನೆ

ಪೂರ್ವ ಬಂಗಾಳ ಹಿಂದೂಗಳ ಮೇಲೆ ಪಾಕಿಸ್ತಾನದಲ್ಲಿ ನಡೆಯುವ ಅತ್ಯಾಚಾರಗಳಿಂದ ಭಾರತದಲ್ಲಿ ಪರಿಸ್ಥಿತಿಯು ಕಲಕಿ ಹೋಗಿರುವುದರಿಂದ, ಮುಂದೆ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸಲು ಎಲ್ಲ ರಾಜಕೀಯ ಪಕ್ಷಗಳೂ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪಂಡಿತ ನೆಹರೂರವರ ಮುಖಂಡತ್ವದಲ್ಲಿ ಸಂಘಟಿತವಾಗಬೇಕೆಂಬ ಅಭಿಪ್ರಾಯವನ್ನು ಹಲವು ರಾಜಕೀಯ ವೃತ್ತಗಳು ಹೊಂದಿರುವುದಾಗಿ ತಿಳಿದುಬಂದಿದೆ. ಪೂರ್ವ ಬಂಗಾಳ ಬಗ್ಗೆ ಚರ್ಚಿಸಲು ಸೋಷಲಿಸ್ಟ್ ನಾಯಕ ಜೈಪ್ರಕಾಶ್ ನಾರಾಯಣರಿಗೆ ಪಂಡಿತ ನೆಹರೂರವರು ಆಹ್ವಾನವಿತ್ತಿರುವುದನ್ನು ನೋಡಿದರೆ ಮುಂದೆ ಕೇಂದ್ರ ಸರ್ಕಾರವು ಪುನರ್ರಚಿತವಾಗುವಾಗ ಸೋಷಲಿಸ್ಟರಿಗೂ ಸ್ಥಾನ ಕೊಡಬಹುದೆಂಬ ಅಭಿಪ್ರಾಯವನ್ನೂ ಹೊಂದಿರುವುದಾಗಿ ಹೇಳಲಾಗಿದೆ.

## ಜಾಡಮಾಲಿಗಳಿಂದ ಒಂದು ದಿನ ಪ್ರದರ್ಶನ ಮುಷ್ಕರ

ಶಿವಮೊಗ್ಗದ ಪಲವುಜಾತಮಾಲಿಗಳು ಮೊನ್ನೆ ದಿನ ರಮಣೆ ತಮ್ಮ ಬೇಡಿಕೆಗಳನ್ನು ಕೊಡಬೇಕೆಂದು ಪ್ರದರ್ಶನ ಸ್ಥಾಪಿಸಿ ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು. ಸಮಿತಿಯವರು ಪರಿಗಣಿಸಿ ಈ ಮನವಿಯನ್ನು ಪರಿಶೀಲಿಸಿದ್ದರೆಂದು ಹೇಳಲಾಗಿದೆ.

## ಲಾಯಕ್ ಅಲಿ ಪರಾರಿಯ ಪ್ರತಿಧ್ವನಿ

ಹೈದರಾಬಾದಿನ ಸೈನ್ಯಗಳ ಕಮಾಂಡರ್ ಮೇ॥ ಜ॥ ಎಲ್. ಎಡ್ರೂಸ್, ಅಲ್ಲಿನ ಸುಪ್ರಸಿದ್ಧ ವರ್ತಕರಾದ ಹಾಜಿ ಬಹದ್ದೂರ್ ಅಹಮದ್ ನವಾಜ್ ಜಂಗ್ ಮತ್ತು ಅವರ ಮಗ ದೋಸ್ತ್ ಮಹಮದ್ ಅಲ್ಲಾದಿನ್ ಇವರು ಲಾಯಕ್ ಅಲಿಯು ಹೈದರಾಬಾದಿನಿಂದ ತಪ್ಪಿಸಿಕೊಂಡು ಹೋಗಲು ಸಹಾಯ ಮಾಡಿದರೆಂಬ ಆಪಾದನೆ ಮೇಲೆ ದಸ್ತಗಿರಿಯಾಗಿದ್ದಾರೆ. ಭಾರತ ಸರ್ಕಾರದ ಇಂಟಲಿಜೆನ್ಸ್ ಶಾಖೆಯ ಡೈರೆಕ್ಟರ್ ಜನರಲ್ ಮಲ್ಲಿಕ್‌ರವರನ್ನು ಲಾಯಖಾಲಿಯ ಪತ್ತೆ ಕಾರ್ಯದಲ್ಲಿ ಸಹಾಯ ನೀಡಲು ಹೈದರಾಬಾದಿಗೆ ಕಳುಹಿಸಲಾಗಿದೆ. ಪಾಸಿಂ ರಜ್ವಿಯ ಬಗ್ಗೆ ವಿಶೇಷ ಎಚ್ಚರಿಕೆಯನ್ನು ಹೊಂದಿರುವುದಾಗಿಯೂ ಅವನ ಬಳಿ ಕಾವಲಿಟ್ಟಿರುವ ಪೋಲೀಸ್ ಪಡೆಯನ್ನು ದ್ವಿಗುಣಗೊಳಿಸಿರುವುದಾಗಿಯೂ ವರದಿಯಾಗಿದೆ.

## ಪಾರ್ಲಿಮೆಂಟ್ ಸಭೆಗೆ ಮಾರ್ಜಾಲ ಪ್ರವೇಶ

ಮೊನ್ನೆ ದಿನ ಸಂಜೆ ದೆಹಲಿಯಲ್ಲಿ ಪಾರ್ಲಿಮೆಂಟ್ ಸಭೆಯು ಸಮಾವೇಶಗೊಂಡಿದ್ದಾಗ ಒಂದು ಬೆಕ್ಕು ಹೇಗೋ ಸಭಾಭವನವನ್ನು ಹೊಕ್ಕಿತು. ಅಲ್ಲಿ ಅದು ಗ್ಯಾಲರಿಯಿಂದ ಸ್ಥಳದಿಂದ ಸ್ಥಳಕ್ಕೆ ಹಾರಿ ಗುಲ್ಲೆಬ್ಬಿಸಿತು. ಪಾರ್ಲಿಮೆಂಟ್ ಸದಸ್ಯರುಗಳು ಅದನ್ನು ಹಿಡಿಯುವ ಪ್ರಯತ್ನದಲ್ಲಿ ವಿಫಲರಾದರು. ಕೊನೆಗೆ ಬೆಕ್ಕು ತಾನಾಗಿಯೇ ಭವನದಿಂದ ಹೊರಕ್ಕೆ ಹೋಯಿತು.

## ಸಿಂಧ್ ಮಾಜಿ ಪ್ರಧಾನಿಗೆ ಮುಸ್ಲಿಂ ಲೀಗಿನ ಬಹಿಷ್ಕಾರ

ಸಿಂಧ್ ಮಾಜಿ ಪ್ರಧಾನಿ ಪೀರ್ ಇಲಾಹಿ ಬಕ್ಷ್‌ರವರು ಮುಸ್ಲಿಂಲೀಗನ್ನು ತ್ಯಜಿಸಿ ಅದಕ್ಕೆ ವಿರುದ್ಧವಾಗಿ ಹೊಸದೊಂದು ಪಕ್ಷವನ್ನು ರಚಿಸಲು ಪ್ರಯತ್ನಿಸಿದರೆಂಬ ಕಾರಣದ ಮೇಲೆ ಅವರು ಇನ್ನು ೫ ವರ್ಷ ಕಾಲ ಮುಸ್ಲಿಂ ಲೀಗಿನಲ್ಲಿರಕೂಡದೆಂದು ನೆನ್ನೆ ದಿನ ಕರಾಚಿಯಲ್ಲಿ ಸಮಾವೇಶಗೊಂಡ ಮುಸ್ಲಿಂ ಲೀಗ್ ಸಭೆಯಲ್ಲಿ ನಿರ್ಣಯಿಸಲಾಯಿತು.

## ಲೇಕ್ ಸಕ್ಸೆಸ್ಸಿನಲ್ಲಿ ಲಯಖಾಲಿ?

ಬಂಧನದಿಂದ ತಪ್ಪಿಸಿಕೊಂಡು ಹೋದ ಹೈದರಾಬಾದಿನ ಮೀರ್ ಲಾಯಖಾಲಿಯು ಲೇಕ್ ಸಕ್ಸೆಸ್ಸಿನಲ್ಲಿರುವನೆಂದು ಉರ್ದು ಪತ್ರಿಕೆಯ ಸುದ್ದಿಯೊಂದು ತಿಳಿಸುತ್ತದೆ.

## ಬಡವರ ಬಳಗ

ಬೆಂಗಳೂರು ಕಬ್ಬನ್ ಪೇಟೆಯಲ್ಲಿರುವ ಬಡವರ ಬಳಗದ ಆರನೆಯ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ವರದಿಯಲ್ಲಿ ಬಳಗದ ಈ ವರ್ಷದ ಕಾರ್ಯಕಲಾಪಗಳೂ, ಜಮಾ ಖರ್ಚುಗಳೂ ಮತ್ತು ಇತರ ವಿಷಯಗಳು ಕೊಡಲ್ಪಟ್ಟಿವೆ.

### ನಿಧನ

ರಾಜಧಾನಿಯ ಕಾಂಟ್ರಾಕ್ಟರ್ ಮಹಜರ್ ಶ್ರೀ ಪುಟ್ಟರಾಮಪ್ಪನವರ ಪುತ್ರಿ; ಹಿಂದೂ ಪತ್ರಿಕೆ ಹಂಚುವ ಶ್ರೀ ರಾಮಸ್ವಾಮಿಯವರ ಪತ್ನಿ ಶ್ರೀಮತಿ ಚಿನ್ನಮ್ಮ ಎಂಬುವರು ನೆನ್ನೆ ದಿನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

## ಚೋರ ಗುರುವಿನ ಶಿಷ್ಯರಿಗೆ ಅರೆಮುಂಡನದ ಮೆರವಣಿಗೆ

ಮಾಗಡಿ ತಾಲ್ಲೂಕು ತಾವರೆ ಕೆರೆಯ ಗಂಗೇನ ಹಳ್ಳಿಯಲ್ಲಿ ಒಬ್ಬ ಕಪಟ ಸನ್ಯಾಸಿಯು ಇಬ್ಬರು ಶಿಷ್ಯರಿಂದ ಕೂಡಿ ಆರು ತಿಂಗಳಿಂದಲೂ ವಾಸಿಸುತ್ತಿದ್ದು ತನ್ನ ಮಠದಲ್ಲಿ ಮಕ್ಕಳಿಲ್ಲದವರು ಬಂದು ಪೂಜೆ ಸಲ್ಲಿಸಿದರೆ ಅವರಿಗೆ ಪುತ್ರ ಸಂತಾನವಾಗುವುದೆಂದು ಅಪಪ್ರಚಾರ ಮಾಡುತ್ತಿದ್ದನು ಇದನ್ನು ನಂಬಿ ಕೆಲವು ದಿವಸಗಳ ಹಿಂದೆ ಟೆಂಗಳೂರಿನ ಇಬ್ಬರು ಪ್ರಾಯದ ಮಹಿಳೆಯರು ಬಂದಾಗ ಅವನ ಮೋಸ ಕೃತ್ಯವು ಬಯಲಿಗೆ ಬಂದಿತೆಂದು ಹೇಳಲಾಗಿದೆ. ಅನಂತರ ಸ್ಥಳೀಯ ರೆವಿನ್ಯೂ ಇನ್ಸ್‌ಪೆಕ್ಟರು ಮಠಕ್ಕೆ ಬರುವ ವೇಳೆಗೆ ಸನ್ಯಾಸಿಯು ಮಾಯವಾಗಿದ್ದನು ಅವನ ಇಬ್ಬರು ಶಿಷ್ಯರನ್ನು ಬಂಧಿಸಲಾಯಿತು. ಪುತ್ರ ಸಂತಾನಾಪೇಕ್ಷೆಯಿಂದ ಬಂದವರು ಅವನ ಮಠದಲ್ಲಿ ಒಂದು ರಾತ್ರಿಯಿದ್ದು ದೇವರ ಅರ್ಚನೆ ನಡೆಸಬೇಕೆಂದು ಸನ್ಯಾಸಿಯು ತಿಳಿಸುತ್ತಿದ್ದನೆಂದೂ ಹೇಳಲಾಗಿದೆ. ಸಿಕ್ಕಿಬಿದ್ದ ಸನ್ಯಾಸಿಯ ಶಿಷ್ಯರನ್ನು ಅರ್ಧ ತಲೆ ಬೋಳಿಸಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಲಾಯಿತೆಂದು ಗೊತ್ತಾಗಿದೆ

### ವಿದ್ಯುಚ್ಛಕ್ತಿ ವೈರ್ ಮೆನ್ ಕೆಲಸಗಾರರ ಸಂಘ

ಮೈಸೂರು ಜಿಲ್ಲಾ ವಿದ್ಯುಚ್ಛಕ್ತಿ ವೈರ್ ಮೆನ್ ಕೆಲಸಗಾರರ ಸಭೆಯು ಕಳೆದ ಮಂಗಳವಾರ ಶ್ರೀ ಟಿ. ಎಸ್. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಲಸಗಾರರು ತಮ್ಮದೇ ಆದ ಒಂದು ಸಂಘವನ್ನು ಸ್ಥಾಪಿಸಿಕೊಂಡು ಕೆಳಗೆ ಕಂಡಂತೆ ಆಡಳಿತವರ್ಗದವರನ್ನು ಚುನಾಯಿಸಿದರು:— ಶ್ರೀ ಗೌಡಪ್ಪ ಉರುಫ್ ಮಾದಯ್ಯ ಅಧ್ಯಕ್ಷರು, ಜನಾಬ್ ಅಹಮದ್ ಉಪಾಧ್ಯಕ್ಷರು, ಶ್ರೀ ಟಿ ಎಸ್. ಸುಬ್ಬಣ್ಣ ಕಾರ್ಯದರ್ಶಿ, ಜ॥ ಜಬ್ಬಾರ್ ಷರೀಫ್ ಸಹಕಾರ್ಯದರ್ಶಿ, ಶ್ರೀ ಸಿ ವೆಂಕಟಪ್ಪ ಖಜಾಂಚಿ

## ಪ್ರಾಣವನ್ನು ರಕ್ಷಿಸುವ ಬಾಂಬು

ನ್ಯೂಯಾರ್ಕಿನಲ್ಲಿ ನಡೆಯುತ್ತಿರುವ ರೇಡಿಯೋ ಇಂಜನಿಯರುಗಳ ಸಮ್ಮೇಳನದಲ್ಲಿ ಪ್ರಾಣವನ್ನು ಉಳಿಸುವ ಬಾಂಬಿನ ಪ್ರದರ್ಶನವನ್ನು ನಡೆಸಲಾಯಿತು. ಅಥಾಯಕ್ಕೀಡಾದ ವಿಮಾನ ಹಡಗು ಅಥವಾ ಸಬ್‌ಮೇರಿನ್ನುಗಳ ಪ್ಯಾರಲೆಲ್ ಸಂಪರ್ಕವು ಕಡಿದುಹೋದಾಗ ಈ ಬಾಂಬನ್ನು ಅಪುಗಳ ಮೇಲೆ ಹಾಕಿದರೆ ಅದರ ಆಸ್ಫೋಟನೆಯ ಶಬ್ದವು ೩೦೦೦ ಮೈಲಿಗಳ ದೂರ ಕೇಳುವುದೆಂದು ಹೇಳಲಾಗಿದೆ ಅದರಿಂದ ಒಂದು ಬಗೆಯ ರೇಡಿಯೋ ಧ್ವನಿಯು ಹೊರಟು ಹಡಗು, ವಿಮಾನ ಅಥವಾ ಸಬ್‌ಮೆರೀನುಗಳು ಹೊರಟ ಸ್ಥಳಕ್ಕೆ ಸುದ್ದಿ ತಲಪುವುದೆಂದೂ, ಅನಂತರ ರಕ್ಷಣಾ ಪಡೆಗಳನ್ನು ಕಳುಹಿಸಲು ಅನುಕೂಲವಾಗುವುದೆಂದೂ ವರದಿಯಾಗಿದೆ

## ಅಣು ಶಕ್ತಿಯಿಂದ ಸಂಚರಿಸಬಲ್ಲ ಸಬ್‌ಮೆರೀನು

ಅಮೆರಿಕದ ಪಿಟ್ಸ್ ಬರ್ಗಿನಲ್ಲಿರುವ ವೆಸ್ಟಿಂಗ್ ಹೌಸ್ ಎಲೆಕ್ಟ್ರಿಕ್ ಸಂಸ್ಥೆಯವರು ಅಣು ಶಕ್ತಿಯಿಂದ ಸಂಚರಿಸಬಲ್ಲ ಸಬ್‌ಮೆರೀನನ್ನು ಕಂಡುಹಿಡಿದಿರುವುದಾಗಿ ವರದಿಯಾಗಿದೆ ಇದಕ್ಕೆ ಒಂದಾವರ್ತಿ ಅಣುಶಕ್ತಿಯ ಯಂತ್ರವನ್ನು ಜೋಡಿಸಿದಲ್ಲಿ ಮತ್ತೆ ಇದನ್ನು ನಡೆಸುವುದಕ್ಕೋಸ್ಕರ ಪೆಟ್ರೋಲು ಅಥವಾ ಬೇರೆ ಯಾವ ಎಣ್ಣೆಯನ್ನೂ ಉಪಯೋಗಿಸಬೇಕಾಗಿಲ್ಲವೆಂದು ಹೇಳಲಾಗಿದೆ.

### ನಿಧನ

ಕೊಳ್ಳೇಗಾಲದ ಹಿರಿಯ ಪ್ಲೀಡರ್ ಜನಾಬ್ ಬಾರ್, ಮ॥ ಸಿ. ಪಿ ರಾಜಗೋಪಾಲಯ್ಯಂಗಾರ್‌ರವರು ಈ ಮಾಹೆ ೬ನೇ ತಾರೀಖು ತಮ್ಮ ೮೩ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಗಣ್ಯಪ್ರಜೆಯೂ, ಪರೋಪಕಾರಿಗಳೂ ಆಗಿದ್ದರು: ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

## ಶ್ರೀ ಶಾರದಾ ಪೂಜೆ

ರಾಜಧಾನಿಯ ಲಕ್ಷ್ಮೀಪುರಂ ಮಾಧ್ಯಮಿಕ ಶಾಲಾಬಾಲಕರು ಮೊನ್ನೆ ಶಾರದಾ ಪೂಜೆಯನ್ನು ಪುರಸಭಾಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಪ್ರಾರ್ಥನೆ, ಸ್ವಾಗತಗಳಾದಮೇಲೆ ಬಾಲಕರು ಗೀತಾಪಠನ, ಕಾವ್ಯವಾಚನ, ದೇವರನಾಮ ಮತ್ತು ಯೋಗಾಸನಗಳನ್ನು ಪ್ರದರ್ಶಿಸಿದರು ಶಾಲಾ ಬಾಲಕರು ತಮ್ಮ ಸವಿನೆನಪಿಗಾಗಿ ಶಾಲೆಗೆ ಕೊಟ್ಟಿದ್ದ ಶ್ರೀ ರಾಮಕೃಷ್ಣ ಪರಮಹಂಸರ ಭಾವಚಿತ್ರವನ್ನು ಅಧ್ಯಕ್ಷರು ಅನಾವರಣ ಮಾಡಿದರು. ರಾಮಕೃಷ್ಣಾಶ್ರಮದ ಶ್ರೀ ಸೋಮನಾಥಾನಂದಸ್ವಾಮಿಯವರು ಯುಗಪುರುಷ ಶ್ರೀ ರಾಮಕೃಷ್ಣರ ವಾಣಿಯನ್ನು ಚಿತ್ರಿಸಿದನಂತರ ಶ್ರೀಗಳಾದ ಎಚ್. ಸಿ ದೇವರಾಜೇ ಅರಸಿನವರೂ ಎ. ಸೂರ್ಯನಾರಾಯಣ ಶಾಸ್ತ್ರಿಗಳೂ ಬಾಲಕರಿಗೆ ಸಮಯೋಚಿತವಾದ ಹಿತನುಡಿಗಳನ್ನು ಹೇಳಿದರು

ಅಧ್ಯಕ್ಷರಾದ ಶ್ರೀಮಾನ್ ಲಿಂಗಣ್ಣನವರು ಭಾಷಣ ಮಾಡುತ್ತಾ ಬಾಲಕರ ಇಷ್ಟು ಉತ್ಕೃಷ್ಟ ಮಟ್ಟದ ಪ್ರದರ್ಶನವನ್ನು ತಮ್ಮ ೫೮ ವರ್ಷದ ಅನುಭವದಲ್ಲಿ ಇದುವರೆಗೆ ಹೈ ಸ್ಕೂಲು ಕಾಲೇಜುಗಳಲ್ಲಿ ಕೂಡಾ ಕಂಡಿರಲಿಲ್ಲವೆಂದು ಹೇಳಿದರು.

ವಂದನಾರ್ಪಣೆಯಾದ ಮೇಲೆ ಮಂಗಳಾರತಿ ಮತ್ತು ಫಲಾಹಾರ ವಿನಿಯೋಗವಾಯಿತು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

## ಕಾಶ್ಮೀರ ಕವಿಷ… ರದ್ದಾಗುವುದೇ?

ಕಾಶ್ಮೀರ ಸಮಸ್ಯಾ ಪರಿಹಾರಕ್ಕಾ… ನೇಮಿಸಲ್ಪಟ್ಟಿರುವ ವಿಶ್ವ ಸಂಸ್ಥೆಯ ಕ… ಷನ್ನನ್ನು ರದ್ದುಗೊಳಿಸಿ ಅದಕ್ಕೆ ಪ್ರತಿ… ಗಿ ವಿಶ್ವ ಸಂಸ್ಥೆಯು ಸದಸ್ಯರೊಬ್ಬರನ್ನ… ನೇಮಿಸುವ ಬಗ್ಗೆ ಮಾಡಿರುವ ಸಲಹೆ… ನ್ನು ಭಾರತವು ಅಂಗೀಕರಿಸಿರುವುದಾ… ಗೊತ್ತಾಗಿದೆ ಆದರೆ ಹೊಸದಾಗಿ ನೇಮಿ… ಸಲ್ಪಡುವ ಸದಸ್ಯರು ಭಾರತವು ಒಪ್ಪುವ… ತಹವರಾಗಿರಬೇಕೆಂದು ಷರತ್ತು ಹಾಕಿ… ವುದಾಗಿ ಹೇಳಲಾಗಿದೆ.

## ಜಲಜನಕ ಬಾಂಬಿನಿಂದ ಜಗತ್ತೆಲ್ಲಾ ವಿಷಮಯ

ಅಮೆರಿಕದ ಸುಪ್ರಸಿದ್ಧ ವಿಶ್ವ ವಿದ್ಯಾ… ಯಗಳ ೪ ಮಂದಿ ವಿಜ್ಞಾನಿಗಳು ಜಲ… ನಕಬಾಂಬಿನ ಪ್ರಯೋಗದಿಂದ ಉಂಟಾ… ವ ಘೋರ ಪರಿಣಾಮಗಳ ವಿಚಾರವಾ… ಎಚ್ಚರಿಕೆಯನ್ನಿತ್ತಿರುತ್ತಾರೆ. ಭೂ ಲೋ… ದ ಮೇಲಿರುವ ಸಕಲ ಚೇತನನ್ನೂ, ಸಮ… ಸ್ತ ಪದಾರ್ಥಗಳನ್ನೂ ಅದು ವಿಷಮಯ… ವಾಗಿ ಮಾಡಬಲ್ಲದೆಂದು ಅವರು ಅಭಿಪ್ರಾ… ಯ ಪಟ್ಟಿದ್ದಾರೆ


ಉಗಾದಿ ಹಬ್ಬದ ಪ್ರಯುಕ್ತ
ನವೀನವಾದ ಬಾರ್ಡರುಗಳಲ್ಲಿ ಧರ್ಮಾವರಂ ಆರ್ಟ್ ಮತ್ತು ನೂಲು ಸೀರೆಗಳು ಬಂದಿವೆ
ದಯಮಾಡಿ ಭೇಟಿ ಕೊಡಿ
ಗುರುದೇವಾ ಹಾಲ್
ಶಿವರಾಂಪೇಟೆ, ಮೈಸೂರು

ಪ್ರತಿಯೊಂದು ಕುಟುಂಬದವರೂ ಅತ್ಯವಶ್ಯಕವಾಗಿ ನೋಡಬೇಕಾದ ಚಿತ್ರ
ಪ್ರಭುದೇವಾ ಟಾಕೀಸ್
ದಿನವಹಿ 3 ಆಟಗಳು
11-3-50ರಿಂದ : 2ನೇ ವಾರ
ಶೋಭನಾಚಲರವರ
* ಲಕ್ಷ್ಮಮ್ಮ *
ಕೃಷ್ಣವೇಣಿ ಕುಮಾರಿ ರುಕ್ಮಿಣಿ, ಹೇಮಲತಾ, ನಾರಾಯಣ ರಾವ್, ಡಾ॥ ಸುಬ್ಬರಾವ್ ಪಾತ್ರವಹಿಸಿರುವ ತೆಲುಗು ಚಿತ್ರ

ಮದುವೆ ಜವಳಿಗಳಿಗೆ
ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪೂರ್ ಸೀರೆಗಳಿಗೆ
ಎಂ. ವಿ. ಭೋಜಯ್ಯ ಬಿ ಎ. & ಬ್ರದರ್ಸ್
ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು.

ಶ್ರೀ ಗಣೇಶಾ ಟಾಕೀಸ್
10—3—50ರಿಂದ ದಿನವಹಿ ೩ ಪ್ರದರ್ಶನಗಳು
ಜೆಮಿನಿಯವರ ತಮಿಳು ಚಿತ್ರ
- ಚಕ್ರಧಾರಿ -
(ಭಕ್ತ ಗೋರ ಕುಂಬಾರ)
ಚಿತ್ರ - ನಾಗಯ್ಯ, ಪುಷ್ಪವಲ್ಲಿ, ನಾರಾಯಣರಾವ್ ಮತ್ತು ಸೂರ್ಯಪ್ರಭಾ

ಚಾಮುಂಡೇಶ್ವರಿ ಟಾಕೀಸ್
10—3—50ನೇ ಶುಕ್ರವಾರದಿಂದ ಪ್ರತಿದಿನ ೩ ಆಟಗಳು
ಸಿಟಾಡೆಲ್ ಪಿಕ್ಚರ್ಸ್‌ರವರ
ತಮಿಳು ಚಿತ್ರ
ಜ್ಞಾನ - - ಸುಂದರಿ
ಮುಖ್ಯಪಾತ್ರ:- ಟಿ ಆರ್. ಮಹಾಲಿಂಗಂ
ಎಂ ವಿ ರಾಜಮ್ಮ, ಪುಳಿಮೂಟ್ಟೈ,
ಲಲಿತ - ಪದ್ಮಿನಿ

Edited, printed and published by A. R. Nagarajan at Sadhvi Press, D. Subbiah Road, Mysore.

ರೀ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೮] ಶನಿವಾರ ೧೧-೩-೫೦ [ಸಂಚಿಕೆ ೧೮೯

# ಅಕ್ಲಿ ಸರ್ಕಾರದ ಮೇಲೆ ಅವಿಶ್ವಾಸ ಬಿದ್ದುಹೋಯಿತು

## ನೈ ದಂಪತಿಗಳ ಆಗಮನ

ಮೈಸೂರು ೧೧

ಬಾರತದಲ್ಲಿ ಬ್ರಿಟಿಷ್ ಹೈಕಮಿಷನರ್ ರಾಗಿರುವ ಸರ್ ಆರ್ಚಿಬಾಲ್ಡ್ ನೈ ಅವರು ನೆನ್ನೆ ಸಂಜೆ ಪತ್ನೀ ಸಮೇತರಾಗಿ ಇಲ್ಲಿಗೆ ಆಗಮಿಸಿದರು. ನಗರದ ಅನೇಕ ಪ್ರಮುಖರು ಅವರನ್ನು ಭೇಟಿ ಮಾಡಿದ್ದರು.

ಶ್ರೀ ನ್ಯಾಸಾಂಪ್ರದಾಯರು ಈ ದಿನ ಬೆಳಗ್ಗೆ ನೈ ದಂಪತಿಗಳಿಗೆ ಭೇಟಿ ದಯಪಾಲಿಸಿದ್ದರು. ಇಲ್ಲಿನ ಕಾರ್ಯಕ್ರಮವನ್ನು ಮುಗಿಸಿಕೊಂಡು ಅವರು ಬೆಂಗಳೂರಿಗೆ ತೆರಳಿದರು.

### ಹ ರಿ ಕ ಥೆ

ಕೊಪ್ಪಲ್ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನ ಭ್ಯಾಸ್ಕ್ ನಾಳೆ ೬-೩೦ ಘಂಟೆಗೆ ಶ್ರೀ ಎಂ ಎಲ್ ನಾರಾಯಣದಾಸರಿಂದ 'ಶ್ರೀರಾಮಜನನ'ವೆಂಬ ಹರಿಕಥೆಯು ನಡೆಯುವುದು.

ಚಾಮುಂಡಿ ಮೊಹಲ್ಲಾ ಸೀತಾವಿಲಾಸ ಛತ್ರದಲ್ಲಿ ನಾಳೆ ಸಂಜೆ ... ರಾತ್ರಿ ಘಂಟೆಗೆ ... 'ಶ್ರೀನಿವಾಸ ಕಲ್ಯಾಣ'ವೆಂಬ ಹರಿಕಥೆ ನಡೆಯುವುದು.

### ಮತ್ತೆ ನೆಹರೂರವರ ಕಳಕಳಿ

... ಪ್ರೈ ...

ಸಂಘಟಿತ ನೆಹರೂರವರು ... [illegible]

### ಪುನಃ ... ನೌಕರರ ಮುಷ್ಕರವೇ?

ಪೂನಾ ... ಕೇಂದ್ರ ಸರ್ಕಾರದ ... ಇರುವುದು ... ಅವರ ಸಂಬಳ ಸಾರಿಗೆಗಳನ್ನು ... ಮ ಪಡೆಯದೆ ... ತಿಂಗಳು ೧೬ ನೇ ತಾರೀಖಿನಿಂದ ಅವರು ಗಳು ಮುಷ್ಕರ ಹೂಡಬೇಕೆಂದು ... ಸೂಚನೆ ಕೊಟ್ಟಿದ್ದಾರೆ

### ಕೇವಲ ೬ ಸ್ಥಾನಗಳಿಂದ ಲೇಬರ್ ಪಕ್ಷಕ್ಕೆ ಬಹುಮತ

ಬ್ರಿಟನ್ನಿನ ಪಾರ್ಲಿಮೆಂಟ್ ... ಕನ್ಸರ್ವೇಟಿವ್ ಪಕ್ಷ ... ಲಿಬರಲ್ ಪಕ್ಷದವರು ... ಒಂದುದರಿಂದ ಲೇಬರ್ ಪಕ್ಷಕ್ಕೆ ಕೇವಲ ೬ ಸ್ಥಾನಗಳಿಂದ ಬಹುಮತ ದೊರಕಿದೆಯೆಂದು ಹೇಳಲಾಗಿದೆ

### ಪಾಕಿಸ್ತಾನದಿಂದ ಪರಿಹಾರ ಪಡೆಯಲು ಯತ್ನ

ಪೂರ್ವ ಬಂಗಾಳದಿಂದ ... ನಿರಾಶ್ರಿತರಿಗೆ ... ಪಾಕಿಸ್ತಾನ ... ವನ್ನು ಪಡೆಯಲು ... [illegible]

... [illegible]

## ವಿದ್ಯಾ ಪ್ರಚಾರದಲ್ಲಿ ಖಾಸಗಿ ಸಂಸ್ಥೆಗಳ ಸಹಕಾರ ಅಗತ್ಯ

ವಿದ್ಯಾವರ್ಧಕ ಶಾಲಾ ವಾರ್ಷಿಕೋತ್ಸವದಲ್ಲಿ ಕೆ ಸಿ ರೆಡ್ಡಿಯವರ ಭಾಷಣ

ಮೈಸೂರು ೧೧

ನೆನ್ನೆ ಸಂಜೆ ... ವಿದ್ಯಾವರ್ಧಕ ... ವಾರ್ಷಿಕ ... ಮುಖ್ಯಮಂತ್ರಿ ... [illegible]

... ವಿದ್ಯಾ ಪ್ರಚಾರ ... [illegible]

... ಖಾಸಗಿ ಸಂಸ್ಥೆಗಳ ... ವಿದ್ಯಾಭ್ಯಾಸ ಕ್ರಮವನ್ನು ... ಅವಶ್ಯಕವಾದ ... ನ್ನು ... ಸ್ವೀಕರಿಸಿದರು.

ಬಹುಮಾನ ವಿತರಣೆ ... ನಡೆದು ... ಮುಕ್ತಾಯವಾಯಿತು

### ನ್ಯಾಯಾಂಗ ಸಚಿವರು ಶೃಂಗೇರಿಗೆ

ಶೃಂಗೇರಿ ... ಸ್ವಾಮಿಗಳವರ ... ನ್ಯಾಯಾಂಗ ಸಚಿವ ಶ್ರೀ ಟಿ. ... ಅವರು ನಾಳೆ ... ಶೃಂಗೇರಿಗೆ ... ಗೊತ್ತಾಗಿದೆ

### ... ಪಕ್ಷದ ... ಪ್ರಮುಖರು ...

... [illegible]

## ಪುಟ್ಟರಾಜ ಅರಸರ ನಿವೃತ್ತಿ ಪ್ರಕರಣ

ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಆರ್ ಪುಟ್ಟರಾಜ ಅರಸರ ನಿವೃತ್ತಿ ಬಗ್ಗೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳು ನಡೆದವು. ಸರ್ದಾರ್ ವಲ್ಲಭಭಾಯಿ ಪಟೇಲರು ಪ್ರಶ್ನೆಗಳಿಗೆ ಉತ್ತರ ... ಸಂಸ್ಥಾನದ ನ್ಯಾಯಮೂರ್ತಿ ... ಅವರನ್ನು ... ಮೈಸೂರು ಸರ್ಕಾರವು ... ಶ್ರೀ ಅರಸರವರು ... ಪ್ರಾರ್ಥನಾ ಪತ್ರವು ... ನ್ಯಾಯಮೂರ್ತಿಗಳ ... ಈ ಪ್ರಕರಣ ... ಸರ್ದಾರ್ ಪಟೇಲರು ತಿಳಿಸಿದರು.

○ಗೆಜೆಟೆಡ್ ಹುದ್ದೆಗಳಿಗೆ ನೌಕರರನ್ನು ನೇಮಿಸುವ ಬಗ್ಗೆ ಕೇಂದ್ರ ಸರ್ಕಾರದವರು ಮುಂದಿನ ತಿಂಗಳು ... ದಲ್ಲಿ ಬೆಂಗಳೂರಿಗೆ ಭೇಟಿ ಕೊಡುವ ... ಮೈಸೂರು ಸರ್ಕಾರದ ಸಂಸ್ಥಾನದ ಗೆಜೆಟೆಡ್ ಅಧಿಕಾರಿಗಳ ... ಪಟ್ಟಿಯನ್ನು ತಯಾರಿಸಿದ್ದಾರೆ

§ ಸಂಸ್ಥಾನದ ಅಸಿಸ್ಟೆಂಟ್ ಕಮಿಷನರ್ ... ಬಂದಿರುವ ... ಸಂಬಂಧ ... ವಿಚಾರಣೆ ನಡೆ... ಗೊತ್ತಾಗಿದೆ

### ಅಕ್ಲಿ ಸರ್ಕಾರಕ್ಕೆ ಅದ್ಭುತ ಜಯ

ಬ್ರಿಟನ್ನಿನಲ್ಲಿ ... ಕನ್ಸರ್ವೇಟಿವ್ ... ಅಕ್ಲಿ ಸರ್ಕಾರದ ಮೇಲೆ ... ಈ ... [illegible]

## ಬಡ್ಜೆಟ್ಟಿನಲ್ಲಿ ೧ ಲಕ್ಷ ರೂ ಉಳಿತಾಯ

ಹೆಚ್ಚಿನ ಸುಂಕಗಳನ್ನು ವಿಧಿಸುವುದಿಲ್ಲ

ಸ್ವಂ ವರ್ತಮಾನ] ಬೆಂಗಳೂರು ೧೧

ಮಂತ್ರಿ ಮಂಡಲದ ಸಭೆಯು ನೆನ್ನೆ ಸಮಾವೇಶಗೊಂಡು ಬಡ್ಜೆಟ್ ಮೇಲಿನ ಅಭಿಪ್ರಾಯ ಪರಿಶೀಲನೆಯನ್ನು ನಡೆಸಿತು. ಬರುವ ವರ್ಷದ ಬಡ್ಜೆಟ್ಟಿನಲ್ಲಿ ೧೩ ಚಿಲ್ಲರೆ ಕೋಟಿ ಆದಾಯವೂ ೧೩ ಕೋಟಿ ಚಿಲ್ಲರೆ ರೂಗಳ ವೆಚ್ಚವೂ ಇದ್ದು ಸುಮಾರು ಒಂದು ಲಕ್ಷ ರೂ ಉಳಿತಾಯವಾಗುವುದೆಂದು ಅಂದಾಜು ಮಾಡಲಾಗಿದೆ. ಈ ಬಡ್ಜೆಟ್ಟಿನಲ್ಲಿ ಕೇಂದ್ರ ಸರ್ಕಾರದವರು ೫ ವರ್ಷ ಕಾಲ ಸಂಸ್ಥಾನಕ್ಕೆ ಪ್ರತಿ ವರ್ಷ ಕೊಡಲಿರುವ ೨,೩೭,೦೦,೦೦೦ ರೂಗಳು ಸೇರಿವೆ. ಈ ಸಾರಿ ಹೆಚ್ಚಿನ ರೀತಿಯ ಯಾವ ಸುಂಕವನ್ನೂ ವಿಧಿಸುವುದಿಲ್ಲವೆಂದೂ ಹೇಳಲಾಗಿದೆ

§ ಬೆಂಗಳೂರಿನ ನ್ಯಾಯ ಖಾತೆಯ ಕಛೇರಿಗಳ ನೌಕರರ ಸಭೆಯು ನಾಳೆ ಸಮಾವೇಶಗೊಂಡು ತಮ್ಮ ಕಛೇರಿಗಳಲ್ಲಿ ಹೊರಗಿನ ಕಾರಕೂನರನ್ನು ಅಧಿಕಾರಕ್ಕೆ ನೇಮಿಸಕೂಡದೆಂದು ನಿರ್ಣಯ ಮಾಡಲಿರುವರು. ಈ ನಿರ್ಣಯದ ಪ್ರತಿಯನ್ನು ಶ್ರೀ ನ್ಯಾಸಾಂಪ್ರದಾಯರವರಿಗೂ ಕಳುಹಿಸಲಾಗುವುದೆಂದು ಗೊತ್ತಾಗಿದೆ.

§ ಶ್ರೀ ಎ ಜಿ ಬಂದೀಗೌಡರನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಧ್ಯಕ್ಷರನ್ನಾಗಿಯೂ, ಶ್ರೀ ಕೆ ಮ್ಯಾಥ್ಯೂರವರನ್ನು ಸದಸ್ಯರನ್ನಾಗಿಯೂ ನೇಮಿಸಲಾಗುವುದೆಂದು ಖಚಿತವಾಗಿ ಗೊತ್ತಾಗಿದೆ. ... ಸ್ಥಾನಕ್ಕೆ ಮಾಜಿ ಸಚಿವ ಶ್ರೀ ... ಸಿದ್ದಪ್ಪನವರಿಗೆ ಅ... ಹೋಗಿರುವುದಾಗಿ ಹೇಳಲಾಗಿದೆ

## ಅಶೋಕ ಚಕ್ರವು ಧರ್ಮದ ಮೂಲ ಸಂಕೇತ

ಎ. ಎಂ. ಸಿ ಸಿ.ಯಲ್ಲಿ ಅಧ್ಯಕ್ಷ ಸಿದ್ದಲಿಂಗಯ್ಯನವರ ಭಾಷಣ

ವಿ ಸಂ.ಕಂ.] ಬೇಲೂರು ೧೧

ಅಖಿಲ ಮೈಸೂರು ಕಾಂಗ್ರೆಸ್ ಸಮ್ಮೇಳನದ ಅಂಗವಾಗಿ ಈದಿನ ಬೆಳಗ್ಗೆ ಇಲ್ಲಿನ ಸರೋಜಿನಿ ನಗರದಲ್ಲಿ ಅಧ್ಯಕ್ಷ ಶ್ರೀ ಟಿ. ಸಿದ್ದಲಿಂಗಯ್ಯನವರು ಭಾರತ ರಾಷ್ಟ್ರಧ್ವಜವನ್ನು ಹಾರಿಸಿದರು ಆ ಸಂದರ್ಭದಲ್ಲಿ ಭಾಷಣ ಮಾಡುತ್ತಾ ಅವರು ಕೆಳಗಿನಂತೆ ತಿಳಿಸಿದರು.

ಅಶೋಕ ಚಕ್ರವು ರಾಷ್ಟ್ರಜೀವನದಲ್ಲಿ ಪವಿತ್ರ ಧರ್ಮದ ಮೂಲ ಸಂಕೇತ. ಧರ್ಮ ಕ್ಷಾಂತಿ ... ಸಂಭವಿಸಿದರೆ ಸಮಾಜದ ಸ್ವತ್ವವೇ ಅಳಿದು ಹೋಗಿ ಅಪಾರ ತ್ಯಾಗದಿಂದ ಗಳಿಸಿದ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲುವುದು. ಅಧಿಕಾರ ಲಾಲಸೆಯಿಂದ ಪ್ರಜೆಗಳಲ್ಲಿ ಅನೀತಿಯು ತಲೆದೋರಿದೆ. ರಾಷ್ಟ್ರದ ಭದ್ರತೆ ಮತ್ತು ಸ್ವಾತಂತ್ರ್ಯದ ರಕ್ಷಣೆಗಾಗಿ ಪ್ರಜೆಗಳು ಅಶೋಕ ಚಕ್ರವರ್ತಿಯ ಆದರ್ಶಗಳನ್ನು ಅನುಸರಿಸಿ ಎಲ್ಲರೂ ಪ್ರಜಾ ಸೇವೆಯಲ್ಲಿ ನಿರತರಾಗಬೇಕು

### ಅಧ್ಯಕ್ಷರ ಮೆರವಣಿಗೆ ರದ್ದು

ನೆನ್ನೆ ಸಂಜೆ ನಡೆಯಬೇಕಾಗಿದ್ದ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆಯು ಅನಾರೋಗ್ಯದ ನಿಮಿತ್ತ ಶ್ರೀ ಸಿದ್ದಲಿಂಗಯ್ಯನವರು ತಿಳಿಸಿದ ಮೇರೆಗೆ ಅದನ್ನು ರದ್ದು ಮಾಡಲಾಯಿತು.

## ಎ. ಎಂ. ಸಿ. ಸಿ. ಅಧಿವೇಶನ

### ಸ್ವಾಗತಾಧ್ಯಕ್ಷರ ಭಾಷಣ

ವಿ ಸು] ಬೇಲೂರು ೧೧

ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನವು ಇಲ್ಲಿ ಈ ದಿನ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಎಸ್. ಬೋರಣ್ಣಗೌಡರು ಕೆಳಗೆ ಕಂಡಂತೆ ಭಾಷಣ ಮಾಡಿದರು.

ಇತಿಹಾಸ ಪ್ರಸಿದ್ಧವೂ, ಶಿಲ್ಪಕಲಾಕುಶಲತೆಯ ನೆಲೆವೀಡೂ ಆಗಿರುವ ಬೇಲೂರಿನಲ್ಲಿ ಸೇರುವ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನಕ್ಕೆ ತಮ್ಮೆಲ್ಲರನ್ನೂ ಸ್ವಾಗತಿಸಲು ಅತ್ಯಾನಂದವೆನಿಸುತ್ತದೆ. ಕನ್ನಡ ಸಾಮ್ರಾಜ್ಯದ ಕೇಂದ್ರವಾಗಿದ್ದ ನಮ್ಮ ನಾಡಿನ ಕೀರ್ತಿ ಶಿಖರವೋ ಎಂಬಂತೆ ಕರೆಯುತ್ತ ನಿಂತಿರುವ ಇಲ್ಲಿಯ ಕಲಾಸ್ಥಭವದ ಹಿನ್ನೆಲೆಯಲ್ಲಿ ನಾವು ಸೇರಿರುವುದು ಒಂದು ಹೊಸ ಕಳೆಯನ್ನು ತಂದಂತಾಗಿದೆ. ದೇಶದ ದಾಸ್ಯವನ್ನು ನೀಗಲು ನಮ್ಮ ಜಿಲ್ಲೆಯು ತನ್ನ ಪಾಲಿನ ಕರ್ತವ್ಯಮಾಡಿ ಬಲಿದಾನವನ್ನು ಸಲ್ಲಿಸಿದೆ. ಇದನ್ನೆಲ್ಲಾ ನೆನಸಿ ಎ. ಎಂ. ಸಿ. ಸಿ. ಸಭೆಯನ್ನು ಇಲ್ಲಿ ಸೇರಿಸಲು ಅವಕಾಶಮಾಡಿಕೊಟ್ಟಿದ್ದು ಸೂಕ್ತವೂ ಮತ್ತು ಸ್ವಾಗತಾರ್ಹವೂ ಆಗಿದೆ. ಇದಕ್ಕೆ ಅನುವು ಮಾಡಿಕೊಟ್ಟ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನಾವು ಕೃತಜ್ಞತೆಯನ್ನು ಸೂಚಿಸ ಬಯಸುತ್ತೇವೆ.

ಮೈಸೂರು ದೇಶದ ನಾನಾ ಮೂಲೆಗಳಿಂದ, ಜನರ ಪ್ರತಿನಿಧಿಗಳಾಗಿ ಇಲ್ಲಿ ನೆರೆದಿರುವ ಸಮಸ್ತರಿಗೂ ಸ್ವಾಗತವನ್ನು ಬಯಸುತ್ತೇನೆ.

ನಾವು ಇಲ್ಲಿ ಒಂದು ಅತ್ಯಂತ ಮಹತ್ವಪೂರ್ಣ ಕಾಲದಲ್ಲಿ ಸೇರಿದ್ದೇವೆ. ಅನೇಕ ವಿಷಯಗಳಲ್ಲಿ ಅನಿಶ್ಚಿತ ಪರಿಸ್ಥಿತಿಯಿದೆ. ಮುಂದೇನಾಗುವುದೋ ಎಂದು ಕಾತರತೆಯ ಕಾಲವಿದಾಗಿದೆ. ಕಾಶ್ಮೀರದ ಪ್ರಶ್ನೆ, ಪೂರ್ವ ಪಶ್ಚಿಮ ಬಂಗಾಳಗಳ ಪ್ರಶ್ನೆ ನಮ್ಮ ಮುಂದೆ ಬಂದು ನಿಂತಿವೆ. ಇದನ್ನು ಅತ್ಯಂತ ದಕ್ಷತೆಯಿಂದಲೂ ತಾಳ್ಮೆ, ದೂರದೃಷ್ಟಿಯಿಂದಲೂ ಪರಿಹರಿಸಬೇಕಾಗಿದೆ.

ದೇಶದ ಅನೇಕ ಆಂತರಿಕ ಸಮಸ್ಯೆಗಳು ನಮ್ಮೆದುರು ನಿಂತಿವೆ. ಇವನ್ನು ನಾವು ವಿವೇಚನೆ ಮಾಡಿ ಬಗೆಹರಿಸಲು ಪ್ರಯತ್ನಿಸಬೇಕು. ನಿಷ್ಪಕ್ಷಪಾತವಾಗಿ ಸರ್ಕಾರದವನ್ನು ಟೀಕಿಸುವುದರಿಂದ ನಮ್ಮ ಕೈಗಳು ಬಗೆಹರಿದಂತಾಗುವುದಿಲ್ಲ. ಭಾರತದೇಶವು ಬೇಗನೆ ಮತ್ತೆ ಯಾವುದೇ ದೇಶವೂ ಪುನಶ್ಚೇತನ ಹೊಂದಿಲ್ಲ. ದೇಶವು ಇಬ್ಭಾಗವಾಗಿ ಆರ್ಥಿಕವಾಗಿ ಕುಂಠಿತವಾಗಿದ್ದರೂ, ಈ ಎರಡು ವರ್ಷದಲ್ಲೇ ದೇಶವು ಎಷ್ಟೋ ಮಟ್ಟಿಗೆ ಚೇತರಿಸಿಕೊಂಡಿದೆ. ಅಲ್ಲದೆ ದೇಶದ ಆಡಳಿತದಲ್ಲಿ ಇದ್ದ ಭೇದವು ಮಾಯವಾಗಿ ಅನೇಕ ಹಿಮಾಚಲ ಪರ್ಯಂತ ಒಂದೇ ವಿಧವಾದ ಆಡಳಿತವು ಬಂದು ಇಡೀ ಭರತಖಂಡವೇ ಒಂದು ಎಂಬ ರೀತಿಯಾಗಿದೆ.

ದೇಶವು ಇಷ್ಟು ಪ್ರಬಲವಾಗುತ್ತಿದ್ದರೂ ಅದರೊಡನೆ ಕಾಂಗ್ರೆಸ್ ಸಂಸ್ಥೆ ಬೆಳೆಯುತ್ತಿಲ್ಲ. ಸಂಸ್ಥೆಯಲ್ಲಿ ಸಡಿಲತೆ ಬರುತ್ತಿದೆ. "ಸಂಘಟನೆ"ಯ ಕಡೆಗೆ ಕೆಲಸಗಾರರ ಲಕ್ಷ್ಯ ಹೋಗುವುದು ತಪ್ಪಿದೆ. ಎಲ್ಲಾ ಕಾಂಗ್ರೆಸ್ಸಿಗರೂ ಆಡಳಿತದ ಕಡೆಗೆ ನೋಡುತ್ತಿದ್ದಾರೆಯೇ ವಿನಃ ಸಂಸ್ಥೆಯ ಕಡೆ ನೋಡುವುದಿಲ್ಲ. ಆಡಳಿತದ ಕಡೆ ನೋಡಿದರೆ ವೈಯಕ್ತಿಕವಾಗಿ ಲಾಭ ಪಡೆಯಬಹುದೆಂಬ ಚಪಲ ಕೆಲವು ಕಾಂಗ್ರೆಸ್ ಕೆಲಸಗಾರರಿಗೆ ಮೂಡಿರುವಂತಿದೆ. ಇದರಲ್ಲಿ ಮುಂದಾಳುಗಳ ತಪ್ಪೂ ಕಡಿಮೆಯಿಲ್ಲ. ಸಂಸ್ಥೆಯ ಸಂಘಟನೆಗೆ, ಬೆಳವಣಿಗೆಗೆ ಅವರು ಕೆಲಸಮಾಡದೆ ಮಂತ್ರಿ ಮಂಡಲ ರಚನೆ, ಅದಕ್ಕೆ ಸಂಬಂಧಪಟ್ಟ ಕೆಲಸದಲ್ಲಿ ಕಾಲವೆಲ್ಲಾ ಕಳೆದರು. ಇದರಿಂದ ಸಂಸ್ಥೆಗೆ ಅಪಾರವಾದ ದ್ರೋಹ ಮಾಡಿದಂತಾಗಿದೆ. ಇಂದಿನ ಈ ಪರಿಸ್ಥಿತಿಗೆ ಇದೇ ಕಾರಣ. ಆಳ್ವಿಕೆಯಲ್ಲಿ ಕಾಣುವ ಈ ಚಪಲತೆ ಮತ್ತು ನಿರ್ಬಲತೆಯ ಪರಿಣಾಮ ಜನತೆಯಲ್ಲಿ ಕಾಂಗ್ರೆಸ್ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಲು ಕಾರಣವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ದೇಶವನ್ನು ಪ್ರಾತ್ಯಕ್ಷಿಕ ಹಾಗೂ ನಿರ್ಮಾಣ ಕಾರ್ಯಭಾರದ ರಾಷ್ಟ್ರವನ್ನಾಗಿ ಕಾಂಗ್ರೆಸ್ಸಿನ ಇರುವಿಕೆಯು ಅತ್ಯಗತ್ಯವಾಗಿರುತ್ತ ಹೀಗೆ ಸಂಸ್ಥೆ ಉಳಿಯಬೇಕಾದರೆ ಈ ಸಂಸ್ಥೆಯಲ್ಲಿ ಕೆಲಸಮಾಡುತ್ತಿರುವವರೂ ಸಂಸ್ಥೆಯ ಬೆಂಬಲದಿಂದ ಸರ್ಕಾರದ ಆಡಳಿತಕ್ಕೆ ಹೋಗಿರುವವರೂ ಅದರ ಭವಿತವ್ಯವನ್ನು ಮರೆಯದೆ ಇದಕ್ಕಾಗಿ ದುಡಿಯಬೇಕು.

ಈಗಾಗಲೇ ನಿರ್ಧಾರವಾಗಿರುವಂತೆ ಮೈಸೂರು ಕಾಂಗ್ರೆಸ್ ಎಂಬುದು ಇನ್ನು ಮೇಲೆ ಇರುವುದಿಲ್ಲ. ಬಹುಶಃ ಇದೇ ಕೊನೆಯ ಅಧಿವೇಶನವಾಗಬಹುದು. ಮುಂದೆ ಹೊಸ ಸನ್ನಿವೇಶಗಳು ರಚನೆಯಾಗಿ ಪ್ರಾಂತ ಕಾಂಗ್ರೆಸ್ಸಿನ ಆಶ್ರಯದಲ್ಲಿ ಕೆಲಸ ಪ್ರಾರಂಭವಾಗಬೇಕಾದುದು ಆವಶ್ಯಕವಾಗಿರುತ್ತೆ.

ಕಾಂಗ್ರೆಸ್ ಸಂಸ್ಥೆಯಲ್ಲಿ ನಾಯಕ ಸ್ಥಾನದಲ್ಲಿ ಇದ್ದವರೇ ಇಂದು ಸರಕಾರ ನಡೆಸುತ್ತಿದ್ದಾರೆ. ಇದರೂ ಆದೇಶದಲ್ಲಿ ಅನೇಕ ಧರ್ಮ ತುಂಬಿ ಸ್ಪಷ್ಟವಾಗಿ ಕಾಣುವುದು ಜಾತಿ ಮತ್ತು ವೈಯಕ್ತಿಕ ಶಕ್ತಿಗಳು ತಮ್ಮ ಮತ್ತು ಸ್ವಾತಂತ್ರ್ಯವನ್ನು ಎದಿಗೊತ್ತಿರುವುದನ್ನು ನಾವು ಕಾಣುತ್ತೇವೆ. ಪರಿಣಾಮವಾಗಿ ಜನತೆಯು ಆನಾದರಣೆಗೂ ಗುರಿಯಾಗುವುದಾಗಿದೆ. ಸಾಮರ್ಥ್ಯಕ್ಕೆ ಬೆಲೆ ಬಂದು ಯೋಗ್ಯರಾದವರಿಗೆ ಸ್ಥಾನವೆಂಬ ಭಾವ ಮೂಡಿರಬೇಕು. ಸ್ವಾರ್ಥ, ಸ್ವಜನ ಪಕ್ಷಪಾತಗಳು ನಿರ್ಮೂಲವಾಗಬೇಕು.

ನಮ್ಮ ಕನ್ನಡ ಪ್ರಾಂತವನ್ನು ಕೂಡಾ ಆಡಳಿತಕ್ಕೆ ಅನುಕೂಲವಾಗುವಂತೆ ನಮ್ಮ ಅಣ್ಣತಮ್ಮಂದಿರ ಹಿತವೂ ಸಾಧಿತವಾಗುವಂತೆ ಮತ್ತು ಅಖಂಡ ಭಾರತಕ್ಕೆ ಪೂರಕವಾಗುವಂತೆ ಬೇಗನೆ ಸಾಧಿಸೋಣ.

## ಅಲ್ಪ ಸಂಖ್ಯಾತರ ಹಿತರಕ್ಷಣೆಗಾಗಿ ಮಂತ್ರಿಗಳ ನೇಮಕ

ಅಲ್ಪ ಸಂಖ್ಯಾತರ ಹಿತರಕ್ಷಣೆಗಾಗಿ ಪೂರ್ವ ಬಂಗಾಳದಲ್ಲಿ ಒಬ್ಬ ಹಿಂದೂ ಮಂತ್ರಿಯನ್ನು ಮತ್ತು ಪಶ್ಚಿಮ ಬಂಗಾಳದಲ್ಲಿ ಒಬ್ಬ ಮುಸಲ್ಮಾನ ಮಂತ್ರಿಯನ್ನೂ ನೇಮಿಸುವ ಬಗ್ಗೆ ಪಶ್ಚಿಮ ಬಂಗಾಳ ಶಾಸನ ಸಭೆಯಲ್ಲಿ ಚರ್ಚೆ ನಡೆಯಿತು. ಪ್ರಧಾನಿ ಡಾ॥ಬಿ. ಸಿ. ರಾಯ್‌ರವರು ಉತ್ತರವಿತ್ತು ಈ ಸಲಹೆಯನ್ನು ತಾವು ಪೂರ್ವ ಪಂಜಾಬ್ ಸರ್ಕಾರಕ್ಕೆ ಕೊಟ್ಟಿರುವುದಾಗಿಯೂ, ಅದಕ್ಕೆ ಇನ್ನೂ ಜವಾಬು ಬಂದಿಲ್ಲವೆಂದೂ ತಿಳಿಸಿದರು.

JOIN NOW

TYPE-WRITING CLASSES

Admissions for Summer Classes of study, are now being received in this institution. Intending candidates may approach the undersigned on any working day.

Sd/- B. Ramanna, Head-master, Commercial Classes, Sri Saradavilasa High School, K. M. Puram, Mysore.

## ಕಾಲಾ ಕಟ್ಟಡಕ್ಕಾಗಿ ಜಮೀನಿನ ದಾನ

ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಡಾ. ಎಂ. ಚನ್ನಬಸಪ್ಪನವರು ೫ನೇ ತಾ॥ ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಹೋಬಳಿ ಬೀಚನಹಳ್ಳಿ ಗ್ರಾಮಕ್ಕೆ ಭೇಟಿ ಕೊಟ್ಟಿದ್ದಾಗ ಕಟ್ಟಬೇಕಾಗಿರುವ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಸದರಿ ಗ್ರಾಮದ ಕೆ. ಟಿ. ಗೌಡರ ಶ್ರೀ ತೋಟದಯ್ಯನವರು ಮಗನಿಗೆ ಸೇರಿದ ಸಾವಿರಾರು ರೂ ಬೆಲೆಬಾಳುವ ಒಂದು ಎಕರೆ ೩ ಗುಂಟೆ ಜಮೀನನ್ನು ಧರ್ಮಾರ್ಥವಾಗಿ ಅಗಲೇ ಕೊಟ್ಟು ಮುಚ್ಚಳಿಕೆಯನ್ನು ಸಹಾ ಬರೆದುಕೊಟ್ಟರು. ೩ ಸಾವಿರ ಪ್ರಜಾ ಸಂಖ್ಯೆಯುಳ್ಳ ಗ್ರಾಮವಾದರೂ ಊರು ಕಡೆಯಿಂದಲೂ ಹೊಳೆ ನದಿಯಿಂದ ಸುತ್ತಲ್ಪಟ್ಟು ಪ್ರಯಾಣಕ್ಕೆ ಸೌಕರ್ಯವಿಲ್ಲದಿದ್ದುದರಿಂದ ಜಿಲ್ಲಾ ಬೋರ್ಡ್ ಅಧ್ಯಕ್ಷರು ಮೈಸೂರಿನಿಂದ ನಂದವಾಡಿ ರಸ್ತೆಯಿಂದ ಈ ಗ್ರಾಮಕ್ಕೆ ೧೦॥ ಮೈಲಿ ರಸ್ತೆ ಮಾಡಿಸಿಕೊಡುವುದಾಗಿ ಭರವಸೆಯಿತ್ತಿರುತ್ತಾರೆ. ಗ್ರಾಮಸ್ಥರು ಅಧ್ಯಕ್ಷರಿಗೂ ಮತ್ತು ಶ್ರೀ ತೋಟದಯ್ಯನವರಿಗೂ ಬಹಳ ಕೃತಜ್ಞರಾಗಿರುತ್ತಾರೆ.

### ಕಾರ್ಮಿಕರ ವಸತಿ ಸೌಕರ್ಯಕ್ಕಾಗಿ ೩ ಕೋಟಿ ರೂ. ಯೋಜನೆ

ಮೈಸೂರು ಸಂಸ್ಥಾನದಲ್ಲೆಲ್ಲಾ ಕಾರ್ಮಿಕರಿಗೆ ಗೃಹ ಸೌಕರ್ಯವನ್ನೊದಗಿಸಲು ಸರ್ಕಾರದವರು ೩ ಕೋಟಿ ರೂ ಗಳ ಒಂದು ಯೋಜನೆಯನ್ನು ತಯಾರಿಸುತ್ತಿದ್ದು, ಅದು ಇನ್ನೂ ಆಲೋಚನೆಯ ಹಂತದಲ್ಲಿರುವುದಾಗಿ ರೂ ಕಾರ್ಮಿಕ ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು.

ಟೆಂಡರ್ ನೋಟೀಸ್

ಮೈಸೂರು ಅರಮನೆ ಗಜಶಾಲಾ ಇಲಾಖೆಗೆ 1950–51ನೇ ಸಾಲಿನಲ್ಲಿ ಅಂದರೆ 1950ನೇ ಏಪ್ರಿಲ್ ೧ನೇ ತಾರೀಖು ಲಾಗಾಯ್ತು 1951ನೇ ಮಾರ್ಚಿ 31ನೇ ತಾರೀಖು ಪೂರ್ತಾ ಬೇಕಾದ ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲ್ ಮಾಡಿರುವ ಟೆಂಡರುಗಳನ್ನು 1950ನೇ ಮಾರ್ಚಿ ೧೫ನೇ ತಾರೀಖು ಮಧ್ಯಾಹ್ನ 12 ಘಂಟೆಯೊಳಗಾಗಿ ಗಜಶಾಲಾ ಇನ್‌ಛಾರ್ಜ್ ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಗಜಶಾಲಾ ಇಲಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಡಿ. ಎನ್. ನೀಲಕಂಠರಾವ್,
ಆಫೀಸರ್ ಇನ್ ಛಾರ್ಜ್
ಅರಮನೆ ಗಜಶಾಲಾ, ಮೈಸೂರು

॥ ಶ್ರೀ ॥

ಗಣೇಶಾ ಟಾಕೀಸ್

10—3—50 ರಿಂದ

ದಿನವೂ 3 ಪ್ರದರ್ಶನಗಳು

ಜೆಮಿನಿಯವರ

ಚಕ್ರಧಾರಿ (ತಮಿಳು)

ಪಾತ್ರ:-ನಾಗಯ್ಯ, ಪುಷ್ಪವಲ್ಲಿ.

ಮದುವೆ ಜವಳಿಗಳಿಗೆ

ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪುರ್ ಸೀರೆಗಳಿಗೆ

ಎಂ. ವಿ. ಭೋಜಯ್ಯ ಅಂಡ್ ಬ್ರದರ್

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಯುಗಾದಿ ಹಬ್ಬದ ಪ್ರಯುಕ್ತ

ನವೀನವಾದ ಡಿಸೈನುಗಳಲ್ಲಿ ಧರ್ಮಾವರಂ ಅರ್ಜ ಮತ್ತು ನೂಲು ಸೀರೆಗಳು ಬಂದಿವೆ

ದಯವಿಟ್ಟು ಭೇಟಿ ಕೊಡಿ

ಗುರುದೇವಾ ಹಾಲ್

ಶಿವರಾಂಪೇಟೆ, ಮೈಸೂರು

ರಾಜಕಮಲ್ ಟಾಕೀಸ್

10—3—50 ರಿಂದ

ಜನಭರಿತವಾದ ೧೨ನೇ ವಾರ

ದಿನವೂ 2 ಪ್ರದರ್ಶನಗಳು

ಜೀವನ

—:ಭೂಮಿಕೆ:—

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

Morning Shows

From 10-3-50 For 4 days

Jesse James Rides Again

With:-Clayton Moore. Linda Stirling

A Republic Serial in 13 Chapters

Edited, printed and published by A. R. Nagarajan at Sadhvi Press, D. Subbiah Road, Mysore.

ರಿ. ನಂ. 793 WEEKLY EDITION ಬಿಡಿ ಪತ್ರಿಕೆ ೬ ಕಾಸು

# ಸಾಧ್ವಿ

ಸಂಪುಟ ೧೪] ಭಾನುವಾರ ೧೨-೩-೫೦ [ಸಂಚಿಕೆ ೩೪

# ಯಶೋಧರಮ್ಮನವರು ಕಾಂಗ್ರೆಸ್ ಅಧ್ಯಕ್ಷಿಣಿ

## ಸೆನೇಟ್ ಸಭೆ

ಮೈಸೂರು ೧೨

ವಿಶ್ವವಿದ್ಯಾಲಯದ ಸೆನೇಟ್ ಸಭೆಯು ಬರುವ ಸೋಮವಾರ ಮತ್ತು ಮಂಗಳವಾರ ಬೆಳಿಗ್ಗೆ ೧೨ ಘಂಟೆಗೆ ವಿಶ್ವವಿದ್ಯಾನಿಲಯದ ಕಛೇರಿಯಲ್ಲಿ ಸಮಾವೇಶಗೊಳ್ಳುವುದು.

## ಉಪನ್ಯಾಸ

ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಇದೇ ೧೩ನೇ ತಾರೀಖು ಸೋಮವಾರ ಸಂಜೆ ೬ ಘಂಟೆಗೆ ಬ್ಯಾಂಕಿನ ಸಭಾಂಗಣದಲ್ಲಿ ಶ್ರೀ ಎಂ. ಎಸ್. ರಾಮಸ್ವಾಮಿಯವರಿಂದ "ಆಹಾರ ಸಮಸ್ಯೆಯನ್ನು ಸಹಕಾರ ಸಂಘಗಳ ಮೂಲಕ ಪರಿಹರಿಸುವ ವಿಧಾನಗಳು" ಎಂಬ ವಿಷಯವಾಗಿ ಭಾಷಣವನ್ನು ಏರ್ಪಡಿಸಲಾಗಿದೆ

## ಭಾರತ ವಾಚನ

ಬಿ. ಸುಬ್ಬಯ್ಯ ರಸ್ತೆಯಲ್ಲಿರುವ ಬ್ರಹ್ಮಾನಂದ ಸ್ವಾಮಿಗಳ ಔಷಧಾಲಯದಲ್ಲಿ ಈ ರಾತ್ರಿ ೬ ಘಂಟೆಗೆ ಗಮಕ ವಿದ್ವಾನ್ ಶ್ರೀ ಅಶ್ವತ್ಥನಾರಾಯಣ ಮತ್ತು ಸಾಹಿತ್ಯ ವಿದುಷಿ ಶ್ರೀಮತಿ ರಮಾಬಾಯಿ ಇವರಿಂದ ಭಾರತ ವಾಚನವು ಜರುಗುವುದು

ಲಿಯಾಕತಲಿಯು ಕರಾಚಿಯಲ್ಲಿರುವನೆಂದೂ, ಇಷ್ಟರಲ್ಲೇ ಅವನು ಯೂರೋಪಿಗೆ ತೆರಳುವನೆಂದೂ ಇತ್ತೀಚಿನ ಸುದ್ದಿಯಿಂದ ತಿಳಿಯುತ್ತದೆ

## ಕೇಂದ್ರ ಹಣಕಾಸಿನ ಮಂತ್ರಿಯ ರಾಜೀನಾಮೆಯೇ?

ಹಣಕಾಸಿನ ಶಾಖೆ ಮಂತ್ರಿ ಮಥಾಯ್, [illegible] ಸೇರಿದವರು. ದೇಶದ ಹಣಕಾಸಿನ ಸ್ಥಿತಿಯನ್ನು ಭದ್ರಪಡಿಸುವುದಕ್ಕೆ ಕೈಗೊಳ್ಳಬೇಕಾದ ಅಗತ್ಯವಾದ ಕ್ರಮಗಳಲ್ಲೂ ಮತ್ತು ಖರ್ಚನ್ನು ಕಡಿಮೆ ಮಾಡುವುದಕ್ಕೂ ಬಹಳ ತೊಂದರೆಯಾಗುವುದೆಂದು ಕೇಂದ್ರ ಮಂತ್ರಿ ಮಂಡಲದ ಕಾಂಗ್ರೆಸ್ ಸದಸ್ಯರು ಅಭಿಪ್ರಾಯಪಟ್ಟಿರುವುದಾಗಿ ವರದಿಯಾಗಿದೆ. ಈ ಕಾರಣದಿಂದ ಹಣಕಾಸಿನ ಮಂತ್ರಿ ಶ್ರೀ ಜಾನ್ ಮಥಾಯ್‌ರವರು ತನ್ನ ಹುದ್ದೆಗೆ ರಾಜೀನಾಮೆ ಕೊಡಬಹುದೆಂದು ಹೇಳಲಾಗಿದೆ. ಆದರೆ ಅವರನ್ನು ಬಿಟ್ಟು ಕೊಡಲು ಪಂಡಿತ ನೆಹರೂರವರು ಇಷ್ಟಪಡುತ್ತಿಲ್ಲವೆಂದೂ ಗೊತ್ತಾಗಿದೆ.

## ಭದ್ರತಾ ಸಮಿತಿಯಲ್ಲಿ ಚೀಣಾಕ್ಕೆ ಮನ್ನಣೆ ಪ್ರಶ್ನೆ

ಚೀಣದಲ್ಲಿರುವ ಎರಡು ಸರ್ಕಾರಗಳ ಪೈಕಿ ಯಾವ ಸರ್ಕಾರಕ್ಕೆ ಮನ್ನಣೆಯನ್ನು ಕೊಡಬೇಕೆಂಬುದೇ ವಿಶ್ವ ಸಂಸ್ಥೆಗೆ ಒಂದು ಸಮಸ್ಯೆಯಾಗಿರುವುದೆಂದೂ ಇದನ್ನು ಪರಿಹರಿಸಲು ಒಂದು ಸಮಿತಿಯನ್ನು ರಚಿಸಿ ಯಾವ ಸರ್ಕಾರ ಹೆಚ್ಚು ಬಲಯುತವಾಗಿದೆಯೆಂದು ಭದ್ರತಾ ಸಮಿತಿಗೆ ವರದಿ ಮಾಡುವಂತೆ ಸೂಚಿಸಬೇಕೆಂದೂ ವಿಶ್ವಸಂಸ್ಥೆ ಅಧ್ಯಕ್ಷ ಮಿ|| ಟ್ರಿಗ್ವಿ ಲೀಯವರು ಸಲಹೆ ಮಾಡಿರುವುದಾಗಿ ಹೇಳಲಾಗಿದೆ

## ವಿದ್ಯಾರ್ಥಿಗಳಿಗೆ ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ

ವಿದ್ಯಾರ್ಜನೆಗಾಗಿ ಪ್ರವಾಸ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ರೈಲ್ವೆ ದರದ ಅರ್ಧ ರಿಯಾಯಿತಿ ಕೊಡಲು ಭಾರತದ ಎಲ್ಲ ರೈಲ್ವೆಗಳಲ್ಲೂ ಏರ್ಪಡಿಸಲಾಗಿದೆ ಇದು ಬರುವ ಏಪ್ರಿಲ್ ತಿಂಗಳಿನಿಂದ ಜಾರಿಗೆ ಬರುವುದು.

## ಯಶೋಧರಾ ದಾಸಪ್ಪನವರು ಕಾಂ|| ಅಧ್ಯಕ್ಷಿಣಿ

ವಿಶೇಷ ತಂತಿ] ಬೇಲೂರು ೧೨

ಅಖಿಲ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರ ಚುನಾವಣೆಯು ನೆನ್ನೆ ನಡೆಯಿತು. ಶ್ರೀಮತಿ ಯಶೋಧರಾ ದಾಸಪ್ಪ ಮತ್ತು ಶ್ರೀ ಎಚ್. ಚನ್ನಯ್ಯನವರು ವಿನಾ ಉಳಿದ ಉಮೇದುವಾರರುಗಳ ಸ್ಪರ್ಧೆಯಿಲ್ಲ. ಚುನಾವಣೆಯಲ್ಲಿ ಶ್ರೀಮತಿ ಯಶೋಧರಾ ದಾಸಪ್ಪನವರೇ ಜಯಶೀಲರಾಗಿ ಕಾಂಗ್ರೆಸ್ ಅಧ್ಯಕ್ಷಿಣಿಯಾದರು

ಶ್ರೀಮತಿ ಯಶೋಧರಾ ದಾಸಪ್ಪನವರಿಗೆ [illegible] ಓಟುಗಳೂ, ಶ್ರೀ ಚನ್ನಯ್ಯನವರಿಗೆ [illegible] ಓಟುಗಳೂ ಬಂದುವು

ನೆನ್ನೆ ಮಧ್ಯಾಹ್ನ ೩ ಘಂಟೆಗೆ ಅಧಿವೇಶನವು ಆರಂಭವಾಯಿತು. ಪ್ರಾರ್ಥನೆಯಾದ ನಂತರ ಸ್ವಾಗತಾಧ್ಯಕ್ಷ ಶ್ರೀ ಬೋರಣ್ಣಗೌಡರು ಸ್ವಾಗತ ಭಾಷಣ ಮಾಡಿದರು. ಅನಂತರ ಅಧ್ಯಕ್ಷ ಶ್ರೀ ಟಿ. ಸಿದ್ದಲಿಂಗಯ್ಯನವರು ಭಾಷಣ ಮಾಡಿ ಕಾಂಗ್ರೆಸ್ಸಿನ ಇತಿಹಾಸದ ವಿಮರ್ಶೆ ಮಾಡಿದರು. ಅನಂತರ ಶರತ್‌ಚಂದ್ರಬೋಸ್, [illegible], ಶಿವಮೊಗ್ಗದ ದೊರೆಸ್ವಾಮಿ ಅಯ್ಯಂಗಾರ್ ಇವರುಗಳ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯಗಳು ಅಂಗೀಕೃತವಾದುವು

ಈ ದಿನ ಬೆಳಿಗ್ಗೆ ಶ್ರೀ ಎಸ್. ನಿಜಲಿಂಗಪ್ಪನವರು ರಾಷ್ಟ್ರ ಧ್ವಜಾರೋಹಣ ನಡೆಸಿದರು. ಬೆಳಿಗ್ಗೆ ನಡೆದ ರಹಸ್ಯ ಅಧಿವೇಶನದಲ್ಲಿ ಮಂತ್ರಿಗಳ ಮೇಲಿನ ಹಲವು ಆಪಾದನೆಗಳ ಬಗ್ಗೆ ಪರಿಶೀಲನೆ ನಡೆಯಿತು. ಮಧ್ಯಾಹ್ನ ಬಹಿರಂಗ ಸಭೆಯು ಸೇರುವುದು.

ನೆನ್ನೆ ದಿನ ಸಭೆ ಸೇರುವ ವಿಷಯವಾಗಿ ಸದಸ್ಯರಿಗೆ ಸಮರ್ಪಕ ತಿಳುವಳಿಕೆ ಕೊಟ್ಟಿಲ್ಲವೆಂಬ ಬಗ್ಗೆಯೂ, ಅಧ್ಯಕ್ಷ ಚುನಾವಣೆಯು ಕ್ರಮಬದ್ಧವಲ್ಲವೆಂದೂ ಮುಂತಾಗಿ ಹಲವು ಕ್ರಿಯಾಲೋಪಗಳು ನೆನ್ನೆ ದಿನ ತರಲ್ಪಟ್ಟು ಆ ವಿಷಯದಲ್ಲಿ ಸ್ವಲ್ಪ ಗಲಭೆಯಾಯಿತು. ಶ್ರೀ ಕೆ. ಟಿ. ಭಾಷ್ಯಂರವರು ಕಳೆದ ಹೋದ ಲೋಪದೋಷಗಳನ್ನು ಮನ್ನಿಸಬೇಕೆಂದರು. ವಾದ ವಿವಾದ ಅಷ್ಟರಲ್ಲೇ ಪರ್ಯವಸಾನವಾಯಿತು

ಅಧಿವೇಶನದಲ್ಲಿ ೧೭ ನಿರ್ಣಯಗಳು ಚರ್ಚೆಗೆ ಬಂದಿವೆ. ಅವುಗಳು ಆ ದಿನ ಚರ್ಚಿಸಲ್ಪಡುವುವು

## ಬರ್ಮಾದಲ್ಲಿ ೫ ಸಾವಿರಮಂದಿ ಭಾರತೀಯರಿಗೆ ನಿರುದ್ಯೋಗ

ಬರ್ಮ ರೈಲ್ವೆಯಲ್ಲಿ ಕೆಲಸದಲ್ಲಿದ್ದ ೫೦೦೦ ಮಂದಿ ಭಾರತೀಯರು ಅಲ್ಲಿನ ಪೌರತ್ವವನ್ನು ಸ್ವೀಕರಿಸಲು ನಿರಾಕರಿಸಿದುದರಿಂದ ಅವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಇನ್ನೂ ೨೦೦೦ ಮಂದಿಯನ್ನು ಇದೇ ಕಾರಣದ ಮೇಲೆ ತೆಗೆಯಲಾಗುವುದೆಂದು ಗೊತ್ತಾಗಿದೆ. ಇತರ ೪೦೦೦ ಮಂದಿ ನೌಕರರು ಅಲ್ಲಿನ ಪೌರತ್ವವನ್ನು ಸ್ವೀಕರಿಸಿ ತಮ್ಮ ಕೆಲಸವನ್ನು ಉಳಿಸಿಕೊಂಡಿರುವರಾಗಿಯೂ ವರದಿಯಾಗಿದೆ. ಇಲ್ಲಿ ಕೆಲಸ ಕಳೆದುಕೊಂಡವರಿಗೆ ಭಾರತದ ರೈಲ್ವೆಗಳಲ್ಲಿ ಕೆಲಸ ಕೊಡಬೇಕೆಂದು ಕೇಂದ್ರ ಸರ್ಕಾರವು ಸೂಚನೆ ಕೊಟ್ಟಿರುವುದಾಗಿಯೂ ಗೊತ್ತಾಗಿದೆ

## ಕರ್ನೂಲಿನ ಬಳಿ ರೈಲು ಉರುಳಿತು

ಮೊನ್ನೆ ರಾತ್ರಿ ಕರ್ನೂಲಿನಿಂದ ದ್ರೋಣಾಚಲದ ಕಡೆ ಹೊರಟ ರೈಲನ್ನು ತಪ್ಪು ಲೈನಿನ ಮೇಲೆ ತಿರುಗಿಸಿ ಬಿಟ್ಟುದರಿಂದ ಅದು ಮಾರ್ಷಲಿಂಗ್ ಯಾರ್ಡ್ ಕೊನೆಗೆ ಡಿಕ್ಕಿ ಹೊಡೆಯಿತು. ಅದರ ಪರಿಣಾಮವಾಗಿ ೧ ಇಂಜನ್ನು, ೩ ವ್ಯಾಗನ್ನುಗಳು ಉರುಳಿದುವು. ಫೈರ್‌ಮ್ಯಾನ್ ಮತ್ತು [illegible] ಜನಗಳಿಗೆ ಪೆಟ್ಟು ತಗಲಿ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು

## ಬೊಂಬಾಯಿನಲ್ಲಿ ಪಾಕಿಸ್ತಾನದ ಗೂಢಚಾರನ ದಸ್ತಗಿರಿ

ಪಾಕಿಸ್ತಾನದ ಪರವಾಗಿ ಭಾರತದಲ್ಲಿ ಗೂಢಚಾರನಾಗಿದ್ದ ಒಬ್ಬ ಪಂಚಮ ದಳದವನನ್ನು ಬೊಂಬಾಯಿ ಪೋಲೀಸರು ಬಂಧಿಸಿದ್ದಾರೆ. ಹೈದರಾಬಾದ್ ಸರ್ಕಾರಕ್ಕೆ ಸಂಬಂಧಪಟ್ಟಿರುವ ರಹಸ್ಯ ಕಾಗದ ಪತ್ರಗಳು ಅವನಲ್ಲಿ ದೊರೆತುವೆಂದು ಗೊತ್ತಾಗಿದೆ. ಹೆಚ್ಚಿನ ತನಿಖೆಗಾಗಿ ಅವನನ್ನು [illegible]ಗೆ ಕಳುಹಿಸಲಾಗಿದೆಯೆಂದು ತಿಳಿದು ಬಂದಿದೆ

## ಪಂಜಾಬಿನಲ್ಲಿ ಬಸ್ಸುಗಳ ರಾಷ್ಟ್ರೀಕರಣ ಸಧ್ಯಕ್ಕಿಲ್ಲ

ಪಂಜಾಬಿನಲ್ಲಿ ಮೋಟಾರು ಪ್ರಯಾಣದ ರಾಷ್ಟ್ರೀಕರಣವನ್ನು ಇನ್ನು ಮೂರು ವರ್ಷ ಮುಂದೂಡಬೇಕೆಂದು ಅಲ್ಲಿನ ಶಾಸನ ಸಭೆಯಲ್ಲಿ ತೀರ್ಮಾನಿಸಲಾಗಿದೆ

## ರಾಜಪ್ರಮುಖರ ಸಭೆಗೆ ನಿಜಾಮರು ಹೋಗುವುದಿಲ್ಲ

ಈ ತಿಂಗಳು ೧೫ನೇ ತಾರೀಖು ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರು ಕರೆದಿರುವ ಗವರ್ನರುಗಳ ಮತ್ತು ರಾಜಪ್ರಮುಖರುಗಳ ಸಮ್ಮೇಳನಕ್ಕೆ ಹೈದರಾಬಾದಿನ ನಿಜಾಮರು ಹೋಗುವುದಿಲ್ಲವೆಂದು ಹೇಳಲಾಗಿದೆ. ಭಾರತವು ಸ್ವತಂತ್ರವಾಗುವುದಕ್ಕೆ ಮುಂಚೆ ನಿಜಾಮರು ಯಾವ ಸಂದರ್ಭದಲ್ಲೂ ದೆಹಲಿಗೆ ಹೋಗುತ್ತಿರಲಿಲ್ಲವೆಂದೂ, ಈಗಲೂ ಅವರು ಅದೇ ಪದ್ಧತಿಯನ್ನು ಅನುಸರಿಸಬಹುದೆಂದೂ ಊಹಿಸಲಾಗಿದೆ.

## ಬಾಳೆತೋಟದ ಜಗಳದಲ್ಲಿ ಇರಿತದ ಪ್ರಸಂಗ

### ಒಬ್ಬನು ಗುಂಡಿಗೆ ತುತ್ತಾದ

ಚಿಕ್ಕಮಗಳೂರಿನ ಬಳಿ ಜನ್ನಾಪುರ ಎಂಬಲ್ಲಿ ಕಳೆದ ಮಂಗಳವಾರ ಎರಡು ಪಕ್ಷಗಳವರಿಗೆ ಬಾಳೆತೋಟದ ಬಗ್ಗೆ ಸಂಭವಿಸಿದ ವ್ಯಾಜ್ಯದಲ್ಲಿ ಮಂಡಗೆರೆ ಪೋಲೀಸ್ ಇನ್ಸ್‌ಪೆಕ್ಟರು ವಿಚಾರಣೆ ನಡೆಸುತ್ತಿದ್ದರು. ಎರಡು ಪಕ್ಷಗಳವರಿಗೂ ಮಾತಿಗೆ ಮಾತು ಬೆಳೆದು ಪರಿಸ್ಥಿತಿಯು ಬಿಗಡಾಯಿಸಿ ಗಿಡ್ಡೇಗೌಡನೆಂಬಾತನು ಇರಿಯಲ್ಪಟ್ಟನು. ಕಾಲಮರದ ಮಲ್ಲೇಗೌಡನೆಂಬುವನು ಗುಂಡಿಗೆ ತುತ್ತಾಗಿ ಮಡಿದನು.

## ಗಂಡನು ಸ್ನಾನಮಾಡದಿದ್ದುದಕ್ಕಾಗಿ ವಿಚ್ಛೇದನದ ಅರ್ಜಿ

ತನ್ನ ಗಂಡನು ಎಂಟು ತಿಂಗಳಿಂದಲೂ ಸ್ನಾನ ಮಾಡದಿದ್ದುದರಿಂದ ಕೈರೋವಿನ ಒಬ್ಬ ಮಹಿಳೆಯು ಅವನಿಂದ ವಿಚ್ಛೇದನಕ್ಕೆ ಅನುಮತಿ ಬೇಡಿ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಿದ್ದಳು. ಗಂಡನು ವಾದಿಸುತ್ತಾ ತಾನು ಸ್ನಾನ ಮಾಡುತ್ತಿಲ್ಲವಾದರೂ ಸುಗಂಧ ದ್ರವ್ಯಗಳಿಂದ ತನ್ನ ಶರೀರವನ್ನು ಶುಚಿಯಾಗಿಟ್ಟುಕೊಂಡಿರುವುದಾಗಿ ತಿಳಿಸಿದನು. ಆದರೂ ಹೆಂಡತಿಯ ಪ್ರಾರ್ಥನೆಯನ್ನು ಮನ್ನಿಸಿ ನ್ಯಾಯಾಧೀಶರು ವಿಚ್ಛೇದನಕ್ಕೆ ಅನುಮತಿಯಿತ್ತಿದ್ದಾರೆ.

## ಯಶವಂತಪುರದ ಬಳಿ ರೈಲು ಉರುಳಿಸುವ ಪ್ರಯತ್ನ

ಮೊನ್ನೆ ದಿನ ತುಮಕೂರಿನಿಂದ ಬೆಂಗಳೂರಿಗೆ ಬರುತ್ತಿದ್ದ ಗೂಡ್ಸ್ ಗಾಡಿಯು ಯಶವಂತಪುರದ ಬಳಿ ಬಂದಾಗ ಒಂದು ಸೇತುವೆಯ ಹತ್ತಿರ ಒಂದು ವಿಧದ ಶಬ್ದವು ಬಂದುದರಿಂದ ಡ್ರೈವರನು ಸಂದೇಹಪಟ್ಟು ರೈಲನ್ನು ನಿಲ್ಲಿಸಿದನು. ಸೇತುವೆಯ ಮೇಲೆ [illegible] ಮಾಡುವಲ್ಲಿ ಕಂಬಿಯ ಪಕ್ಕದಲ್ಲಿ ಮೊಳೆಯನ್ನು ಹೊಡೆದಿದ್ದುದು ಪತ್ತೆಯಾಯಿತು. ಅನಂತರ ಅದನ್ನು ತೆಗೆದುಹಾಕಿ ರೈಲನ್ನು ಬಿಟ್ಟುಕೊಂಡು ಬರಲಾಯಿತು. ಈ ಸಂಬಂಧದಲ್ಲಿ ಇಬ್ಬರನ್ನು ಬಂಧಿಸಲಾಗಿದೆ.

## ಪತ್ನಿಯ ಅಸೂಯೆಗಾಗಿ ವಿಚ್ಛೇದನಕ್ಕೆ ಅರ್ಜಿ

ತಾನು ರೇಡಿಯೋ ಕೇಳಿದರೆ ಪರಸ್ತ್ರೀಯ ಧ್ವನಿಯನ್ನು ಕೇಳಬಾರದೆಂದೂ, ಪತ್ರಿಕೆಯನ್ನು ಓದಲು ತೆಗೆದುಕೊಂಡರೆ ಪರಸ್ತ್ರೀಯ ಚಿತ್ರವನ್ನು ನೋಡಬಾರದೆಂದೂ ಅಸೂಯೆಗೊಂಡು ತನ್ನ ಪತ್ನಿಯು ತನ್ನನ್ನು ನಿರ್ಬಂಧಪಡಿಸುತ್ತಿದ್ದುದಕ್ಕಾಗಿ ಅವಳನ್ನು ವಿಚ್ಛೇದನ ಮಾಡಲು ತನಗೆ ಅನುಮತಿ ಕೊಡಬೇಕೆಂದು ಚಿಕಾಗೋವಿನ ವ್ಯಾಪಾರಗಾರನೊಬ್ಬನು ಕೋರ್ಟಿಗೆ ಅರ್ಜಿ ಸಲ್ಲಿಸಿದ್ದನೆಂದೂ, ಕೋರ್ಟು ಅವನಿಗೆ [illegible]

## ವಾರ ಭವಿಷ್ಯ

ತಾ|| ೧೨-೩-೫೦ರಿಂದ ೧೮-೩-೫೦ರ ವರೆಗೆ

ಮೇಷ—ಈ ವಾರ ನಿಮ್ಮಿಂದ ಸತ್ಕಾರ್ಯಗಳು ಜರುಗುವುವು ವ್ಯಾಪಾರ, ಉದ್ಯೋಗಾದಿಗಳು ಪ್ರಗತಿದಾಯಕವಾಗಿರುವುವು. ೧೬-೧೭ ಧನಲಾಭ. ಮೇಲಧಿಕಾರಿಗಳ ಭೇಟಿ.

ವೃಷಭ—ಈ ವಾರದಲ್ಲಿ ನೆಮ್ಮದಿ ಇದ್ದರೂ, ಎಚ್ಚರಿಕೆ. ಆಗತ್ಯ ಸಹನೆ ಮತ್ತು ವಿವೇಕದಿಂದ ವರ್ತಿಸಬೇಕು. ೧೮-೧೫ ಪ್ರವಾಸ ಯೋಗ, ಅಲ್ಪ ಧನಾಗಮನ

ಮಿಥುನ—ಈ ವಾರ ಬಹಳ ನಿರಾಶಾದಾಯಕವಾಗಿರುವುದು. ನಿಮ್ಮ ಸುತ್ತಲೂ ಮೋಸಗಾರರು ಕವಿದುಕೊಳ್ಳುವರು ಆಪ್ತರೂ ಮಿತ್ರದ್ರೋಹವೆಸಗಲು ಹಿಂಜರಿಯರು. ೧೪-೧೫ ಭಯ, ವ್ಯಾಕುಲ.

ಕರ್ಕ—ಆರೋಗ್ಯ ಉತ್ತಮ. ನೌಕರಿ ದಂಧೆಗಳಲ್ಲಿ ಜಯ ಪಕ್ಷಿಯ ಸಹಕಾರ. ಮನೆಯಲ್ಲಿ ಶುಭ ಕಾರ್ಯಗಳ ಸಡಗರ. ೧೩ ಮತ್ತು ೧೭ ಸತ್ಕಾರ್ಯಗಳಿಗಾಗಿ ಧನವ್ಯಯ

ಸಿಂಹ—ಚಿತ್ತ ಚಾಂಚಲ್ಯ ಬಿಡಬೇಕು ಆರೋಗ್ಯ ಉತ್ತಮ ಮನೆಯಲ್ಲಿ ವಿಪರೀತ ಖರ್ಚು. ಅತಿಥಿ ಅಭ್ಯಾಗತರ ಉಪಚಾರಕ್ಕಾಗಿ ಧನವ್ಯಯ. ತಾ||೧೬-೧೭ ಪ್ರವಾಸ ಯೋಗ. ಮಹತ್ವ ಪತ್ರಾಗಮನ.

ಕನ್ಯಾ—ಈ ವಾರ ಶಾಂತಿ ಅಗತ್ಯ ಮಾನಸಿಕ ಕ್ಲೇಶಗಳಿಗೆ ಎಡೆಗೊಡಬಾರದು. ಆರೋಗ್ಯದ ಕಡೆ ಗಮನವಿರಲಿ ನೌಕರಿ ದಂಧೆಗಳಲ್ಲಿ ಜಯ ದೊರೆಯುದು. ೧೩ ಮತ್ತು ೧೬ನೇ ತಾ||ಗಳಲ್ಲಿ ಧನವ್ಯಯ ನಿದ್ರಾ ಭಂಗ

ತುಲಾ—ಆರೋಗ್ಯ ನೆಟ್ಟಗೆ ಆದಾಯವನ್ನು ಮೀರಿದ ಖರ್ಚು. ವ್ಯಾಪಾರ, ಉದ್ಯೋಗಾದಿಗಳಲ್ಲಿ ಹೊಸಬರ ಸಹಕಾರ. ತಾ||೧೫ ಮತ್ತು ೧೭ ಚೋರ ಭಯ

ವೃಶ್ಚಿಕ—ಈ ವಾರ ಗ್ರಹಸ್ಥಿತಿಗಳು ಚನ್ನಾಗಿರುವುವು ಆರೋಗ್ಯಕ್ಕೆ ಕೊರತೆಯಿಲ್ಲ ಬಂಧು ಮಿತ್ರರ ಆಗಮನ ಮಹತ್ಕಾರ್ಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜಯ ತಾ|| ೧೬-೧೭ ಧನವ್ಯಯ.

ಧನು—ಈವಾರ ಮಾನಸಿಕ ಶಾಂತಿ ತೋರಬಹುದು. ಆರೋಗ್ಯ ಉತ್ತಮ. ಕೈಹಾಕಿದ ಕೆಲಸಗಳಲ್ಲಿ ಜಯ ಲಭ್ಯ, ಸಣ್ಣ ಸ್ವರ ಸಮಾಸ, ಧನಾಗಮನ ೧೬ ಮತ್ತು ೧೭ ಪ್ರವಾಸ

ಮಕರ—ಈ ವಾರ ಆಶಾದಾಯಕವಾಗುವುದು ಆರೋಗ್ಯ ನೆಟ್ಟಗಿರುವುದು ಪ್ರವಾಸ ಸುಗಮವಾಗಿ ಜರಗುವುದು ಸ್ಥಳವಾಸ ಮತ್ತು ಸತ್ಕಾರ್ಯಗಳು ಜರಗುವುವು. ವ್ಯಾಪಾರ, ಉದ್ಯೋಗಾದಿಗಳಲ್ಲಿ ಜಯ ೧೩ ಮತ್ತು ೧೭ ಆದರದ ಅತಿಥ್ಯ ಶುಭವಾರ್ತೆ. ಮೃಷ್ಟಾನ್ನ ಭೋಜನ.

ಕುಂಭ—ಹಣದ ಮುಗ್ಗಟ್ಟು ಬಹಳವಾಗುವುದು ಮನಸ್ಸು ಕ್ಲೇಶಪೂರಿತವಾಗಿರುವುದು. ಕೈಹಾಕಿದ ಕೆಲಸದಲ್ಲಿ ಜಯ ದುರ್ಲಭ. ೧೪ ಮತ್ತು ೧೫ನೇ ತಾ||ಭಯ, ಕ್ಲೇಶ, ವಿಯೋಗ

ಮೀನ—ಮನೋವ್ಯಾಕುಲ ದೂರವಾಗುವುದು ಆರೋಗ್ಯವು ಉತ್ತಮವಾಗಿರುವುದು. ೧೪-೧೫ ಧನಾಗಮನ, ನೌಕರಿ ಸಟ್ಟಾಗಳಲ್ಲಿ ಜಯ

## ಅಶೋಕ ಶಾಂತಿಗಳು ಹಡಗಿನಲ್ಲಿ ತೆರಳುವುವು

ಮೈಸೂರಿನಿಂದ ಅಮೆರಿಕಕ್ಕೆ ಕಳುಹಿಸಲ್ಪಟ್ಟ ಅಶೋಕ ಮತ್ತು ಶಾಂತಿ ಆನೆ ಮರಿಗಳ ತೂಕವು ಈಗ ಹೆಚ್ಚಾಗುವುದರಿಂದ ಅವುಗಳನ್ನು ವಿಮಾನದಲ್ಲಿ ಸಾಗಿಸುವುದಕ್ಕೆ ಪ್ರತಿಯಾಗಿ ಹಡಗಿನಲ್ಲಿ ಅಮೇರಿಕಕ್ಕೆ ಕಳುಹಿಸಲಾಗುವುದು.

○ ಸರ್ಕಾರಿ ಕಛೇರಿಗಳು ಪ್ರತಿ ಶನಿವಾರ ಬೆಳಿಗ್ಗೆ ೧೧ರಿಂದ ಮಧ್ಯಾಹ್ನ ೧ ಘಂಟೆ ವರೆಗೆ ಕೆಲಸ ಮಾಡತಕ್ಕದ್ದೆಂಬ ಆಜ್ಞೆಯು ಹೈಕೋರ್ಟುಗಳಿಗೆ ಅನ್ವಯಿಸುವುದಿಲ್ಲ ಇದಕ್ಕೆ ಪ್ರತಿಯಾಗಿ ಬೆಳಿಗ್ಗೆ ೧೧ರಿಂದ ಮಧ್ಯಾಹ್ನ ೩ ಘಂಟೆ ವರೆಗೆ ಕೆಲಸ ಮಾಡುವಂತೆ ಏರ್ಪಡಿಸಬೇಕಾಗಿ ಕೋರ್ಟಿನಿಂದ ಸರ್ಕಾರಕ್ಕೆ ಸಲಹೆ ಹೋಗಿದೆ


ಉಗಾದಿ ಹಬ್ಬದ ಪ್ರಯುಕ್ತ

ನವೀನವಾದ ಬಾರ್ಡರುಗಳುಳ್ಳ ಧರ್ಮಾವರಂ, ಆರ್ಟ ಮತ್ತು ಸೂಟು ಸೀರೆಗಳು ಬಂದಿವೆ ದಯವಿಟ್ಟು ಭೇಟಿ ಕೊಡಿ

## ಗುರುದೇವಾ ಹಾಲ್

ಶಿವರಾಂಪೇಟೆ, ಮೈಸೂರು

## ರಾಜಕಮಲ್ ಟಾಕೀಸ್

### 10—3—50 ರಿಂದ

ಜನಭರಿತವಾದ ೧೨ನೇ ವಾರ

ದಿನವಹಿ 2 ಪ್ರದರ್ಶನಗಳು

## ಜೀವನ

—:ಭೂಮಿಕೆ:—

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ


## ರಷ್ಯದಲ್ಲಿ ಅತ್ಯಧಿಕ ಬೆಲೆ

ರಷ್ಯದ ನಾಣ್ಯ ರೂಬಲ್ಲಿನ ಮೌಲ್ಯವನ್ನು ಹೆಚ್ಚಿಸಿರುವುದರಿಂದ ಅಲ್ಲಿ ಪದಾರ್ಥಗಳ ಬೆಲೆಯು ವಿಪರೀತವಾಗಿರುವುದೆ ದು ಹೇಳಲಾಗಿದೆ ಒಂದು ಪೌಂಡ ಟೀಗೆ ಹನ್ನೊಂದೂವರೆ ರೂ, ಪೌಂಡು ಸಾಬೂನಿಗೆ ಮೂರೂವರೆ ರೂ, ಒಂದು ಪೌಂಡು ಪಾಲಿಗೆ ಎರಡೂವರೆ ರೂ, ಮತ್ತು ಹೆಂಗಸರು ಹಾಕಿಕೊಳ್ಳುವ ಒಂದು ಜೊತೆ ಜೋಡಿಗೆ ಮುನ್ನೂರು ರೂಗಳಾಗುವುವೆಂದು ತಿಳಿದುಬಂದಿದೆ

† ಶ್ರೀ ಹೆಚ್ ಹೊಂಬೇಗೌಡರನ್ನು ಪ್ರಥಮ ದರ್ಜೆಯ ಜಿಲ್ಲಾ ನ್ಯಾಯಾಧೀಶರನ್ನಾಗಿ ಮಾಡಿ, ಬೆಂಗಳೂರು ಜಿಲ್ಲಾ ಹೌಸ್ ರೆಂಟ್ ಕಂಟ್ರೋಲರಾಗಿ ನೇಮಿಸಲಾಗಿದೆ.

## ಟೆಂಡರ್ ನೋಟೀಸ್

ಮೈಸೂರು ಅರಮನೆಗಜಶಾಲಾ ಇಲಾಖೆಗೆ 1950–51ನೇ ಸಾಲಿನಲ್ಲಿ ಅಂದರೆ 1950ನೇ ಏಪ್ರಿಲ್ ೧ನೇ ತಾರೀಕು ಲಾಗಾಯ್ತು 1951ನೇ ಮಾರ್ಚಿ 31ನೇ ತಾರೀಕು ಪೂರ್ತ ಸಾದೆ ಸರಬರಾಯಿ ಮಾಡಲು ಅಪೇಕ್ಷಿಸುವವರು ಸೀಲ್ ಮಾಡಿದ ಟೆಂಡರುಗಳನ್ನು 1950 ನೇ ಮಾರ್ಚಿ ೧೫ನೇ ತಾರೀಕು ಮಧ್ಯಾಹ್ನ 12 ಘಂಟೆಯೊಳಗಾಗಿ ಗಜಶಾಲಾ ಇನ್ ಛಾರ್ಜ ಆಫೀಸರವರಿಗೆ ಕೊಡತಕ್ಕದ್ದು ಹೆಚ್ಚಿಗೆ ವಿವರಗಳನ್ನು ಗಜಶಾಲಾ ಇಲಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಡಿ ಎಸ್. ನೀಲಕಂಠರಾವ್,
ಆಫೀಸರ್ ಇನ್ ಛಾರ್ಜ
ಅರಮನೆ ಗಜಶಾಲಾ, ಮೈಸೂರು

○ ಇನ್ನು ಮುಂದೆ ಕಮ್ಯೂನಿಸ್ಟ್ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲವೆಂದು ಪ್ರತ್ಯೇಕ ಬರೆದುಕೊಟ್ಟ ೩೦ ಮಂದಿ ಕಮ್ಯೂನಿಸ್ಟರನ್ನು ಮದರಾಸಿನಲ್ಲಿ ಸೆರೆಯಿಂದ ಬಿಡುಗಡೆ ಮಾಡಲಾಗಿದೆ


|| ಶ್ರೀ ||

## ಗಾಯತ್ರೀ ಟಾಕೀಸ್

ದಿನವಹಿ 3 ಪ್ರದರ್ಶನಗಳು

12-3-50 ರಿಂದ 3 ದಿನಗಳು ಮಾತ್ರ ಯುನೈಟೆಡ್ ಆರ್ಟಿಸ್ಟರವರ

## URUBU

(ಉ ರು ಬು)

ಪಾತ್ರ:- ಜಾರ್ಜ ಬ್ರೇಕ್ಸ್ಟನ್ ಮತ್ತು ಯಾರ್ಕ್ ಕಾಪ್ಲನ್.


ನಗರಾಭಿವೃದ್ಧಿ ಸಮಿತಿ ಮೈಸೂರು ೬-೩

## ಪ್ರಕಟಣೆ

### ನಿವೇಶನಗಳ ಹರಾಜು

ಇದರಿಂದ ಸಮಸ್ತ ಜನಗಳಿಗೂ ಡಂಗುರ ಸಾರುವುದೇನೆಂದರೆ:—

ಮೈಸೂರು ಸಿಟಿ ಲಷ್ಕರ್ ಮೊಹಲ್ಲಾದಲ್ಲಿ ಒಡ್ಡಾಗನೆ ಹಂಚಿನ ಜಾಗದ ದಕ್ಷಿಣ ಪಕ್ಕದಲ್ಲಿ ಹೊಸದಾಗಿ ಏರ್ಪಡಿಸಿರುವ ನಿವೇಶನಗಳನ್ನು ತಾ|| ೩-೪-೫೦ನೇ ಭಾನುವಾರ ಬೆಳಿಗ್ಗೆ ೧೧ ಘಂಟೆ ಲಾಗಾಯ್ತು ಸೈಟುಗಳ ಬಳಿ ಹರಾಜು ಮಾಡಲಾಗುವುದು ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಪಿ. ಗೋಪಾಲಕೃಷ್ಣ ಶೆಟ್ಟಿ
ಅಧ್ಯಕ್ಷರು


## ಮದುವೆ ಜವಳಿಗಳಿಗೆ

ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪೂರ್ ಸೀರೆಗಳು

## ಎಂ. ವಿ. ಭೋಜಯ್ಯ ಬಿ. ಎ. & ಬ್ರದರ್

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ರಸಿಕರಿಗೆ ಅಚ್ಚುಮೆಚ್ಚಾದುವು

## ಮೈಸೂರು ರೇಷ್ಮೆ ವಸ್ತ್ರಗಳು

### ಮಿತವ್ಯಯ-ಹಾಗೂ, ಸುರುಚಿ.

ಮೈಸೂರು ರೇಷ್ಮೆ — ಸಮಾಜದಲ್ಲಿ ಮೆಚ್ಚಿಯ ಕುರುಹು ಮುತ್ತಂಜೆಯುಳ್ಳ ಅನುಪಮವಾದುದು

ಜಾರ್ಜೆಟ್, ಕ್ರೇಪ್,
ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು
ಮನಸೆಳೆವ ಮಾದರಿಗಳು
ಇಂದಿನ ಅಂದದ ರಂಗುಗಳು.
ಸರ್ಕಾರಿ ರೇಷ್ಮೆ ನೇಯುವ ಕಾರ್ಖಾನೆ.
ಮೈಸೂರು.


Office of the Chairman.
City Improvement Trust Board,
Mysore A 9-3-50

## NOTIFICATION

It is notified for the information of the Public that applications in the prescribed printed form available in this office on payment of Rs.0-1-6 per form will be received for allotment of sites notified in the Notice Board of this office on or before the 25th March 1950 Applications received in other forms & those already given or received after the 25th March 1950 will not be considered.

Sd P GOPALAKRISHNA SETTY,
Chairman

Edited, printed and published by A. R. Sh... Rajan at Sadhvi Press, Subbiah Road, Mysore

ರಿ. ನಂ. ೭೪೭ ॥ವಂದೇ ಮಾತರಂ॥ ಬಿಡಿ ಪ್ರತಿಗೆ ೩ ಕಾಸು

# ಸಾಧ್ವಿ

ಸಂಪುಟ ೮] ಸೋಮವಾರ ೧೩-೩-೫೦ [ಸಂಚಿಕೆ ೧೯೦

# ಜರ್ಮನ್ ಪಾರ್ಲಿಮೆಂಟಿನಲ್ಲಿ ನಾಜಿ ಸದಸ್ಯನ ಕೊಲೆ

## ...ರತ ರಿಪಬ್ಲಿಕ್ ಸ್ಥಾಪನೆಗಾಗಿ ಸಂತೃಪ್ತಿ

### ...ಕಿಸ್ತಾನದ ಬಗ್ಗೆ ಭಾರತ ಸರ್ಕಾರಕ್ಕೆ ಬೆಂಬಲ

ಎಂ. ಸಿ. ಸಿ. ಯಲ್ಲಿ ನಿರ್ಣಯಗಳು

...] ಸರೋಜಿನಿನಗರ ೧೩

...ಎಂ. ಸಿ. ಸಿ. ಅಧಿವೇಶನವು ನೆನ್ನೆ ...ರಹಸ್ಯವಾಗಿ ಸಮಾವೇಶಗೊಂಡು ...ರುಗಳ ಮೇಲಿನ ಆಪಾದನೆಗಳನ್ನು ...ಲಿಸಿದರು. ಅಧ್ಯಕ್ಷಿಣಿಯಾಗಿ ...ಯಿತರಾಗಿರುವ ಶ್ರೀಮತಿ ಯಶೋ...ದಾಸಪ್ಪನವರ ಅನಾರೋಗ್ಯದ ನಿಮಿ...ತ್ತ ಸಭೆಯು ಶ್ರೀ ಕೆ ಹನುಮಂತಯ್ಯನ...ವರ ಅಧ್ಯಕ್ಷತೆಯಲ್ಲಿ ಸೇರಿತ್ತು.

...ಹಿರಂಗ ಅಧಿವೇಶನವು ಮಧ್ಯಾಹ್ನ ...ತ್ತು. ಭಾರತವು ಸ್ವತಂತ್ರ ರಿಪಬ್ಲಿ...ಕ್, ಮೈಸೂರು ಅದರಲ್ಲಿ ವಿಲೀನವಾ...ದ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸು ...ಶ್ರೀ ಕೆ. ಸಿ ರೆಡ್ಡಿಯವರು ಮಂಡಿಸಿದ ...ಯವೂ ಮತ್ತು ಭಾರತ ಪಾಕಿಸ್ತಾ...ನ್ನಲ್ಲಿ ಶಾಂತಿ ಸೌಹಾರ್ದಗಳು ನೆಲಸ ...ಭಾರತ ಸರ್ಕಾರಕ್ಕೆ ಎಲ್ಲರೂ ನೆರವು ...ನೀಡಬೇಕೆಂಬ ಬಗ್ಗೆ ಶ್ರೀ ಕೆ. ಟಿ. ಭಾ...ಷ್ಯಂರವರು ಮಂಡಿಸಿದ ನಿರ್ಣಯವೂ ...ಸ್ವೀಕೃತವಾದವು.

...ಂತ್ರಿಗಳ ಕಾಂಗ್ರೆಸ್ ಕಾರ್ಯಕಾರಿ ...ಯ ಸದಸ್ಯರಾಗಿರಕೂಡದೆಂಬ ... ...ಬಗ್ಗೆ ನಿರ್ಣಯವು ಬಿದ್ದು ... ...ನಾಜಿ ಅಧ್ಯಕ್ಷ ಶ್ರೀ ... ...ಸ್ವಮೆಯನ್ನು ... ...ವು ಅಂಗೀಕೃತವಾಯಿತು. ಅಧಿವೇ...ಶ ನೆನ್ನೆ ರಾತ್ರಿ ಮುಕ್ತಾಯವಾಯಿತು.

## ...ನಾನ ಅಪಘಾತದಿಂದ ...ಮಂದಿಯ ಮರಣ

...ನ್ನೆ ದಿನ ದಕ್ಷಿಣ ವೇಲ್ಸಿನ ಬಳಿ ಒಂ...ದು ವಿಮಾನವು ಅಪಘಾತಕ್ಕೆ ಈಡಾಗಿ ಅ...ದರಲ್ಲಿ ೮೦ ಮಂದಿ ಪ್ರಯಾಣಿಕರು ...ಮೃತರಾದರೆಂದೂ, ಮೂರು ಮಂದಿ ವ್ಯ...ಕ್ತಿಗಳಿಗೆ ತೀವ್ರ ಗಾಯಗಳಾಗಿವೆಯೆಂ...ದು ವರದಿಯಾಗಿದೆ.

## ಕಡಲೆಕಾಯಿ ರಫ್ತಿಗೆ ಪ್ರತಿಬಂಧಕ

...ಡಲೆಕಾಯಿ ಮತ್ತು ಕಡಲೆಕಾಯಿ ಎ...ಣ್ಣೆ ವಿದೇಶಗಳಿಗೆ ರಫ್ತು ಮಾಡದಂ...ತೆ ಭಾರತ ಸರ್ಕಾರದವರು ಪ್ರ...ತಿಬಂಧಿಸಿದ್ದಾರೆ.

## ಲಿಯೊಪೋಲ್ಡರ ಬಗ್ಗೆ ಜನಾಭಿಪ್ರಾಯ ಸಂಗ್ರಹಣೆ

...ಲಿಯೊಪೋಲ್ಡರು ಬೆಲ್ಜಿಯಮ್ಮಿನ ಸಿ...ಂಹಾಸನವನ್ನು ಏರುವ ಬಗ್ಗೆ ಪ್ರಜಾಭಿ...ಪ್ರಾಯ ಸಂಗ್ರಹಣೆ ನಡೆಯುತ್ತಿದೆ. ... ...ಗಿ ಶೇಕಡ ... ಓಟುಗಳಾದರೂ ... ತಾವು ಸಿಂಹಾಸನಾರೋಹಣ ...ಸ್ಪಷ್ಟವಾಗಿ ಅವರು ತಿಳಿಸಿರುವುದಾಗಿ ...ವರದಿಯಾಗಿದೆ.

... ... ಮಹೋತ್ಸವ

... ... ಶ್ರೀ ... ...ಬಸ ಬ್ಯಾಟಾಯಾಳು ... ... ಇಂದಿರಾ ಬಾಯಿ ... ...ರವರು ಕೋಲಿ ಮುತ್ತಪ್ಪ ... ...ರವರ ದ್ವಿತೀಯ ಪುತ್ರ ಶ್ರೀ ... ...ವಂತಯ್ಯನಿಗೆ ಕೊಟ್ಟು ಕಳೆದ ... ನಂಜನಗೂಡಿನಲ್ಲಿ ವಿವಾಹವ...ನ್ನು ನೆರವೇರಿಸಿದರು.

## ಡಾನ್ ಪತ್ರಿಕೆಯ ಅಪಪ್ರಚಾರ

... ... ... ... ... ... ...ಘಟನೆಗಳನ್ನು ಕುರಿತ ... ಮಾಡಿದ ಭಾಷಣದ ಬಗ್ಗೆ ಪಾಕಿಸ್ತಾನದ ಪತ್ರಿಕೆಗಳು ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ...ಗಳು ನನ್ನಿಂದ ಪ್ರಚೋದಿಸಲ್ಪಟ್ಟವೆಂದು

## ಮೈಸೂರು ಕಾಂಗ್ರೆಸ್ ಅಧ್ಯಕ್ಷಿಣಿ

ಶ್ರೀಮತಿ ಯಶೋಧರಾ ದಾಸಪ್ಪನವರು

ಪಾಕಿಸ್ತಾನದ ಡಾನ್ ಪತ್ರಿಕೆ ... ಪ್ರಕಟಿಸಿದ ... ... ... ... ... ಪತ್ರಿಕೆಯು ... ... ಪಾಕಿಸ್ತಾನದ ಪ್ರಧಾನಿ ... ... ... ... ... ... ... ... ... ಮಾಡಿದ್ದಾರೆ-ಎಂದು ಅವರು ತಿಳಿಸಿದ್ದಾರೆ.

... ... ... ... ... ... ... ...ರ್ ಮತ್ತು ... ಪ್ರಾಣ ... ... ... ಈಗಾಗಲೇ ಜಯಶೀಲರಾಗಿರುವರೆಂದು ಹೇಳಲಾಗಿದೆ.

## ಪಾರ್ಲಿಮೆಂಟ್ ಭವನದಿಂದ ಎಸೆಯಲ್ಪಟ್ಟ ನಾಜಿ ಸದಸ್ಯನ ಮರಣ

ಪಶ್ಚಿಮ ಜರ್ಮನಿಯ ಪಾರ್ಲಿಮೆಂಟಿನ ನಾಜಿ ಸದಸ್ಯ ವೊಲ್ಫ್‌ಗ್ಯಾಂಗ್ ಹೆಡ್ಲರ್ ಎಂಬಾತನು ಕಾರಣಾಂತರದಿಂದ ಸಸ್ಪೆಂಡ್ ಮಾಡಲ್ಪಟ್ಟಿದ್ದನು. ಮೊನ್ನೆ ದಿನ ನಡೆದ ಅಲ್ಲಿನ ಪಾರ್ಲಿಮೆಂಟ್ ಸಭೆಯಲ್ಲಿ ... ಹೇಗೋ ತಪ್ಪಿಸಿಕೊಂಡು ಬಂದು ... ... ... ತಿಳಿತಿತ್ತು. ... ಸಮಾಜವಾದಿ ಪಕ್ಷದ ಸದಸ್ಯರು ಅವನನ್ನು ಪತ್ತೆಹಚ್ಚಿ ಹೊರಕ್ಕೆ ಹೋಗಬೇಕೆಂದು ತಿಳಿಸಿದರು. ಅದಕ್ಕೆ ಹೆಡ್ಲರ್ ನಿರಾಕರಿಸಿದುದರಿಂದ ಅವರು ಅವನನ್ನು ಎತ್ತಿ ಸಭಾ ಭವನದಿಂದ ಹೊರಕ್ಕೆ ತುಯ್ದು ಬಿಸಾಡಿದರು. ಅವನಿಗೆ ಹಣೆಯ ಮೇಲೆ ಮೂರು ಕಡೆ ಶಸ್ತ್ರದಿಂದ ಗಾಯಗಳು ಸಂಭವಿಸಿ ಕೂಡಲೇ ಮೃತಪಟ್ಟನು.

## ಮುತ್ಸದ್ದಿಗಳಿಗೂ ವಾಷಿಂಗ್ಟನ್ ಸರ್ಕಾರಕ್ಕೂ ಭಿನ್ನಾಭಿಪ್ರಾಯ

ಪೆಸಿಫಿಕ್ ಪ್ರದೇಶದ ಯುದ್ಧ ಚಾಕಚಕ್ಯತೆಯ ಬಗ್ಗೆ ವಾಷಿಂಗ್ಟನ್ ಸರ್ಕಾರಕ್ಕೂ ಜಪಾನಿನಲ್ಲಿರುವ ವಿ. ರಾ. ಪಕ್ಷದ ಕಮ್ಯಾಂಡರ್ ಇನ್ ಚೀಫ್ ಜನರಲ್ ಮೆಕಾರ್ಥರ ರಿಗೂ ಭಿನ್ನಾಭಿಪ್ರಾಯವುಂಟಾಗಿರುವುದೆಂದು ವರದಿಯಾಗಿದೆ. ಅಲ್ಲದೆ ಜನರಲ್ ಮೆಕಾರ್ಥರ್ ಜಪಾನೀಯರ ... ... ... ... ... ... ... ... ... ... ... ... ಈ ಕಾರಣಗಳಿಂದ ಇನ್ನು ಮೂರು ತಿಂಗಳೊಳಗೆ ಅವರನ್ನು ವಾಷಿಂಗ್ಟನ್ನಿಗೆ ವಾಪಸು ಕರೆಸಲಾಗುವುದೆಂದು ಹೇಳಲಾಗಿದೆ.

## ಜಪಾನ್ ಚಕ್ರವರ್ತಿಯ ಕೊಲೆ ಪ್ರಯತ್ನವೇ?

ಜಪಾನ್ ಚಕ್ರವರ್ತಿ ಹಿರೊಹಿಟೋರವರು ಅಲ್ಲಿನ ಒಂದು ವಿಶೇಷದ ಪ್ರವಾಸ ಕೈಗೊಳ್ಳುವ ಸಲುವಾಗಿ ನೆನ್ನೆ ಟೋಕಿಯೋ ವಿಮಾನ ... ... ... ಹೊರಟಾಗ ಅಲ್ಲಿನ ಪೊಲೀಸರು ಸಂದೇಹಗೊಂಡು ಕೆಲವು ದಿವಸಗಳ ಹಿಂದೆ ಅಲ್ಲಿ ಕಳುವಾಗಿದ್ದ ಒಂದು ಸಾವಿರ ಡೈನಮೈಟುಗಳನ್ನು ಪತ್ತೆಹಚ್ಚಿದರು. ಅವುಗಳನ್ನು ಚಕ್ರವರ್ತಿಯವರನ್ನು ಕೊಲ್ಲುವ ಸಿಕೂಟ ಸಂಬಂಧವಾಗಿ ಕಳುವು ಮಾಡಲಾಗಿತ್ತೆಂದು ಊಹಿಸಲಾಗಿದೆ.

## ವಿಶ್ವ ವಿದ್ಯಾಲಯದ ಉಪಾಧ್ಯಾಯರಿಗೆ ಹೆಚ್ಚು ಸಂಭಾವನೆ

### ಸೆನೆಟ್ ಸಭೆಯ ತೀರ್ಮಾನಗಳು

ಮೈಸೂರು ೧೩

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸಭೆಯು ವೈಸ್ ಛಾನ್ಸಲರ್ ಶ್ರೀ ಕೆ. ... ರಾಜಶೆಟ್ಟಿ ಅಧ್ಯಕ್ಷತೆಯಲ್ಲಿ ... ದಿನ ಸೇರಿತ್ತು. ದಿವಂಗತರಾದ ಶ್ರೀಗಳು ಎ. ಸುಬ್ರಹ್ಮಣ್ಯ ಅಯ್ಯರ್ ಮತ್ತು ಸಿ. ಸುಬ್ರಹ್ಮಣ್ಯ ಅಯ್ಯರ್ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು.

ವಿಶ್ವವಿದ್ಯಾಲಯದ ಉಪಾಧ್ಯಾಯರುಗಳ ಸಂಬಳವನ್ನು ೧೯೫೦ ರ ... ದಿಂದ ೧೯೫೦ ರ ... ದಿನ ವರೆಗೆ ಹೆಚ್ಚಿಸುವ ಅಂಶವನ್ನು ಪರಿಶೀಲಿಸಲಾಗುತ್ತಿದೆಯೆಂದು ಪ್ರಸ್ತುತದ ಕಾಲದಲ್ಲಿ ತಿಳಿಸಲಾಯಿತು. ವಿಶ್ವವಿದ್ಯಾಲಯದ ಒಟ್ಟು ವೆಚ್ಚ ೬೮.೩೩ ಲಕ್ಷ ರೂ. ಇದರ ಪೈಕಿ ೧೫.೯ ಲಕ್ಷ ವಿದ್ಯಾರ್ಥಿಗಳಿಂದ ವಸೂಲಾಗುವುದು ಉಳಿದುದನ್ನು ಸರ್ಕಾರದವರು ಕೊಡುವರು. ವಿದ್ಯಾಲಯದ ಅಭಿವೃದ್ಧಿಗಾಗಿ ೧೨.೫ ಉಪಾಧ್ಯಾಯರುಗಳಿಗೆ ಹೆಚ್ಚಿನ ಸಂಬಳ ಮತ್ತು ಸೈನಿಕ ಶಿಕ್ಷಣಕ್ಕಾಗಿ ೩ ಲಕ್ಷ, ಸ್ವಂತ ಮುದ್ರಣಾಲಯವನ್ನು ಇಡುವುದಕ್ಕೆ ೩ ಲಕ್ಷ ರೂ. ವೆಚ್ಚ ಮಾಡಲಾಗುವುದೆಂದು ಡಾ॥ ಎಂ. ವಿ ಗೋಪಾಲಸ್ವಾಮಿಯವರು ಆಯವ್ಯಯದ ಪಟ್ಟಿಯನ್ನು ಮಂಡಿಸುತ್ತಾ ತಿಳಿಸಿದರು.

### ಛಾಂಪಿಯನ್‌ಷಿಪ್ ಟೆನ್ನಿಸ್ ಟೂರ್ನಮೆಂಟ್

ರಾಜಸ್ಥಾನದ ಸಿಟಿ ಇನ್ಸ್ಟಿಟ್ಯೂಟಿನ ಆಶ್ರಯದಲ್ಲಿ ಸಿಂಗಲ್ಸ್ ಮತ್ತು ಡಬ್ಬಲ್ಸ್ ಟೆನ್ನಿಸ್ ಟೂರ್ನಮೆಂಟ್ ಪಂದ್ಯಗಳು ನಿನ್ನೆ ಸಂಜೆ ಮೈಸೂರು ರಾಜ ಪ್ರಮುಖರ ಆಪ್ತ ಕಾರ್ಯದರ್ಶಿಗಳಾದ ಶ್ರೀ ... ರಾಜನವರಿಂದ ಆರಂಭಿಸಲ್ಪಟ್ಟವು.

### ಕೋಮುವಾರು ವಿದ್ಯಾರ್ಥಿ ನಿಲಯ ರದ್ದು

ಸಂಸ್ಥಾನದಲ್ಲಿ ಕೋಮುವಾರು ವಿದ್ಯಾರ್ಥಿ ನಿಲಯಗಳನ್ನು ರದ್ದು ಮಾಡುವ ಬಗ್ಗೆ ಸರ್ಕಾರದವರು ಪರ್ಯಾಲೋಚಿಸುತ್ತಿರುವರೆಂದು ಪ್ರಧಾನ ಸಚಿವ ಶ್ರೀ ಕೆ. ಸಿ ರೆಡ್ಡಿಯವರು ಬೆಂಗಳೂರು ಶ್ರೀರಾಮಪುರದ ಹರಿಜನ ಹಾಸ್ಟಲಿನ ವಾರ್ಷಿಕೋತ್ಸವದಲ್ಲಿ ತಿಳಿಸಿದರು. ಸವರ್ಣ ಹಿಂದುಗಳನ್ನು ಹರಿಜನರ ಹಾಸ್ಟಲುಗಳಲ್ಲೂ, ಹರಿಜನರನ್ನು ಸವರ್ಣ ಹಿಂದುಗಳ ಹಾಸ್ಟಲಿನಲ್ಲೂ ಸೇರಿಸುವಂತಾಗಬೇಕೆಂದೂ ಅವರು ಆಶಿಸಿದರು. ಭಾರತ ಪಾಕಿಸ್ತಾನಗಳ ನಡುವೆ ಘರ್ಷಣೆಯೇನಾದರೂ ಸಂಭವಿಸಿದಲ್ಲಿ ಮೈಸೂರು ಆಗ ತನ್ನ ಪಾತ್ರವನ್ನು ವಹಿಸಬೇಕಾಗುವುದೆಂದೂ ಅವರು ತಿಳಿಸಿದರು. ಶ್ರೀ ಕೆ ಟಿ. ಭಾಷ್ಯಂರವರು ಡಾ॥ ರಾಜೇಂದ್ರ ಪ್ರಸಾದರ ಭಾವಚಿತ್ರವನ್ನು ಅನಾವರಣ ಮಾಡಿದರು.

## ಲಾಯಕಾಲಿ ಸಹೋದರಿಯ ದಸ್ತಗಿರಿ

ಲಾಯಕಾಲಿಯ ಕರಾರಿ ಸಂಬಂಧವಾಗಿ ಹೈದರಾಬಾದಿನಲ್ಲಿ ಆತನ ಸಹೋದರಿ ಬೇಗಂ ಷೌಕತ್ ನಿಸಾರ್ ಎಂಬಾಕೆಯನ್ನೂ ಮತ್ತು ಆಕೆಯ ಪುತ್ರ ನಜೀರುದ್ದೀನ್ ಎಂಬಾತನನ್ನೂ ದಸ್ತಗಿರಿ ಮಾಡಲಾಗಿದೆ

## ದೊಡ್ಡಮ್ಮ

ಮೈಸೂರು ತ್ಯಾಗರಾಜ ರಸ್ತೆ ನಿಯೋಫಾರ್ಮಸಿಯ ಡಾ|| ಎ. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಯವರು ಸಿಡುಬು ರೋಗದ ಕಾರಣ ಮತ್ತು ಅದರ ನಿವಾರಣೋಪಾಯವನ್ನು ಕುರಿತು ಕೆಳಗೆ ಕಂಡಂತೆ ಬರೆದಿದ್ದಾರೆ:-

ಬಿಸಿಲಿನ ತಾಪವು ಹೆಚ್ಚುವುದರಿಂದಲೂ, ಕೃತಕ ಪುಷ್ಪದ ಸೇವನೆಯಿಂದಲೂ ಚರ್ಮದ ಬಲವು ಕುಗ್ಗಿ ಈ ರೋಗವು ಪ್ರಾಪ್ತಿಯಾಗುವುದು. ಎಲ್ಲ ಮಕ್ಕಳಿಗೂ ರುದ್ರಾಕ್ಷಿಯನ್ನು ತೇಯ್ದು ಎರಡು ಉದ್ದಿನ ಕಾಳಿನಷ್ಟು ಗಂಧ ತೆಗೆದು, ಅದನ್ನು ಹಸುವಿನ ಹಾಲಿನಲ್ಲಿ ಮೂರು ದಿನಗಳು ಬೆಳಗಿನ ಹೊತ್ತು ಕುಡಿಸುವುದರಿಂದ ರೋಗವನ್ನು ತಡೆಗಟ್ಟಬಹುದು. ಈ ಚಿಕಿತ್ಸೆಯು ನಿರಪಾಯವೂ ಮತ್ತು ಹಿತಕರವಾದುದಾಗಿಯೂ ಇರುತ್ತದೆ.

ಬೇಸಿಗೆ ಕಾಲದಲ್ಲಾದರೂ ಕೃತಕ ಪುಷ್ಪದ ಪಾನಾಟವನ್ನು ಪ್ರತಿಬಂಧಿಸುವುದರಿಂದ ಈ ರೋಗವನ್ನು ಬಹುಮಟ್ಟಿಗೆ ತಡೆಯಬಹುದು. ಸಿಡುಬು ರೋಗಗ್ರಸ್ತರಾಗಿರುವವರಿಗೂ ಮೇಲ್ಕಂಡಂತೆ ರುದ್ರಾಕ್ಷಿ ಗಂಧವನ್ನು ದಿನವೂ ಎರಡು ವೇಳೆ ಕೊಡಬೇಕು. ರೋಗಿಗೆ ಸನ್ನಿಯೇನಾದರೂ ಕಂಡಲ್ಲಿ ಮೇಲ್ಕಂಡಂತೆ ರುದ್ರಾಕ್ಷಿ ಗಂಧದೊಡನೆ ಅದೇ ಪ್ರಮಾಣದಲ್ಲಿ ಶ್ರೀಗಂಧ ಮತ್ತು ಅತಿ ಮಧುರ ಗಂಧಗಳನ್ನು ಸೇರಿಸಿಕೊಟ್ಟಲ್ಲಿ ರೋಗಿಯು ೨-೩ ದಿನಗಳಲ್ಲಿ ಸ್ವಸ್ಥತೆಗೊಳ್ಳುವನು.

ದೇವಿ ಹಾಕುವುದರಿಂದಲೇ ಈ ರೋಗವು ಉಂಟಾಗಿ, ಪ್ರಸರಿಸಿದ ನಿದರ್ಶನಗಳವೆ. ಅಲ್ಲದೆ ವ್ಯಾಕ್ಸಿನ್ನಿನಿಂದ ಹಲವು ದುಷ್ಪರಿಣಾಮಗಳು ಸಂಭವಿಸುತ್ತವೆ. ಆದರೆ ಮೇಲೆ ಸೂಚಿಸಿರುವ ರುದ್ರಾಕ್ಷಿ ಗಂಧದ ಸೇವನೆಯಿಂದ ಅಲ್ಪವಾಗಿಯಾದರೂ ರೋಗವುಂಟು ಮಾಡಿಕೊಳ್ಳುವ ವಾರ್ತೆಕ ಹಿಂಸೆಯು ತಪ್ಪುವುದಲ್ಲದೆ ಇತರ ಯಾವ ಅಪಾಯವೂ ಸಂಭವಿಸುವುದಿಲ್ಲ.

## ಟೆಂಡರ್ ನೋಟೀಸ್

ಮೈಸೂರು ಅರಮನೆ ನೀಲಿಕಾಲಿನ ಇಲಾಖೆಗೆ 1950-51ನೇ ಸಾಲಿನಲ್ಲಿ ಅಂದರೆ 1950ನೇ ಏಪ್ರಿಲ್ 1ನೇ ತಾರೀಕು ಆರಂಭವಾಗಿ, 1951ನೇ ಮಾರ್ಚಿ 31ನೇ ತಾರೀಕು ಪೂರ್ತಿ ಬೇಕಾದ ಸರಬರಾಯಿ ಮಾಡಲು ಇಷ್ಟಪಡುವವರು ಸೀಲ್ ಮಾಡಿರುವ ಟೆಂಡರುಗಳನ್ನು 1950ನೇ ಮಾರ್ಚಿ 22ನೇ ತಾರೀಕು ಮಧ್ಯಾಹ್ನ 12 ಘಂಟೆಯೊಳಗಾಗಿ ಗಜಶಾಲಾ ಇನ್ ಛಾರ್ಜ್ ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಗಜಶಾಲಾ ಇಲಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಡಿ. ಎಸ್. ನೀಲಕಂಠರಾವ್,
ಆಫೀಸರ್ ಇನ್ ಛಾರ್ಜ್
ಅರಮನೆ ಗಜಶಾಲಾ, ಮೈಸೂರು

## ಕುಣಿಗಲು ವರ್ತಮಾನ

### ಶಾಲಾ ದಿನಾಚರಣೆ

ಇಲ್ಲಿನ ವಿದ್ಯಾವರ್ಧಕ ಸಂಘ ಹೈಸ್ಕೂಲಿನವರು ಕಳೆದ ಗುರುವಾರ ಶಾಲಾ ದಿನಾಚರಣೆಯನ್ನು ನೆರವೇರಿಸಿದರು. ಶ್ರೀ ರುಮಾಲೆ ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ವರದಿಯನ್ನು ಓದಿದ ನಂತರ ತುಮಕೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ವ್ಯವಸ್ಥಾಪಕರಾದ ಶ್ರೀ ಎಸ್. ಶಾಂತವೀರಪ್ಪನವರು ವಯಸ್ಕರ ಶಿಕ್ಷಣದ ವಿಚಾರವಾಗಿ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವಾದ ನಂತರ ವಿವಿಧ ವಿನೋದಾವಳಿ, ಸಂಗೀತ, ವಿದ್ಯಾರ್ಥಿಗಳಿಂದ "ಸುಭದ್ರಾ ಪರಿಣಯ" ನಾಟಕದ ಪ್ರದರ್ಶನಗಳು ನಡೆದವು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

### ಶಾರದಾ ಪೂಜೆ

ಇಲ್ಲಿನ ಮಾಧ್ಯಮಿಕ ಶಾಲೆಯ ಒಂದು, ಎರಡು ಮತ್ತು ಮೂರನೇ ತರಗತಿಯ ಬಾಲಕರು ಕಳೆದ ಗುರುವಾರ ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸರಸ್ವತಿ ಪೂಜೆಯನ್ನು ಆಚರಿಸಿದರು.

## ಲೆಬನಾನ್ ಪ್ರಧಾನಿ ಗುಂಡಿನಿಂದ ಪಾರಾದರು

ಲೆಬನಾನಿನ ಪ್ರಧಾನಿಯನ್ನು ಕೊಲ್ಲಲು ಯೂಸುಫ್ ಹಂಡಾಸ್ ಎಂಬವನು ಕಳೆದ ಗುರುವಾರ ಮೂರಾವರ್ತಿ ಅವರ ಕಡೆ ಗುಂಡು ಹಾರಿಸಿದನು. ಪ್ರಧಾನಿಯು ತಪ್ಪಿಸಿಕೊಂಡರು. ಪಕ್ಕದಲ್ಲಿದ್ದ ಮೂವರು ಮಕ್ಕಳು ಗುಂಡಿಗೆ ಬಲಿಯಾದರು. ಅಕ್ಕಪಕ್ಕದವರು ಕಾಲಿಗೆ ಗುಂಡು ಹೊಡೆದು ಅವನನ್ನು ಬಂಧಿಸಲಾಯಿತು. ಕಳೆದ ಜುಲೈ ತಿಂಗಳಲ್ಲಿ ನಡೆದ ಸಿರಿಯದ ದಂಗೆಯಲ್ಲಿ ಫಾಸಿ ಶಿಕ್ಷೆ ವಿಧಿಸಿದುದರಿಂದ ಪ್ರಧಾನಿಯನ್ನು ತಾನು ಕೊಲ್ಲಲು ಪ್ರಯತ್ನಿಸಿದುದಾಗಿ ಯೂಸುಫ್ ಹಂಡಾಸನು ತಿಳಿಸಿದನು.

## ಕ್ರಾಂತಿಕಾರರಿಂದ ಎಸ್ಟೇಟಿನ ದಹನ

ಮಲಯದ ೨೦೦ ಮಂದಿ ಕ್ರಾಂತಿಕಾರರ ತಂಡವೊಂದು ಕಳೆದ ವಾರ ಜೊಹೋರಿನ ಎಸ್ಟೇಟಿನ ಮೇಲೆ ಧಾಳಿ ಮಾಡಿ ಅಲ್ಲಿದ್ದ ಮನೆ ಮಠಗಳು, ಆಫೀಸುಗಳು ಮತ್ತು ರಬ್ಬರನ್ನು ಶೇಖರಿಸಿದ್ದ ಕೊಠಡಿಗಳನ್ನು ಸುಟ್ಟು ಭಸ್ಮಮಾಡಿ, ಎಸ್ಟೇಟಿಗೆ ಸಂಬಂಧಪಟ್ಟ ಇಬ್ಬರು ಚೀನೀ ಅಧಿಕಾರಿಗಳನ್ನೂ, ಮ್ಯಾನೇಜರ್ ಮತ್ತು ೬೦ ಟ್ರಾಕ್ಟರುಗಳನ್ನೂ ಅಪಹರಿಸಿ ಕೊಂಡು ಹೋದರೆಂದು ವರದಿಯಾಗಿದೆ.

## ಕರ್ನಾಟಕ ಪ್ರಾಂತೀಯ ಕೂಲಿಗಾರರ ಸಮ್ಮೇಳನ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ಸೇರಿದ ಕೂಲಿಗಾರರ ಸಂಘಗಳ ನೆರವಿನಿಂದ ಮುಂದಿನ ತಿಂಗಳು ಬೆಂಗಳೂರಿನಲ್ಲಿ ಕರ್ನಾಟಕ ಪ್ರಾಂತ್ಯದ ಕೂಲಿಗಾರರ ಪ್ರಥಮ ಸಮ್ಮೇಳನವನ್ನು ನಡೆಸಲು ಏರ್ಪಡಿಸಲಾಗಿದೆ. ಈ ಬಗ್ಗೆ ಕೂಲಿಗಾರರ ಪ್ರತಿನಿಧಿಗಳ ಸಭೆಯೊಂದು ಸೇರಿ ಸ್ವಾಗತ ಸಮಿತಿಯನ್ನು ರಚಿಸಿತು. ಕರ್ನಾಟಕದ ಅನೇಕ ಪ್ರಮುಖ ಕೂಲಿಗಾರರ ನಾಯಕರು ಬರಲಿರುವುದರಿಂದ ಸಂಸ್ಥಾನದ ಎಲ್ಲ ಕೂಲಿಗಾರರೂ ಸಹಕರಿಸಬೇಕಾಗಿ ಕೋರಲಾಗಿದೆ. ಈ ಉದ್ಯಮದಲ್ಲಿ ವಿದ್ಯಾರ್ಥಿಗಳು, ಪತ್ರಿಕೆಗಳು ಮತ್ತು ಸಾರ್ವಜನಿಕರೂ ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ.

### ಸತ್ಕಾರ ಸಮಾರಂಭ

ರಾಜಧಾನಿಯ ಇಟ್ಟಿಗೆಗೂಡು ಯುವಕ ಸಂಘದವರು ನೆನ್ನೆ ದಿನ ಪೌರಸಭಾಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಉಪಹಾರ, ಪ್ರಾರ್ಥನೆ, ಸ್ವಾಗತಗಳಾದನಂತರ ಮುಖ್ಯ ಅತಿಥಿಗಳು ಭಾಷಣ ಮಾಡಿ ಯುವಕರಿಗೆ ಹಿತೋಪದೇಶ ಮಾಡಿ, ತಮ್ಮನ್ನು ಗೌರವಿಸಿದುದಕ್ಕಾಗಿ ಕೃತಜ್ಞತೆ ಸಲ್ಲಿಸಿದರು. ವಂದನಾರ್ಪಣೆ, ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

### ಬಹುಮಾನ ವಿನಿಯೋಗ

ರಾಜಧಾನಿಯ ಇಟ್ಟಿಗೆಗೂಡು, ನೇತಾಜಿ ಕ್ರೀಡಾ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಪಂದ್ಯಗಳಲ್ಲಿ ಗೆದ್ದ ಟೀಮಿನವರಿಗೆ ಬಹುಮಾನಗಳನ್ನು ಕಳೆದ ವಾರ ಪೌರಸಭಾಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರಿಂದ ವಿನಿಯೋಗಿಸಲ್ಪಟ್ಟವು.

೦ ಕೆಲವು ದಿವಸಗಳ ಹಿಂದೆ ಚಾಮರಾಜನಗರ ಬಳಿ ಕೊಲೆಯಾದ ಲಯಾಕಾಲಿಯನ್ನು ಹೋಲುವ ಒಬ್ಬ ಮುಸ್ಲಿಮನನ್ನು ದಸ್ತಗಿರಿ ಮಾಡಲಾಗಿತ್ತಷ್ಟೆ. ಆವನನ್ನು ಹೈದರಾಬಾದಿನ ಅಧಿಕಾರಿಗಳು ನೋಡಿ ಅವನು ಲಯಾಕಾಲಿಯಲ್ಲವೆಂದು ಹೇಳಿದುದರಿಂದ ಬಿಟ್ಟುಬಿಡಲಾಯಿತು.


ಉಗಾದಿ ಹಬ್ಬದ ಪ್ರಯುಕ್ತ

ನವೀನವಾದ ಜರಿಯುಗಳ ಧರ್ಮಾವರಂ, ಆರ್ಣಿ ಮತ್ತು ನಾನಾ ಸೀರೆಗಳು ಬಂದಿವೆ ದಯವಿಟ್ಟು ಭೇಟಿ ಕೊಡಿ

ಗುರುದೇವಾ ಹಾಲ್

ಶಿವರಾಂಪೇಟೆ, ಮೈಸೂರು


## ಬ್ರಿಟನ್ನಿನ ಮಹಿಳೆಯರಿಗೆ ಬೆಂಡೋಲೆ ಬಯಕೆ

ಭಾರತೀಯ ಮಹಿಳೆಯರಂತೆ ಕಿವಿಗೆ ಬೆಂಡೋಲೆಯನ್ನು ಹಾಕಿಕೊಳ್ಳುವ ಬಯಕೆಯು ಬ್ರಿಟನ್ನಿನ ಹೆಂಗಸರಿಗೆ ಬಹಳ ಹೆಚ್ಚಿದೆಯೆಂದೂ, ೮ ತಿಂಗಳ ಮಗುವಿನಿಂದ ಹಿಡಿದು ೮೦ ವರ್ಷದ ವೃದ್ಧೆಯರೂ ಈ ಪದ್ಧತಿಯನ್ನು ಅನುಸರಿಸುತ್ತಿರುವರೆಂದೂ ಹೇಳಲಾಗಿದೆ

### ಸಂಘದ ದಿನಾಚರಣೆ

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜ್ ಸಂಘದ ದಿನಾಚರಣೆಯು ನೆನ್ನೆ ಸಂಜೆ ಡಾ|| ಎಂ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕಾಲೇಜಿನ ಆವರಣದಲ್ಲಿ ನಡೆಯಿತು. ಸಂಗೀತ, ವಿವಿಧ ವೇಷಗಳ ಸ್ಪರ್ಧೆ, ಸ್ವಾಗತ, ವರದಿ ಮತ್ತು ಬಹುಮಾನ ಹಂಚಿಕೆಯಾದನಂತರ ಅಧ್ಯಕ್ಷರು ಭಾಷಣ ಮಾಡಿದರು. ವಂದನಾರ್ಪಣೆ, ರಾಷ್ಟ್ರಗೀತೆ ಮತ್ತು ನಾಟಕ ಪ್ರದರ್ಶನದೊಡನೆ ಸಮಾರಂಭವು ಮುಕ್ತಾಯವಾಯಿತು

### ರಾಜಪರಿವಾರ ಸಂಘ

ಮೇಲ್ಕಂಡ ಸಂಘದ ಸಭೆಯು ಕಳೆದ ಸನೇ ಕಾಳಿಂಗನ್ನನವರ ಗೃಹದಲ್ಲಿ ಪಟೇಲ್ ಚೌಡಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿ ಈ ಮತ್ತದವರು ತಮ್ಮ ಮತದ ಹೆಸರನ್ನು ಭಿನ್ನ ಭಿನ್ನವಾಗಿ ಹೇಳದೆ "ರಾಜಪರಿವಾರ" ಎಂದೆ ಬರೆದು ಇನ್ನು ಮುಂದೆ ಸೆನ್ಸಸ್ಸಿನಲ್ಲಿ ನಮೂದು ಮಾಡಬೇಕೆಂಬ ನಿರ್ಣಯವು ಅಂಗೀಕರಿಸಲ್ಪಟ್ಟಿತು


ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಜಾಗರಿಯಾಗಿ ನಿವಾರಿಸುವುದು

ರಮಣಿ ಹಲ್ಲುಪುಡಿ

ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು.

ರಮಣಿ ಟ್ರೇಡಿಂಗ್ ಕಂಪೆನಿ.

ಗಿರ್ನಾಲ್‌/ಹಿ, ಕೃಷ್ಣಮೂರ್ತಿಪುರಂ, ಮೈಸೂರು.

ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಗೂರಲು, ಉಬ್ಬಸ, ಪಡಿಶಾಮಸರ ಮತ್ತು ಗಲಾಯಕಕ್ಕೆ (TONSIL) ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಪದಕಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ. 2-0-0

ಆರ್. ಎಸ್. ಪಂಡಿತರು,
ರಾಮಗೋಪಾಲ ವೈದ್ಯಶಾಲಾ.
ದಿವಾನರ ರಸ್ತೆ, ಮೈಸೂರು.

ಮದುವೆ ಜವಳಿಗಳಿಗೆ

ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪೂರ್ ಸೀರೆಗಳಿಗೆ

ಎಂ. ವಿ. ಭೋಜಪ್ಪ ಬಿ ಎ. & ಬ್ರದರ್

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು


Edited, printed and published by A. R. Naga Rajan at Sadhvi Press, D. Subbiah Road, Mysore.


ಯುಗಾದಿ ಹಬ್ಬಕ್ಕೆ ಸೊಬಗಿನ ಸುಂದರ ಸೀರೆಗಳು

ಅಚ್ಚುಮೆಚ್ಚಾದ ನಮೂನೆಗಳಲ್ಲಿ ಬಂದಿವೆ. ಬಾಬುರಾವ್ ಕಂಪೆನಿ, ಸ್ಯಾಂಕ್ ರೋಡ್, ಮೈಸೂರು.

ಪು॥ ಸಂ 792 ‖ವಂದೇ ಮಾತರಂ‖ ಇಂದಿನ ಪತ್ರಿಕೆ ೬ ಕಾಸ

ಸಂಪುಟ ೮] ಮಂಗಳವಾರ ೧೮-೩-೫೦ [ಸಂಚಿಕೆ ೧೯೧

# ಮೆರವಣಿಗೆ ಸಂಬಂಧವಾಗಿ ಜಮ್ಮು ಮುದವಣಿಗರ ಮುಷ್ಕರ

## ರಾಜೇಂದ್ರ ಪ್ರಸಾದ್‌ರವರಿಗೆ ಗೌರವ ಪ್ರಶಸ್ತಿ

### ಸೆನೇಟ್ ಸಭೆಯಲ್ಲಿ ನಿರ್ಣಯ

ಮೈಸೂರು ೧೪

ನೆನ್ನೆ ಮಧ್ಯಾಹ್ನ ನಡೆದ ಸೆನೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಪಾಠದ ಶುಲ್ಕವನ್ನು ಹೆಚ್ಚಿಸಬೇಕೆಂದೂ ಪರೀಕ್ಷೆಯ ಶುಲ್ಕವನ್ನು ಕಡಿಮೆ ಮಾಡಬೇಕೆಂದೂ, ಮೆಡಿಕಲ್ ಪರೀಕ್ಷೆ ಶುಲ್ಕವನ್ನು ಅರ್ಧಕ್ಕೆ ಇಳಿಸಬೇಕೆಂದೂ ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ಕಾಲರ್‌ಷಿಪ್ ಕೊಡಬೇಕೆಂದೂ ಹಲವು ಸಲಹೆಗಳು ಬಂದುವು. ಇವುಗಳ ಬಗ್ಗೆ ಪರಿಶೀಲನೆ ನಡೆಸಲಾಗುವುದೆಂದು ವೈಸ್ ಛಾನ್ಸಲರು ಉತ್ತರಕೊಟ್ಟರು.

ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಬರುವ ವರ್ಷದಿಂದ ಜರ್ಮನ್, ಇಟಾಲಿಯನ್, ರಷ್ಯನ್ ಭಾಷೆಗಳ ಶಿಕ್ಷಣ ಕೊಡುವಂತೆ ತೀರ್ಮಾನಿಸಲಾಯಿತು.

ಭಾರತದ ಅಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್ ಮತ್ತು ಡಾ॥ ಬಿ. ಆರ್. ಅಂಬೇಡ್ಕರ್ ಇವರುಗಳಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಕೊಡಬೇಕೆಂದು ಇಂದಿನ ಸಭೆಯಲ್ಲಿ ವಿಶ್ವವಿದ್ಯಾಲಯದ ಕೌನ್ಸಿಲ್ಲಿಗೆ ಶಿಫಾರಸು ಮಾಡುವ ನಿರ್ಣಯವು ದುಂಜೂರಾಯಿತು.

### ಕುರಿ ಪೋಷಕರ ಸಂಘ

ಮ. ಪ್ರ ಜಿಲ್ಲೆಯ ಕುರಿ ಪೋಷಕ ಸಂಘದ ೬ನೇ ವರ್ಷದ ಸಾಮಾನ್ಯ ಸಭೆಯು ನಿನ್ನೆ ಮಧ್ಯಾಹ್ನ ೩ ಘಂಟೆಗೆ [illegible] ಸಂಸ್ಥಾನದ ಗ್ರಾಮಾಭಿವೃದ್ಧಿ ಇಲಾಖಾ [illegible] ಶ್ರೀ ಎಸ್. ಎಸ್. [illegible] ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

## ಅಸ್ಸಾಮಿಗೆ ಪ್ರಧಾನಿ ನೆಹರೂ ಭೇಟಿ

ಪ್ರಧಾನಿ ನೆಹರೂರವರು ಮತ್ತೆ ಕಲ್ಕತ್ತೆಗೆ ಹೋಗುವ ಮಾರ್ಗದಲ್ಲಿ ಅಸ್ಸಾಮಿನ ಶಿಲ್ಲಾಂಗ್, ಸಿಲ್ಚಾರ್ ಮತ್ತು ಕೈಲ [illegible]ಗಳಿಗೆ ಭೇಟಿ ಕೊಡಬಹುದೆಂದು ಅಧಿಕೃತವಾದ ವ್ಯಕ್ತಿಗಳಿಂದ ವರದಿಯಾಗಿದೆ.

## ಖಾಸಿಂ ರಜ್ವಿಯು ವಾದಿಸುವುದಿಲ್ಲ

ಹೈದರಾಬಾದ್ ರಜಾಕಾರ ನಾಯಕ ಖಾಸಿಂ ರಜ್ವಿಯು ಮೇಲೆ ಹೂಡಲಾಗಿರುವ ಮೊಕದ್ದಮೆಗಳಲ್ಲಿ ತನ್ನ ಮುಂದೆ ತಾನು ವಾದಿಸುವುದಿಲ್ಲವೆಂದು ರಜ್ವಿಯು ನ್ಯಾಯಾಲಯಕ್ಕೆ ಒಂದು ಹೇಳಿಕೆ ಕೊಟ್ಟಿರುವುದಾಗಿ ತಿಳಿದು ಬಂದಿದೆ.

## ತೈ ಕಿರುಬನ ಕಾಟದಿಂದ ೨೧ ಮಕ್ಕಳು ಪತ್ತೆಯಿಲ್ಲ

[illegible] ಜಿಲ್ಲೆಯ ಎರಡು ಹಳ್ಳಿಗಳಲ್ಲಿ [illegible] ಕತ್ತೆ ಕಿರುಬನು ಬಹಳ ಹಾವಳಿ ನಡೆಸುತ್ತಿರುವುದಾಗಿ ವರದಿಯಾಗಿದೆ. [illegible] ಇದುವರೆಗೆ ೮ ಗ್ರಾಮದ [illegible] ಮಂದಿ ಮಕ್ಕಳು ಪತ್ತೆಯಿಲ್ಲ [illegible] ಕಾರ್ಯಾಚರಣೆ [illegible] ಗ್ರಾಮಗಳ [illegible] ಪ್ರವೇಶಿಸಿ ಹಾನಿ ಮಾಡುತ್ತಿದೆ [illegible]. ಇದುವರೆಗೂ ಅದು [illegible] ಗ್ರಾಮಸ್ಥರೂ, ಪೊಲೀಸರೂ ಅದನ್ನು ಹಿಡಿಯಲು ಎಚ್ಚರಿಕೆ [illegible] ಕಾಯಲು ಆರಂಭಿಸಿದ್ದಾರೆ.

## ನೆಹರೂ ಈ ದಿನ ಮತ್ತೆ ಕಲ್ಕತ್ತೆಗೆ

ಪ್ರಧಾನಿ ಪಂಡಿತ ನೆಹರೂರವರು ಈ ದಿನ ಮತ್ತೆ ಕಲ್ಕತ್ತೆಗೆ ಹೋಗಿ ಅಲ್ಲಿ ಎರಡು ದಿನಗಳಿದ್ದು ಪೂರ್ವ ಮತ್ತು ಪಶ್ಚಿಮ ಬಂಗಾಳಗಳ ಘಟನೆಗಳ ಬಗ್ಗೆ ಹೆಚ್ಚಿನ ಪರಿಶೀಲನೆ ನಡೆಸುವರು.

## ವಿಕ್ಟೋರಿಯಾರಾಣಿ ತಲೆಯ ರೂಪಾಯಿಗೆ ೨೬ ಆಣೆಗಳು

[illegible] ರಾಣಿಯ ತಲೆಯ [illegible] ರೂಪಾಯಿ [illegible] ವರ್ತಕರು ೨೬ ಆಣೆ ಬೆಲೆ ಕೊಟ್ಟು ಕೊಳ್ಳುತ್ತಿದ್ದಾರೆಂದು ವರದಿಯಾಗಿದೆ. ಇದರಲ್ಲಿ ಹೆಚ್ಚಿನ ಬೆಳ್ಳಿ ಇರುವುದೇ ಅತಿ ಅಧಿಕ ಬೆಲೆ ಕೊಡುತ್ತಿರುವುದಕ್ಕೆ ಕಾರಣವೆಂದು ಹೇಳಲಾಗಿದೆ.

## ಹೊಡೆದಾಟದಿಂದ ಬೊಂಬಾಯಿನಲ್ಲಿ ೪ ಜನರ ಮರಣ

ನೆನ್ನೆ ರಾತ್ರಿ ಬೊಂಬಾಯಿನಲ್ಲಿ ಸಿನಿಮಾ ನೋಡಿಕೊಂಡು ಮನೆಗೆ ಹಿಂದಿರುಗುತ್ತಿದ್ದ ಎರಡು ಗುಂಪುಗಳಿಗೆ ಹೊಡೆದಾಟವಾಗಿ ನಾಲ್ಕು ಮಂದಿ ಮಡಿದರೆಂದೂ, ಹತ್ತು ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ. ಈ ಸಂದರ್ಭದಲ್ಲಿ ನಗರದ ನಾಲ್ಕು ಚದುರ ಮೈಲಿಗಳಷ್ಟು ಪ್ರದೇಶದಲ್ಲಿ ಕರ್ಫ್ಯೂ ಆಜ್ಞೆ ಜಾರಿಮಾಡಲಾಗಿದೆ. ಒಂದು ವಾರ ಕಾಲ ಸಭೆ, ಮೆರವಣಿಗೆಗಳನ್ನೂ ಶಸ್ತ್ರಾಸ್ತ್ರಗಳನ್ನು ಹಿಡಿದು ತಿರುಗುವುದನ್ನೂ ಪ್ರತಿಬಂಧಿಸಲಾಗಿದೆ.

## ಹೈದರಾಬಾದ್ ಪೊಲೀಸ್ ಉನ್ನತಾಧಿಕಾರಿಗೆ ರಜಾ

ಹೈದರಾಬಾದಿನ ಪೂರ್ವ ಭಾಗದ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲಾದ ಶ್ರೀ ಟಿ ಬಿ ಎಚ್. ಜೆಟ್ಲೀ ಎಂಬುವರನ್ನು, ವೀರ್ ಅಯ್ಯಂಗಾರಿ [illegible] ರಿಯಾಗಿರುವ ಸಂಬಂಧದಲ್ಲಿ, ಒತ್ತಾಯವಾಗಿ ರಜಾ ಕೊಟ್ಟು, ಅವರು ಭಾರತಕ್ಕೆ [illegible]

○ ಮೈಸೂರಿನ ದ ಬನೆ [illegible] ಗುಬ್ಬಿಯಲ್ಲಿ [illegible] ಜನ [illegible] ನ್ನು ಬೊಂಬಾಯಿನಿಂದ ಅಮೇರಿಕಕ್ಕೆ ಮಂಗಳವಾರ ಸಾಗಿಸಲು ಅಮೇರಿಕದ [illegible] ಕಂಪೆನಿಯೊಂದ ಒಪ್ಪಿದೆ.

## ಶಾಸನ ಸಭಾ ಕಾರ್ಯಕಲಾಪಗಳು

ಸ್ವಾ. ಸ. ಫೋನ್] ಬೆಂಗಳೂರು ೧೪

ನಾಳೆ ದಿನ ಬೆಳಿಗ್ಗೆ ೧೦ ಘಂಟೆಗೆ ಶಾಸನ ಸಭೆಯು ಬಜೆಟ್ ಅಧಿವೇಶನದ ಅಂಗವಾಗಿ ಸಭಾ ಭವನದಲ್ಲಿ ಸದಸ್ಯರು ಪ್ರಮಾಣ ವಚನ ಸ್ವೀಕರಿಸುವರು. ನಾಳೆ ಮಧ್ಯಾಹ್ನ ೩ ಘಂಟೆಗೆ ಪುರಭವನದಲ್ಲಿ ರಾಜಪ್ರಮುಖರು ಆರಂಭ ಭಾಷಣ ಮಾಡುವರು. ಈ ಬಾರಿ ಅಧಿವೇಶನವು ೧೬, [illegible] ರಾಜಪ್ರಮುಖರ [illegible] ಪ್ರತಿ ದಿನವೂ ಮಧ್ಯಾಹ್ನ [illegible] ಸಭೆಯು ಸೇರಿ [illegible] ಬಜೆಟ್ಟಿನ ಪರಿಶೀಲನೆ ನಡೆಸುವುದು. ಈ [illegible] ಪ್ರಶ್ನೋತ್ತರಗಳನ್ನು ಬಚ್ಚಿಡಲಾಗುವುದು. ಬರುವ ವರ್ಷದಿಂದ ಈ ಪದ್ಧತಿಯು ರದ್ದಾಗುವುದು.

### ಕಾಂಗ್ರೆಸ್ ಕಾರ್ಯದರ್ಶಿಗಳ ರಾಜೀನಾಮೆ

ಮೈಸೂರು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಎ ಜಿ ರಾಮಚಂದ್ರರಾಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಹೊಸ ಅಧ್ಯಕ್ಷರಿಗೆ ತಮ್ಮ ಕಾರ್ಯದರ್ಶಿಗಳನ್ನು [illegible] ಆರಿಸಿಕೊಳ್ಳಲು ಅನುಕೂಲವಾಗಲೆಂದು ಈ ಕ್ರಮ ಕೈಗೊಳ್ಳಲಾಗಿದೆ. ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ [illegible] ಯಶೋಧರಮ್ಮನವರು ಜಯಶೀಲರಾಗಿರುವ ಬಗ್ಗೆ ಅವರಿಗೆ ಶ್ರೀ ಎ ಜಿ ರಾಮಚಂದ್ರರಾಯರು ಬುದ್ಧಿ ಕಳುಹಿಸಿದ್ದಾರೆ.

## ಯೂರೋಪಿನಲ್ಲಿ ಟ್ರೂಮನ್-ಸ್ಟ್ಯಾಲಿನ್ ಭೇಟಿ

ವಿಶ್ವ ಶಾಂತಿ ಪಾಲನೆಯ ದೃಷ್ಟಿಯಿಂದ ಜನರಲ್ ಸ್ಟ್ಯಾಲಿನ್ನರು ಅಧ್ಯಕ್ಷ ಟ್ರೂಮನ್ನರೊಡನೆ ಮಾತುಕತೆ ನಡೆಸಲು ಸಿದ್ಧರಿರುವರೆಂದು ಮಾಸ್ಕೋವಿನ ರಾಜಕೀಯ ವೃತ್ತಗಳಲ್ಲಿ ಹೇಳಲಾಗುತ್ತಿದೆ. [illegible] ಮತ್ತು [illegible] ಭೇಟಿ [illegible] ಒಪ್ಪಿ [illegible] ವಿಷಯವು [illegible] ಹೊಸ ಹಾದಿಯನ್ನು [illegible] ಬೇಕಾಗಿದೆಂದು ತಿಳಿದು ಬಂದಿದೆ.

## ಜಮ್ಮುವಿನಲ್ಲಿ ಮುದವಣಿಗರ ಮುಷ್ಕರ

ಕಾಶ್ಮೀರದ ಬಳಿ ಜಮ್ಮುವಿನಲ್ಲಿ ಮೊನ್ನೆ ದಿನ ನಡೆಯಬೇಕಾಗಿದ್ದ ಮದುವೆ ಸಂಬಂಧದಲ್ಲಿ ಬಿಳಿ ಕುದುರೆ ಮೇಲಿನ ಮೆರವಣಿಗೆಯ ವಿಷಯವಾಗಿ ಮುದವಣಿಗರಿಗೆ ಅಸಮಾಧಾನವುಂಟಾಗಿ ಒಂದು ಆಂದೋಳನ ನಡೆದು ಮುದವಣಿಗರು ಮುಷ್ಕರ ಹೂಡಿದ ಪ್ರಸಂಗವು ವರದಿಯಾಗಿದೆ.

ಮದುವೆ ದಿನ ಸಂಜೆ ಮುದವಣಿಗರನ್ನು ಗೆಜ್ಜೆ ಮೊದಲಾದ ಆಭರಣಗಳಿಂದ ಶೃಂಗರಿಸಲ್ಪಟ್ಟ ಬಿಳಿಯ ಕುದುರೆ ಮೇಲೆ ಕೂರಿಸಿ, ಆ ಕುದುರೆಗಳು ವಾದ್ಯಗಳಿಗೆ ಸಮನಾಗಿ ನರ್ತನ ಮಾಡಿಕೊಂಡು ಮೆರವಣಿಗೆ ನಡೆಸುವುದು ಅಲ್ಲಿನ ವಾಡಿಕೆ. ಮೊನ್ನೆ ದಿನ ಅಕಸ್ಮಾತ್ತಾಗಿ ಒಂದೇ ದಿನ ಹೆಚ್ಚಿನ ವಿವಾಹಗಳು ಒದಗಿ ಮುದವಣಿಗರಿಗೆ ಬೇಕಾದಷ್ಟು ಕುದುರೆಗಳು ಒದಗಲಿಲ್ಲ. ಇದಕ್ಕಾಗಿ ಅಸಮಾಧಾನಗೊಂಡು ಮುದವಣಿಗರು ಕಂಕಣ ಕಟ್ಟಿಕೊಳ್ಳಲು ನಿರಾಕರಿಸಿದರು. ಒಂದು ಕಡೆ ವಧುಗಳ ತಂದೆ ತಾಯಿಗಳು ವರನ ಕಡೆಯ ತಂದೆ ತಾಯಿಗಳೊಡನೆ ನಡೆದ ಸಮಾಧಾನದ ಮಾತುಗಳೆಲ್ಲಾ ವಿಫಲವಾದುವು. ವಧುಗಳು ರೋದಿಸುತ್ತಾ ಕುಳಿತರು.

ಅನಂತರ ಹಲವು ಗಣ್ಯ ವ್ಯಕ್ತಿಗಳು ಸಮಾಧಾನ ಹೇಳಿ ಬಿಳಿಯ ಕುದುರೆಗಳ ಅಭಾವವಿರುವುದರಿಂದ ಇತರ ಕುದುರೆಗಳಿಗೇ ಬಿಳಿಯ ಬಟ್ಟೆಯನ್ನು ಹೊದಿಸಿ ಮೆರವಣಿಗೆ ನಡೆಸತಕ್ಕದ್ದೆಂದು ರಾಜಿ ಮಾತು [illegible] ಒಪ್ಪಿಸಿದರು. ಮುದವಣಿಗರು ಅದಕ್ಕೆ ಒಪ್ಪಿ ಮುಷ್ಕರವನ್ನು ಮುಕ್ತಾಯ ಮಾಡಿದರು.

## ಲೇಬರ್ ಪಕ್ಷಕ್ಕೆ ಹೆಚ್ಚಿನ ಬೆಂಬಲ

ಬ್ರಿಟನ್ನಿನಲ್ಲಿ ಉಕ್ಕಿನ ಕೈಗಾರಿಕೆ ರಾಷ್ಟ್ರೀಕರಣದ ಬಗ್ಗೆ ಪಾರ್ಲಿಮೆಂಟ್ ಸಭೆಯಲ್ಲಿ ಲೇಬರ್ ಪಕ್ಷಕ್ಕೆ ೧೬ ಓಟುಗಳ ಬಹುಮತ ದೊರಕಿ ಅಟ್ಲೀ ಸರ್ಕಾರವು ವಿಶ್ವಾಸ ಗಳಿಸಿತು. ನಿನ್ನೆ ಮತ್ತೆ ನಡೆದ ಅಧಿವೇಶನದಲ್ಲಿ ಗೃಹ ನಿರ್ಮಾಣ ಯೋಜನೆ ಬಗ್ಗೆ ಸರ್ಕಾರಕ್ಕೆ ೨೫ ಹೆಚ್ಚಿನ ಓಟುಗಳು ದೊರಕಿ ಮತ್ತೆ ಸರ್ಕಾರದ ಮೇಲೆ ಹೆಚ್ಚಿನ ವಿಶ್ವಾಸ ಸೂಚಿಸಲಾಯಿತು.

## ರಾಷ್ಟ್ರಾಧ್ಯಕ್ಷರ ಆಹ್ವಾನವನ್ನು ನಿಜಾಮರು ನಿರಾಕರಿಸಿದರು

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಬರುವ ಸೆಪ್ಟೆಂಬರ್ ಮತ್ತು ಜನವರಿ ದೆಹಲಿಯಲ್ಲಿ ಕರೆಯುವ ಗವರ್ನರುಗಳ ಮತ್ತು ರಾಜಪ್ರಮುಖರುಗಳ ಸಮ್ಮೇಳನಕ್ಕೆ ಹೈದರಾಬಾದಿನ ನಿಜಾಮರು ಹೋಗಲು ನಿರಾಕರಿಸುವುದರಿಂದ, ಮೈಸೂರಿನ ರಾಜಪ್ರಮುಖರನ್ನು ಅಲ್ಲಿಗೆ ಆಹ್ವಾನಿಸುವುದು ಅಷ್ಟು ಸೂಕ್ತವಲ್ಲವೆಂದು ಭಾವಿಸಲಾಗಿದೆ. ಈ ಸಮ್ಮೇಳನದಲ್ಲಿ ಮೈಸೂರಿನ ಮಹಾರಾಜರು ಭಾಗವಹಿಸಿದರೆ ನಿಜಾಮರ [illegible] ಬಗ್ಗೆ [illegible] ವಿವಾದಗಳು ಏಳಬಹುದೆಂದೂ [illegible]. ಸಮ್ಮೇಳನದ [illegible] ನಿರಾಕರಿಸಿದ ಬಗ್ಗೆ [illegible] ಅಧಿಕೃತವಾಗಿ [illegible]. ನಿಜಾಮರಿಗೆ [illegible] ಪ್ರತ್ಯೇಕವಾದ ಆಹ್ವಾನ [illegible] ಹೇಳಲಾಗಿದೆ.

## ನೆಹರೂ ಮೇಲೆ ಆಜಾದ್ ಕಾಶ್ಮೀರದ ಆಪಾದನೆ

ಪಶ್ಚಿಮ ಪಾಕಿಸ್ತಾನದ ಸಿಂಧನಲ್ಲಿರುವ ಹೈದರಾಬಾದಿನಲ್ಲಿ ಇತ್ತೀಚೆಗೆ ಆಜಾದ್ ಕಾಶ್ಮೀರ ಪಕ್ಷದ ಬಹಿರಂಗ ಸಭೆಯು ಸೇರಿತ್ತು. ಅದರ ಅಧ್ಯಕ್ಷರು ಭಾಷಣ ಮಾಡಿ, ಭಾರತದ ಪ್ರಧಾನಿ ಪಂಡಿತ್ ನೆಹರೂರವರು ಸ್ವಾತಂತ್ರ್ಯ ಪ್ರೇಮಿಯೆಂದು ಹೇಳಿರುವ ಬಗ್ಗೆ ಅಲ್ಲಗಳೆದರು. ಪಂಡಿತ ನೆಹರೂರವರು ಅಸಹಾಯರೂ, ನಿಶ್ಶಸ್ತ್ರರೂ ಆದ ಕಾಶ್ಮೀರದ ಪ್ರಜೆಗಳ ಮೇಲೆ ಬಾಂಬನ್ನು ಸುರಿಸಿದರೆಂದು ಆಪಾದಿಸಿದರು. ಕಾಶ್ಮೀರದ ಪ್ರಜೆಗಳನ್ನು ಅವರು ಮೋಸಪಡಿಸಲು ಅಪೇಕ್ಷಿಸಿರುವರೆಂದೂ ತಿಳಿಸಿದರು. ಬ್ರಿಟನ್, ಅಮೆರಿಕ, ಟರ್ಕಿ ಮುಂತಾದ ರಾಷ್ಟ್ರಗಳು ಕಾಶ್ಮೀರ ಸಮಸ್ಯೆಯ ಬಗ್ಗೆ ಪಾಕಿಸ್ತಾನದ ಪಕ್ಷಪಾತಿಗಳಾಗಿರುವುವೆಂದೂ ಆಜಾದ್ ಕಾಶ್ಮೀರದ ಅಧ್ಯಕ್ಷರು ತಿಳಿಸಿದರು. ಪಾಕಿಸ್ತಾನದವರು ಭಾರತಕ್ಕೆ ಕಾಶ್ಮೀರದ ಬಗ್ಗೆ ಯಾವ ರಿಯಾಯಿತಿಯನ್ನೂ ತೋರಿಸಕೂಡದೆಂದೂ ಹೇಳಿದರು

## ಪ್ರಾಣ ರಕ್ಷಣೆಗಾಗಿ ಒಂದು ದಿನಕ್ಕೆ ೫೦೦ ರೂ.

ಢಾಕಾ ಜಿಲ್ಲೆಗೆ ಸೇರಿದ ನವಾಬ್‌ಗಂಜ್, ಗೌರ್ನದಿ ಮತ್ತು ಬರಿಸಾಲ್ ಎಂಬ ಹಳ್ಳಿಗಳಲ್ಲಿರುವ ಹಿಂದುಗಳು ತಮ್ಮನ್ನು ಜೀವಸಹಿತ ಬಿಡಲು ಅಲ್ಲಿನ ಮುಸ್ಲಿಂ ದರ್ಜ ಸ್ವಯಂಸೇವಕರಿಗೆ ದಿನವೊಂದಕ್ಕೆ ೫೦೦ ರೂ. ಕೊಡುತ್ತಿರುವರೆಂದೂ, ಚಿಟ್ಟಗಾಂಗ್ ಜಿಲ್ಲೆಯಲ್ಲಿರುವ ಹಿಂದುಗಳ ಮನೆಯಿಂದ ಹೊರಗೆ ಬರುವುದೇ ಕಷ್ಟವಾಗಿದೆಯೆಂದೂ ಹಾಗೆ ಬರಬೇಕಾದರೆ ಮುಸ್ಲಿಂ ವೇಷ ಧರಿಸಿ ಬರಬೇಕಾಗಿದೆಯೆಂದೂ ತಿಳಿದುಬಂದಿದೆ

## ಎಣ್ಣೆ ಸಂಸ್ಥೆಯ ಸ್ಥಾಪನೆ

ನಂಜನಗೂಡು ೧೩.

ದಿ ಸ್ಟ್ಯಾಂಡರ್ಡ್ ಆಯಿಲ್ ಮಿಲ್ ಅಂಡ್ ಪ್ರಾಡಕ್ಟ್ಸ್ ಲಿಮಿಟೆಡ್, ಸಂಸ್ಥೆಯವರು ನಂಜನಗೂಡಿನಲ್ಲಿ ಕಪಿಲಾ ನದಿ ತೀರದಲ್ಲಿ ತಮ್ಮ ಕಾರ್ಖಾನೆಯನ್ನು ಕಟ್ಟುವುದಕ್ಕೆ ಗುದ್ದಲಿ ಪೂಜೆಯನ್ನು ನೆರವೇರಿಸಿದರು. ಈ ಸಮಾರಂಭಕ್ಕೆ ಅಧಿಕಾರಿಗಳೂ ಸ್ಥಳೀಯ ಪ್ರಮುಖ ವರ್ತಕರೂ ಮತ್ತು, ವ್ಯವಸಾಯಗಾರರೂ ಆಗಮಿಸಿದ್ದರು

ಕಂಪೆನಿಯ ಮ್ಯಾನೇಜಿಂಗ್ ಏಜೆಂಟರೂ ಮತ್ತು, ಬೇಗೂರ್ ಅಂಡ್ ಕಂಪೆನಿಯ ಮಾಲಿಕರೂ ಆದ ಶ್ರೀ ಬಿ ಎಂ ರಾಜಶೇಖರ ಮೂರ್ತಿಯವರು ಸರ್ವರನ್ನೂ ಸ್ವಾಗತಿಸಿದರು.

ರಿಬಿಲ್ಟ್ ಟೈರುಗಳು
ಶ್ರೇಷ್ಠತೆಗೂ ಮತ್ತು ಬಾಳಿಕೆಗೂ
ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿವೆ
ವಿವರಗಳಿಗೆ ಇಂದೇ ಬರೆಯಿರಿ
ಮೈಸೂರು ಟೈರ್ಸ್,
೧೪೭೬, ದಿವಾನ್ಸ್ ರಸ್ತೆ,
ಮೈಸೂರು

## ಬಿಳಿಯ ಹುಡುಗಿಯನ್ನು ಮದುವೆಯಾದುದರ ಫಲ

ಬಿಳಿಯ ಹುಡುಗಿಯನ್ನು ಮದುವೆಯಾದರೆಂಬ ಆಪಾದನೆಯ ಮೇಲೆ ಆಫ್ರಿಕದ ಬಮಾಂಗ್ವಾಟೊ ಪಂಗಡದ ನಾಯಕರಾದ ಸೆರೆಟ್ಸೆ ಖಾಮಾರವರು ಸ್ವದೇಶಕ್ಕೆ ಹಿಂದಿರುಗಕೂಡದೆಂದು ಬ್ರಿಟಿಷ್ ಸರ್ಕಾರ ವಿಧಿಸಿರುವ ಆಜ್ಞೆಯನ್ನು ಖಂಡಿಸಲು ಕಳೆದ ೧೧ನೇ ತಾ॥ ಲಂಡನ್ನಿನಲ್ಲಿ ಸೇರಿದ್ದ ಸಭೆಯೊಂದರಲ್ಲಿ ಅವರು ಭಾಷಣ ಮಾಡುತ್ತಾ ತಾವು ಬಿಳಿಯ ಹುಡುಗಿಯನ್ನು ಮದುವೆಯಾಗುವ ಸಾಹಸಮಾಡಿದುದರಿಂದ ತಮ್ಮ ಮೇಲೆ ಈ ಉಗ್ರ ಕಾರ್ಯಕ್ರಮ ಕೈಗೊಳ್ಳಲಾಗಿದೆಯೆಂದೂ, ಹೊಟ್ಟೆ ತುಂಬಾ ಅನ್ನವಿಲ್ಲದೆ ತಮಗೆ ನಿಲ್ಲಲು ಸಹ ತ್ರಾಣವಿಲ್ಲವೆಂದೂ ಹೇಳಿದುದಾಗಿ ವರದಿಯಾಗಿದೆ ಸಭೆಯಲ್ಲಿ ಬ್ರಿಟಿಷ್ ಸರ್ಕಾರದ ನೀತಿಯನ್ನು ಖಂಡಿಸುವ ನಿರ್ಣಯಗಳು ಅಂಗೀಕೃತವಾದುವು.

## ಜೋಡಿಯೋಲಿಕೆ ಮನುಷ್ಯರ ಸಂಖ್ಯೆ ಹೆಚ್ಚುತ್ತಿದೆ

ಪ್ರಪಂಚದಲ್ಲಿ ಒಬ್ಬರನ್ನೊಬ್ಬರು ಹೋಲುವಂತಹ ಮನುಷ್ಯರ ಜೋಡಿಗಳು ಹೆಚ್ಚುತ್ತಿರುವುದಾಗಿ ಸ್ವಿಸ್ ಪ್ರವೀಣರೊಬ್ಬರು ಪರಿಶೋಧನೆ ನಡೆಸಿದ್ದಾರೆ. ಅವರುಗಳು ಸಂಬಂಧಿಕರಲ್ಲದಿದ್ದರೂ ಪೂರ್ಣ ಹೋಲಿಕೆಯ ನೋಟವಿರುವುದಾಗಿ ಹೇಳಲಾಗಿದೆ. ಪ್ರಸ್ತುತದಲ್ಲಿ ಪ್ರಪಂಚದಲ್ಲಿ ಆಂ॥ ಹ ೧೨೦೦ ಜೋಡಿ ಮನುಷ್ಯರಿರುವರೆಂದು ಗೊತ್ತಾಗಿದೆ. ೨೦ ವರ್ಷಗಳ ಹಿಂದೆ ೮೦೦ ಜೋಡಿ ಮನುಷ್ಯರು ಮಾತ್ರ ಇದ್ದರೆಂದು ಹೇಳಲಾಗಿದೆ.

## ಬಸ್ ಕಂಡಕ್ಟರ್ ಕೆಲಸಕ್ಕೆ ಮಹಿಳೆಯರು

ಸಿಲೋನಿನ ಇತಿಹಾಸದಲ್ಲಿ ಪ್ರಥಮ ಬಾರಿಯಾಗಿ ಮಹಿಳೆಯರನ್ನು ಬಸ್ ಕಂಡಕ್ಟರ್ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತಿದೆಯೆಂದೂ, ನೂರಾರು ತರುಣಿಯರು ಕೆಲಸಕ್ಕೆ ಅರ್ಜಿ ಹಾಕಿಕೊಂಡಿರುವರೆಂದೂ ವರದಿಯಾಗಿದೆ.

## ಜಲಜನಕ ಬಾಂಬ್ ಹತೋಟಿಗಾಗಿ ಉಪವಾಸ!

ಮಾರ್ಚಿ ೩೧ರ ಒಳಗೆ ರಷ್ಯದೊಡನೆ ಜಲಜನಕಬಾಂಬಿನ ಹತೋಟಿ ಬಗ್ಗೆ ಒಂದು ಒಪ್ಪಂದಕ್ಕೆ ಬ್ರಿಟನ್ನು ಬರದೇ ಹೋದರೆ ಬ್ರಿಟನ್ನಿನಾದ್ಯಂತ ಎಲ್ಲಾ ಕೆಲಸ ಕಾರ್ಯಗಳನ್ನೂ ನಿಲ್ಲಿಸಲು ಉಪವಾಸ ಮುಷ್ಕರವನ್ನು ಪ್ರಾರಂಭಿಸುವುದಾಗಿ ಸಸೆಕ್ಸಿನ ಗುರು ಖಾನ ಡಾ॥ ವ್ಯಾಟರ್‌ಸನ್‌ರು ಹೇಳಿಕೆಯಿತ್ತಿದ್ದಾರೆ.

## ಲಾಯಕ್ ಅಲಿಯ ಆಸ್ತಿಪಾಸ್ತಿಗಳ ವಶ

ಭಾರತ ಸರ್ಕಾರದ ಸೂಚನೆ ಪ್ರಕಾರ ಹೈದರಾಬಾದಿನ ಮಾಜಿ ಪ್ರಧಾನಿ ಲಾಯಕ್ ಆಲಿಗೆ ಸೇರಿದ ೨೦ ಲಕ್ಷ ರೂ ಆಸ್ತಿಪಾಸ್ತಿಗಳನ್ನೂ, ಅಲ್ಲಿನ ಕೈಗಾರಿಕಾ ಸಂಸ್ಥೆಗಳಲ್ಲಿ ಅವರಿಗಿರುವ ಷೇರುಗಳನ್ನೂ ನಿರಾಶ್ರಿತರ ಆಸ್ತಿಯೆಂದು ಪರಿಗಣಿಸಿ ಅಲ್ಲಿನ ಮರುವಸತಿ ಶಾಖಾ ಅಧಿಕಾರಿಯವರು ತಮ್ಮ ವಶಕ್ಕೆ ತೆಗೆದುಕೊಂಡಿರುವರೆಂದು ಹೇಳಲಾಗಿದೆ

## ಪಾಕಿಸ್ತಾನಕ್ಕೆ ಖೋತಾ ಬಜೆಟ್

ಬರುವ ವರ್ಷದ ಪಾಕಿಸ್ತಾನದ ಬಜೆಟ್ಟಿನಲ್ಲಿ ೨ ಕೋಟಿ ಚಿಲ್ಲರೆ ರೂ. ಗಳಷ್ಟು ಖೋತಾ ಬರುವುದೆಂದು ಹೇಳಲಾಗಿದೆ. ಇದನ್ನು ಸರಿದೂಗಿಸಲು ಪೆಟ್ರೋಲು, ಸೀಮೆ ಎಣ್ಣೆ, ಮೋಟಾರು, ಬೈಸಿಕಲ್ಲು ಮೊದಲಾದುವುಗಳ ಮೇಲೆ ಸುಮಾರು ೨ ಕೋಟಿ ರೂ. ಗಳಷ್ಟು ಹೊಸ ಸುಂಕವನ್ನು ವಿಧಿಸಲಾಗುವುದೆಂದು ಗೊತ್ತಾಗಿದೆ

## ಬೆಲ್ಜಿಯಂ ದೊರೆ ಪರವಾಗಿ ಬಹುಮತಾಭಿಪ್ರಾಯ

ದೇಶಭ್ರಷ್ಟರಾಗಿದ್ದ ಬೆಲ್ಜಿಯಮ್ಮಿನ ದೊರೆ ಲಿಯೊಪಾಲ್ಡರನ್ನು ಪುನಃ ಸಿಂಹಾಸನಕ್ಕೆ ಕರೆಯಲು ಮೊನ್ನೆ ಅಲ್ಲಿ ಜನಾಭಿಪ್ರಾಯ ಸಂಗ್ರಹಣವು ನಡೆದು ಶೇಕಡ ೫೭ ಮಂದಿ ಅವರ ಪರವಾಗಿ ಓಟು ಮಾಡಿದ್ದಾರೆಂದು ತಿಳಿದುಬಂದಿದೆ.

## ಈಜಿಪ್ಟಿನಲ್ಲಿ ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆ

ಈಜಿಪ್ಟ್ ಇನ್ನು ಮುಂದೆ ಸ್ವಂತವಾಗಿ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಬಗ್ಗೆ ಅಲ್ಲಿನ ನೈಲ್ ಪ್ರದೇಶದಲ್ಲಿ ಮೂರು ಕಾರ್ಖಾನೆಗಳನ್ನು ಸ್ಥಾಪಿಸಲಿದೆ. ಕಾರ್ಖಾನೆಗೆ ಬೇಕಾದ ಯಂತ್ರೋಪಕರಣಗಳನ್ನು ಸ್ವೀಡನ್ ಮತ್ತು ಬ್ರಿಟನ್ನುಗಳಿಂದ ಕೊಳ್ಳುವರು

## ಲಾಯಕಾಲಿ ಪರಾರಿ ಬಗ್ಗೆ ಹೈದ್ರಾಬಾದ್ ಸರ್ಕಾರದ ಪ್ರಕಟಣೆ

ಹೈದರಾಬಾದಿನ ಮಾಜಿ ಪ್ರಧಾನಿ ಲಾಯಕಾಲಿಯು ಪರಾರಿಯಾಗಿರುವ ಬಗ್ಗೆ ಅಲ್ಲಿನ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿ ಹೀಗೆ ತಿಳಿಸಿದ್ದಾರೆ:- ಲಾಯಕಾಲಿಯು ತಪ್ಪಿಸಿಕೊಂಡಿರುವ ಬಗ್ಗೆ ತನಿಖೆ ನಡೆಯುತ್ತಿದೆ. ಕಳೆದ ಮೂರನೇ ತಾ॥ ಅವರು ತಪ್ಪಿಸಿಕೊಂಡಿರಬಹುದೆಂದೂ, ಮೂರನೇ ದಿನ ಅವರ ಪತ್ನಿಯು ತಪ್ಪಿಸಿಕೊಂಡಿರಬಹುದೆಂದೂ ಭಾವಿಸಲಾಗಿದೆ. ಅವರು ತಪ್ಪಿಸಿಕೊಂಡ ಬಗ್ಗೆ ಅಜಾಗರೂಕತೆಯಿಂದಿದ್ದ ಅಧಿಕಾರಿಗಳ ಮೇಲೆ ಕ್ರಿಯಾಕ್ರಮ ಕೈಗೊಳ್ಳಲು ಸರ್ಕಾರವು ಪರ್ಯಾಲೋಚಿಸುತ್ತಿದೆ. ಇನ್ನು ಒಂದು ವಾರದೊಳಗೆ ಈ ಬಗ್ಗೆ ನಿರ್ಧಾರವು ಹೊರಬೀಳಲಿದೆ.

## ಲಿಯೊಪೋಲ್ಡರಿಗೆ ಈಗಲೇ ಬೆಲ್ಜಿಯಂ ಪಟ್ಟ ಇಲ್ಲ

ಲಿಯೋಪೋಲ್ಡರು ಬೆಲ್ಜಿಯಮ್ಮಿನ ದೊರೆಗಳಾಗಬೇಕೆಂಬ ಬಗ್ಗೆ ಅಲ್ಲಿನ ಪ್ರಜಾಭಿಪ್ರಾಯ ಸಂಗ್ರಹಣೆಯಲ್ಲಿ ಬಹುಮತ ದೊರೆತಿತು. ಆದರೂ ಅವರಿಗೆ ಈ ಕೂಡಲೇ ಅಲ್ಲಿನ ಸಿಂಹಾಸನರೋಹಣಕ್ಕೆ ಅವಕಾಶ ದೊರಕಲಾರದೆಂದು ಹೇಳಲಾಗಿದೆ

## ಹಡಗಿನಿಂದ ಸಮುದ್ರಕ್ಕೆ ಹಾರಿದ ಮಹಿಳೆ

ಸರ್ಕೇಷಿಯ ಎಂಬ ಹಡಗು ೬೧೦ ಪ್ರಯಾಣಿಕರನ್ನು ಹೊತ್ತು ಬೊಂಬಾಯಿನಿಂದ ಹೊರಟು ಮೊನ್ನೆ ಲಿವರ್ ಪೂಲನ್ನು ತಲುಪಿತು. ಅದರಲ್ಲಿದ್ದ [illegible] ಎಂಬಾಕೆಯು ಲಿವರ್ ಪೂಲ್ ಬಂದರನ್ನು ಹಡಗು ತಲುಪಿದಾಗ ಮಾಯವಾಗಿದ್ದಳು ಸಮುದ್ರ ತೀರದಲ್ಲಿ ಸುಮಾರು ೫೦ ಮೈಲಿ ಫಾಸಲೆಯಲ್ಲಿ ಹುಡುಕಲಾಯಿತು ಆಕೆಯು ಸಿಕ್ಕಲಿಲ್ಲ ಆಕೆ ಸಮುದ್ರಕ್ಕೆ ಹಾರಿ ಪ್ರಾಣ ಕಳೆದುಕೊಂಡಳೆಂದು ಭಾವಿಸಲಾಗಿದೆ

॥ ಶ್ರೀ ॥
ಗಾಯತ್ರೀ ಟಾಕೀಸ್
ದಿನವಹಿ 3 ಪ್ರದರ್ಶನಗಳು
15-3-50 ರಿಂದ 2 ದಿನಗಳು ಮಾತ್ರ
ಎಂ ಜಿ. ಎಂ. ರವರ
ಬಿಗ್ ಸಿಟಿ
BIG CITY
With:-Margaret O' Brien
& Robert Preston

ಉಗಾದಿ ಹಬ್ಬದ ಪ್ರಯುಕ್ತ
ನವೀನವಾದ ಬಾರ್ಡರುಗಳಲ್ಲಿ ಧರ್ಮಾವರಂ,
ಆರ್ಟ ಮತ್ತು ನೂಲು ಸೀರೆಗಳು ಬಂದಿವೆ
ದಯವಿಟ್ಟು ಭೇಟಿ ಕೊಡಿ
ಗುರುದೇವಾ ಹಾಲ್
ಶಿವರಾಂಪೇಟೆ, ಮೈಸೂರು

ರಾಜಕಮಲ್
ಟಾಕೀಸ್
10-3-50 ರಿಂದ
ಜನಭರಿತವಾದ ೧೩ನೇ ವಾರ
ದಿನವಹಿ 2 ಪ್ರದರ್ಶನಗಳು
ಜೀವನ
—: ಭೂಮಿಕೆ: —
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ

ಮದುವೆ ಜವಳಿಗಳಿಗೆ
ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪೂರ್ ಸೀರೆಗಳಿಗೆ
ಎಂ. ವಿ. ಭೋಜಯ್ಯ ಬ ಎ. & ಬ್ರದರ್
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಯುಗಾದಿ ಹಬ್ಬಕ್ಕೆ ಸೊಬಗಿನ ಸುಂದರ ಸೀರೆಗಳು
ಅಚ್ಚುಮೆಚ್ಚಾದ ನಮೂನೆಗಳಲ್ಲಿ ಬಂದಿವೆ. ಬಾಹುಸಾನ್ ಕಂಪೆನಿ, ಬ್ಯಾಂಕ್ ರೋಡ್, ಮೈಸೂರು.

Edited, printed and published by A. R. Nagarajan at Sadhvi Press, D. Subbiah Road, Mysore

ರಿ. ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ೪ ಫೆಬ್ರವರಿ ೧೯೫೨ [ಸಂಚಿಕೆ ೧೯೩

# ಇಟಲಿ ನಿರುದ್ಯೋಗಿಗಳಿಗೆ ಜಮೀನುಗಳ ಹಂಚಿಕೆ

## ಪ್ರಭುಗಳ ಮೆರವಣಿಗೆ

ಸ್ವಂ ವಾ ಪ್ರೋ] ಬೆಂಗಳೂರು, ೧೮ ಶ್ರೀಮನ್ಮಹಾರಾಜರವರು ಈ ದಿನ ಬೆಳಗ್ಗೆ ೮-೫೫ ಘಂಟೆಗೆ ಮೈಸೂರಿನಿಂದ ಆಗಮಿಸಿದರು

ಬೆಳಗ್ಗೆ ೯-೩೦ ಘಂಟೆಗೆ ಅವರ ಸಮ್ಮುಖದಲ್ಲಿ ಶಾಸನ ಸಭಾಧ್ಯಕ್ಷರಾದ ಶ್ರೀ ವಿ ವೆಂಕಟಪ್ಪನವರೂ, ಉಪಾಧ್ಯಕ್ಷರಾದ ಶ್ರೀ ತಿಮ್ಮಾಬೋವಿಯವರೂ ನೂತನ ರಾಜ್ಯಾಂಗದ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಮಧ್ಯಾಹ್ನ ಹೊಸ ಶಾಸನ ಸಭೆಯಲ್ಲಿ ಭಾಷಣ ಮಾಡುವ ಮೊದಲು ಶ್ರೀಮನ್ಮಹಾರಾಜರವರು ಸಕಲ ಮರ್ಯಾದೆಗಳೊಡನೆ ಅರಮನೆಯಿಂದ ಪುರಭವನಕ್ಕೆ ಮೆರವಣಿಗೆಯಲ್ಲಿ ತೆರಳಿದರು ಅಲ್ಲಿ ಶಾಸನ ಸಭಾಧ್ಯಕ್ಷರಾದ ಶ್ರೀ ವಿ ವೆಂಕಟಪ್ಪನವರು ಅವರನ್ನು ಸ್ವಾಗತಿಸಿದರು ಮಧ್ಯಾಹ್ನ ೩ ಘಂಟೆಗೆ ಶ್ರೀಮನ್ಮಹಾರಾಜರವರು ಶಾಸನ ಸಭೆಯಲ್ಲಿ ಭಾಷಣ ಮಾಡಿದನಂತರ ಅಧ್ಯಕ್ಷರು ಅವರನ್ನು ಬೀಳ್ಕೊಟ್ಟರು ಸಭೆಯು ಇಂದಿನ ಕಾರ್ಯಕಲಾಪಗಳಲ್ಲಿಗೆ ಮುಕ್ತಾಯವಾದುವು. ಶ್ರೀಮನ್ಮಹಾರಾಜರವರು ಮೆರವಣಿಗೆಯಲ್ಲಿ ಅರಮನೆಗೆ ಹಿಂದಿರುಗಿದರು

## ಪದಾರ್ಥಗಳ ಬೆಲೆಯನ್ನು ತೋರಿಸುವ ಪಟ್ಟಿಯನ್ನಿಡಬೇಕು

ಅಧಿಕ ಲಾಭ ಮತ್ತು ತೆರಿಗೆ ಕಾನೂನಿನ ಪ್ರಕಾರ ಸಂಸ್ಥಾನದಲ್ಲಿ ಎಲ್ಲ ವರ್ತಕರೂ ತಮ್ಮ ಅಂಗಡಿಗಳಲ್ಲಿ ಪದಾರ್ಥಗಳ ಬೆಲೆಯನ್ನು ತೋರಿಸುವ ಪಟ್ಟಿಯನ್ನು ಇಂಗ್ಲೀಷಿನಲ್ಲಾಗಲೀ, ಕನ್ನಡದಲ್ಲಾಗಲೀ ಇಲ್ಲವೇ ಎರಡು ಭಾಷೆಗಳಲ್ಲೂ ಇಡಬೇಕೆಂದು ಸಿವಿಲ್ ಸಪ್ಲೈ ಕಂಟ್ರೋಲರವರು ಆಜ್ಞೆ ಹೊರಡಿಸಿದ್ದಾರೆ ಇದನ್ನು ಉಲ್ಲಂಘಿಸುವವರು ಶಿಕ್ಷೆಗೆ ಗುರಿಯಾಗುವರೆಂದೂ ತಿಳಿಸಲಾಗಿದೆ

## ಸಮಾಜವಾದಿ ಪಕ್ಷದ ಸಮ್ಮೇಳನ

ಬರುವ ತಿಂಗಳು ೧೫ ಮತ್ತು ೧೬ನೇ ತಾರೀಖು ದಾವಣಗೆರೆಯಲ್ಲಿ ಮೈಸೂರು ಸಂಸ್ಥಾನದ ಸಮಾಜವಾದಿ ಪಕ್ಷದ ಸಮ್ಮೇಳನವು ನಡೆಯುವುದು ಆಚಾರ್ಯ ನರೇಂದ್ರ ದೇವರನ್ನು ಅಧ್ಯಕ್ಷತೆ ವಹಿಸಲು ಆಹ್ವಾನಿಸಲಾಗಿದೆ

## ಚಾರಲ್ಸ್ ನರೋನಾರವರ ನಿಧನ

ಸರ್ಕಾರದ ಅಭಿವೃದ್ಧಿ ಶಾಖಾ ಕಾರ್ಯದರ್ಶಿಯಾಗಿದ್ದ ಶ್ರೀ ಚಾರಲ್ಸ್ ನರೋನಾರವರು ನಿನ್ನೆ ದಿನ ಮದರಾಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

## ಪಡಿತರ ರದ್ದು ಮಾಡಲು ಪಟ್ಟಾಭಿಯವರ ಒತ್ತಾಯ

ಕೇಂದ್ರ ಪಾರ್ಲಿಮೆಂಟಿನಲ್ಲಿ ಆಹಾರದ ಚರ್ಚೆ ನಡೆಯುತ್ತಿದ್ದಾಗ ಕಾಂಗ್ರೆಸ್ ಅಧ್ಯಕ್ಷ ಡಾ|| ಪಟ್ಟಾಭಿಯವರು ಮಾತನಾಡುತ್ತಾ, ದೇಶದಲ್ಲಿ ಪಡಿತರ ಪದ್ಧತಿ ಜಾರಿಯಲ್ಲಿರುವವರೆಗೆ ಅನೇಕ ಅನಾಹುತಗಳು ಸಂಭವಿಸುವುವೆಂದೂ, ಅದನ್ನು ಕೂಡಲೇ ರದ್ದು ಮಾಡಬೇಕೆಂದೂ ಹೇಳಿದರು ಪಡಿತರ ರದ್ದಾದಲ್ಲಿ ಕೆಲವು ಕಾಲ ಪದಾರ್ಥಗಳ ಬೆಲೆ ಏರಬಹುದಾದರೂ ಕಂಟ್ರೋಲು ಮತ್ತು ಪಡಿತರ ಪದ್ಧತಿಯಿಂದ ಸಂಭವಿಸುವಷ್ಟು ಅನಾಹುತ ಅದರಿಂದಾಗುವುದಿಲ್ಲ, ಆಹಾರ ಧಾನ್ಯಗಳ ಸರಬರಾಜು ತಾನಾಗಿ ಏರ್ಪಡುವಿಕೆಯಿಂದ ಆಗುತ್ತದೆ ಎಂದು ಅವರು ನುಡಿದರು

## ಕಮ್ಯೂನಿಸ್ಟ್ ವಿದ್ಯಾರ್ಥಿಯ ಬಂಧನ

ಮೈಸೂರು ೧೮ ಮಹಾರಾಜ ಕಾಲೇಜಿನ ಸೀನಿಯರ್ ಬಿ ಎ ತರಗತಿಯಲ್ಲಿ ಓದುತ್ತಿರುವ ಶ್ರೀ ಕೆ. ವಿ ಕೃಷ್ಣಮೂರ್ತಿ ಎಂಬ ವಿದ್ಯಾರ್ಥಿಯು ಕಮ್ಯೂನಿಸ್ಟನೆಂಬ ದಾಗಿ ಇಲ್ಲಿನ ಪೊಲೀಸರು ನಿನ್ನೆ ಬಂಧಿಸಿದ್ದಾರೆ

### ಪಂಚಾಂಗ ಸ್ವೀಕಾರ

ರಾಜಧಾನಿಯ ಜ್ಯೋತಿರ್ವಿದ ಸಿದ್ಧಾಂತಿ ಶ್ರೀ ಎ. ಸಚ್ಚಿದಾನಂದ ಜೋಯಿಸರವರುಗಳು ಶ್ರೀ ಎಂ ಎಸ್ ಚಕ್ರಪಾಣಿ ಜೋಯಿಸರು ನವೆಗೆ ಬರುವ ಶ್ರೀ ವಿಕೃತಿ ನಾಮ ಸಂವತ್ಸರದ ಸಿದ್ಧಾಂತ ಪಂಚಾಂಗವನ್ನು ಮಹಾಸ್ವಾಮಿಯವರಿಂದ ಸ್ವೀಕರಿಸಿರುತ್ತಾರೆ ಇದರ ಫಲವಾಗಿ ಅನೇಕವಾದ ಫಲಗಳೇ ಮುಂತಾದ ಬಹುಮಾನಗಳು ಕೊಡಲ್ಪಟ್ಟಿವೆ

## ಬ್ರಿಟಿಷ್ ಹಡಗು ತಯಾರಿಕೆಗೆ ಜಪಾನಿನ ಪೈಪೋಟಿ

ಬ್ರಿಟನ್ನಿನ ಹಡಗು ತಯಾರಿಕೆಗೆ ಜಪಾನಿನಿಂದ ಹೆಚ್ಚಿನ ಪೈಪೋಟಿ ಒದಗಿದೆಯೆಂದು ವರದಿಯಾಗಿದೆ. ಯೂರೋಪಿನ ಕೆಲವು ರಾಷ್ಟ್ರಗಳಿಗೆ ಹಡಗುಗಳನ್ನು ಕಟ್ಟುವ ಸಲುವಾಗಿ ಬಾರಿ ಕಂಟ್ರಾಕ್ಟುಗಳನ್ನು ಜಪಾನು ಪಡೆದಿದೆ ಇದರಿಂದ ಬ್ರಿಟನ್ನಿನ ಹಡಗು ತಯಾರಿಕೆಗೆ ಧಕ್ಕೆ ತಗಲಿ ಗಾಬರಿಯುಂಟಾಗಿದೆಯೆಂದೂ, ಜಪಾನು ಹೀಗೆ ಪೈಪೋಟಿ ನಡೆಸುತ್ತಿದೆಯೆಂಬುದನ್ನು ಪರಿಶೀಲಿಸಬೇಕೆಂದು ಬ್ರಿಟನ್ನಿನ ವಿದೇಶಾಂಗ ಕಛೇರಿಗೆ ಸೂಚನೆ ಕೊಡಲಾಗಿದೆಯೆಂದೂ ಗೊತ್ತಾಗಿದೆ

## ಅಣು ಧಾಳಿಯಿಂದ ರಕ್ಷಣೆ ಕೊಡುವ ಕಾಲೋನಿ ರಚನೆ

ಅಮೆರಿಕದಲ್ಲಿ ಅಣು-ಬಾಂಬು ಧಾಳಿ ಬಗ್ಗೆ ಭೀತಿಯು ಹೆಚ್ಚುತ್ತಿದೆ ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಅಲ್ಲಿನ ಅನೇಕ ವಾಣಿಜ್ಯ ಬಂಡವಾಳಗಾರರು ಹೆಚ್ಚು ಸಂಪಾದನೆಯತ್ತ ತೊಡಗಿದ್ದಾರೆ ಅವರುಗಳು ಪರ್ವತದ ತಪ್ಪಲು ಪ್ರದೇಶಗಳಲ್ಲಿ ಭದ್ರವಾದ ವಸತಿ ಗೃಹಗಳನ್ನು ಕಲ್ಪಿಸಲಾಗಿದೆ ಮ. ವಸ್ತು ಇಲ್ಲಿ ಎಲ್ಲ ಸೌಕರ್ಯಗಳನ್ನೂ ಒದಗಿಸಲಾಗುವುದೆಂದೂ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಪ್ರಕಟಿಸುತ್ತಿರುವರೆಂದೂ ಹೇಳಲಾಗಿದೆ

## ನೂತನ ಶಾಸನ ಸಭೆಯ ಆರಂಭ

### ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

ಸ್ವಂ ವಾ ಪ್ರೋ] ಬೆಂಗಳೂರು ೧೮ ಈ ದಿನ ಬೆಳಗ್ಗೆ ೧೦-೧೦ ಘಂಟೆಗೆ ಶಾಸನ ಸಭಾ ಭವನದಲ್ಲಿ ನೂತನ ಶಾಸನ ಸಭೆಯ ಮೊದಲನೇ ಅಧಿವೇಶನವು ಶ್ರೀ ವಿ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಚುನಾಯಿತ ಸದಸ್ಯರ ಹಾಜರಿದ್ದರು. ರಾಜೀನಾಮೆ ಕೊಟ್ಟಿರುವ ನಾಲ್ಕು ಜನರೂ ಶ್ರೀ ನಿಜಲಿಂಗಪ್ಪನವರೂ ಬಂದಿರಲಿಲ್ಲ

ಶ್ರೀಗಳಾದ ಎಲ್ ಸಿದ್ದಪ್ಪ ಟಿ ಸಿದ್ದಯ್ಯ, ಹೆಚ್ ಬೋರೇಗೌಡ, ಮುಹಮ್ಮದ್ ಇಮಾಂ, ಮುಹಮ್ಮದ್ ವಲಿ ಖಾನ್ ಮತ್ತು ಮಹಮೂದ್ ಷರೀಫ್ ರವರು ಪ್ರತಿಕೂಲವಾದ ವಿರೋಧ ಪಕ್ಷವನ್ನು ರಚಿಸಿಕೊಂಡು ಬೇರೆಯಾಗಿ ಕುಳಿತಿದ್ದರು.

ಅಧ್ಯಕ್ಷರು ಸಭೆಯ ಉದ್ದೇಶವನ್ನು ವಿವರಿಸಿ, ನೂತನ ರಾಜ್ಯಾಂಗದ ನಿಯಮದಂತೆ ಸದಸ್ಯರೆಲ್ಲರೂ ಪ್ರಮಾಣ ವಚನವನ್ನು ಸ್ವೀಕರಿಸಬೇಕೆಂದು ತಿಳಿಸಿದರು.

ಜನಾಬ್ ಮಹಮದ್ ಇಮಾಂರವರು ಕ್ರಿಯಾಲೋಚನವನ್ನೆತ್ತಿ ಹಿಂದೆ ಇದ್ದ ರಾಜ್ಯಾಂಗ ಸಭೆಯನ್ನೇ ಶಾಸನ ಸಭೆಯಾಗಿ ಪರಿವರ್ತನೆ ಮಾಡಿರುವುದರಿಂದ ಸದಸ್ಯರು ನಾಮಕರಣ ಮಾಡಲ್ಪಟ್ಟವರೆಂದು ಭಾವಿಸಬೇಕೆ, ಅಥವಾ ಚುನಾಯಿತರಾದವರೆಂದು ತಿಳಿಯಬೇಕೆ? ಎಂಬ ಸಂದೇಹ ವ್ಯಕ್ತವಾಗಿದೆಯೆಂದು ಹೇಳಿದರು ಶ್ರೀ ಎಲ್ ಸಿದ್ದಪ್ಪನವರು ಅದನ್ನು ಸಮರ್ಥಿಸಿದರು ಭಾರತ ರಾಜ್ಯಾಂಗದಲ್ಲಿ ವ್ಯಕ್ತವಾಗಿರುವಂತೆ ಕ್ರಮ ಪ್ರಕಾರವಾಗಿ ರಾಜ್ಯಾಂಗ ಸಭೆಯನ್ನೇ ಶಾಸನ ಸಭೆಯಾಗಿ ಬದಲಾಯಿಸಲಾಗಿದೆಯೆಂದೂ, ಕೇಂದ್ರದಲ್ಲೂ ಇದೇ ಸನ್ನಿವೇಶ ಉಂಟಾಗಿದೆಯೆಂದೂ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಕ್ರಿಯಾಲೋಚನದಲ್ಲಿ ತಿಳಿಸಿದರು. ಶ್ರೀ ಟಿ ಸುಬ್ರಹ್ಮಣ್ಯಂ ರವರು ಇದನ್ನು ಸಮರ್ಥಿಸಿದರು ಕ್ರಿಯಾಲೋಚನವನ್ನು ಅಧ್ಯಕ್ಷರು ತಳ್ಳಿಹಾಕಿದರು. ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸಿದ ಮೇಲೆ ೧೧-೫೫ ಘಂಟೆಗೆ ಸಭೆ ಮುಗಿಯಿತು

## ಶಾಸನ ಸಭೆಯಲ್ಲಿ ಪ್ರಭುಗಳ ಆರಂಭ ಭಾಷಣ

ಈ ದಿನ ಮಧ್ಯಾಹ್ನ ೩ ಘಂಟೆಗೆ ಪುರಭವನದಲ್ಲಿ ಶ್ರೀಮನ್ಮಹಾರಾಜರವರು ಶಾಸನ ಸಭೆಯ ಬಜೆಟ್ ಅಧಿವೇಶನದ ಆರಂಭ ಭಾಷಣ ಮಾಡುತ್ತಾ, ಹೀಗೆ ತಿಳಿಸಿದರು:-

ಭಾರತದ ಹೊಸ ರಾಜ್ಯಾಂಗದ ಪ್ರಕಾರ ನಾನು ಸಂಸ್ಥಾನದ ರಾಜಪ್ರಮುಖರಾಗಿ ಇಂದಿನ ಸಮಾರಂಭದ ಆರಂಭೋತ್ಸವವನ್ನು ನೆರವೇರಿಸಲು ಸಂತೋಷ ಪಡುತ್ತೇನೆ. ಈ ಸಭೆಯ ಎಲ್ಲ ಸದಸ್ಯರಿಗೂ ಸುಸ್ವಾಗತವನ್ನು ನಾನು ಬಯಸುತ್ತೇನೆ. ಭಾರತವು ಸರ್ವತಂತ್ರ ಸ್ವತಂತ್ರ ಪ್ರಜಾರಾಜ್ಯವಾಗುವುದರಲ್ಲಿ ಅಪಾರವಾದ ತ್ಯಾಗ ಮಾಡಿದ ದೇಶ ಭಕ್ತರಿಗೆ ನಮ್ಮ ಕೃತಜ್ಞತೆಗಳು ಸಲ್ಲತಕ್ಕವಾಗಿವೆ. ಈ ಕಾರ್ಯದಲ್ಲಿ ಮೈಸೂರು ಸಹ ತನ್ನ ಪಾತ್ರವನ್ನು ವಹಿಸಿದೆ ಇದಕ್ಕಾಗಿ ನಾವು ಹೆಮ್ಮೆ ಪಡಬೇಕಾಗಿದೆ ಸಂಸ್ಥಾನವು ಭಾರತದೊಡನೆ ಐಕ್ಯವಾಗಿ ಇತರ ಪ್ರಾಂತ್ಯಗಳಂತೆ ಸಮಾನವಾದ ಹಕ್ಕುಬಾಧ್ಯತೆಗಳನ್ನು ಅನುಭವಿಸಲಿದೆ.

ಸಂಸ್ಥಾನದ ಬಜೆಟ್ಟನ್ನು ಪ್ರಸ್ತಾಪಿಸುತ್ತಾ, ಕೇಂದ್ರ ಸರ್ಕಾರದವರು ಸಂಸ್ಥಾನದ ಹಣಕಾಸು, ರೈಲ್ವೆ ಮೊದಲಾದ ಖಾತೆಗಳನ್ನು ವಹಿಸಿಕೊಳ್ಳಲಿರುವುದರಿಂದ ಸಂಸ್ಥಾನದ ಬಜೆಟ್ಟಿನ ಮೇಲಿನ ಜವಾಬ್ದಾರಿಯು ಕೇಂದ್ರ ಸರ್ಕಾರಕ್ಕೂ ಇರುವುದೆಂದು ಪ್ರಭುಗಳು ತಿಳಿಸಿದರು ಸಂಸ್ಥಾನದ ಸರ್ವತೋಮುಖವಾದ ಅಭಿವೃದ್ಧಿಗೆ ಪೂರಕವಾದ ಬಜೆಟ್ಟನ್ನು ನಮ್ಮ ಸರ್ಕಾರದವರು ತಯಾರಿಸಿ, ಅದು ಸಭೆಯ ಒಪ್ಪಿಗೆಗೂ ಪಾತ್ರವಾಗಲೆಂದು ಹಾರೈಸುತ್ತೇನೆ-ಎಂದು ಅವರು ಹೇಳಿದರು

ಬೊಂಬಾಯಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಅಲ್ಲಿನ ನ್ಯಾಯಾಧೀಶರನ್ನು ಹುಜೂರರೆಂದು ಸಂಬೋಧಿಸಕೂಡದೆಂದೂ, ಅದಕ್ಕೆ ಪ್ರತಿಯಾಗಿ 'ನ್ಯಾಯ' (ನ್ಯಾಯಾಧಿಪ)ಎಂದು ಸಂಬೋಧಿಸಬೇಕೆಂದೂ ತಿಳಿಸಿದ್ದಾರೆ.

ಶ್ರೀ ಪುಟ್ಟಸ್ವಾಮಿ ಅರಸಿನವರ ನಿವೃತ್ತಿ ಸಂಬಂಧವಾಗಿ ಕೇಂದ್ರ ಸರ್ಕಾರದಿಂದ ಪ್ರಧಾನ ಸಚಿವ ಶ್ರೀ ಕೆ. ಸಿ. ರೆಡ್ಡಿಯವರಿಗೂ ಮತ್ತು ಚೀಫ್ ಜಸ್ಟಿಸ್ ಶ್ರೀ ಮೇದಪ್ಪನವರಿಗೂ ಪತ್ರಗಳು ಬಂದಿರುವುವೆಂದು ಹೇಳಲಾಗಿದೆ

## ಇಟಲಿಯಲ್ಲಿ ರೈತರಿಗೆ ಜಮೀನುಗಳ ಹಂಚಿಕೆ

ಇಟಲಿಯಲ್ಲಿ ಶ್ರೀಮಂತ ಜಮೀನುದಾರರ ಜಮೀನುಗಳನ್ನು ವಶಪಡಿಸಿಕೊಂಡು ಅವುಗಳನ್ನು ಸುಮಾರು ೧ ಲಕ್ಷ ನಿರುದ್ಯೋಗಿ ರೈತ ಕುಟುಂಬಗಳಿಗೆ ಹಂಚುವ ಯೋಜನೆಯನ್ನು ಅಲ್ಲಿನ ಪ್ರಧಾನಿ ಗ್ಯಾಸ್ಪೆರಿಯವರು ತಯಾರಿಸಿದ್ದಾರೆ ಕಳೆದ ಕೆಲವು ದಿವಸಗಳಿಂದ ಅಲ್ಲಿನ ರೈತರು ಕೈಗೊಂಡಿದ್ದ ಮುಷ್ಕರಗಳ ಫಲವಾಗಿ, ದೇಶದಲ್ಲಿ ನಿರುದ್ಯೋಗಿಗಳನ್ನು ನಿವಾರಿಸಲು ಮತ್ತು ಪ್ರಬಲವಾಗಿ ಹರಡುತ್ತಿರುವ ಕಮ್ಯೂನಿಸಮ್ಮನ್ನು ತಡೆಗಟ್ಟಲು ಈ ಕ್ರಾಂತಿಕಾರಕ ತೀರ್ಮಾನವನ್ನು ಕೈಗೊಳ್ಳಲಾಗಿದೆ ಜಮೀನ್ದಾರರುಗಳಿಗೆ ಪಡೆಯಬಹುದಾದ ಮೊಬಲಗಿನಲ್ಲಿ ಕಾಲು ಭಾಗವನ್ನು ಕೊಟ್ಟು ಉಳಿದುದನ್ನು ಸರ್ಕಾರದ ಪತ್ರಗಳ ಮೂಲಕ ಕೊಡಲಾಗುವುದು. ೨೫ ವರ್ಷಗಳ ಅವಧಿಯಲ್ಲಿ ಅವರು ಆ ಪತ್ರಗಳಿಗೆ ನಗದು ಹಣ ಪಡೆಯಬಹುದೆಂದು ಹೇಳಲಾಗಿದೆ.

## ಏಶಿಯಾ ರಾಷ್ಟ್ರಗಳ ಏಕೀಕರಣವಾಗಬೇಕು

### ಲಾರ್ಡ್ ಲೇಟನ್‌ರವರ ಹೇಳಿಕೆ

ಅಮೆರಿಕದಲ್ಲಿ ಪ್ರವಾಸ ಕೈಗೊಳ್ಳುವ ಸಲುವಾಗಿ ವಾಷಿಂಗ್ಟನ್ನಿಗೆ ಆಗಮಿಸಿರುವ ಏಷ್ಯಾ ಕೌನ್ಸಿಲಿನ ಉಪಾಧ್ಯಕ್ಷ ಲಾರ್ಡ್ ಲೇಟನ್‌ರವರು ಒಂದು ಹೇಳಿಕೆಯಿತ್ತು ಯೂರೋಪ್ ಖಂಡದ ಪ್ರಜೆಗಳ ಹಿತದೃಷ್ಟಿಯಿಂದ ಕೂಡಲೇ ಏಷ್ಯಾ ಎಲ್ಲ ರಾಷ್ಟ್ರಗಳ ಏಕೀಕರಣವಾಗಬೇಕೆಂದೂ ಇಲ್ಲವಾದಲ್ಲಿ ಅದಕ್ಕೆ ಘೋರ ವಿಪತ್ತು ಸಂಭವಿಸುವುದೆಂದೂ ತಿಳಿಸಿದ್ದಾರೆ. ಸೋವಿಯಟ್ ಸಾಮ್ರಾಜ್ಯವನ್ನು ಎದುರಿಸುವ ಶಕ್ತಿ ಈಗ ಹೇಳುತ್ತಿಲ್ಲವೆಂದೂ ಅವರು ವಿಶದಪಡಿಸಿದರು.

### ಭಾರತಕ್ಕೆ ಸಕ್ಕರೆ ಆಮದು

ಭಾರತಕ್ಕೆ ಹೊರಗಿನಿಂದ ಸ್ವಲ್ಪಮಟ್ಟಿಗೆ ಸಕ್ಕರೆಯನ್ನು ಆಮದು ಮಾಡಬೇಕಾದ ಅಗತ್ಯವಿದೆಯೆಂದೂ, ಈ ಬಗ್ಗೆ ಸರ್ಕಾರದವರು ಪರ್ಯಾಲೋಚನೆ ನಡೆಸುತ್ತಿರುವರೆಂದೂ ಕೇಂದ್ರ ಪಾರ್ಲಿಮೆಂಟಿನಲ್ಲಿ ಸಾಗ್ರಿಪ್ಯ ಖಾತಾ ಸಚಿವ ಶ್ರೀ ಕೆ. ಎ. ಸಿ. ನಿಯೋಗಿಯವರು ತಿಳಿಸಿದರು.

### ಕಮ್ಯೂನಿಸ್ಟ್ ಪಕ್ಷಕ್ಕೆ ಬಹಿಷ್ಕಾರವಿಲ್ಲ

ಬ್ರಿಟಿಷ್ ಪಾರ್ಲಿಮೆಂಟಿನ ಕನ್ಸರ್ವೇಟಿವ್ ಪಕ್ಷದ ಸದಸ್ಯರೊಬ್ಬರು ಅಲ್ಲಿನ ಕಮ್ಯೂನಿಸ್ಟ್ ಪಕ್ಷವನ್ನು ಶಾಸನ ಬಾಹಿರವೆಂದು ಘೋಷಿಸಬೇಕೆಂದು ಕೋರಿದ್ದರು. ಪ್ರಧಾನಿ ಅಟ್ಲಿಯವರು ಈ ಕೋರಿಕೆಯನ್ನು ನಿರಾಕರಿಸಿದರು.

### ಅರಸರ ವಂಶೀಕರಿಗೆ ರಾಜಕೀಯ ಪೆನ್ಷನ್ ರದ್ದು

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯಿದ್ದಾಗ ೧೮೫೭ನೇ ಇಸವಿಯಲ್ಲಿ ನಡೆದ ದಂಗೆಯಲ್ಲಿ ತೊಂದರೆಗೊಳಗಾದ ಅರಸರ ವಂಶಸ್ಥರಿಗೆ ಕೊಡುತ್ತಿದ್ದ ಪೆನ್ಷನ್ನನ್ನು ರದ್ದು ಮಾಡಲು ಭಾರತ ರಾಷ್ಟ್ರೀಯ ಸರ್ಕಾರವು ಆಲೋಚಿಸುತ್ತಿದೆ. ಈ ಬಗ್ಗೆ ಈಗಾಗಲೇ ಹಲವರಿಗೆ ನೋಟೀಸು ಕೊಡಲಾಗಿದೆ.

### ಹಿಂದೂಪುರದ ಸೇವಾ ಮಂದಿರ

ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಸತ್ಯಾಗ್ರಹ ಸಮಯದಲ್ಲಿ ಹಿಂದೂಪುರದಲ್ಲಿ ಸ್ಥಾಪಿತವಾದ ಸೇವಾ ಮಂದಿರದ ವರದಿಯು ನನಗೆ ಪ್ರಾಪ್ತವಾಗಿದೆ. ಸತ್ಯಾಗ್ರಹ ಶಿಬಿರದ ಕಾರ್ಯದರ್ಶಿಗಳಾದ ಶ್ರೀ ಎಂ. ಎ. ಪರಶುರಾಮರವರು ಕಳೆದ ೨॥ ವರ್ಷಗಳಿಂದ ನಡೆದಿರುವ ಕಾರ್ಯಕಲಾಪಗಳ ವಿವರವನ್ನೂ ಜಮಾ ಖರ್ಚು ಪಟ್ಟಿಯನ್ನೂ ಇದರಲ್ಲಿ ಕೊಟ್ಟಿರುತ್ತಾರೆ. ಈ ಮಂದಿರವು ಇದರ ವಿಭಾಗಗಳು ನಡೆಸುತ್ತಿರುವ ಅಮೂಲ್ಯವಾದ ಶುಭಕಾರ್ಯಗಳು ಎಲ್ಲರ ಮೆಚ್ಚುಗೆಯನ್ನು ಪಡೆದಿವೆ. ಅವರ ಕಾರ್ಯಕಲಾಪಗಳಿಗೆ ಹೆಚ್ಚಿನ ಬೆಂಬಲ ದೊರೆತು ದೇಶಸೇವೆ ನಡೆಯಲೆಂದು ನಾವು ಹಾರೈಸುತ್ತೇವೆ.

## ಹೆಂಗಸನ್ನು ಇರಿದು ಚಿನ್ನದ ಸರದ ಕಳುವು

### ನಡು ಹಗಲಿನಲ್ಲಿ ಮದರಾಸಿನಲ್ಲಿ ನಡೆದ ಪ್ರಸಂಗ

ಮದರಾಸಿನ ಮೈಲಾಪುರದಲ್ಲಿರುವ ರುಕ್ಮಿಣಿಯಮ್ಮಾಳ್ ಎಂಬಾಕೆಯು ಮೊನ್ನೆ ದಿನ ಮಧ್ಯಾಹ್ನ ತನ್ನ ಮನೆಯಲ್ಲಿ ಒಂಟಿಯಾಗಿದ್ದ ವೇಳೆಯಲ್ಲಿ ಒಬ್ಬ ಮನುಷ್ಯನು ಆ ಮನೆಗೆ ಬಂದು ಶ್ರೀನಿವಾಸಯ್ಯಂಗಾರ್ ಇರುವರೇ? ಎಂದು ಕೇಳಿದನು. ಆ ಹೆಂಗಸು ಆ ಮನೆಯಲ್ಲಿ ಯಾರೂ ಇಲ್ಲವೆಂದು ರುಕ್ಮಿಣಿಯಮ್ಮಾಳ್‌ರವರು ತಿಳಿಸಿದರು. ಆನಂತರ ಅವನು ಹೊರಗೆ ಹೋಗಿ ಸ್ವಲ್ಪ ಕಾಲ ಬಿಟ್ಟು ಮತ್ತೆ ಹಿಂದಿರುಗಿ ಶ್ರೀನಿವಾಸಯ್ಯಂಗಾರ್ ಇರುವರೇ ಎಂದು ಕೇಳಿದನು. ಆ ಹೆಂಗಸು ಯಾರೂ ಇಲ್ಲವೆಂದು ಹೇಳಿದ ತಕ್ಷಣ ಉತ್ತರ ಕೊಡಲು ಅವನು ತನ್ನಲ್ಲಿದ್ದ ಒಂದು ಚಾಕುವಿನಿಂದ ಆಕೆಯ ಎಡತೋಳಿನ ಮೇಲೆ ತಿವಿದು ಸುಮಾರು ಎಂಟು ಸವರಿನ ತೂಕದ ಒಂದು ಚಿನ್ನದ ಸರವನ್ನು ಅಪಹರಿಸಿಕೊಂಡು ಹೊರಗೆ ಬಿಟ್ಟಿದ್ದ ತನ್ನ ಬೈಸಿಕಲ್ಲನ್ನು ಹತ್ತಿ ಓಡಿದನು. ರುಕ್ಮಿಣಿಯಮ್ಮಾಳ್ ಕಿರಿಚಿಕೊಂಡುದರಿಂದ ಶ್ರೀ ರಾಘವನ್ ಎಂಬುವರು ಓಡಿಬಂದು ಬೈಸಿಕಲ್ಲನ್ನು ಹಿಡಿದುಕೊಳ್ಳಲು ಅಪರಾಧಿಯು ಅವರನ್ನೂ ತಿವಿದು ಪರಾರಿಯಾದನು.

## ದ್ವಿಗುಣ ಫಸಲು ಪಡೆಯಲು ಉಪಾಯ

ಜಮೀನುಗಳಲ್ಲಿ ದ್ವಿಗುಣ ಬೆಳೆ ಪಡೆಯುವ ಬಗ್ಗೆ ಡೆನ್ಮಾರ್ಕಿನಲ್ಲಿ ಸಂಶೋಧನೆ ನಡೆಸಲಾಗಿದೆ. ನೆಲವನ್ನು ಸುಮಾರು ೧॥ ಅಡಿಯಷ್ಟು ಅಗೆದು ಭೂಮಿಯನ್ನು ೧೧೦ ಡಿಗ್ರಿ ಉಷ್ಣಾಂಶವಿರುವಂತೆ ಬಿಸಿ ನೀರಿನ ಆವಿಯಿಂದ ಕಾಯಿಸಿ, ಮೂರು ವಾರಗಳ ಕಾಲ ಆರಿಸಿ, ಅನಂತರ ಬೀಜವನ್ನು ಬಿತ್ತಿದರೆ ದ್ವಿಗುಣ ಫಸಲು ಬರುವುದೆಂದು ಹೇಳಲಾಗಿದೆ.

## ಬ್ರಿಟನ್ನಿನಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಅಲ್ಪ ಸದಸ್ಯರು

ಬ್ರಿಟನ್ನಿನಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಬಹು ಕಡಿಮೆ ಸಂಖ್ಯೆಯ ಸದಸ್ಯರಿರುವರೆಂದು ಹೇಳಲಾಗುತ್ತಿದೆ. ಇಟಲಿಯಲ್ಲಿ ಆ ಪಕ್ಷಕ್ಕೆ ೨,೪೫೦,೦೦೦ ಸದಸ್ಯರೂ ಫ್ರಾನ್ಸಿನಲ್ಲಿ ೧,೭೫೨,೦೦೦ ಸದಸ್ಯರೂ ಇರುವಲ್ಲಿ ಬ್ರಿಟನ್ನಿನಲ್ಲಿ ಕೇವಲ ೪೩,೦೦೦ ಸದಸ್ಯರಿರುವರೆಂದು ಗೊತ್ತಾಗಿದೆ.

## ೭೦೦ ಮಂದಿ ಕಮ್ಯೂನಿಸ್ಟ್ ಚೀಣಾ ಸೈನಿಕರ ಮರಣ

ಕಳೆದ ಶನಿವಾರ ಸುಮಾರು ಸಾವಿರ ಮಂದಿ ಚೀಣೀ ಕಮ್ಯೂನಿಸ್ಟ್ ಸೈನಿಕರು ರಾಷ್ಟ್ರೀಯ ಚೀಣಾದ ಹತೋಟಿಯಲ್ಲಿರುವ ಹೈನಾನಿನ ಪೂರ್ವ ಭಾಗದಲ್ಲಿ ಬಂದಿಳಿದರೆಂದು ವರದಿಯಾಗಿದೆ. ಇವರುಗಳನ್ನು ರಾಷ್ಟ್ರೀಯ ಪಡೆಗಳು ಸುತ್ತುಗಟ್ಟಿರುವುವೆಂದೂ, ಇವರ ೭೦೦ ಮಂದಿ ಕಮ್ಯೂನಿಸ್ಟ್ ಸೈನಿಕರು ಹತರಾಗಿರುವರೆಂದೂ ಹೇಳಲಾಗಿದೆ.

### ಫಲ ರಕ್ಷಣೆ ಕೈಗಾರಿಕೆ

ಮದರಾಸಿನ ಮಂತ್ರಿಗಳಾದ ಶ್ರೀ ಹೆಚ್. ಸಿ. ದಾಸಪ್ಪನವರು ಬೆಂಗಳೂರು ಲಾಲ್‌ಬಾಗ್ ತೋಟದಲ್ಲಿ ಫಲಗಳ ರಕ್ಷಣಾ ಕೈಗಾರಿಕೆಯ ಆರಂಭೋತ್ಸವವನ್ನು ನೆರವೇರಿಸಿದರು. ಇಂತಹ ಕೈಗಾರಿಕೆಯು ಎಲ್ಲ ಜಿಲ್ಲೆಗಳಲ್ಲೂ ಹರಡಿ, ಇದು ಒಂದು ಗ್ರಾಮ ಕೈಗಾರಿಕೆಯಾಗಲೆಂದು ಶ್ರೀ ದಾಸಪ್ಪನವರು ಆಶಿಸಿದರು. ಮತ್ತು ಅವುಗಳಿಗೆ ಸರ್ಕಾರದ ಸಹಾಯವನ್ನು ನೀಡಲಾಗುವುದೆಂದೂ ಆಶ್ವಾಸನೆಯಿತ್ತರು.


ಯುಗಾದಿ ಹಬ್ಬದ ಪ್ರಯುಕ್ತ

ನವೀನವಾದ ಬಾರ್ಡರುಗಳಲ್ಲಿ ಧರ್ಮಾವರಂ, ಆರ್ಣಿ ಮತ್ತು ನಾಲು ಸೀರೆಗಳು ಬಂದಿವೆ

ದಯವಿಟ್ಟು ಭೇಟಿ ಕೊಡಿ

ಗುರುದೇವಾ ಹಾಲ್

ಶಿವರಾಂಪೇಟೆ, ಮೈಸೂರು


## ಅಖಿಲ ಭಾರತ ರೇಡಿಯೋ ವಿನ ಖರ್ಚಿನಲ್ಲಿ ಖೋತಾ

ಪ್ರಸಕ್ತ ಸಾಲಿನಲ್ಲಿ ಅಖಿಲ ಭಾರತ ರೇಡಿಯೋ ಕೇಂದ್ರದ ವೆಚ್ಚದಲ್ಲಿ ೪೦ ಲಕ್ಷ ರೂಗಳಷ್ಟನ್ನು ಖೋತಾ ಮಾಡಲಾಗಿದೆಯೆಂದೂ, ಮುಂದಿನ ಸಾಲಿಗೆ ೫೦ ಲಕ್ಷ ರೂಗಳಷ್ಟು ಖೋತಾ ಮಾಡಲು ಆಲೋಚಿಸಲಾಗಿದೆಯೆಂದೂ ಹೇಳಲಾಗಿದೆ.

## ಹರಿ ಕೃಷ್ಣ ಮೆಹತಾಬರು ಕೇಂದ್ರ ಮಂತ್ರಿ ಮಂಡಲಕ್ಕೆ

ಒರಿಸ್ಸಾದ ಪ್ರಧಾನಿ ಶ್ರೀ ಹರಿಕೃಷ್ಣ ಮೆಹತಾಬರನ್ನು ಪಂಡಿತ ನೆಹರೂರವರು ಕೇಂದ್ರ ಮಂತ್ರಿ ಮಂಡಲಕ್ಕೆ ಆಹ್ವಾನಿಸುವರೆಂದೂ, ಈ ಆಹ್ವಾನವನ್ನು ಅವರು ಅಂಗೀಕರಿಸಬಹುದೆಂದೂ ಹೇಳಲಾಗಿದೆ.

### ಕಾಂಗ್ರೆಸ್ ಅಧ್ಯಕ್ಷಿಣಿಯರ ಆಗಮನ

ಅನಾರೋಗ್ಯದ ನಿಮಿತ್ತ ಮದರಾಸಿನಲ್ಲಿ ವಿಶ್ರಾಂತಿ ಪಡೆಯುತ್ತಿರುವ ಮೈಸೂರು ಕಾಂಗ್ರೆಸ್ ಅಧ್ಯಕ್ಷಿಣಿ ಶ್ರೀಮತಿ ಯಶೋಧರಾ ದಾಸಪ್ಪನವರು ನಾಳೆ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸುವರೆಂದು ಗೊತ್ತಾಗಿದೆ.

○ ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಎಸ್. ಬಾಲಕೃಷ್ಣಯ್ಯನವರು ಬರುವ ಬೇಸಿಗೆಯಲ್ಲಿ ಯೂರೋಪ್ ಪ್ರವಾಸ ಕೈಗೊಂಡು ೩ ತಿಂಗಳ ಕಾಲ ಅಲ್ಲಿನ ಹಲವು ರಾಷ್ಟ್ರಗಳ ನ್ಯಾಯಾಂಗ ಮತ್ತು ಶಿಕ್ಷಣ ವಿಧಾನಗಳನ್ನು ಪರಿಶೀಲಿಸುವರೆಂದು ಗೊತ್ತಾಗಿದೆ.


ಒಲಂಪಿಯಾ

ಅಮೋಘ ಪ್ರಾರಂಭ

16-3-50ನೇ

ಗುರುವಾರದಿಂದ

ಪ್ರತಿದಿನ 3 ಆಟಗಳು

3-15, 6-30 ಮತ್ತು 9-45ಕ್ಕೆ

ನರ್ಗೀಸ್, ರಾಜ್‌ಕಪೂರ್, ಪಾತ್ರವಹಿಸಿರುವ

ಬರ್‌ಸಾತ್

17-3-50 ರಿಂದ ವುಡ್‌ಲ್ಯಾಂಡ್ಸ್‌ನಲ್ಲಿ

ದಿನ 3 ಆಟಗಳು

ವಂಡ್ಸಾ ಫಿಲಂಸ್‌ರವರ ಅತ್ಯುನ್ನತ ಸಂಗೀತ, ಅನುಪಮ ಹಾಸ್ಯ ಅಪೂರ್ವ ಕಥೆಯಿಂದ ಕೂಡಿದ ಹಿಂದಿ ಚಿತ್ರ

ಪತಂಗ PATANGA

ಪಾತ್ರ:- ನಿಗಾರ್, ಪೂರ್ಣಿಮಾ, ಶ್ಯಾಮ್, ಗೋಪ್, ಯಾಕೂಬ್

ಸಂಗೀತ:- ಸಿ ರಾಮಚಂದ್ರ

17-3-50ರಿಂದ :: 3ನೆಯ ವಾರ

ಬೆಂಗಳೂರು ಗೀತಾ ಚಿತ್ರಮಂದಿರದಲ್ಲಿ

[A DREAMLAND RELEASE

ಮದುವೆ ಜವಳಿಗಳಿಗೆ

ಧರ್ಮಾವರಂ, ಮೈಸೂರು ಸಿಲ್ಕ್ ಸೀರೆಗಳು ಮತ್ತು ನಾಗಪುರ್ ಸೀರೆಗಳಿಗೆ

ಎಂ. ವಿ. ಭೋಜಯ್ಯ ಬಿ ಎ & ಬ್ರದರ್

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

JOIN NOW

TYPE-WRITING CLASSES

Admissions for Summer Classes of study, are now being received in this institution. Intending candidates may approach the undersigned on any working day

Sd/- B. Ramanna
Head-master,
Commercial Classes,
Sri Saradavilasa High School, K. M. Puram
Mysore.

ಯುಗಾದಿ ಹಬ್ಬಕ್ಕೆ ಸೊಬಗಿನ ಸುಂದರ ಸೀರೆಗಳು

ಅಚ್ಚುಮೆಚ್ಚಾದ ನಮೂನೆಗಳಲ್ಲಿ ಬಂದಿವೆ. ಜಾದೂಗಾರ್ ಕಂಪನಿ, ಬ್ಯಾಂಕ್ ರೋಡ್, ಮೈಸೂರು.


Edited, printed and published by A. R. Nagarajan at Sadhvi Press, D. Subbiah Road, Mysore.

ರಿ॥ ನಂ. 792 ॥ವಂದೇ ಮಾತರಂ॥ [illegible]

ಸಾಧ್ವಿ

ಸಂಪುಟ ೮] ಗುರುವಾರ ೧೬-೩-೫೦ [ಸಂಚಿಕೆ ೧೯೬

# ರಮಣ ಮಹರ್ಷಿಗಳ ಅಸ್ವಸ್ಥತೆ ಸ್ಥಿತಿ ಚಿಂತಾಜನಕವಾಗಿದೆ

## ಕಲ್ಕತ್ತದಲ್ಲಿ ಪಂಡಿತ ನೆಹರೂ

ಪ್ರಧಾನಿ ಪಂಡಿತ ನೆಹರೂರವರು ಮೊನ್ನೆ ದಿನ ಬೆಳಿಗ್ಗೆ ವಿಮಾನದಲ್ಲಿ ಕಲ್ಕತ್ತೆಗೆ ತೆರಳಿದರು. ಪಶ್ಚಿಮ ಬಂಗಾಳದ ಗವರ್ನರ್ ಶ್ರೀ ಕೈಲಾಸನಾಥ ಕಟ್ಜು ಮತ್ತು ಅಲ್ಲಿನ ಪ್ರಧಾನಿ ಡಾ॥ ಬಿ. ಸಿ. ರಾಯ್‌ರೊಡನೆ [illegible] ನಡೆಸಿ ಪೂರ್ವ ಬಂಗಾಳದ ಘಟನೆಗಳ ಬಗ್ಗೆ ಹೆಚ್ಚಿನ ಸಮಾಲೋಚನೆ ನಡೆಸಿದರು. ನಿರಾಶ್ರಿತರ ಪುನರ್ವಸತಿ ಮತ್ತು ಪರಿಹಾರಗಳ ಬಗ್ಗೆ ಪರ್ಯಾಲೋಚನೆ ನಡೆಸಲಾಯಿತು.

## ಡಕ್ಕಾವಿಗೆ ಲಿಯಾಕತ್ ಆಲಿಖಾನರ ಭೇಟಿ

ಪೂರ್ವ ಬಂಗಾಳದ ಜಮಾಯತ್ ಉಲ್-ಉಲೆಮಾ ಸಂಸ್ಥೆ ಮತ್ತು ವಿ॥ [illegible] ಪ್ರಾರ್ಥನೆ ಮೇರೆ ಪಾಕಿಸ್ತಾನದ ಪ್ರಧಾನಿ ವಿ॥ ಲಿಯಾಕತ್ ಆಲಿಖಾನರು ನಾಳಿದ್ದು ಡಕ್ಕಾವಿಗೆ ಭೇಟಿ ಕೊಡುವರೆಂದು ವರದಿಯಾಗಿದೆ.

## [illegible]ಗನ್ನಿನಿಂದ ಅಕ್ಕಿ ಕದ್ದ [illegible] ಡ್ರೈವರನ ಬಂಧನ

[illegible]

## ಕಮ್ಯೂನಿಸ್ಟ್ ಚೀಣಾದಲ್ಲಿ ವಿದೇಶೀ ಅಧಿಕಾರಿಗಳ ಬಂಧನ

ಕಮ್ಯೂನಿಸ್ಟ್ ಚೀಣಾದಲ್ಲಿ [illegible] ಸಂಸ್ಥೆಗಳಿಗೆ ಸೇರಿದ ಎಂಟು [illegible] ಅಧಿಕಾರಿಗಳನ್ನು ಬಂಧಿಸಲಾಗಿದೆ.

ಶಿವರಾಮ ಪೇಟೆಯ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ಇಂದಿನಿಂದ ಏಪ್ರಿಲ್ ೧೦ ನೇ ತಾ|| ವರೆಗೆ ಶ್ರೀ ರಾಮೋತ್ಸವ ಕಾರ್ಯಕ್ರಮಗಳು [illegible] ವಿದ್ವಾಂಸರುಗಳಾದ [illegible] ರಾವ್, ಶ್ರೀಮತಿ ಎಸ್. [illegible] ಮೂರ್ತಿ [illegible] ರಾವ್ [illegible] ರಘುನಾಥ ಭಟ್, ಗೋಪಾಲಕೃಷ್ಣರಾವ್ ಮತ್ತು [illegible] ಶ್ರೀಮತಿ ಜಿ. ವಿ. ರಂಗನಾಯಕಮ್ಮ, ನಾರಾಯಣಾಚಾರ್, ಇವರೇ ಮುಂತಾದವರಿಂದ ಸಂಗೀತ, ಹರಿಕಥೆ ಮುಂತಾದ ಕಾಲಕ್ಷೇಪಗಳೇರ್ಪಟ್ಟಿವೆ

## ಆಕಾಶದಲ್ಲಿ ವಿಮಾನದ ಆಸ್ಫೋಟನೆ

ದಕ್ಷಿಣ ವೇಲ್ಸ್ ಪ್ರದೇಶದ [illegible] ಬ್ರಿಟಿಷ್ [illegible] ವಿಮಾನವು [illegible] ಆಸ್ಫೋಟವಾಗಿ [illegible] ಪ್ರಯಾಣಿಕರು [illegible] ಸತ್ತರೆಂದು [illegible] ನಡೆದ [illegible] ಜನರು [illegible]

### ವಕೀಲರ ಸಮ್ಮೇಳನದ ಅಧ್ಯಕ್ಷರು

ಶಿವಮೊಗ್ಗದಲ್ಲಿ ಏಪ್ರಿಲ್ [illegible] ಮತ್ತು [illegible] ನೇ ತಾ|| ಗಳಲ್ಲಿ ನಡೆಯಲಿರುವ ಸಂಸ್ಥಾನದ ವಕೀಲರ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ವಿ. [illegible] ಲಕ್ಷ್ಮೀನಾರಾಯಣಪ್ಪನವರು ವಹಿಸುವರು. ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರು ಇದರ ಆರಂಭೋತ್ಸವವನ್ನು ನೆರವೇರಿಸುವ ನಿರೀಕ್ಷಣೆಯಿದೆ. ಸಮ್ಮೇಳನದಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳನ್ನು ಏಪ್ರಿಲ್ [illegible] ನೇ ತಾ|| ನೊಳಗೆ ಕಳುಹಿಸಿಕೊಡುವಂತೆ ಸ್ವಾಗತ ಸಮಿತಿಯವರು ಕೋರುತ್ತಾರೆ

### ಇಟಲಿಯಿಂದ ಬಂದಿರುವ ರೇಷ್ಮೆ ಯಂತ್ರಗಳು

[illegible] ಇಟಲಿಯಿಂದ [illegible] ರೇಷ್ಮೆ [illegible] ಸಂಸ್ಥಾನದ [illegible] ರೇಷ್ಮೆ [illegible] ಸರ್ಕಾರದವರು [illegible] ಮಾಡಿದ್ದಾರೆ

ರಾಮಪ್ರಸಾದ್ ಟಾಕೀಸ್

24 [illegible]

ಜನತೆ [illegible] ದಿನವಹಿ 3 ಪ್ರದರ್ಶನಗಳು

ಜೀವನ

—:ಭೂಮಿಕೆ:—

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಬಲಿಕ-ಪದ್ಮಿನಿ

## ಪ್ರಕಾಶಂರವರ ಮೋಕ್ಷ ಶಿಕ್ಷಣ ಕಾರ್ಯಕ್ರಮ

[illegible] ಪ್ರಕಾಶಂ [illegible] ಕಾರ್ಯಕ್ರಮವನ್ನು [illegible]

### ಶಾಲಾ ದಿನಾಚರಣೆ

ರಾಜಧಾನಿಯ [illegible] ವಿದ್ಯಾ [illegible] ನೇ ತಾ|| [illegible] ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶಾಲಾ ದಿನಾಚರಣೆಯನ್ನು ನೆರವೇರಿಸಿದ [illegible] ಸ್ವಾಗತ, ಧ್ವಜಾರೋಹಣ [illegible] ನಂತರ ಅಧ್ಯಕ್ಷರು ಸೂಕ್ತವಾದ ಭಾಷಣ ಮಾಡಿದರು. ಆಕಾಶವಾಣಿ ಗೋಷ್ಠಿಯವರಿಂದ ಸಂಗೀತವೂ ಶಾಲೆಯ ಹಳೇ ವಿದ್ಯಾರ್ಥಿಗಳ ನಾಟಕವೂ ಆದನಂತರ ಸಮಾರಂಭ ಮುಕ್ತಾಯವಾಯಿತು

### ಮಾದರಿ ಶಾಲೆಯಲ್ಲಿ ಹಿಂದಿ [illegible]

[illegible] ನೇ ತಾ|| ನಿಂದ [illegible] ಮಾದರಿ ಶಾಲೆಯಲ್ಲಿ ಹಿಂದಿ ತರಗತಿಗಳು ಆರಂಭಿಸಲ್ಪಡುವುವೆಂದು ತಿಳಿಸಲಾಗಿದೆ

ರಬ್ಬರ್ ಸ್ಟ್ಯಾಂಪುಗಳು

ಶ್ರೀ [illegible] ಪ್ರಸಿದ್ಧಿ ಪಡೆದಿವೆ [illegible]

ಮೈಸೂರು [illegible] ಪ್ರೆಸ್

1174, [illegible]

ಮೈಸೂರು.

ಶ್ರೀ

ಅನ್ನಪೂರ್ಣೇಶ್ವರೀ [illegible]

ನಾರಾಯಣ ಶಾಸ್ತ್ರಿ ರಸ್ತೆ [illegible] ಮೈಸೂರು

[illegible] ಹೋಟೇಲಿನಲ್ಲಿ ತಾ|| [illegible] ಊಟವನ್ನು [illegible] ಮಾಡಲಾಗಿದೆ. [illegible] ಪ್ರೋತ್ಸಾಹಿಸಬೇಕಾಗಿ ವಿನಂತಿ

ಎ. ಎಸ್. ಪರಮೇಶ್ವರ ಅಯ್ಯರ್,

ಪ್ರೊಪ್ರೈಟರ್.

29-3-50ರಿಂದ ಅಮೋಘ ಆರಂಭ ದಿನವಹಿ 4 ಆಟಗಳು

ಶ್ರೀ ಚಾಮುಂಡೇಶ್ವರೀ ಟಾಕೀಸಿನಲ್ಲಿ

ರೋಷನ್ ಪಿಕ್ಚರ್ಸ್‌ರವರ ಅಮೋಘವಾದ ರಾಷ್ಟ್ರೀಯ ಹಿನ್ನಲೆಯುಳ್ಳ ಹಿಂದಿ ಚಿತ್ರ

[illegible]

ತಾರೆಗಳು:- ಸುರಯ್ಯ (ಚೌಧರಿ), ಶ್ಯಾಮ್, ಪ್ರಕಾಶ್ ಮತ್ತು ವಿಖ್ಯಾತ ಹಾಸ್ಯ ನಟರನೇಕರು ಮತ್ತು ಅನ್ಸಾರಿ. ಸಂಗೀತ:- ಎ. ಆರ್. ಖುರೇಷಿ

ಹಂಚಿಕೆ:- ಶ್ರೀ ಕ್ಷೇತ್ರಪಾಲ ಪಿಕ್ಚರ್ಸ್ ಸರ್ಕ್ಯೂಟ್, ಅಶೋಕಾ ರೋಡ್, ಮೈಸೂರು

ಪಾಕಿಸ್ತಾನದೊಡನೆ ಮಾತುಕತೆ ... ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಬುಧವಾರ ೨೯-೩-೫೦ [ಸಂಚಿಕೆ ೨೦೫

# ಪುಟ್ಟರಾಜೆಅರಸ್ ಬಗ್ಗೆ ವಿಶೇಷ ಶಾಸನ ಸಭೆ

## ಪಾಕಿಸ್ತಾನದೊಡನೆ ಮಾತುಕತೆ: ಪ್ರಧಾನಿಯ ಭೇಟಿ

ಪಾಕಿಸ್ತಾನದ ಪ್ರಧಾನಮಂತ್ರಿ ಲಿಯಾಕತ್ ಅಲಿಖಾನರು ದೆಹಲಿಗೆ ತೆರಳಿ ಪಂಡಿತ ನೆಹರೂರವರೊಡನೆ ಮಾತುಕತೆ ನಡೆಸುವುದಾಗಿ ಕರಾಚಿಯ ಪಾರ್ಲಿಮೆಂಟಿನಲ್ಲಿ ಹೇಳಿರುವರು. ಬಂಗಾಳದ ಪರಿಸ್ಥಿತಿ ಬಗ್ಗೆ ಪರಸ್ಪರ ಸಮಾಲೋಚನೆ ನಡೆಸಿ ಪರಿಹಾರವನ್ನು ದೊರಕಿಸುವುದೇ ಈ ಭೇಟಿಯ ಉದ್ದೇಶವೆಂದು ತಿಳಿಸಿರುತ್ತಾರೆ. ನೆಹರೂರವರು ಕರಾಚಿಗೆ ಬರುವಂತೆ ಆಹ್ವಾನಿಸಿ ಕೋರಿರುವುದಾಗಿಯೂ ಆದರೆ ಅವರು ದೆಹಲಿಗೆ ಬರುವಂತೆ ನೆಹರೂರವರು ಕರೆದಿರುವರೆಂದೂ ಲಿಯಾಕತರು ಹೇಳಿರುವರು.

ತಮ್ಮ ಸಹೋದ್ಯೋಗಿಗಳು ಭೇಟಿಯ ಕಾಲದಲ್ಲಿ ಇರಬೇಕೆಂದು ನೆಹರೂರವರು ಅಪೇಕ್ಷಿಸಿದುದರಿಂದಲೂ ಕರಾಚಿಗೆ ಬರಲು ಅವರುಗಳ ದೇಹಸ್ಥಿತಿಯು ಸಮರ್ಪಕವಾಗಿಲ್ಲದಿರುವುದರಿಂದಲೂ ತಾವೇ ದೆಹಲಿಗೆ ಹೋಗುವುದಾಗಿ ಪಾಕಿಸ್ತಾನದ ಪ್ರಧಾನಿಯವರು ಹೇಳಿರುವರು. ಅಲ್ಪಸಂಖ್ಯಾತರ ಸಂಪೂರ್ಣವಾದ ರಕ್ಷಣೆಯನ್ನು ಕುರಿತು ಬಗ್ಗೆ ನೆಹರೂರವರು ಲಿಯಾಕತ್ ಅಲಿಖಾನರೂ ಜಂಟಿ ಘೋಷಣೆ [illegible] ಬಗ್ಗೆ ಒಪ್ಪಂದ [illegible] ಜಂಟಿಯಾದ [illegible] ವನ್ನು ಪಡೆಯುವದು, ನಷ್ಟ [illegible] ಪುನರ್ವಸತಿ, [illegible] ಸಂಬಂಧಿಸಿದ [illegible] ಉಂಟಾದ ಅಂಶಗಳು [illegible] ವಿವರಗಳನ್ನು ವಿಚಾರಿಸಿ ಮುಂದೆ [illegible] ಸಲಹೆ ಕೊಡಲು ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸುವ ವಿಷಯವೂ ಸಹಾ [illegible] ಬರುವ ತಿಂಗಳು [illegible] ಇಬ್ಬರು ಪ್ರಧಾನಿಗಳ ನಡೆಯಲು ನಿರ್ಧರವಾಗಿದೆ.

## ... ದಲ್ಲಿ ಶಾಂತಿ ಸೇನೆ

... ಗುರುವಾರ ಮತ್ತು ಶುಕ್ರವಾರ ... ನಗರದಲ್ಲಿ ಸರ್ವೋದಯ ಸಂಘದಲ್ಲಿ ರಚನಾತ್ಮಕ ಕಾರ್ಯಕರ್ತರ ಸಭೆಯು ಆಚಾರ್ಯ ವಿನೋಬಾ ಭಾವೆಯವರ ಅಧ್ಯಕ್ಷತೆ ವಹಿಸಿದ್ದರು. [illegible] ಯನ್ನು ಅಹಿಂಸೆಯಿಂದಲೇ ಅದನ್ನು ನಿರ್ಮೂಲ ಮಾಡಬಲ್ಲವಾದ ಶಾಂತಿ ಸೈನ್ಯವನ್ನು ಭರತಖಂಡದಲ್ಲಿ ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು.

## ... ಸೇವಾದಳ

[illegible]

## ಸಂಸ್ಥಾನದಲ್ಲಿ ಲಂಚ ನಿರ್ಮೂಲನದ ಪ್ರಶ್ನೆ

### ಶಾಸನ ಸಭೆಯಲ್ಲಿ ಮಂತ್ರಿಗಳ ಸಮಾಧಾನ

ಸ್ವಂ. ವ. ಫೋ[ನ] ಬೆಂಗಳೂರು ೨೮

ಈ ದಿನ ಶಾಸನ ಸಭೆಯು ಬೆಳಿಗ್ಗೆ ಸಮಾವೇಶಗೊಂಡಿದ್ದಾಗ, ದಾವಣಗೆರೆಯ [illegible] ಕಾಲೇಜಿನ ಕಂಬ [illegible] ಪ್ರಶ್ನೆಗಳಿಗೆ ಉತ್ತರ [illegible] ಕಾರ್ಯಕ್ರಮ ನಡೆಸಲಾಗುವುದೆಂದೂ, ಹೆಂಗಸರಿಗಾಗಿ ಕಟ್ಟಡಗಳ ನಿರ್ಮಾಣದ ಬಗ್ಗೆ ಪರಿಶೀಲನೆ ನಡೆಸಲಾಗುವುದೆಂದೂ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ತಿಳಿಸಿದರು.

### ಲಂಚ ನಿರ್ಮೂಲ ಪ್ರಶ್ನೆ

ಸಂಸ್ಥಾನದಲ್ಲಿ ಲಂಚವು ಜಾಸ್ತಿಯಾಗುತ್ತಿಲ್ಲವೆಂದೂ, ಹಲವು ಇಲಾಖೆಗಳಲ್ಲಿ ಈ ಪದ್ಧತಿಯು ಇರುವುದು ಸರಕಾರಕ್ಕೆ ಗೊತ್ತಿದೆಯೆಂದೂ ವಿದ್ಯಾ ಸಚಿವರು ಶ್ರೀ ಗಾಂಜಿ ವೀರಪ್ಪನವರಿಗೆ ತಿಳಿಸಿದರು. ಸರಕಾರಕ್ಕೆ ಆಗಾಗ್ಗೆ ಬರುವ ಅರ್ಜಿ ಅಂಕಿಅಂಶಗಳಿಂದ ಲಂಚದ ವ್ಯಾಪ್ತಿಯು ಕಡಿಮೆಯಾಗುತ್ತಿದೆಯೆಂದು ತಿಳಿದುಬಂದಿದೆಯೆಂದೂ, ಜನಗಳಿಂದ ಬಂದ ಅರ್ಜಿಗಳ ಮೇಲೆ ಮತ್ತು ಸಂಸ್ಥಾನದವರಿಗೆ ತಿಳಿದ ಹಾಗಿಯೇ ಲಂಚ ನಿರೋಧಕ ಕಾರ್ಯಕ್ರಮವನ್ನು ಕೈಗೊಳ್ಳುತ್ತಿರುವುದಾಗಿಯೂ ಲಂಚವಿಲ್ಲದೆ ಸರ್ಕಾರವು ನಡೆಯುವುದಿಲ್ಲವೆಂಬ ಭಾವನೆಯನ್ನು ಸರ್ಕಾರದವರು ಮನ್ನಿಸುವುದಿಲ್ಲವೆಂದೂ ಸಚಿವರು ತಿಳಿಸಿದರು. [illegible]

ನಿನ್ನೆ ದಿನ ಜನನಾಯಕರು ... ದ್ದ ಶ್ರೀ ಪುಟ್ಟರಾಜೆ ಅರಸಿನವರ ನಿವೃತ್ತಿ ಸಂಬಂಧ ರಾಜ್ಯಾಂಗದ ನಿಯಮದ ... ಬಗ್ಗೆ ಶೀಘ್ರ ಸಭೆ ... ಯ ವಿಶೇಷ ಅಧಿವೇಶನವು ಸೇರುವುದೆಂದು ... ನಂತರ ಲಾ, ಪೊಲೀಸು, ಮುಂತಾದ ನಾನಾ ಇಲಾಖೆಗಳ ಬೇಡಿಕೆಗಳ ...

ಜೂರಾದವು ಆಯುರುಗಳು ಕಾನೂನು ಪ್ರಕಾರ ತೆಗೆದುಕೊಳ್ಳುವ ಕ್ರಮಗಳನ್ನು ಜಾಸ್ತಿ ಮಾಡಬೇಕೆಂದು ಶ್ರೀ [illegible] ದನ್ನು ಜ [illegible] ಅಬ್ದುಲ್ ರಹಮಾನರು ತಂದರು. ಶ್ರೀ ಟಿ. ಸುಬ್ರಹ್ಮಣ್ಯರು ಅದಕ್ಕೆ ಬೆಂಬಲವಿತ್ತರು. ಶ್ರೀ ಎಂ. ಕೃಷ್ಣಪ್ಪ ಮತ್ತು ಹೆಚ್. ಕೆ. ವಿ. ರಣ್ಣ ಗೌಡರು ಅದಕ್ಕೆ ವಿರೋಧಿಸಿದರು. [illegible] ಮಂತ್ರಿಗಳಾದ ಶ್ರೀ ಕೆ. ಟಿ. [illegible] ಭಾಷಣ ಮಾಡಿ [illegible] ಪ್ರಸ್ತಾಪವು ಫಲವಾದುದೆಂದು ಹೇಳಿ ಅವರು [illegible] ಮನೋಭಾವ ಕೋರುತ್ತಿಲ್ಲವೆಂದೂ, ಹೈಕೋರ್ಟಿನಿಂದ ಈ ಬಗ್ಗೆ ಶಿಫಾರಸು ಬಂದ ಮೇಲೆ ಸರ್ಕಾರದವರು ಅದನ್ನು ಪರಿಶೀಲಿಸುವುದಾಗಿಯೂ ಭರವಸೆಯಿತ್ತರು. ಕತ್ತರಿ ಪ್ರಸ್ತಾಪ ಬಿದ್ದು ಹೋಯಿತು.

ಮತ್ತೊಂದು ಕತ್ತರಿ ನಿರ್ಣಯವನ್ನು ಶ್ರೀ ಎಲ್. ಸಿದ್ದಪ್ಪನವರು ತಂದು ಗ್ರಾಮಾಂತರಗಳಲ್ಲಿ ಪೊಲೀಸರ ರಕ್ಷಣೆ ಕಡಿಮೆಯಾಗಿರುವ ಬಗ್ಗೆ ಸರಕಾರದ ಗಮನವನ್ನು ಸೆಳೆದರು. ಶ್ರೀ ಟಿ. ಮರಿಯಪ್ಪನವರು ಉತ್ತರವಿತ್ತು ಸದಸ್ಯರ ಸಲಹೆಗಳಿಗಾಗಿ ಕೃತಜ್ಞತೆಯನ್ನು ಸೂಚಿಸಿ, ಸೂಕ್ತ ಕಾರ್ಯಕ್ರಮವನ್ನು ಕೈಗೆದುಕೊಳ್ಳಲು ಭರವಸೆಯಿತ್ತರು. ನಿರ್ಣಯವು ವಾಪಸಾಯಿತು.

### ನಿನ್ನೆಯ ಕಾರ್ಯಕಲಾಪಗಳು

ಶ್ರೀ ಎಲ್. ಸಿದ್ದಪ್ಪನವರು ಮತ್ತೊಂದು ಕತ್ತರಿ ಪ್ರಯೋಗವನ್ನು ತಂದು ಸಂಸ್ಥಾನದಲ್ಲಿ ಮಂತ್ರಿಗಳಿಂದ ಹಿಡಿದು ಕಾನಿಸ್ಟೇಬಲ್ಲರ ವರೆಗೆ ರಕ್ಷಣೆ ಕಡಿಮೆಯಾಗಿರುವ ಬಗ್ಗೆ ಚರ್ಚೆಗೆ ಅವಕಾಶ ಕೇಳಿದರು. ಮಂತ್ರಿಗಳಾದ ಬಿ. ಹುಚ್ಚೇಗೌಡ, ಎಂ. ಗೋಪಿನಾಥ್, ಹೆಚ್. ಎಂ. ಚನ್ನಬಸಪ್ಪನ [illegible] [illegible]

ನ ಪ್ರಧಾನಮಂತ್ರಿಗಳು ಉತ್ತರವಿತ್ತು [illegible] [illegible] ಶ್ರೀ ಚಿನ್ನಸ್ವಾಮಿ [illegible] ನಿನ್ನೆ ತಾನೇ ... [illegible] ನಿರ್ಣಯಿಸಿದ ... [illegible] ಬಗ್ಗೆ [illegible]

## ಪಟೇಲರಿಗಾಗಿ ವಿಶೇಷ ವಿಮಾನ

ಸರ್ದಾರ್ ಪಟೇಲರ ಶರೀರ ಪ್ರಕೃತಿಗೆ ಒಗ್ಗುವಂತಹ ಹೊಸ ವಿಮಾನವೊಂದನ್ನು ತಯಾರಿಸಲಾಗಿದೆ ಯೆಂದೂ ಎಷ್ಟೇ ಎತ್ತರಕ್ಕೆ ಹಾರಿದರೂ ಯಾವ ವ್ಯತ್ಯಾಸಗಳೂ ಆಗುವುದಿಲ್ಲವೆಂದೂ, ಅದರಲ್ಲಿ ಹಾಸಿಗೆಗಳೂ, ಟೆಲಿಫೋನ್ ಮತ್ತು ರೇಡಿಯೋ ಸಹಾ ಇರುವುವೆಂದೂ ವರದಿಯಾಗಿದೆ.

## ಬ್ಯಾಂಕಿನ ಮೇಲೆ ಧಾಳಿ

ಕಲ್ಕತ್ತದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಮೇಲೆ ಹಲವು ಶಸ್ತ್ರ ಧಾರಿಗಳು ಮೊನ್ನೆ ನುಗ್ಗಿ ಹಣ ಎಣಿಸುವ ಸ್ಥಳದಲ್ಲಿದ್ದ ನೌಕರರ ಮೇಲೆ ಅನೇಕ ಬಾರಿ ಗುಂಡು ಹಾರಿಸಿದುದರ ಪರಿಣಾಮವಾಗಿ ೧೨ ಮಂದಿಗೆ ಗಾಯಗಳಾದವು. ಉಳಿದ ನೌಕರರು ಸಾಹಸ ಪಟ್ಟು ಅವರನ್ನು ಹಿಡಿದು ಪೊಲೀಸರ ವಶಕ್ಕೊಪ್ಪಿಸಿದರು.

### ಸಂಗೀತ ಕಛೇರಿ

ಚಾಮುಂಡಿ ಪುರಂನಲ್ಲಿರುವ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದಲ್ಲಿ ಈ ರಾತ್ರಿ ೯ ಗಂಟೆಗೆ ಆರ್. ಎಸ್. ವಿ. ದೇಶಿಕಾಚಾರ್ಯರವರ ವೇಣುವಾದನವೂ, ನಾಳೆ ರಾತ್ರಿ ಸಂಗೀತ ವಿದ್ವಾನ್ ವಿಶ್ವನಾಥ ಶಾಸ್ತ್ರಿಗಳಿಂದ ಗಾಯನವೂ ನಡೆಯುವುವು.

ಚನುಮಯ್ಯರಗ್ರಹಾರದಲ್ಲಿರುವ ಕುಂಚಿಟಿಗರ ಶ್ರೀ ರಾಮಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ಈ ಸಂಜೆ ೬ ಘಂಟೆಗೆ ಆರ್. ಬಿ. ದೇವೇಂದ್ರಪ್ಪನವರ ಗಾನವೂ ಎಸ್. ಹೆಚ್. ವಿ. ರಾಮರಾಯರ ಪಿಟೀಲು ಮತ್ತು ಎಸ್. ಡಿ. ಶೇಷಪ್ಪನವರ ಮೃದಂಗದೊಡನೆ ನಡೆಯುವುದು.

### ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿ

ಕೊತ್ವಾಲ್ ರಾಮಯ್ಯನ ಬೀದಿಯಲ್ಲಿರುವ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯವರು ಶ್ರೀ ರಾಮ ನವಮಿ ಮಹೋತ್ಸವವನ್ನು ನಿನ್ನೆಯಿಂದ ಪ್ರಾರಂಭಿಸಿ ೯ ದಿನಗಳವರೆಗೆ ಆಚರಿಸುವರು. ಈ ಕಾರ್ಯದಲ್ಲಿ ಮಹಾಜನರು ಭಾಗವಹಿಸಬೇಕೆಂದು ಕೋರಲಾಗಿದೆ. ಪ್ರತಿ ದಿನ ಬೆಳಿಗ್ಗೆ ಪೂಜೆ ಮಂಗಳಾರತಿಗಳೂ ಸಾಯಂಕಾಲ ಭಜನೆ ಮತ್ತು ಮಂಗಳಾರತಿಗಳೂ ಜರುಗುವುವು. ಏಪ್ರಿಲ್ ೬ ಪಟ್ಟಾಭಿಷೇಕ ನೆರವೇರುವುದು.

### ಕಮ್ಯೂನಿಸ್ಟರ ದಸ್ತಗಿರಿ

ಗೀತಾ ರಸ್ತೆಯಲ್ಲಿರುವ ಶ್ರೀಮತಿ ಲಲಿತಮ್ಮ ಮತ್ತು ನಂಜನಗೂಡಿನ ನಾರಾಯಣರಾವ್ ಎಂಬ ಇಬ್ಬರು ಕಮ್ಯೂನಿಸ್ಟರನ್ನು ನಿನ್ನೆ ದಸ್ತಗಿರಿ ಮಾಡಲಾಯಿತೆಂದು ತಿಳಿದುಬಂದಿದೆ.

... ಶ್ರೀ ಎಂ. ಎನ್. ಜೋಯಿಸರು ... ನಿರ್ಣಯವನ್ನು ತಂದರು. ಶ್ರೀ [illegible] [illegible] ಅಧಿಕಾರ [illegible] ಮಂತ್ರಿಗಳು ಉತ್ತರವಿತ್ತು [illegible] ವರ್ಗದವರ [illegible] [illegible]

## ಸ್ಟಾಲಿನ್ ಬದುಕಿರುವರೇ?

ಮಾರ್ಷಲ್ ಸ್ಟಾಲಿನ್ನರಿಗೆ ಅಪಾಯ ಸಂಭವಿಸಿರಬೇಕೆಂದು ಅನೇಕರಲ್ಲಿ ಸಂಶಯ ಉಂಟಾಗಿದೆ. ಈ ಬಗ್ಗೆ ಅಮೆರಿಕದ ಪತ್ರಿಕೆಯೊಂದು ... ಸ್ಪರ್ಧೆ ನಡೆಸುತ್ತಿದೆ ... ಸ್ಟಾಲಿನ್ನರ ಫೋಟೋವನ್ನು ಪ್ರಕಟಿಸಲಾಗಿದೆಯೆಂದೂ, ಅವರು ಜೀವಂತರಾಗಿದ್ದಾರೆ ಎಂದು ... ಫೋಟೋವನ್ನೇ ಪ್ರಕಟಿಸಲಾಗುತ್ತಿದೆಯೆಂದೂ ತಿಳಿಸಿದ್ದಾರೆ.

## ಅರ್ಜೆಂಟೈನಾಕ್ಕೆ ಭಾರತದ ಪೋಲೋ ಟೀಂ

ಬರುವ ವರ್ಷದಲ್ಲಿ ಅರ್ಜೆಂಟೈನಾಕ್ಕೆ ಭಾರತದಿಂದ ಒಂದು ಪೋಲೋ ಆಟಗಾರರ ಟೀಮನ್ನು ಜಯಪುರ ಮಹಾರಾಜರ ನೇತೃತ್ವದಲ್ಲಿ ಕಳುಹಿಸಲು ಯೋಚಿಸಲಾಗುತ್ತಿದೆ.

## ಸರ್ಕಾರಿಯಲ್ಲಿ ಹಿಂದೂಗಳಿಗೆ ಅಭಿಪ್ರಾ...

... ಹಿಂದೂಗಳನ್ನು ... ನಲ್ಲಿ ... ತೆಗೆದುಹಾಕಲಾಗುತ್ತಿದೆಯೆಂದೂ ... ಈ ಬಗ್ಗೆ ... ಸರಕಾರದ ಗಮನವನ್ನು ... ಸೆಳೆದಿದ್ದಾರೆ.


## ಬೆಲೆಗಿವೆ

ಮೈಸೂರು ಕೃಷ್ಣವಿಲಾಸ ಅಗ್ರಹಾರದ 410, 411, 412ನೇ ನಂಬರ್ ಕಟ್ಟಡಗಳು.

ಬಿ. ಎಸ್. ಸುಬ್ಬರಾವ್, ... ಬಂಗ್ಲೆ ... ಮೈಸೂರು.


## ತೃತೀಯ ಮಹಾ ಯುದ್ಧ ನಡೆಯುವುದಿಲ್ಲ

ತೃತೀಯ ಮಹಾ ಯುದ್ಧವು ನಡೆಯುವುದಿಲ್ಲವೆಂದು ಅಮೆರಿಕದ ... ಪ್ರಸಿದ್ಧ ಪತ್ರಿಕೆ ... ಸ್ಟಾಲಿನ್ನರಿಗೆ ... ಶಾಂತಿ ... ನಂಬಿದ್ದಾರೆ.

## ಕೇಂದ್ರ ಸರಕಾರವೇ ... ಡಿಪಾಜಿಟ್ ...

ಕಾಶ್ಮೀರದಿಂದ ಬಂದ ... ಭೂಮಿ ... ದವರ ಒಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಡಿಪಾಜಿಟ್ ಆಗಿ ಕೊಟ್ಟಿರುವರೆಂದು ತಿಳಿಸಲಾಗಿದೆ.

## ಇರಾಕ್ - ಭಾರತಗಳಿಗೆ ಆಹಾರ ವಿನಿಮಯ

ಭಾರತ ಮತ್ತು ಇರಾಕ್ ರಾಜ್ಯಗಳಲ್ಲಿರುವ ... ಆಹಾರ ಧಾನ್ಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಬಗ್ಗೆ ಒಪ್ಪಂದವಾಗಲಿದೆ.

## ರೈಲ್ವೆ ಪ್ರಯಾಣಿಕರಲ್ಲಿ ಘರ್ಷಣೆ

ಜೋಧಪುರ ರೈಲ್ವೆಗೆ ಸೇರಿದ ಒಂದು ರೈಲ್ವೆ ಸ್ಟೇಷನ್ನಿನಲ್ಲಿ ಮೊನ್ನೆ ಪ್ರಯಾಣಿಕರಲ್ಲಿ ಘರ್ಷಣೆ ... ೨೧ ಮಂದಿ ... ಅನೇಕರಿಗೆ ಬಲವಾದ ಪೆಟ್ಟುಗಳು ಬಿದ್ದಿವೆ. ರೈಲು ಹೋಗುತ್ತಿದ್ದಾಗ ... ಬಗ್ಗೆ ... ಹೇಳಲಾಗಿದೆ.

## ಮನೆಯೊಳಕ್ಕೆ ಬಾಂಬರ್ ವಿಮಾನದ ಪ್ರವೇಶ

ಆಸ್ಟ್ರೇಲಿಯಾದ ರಾಜಧಾನಿ ಮೆಲ್ಬೋರ್ನ್ ನಗರದಲ್ಲಿರುವ ಗೃಹವೊಂದರೊಳಕ್ಕೆ ... ದ ಒಂದು ಬಾಂಬರ್ ವಿಮಾನವು ನುಗ್ಗಿ ... ಬಿದ್ದಿತೆಂದು ಹೇಳಲಾಗಿದೆ. ಇದರ ಪರಿಣಾಮವಾಗಿ ಮನೆಗೆ ಬೆಂಕಿ ಹತ್ತಿ ಒಬ್ಬ ಗಂಡಸು, ಒಬ್ಬ ಹೆಂಗಸು ಸತ್ತರೆಂದು ಹೇಳಲಾಗಿದೆ.

## ರಾಷ್ಟ್ರೀಯ ಚೀಣಾದ ಮತ್ತೊಂದು ಧಾಳಿ

ಹಾಂಗ್‌ಕಾಂಗಿಗೆ ದಕ್ಷಿಣದಲ್ಲಿರುವ ... ನಗರದ ಹತ್ತಿರ ಪುನಃ ರಾಷ್ಟ್ರೀಯ ಚೀಣರು ಚೀಣ ತೀರದಮೇಲೆ ಸೈನ್ಯವನ್ನು ಇಳಿಸಿದುದಾಗಿ ತಿಳಿದುಬಂದಿದೆ.

## ಹೃದಯದ ಮೇಲೆ ಶಕ್ತ್ರದ ಮೂಲಕ ಶಸ್ತ್ರ ಚಿಕಿತ್ಸೆ

ಅಮೆರಿಕದ ಫಿಲಿಡೆಲ್ಫಿಯಾದ ಮೂವರು ಶಸ್ತ್ರ ಚಿಕಿತ್ಸಾ ವೈದ್ಯರು ಒಬ್ಬ ಯುವಕನಿಗೆ ಬರುತ್ತಿದ್ದ ವಾತ ಸಂಬಂಧದ ಜ್ವರಕ್ಕಾಗಿ ಹೃದಯದ ಮೇಲೆ ... ಮೂಲಕ ಶಸ್ತ್ರ ಚಿಕಿತ್ಸೆ ನಡೆಸಿದರೆಂದು ಹೇಳಲಾಗಿದೆ. ಇಂತಹ ಚಿಕಿತ್ಸೆ ವೈದ್ಯಕ ಚರಿತ್ರೆಯಲ್ಲಿ ಇದೇ ಮೊದಲೆಂದು ಹೇಳಲಾಗಿದೆ. ಯುವಕನ ... ಹತ್ತಿರ ... ನಾಳವನ್ನು ಕತ್ತರಿಸಿ ಅದರ ಮೂಲಕ ಹದಿನೆಂಟು ಅಂಗುಲದ ... ನುಗ್ಗಿಸಿ ಅವರು ಚಿಕಿತ್ಸೆ ನಡೆಸಿದರು.


## ಒಲಂಪಿಯಾ ಟಾಕೀಸ್

30-3-50ರಿಂದ ದಿನವಹಿ 3 ಆಟಗಳು

ಜನಭರಿತವಾದ 3ನೇ ವಾರ

# ಬರ್ಸಾತ್

ಪಾತ್ರ:-ನರ್ಗೀಸ್, ರಾಜ್‌ಕಪೂರ್,

ಬೆಳಗಿನ ಪ್ರದರ್ಶನಗಳು

31-3-50ರಿಂದ 4 ದಿನಗಳು ಬೆಳಗ್ಗೆ 10½

# ಕಾಜಲ್

ಪಾತ್ರ — ಸುರಯ್ಯಾ, ...

ಶ್ರೀ

## ಅನ್ನಪೂರ್ಣೇಶ್ವರೀ ಲಾಡ್ಜ್

ನಾರಾಯಣ ಶಾಸ್ತ್ರಿ ರಸ್ತೆ

(ನಲ್ಲಪ್ಪನ ... ಛತ್ರ, ಮೈಸೂರು.)

ಮೇಲ್ಕಂಡ ಹೋಟೇಲಿನಲ್ಲಿ ತಾ|| ೨೦-೩-೫೦ರಿಂದ ಪ್ಲೇಟ್ ಊಟವನ್ನು ಏರ್ಪಾಡು ಮಾಡಲಾಗಿದೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಎ. ಎಸ್. ಪರಮೇಶ್ವರ ಅಯ್ಯರ್, ಪ್ರೊಪ್ರೈಟರ್

# ಶ್ರೀ ಗಣೇಶಾ ಟಾಕೀಸ್

30—3—50ರಿಂದ ದಿನವಹಿ 3 ಆಟಗಳು

ಅಂಬಿಕಾ ಫಿಲಂಸ್‌ರವರ ಹಿಂದಿ ಚಿತ್ರ

# - ಅನೋಖಾ ಪ್ಯಾರ್ -

ಪಾತ್ರ:-ನರ್ಗೀಸ್, ದಿಲೀಪ್ ಕುಮಾರ್ ಮತ್ತು ... 

ನಾಟಕ ಶಿರೋಮಣಿ ಕೀರ್ತಿಶೇಷ ಎ. ವಿ. ವರದಾಚಾರ್ಯರ ನಾಟಕವನ್ನು ಜ್ಞಾಪಕಕ್ಕೆ ತರುವ ಹಿಂದಿ ಚಿತ್ರ

# ಪ್ರಭುದೇವಾ ಟಾಕೀಸ್, ಮೈಸೂರು

1-4-50ನೇ ಶನಿವಾರದಿಂದ ದಿನವಹಿ 3 ಆಟಗಳು

ಸೊಹರಾಬ್ ಮೋದಿಯವರಿಂದ ತಯಾರಿಸಲ್ಪಟ್ಟ

# - ನರಸಿಂಹಾವತಾರ -

ಪಾತ್ರ:-ಶೋಭನಾ ಸಮರ್ಥ್, ಲಕ್ಷ್ಮಣ್, ನಿರಂಜನ ಶರ್ಮ, ಮಹೀಪಾಲ್ ಮುಂತಾದವರು

29-3-50ರಿಂದ ಅನೋಖಾ ಆರಂಭ ದಿನವಹಿ 4 ಆಟಗಳು

# ಶ್ರೀ ಚಾಮುಂಡೇಶ್ವರೀ ಟಾಕೀಸಿನಲ್ಲಿ

ರೋಷನ್ ಪಿಕ್ಚರ್ಸ್‌ರವರ ಅಪೂರ್ವವಾದ ರಾಷ್ಟ್ರೀಯ ಒಸ್ಟೆಯುಳ್ಳ ಹಿಂದಿ ಚಿತ್ರ



... (...), ..., ... ಮತ್ತು ... ಹಾಸ್ಯ ನಟರಸಿಕ ...

ಮತ್ತು ಅನೇಕರು ಸಂಗೀತ - ಎ. ಆರ್. ಖುರೇಷಿ

... ಶ್ರೀ ಕ್ಷೇತ್ರಪಾಲ ಪಿಕ್ಚರ್ಸ್ ಸರ್ಕ್ಯೂಟ್, ... ಮೈಸೂರು


Printed by A. R. Nagarajan at Sadhvi Press, D. Subbiah Road, Mysore

ಫೋನ್ ನಂ. 798 ॥ವಂದೇ ಮಾತರಂ॥ ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೮ ಗುರುವಾರ ೩೦-೩-೫೦ ಸಂಚಿಕೆ ೧೯೦

# ಪ್ರಧಾನಿಗಳ ಭೇಟಿ ಬಗ್ಗೆ ರಾಷ್ಟ್ರಾಧ್ಯಕ್ಷರ ಭರವಸೆ

## ನೆಹರೂ-ಲಿಯಾಖತ್ ಅಲಿ ಭೇಟಿ ಯಶಸ್ವಿಯಾಗುವುದು

**ರಾಷ್ಟ್ರಾಧ್ಯಕ್ಷರ ರೇಡಿಯೋ ಭಾಷಣ**

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ನೆನ್ನೆ ಅಖಿಲ ಭಾರತ ರೇಡಿಯೋ ಮೂಲಕ ಪ್ರಸಾರ ಭಾಷಣ ಮಾಡಿ, ಬಂಗಾಳದಲ್ಲಿ ನಡೆಯುತ್ತಿರುವ ಹೀನ ಕೃತ್ಯಗಳನ್ನು ಖಂಡಿಸಿದರು-ಇಂತಹ ಕೃತ್ಯಗಳಿಂದ ದೇಶದ ಅಭ್ಯುದಯಕ್ಕೆ ಅಡ್ಡಿ ಬರುವುದೆಂದೂ, ಅವುಗಳನ್ನು ಪ್ರಚೋದಿಸುವ ಪ್ರತಿಗಾಮೀ ಶಕ್ತಿಗಳನ್ನು ನಿರ್ಮೂಲ ಮಾಡಲು ಎಲ್ಲರೂ ನೆರವಾಗಿ, ನಮ್ಮ ರಾಷ್ಟ್ರನಾಯಕ ಪಂಡಿತ ಜವಹರಲಾಲ್ ನೆಹರೂರವರಲ್ಲಿ ಪೂರ್ಣ ವಿಶ್ವಾಸವಿಟ್ಟು ಸಹಕರಿಸಬೇಕೆಂದೂ, ಪಾಕಿಸ್ತಾನದಿಂದ ಭಾರತಕ್ಕೆ ಬರುವ ನಿರಾಶ್ರಿತರಿಗೆ ಪುರುಷ ಸಹಕಲ್ಪಿಸಬೇಕೆಂದೂ ಅವರು ಮನವಿ ಮಾಡಿಕೊಂಡರು. ಮುಂದಿನ ಭಾನುವಾರ ನಡೆಯಲಿರುವ ಪಂಡಿತ ನೆಹರೂ ಮತ್ತು ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಅಲಿ ಖಾನರ ಮಹತ್ವ ಪೂರಿತ ಭೇಟಿಯು ಯಶಸ್ವಿಯಾಗುವುದಾಗಿ ಅವರು ನಂಬಿಕೆಯು ಳ್ಳರುವುದಾಗಿ ತಿಳಿಸಿದರು

### ಮಹಾವೀರ ತೀರ್ಥಂಕರರ ಜಯಂತಿ

ಮೈಸೂರು ನಗರದ ಜೈನ ಸಮಾಜದವರು ನಾಳೆ ಶ್ರೀ ಭಗವಾನ್ ಮಹಾವೀರ ತೀರ್ಥಂಕರರ ಜಯಂತಿಯ ಸಂದರ್ಭದಲ್ಲಿ ಬೆಳಗ್ಗೆ ೮ ಘ ಟೆಗೆ ಉತ್ಸವವನ್ನು ಸಾಯಂಕಾಲ೭-೩೦ಘಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಹೆಚ್ ಎ. ಶ್ರೀ ಪಾಳೇಗಾರ್‌ರವರ ಅಧ್ಯಕ್ಷತೆಯಲ್ಲಿ ಟೌನ್ ಹಾಲಿನಲ್ಲಿ ಉಪನ್ಯಾಸವನ್ನ ಏರ್ಪಡಿಸಿರುವರು. ಮೈಸೂರು ವಿಶ್ವವಿದ್ಯಾಲಯದ ಅಧ್ಯಾಪಕರಾಗಿರುವ ವಿದ್ವಾನ್ ಹೆಚ್ ಎ ರಾಘವೇಂದ್ರಾಚಾರ್, ಮತ್ತು ಹೆಚ್. ಕೆ. ಶ್ರೀ ರಾಜಾರಾಮರು ಶ್ರೀ ಭಗವಾನ್ ಮಹಾವೀರ ತೀರ್ಥಂಕರರ ಜೀವನ ಮತ್ತು ತತ್ವದ ವಿಷಯವಾಗಿ ಉಪನ್ಯಾಸ ಮಾಡುವರು

## ಚಂದ್ರ ಗ್ರಹಣ

ಆಸ್ಥಾನ ಜ್ಯೋತಿಷ ಮತ್ತು ಧರ್ಮಶಾಸ್ತ್ರ ವಿದ್ವಾಂಸರೂ ಮತ್ತು ಪಂಚಾಂಗಕರ್ತರೂ ಆದ ಬ್ರ॥ ಶ್ರೀ॥ ಎಸ್. ಎ. ಕೃಷ್ಣಜೋಯಿಸರು ಈ ರೀತಿ ಬರೆಯುತ್ತಾರೆ:-

ಸ್ ೧೯೫೦ ನೇ ಏಪ್ರಿಲ್ ಮಾಹೆ ೨ ನೇ ತಾ॥ವಿಕೃತಿ ಸಂವತ್ಸರದ ಚೈತ್ರ ಶುದ್ಧ ಪೂರ್ಣಿಮಾ ಭಾನುವಾರ ರಾತ್ರಿ ಬೀಳಲಿರುವ ಚಂದ್ರಗ್ರಹಣವು ಸಂಭವಿಸುವುದು. ರಾತ್ರಿ ೧೧-೩೯ ಘಂಟೆಗೆ ಚಂದ್ರನ ಉದ ಈಶಾನ್ಯ ಭಾಗದಲ್ಲಿ ಗ್ರಹಣ ಸ್ಪರ್ಶವಾಗಿ ೧-೫೯ ಘಂಟೆಗೆ ಬಿಂಬವು ಪೂರ್ಣವಾಗಿ ಮುಚ್ಚಲ್ಪಡುವುದು. ರಾತ್ರಿ ... ಘಂಟೆಗೆ ಗ್ರಹಣ ಬಿಡಲು ಆರಂಭ ... ಘಂಟೆಗೆ ಬಿಂಬದ ವಾಯವ್ಯಭಾಗದಲ್ಲಿ ಮೋಕ್ಷವಾಗುವುದು

ಕರ್ಮಾಧಿಕಾರಿಗಳು ರಾತ್ರಿ ೯. ಘಂಟೆಯಿಂದ ರಾತ್ರಿ ೩-೪೯ರ ವರೆಗೆ ತರ್ಪಣಾದಿಗಳನ್ನು ಮಾಡಬಹುದು ಈ ದಿವಸ ... ೩-೨೦ ಘಂಟೆಯೊಳಗೆ ಭೋಜನಾದಿಗಳನ್ನು ಮಾಡಬಹುದು ಹಸ್ತ ನಕ್ಷತ್ರದಲ್ಲಿ ಗ್ರಹಣವು ಸಂಭವಿಸುವುದರಿಂದ ... ೨-೩-೪ನೇ ಪಾದ, ಹಸ್ತ, ಚಿತ್ರ, ... ನೇ ಪಾದಗಳಲ್ಲಿ ಜನಿಸಿರುವವರು ಶಾಂತಿಯನ್ನು ಮಾಡಿಕೊಳ್ಳುವುದು ಶ್ರೇಯಸ್ಕರವು

## ಅಕ್ಟೋಬರ್ ತಿಂಗಳಿಂದ ಹೊಸ ೧॥ ಆಣೆ ಕಾರ್ಡು

ಅಕ್ಟೋಬರ್ ೧ ರಿಂದ ಅವರುಗಳಿಗಿಂತಲೂ ಅರ್ಧಾಣೆ ಕಡಿಮೆಯ ಒಂದೂವರೆ ಆಣೆಯ ಕಾಗದದ ಕಾರ್ಡುಗಳನ್ನು ಮಾರಾಟ ಮಾಡಲಾಗುವುದು. ಈ ಕಾಗದವು ಎಲೆ ಹಸುರಿನ ಬಣ್ಣದಿಂದ ಕೂಡಿದ್ದು ಮೇಲೆ ಅಶೋಕ ಧ್ವಜಸ್ತಂಭದ ಮುದ್ರೆ ಯೊತ್ತಲ್ಪಟ್ಟಿರುವುದು

## ಪೆಟ್ರೋಲ್ ಮತ್ತು ಸೀಮೆ ಎಣ್ಣೆ ದರ ಇಳಿಯುವುದು

ಬರುವ ತಿಂಗಳಿನಿಂದ ಪೆಟ್ರೋಲಿನ ಬೆಲೆಯು ಗ್ಯಾಲನ್ನಿಗೆ ಒಂದು ಆಣೆಯಷ್ಟೂ ಮತ್ತು ಸೀಮೆ ಎಣ್ಣೆ ಬೆಲೆಯು ೩ ಸೆಗೆ ಅರ್ಧ ಆಣೆಯಂತೆಯೂ ಕಡಿಮೆಯಾಗುವುದು

## ಹೈದರಾಬಾದಿನ ನವಾಬರೊಬ್ಬರ ದಸ್ತಗಿರಿ

ಹೈದರಾಬಾದಿನ ನಿವೃತ್ತ ರೆವಿನ್ಯೂ ಅಧಿಕಾರಿಗಳಾದ ನವಾಬ್ ಮನಸಾಬ್ ಜಂಗ್ ಮತ್ತು ಅವರ ಮಗಳು ಗೌಸಿಯ ಬೇಗಂರವರನ್ನು ಪೂನಾದಲ್ಲಿ ದಸ್ತಗಿರಿ ಮಾಡಲಾಗಿದೆ ಅವರು ಹೈದರಾಬಾದಿನಿಂದ ಬೊಂಬಾಯಿಗೆ ಹೊರಟಿದ್ದರು ಗೌಸಿಯ ಬೇಗಮರ ಗಂಡನು ಈಗ ಪಾಕಿಸ್ತಾನದಲ್ಲಿ ರುತ್ತಾನೆ

## ಸರ್ಕಾರಿ ಜವಾನರಿಗೆ ರುಮಾಲಿನ ಬದಲು ಗಾಂಧಿ ಟೋಪಿ

ತಿರುವಾಂಕೂರ್ ಸರಕಾರದ ಜವಾನರುಗಳು ಇನ್ನು ಮೇಲೆ ದೊಡ್ಡ ರುಮಾಲುಗಳ ಬದಲು ಗಾಂಧಿ ಟೋಪಿಗಳನ್ನು ಧರಿಸಬೇಕೆಂದು ಅಲ್ಲಿನ ಸರ್ಕಾರದ ಆಜ್ಞೆಯಾಗಿದೆ. ಟೋಪಿಗಳು ಸರಳವಾಗಿಯೂ, ಗೌರವಯುತವಾಗಿಯೂ, ಅಗ್ಗವಾಗಿಯೂ ಇರುವುದೆ ಇದಕ್ಕೆ ಕಾರಣವೆಂದು ಹೇಳಲಾಗಿದೆ

### ಉತ್ಸವಗಳು

ಬೆಂಗಳೂರಿನಲ್ಲಿ ಕರಗದ ದಿನ ನಡೆಯಬೇಕಾಗಿದ್ದ, ಶ್ರೀ ಅಣ್ಣಮ್ಮದೇವಿ, ಶ್ರೀ ರಾಮದೇವರು ಮತ್ತು ಆಂಜನೇಯಸ್ವಾಮಿಯ ಹೂವಿನ ಪಲ್ಲಕ್ಕಿ ಮತ್ತು ಹೂವಿನ ಮಂಟಪದ ಉತ್ಸವಗಳು ಅಂದು ಗ್ರಹಣವಾದುದರಿಂದ ಮಾರನೇ ದಿನ ಬೆಳಗಿನ ಜಾವ ನಡೆಯುವುವೆಂದು ತಿಳಿದುಬಂದಿದೆ

## ಅಟ್ಲಿ ಸರ್ಕಾರಕ್ಕೆ ಪ್ರಥಮ ಪರಾಭವ

ಬ್ರಿಟಿಷ್ ಪಾರ್ಲಿಮೆಂಟಿನ ಸಭೆಯಲ್ಲಿ ಸರ್ಕಾರದ ಕಲ್ಲಿದ್ದಲು ಮತ್ತು ವಿದ್ಯುಚ್ಛಕ್ತಿ ನೀತಿಯ ಬಗ್ಗೆ ಲೇಬರ್ ಪಕ್ಷಕ್ಕೆ ನೆನ್ನೆ ಪ್ರಥಮ ಪರಾಭವ ಸಂಭವಿಸಿತು ಸರಕಾರದ ಪರವಾಗಿ ೨೮೩ ಓಟುಗಳೂ, ವಿರೋಧವಾಗಿ ೨೮೯ ಓಟುಗಳೂ ಬಂದುವು. ಪರಾಜಯವು ಕೇವಲ ನಿರ್ದಿಷ್ಟ ಪ್ರಶ್ನೆಯ ಬಗ್ಗೆ ಆದುದರಿಂದ ಸರ್ಕಾರವು ರಾಜೀನಾಮೆ ಕೊಡಬೇಕಾದುದಿಲ್ಲವೆಂದು ತಿಳಿಸಲಾಗಿದೆ

## ಇಂದೂರಿನ ಉತ್ತರಾಧಿಕಾರಿ ಹೋಳ್ಕರರ ಮಗಳು

ಈಗ ಇರುವ ಮಹಾರಾಜ ಯಶವಂತರಾವ್ ಹೋಳ್ಕರರ, ನಂತರ ಅವರ ಪತ್ನಿ ದಿವಂಗತ ಶನ್ಯೋಗಿತಾಬಾಯಿ ಹೋಳ್ಕರರ ಗರ್ಭದಲ್ಲಿ ಜನಿಸಿದ ರಾಜಕುಮಾರಿ ಉಷಾದೇವಿಯವರೇ ಪಟ್ಟಕ್ಕೆ ಬರುವರು ಇದಕ್ಕೆ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರ ಸಮ್ಮತಿಯುಂಟಾಗಿದೆ

### ಶಿವಮೊಗ್ಗದ ಕೈಗಾರಿಕೆ ಸರ್ವೆ

ಸಂಸ್ಥಾನದ ಶಿವಮೊಗ್ಗದ ಕೈಗಾರಿಕೆಯ ಪೂರ್ವಭಾವಿ ಸರ್ವೆ ನಡೆಸಲು ರಜದ ಮೇಲೆ ಇರುವ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್, ಶ್ರೀ ಜೆ ಎ ಗಂಗಾಧರ್‌ರವರನ್ನು ನೇಮಿಸಲಾಗಿದೆ

### ಗಾಯತ್ರಿ ದೇವಿ ಜಲಾಶಯ

ಹಿರಿಯೂರು ತಾಲ್ಲೂಕಿನ ಕಡಿಯೂರ ಗ್ರಾಮದ ಬಳಿ ಇರುವ ಜಲಾಶಯಕ್ಕೆ ಶ್ರೀಮನ್ ಮಹಾರಾಜರ ಪುತ್ರಿ, ಶ್ರೀ ಗಾಯತ್ರಿದೇವಿಯವರ ಹೆಸರನ್ನು ಇಡಲಾಗಿದೆ

### ಹರಿಕಥೆ ಮತ್ತು ಸಂಗೀತ

ಸಂತೇಪೇಟೆಯ ಕುಂಚಿಟಿಗರ ಶ್ರೀರಾಮ ಮಂದಿರದಲ್ಲಿ ಈ ಸಂಜೆ ೬-೩೦ಕ್ಕೆ ಎಕಾಡೆಮಿ ಪ್ರಯುಕ್ತ ಶ್ರೀ ಲಕ್ಷ್ಮೀಪತಿ ದಾಸರಿಂದ ಚಂದ್ರಹಾಸನ ಕಥೆಯೂ, ನಾಳೆ ಸಂಜೆ ೬-೩೦ಕ್ಕೆ ಆ॥ ವಿ॥ ವೆಂಕಟಾಚಲಯ್ಯನವರ ಪಿಟೀಲು ಮತ್ತು ಆ॥ ವಿ॥ ಶೇಷಪ್ಪನವರ ತಬಲಗಳ ಸಮೇತ, ಮಾಸ್ಟರ್ ಬಿ ಎಸ್ ವಿಜಯರಾಘವರವರ ಸಂಗೀತವೂ ನಡೆಯುವುವು

ಹಳೇ ಅಗ್ರಹಾರದ ಶ್ರೀ ಜಾನಕೀ ರಾಮಮಂದಿರದಲ್ಲಿ ಈ ರಾತ್ರಿ ೯ ಗಂಟೆಗೆ ಬಕ್ಸರ್ ಸಹೋದರರಾದ ಶ್ರೀ ಭದ್ರಾಚಲ ರಾಮದಾಸ್ ಎಂಬ ನಾಟಕವು ನಡೆಯುವುದು

## ವಿಷ ಮಿಶ್ರಿತ ಸೇಂದಿ ಸೇವನೆಯಿಂದ ೪ ಜನರ ಮರಣ

ಸಕಲೇಶಪುರಕ್ಕೆ ೨ ಮೈಲಿ ದೂರದಲ್ಲಿರುವ ಹೊಸೂರು ಬಳಿ ವಿಷ ಪೂರಿತ ಸೇಂದಿಯನ್ನು ಸೇವಿಸಿದುದರಿಂದ ೪ ಜನರು ಸತ್ತರೆಂದೂ, ೫ ಜನರು ತೀವ್ರಾವಸ್ಥೆಯಲ್ಲಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರೆಂದೂ ವರದಿಯಾಗಿದೆ

## ನಾನೂರು ಮನೆಗಳ ಭಸ್ಮ

ಲಕ್ಕವಳ್ಳಿಯ ಹಳೇ ಊರಿನಲ್ಲಿ ಬೆಂಕಿಯುಂಟಾಗಿ ೪೦೦ ಮನೆಗಳು ಭಸ್ಮವಾದವೆಂದು ತಿಳಿದುಬಂದಿದೆ. ೨೦೦೦ ಜನರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ಸಾವಿರ ಪಲ್ಲ ಭತ್ತವು ನಾಶವಾದುದಲ್ಲದೆ, ೧ ಲಕ್ಷ ರೂಗಳ ವರೆಗೆ ನಷ್ಟ ಸಂಭವಿಸಿದೆ ನಿರಾಶ್ರಿತರಿಗೆ ಉಚಿತ ಭೋಜನ ಶಾಲೆಯನ್ನು ಏರ್ಪಡಿಸಲಾಗಿದೆ. ಊರಿನ ಅರ್ಧ ಭಾಗವೇ ಭಸ್ಮವಾಯಿತೆಂದು ತಿಳಿದುಬಂದಿದೆ

## ಯೂರೋಪಿಗೆ ಡಾ॥ ಮೋದಿಯವರ ಪ್ರಯಾಣ

ಕರ್ನಾಟಕದ ನೇತ್ರ ವೈದ್ಯರಾದ ಡಾ॥ ಎಂ ಸಿ ಮೋದಿಯವರು ಸ್ಕ್ಯಾಂಡಿನೇವಿಯಾ, ಬಾಸ್ಟನ್, ಫಿಲಡಲ್ಫಿಯಾ, ಬಾಲ್ಟಿಮೋರ್ ಮತ್ತು ಚಿಕಾಗೋಗಳಲ್ಲಿರುವ ನೇತ್ರ ಚಿಕಿತ್ಸಾಲಯಗಳಿಗೆ ಭೇಟಿಕೊಟ್ಟಿರುವರು. ಅವರು ಕಳೆದ ೨೪ನೇ ತಾರೀಖು ವಾಷಿಂಗ್ಟನ್ ಜಹಜಿನಲ್ಲಿ ವಿಮಾನದಿಂದ ಯೂರೋಪಿಗೆ ಪ್ರಯಾಣ ಬೆಳಸಿದರು. ಇಂಗ್ಲೆಂಡ್, ಸ್ವಿಟ್ಸರ್‌ಲೆಂಡ್ ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿರುವ ಆಸ್ಪತ್ರೆಗಳನ್ನು ಭೇಟಿ ಮಾಡಿ, ಕಣ್ಣಿನ ಶಸ್ತ್ರ ಚಿಕಿತ್ಸೆ ಬಗ್ಗೆ ಆಧುನಿಕ ಉಪಕರಣಗಳೊಡನೆ ಭಾರತಕ್ಕೆ ಹಿಂದಿರುಗುವರು.

### ಜ್ಯೋತಿ

ಮೈಸೂರಿನಲ್ಲಿರುವ ಮುತ್ತೂರು ವಿದ್ಯಾರ್ಥಿ ನಿಲಯ ಸಂಘದವರು ಪ್ರಕಟಿಸುತ್ತಿರುವ 'ಜ್ಯೋತಿ' ಎಂಬ ಪತ್ರಿಕೆಯ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ ಇದರಲ್ಲಿ ಶಿವರಾತ್ರೀಶ್ವರ ಸ್ತೋತ್ರ, ಪಂಚರತ್ನ ಮಾಲಿಕೆ, ಜೀವನ ಸುಧೆ, ಪ್ರೇಮ, ಗಂಡು-ಹೆಣ್ಣು ಅಖಂಡ ಕರ್ನಾಟಕ, ನನ್ನ ಆ ತಾಯಿ, ರೈತರು, ಮಾನವ ಜೀವನ, ನಿಜಗುಣ ಶಿವಯೋಗಿಗಳು-ಇವೇ ಮುಂತಾದ ಅಮೂಲ್ಯವಾದ ಲೇಖನಗಳಿವೆ ವಿದ್ಯಾರ್ಥಿಗಳಿಂದಲೇ ಉತ್ತಮ ರೀತಿಯಲ್ಲಿ ನಡೆಯುತ್ತಿರುವ ಈ ಪತ್ರಿಕೆಯು ಚಿರಾಯುವಾಗಿ ನಾಡು ಮತ್ತು ನುಡಿಯ ಸೇವೆಯನ್ನು ಮಾಡಲೆಂದು ಹಾರೈಸುತ್ತೇವೆ

ಬೆಂಗಳೂರಿನಲ್ಲಿ ಡಿ.ಡಿ.ಟಿ ತಯಾರಿ

ಮಲೇರಿಯಾ ರೋಗವು ಹರಡದಂತೆ ತಡೆಯಬಲ್ಲ ಡಿ ಡಿ ಟಿ ಎಂಬ ಔಷಧವನ್ನು ತಯಾರಿಸುವ ಯಂತ್ರವನ್ನು ಬೆಂಗಳೂರಿನಲ್ಲಿ ಶೀಘ್ರದಲ್ಲಿ ಸ್ಥಾಪಿಸಲಾಗುವುದು. ಔಷಧಿಯನ್ನು ಮಲೆನಾಡು ಪ್ರದೇಶದಲ್ಲಿ ಮಲೇರಿಯಾವನ್ನು ತಡೆಗಟ್ಟಲು ಮುಖ್ಯವಾಗಿ ಉಪಯೋಗಿಸಲಾಗುವುದು.

ಕೈ ಜಾಮರಾಜನಗರದಲ್ಲಿ ನಡೆಯಲಿರುವ ಪೌರ ಸಭಾ ಚುನಾವಣೆಗಳಲ್ಲಿ ಹಿಂದೂ ಮಹಾ ಸಭೆಯ ಅಭ್ಯರ್ಥಿಗಳು ಸ್ಪರ್ಧಿಸುವರೆಂದು ತಿಳಿದುಬಂದಿದೆ. ಸಂಸ್ಥಾನದ ಹಿಂದೂ ಮಹಾ ಸಭೆಯ ... ಸಮಿತಿಯ ಸಭೆಯು ನಾಳೆ ...

## ಭಾರತ ಸೈನ್ಯದಲ್ಲಿ ಸಂಸ್ಥಾನದ ಸೈನ್ಯದ ಐಕ್ಯ

ಶ್ರೀವರ್ ಮಹಾರಾಜರ ಸಂದೇಶ

ಸ್ಪೆಂ ಸು ಫೋರ್] ಬೆಂಗಳೂರು ೨೮

ಸಂಸ್ಥಾನದ ಸೈನ್ಯವು ಭಾರತ ಸೈನ್ಯಗಳಲ್ಲಿ ಐಕ್ಯವಾಗುವ ಸಂದರ್ಭದಲ್ಲಿ ನೆನ್ನೆ ಇಲ್ಲಿನ ಸ್ಟೇಡಿಯಮ್ಮಿನಲ್ಲಿ ಸಮಾರಂಭವೊಂದು ನಡೆಯಿತು. ಸಮಾರಂಭಕ್ಕೆ ಶ್ರೀಮನ್ಮಹಾರಾಜರು ಕಳುಹಿಸಿದ್ದ ಸಂದೇಶವನ್ನು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಓದಿದರು. ಸಂದೇಶದಲ್ಲಿ ಪ್ರಭುಗಳು ರಾಷ್ಟ್ರ ರಕ್ಷಣಾ ಕ್ಷೇತ್ರದಲ್ಲಿ ಭಾರತದ ಸೈನ್ಯದೊಡನೆ ಸಂಸ್ಥಾನದ ಸೈನ್ಯವು ಒಟ್ಟಿಗೆ ಸೇರುವುದು ಸ್ವಾಭಾವಿಕವಾದುದೆಂದೂ, ಅಧಿಕಾರಾಧಿಕಾರಿಗಳ ವರ್ಗಾವಣೆ ರೀತಿಗೆ ಇದು ಅನುಗುಣವಾದುದೆಂದೂ ತಿಳಿಸಿದ್ದರು. ೧೬೬೮ರಲ್ಲಿ ಮೊದಲಬಾರಿಗೆ ಅಸ್ತಿತ್ವಕ್ಕೆ ಬಂದ ಈ ಸೈನ್ಯದಳವು ಪ್ರಸಿದ್ಧವಾಗಿದ್ದವು.

## ಅಂಚೆಯ ಖಾಲಿ ಕಾರ್ಡು ಕವರುಗಳ ಮಾರಾಟ

ಅಂಚೆ ಕಛೇರಿಗಳಲ್ಲಿ ಕೃಳೀಯು ಇರುವ ರಿಗಳ ಸಂಬಂಧವಾಗಿ ಖಾಲಿ ಕಾರ್ಡುಗಳನ್ನೂ ಕವರುಗಳನ್ನೂ ಮಾರಲು ಏರ್ಪಾಡಾಗಿದೆ. ಕಾರ್ಡುಗಳಿಗೆ ಅರ್ಧಾಣೆ ಮತ್ತು ಕವರುಗಳಿಗೆ ಒಂದಾಣೆ ಸ್ಟಾಂಪುಗಳನ್ನು ಅಂಟಿಸಬೇಕೆಂದು ಇಚ್ಛಿಸುವವರು ತಿಳಿಸುವವರು ಖಾಲಿ ಕವರುಗಳನ್ನು ಏಪ್ರಿಲ್ ೧ನೇ ತಾರೀಖಿನಿಂದ ಖಾಲಿ ಕಾರ್ಡುಗಳನ್ನು ಅಂಚೆ ಕಛೇರಿಗಳಲ್ಲಿ ಕಾಲುಆಣೆಗೆ ಮಾರಲಾಗುವುದು. ಈ ವಸ್ತುಗಳು ಸಿಕ್ಕದಿದ್ದರೆ ಇತರ ಕಡೆಗಳಲ್ಲಿ ದೊರೆಯುವ ಕಾರ್ಡುಗಳನ್ನಾಗಲಿ ಕವರುಗಳನ್ನಾಗಲಿ ಕೊಂಡು ಅವುಗಳಿಗೆ ಸ್ಟಾಂಪುಗಳನ್ನು ಹಚ್ಚಬಹುದು. ಶೀಘ್ರದಲ್ಲಿಯೇ ಅರ್ಧಾಣೆ ಕಾರ್ಡುಗಳನ್ನು ಅಚ್ಚು ಹಾಕಿಸಿ, ಅಂಚೆ ಇಲಾಖೆಯವರೇ ಮಾರಲು ಏರ್ಪಾಡು ಮಾಡುವರೆಂದೂ, ಒಂದಾಣೆ ಕವರನ್ನು ಅಚ್ಚು ಹಾಕಿಸುವುದಿಲ್ಲವೆಂದೂ ತಿಳಿದುಬಂದಿದೆ.

## ರೈಲ್ವೆ ಫುಟ್ ಬೋರ್ಡು ಪ್ರಯಾಣಿಕರ ಮರಣ

ಬೊಂಬಾಯಿಯಿಂದ ಪೂನಾಕ್ಕೆ ಮೊನ್ನೆ ಹೊರಟ ಮೇಲ್ ಗಾಡಿಯ ಫುಟ್ ಬೋರ್ಡುಗಳ ಮೇಲೆ ನಿಂತು ಪ್ರಯಾಣ ಮಾಡುತ್ತಿದ್ದ ನಾಲ್ಕು ಜನರು ಸದರಿ ರೈಲು ಮತ್ತು ಪೂನಾ-ಬೊಂಬಾಯಿಯ ಡೆಕ್ಕನ್ ಎಕ್ಸ್‌ಪ್ರೆಸ್ ರೈಲುಗಳು ಒಂದು ಸುರಂಗದ ಹತ್ತಿರ ಹಾದು ಹೋಗುತ್ತಿದ್ದಾಗ ಬಿದ್ದು ಸತ್ತರು. ಮೂವರಿಗೆ ಗಾಯವಾಗಿದೆ.


# ಶ್ರೀ ಗಣೇಶಾ ಟಾಕೀಸ್

30—3—50ರಿಂದ ದಿನವಹಿ 3 ಆಟಗಳು

ಅಂಬಿಕಾ ಫಿಲಂಸ್‌ರವರ ಹಿಂದಿ ಚಿತ್ರ

## — ಅನೋಖಾ ಪ್ಯಾರ್ —

ಪಾತ್ರ:- ನರ್ಗೀಸ್, ದಿಲೀಪ್ ಕುಮಾರ್ ಮತ್ತು ನಳಿನಿ ಜಯವಂತ್

# ರಣಜಿತ್ ಟಾಕೀಸ್

ತಾ|| 31-3-50ರಿಂದ ಆಟೋಳ ಪ್ರಾರಂಭ ದಿನವಹಿ 3 ಆಟಗಳು

ಇಂಡಿಯಾ ಪ್ರೊಡಕ್ಷನ್ಸ್‌ರವರ ಮನೋಹರ ಸಂಗೀತಮಯ ಹಿಂದಿ ಚಿತ್ರ

ಯಾಕೂಬ್, ಸುಲೋಚನಾ ಚಟರ್ಜಿ ನಟಿಸಿರುವ

## - ಆಯಿಯೆ -

ಶೀಘ್ರದಲ್ಲಿ:- ಪಾರಸ್

# ಚಾಮುಂಡೇಶ್ವರೀ ಟಾಕೀಸಿನಲ್ಲಿ

29-3-50ರಿಂದ ದಿನವಹಿ 4 ಆಟಗಳು

ರೋಷನ್ ಪಿಕ್ಚರ್ಸ್‌ರವರ ಅಮೋಘವಾದ ರಾಷ್ಟ್ರೀಯ ಹಿನ್ನೆಲೆಯುಳ್ಳ ಹಿಂದಿ ಚಿತ್ರ

## - ದೇಶಸೇವಾ -

ತಾರಾಗಣ:- ಸುರಯ್ಯ (ಚೌಧರಿ), ಶಾಮಿಮ್, ಪ್ರಕಾಶ್ ಮತ್ತು ವಿಖ್ಯಾತ ಹಾಸ್ಯ ನಟರಾಗಿದ್ದ ರಫೀಕ್, ಅನ್ವರ್

# ಗಾಯತ್ರೀ ಟಾಕೀಸ್

ದಿನವಹಿ 3 ಪ್ರದರ್ಶನಗಳು

30-3-50 ರಿಂದ 3 ದಿನಗಳು ಮಾತ್ರ

ಯೂನಿವರ್ಸಲ್‌ರವರ

## ಮೆಕ್ಸಿಕನ್ ಹೇರೈಡ್

## Mexican Hayride

ಪಾತ್ರ:- ಬಡ್ ಅಬ್ಬಟ್, ಲೋ ಕಾಸ್ಟೆಲೋ ವರ್ಜೀನಿಯಾ ಗ್ರೇ

# ರಾಜಕಮಲ್ ಟಾಕೀಸ್

31—3—50 ರಿಂದ

ಜನಭರಿತವಾದ ೧೫ನೇ ವಾರ

ದಿನವಹಿ 2 ಪ್ರದರ್ಶನಗಳು

## ಜೀವನ

--: ಭೂಮಿಕೆ: —

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರನ್, ಲಲಿತ-ಪದ್ಮಿನಿ

ಬೆಳಗಿನ ಪ್ರದರ್ಶನಗಳು

31—3—50 4 ದಿನಗಳು ಮಾತ್ರ

## ಗರ್ಮಾಗರಂ

(ಹಿಂದಿ)

ಭೂಮಿಕೆ.—ಬೆಂಜಮಿನ್, ಶಾರದ, ಸಾವಿರ್ ಆದಿ

# ಒಲಿಂಪಿಯಾ ಟಾಕೀಸ್

30 3-50ರಿಂದ ದಿನವಹಿ 3 ಆಟಗಳು

ಜನಭರಿತವಾದ 3ನೇ ವಾರ

## ಬರ್ ಸಾತ್

ಪಾತ್ರ:—ನರ್ಗೀಸ್, ರಾಜ್‌ಕಪೂರ್,

ಬೆಳಗಿನ ಪ್ರದರ್ಶನಗಳು

31-3-50ರಿಂದ 4 ದಿನಗಳು ಬೆಳಗ್ಗೆ 10ಕ್ಕೆ

## ಕಾಜಲ್

ಪಾತ್ರ:— ಸುರಯ್ಯ, ಪಾತ್ರ

ANNOUNCEMEMT

## LAKSHMI THEATRE, MYSORE

We have the greatest pleasure in informing our patrons that we will be shortly exhibiting only outstanding English Pictures in our Theatre.

Please watch for the Commencing date.

N. B:-Revised Admission Rates:-

Ground Floor:- 0-5-0, 0-8-0 & 0-12-0

Balcony:- 0-15-6, Box 1-12-0 per seat.

New Management

# ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು

ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್, :: ೨೬೬೬, ಹಳ್ಳದಕೇರಿ, ಮೈಸೂರು

ನಾಟಕ ಶಿರೋಮಣಿ ಶ್ರೀಶ್ರೀಶ ಎ. ವಿ. ವರದಾಚಾರ್ಯರ ನಾಟಕವನ್ನು ಜ್ಞಾಪಕಕ್ಕೆ ತರುವ ಹಿಂದಿ ಚಿತ್ರ

# ಪ್ರಭುದೇವಾ ಟಾಕೀಸ್ 1-4-50ನೇ ಶನಿವಾರದಿಂದ

ದಿನವಹಿ 3 ಆಟಗಳು

ಸೊಹರಾಬ್ ಮೋದಿಯವರಿಂದ ತಯಾರಿಸಲ್ಪಟ್ಟ

# ನರಸಿಂಹ-ಅವತಾರ

ಪಾತ್ರ:- ಶೋಭನಾ ಸಮರ್ಥ್, ಲಕ್ಷ್ಮಣ್, ನಿರಂಜನ ಶರ್ಮ, ಮಹೀಪಾಲ್ ಮುಂತಾದವರು

[ವೆಸ್ಟರ್ನ್ ಇಂಡಿಯಾ ಥಿಯೇಟರ್ಸ್, ರಿಲೀಸ್


Edited, printed and published by A. R. Nagarajan at Sadhvi Press, D. Subbiah Road, Mysore

ಫೋ{ ನಂ. 792 ವಂದೇ ಮಾತರಂ. ಬಿಡಿ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೮] ಶುಕ್ರವಾರ ೩೧-೩-೫೦ ಸಂಚಿಕೆ ೧೯೧

# ಸಾಂಬಶಿವಂರವರ ಮರಣ ದಂಡನೆ ರದ್ದು

## ಜಿಲ್ಲಾಬೋರ್ಡ್ ಸದಸ್ಯರಿಗೆ ಬಹಿಷ್ಕಾರ

### ಅಧ್ಯಕ್ಷರ ಮೇಲಿನ ಆರೋಪಣೆಯ ಪರಿಣಾಮ

ಮೈಸೂರು ೩೧

ಜಿಲ್ಲಾಬೋರ್ಡಿನ ಸಾಧಾರಣ ಸಭೆಯು ನೆನ್ನೆ ಬೆಳಿಗ್ಗೆ ಶ್ರೀ ಎಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು. ಕಳೆದ ಸಭೆಯ ಮತ್ತು ಸ್ಥಾಯೀ ಸಮಿತಿಯ ನಡವಳಿಕೆಗಳನ್ನು ಸ್ಥಿರಪಡಿಸಿ ಮಾಡಲಾಯಿತು

ಅನಂತರ ಶ್ರೀ ಎಸ್.ಎಂ ಸಿದ್ದಯ್ಯನವರು ಮಾತನಾಡಿ ಜಿಲ್ಲಾಬೋರ್ಡು ಅಧ್ಯಕ್ಷರು ಬೋರ್ಡಿಗೆ ಸೇರಿದ ಮೋಟಾರನ್ನು ತನ್ನ ಖಾಸಗೀ ಕೆಲಸಗಳಿಗಾಗಿ ಉಪಯೋಗಿಸುತ್ತಿರುವರೆಂದು ಆಕ್ಷೇಪಿಸಿದರು. ಇದನ್ನು ಪ್ರತಿಭಟಿಸಿ ಹಲವು ಸದಸ್ಯರು ಮಾತನಾಡಿದರು. ಅನಂತರ ಶ್ರೀ ರಾಜಗೋಪಾಲ ಮೊದಲಿಯಾರರು ಒಂದು ನಿರ್ಣಯವನ್ನು ಮುಂದಿಸಿ ಸದರಿ ಆಪಾದನೆಯನ್ನು ಶ್ರೀ ಸಿದ್ದಯ್ಯನವರು [illegible] ವಾಪಸ್ ಪಡೆಯಬೇಕು. ಇಲ್ಲವೇ ಅವನ್ನು [illegible] ಸಿದ್ಧಪಡಿಸಬೇಕು ಎಂದರು. ಅಧ್ಯಕ್ಷರ ಸ್ವಮಾಪಣೆ [illegible] ಎಂದು ತಿಳಿಸಿದರು. ಶ್ರೀ ಸಿದ್ದಯ್ಯನವರ ಈ ನಿರ್ಣಯಕ್ಕೆ ಬದ್ಧರಾಗಲು ಒಪ್ಪದಿರಲು [illegible] ಎಂದು ಮತ್ತೊಂದು ನಿರ್ಣಯವನ್ನು [illegible] ಅಧ್ಯಕ್ಷರು [illegible] ಕೊಟ್ಟು ನೆನ್ನೆ ದಿನ ಮಧ್ಯಾಹ್ನದ ಸಭೆಯಲ್ಲಿ ಶ್ರೀ ಸಿದ್ದಯ್ಯನವರು ಭಾಗವಹಿಸಕೂಡದೆಂದು ತಿಳಿಸಿದರು

ನೆನ್ನೆ ಮಧ್ಯಾಹ್ನ ನಡೆದ ಸಭೆಯಲ್ಲಿ ಬೋರ್ಡಿಗೆ ಸಂಬಂಧಪಟ್ಟ ಇತರ ವ್ಯವಹಾರಗಳ ಬಗ್ಗೆ ಚರ್ಚೆ ನಡೆಯಿತು ಶ್ರೀ ಎಸ್. ಎಂ. ಸಿದ್ದಯ್ಯನವರು ಬಂದಿರಲಿಲ್ಲ.

## ಅಶೋಕ ಚಕ್ರ ಸಂಘ

ನೇಲ್ಕಂಡ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಘಂಟೆಗೆ ಪಿ ಸುಬ್ಬಯ್ಯ [illegible] ಸಾಧ್ವಿ ಕಛೇರಿಯ ಮಹಡಿ ಮೇಲೆ ಧರ್ಮ ಚಕ್ರದ ವಿಷಯ [illegible] ಕೆ. ಪಿ. ಪುಟ್ಟಣ್ಣಶೆಟ್ಟರವರು [illegible] ಮಾಡುವರು. ಸರ್ವರಿಗೂ ಸ್ವಾಗತವಿದೆ

## ವಾರ್ಷಿಕ ಸಮಾರಂಭ

ನಾಳೆ ಸಂಜೆ ೬-೩೦ ಘಂಟೆಗೆ ಶ್ರೀ [illegible] ಗುಡಿ ಬೀದಿಯಲ್ಲಿರುವ ದೇವಾಂಗ [illegible] ಸಂಘದ ವಾರ್ಷಿಕ ಸಮಾರಂಭ [illegible] ಸಭಾಧ್ಯಕ್ಷರಾದ ಶ್ರೀ ಎಸ್ [illegible] ರವರ ಅಧ್ಯಕ್ಷತೆಯಲ್ಲಿ ಜರುಗುವುದು.

## ಸಂಗೀತ ಕಛೇರಿ

[illegible] ರಸ್ತೆಯಲ್ಲಿರುವ [illegible] ನಾಳೆ ಸಂಜೆ [illegible] ಎಸ್. ಚೊಕ್ಕಣ್ಣ [illegible] ಪಿಟೀಲು ಮತ್ತು [illegible] ದವರ [illegible] ಗಳೊಡನೆ [illegible]

## [illegible] ಶಿಪಾಯಿಗಳ ವರ್ಗ

[illegible] ಸರ್ಕಾರದ ಆಡಿಟರ್ ಜನರಲ್ [illegible] ನರಹರಿರಾಯರು, ನಾಳೆಯ [illegible] ಬಾದ್, ತಿರುಚಾನೂರು [illegible] ಮೈಸೂರು [illegible] ನಗರ [illegible] ಗಳ [illegible]

## ಹೊಸ ಶಾಸನ ಸಭೆಗೆ ಸದಸ್ಯರ ಸಂಖ್ಯೆ

ಹೊಸ ಶಾಸನ ಸಭೆಯನ್ನು ರಚಿಸುವಾಗ ಪ್ರತಿ ಪ್ರಾಂತದಲ್ಲೂ [illegible] ಒಂದು ಲಕ್ಷ ಜನಂಗೆ ಒಬ್ಬರಂತೆ ಸದಸ್ಯರನ್ನು ಚುನಾಯಿಸುವ ಬಗ್ಗೆ ಭಾರತ ಸರ್ಕಾರದವರು ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ತರಲಿರುವರು. ನಮ್ಮ ಸಂಸ್ಥಾನದಲ್ಲಿ ೧೧೭ ಮಂದಿ ಸದಸ್ಯರುಳ್ಳ ಸಭೆಯು ರಚಿತವಾಗುವುದೆಂದು ತಿಳಿದು ಬಂದಿದೆ

## ಸರ್ಕಸ್ ಸಿಂಹಗಳೊಡನೆ ಕಾದು ಮಡಿದ ವೀರ

ಲಂಡನ್ನಿನಲ್ಲಿ ಅನೇಕ ವರ್ಷಗಳಿಂದಲೂ ನೆಲೆಸಿರುವ ಮದ್ರಾಸಿನ ಕ್ಯಾಪ್ಟನ್ ನಾರಾಯಣಸ್ವಾಮಿ ಎಂಬ ಸರ್ಕಸ್ ಮೃಗಗಳ ಶಿಕ್ಷಕರು, ಪ್ರದರ್ಶನ ನಡೆಯುತ್ತಿದ್ದಾಗ ಏಕಕಾಲದಲ್ಲಿ ಮೈಮೇಲೆ ಬಿದ್ದ ಒಂದು ಸಿಂಹ ಮತ್ತು ಎರಡು ಸಿವಂಗಿಗಳೊಡನೆ ಧೈರ್ಯದಿಂದ ಹೋರಾಡಿ, ಅವುಗಳಿಂದ ತೀವ್ರವಾಗಿ ಗಾಯಗೊಳಿಸಲ್ಪಟ್ಟರು. ಈ ಹೋರಾಟವನ್ನು ನೋಡುತ್ತಿದ್ದ ಮಹಿಳಾ ಪ್ರೇಕ್ಷಕರು ಅವರ ಸಾಹಸವನ್ನು ಕಂಡು ಬೊಬ್ಬೆಯಿಟ್ಟರು. ಅವನನ್ನು ಆಸ್ಪತ್ರೆಗೆ ಸೇರಿಸಲಾಗಿ ಅಲ್ಲಿ ಪ್ರಾಣ ಬಿಟ್ಟರು

## ಪಾಕಿಸ್ತಾನದ ನೌಕರರ ಮುಷ್ಕರ

ಪಾಕಿಸ್ತಾನ ಸರಕಾರದ ಸುಮಾರು ೮೦೦೦ ಮಂದಿ ನಾನ್ ಗೆಜೆಟೆಡ್ ನೌಕರರು ಕರಾಚಿಯಲ್ಲಿ ಕಳೆದ ೨೩ ನೇ ತಾರೀಖು ಮುಷ್ಕರ ಹೂಡಿ [illegible] ಜೀವನದ [illegible] ಪ್ರದರ್ಶನ ನಡೆಸಿದರು. ಅನೇಕ [illegible] ಬೇಡಿಕೆಗಳನ್ನು ಈಡೇರಿಸುವಂತೆ ನೌಕರರು [illegible] ಸರಕಾರದವರು [illegible] ಕಾರಣ ಈ ರೀತಿ ಪ್ರದರ್ಶನ [illegible]

## ಮಲಯಾಕ್ಕೆ ಸ್ವಪ್ರಭುತ್ವಾಧಿಕಾರ

[illegible] ಒಳಗೆ ಇರುವ [illegible] ಸ್ವಪ್ರಭುತ್ವಾಧಿಕಾರವನ್ನು [illegible] ಪ್ರಿಟಿಷ್ ಸರಕಾರದ [illegible]

## ಕಾಫಿಕಳ್ಳತನಕ್ಕಾಗಿ ಪೌರಸಭಾಸದಸ್ಯರಿಗೆ ಸಜಾ

ಬೆಂಗಳೂರಿನ ಭಾರಿ ಎಸ್ಟೇಟ್ ವರ್ತಕರೂ ಮತ್ತು ಕಾರ್ಪೊರೇಷನ್ ಸಭೆಯ ಸದಸ್ಯರೂ ಆದ ಶ್ರೀ ಎ ಸಂಪಂಗಿ ರಾಮಯ್ಯನವರು ಕುಟ್ರೋಲ್ [illegible] ಬಗ್ಗೆ ಎರಡು ಟನ್ [illegible] ಕಾಫಿಯನ್ನು [illegible] ತಮ್ಮ ಬಳಿ ಇಟ್ಟುಕೊಂಡಿದ್ದಕ್ಕಾಗಿಯೂ ಮತ್ತು [illegible] ಅವರಿಗೆ ಮೂರು ತಿಂಗಳ ಸಜಾ ಮತ್ತು ಒಟ್ಟು ೧೫೦೦ ರೂ. ಜುಲ್ಮಾನೆ ವಿಧಿಸಲಾಯಿತು. ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ. ಅವರು ಮೇಲಕ್ಕೆ ಅಪೀಲು ಮಾಡಲಿರುವರು

## ಹತ್ತಿ ಕಾರ್ಖಾನೆಗೆ ಬೆಂಕಿಬಿದ್ದು ೧೦ ಲಕ್ಷ ರೂ. ನಷ್ಟ

ಬರೋಡೆಯ ಬಳಿ ಇರುವ [illegible] ಎಂಬಲ್ಲಿರುವ ಹತ್ತಿ ಗಿರಣಿಯೊಂದಕ್ಕೆ ಬೆಂಕಿ ಬಿದ್ದುದರ ಪರಿಣಾಮವಾಗಿ ೧೦ ಲಕ್ಷ ರೂಗಳ ನಷ್ಟವಾಗಿದೆ. ಬೆಂಕಿಯನ್ನು ಹತೋಟಿಗೆ ತರಲು ೪೫ ಗಂಟೆಗಳು ಬೇಕಾದವು

## ದೇವದಾಸಿ ಪದ್ಧತಿ ವಜಾ

ದೇವಸ್ಥಾನಗಳಲ್ಲಿ ಸ್ತ್ರೀಯರನ್ನು ದೇವದಾಸಿಗಳನ್ನಾಗಿ ಅರ್ಪಿಸುವ ಪದ್ಧತಿಯನ್ನು ನಿಷೇಧಿಸಿ ಬೊಂಬಾಯಿ ಸರ್ಕಾರದವರು ಆಜ್ಞೆ ಮಾಡಿದ್ದಾರೆ

## ರಮಣ ಮಹರ್ಷಿಗಳ ಸ್ಥಿತಿ ಕಳವಳಕರ

ತಿರುವಣ್ಣಾಮಲೆಯಲ್ಲಿರುವ ಶ್ರೀ ರಮಣ ಮಹರ್ಷಿ [illegible]

[illegible] ಇರುವುದು

[illegible]

## ಮರಣ ದಂಡನೆ ರದ್ದು

ಮಲಯದಲ್ಲಿ ಶ್ರೀ ಸಾಂಬಶಿವಂ ಎಂಬ ಭಾರತೀಯ ನಾಯಕರು ಕಳೆದ ವರ್ಷ ತಿಂಗಳಲ್ಲಿ ರಿವಾಲ್ವರನ್ನು ಹೊಂದಿದ್ದರೆಂಬ ಆಪಾದನೆಗಾಗಿ ಮರಣ ದಂಡನೆಗೆ ಗುರಿ ಮಾಡಲ್ಪಟ್ಟಿದ್ದರು. ಈ ಶಿಕ್ಷೆಯ ಮೇಲೆ ಅವರು ಇಂಗ್ಲೆಂಡಿನ ಪ್ರೀವಿಕೌನ್ಸಿಲ್ಲಿನಲ್ಲಿ ಅಪೀಲು ಅರ್ಜಿ ಸಲ್ಲಿಸಿದ್ದರು. ಅಲ್ಲಿ ಅರ್ಜಿಯನ್ನು ಅಂಗೀಕರಿಸಿ ಶಿಕ್ಷೆಯನ್ನು ರದ್ದು ಮಾಡಲಾಗಿದೆ

## ಊರಿನಲ್ಲಿ ಹುಟ್ಟುವ ಮಕ್ಕಳಲ್ಲಾ ಹೆಣ್ಣೇ

ಸ್ವಿಟ್ಜರ್ಲೆಂಡಿನ ಸೋದಿ ನಾರ್ ಎಂಬ ಹಳ್ಳಿಯಲ್ಲಿ ಕಳೆದ ೧೩ ವರ್ಷಗಳಿಂದಲೂ ಹುಟ್ಟುವ ಮಕ್ಕಳೆಲ್ಲವೂ ಬರಿ ಹೆಣ್ಣೇ ಆಗಿವೆ ಎಂದು ವರದಿಯಾಗಿದೆ. ಗಂಡು ಮಕ್ಕಳ ಜನನಕ್ಕೆ ಪ್ರಕೃತಿ ಮಾತೆಯು ಪ್ರತಿಬಂಧಕವನ್ನು ಹಾಕಿರುವಂತಿದೆ. ಈಗಲಾಗಲೆ ಗರ್ಭಿಣಿಯರಾಗಿರುವ ೯ ಹೆಣ್ಣು ಮಕ್ಕಳ ತಾಯಿಯೊಬ್ಬಳು ಹೆರಲಿರುವ ಮಗುವಿನ ಬಗ್ಗೆ ಊರಿನವರೆಲ್ಲಾ ಭಾರಿ ಬಾಜಿಯನ್ನು ಕಟ್ಟುತ್ತಿದ್ದಾರೆ. ಗಂಡು ಮಗುವು ಹುಟ್ಟಿದರೆ ದೊಡ್ಡ ಉತ್ಸವವನ್ನೂ ಬಾಣ ಬಿರುಸುಗಳನ್ನೂ ಏರ್ಪಡಿಸುವುದಾಗಿ ಊರಿನ ಪ್ರಮುಖರು ಹೇಳಿದ್ದಾರೆ

## ಸಕ್ಕರೆ ಆಮದಿನ ಮೇಲೆ ಹತೋಟಿ

ಸಕ್ಕರೆ ಮತ್ತು ಸಕ್ಕರೆ ಪದಾರ್ಥಗಳ ಆಮದಿನ ಬಗ್ಗೆ ವಿಧಿಸಲಾಗಿರುವ ಹತೋಟಿ ಆಜ್ಞೆಯನ್ನು ಮೀರಿ ಹಲವು ವರ್ತಕರು ಅವುಗಳನ್ನು ಆಮದು ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ. ಅನಧಿಕೃತವಾದ ಸಕ್ಕರೆ ಆಮದನ್ನು ಪ್ರತಿಬಂಧಿಸುವ ಸಲುವಾಗಿ ಅದನ್ನು ಆಹಾರ ಹತೋಟಿ ಆಜ್ಞೆಗೆ ಒಳಪಡಿಸಲಾಗಿದೆ. ಸಂಸ್ಥಾನದ ಆಹಾರ ಸರಬರಾಜು ಡೈರೆಕ್ಟರವರಿಂದ ರಹದಾರಿ ಪಡೆಯದೆ ಸಕ್ಕರೆ, ಬೆಲ್ಲ, ಖಂಡಸಕ್ಕರೆ ಮತ್ತು ಮೊಗದಂ ಸಕ್ಕರೆ ಮೊದಲಾದುವುಗಳನ್ನು ಆಮದು ಮಾಡಲಾಗದೆಂದು ತಿಳಿಸಲಾಗಿದೆ.

## ಬರ್ಮಾ ಕಮ್ಯೂನಿಸ್ಟರಿಂದ ಪ್ರತಿ ಸರ್ಕಾರ ಸ್ಥಾಪನೆ

ರಂಗೂನಿಗೆ ೧೬೦ ಮೈಲಿ ಉತ್ತರದಲ್ಲಿರುವ ಪ್ರೋಂ ನಗರದಲ್ಲಿ ಕಮ್ಯೂನಿಸ್ಟರು ಪ್ರತಿ ಸರ್ಕಾರವನ್ನು ಸ್ಥಾಪಿಸಿದ್ದಾರೆ. ಇದಕ್ಕೆ ಆ ಸಂಗಡದ ಕಾರ್ಯದರ್ಶಿ ಥಾಕಿನ್ ಥಾನ್ ಟುನ್ ರವರು ಅಧ್ಯಕ್ಷರಾಗಿರುವರು.

## ಹತ್ತಿ ಬೆಳೆಯುವ ರೈತರ ಸಭೆ

ರೈತರಿಗೆ ಉತ್ತಮವಾದ ಹತ್ತಿ ಬೆಳೆಯುವ ವಿಚಾರದಲ್ಲಿ ತಿಳುವಳಿಕೆ ಕೊಡುವ ಬಗ್ಗೆ ವ್ಯವಸಾಯದ ಇಲಾಖಾ ಡೈರೆಕ್ಟರವರು [illegible] ರವರ ಅಧ್ಯಕ್ಷತೆಯಲ್ಲಿ [illegible] ಮಧ್ಯಾಹ್ನ [illegible] ಹತ್ತಿ ಬೆಳೆಯುವ ರೈತರ ಸಭೆಯನ್ನು ಏರ್ಪಡಿಸಿದ್ದಾರೆ.

## ಸಂಗೀತ ಕಛೇರಿ

[illegible] ಶ್ರೀ ಶಂಕರ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಈ ರಾತ್ರಿ [illegible] ನಾರಾಯಣಾಚಾರ್ ಸಂಗೀತವು [illegible] ನಡೆಯುವುದು

## ಗಲ್ಲಿಗೆ ಹಾಕಿದ ಹಿಂದಿನ ದಿನ ಖೂನಿಯ [illegible]

ಬ್ರಿಟಿಷ್ ಜನಾಂಗ [illegible] ಗಿದ್ದ ಸಮುದ್ರ [illegible] ಜರ್ ಕೆಲ್ಲಿಯುವೆಂತೆ ಗಲ್ಲಿಗೇರ [illegible] ನು ಅದರ ಹಿಂದಿನ ದಿನ ಜೈಲಿನಲ್ಲಿ [illegible] ದ ತರುಣ ಕಾರ್ ಡಟ್ಸ್ ಎ ಬಾಕೆಗೂ ಜೈಲಿನಲ್ಲಿ ಮನಕರಗುವ ರೀತಿಯಲ್ಲಿ ವಿವಾಹದ ನಿಶ್ಚಿತಾರ್ಥವು ನಡೆಯಿತು. ಆಕೆಯು ಮುತ್ತಿಟ್ಟ ಯುವಕನನ್ನು ವಿವಾಹವಾಗುವುದಿಲ್ಲವೆಂದು ಶಪಥ ಮಾಡಿದಳು. ಕೆಲ್ಲಿಯ ವಿಚಾರಣೆ ಕಾಲದಲ್ಲಿ [illegible] ಹಿಡಿದ ವಿವಾಹದ ಉಂಗುರವನ್ನು ಕೆಲ್ಲಿಯು ಮರಣದ್ವಾರದಲ್ಲಿ [illegible] ಧರಿಸಿದಳು.

## ಎಕ್ಸ್‌ಪ್ರೆಸ್ ಕಾಗದಗಳ ಹಂಚಿಕೆ

ಭಾನುವಾರಗಳಲ್ಲಿ ಹಾಕಲಾಗುವ ಎಕ್ಸ್‌ಪ್ರೆಸ್ ಕಾಗದಗಳನ್ನು ತಂತಿ ಇಲಾಖೆಯವರು ತಂತಿಗಳನ್ನು ಹಂಚುವ [illegible] ಹಂಚುವರು. ಆರ್. ಎಂ. ಎಸ್. ನವರಿಂದ ನೇರವಾಗಿ ತಂತಿ ಕಛೇರಿಗಳವರು ಎಕ್ಸ್‌ಪ್ರೆಸ್ ಕಾಗದಗಳನ್ನು ತರಿಸಿ ತಮ್ಮ [illegible] ಹಂಚುವರು.

ಮೈಸೂರು ಸಿಟಿ [illegible]

### ಪ್ರಕಟಣೆ

ನಂ R 6 66 48 50

[illegible]

ಇದರಿಂದ ಮೈಸೂರು ಸಿಟಿ [illegible] ಜನರಿಗೂ [illegible] ತಿಳಿಸುವುದೇನೆಂದರೆ ... [illegible] ರುವ ಎಲ್ಲಾ [illegible] ಮತ್ತು [illegible] ಮೈಸೂರು [illegible] ಪ್ರಕಾರ [illegible] ಮುಟ್ಟಿಸಲ್ಪಡುತ್ತವೆ.

ಪ್ರತಿ ಗುರುವಾರ ಎಲ್ಲಾ ವಿಷಯಗಳೂ [illegible]

(ಸಹಿ) ಡಿ. ಜೆ. ಬಾಲರಾಜ್,
[illegible] ಆಫೀಸರ್, ಮೈಸೂರು ಸಿಟಿ.

## ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ

ಮೈಸೂರು ಸಿಟಿಯಲ್ಲಿ ವಾಸವಾಗಿರುವ ಸಮಸ್ತ ಜನಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮುಂದೆ ನಡೆಯಲಿರುವ [illegible] ಬಗ್ಗೆ [illegible] ಈ ಪಟ್ಟಿಯನ್ನು [illegible] ತಕ್ಕ ಬಗ್ಗೆ ಮುನಿಸಿಪಲ್ [illegible]

(ರುಜು) [illegible]
[illegible]

## ಚಾಮರಾಜಪೇಟೆಯಲ್ಲಿ ಪೆಸ್ಸಿಲಿನ್ ಕಾರ್ಖಾನೆಯ ಸ್ಥಾಪನೆ

[illegible] ಪೆಸ್ಸಿಲಿನ್ ಮತ್ತು [illegible] ಭಾರತ ಸರ್ಕಾರ [illegible] ನಿರ್ಮಿಸುವ ಕೆಲಸವು ಶೀಘ್ರದಲ್ಲೇ ಆರಂಭವಾಗುವುದೆಂದು ಹೇಳಲಾಗಿದೆ

### ರಹದಾರಿ ಇಲ್ಲದೆ ಸಕ್ಕರೆ ಸಾಗಿಸುತ್ತಿದ್ದುದಕ್ಕಾಗಿ ದಂಡ

ಈ ತಿಂಗಳು ೨೦ನೇ ತಾ [illegible] ಗಾಡಿ [illegible] ರಹದಾರಿ ಇಲ್ಲದೆ [illegible] ಸಕ್ಕರೆಯನ್ನು ಸಾಗಿಸುತ್ತಿದ್ದುದಕ್ಕಾಗಿ ಚಾಮರಾಜ ನಗರದ [illegible] ೫೦ ರೂ. ಜುಲ್ಮಾನೆ ತಪ್ಪಿದರೆ [illegible] ದಿನ ಸಾದಾ ಸಜವನ್ನು ವಿಧಿಸಲಾಗಿದೆ

[illegible] ನೇ ತಾರೀಖು [illegible] ಪತ್ತೆ ಹಚ್ಚಿ [illegible]

## ಭಾನುವಾರಗಳಲ್ಲಿ ಅಂಚೆ ವ್ಯವಸ್ಥೆ

ಒಗುವ ತಿಂಗಳು ೭ ನೇ ತಾರೀಖಿನಿಂದ ಎಲ್ಲಾ ಅಂಚೆ ಕಛೇರಿಗಳನ್ನೂ ಭಾನುವಾರಗಳಲ್ಲಿ ಮುಚ್ಚಲಾಗುವುದು ಆ ದಿನಗಳಲ್ಲಿ ಅಂಚೆಗಳನ್ನು ತೆಗೆದುಕೊಳ್ಳುವುದಾಗಲಿ, [illegible] ಅಥವಾ ಕೊಡುವುದಾಗಲಿ ಇಲ್ಲ ವರ್ತಮಾನ ಪತ್ರಿಕೆಗಳ ಭಾನುವಾರದ ಸಂಚಿಕೆಗಳನ್ನು ಆರ್. ಎಂ ಎಸ್ ಕಛೇರಿಗಳಲ್ಲಿ ಹಾಕಬಹುದು. ಸಾರ್ವಜನಿಕರು ತಮ್ಮ ಕಾಗದಗಳಿಗೆ [illegible] ಸ್ಟಾಂಪುಗಳನ್ನು ಅಂಟಿಸಿ, [illegible] ಆರ್ ಎಂ ಎಸ್. ಮತ್ತು ತಂತಿ ಕಛೇರಿಗಳಲ್ಲೂ ಹಾಕಬಹುದು.

## ಚಂದಾದಾರರಲ್ಲಿ ವಿನಂತಿ

ದಯಮಾಡಿ ತಡಮಾಡದೆ ಚಂದಾ ಹಣ ಕೊಟ್ಟು ಸಹಕರಿಸಬೇಕೆಂದು [illegible] ಮಾನ್ಯ ಚಂದಾದಾರರು ಗಮನಿಸಬೇಕಾಗಿ ವಿನಂತಿ

ನ್ಯೂಸ್ ಪೇಪರ್ ಹೌಸ್,
[illegible], ಮೈಸೂರು
ಸಾಧ್ವಿ ಏಜೆಂಟರು


# ಪ್ರಭುದೇವಾ ಟಾಕೀಸ್

ದಿನವಹಿ 3 ಆಟಗಳು

1-4-50 ನೇ ದಿವಸದಿಂದ

[illegible] ತಯಾರಿಸಲ್ಪಟ್ಟ

# ನರಸಿಂಹ ಅವತಾರ

ಪಾತ್ರ [illegible], ಲಕ್ಷ್ಮಣ್, ನಿರಂಜನ ಶರ್ಮ, ಮಹೀಪಾಲ್ ಮುಂತಾದವರು

# ಪ್ರಭಾ * 31-3-50 ರಿಂದ

ದಿನವಹಿ 3 ಆಟಗಳು

ರಂಗವೆ ಪಿಕ್ಚರ್ಸರ ಹಿಂದಿ ಚಿತ್ರ

# ಭೂಕ್ - BHOOKH

ಶೇಕ್ ಮುಖ್ತಾರ್, ಕನ್ಹಯಾಲಾಲ್

[illegible] 31-3-50 ರಿಂದ
4 ದಿನಗಳು ಮಾತ್ರ

# [illegible]

# [illegible] ಟಾಕೀಸ್

31-3-50 [illegible] ದಿನವಹಿ 3 ಆಟಗಳು
[illegible] ಹಿಂದಿ ಚಿತ್ರ
[illegible] ನಟಿಸಿರುವ

# - [illegible] -

[illegible] 31-3-50 ರಿಂದ 3 ದಿನ [illegible]


## ರಷ್ಯದ ಬಗ್ಗೆ ತ್ರಿರಾಷ್ಟ್ರಗಳ ಸಮಾಲೋಚನೆ

ರಷ್ಯದೊಡನೆ ಇಟ್ಟುಕೊಳ್ಳುವ ಸಂಬಂಧದ ಬಗ್ಗೆ ಬ್ರಿಟನ್ ಅಮೇರಿಕಾ ಮತ್ತು ಫ್ರಾನ್ಸುಗಳ ವಿದೇಶಾಂಗ ಮಂತ್ರಿಗಳು [illegible] ರುವ ಮೇ ತಿಂಗಳಲ್ಲಿ ಲಂಡನ್ನಿನಲ್ಲಿ ಸಮಾಲೋಚನೆ ನಡೆಸುವರು: ಜರ್ಮನಿಯು, ಮತ್ತು ಆಗ್ನೇಯ ಏಷ್ಯಾದ ಸಂಬಂಧವಾದ ಪ್ರಶ್ನೆಗಳೂ ಚರ್ಚೆಯಾಗುವುವು.


# ರೀಬಿಲ್ಟ್ ಟೈರುಗಳು

ಶ್ರೇಷ್ಠತೆಗೂ ಮತ್ತು ಬಾಳಿಕೆಗೂ ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿವೆ ವಿವರಗಳಿಗೆ ಇಂದೇ ಬರೆಯಿರಿ

## ಮೈಸೂರು ಟೈರ್ಸ್

1471, ಸಯ್ಯಾಜಿರಾವ್ ರಸ್ತೆ,
ಮೈಸೂರು.


## ಗೃಹಕೃತ್ಯದ ನೋಟೀಸು

ಚಾಮರಾಜನಗರದಲ್ಲಿರುವ [illegible] ಚೆಟ್ಟಿಪ್ಪನವರಿಗೂ ಮತ್ತು ಸಂಬಂಧಪಟ್ಟ ಇತರ ಸಮಸ್ತರಿಗೂ ಸಹ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ [illegible] ಚೆಟ್ಟಿಪ್ಪನವರು ನಂಜನಗೂಡು ಅಡ್ವೋಕೇಟ್ ಶ್ರೀ [illegible] ಮೂಲಕವಾಗಿ [illegible] ನೇ ತಾರೀಖಿನ ಸಾಧ್ವಿ ಪತ್ರಿಕೆಯಲ್ಲಿ ಪ್ರಕಟಿಸಿದ ನೋಟೀಸಿನ ಅಂಶಗಳು ಪ್ರತಿಯೊಂದೂ [illegible] ಸುಬ್ಬಾಚೆಟ್ಟಿಪ್ಪನವರ [illegible] ರಾಮಾಚೆಟ್ಟಿಪ್ಪನೆಂಬುವರಿಗೆ [illegible] ಆಸ್ತಿಗಳಲ್ಲಿ ಯಾವ ರೀತಿಯಾದ ಹಕ್ಕು ಇರಲಿಲ್ಲ. ಸದರಿ ಸುಬ್ಬಾಚೆಟ್ಟಿಪ್ಪನವರು ತಮ್ಮ ಸ್ವಂತ ಸಂಪಾದನೆಯಾದ ಸ್ಥಿರ ಮತ್ತು ಚರ ಆಸ್ತಿಗಳನ್ನು ಚಾಮರಾಜನಗರದ ವಾಸ್ತವ್ಯದಲ್ಲಿರುವ ಸುಬ್ಬರಾಯ ಚೆಟ್ಟಿಪ್ಪನವರ ಮಕ್ಕಳು ಎಸ್ ಕೃಷ್ಣಾಚೆಟ್ಟಿಪ್ಪನವರಿಗೆ [illegible] ನೇ ಮಾರ್ಚಿ [illegible] ವಿಲ್ಲು ಬರೆದು ಕೊಟ್ಟಿರುವುದರ ಮೂಲಕ [illegible] ಕೊಟ್ಟಿರುತ್ತಾರೆ [illegible] ರುವ ಅಂಶಗಳು [illegible] ಚೆಟ್ಟಿಪ್ಪನವರು [illegible] ಪ್ತಾಚೆಟ್ಟಿಪ್ಪನವರಿಗೆ ಬರೆದು [illegible] ಕೋರ್ಟಿನಲ್ಲಿ [illegible] ಚೆಟ್ಟಿಪ್ಪನವರ [illegible] ನೋಟೀಸಿಗೆ [illegible] ಗಮನ [illegible] ತಿಳಿಸಿರುತ್ತೆ

ಕೆ. ಗೋವಿಂದರಾಜು,
ಎಸ್ ಕೃಷ್ಣಾಚೆಟ್ಟಿಪ್ಪನವರ ಪರವಾಗಿ,
ನಂಜನಗೂಡು, [illegible]

Edited, printed and published by A R Nagarajan at Sadhvi Press, D. Subbiah Road, Mysore.

ರೇ॥ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

# ಸಾಧ್ವಿ

ಸಂಪುಟ ೮] ಶನಿವಾರ ೧-೪-೫೦ ಸಂಚಿಕೆ ೨೦೮

# ಈ ದಿನದಿಂದ ಎಲ್ಲ ಭಾರತ ಸೈನ್ಯಗಳ ಐಕ್ಯ

## ಪಾ॥ ದಿಂದ ಲಾಯಕಾಲಿ ವಾಪಸಿಗಾಗಿ ಪ್ರಯತ್ನ

ಹೈದರಾಬಾದಿನಿಂದ ಪಾಕಿಸ್ತಾನಕ್ಕೆ ತೆರಳಿರುವ ಮೀರ್ ಲಾಯಕಾಲಿಯವರನ್ನು ಹೈದರಾಬಾದು ಸರ್ಕಾರಕ್ಕೆ ಒಪ್ಪಿಸುವ ಸಂಬಂಧವಾಗಿ ಪಾಕಿಸ್ತಾನವನ್ನು ಕೇಳುವ ಬಗ್ಗೆ ಭಾರತ ಸರ್ಕಾರದವರು ಪರ್ಯಾಲೋಚಿಸುತ್ತಿರುವುದಾಗಿ ಸರ್ದಾರ್ ಪಟೇಲರು ನೆನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದರು

## ಕಾಳಸಂತೆಗಾಗಿ ೨೨೦೦೦ ಜನರ ವಿಚಾರಣೆ

ಕಳೆದ ವರ್ಷ ಎಪ್ರಿಲ್ ತಿಂಗಳಿಂದ ಈ ...ಾಂಕ್ಷದವರೆಗೂ ಸಂಯುಕ್ತ ಪ್ರಾಂತ್ಯದಲ್ಲಿ ಕಾಳಸಂತೆ ಮತ್ತು ಸಾಮಾನುಗಳ ...ನದ ಸಾಗಾಣಿಕೆಗಾಗಿ ೨೨,೭೨೫ ಜನರನ್ನು ವಿಚಾರಣೆಗೆ ಒಳಪಡಿಸಲಾಗಿದೆ ...ರಿಂದ ೧೩॥ ಲಕ್ಷ ರೂ.ಗಳ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ.

## ಲಿಯಾನ್ ಬ್ಲೂಂರವರ ನಿಧನ

ಫ್ರಾನ್ಸಿನ ಪ್ರಮುಖ ರಾಜಕಾರಣಿ ಲಿಯಾನ್ ಬ್ಲೂಂರವರು ಮೊನ್ನೆ ದಿನ ... ನಲ್ಲಿ ನಿಧನರಾದರೆಂದು ವರದಿ ಬಂದಿದೆ.

## ಹಾಲಿಗೆ ನೀರು ಬೆರೆಸಿದುದಕ್ಕೆ ದಂಡ

...ನೂರು ತಾಲ್ಲೂಕು ದ್ಯಾಪಲಾಪುರದ ...ನೆಂಬ ಬಾಲಕನು ಹಾಲಿಗೆ ನೀರು ಬೆರೆಸಿ ಮಾರುತ್ತಿದ್ದನೆಂದು ಮೈಸೂರು ಸಿಟಿ ಮುನಿಸಿಪಾಲಿಟಿಯವರು ಹೂಡಿದ್ದ ಮೊಕದ್ದಮೆಯಲ್ಲಿ ೧ನೇ ಸಿಟಿ ಮ್ಯಾಜಿಸ್ಟ್ರೇಟರು ...ದಿಗೆ ೧೫ ರೂ ಜುಲ್ಮಾನೆ ತಪ್ಪಿದರೆ ...ರ ಸಾದಾ ಸಜಾವನ್ನು ವಿಧಿಸಿರುತ್ತಾರೆ

## ಪುರಿ ಮಾರಿದುದಕ್ಕೆ ಶಿಕ್ಷೆ

ಹಿಂದೆ ೬-೧೨-೪೯ರಲ್ಲಿ ವೆಂಕಟಮ್ಮ, ಫೈರೋಜಮ್ಮ, ಅಬ್ದುಲ್ ರಹೀಂ, ಅಬ್ದುಲ್ ಮಹಮದ್ ಅನ್ವರ್ ಎಂಬುವರುಗಳು ೪ ಪಲ್ಲ ಪುರಿಯನ್ನು ...ಮಾರ್ಕೆಟ್ ನವಾಬಪೇಟೆಯಲ್ಲಿ ಮಾರುತ್ತಿದ್ದರೆಂದು ಆಹಾರ ತನಿಖೆ ಅಧಿಕಾರಿಗಳು ಹೂಡಿದ್ದ ಮೊಕದ್ದಮೆ ವಿಚಾರಣೆಯಾಗಿ ನೆನ್ನೆ ದಿವಸ ಮೊದಲನೇ ಮೂವರು ಅಪರಾಧಿಗಳಿಗೆ ತಲಾ ೫ ರೂ ಜುಲ್ಮಾನೆ ಉಳಿದವರಿಗೆ ತಲಾ ೧೦ರೂ. ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಸಜಾ ವಿಧಿಸಲಾಗಿದೆ.

## ಹರಿಕಥೆ-ಸಂಗೀತ

...ಜಪೇಟೆಯ ಕೋಟೆ ...ಮಯ್ಯನ ... ಶ್ರೀ ಕಲ್ಯಾಣ ... ನಾಳೆ ಸಾಯಂಕಾಲ ೬-೩೦ಕ್ಕೆ ... ನಾರಾಯಣ ದಾಸ ... ಪ್ರಹ್ಲಾದ ಎಂಬ ಹರಿಕಥೆ ... ನಡೆಯುವುದು

...ರಾಜ ಮೊಹಲ್ಲಾ ಅನೆಕಾರೋ... ಭವನ ವೆಂಕಟರಮಣ ದೇವಸ್ಥಾನದಲ್ಲಿ ಈ ರಾತ್ರಿ ... ಶ್ರೀ ಎಸ್. ಕೆ ಭಾಗವತರ ... ಎಂಬ ಹರಿಕಥೆಯು ನಡೆಯುವುದು

...ಉಗ್ರಹಾರದ ಜಾನಕೀ ರಾಮ ಮಂದಿರದಲ್ಲಿ ಈ ದಿನ ರಾತ್ರಿ ೮-೩೦ ಘಂಟೆಗೆ ... ಪುಟ್ಟಸ್ವಾಮಯ್ಯನವರ ಗಾಯನ ... ಪಕ್ಕವಾದ್ಯದೊಡನೆ ನಡೆಯುವುದು

## ಪುಟ್ಟರಾಜೆ ಅರಸರು ರಜಾ ಮೇಲಿದ್ದಂತೆ ಭಾವಿಸಬೇಕು

### ಸರಕಾರಕ್ಕೆ ಸಂಸ್ಥಾನ ಇಲಾಖೆಯ ಸೂಚನೆ

ಬೆಂಗಳೂರು ೩೧

ಶ್ರೀ ಆರ್ ಪುಟ್ಟರಾಜೆ ಅರಸಿನವರ ನಿವೃತ್ತಿ ಪ್ರಕರಣದ ತನಿಖೆಯಾಗುವವರೆಗೂ, ಅವರನ್ನು ರಜಾಮೇಲೆ ಇದ್ದಂತೆ ಭಾವಿಸಿ, ಸಂಬಳವನ್ನು ಪಡೆಯಲು ಅವಕಾಶವಿರಬೇಕೆಂದು ಕೇಂದ್ರ ಸರಕಾರದ ಸಂಸ್ಥಾನ ಇಲಾಖೆಯು ಮೈಸೂರು ಸರಕಾರಕ್ಕೆ ಸೂಚಿಸಿರುವುದಾಗಿ ತಿಳಿದು ಬಂದಿದೆ ಭಾರತದ ಚೀಫ್ ಜಸ್ಟಿಸರಾದ ಹೀರಾಲಾಲ್ ಕಾನಿಯಾರವರು ಈ ತಿಂಗಳು ಬೆಂಗಳೂರಿಗೆ ಬಂದು ೨೦ನೇ ತಾರೀಖಿನೊಳಗಾಗಿ ವಿಚಾರಣೆ ನಡೆಸುವರೆಂದು ಹೇಳಲಾಗಿದೆ ಶ್ರೀ ಪುಟ್ಟರಾಜೆ ಅರಸಿನವರು ದೆಹಲಿಯಿಂದ ನೆನ್ನೆ ಇಲ್ಲಿಗೆ ವಾಪಸು ಬಂದರು

## ಸಂಸ್ಥಾನದ ರೈಲ್ವೆ ನೌಕರರಿಗೆ ಕೇಂದ್ರ ಸಂಬಳದ ದರ್ಜೆ

ಸಂಸ್ಥಾನದ ರೈಲ್ವೆಯು ಕೇಂದ್ರದ ವ್ಯವಸ್ಥೆಯೊಳಗೆ ಈ ದಿನದಿಂದ ಐಕ್ಯವಾಯಿತು ಸಂಸ್ಥಾನದ ರೈಲ್ವೆನೌಕರರಿಗೆ ಕೇಂದ್ರದ ಸಂಬಳ ಸ್ಕೇಲುಗಳನ್ನು ಕೊಡಲು ಭಾರತ ಸರ್ಕಾರದವರು ನಿರ್ಧರಿಸಿದ್ದಾರೆ ಧಾನ್ಯಗಳ ರಿಯಾಯಿತಿ ಭತ್ಯಗಳನ್ನು ಕೆಲವು ಕಡೆಗಳಲ್ಲಿ ಇನ್ನು ಮೇಲೆ ಅವುಗಳ ಬದಲು ಪೂರ್ತಿಯಾಗಿ ಹಣರೂಪದಲ್ಲಿ ಕಟ್ಟಿ ಭತ್ಯವನ್ನು ಕೊಡಲಾಗುವುದು ವಿವರಗಳನ್ನು ಪರಿಶೀಲಿಸಿ ವರದಿ ಮಾಡುವ ಬಗ್ಗೆ ಒಂದು ಸಮಿತಿಯನ್ನು ಏರ್ಪಡಿಸಲಾಗುವುದು ಈಗಿರುವ ದರ್ಜೆಗಳಿಗೆ ರಕ್ಷಣೆ ಕೊಡುವುದಾಗಿ ಭಾರತ ಸರ್ಕಾರದವರು ಭರವಸೆಯಿತ್ತಿರುವರು

## ವ್ಯವಸಾಯ ಕಾಲೇಜಿನ ಪ್ರಿನ್ಸಿಪಾಲರು

ಸಂಸ್ಥಾನದ ವ್ಯವಸಾಯ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಬಿ ಹೆಚ್ ರಾಮರೆಡ್ಡಿಯವರಿಗೆ, ನಿವೃತ್ತಿಯಾಗುವ ಪೂರ್ವ ಈ ದಿನದಿಂದ ೩ ತಿಂಗಳ ರಜಾ ಕೊಡಲಾಗಿದೆ ಅವರ ಕೆಲಸವನ್ನು ವ್ಯವಸಾಯ ಇಲಾಖೆಯ ಡೈರೆಕ್ಟರಾದ ಶ್ರೀ ಜೆ ಹೆಚ್. ಶ್ರೀನಿವಾಸರವರು ನೋಡಿಕೊಳ್ಳುವರು.

## ಈ ದಿನದಿಂದ ಭಾರತ ಸೈನ್ಯಗಳ ಐಕ್ಯ

ದೇಶದ ಚರಿತ್ರೆಯಲ್ಲಿ ಇಲ್ಲದಂತಹ ಐಕ್ಯವು ಇಂದಿನಿಂದ ಭಾರತದ ಸೈನ್ಯ ಬಲಗಳಲ್ಲಿ ಏರ್ಪಡಾಗುವುದಾಗಿ ದೆಹಲಿ ವಾರ್ತೆ ತಿಳಿಸುತ್ತದೆ ಸಂಸ್ಥಾನಗಳ ಸೈನ್ಯಗಳ ರಣಶಾಸಿತ್ರ ಮತ್ತು ಇತರ ಎಲ್ಲ ಜವಾಬ್ದಾರಿಗಳನ್ನು ಭಾರತ ಸರ್ಕಾರದವರೇ ಹೊತ್ತುಕೊಳ್ಳುವರು ಈ ಸೈನ್ಯಗಳ ಪುನರ್ವ್ಯವಸ್ಥೆಯಾಗುತ್ತಿದೆ ಭಾರತ ಸೈನ್ಯದ ಇತರ ವರ್ಗಗಳಲ್ಲಿರುವಂತೆ ಸಂಸ್ಥಾನಗಳ ಸೈನ್ಯಗಳಿಗೂ, ಸಂಬಳ, ಭತ್ಯ, ವ್ಯವಸ್ಥೆ ಮುಂತಾದವು ಸಮನಾಗಿ ಏರ್ಪಡುವುವು. ಹೈದರಾಬಾದು, ಮೈಸೂರು ಮತ್ತು ತಿರುವಾಂಕೂರು-ಕೊಚ್ಚಿಗಳ ಸೈನ್ಯಗಳ ಪೂರ್ಣ ಪಡೆಯು ಭಾರತ ಸೈನ್ಯಕ್ಕೆ ಸೇರಿದೆ ಮತ್ತು ಈ ಸೈನ್ಯಗಳಿಗೆ ಭಾರತದ ಅಧಿಕಾರಿಗಳನ್ನು ನೇಮಿಸಲಾಗಿದೆ

## ತಂತಿ ದರ ಇಳಿಯಿತು

ನೆನ್ನೆ ಮಧ್ಯರಾತ್ರಿಯಿಂದ ಒಳನಾಡಿನ ತಂತಿ ದರವು ಸಾಮಾನ್ಯವಾದವುಗಳಿಗೆ ೧ ಆಣೆಯಂತೆಯೂ, ಎಕ್ಸ್‌ಪ್ರೆಸ್ ತಂತಿಗಳಿಗೆ ೨ ಆಣೆಯಂತೆಯೂ ಇಳಿಸಲ್ಪಟ್ಟಿತು. ವರ್ತಮಾನಪತ್ರಿಕೆಗಳ ತಂತಿಗಳದರವನ್ನು ಹನ್ನೆರಡು ಆಣೆಗೆ ೫೦ ಪದಗಳಂತೆ ಕಡಿಮೆ ಮಾಡಲಾಯಿತು. ಎಕ್ಸ್‌ಪ್ರೆಸ್ ತಂತಿಗಳಿಗೆ ೧॥ ರೂ ನಂತೆ ಕೊಡಬೇಕಾಗುವುದು

## ಬೊಂಬಾಯಿ ಪೌರಸಭಾ ಸದರಿಗೆ ೧೫೦ ರೂ. ಭತ್ಯ

ಬೊಂಬಾಯಿ ಕಾರ್ಪೊರೇಷನ್ನಿನ ಸದಸ್ಯರಿಗೆ ತಿಂಗಳಿಗೆ ೧೫೦ ರೂ.ಗಳ ಗೌರವ ಭತ್ಯವನ್ನು ಕೊಡುವ ಬಗ್ಗೆ ಆಸ್ಥಿನ ... ನವನ್ನು ತಿದ್ದುಪಡಿ ಮಾಡಲಾಗುವುದು. ಈ ಬಗ್ಗೆ ಕಾರ್ಪೊರೇಷನ್ ಸಭೆಯು ನಿರ್ಣಯವನ್ನು ಅಂಗೀಕರಿಸಿ, ಮೇಲ್ಕಂಡಂತೆ ಭತ್ಯವನ್ನು ಕೊಡುವಂತೆ ಶಿಫಾರಸು ಮಾಡಿದೆ

## ಜಿ. ಎಲ್. ನಾಗರಾಜರಾಯರು ಲಂಚ ನಿರೋಧದ ಡೈರಕ್ಟರೇ?

ಐ ಜಿ ಪಿ ಗಳಾದ ಶ್ರೀ ಜಿ. ಎಲ್. ನಾಗರಾಜರಾಯರನ್ನು ಸಂಸ್ಥಾನದ ಲಂಚ ನಿರೋಧದ ಡೈರೆಕ್ಟರನ್ನಾಗಿ ನೇಮಿಸಲಾಗುವುದೆಂದೂ, ಅವರ ಸ್ಥಾನಕ್ಕೆ ಬಂಗಾಳದ ಶ್ರೀ ಬ್ಯಾನರ್ಜಿ ಎಂಬುವವರನ್ನು ಕೇಂದ್ರ ಸರಕಾರವು ಕಳುಹಿಸುವುದೆಂದೂ ಹೇಳಲಾಗಿದೆ

## ಪೂರ್ವ ಬಂಗಾಳಕ್ಕೆ ಹೊಸ ಗೌರ್ನರ್

ಪಂಜಾಬಿನ ಮಲಿಕ್ ಫಿರೋಜ್‌ಖಾನ್ ನೂನ್‌ರನ್ನು ಪೂರ್ವ ಬಂಗಾಳದ ಗೌರ್ನರರನ್ನಾಗಿ ನೇಮಿಸಲಾಗಿದೆ ಅವರು ೫ನೇ ತಾರೀಖು ಅಧಿಕಾರ ವಹಿಸುವರು.

## ಅಮೆರಿಕದಲ್ಲಿ ಕಳೆದ ವರ್ಷ ೩೫ ಲಕ್ಷ ಶಿಶುಗಳ ಜನನ

ಕಳೆದ ವರ್ಷ ಅಮೇರಿಕದಲ್ಲಿ ೩೫ ಲಕ್ಷ ಶಿಶುಗಳು ಜನಿಸಿದುವೆಂದು ಹೇಳಲಾಗಿದೆ.

## ಷಣ್ಮುಗಂ ಚೆಟ್ಟಿರ ರಾಜೀನಾಮೆ

ಭಾರತದ ಪಾರ್ಲಿಮೆಂಟಿನ ಸದಸ್ಯತನಕ್ಕೆ ಶ್ರೀ ಷಣ್ಮುಗಂ ಚೆಟ್ಟಿಯವರು ರಾಜೀನಾಮೆ ಯಿತ್ತಿರುವರು ಅವರು ಕೆಲಕಾಲ ಭಾರತ ಸರ್ಕಾರದ ಸಚಿವರಾಗಿದ್ದರು

## ಇಡ್ಲಿ ಮಾರಿದುದಕ್ಕೆ ಕೋರ್ಟು ಏಳುವವರೆಗೆ ಸಜಾ

ಸೊಪ್ಪಿನ ಕೋದಂಡ ಬೀದಿಯಲ್ಲಿರುವ ಈರಣ್ಣನ ಮಗ ಮಹದೇವಪ್ಪನು ೩೦-೩-೫೦ರಲ್ಲಿ ತನ್ನ ಮನೆಯಲ್ಲಿ ಇಡ್ಲಿ ಮಾರುತ್ತಿದ್ದನೆಂದು ಕೃಷ್ಣರಾಜ ಪೊಲೀಸರು ೧ನೇ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದು ವಿಚಾರಣೆಯಾಗಿ ಅಪರಾಧಿಗೆ ಕೋರ್ಟು ಏಳುವವರೆಗೆ ಸಜಾ ಮತ್ತು ೫೦ರೂ ಜುಲ್ಮಾನೆ ತಪ್ಪಿದರೆ ೧ ತಿಂಗಳು ಸಾದಾ ಸಜಾ ವಿಧಿಸಲಾಗಿದೆ

## ಮಹಾವೀರ ಜಯಂತಿ

ನೆನ್ನೆ ಸಂಜೆ ೬-೩೦ಕ್ಕೆ ಟೌನ್‌ಹಾಲಿನಲ್ಲಿ ಶ್ರೀ ಮಹಾವೀರ ಜಯಂತಿಯು ಜೈನಸಮಾಜದ ಆಶ್ರಯದಲ್ಲಿ ನಡೆಯಿತು. ಜಿಲ್ಲಾಧಿಕಾರಿಗಳಾದ ಶ್ರೀ ಹೆಚ್. ಎಲ್. ಪಾಳೇಗಾರರು ಅಧ್ಯಕ್ಷತೆವಹಿಸಿದ್ದರು ಶ್ರೀ ಹೆಚ್. ಎಸ್ ರಾಘವೇಂದ್ರಾಚಾರ್ಯರು ಮತ್ತು ಹೆಚ್. ಕೆ ರಾಜರಾಯರೂ, ರಿಸಾಲ್ದಾರವರೂ ಮಹಾವೀರರ ಬಗ್ಗೆ ಭಾಷಣ ಮಾಡಿದರು ಇತರ ಪ್ರಾಂತಗಳಲ್ಲಿರುವಂತೆ ಮೈಸೂರಿನಲ್ಲಿಯೂ ಮಹಾವೀರರ ಜಯಂತಿ ದಿನದಲ್ಲಿ ರಜಾ ಕೊಡುವಂತೆ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಮಾಡಲಾಯಿತು.

## ಜಲತರಂಗ್ ವಾದನ

ಚಾಮುಂಡಿ ಬಡಾವಣೆಯಲ್ಲಿರುವ ಶ್ರೀ ಶಂಕರನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಈ ರಾತ್ರಿ ವಿ ಯು ಲಕ್ಷ್ಮೀ ನಾರಾಯಣಾಚಾರ್ಯರಿಂದ ಜಲತರಂಗ್ ವಾದನವು ನಡೆಯುವುದು.

## ಉಕ್ಕಿನ ತಯಾರಿಕೆಗಾಗಿ ಕೇಂದ್ರದಿಂದ ೨॥ ಕೋಟಿ ರೂ.

ಸಂಸ್ಥಾನದಲ್ಲಿ ಕಬ್ಬಿಣ ಮತ್ತು ಉಕ್ಕಿನ ತಯಾರಿಕೆಯನ್ನು ಹೆಚ್ಚಿಸಲು ಕೇಂದ್ರ ಸರಕಾರದವರು ೨॥ ಕೋಟಿ ರೂ ಗಳನ್ನು ಸಾಲವಾಗಿ ಕೊಡಲಿರುವರು.

## ಹಸ್ತ ಲಿಖಿತ ಪುಸ್ತಕ

ನಗರದ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಈ ಬೇಸಿಗೆಯ ರಜೆಯಲ್ಲಿ ಒಂದು ಹಸ್ತ ಲಿಖಿತ ಪುಸ್ತಕವನ್ನು ಪ್ರಕಟಿಸಲು ನಿರ್ಧರಿಸಿರುವುದರಿಂದ ಇದಕ್ಕೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಲೇಖನ, ಕವನ, ಕಥೆ, ನಾಟಕ ಮುಂತಾದುವನ್ನು ಬರೆದು ಕಳುಹಿಸಬೇಕೆಂದು ... ಕೇಳಲಾಗಿದೆ.

## ಕೈಸರನ ಮೊಮ್ಮಗನಿಗೆ ಕುರಿ ಸಾಕುವ ವೃತ್ತಿ

ಜರ್ಮನಿಯ ಮಾಜಿ ದೊರೆ ಕೈಸರರ ಮೊಮ್ಮಗ ರಾಜ ಕುಮಾರ ಫ್ರೆಡರಿಕ್ ರನು ದಕ್ಷಿಣ ಆಫ್ರಿಕ ದಲ್ಲಿ ಖಾಯಂ ಆಗಿ ನೆಲೆಸಲು ಹೋಗಿದ್ದಾರೆ. ಅವರು ಕುರಿ ಸಾಕುವ ವೃತ್ತಿಯಲ್ಲಿ ನಿರತರಾಗುವರು

## ಪ್ರಸಾರ ಕೇಂದ್ರಗಳ ವರ್ಗ

ಇಂದಿನಿಂದ ಮೈಸೂರು, ತಿರುವಾಂಕೂರು ಮತ್ತು ಹೈದರಾಬಾದುಗಳ ಪ್ರಸಾರ ಕೇಂದ್ರಗಳು ಭಾರತ ಸರ್ಕಾರದ ಆಡಳಿತಕ್ಕೆ ಸೇರುವುವು ಈ ಕೇಂದ್ರಗಳ ಪ್ರಸಾರಣ ಯಂತ್ರಗಳನ್ನು ಉತ್ತಮಪಡಿಸಲಾಗುವುದೆಂದು ತಿಳಿಸಲಾಗಿದೆ

## ನಿರಾಶ್ರಿತರಿಗಾಗಿ ಜಪಾನ್ ಯಂತ್ರಗಳು

ನಿರಾಶ್ರಿತರಾಗಿ ಬಂದಿರುವ ಜನರಿಗೆ ಉದ್ಯೋಗವನ್ನೊದಗಿಸಲು ಭಾರತ ಸರಕಾರದವರು ಜಪಾನಿನ ಸಣ್ಣ ಕೈಗಾರಿಕೆಗಳ ಯಂತ್ರಗಳನ್ನು ತರಿಸುತ್ತಾರೆ


ಗಾಯತ್ರೀ ಟಾಕೀಸ್

ದಿನವಹಿ 3 ಪ್ರದರ್ಶನಗಳು

2-4-50 ರಿಂದ 2 ದಿನಗಳು ಮಾತ್ರ

ಭಯಂಕರ ಮತ್ತು ಸಾಹಸ ಕಾರ್ಯಗಳ ನ್ನೊಳಗೊಂಡ ಚಿತ್ರ

ದಿ ಪ್ರಿಸನರ್ ಆಫ್ ದಿ ಷಾರ್ಕ್ ಐಲೆಂಡ್

The Prisoner of the Shark Iland

ಪಾತ್ರ:- ವಾರ್ನರ್ ಬ್ಯಾಕ್ಸ್ಟರ್, ಗ್ಲೋರಿಯಾ ಸ್ಟುವರ್ಟ್

ಮುಂದಿನ ಆಕರ್ಷಣೆ:-

ಸ್ಟೇಟ್ ಫೇರ್ ಆಫ್ ಥೌಸಂಡ್ ಐಸ್

ಬೆಳಗಿನ ಪ್ರದರ್ಶನಗಳು

ಇಂದು ಮತ್ತು ನಾಳೆ

20th ಫಾಕ್ಸ್ ರವರ

ಕಾರ್ಡಿನಲ್ ರಿಚೆಲ್ಯೂ



ರಾಜಕಮಲ್ ಟಾಕೀಸ್

1—4—50

ಅನೋಘ 100 ನೆಯ ದಿನ

ದಿನವಹಿ 3 ಪ್ರದರ್ಶನಗಳು

ಜೀವನ

(ತಮಿಳು)

ವೈಜಯಂತಿಮಾಲಾ ... ರಾಮ ...

ಬೆಳಗಿನ ಪ್ರದರ್ಶನಗಳು

31—3—50 ... ದಿನಗಳು ಮಾತ್ರ,

ಗಜೇಂದ್ರಗರಂ

(ತಮಿಳು)


## ಬೊಂಬಾಯಿ ಪ್ರಾಂತ್ಯದಲ್ಲಿ ಪಾನ ನಿರೋಧ

ಬೊಂಬಾಯಿ ಪ್ರಾಂತ್ಯದಲ್ಲಿ ನೆನ್ನೆ ದಿನ ಮಧ್ಯ ರಾತ್ರಿಯಿಂದ ಪೂರ್ಣ ಪಾನ ನಿರೋಧವು ಜಾರಿಗೆ ಬಂದಿತು. ಇದನ್ನು ಕಾರ್ಯಗತ ಮಾಡಲು ಬಹಳ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ಪಾನನಿರೋಧದ ಬಗ್ಗೆ ಪ್ರಚಾರ ನಡೆಸುವ ಸಲುವಾಗಿ ಒಂದು ವಸ್ತು ಪ್ರದರ್ಶನವನ್ನೇರ್ಪಡಿಸಲಾಗಿದೆ. ಸಿನಿಮಾಗಳಲ್ಲಿ ಸ್ಲೈಡುಗಳ ಮೂಲಕವೂ ಮತ್ತು ಟ್ರಾಂ ಟಿಕೆಟ್ಟುಗಳ ಮೇಲೂ ಈ ಬಗ್ಗೆ ಪ್ರಚಾರ ಘೋಷಣೆಗಳನ್ನು ಪ್ರಕಟಿಸಲಾಗುತ್ತಿದೆ

## ಪ್ರಧಾನಿಗಳ ಭೇಟಿಯಲ್ಲಿ ಬಿ. ಸಿ. ರಾಯ್

ಪಶ್ಚಿಮ ಬಂಗಾಳದ ಪ್ರಧಾನಿ ಡಾ|| ಬಿ. ಸಿ. ರಾಯ್‌ರವರು ನೆನ್ನೆ ದೆಹಲಿಗೆ ವಿಮಾನದಲ್ಲಿ ಆಗಮಿಸಿದರು ನಾಳೆ ಅಲ್ಲಿ ನಡೆಯಲಿರುವ ಭಾರತ ಮತ್ತು ಪಾಕಿಸ್ಥಾನಗಳ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸುವರು

## ನೋಟೀಸು

ಇದೇ ಮೈಸೂರು ಉತ್ತರಾದಿ ಮಠದ ಬೀದಿ ೨೪೪ ನೇ ನಂಬರು ಮನೆಯಲ್ಲಿ ವಾಸವಾಗಿರುವ ಆಗರಂ ಸುಬ್ಬಾವಧಾನಿಗಳ ಮಕ್ಕಳಾದ ನಾವು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ನಮ್ಮ ತಂದೆಯವರಿಗೆ ಇದೇ ಮೈಸೂರು, ಚಾಮರಾಜ ನಗರ ಮತ್ತು ನಂಜನಗೂಡು ತಾಲ್ಲೂಕು ಹೆಡತಲೆ ಗ್ರಾಮ ಮತ್ತು ಗುಂಡ್ಲುಪೇಟೆ ತಾಲ್ಲೂಕು ... ದಲ್ಲಿಯೂ ಸಹ ಚರ, ಸ್ಥಿರ ಆಸ್ತಿಗಳುಂಟು ಈ ಆಸ್ತಿ ಪಾಸ್ತಿಗಳ ವ್ಯವಸ್ಥೆಯನ್ನು ನಮ್ಮ ತಂದೆಯವರು ವಿಲ್ ಮೂಲಕ ಈ ಕೆಳಗೆ ಕಂಡ ನಮ್ಮಿಬ್ಬರಿಗೂ ವಿಭಾಗ ಮಾಡಿ ಅದರ ಕಾಪಿಯನ್ನು ನಮ್ಮಗಳಿಗೆ ಕೊಟ್ಟಿರುತ್ತಾರೆ ಈಗ ನಮ್ಮ ತಂದೆಯವರಿಗೆ ಎಪ್ಪತ್ತಾರು ವರ್ಷ ವಯಸ್ಸು ಈ ವಾರ್ಧಿಕ್ಯದಿಂದ ಅರಳು ಮರಳು ಉಂಟಾಗಿರುತ್ತೆ. ಈ ಚೆಗೆ ಇದೇ ಮೈಸೂರು ರಾಮಚಂದ್ರ ಅಗ್ರಹಾರದ ೬೦೭ ನೇ ನಂಬರು ಮನೆಯಲ್ಲಿ ವಾಸವಾಗಿರುವ ಶ್ರೀ ಲಕ್ಷ್ಮೀನರಸಿಂಹಯ್ಯ ಉರುಫ್ ಶಾಮಣ್ಣನವರು ನಮ್ಮ ತಂದೆಯವರಿಂದ (ಈಗಿನಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಿ) ಸದರಿಯವರ ಆಸ್ತಿಯನ್ನು ವಿಕ್ರಯ ಮಾಡಿಸಲು ಏರ್ಪಾಡು ಮಾಡಿರುತ್ತಾರಾಗಿ ತಿಳಿಯ ಬಂದಿರುತ್ತೆ. ಆದ್ದರಿಂದ ಇಂತಹ ಯಾವ ಕ್ರಯವೇ ಆಗಲೀ ನಮ್ಮಗಳ ಒಪ್ಪಿಗೆ ಇಲ್ಲದೆ ನಡೆದಲ್ಲಿ ಅಥವಾ ಈ ಬಗೆಯ ಕ್ರಯಕ್ಕೆ ಸಂಬಂಧಪಟ್ಟ ಯಾವ ಕರಾರನ್ನೇ ಆಗಲಿ ಸದರಿ ನಮ್ಮ ತಂದೆಯವರಿಂದ ಬರೆಸಿಕೊಂಡಲ್ಲಿ ಅದು ಊರ್ಜಿತವಲ್ಲವೆಂದು ಈ ಮೂಲಕ ಎಚ್ಚರಿಸಿರುತ್ತೆ.

1) S. N MURTHY B. A., Accountant's Office, Ordnance Factory, Khamariah

2) S. D. SWAMY, Store Keeper, E. x.l Engineer's Office, M. E. S., G. E. Bangalore.

## ಭಾವಸಾರ ಕ್ಷತ್ರಿಯ ಸಭೆ

ಅಖಿಲ ಭಾರತ ಭಾವಸಾರ ಕ್ಷತ್ರಿಯ ಕಾರ್ಯಕಾರಿ ಸಮಿತಿಯ ಸಭೆಯು ಬರುವ ೯ನೇ ತಾ|| ನಾಗಪುರದಲ್ಲಿ ಶ್ರೀಯುತ. ಎಲ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು

Edited, printed and published by A R. Nagarajan at Sadhvi Press, D. Subbiah Road, Mysore


ಶಿವಾನಂದ ಎಲೆಕ್ಟ್ರಿಕ್ ಸ್ಟೋರ್ಸ್

ಸಯ್ಯಾಜಿರಾವ್ ರೋಡು, ಮೈಸೂರು

ಇದರಿಂದ ಸಮಸ್ತ ಜನಗಳಿಗೂ ತಿಳಿಸುವದೇನೆಂದರೆ:- ನಮ್ಮಲ್ಲಿ ಕೆಲಸ ಮಾಡಿಕೊಂಡಿದ್ದ ಶ್ರೀ ಎಂ. ವೆಂಕಟಾಚಲಂ ಎಂಬುವರನ್ನು ಕೆಲಸದಿಂದ ವಜಾ ಮಾಡಿರುವ ಪ್ರಯುಕ್ತ ಅವನ ಮೂಲಕ ನಮ್ಮ ಕಂಪೆನಿಯ ವ್ಯವಹಾರಗಳನ್ನು ನಡೆಸಕೂಡದೆಂದು ಪ್ರಕಟಪಡಿಸಿದೆ.

ಶಿವಾನಂದ ಎಲೆಕ್ಟ್ರಿಕ್ ಸ್ಟೋರ್ಸ್ಗಾಗಿ,

ಜಿ. ಗಂಗಪ್ಪ



ಮೈ|| ಗಾ|| ಸಿಲ್ಕ್ ಫ್ಯಾಕ್ಟರಿ ಕ್ರೇಪ್ ಸೀರೆಗಳಿಗೆ, ಧರ್ಮಾವರಂ, ಪೂನಾ, ನಾಗಪುರ್ ಸೀರೆಗಳಿಗೆ

ಎಂ. ವಿ. ಭೋಜಯ್ಯ ಬಿ. ಎ & ಬ್ರದರ್ಸ್,

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.



ಚಾಮುಂಡೇಶ್ವರೀ ಟಾಕೀಸಿನಲ್ಲಿ

2-4-50ರಿಂದ ಅಮೋಘ ಆರಂಭ

ಪ್ರತಿದಿನ 3 ಆಟಗಳು

ವಿಷ್ಣು ಸಿನಿಟೋನ್‌ರವರ ಅತ್ಯುತ್ತಮ ನರ್ತನದಿಂದ ಕೂಡಿದ ಪೌರಾಣಿಕ ಚಿತ್ರ

- ದೇವಕನ್ಯಾ -

[ಹಿಂದಿ]

ಪಾತ್ರ-ಲೀಲಾ ದೇಸಾಯಿ, ಲೀಲಾ ಚಿಟ್ನೀಸ್, ಶಾಸ್ತ್ರಿ, ಉಲ್ಹಾಸ್ ಮತ್ತು ದುರ್ಗಾ ಖೋಟೆ



ಪ್ರಭಾ * 31-3-50 ರಿಂದ

ದಿನವಹಿ 3 ಆಟಗಳು

ರಂಗಮಹಲ್‌ರವರ ಹಿಂದಿ ಚಿತ್ರ

ಭೂಕ್ - BHOOKH

ಷೇಕ್ ಮುಖ್ತಾರ್, ಕನ್ಹಯಾಲಾಲ್

ಬೆಳಗಿನ ಪ್ರದರ್ಶನ 31-3-50ರಿಂದ

4 ದಿನಗಳು ಮಾತ್ರ

ಚಾಂದ್



ಪ್ರಭುದೇವಾ ಟಾಕೀಸ್

ದಿನವಹಿ 3 ಆಟಗಳು

1-4-50 ನೇ ಶನಿವಾರದಿಂದ

ಸೊಹರಾಬ್ ಮೋದಿಯವರಿಂದ ತಯಾರಿಸಲ್ಪಟ್ಟ

ನರಸಿಂಹ ಅವತಾರ

ಪಾತ್ರ:- ಶೋಭನಾ ಸಮರ್ಥ್, ಲಕ್ಷ್ಮಣ್, ನಿರಂಜನ ಶರ್ಮ, ಮಹೀಪಾಲ್ ಮುಂತಾದವರು



31-3-50 ರಿಂದ ಫ್ರಡ್‌ಲ್ಯಾಂಡ್ಸ್‌ನಲ್ಲಿ

3ನೇ ವಾರ

ಸಂಗೀತ ನೃತ್ಯಗಳಿಂದ ಮನರಂಜಿಸುವ ಹಿಂದಿ ಚಿತ್ರ

ಪತಂಗ PATANGA

ಪಾತ್ರ. ನಿಗಾರ್, ಪೂರ್ಣಿಮಾ, ಶ್ಯಾಮ್, ಗೋಪ್. ಯಾಕೂಬ್

5ನೆಯ ವಾರ ಬೆಂಗಳೂರು ಗೀತಾ ಚಿತ್ರಮಂದಿರದಲ್ಲಿ

[A DREAMLAND RELEASE

ಫೋನ್ ನಂ. ೧೨೭ WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೪ | ಭಾನುವಾರ ೨-೪-೫೦ | [ಸಂಚಿಕೆ ೩೭

# ನಾಟಕದಲ್ಲಿ ಗೋಡ್ಸೆ ಪಾತ್ರ ವಹಿಸಿದ ಬಾಲಕನ ಮರಣ

## ಲಲಿತಾರವರ ದಸ್ತಗಿರಿ ಬಗ್ಗೆ ಖಂಡನೆ

ಕಳೆದ ತಿಂಗಳು ಆರನೇ ತಾರೀಕು ವೈಶ್ಯ ವಿದ್ಯಾರ್ಥಿನಿ ಸಂಘದ ಕಾರ್ಯದರ್ಶಿ ಶ್ರೀಮತಿ ಲಲಿತರವರನ್ನು ಯಾವ ಕಾರಣವನ್ನೂ ಕೊಡದೆ ವಿದ್ಯಾರ್ಥಿ ಪೋಲೀಸ್ ಮಾಡಿರುವ [illegible] ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ [illegible] ಮಾಡಿ ಪತ್ರಿಕೆ ಒಡಿಸಿದ್ದಾರೆ.

ಶ್ರೀಮತಿ ಲಲಿತರವರನ್ನು [illegible] ವಿದ್ಯಾರ್ಥಿ ಸಂಘದ ಕಾರ್ಯದರ್ಶಿ [illegible] ಕೊಡಲಿಲ್ಲ. ಸ್ವಲ್ಪ ಕಾಲ [illegible] ಶ್ರೀಮತಿಯವರನ್ನು [illegible] ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅಲ್ಲಿಂದ ವ್ಯಾನಿನಲ್ಲಿ ಕೂರಿಸಿದರೂ [illegible] ಅವರ [illegible] ಯಾವ ಸುದ್ದಿ ಸಮಾಚಾರಗಳನ್ನೂ ಅವರ ಮನೆಯವರಿಗೆ ತಿಳಿಸಲಿಲ್ಲವೆಂದೂ [illegible] ತಿಳಿಸುತ್ತಾರೆ. ಕೆಲವು ದಿವಸಗಳ ಹಿಂದೆ ಪೋಲೀಸರು ಶ್ರೀಮತಿಯವರಾದ ಲಲಿತ ಮತ್ತು ಗೌರಮ್ಮನವರುಗಳ ಮನೆಯನ್ನು ಶೋಧನೆ [illegible] ವಕ್ತಾ ಶ್ರೀ ಸಿ. ವಿ. [illegible] ವಿದ್ಯಾರ್ಥಿಗಳ [illegible] ಅವರನ್ನು [illegible] ಕೊಳ್ಳದ [illegible] ಅವರು [illegible] ವಿದ್ಯಾರ್ಥಿ ವಿದ್ಯಾರ್ಥಿನಿಯರು [illegible] ಎಂದು [illegible].

### ರಾಮನವಮಿ ಉತ್ಸವದ ಕಾರ್ಯಕ್ರಮಗಳು

ಮೈಸೂರು ೩

[illegible] ಚಿಕ್ಕಗಡಿಯಾರದ ಮಂಟಪದಲ್ಲಿ [illegible] ಪುರದ [illegible] ವಸಂತಸೇನ [illegible] ರಾತ್ರಿ ಶ್ರೀ [illegible] ಸಂಗೀತ ಸಹೋದರರಿಂದ [illegible] ಪಿಟೀಲು [illegible] ವೀಣಾ [illegible] ಪ್ರಸಂಗ [illegible] ನಡೆಯುವುವು.

ದೇವಸ್ಥಾನದ ನೊಸಲ್ಲಾ [illegible] ಜನಗಳ [illegible] ರಾತ್ರಿ [illegible] ಶ್ರೀ ಪಿ. [illegible] ಹರಿಕಥೆ [illegible] ನಡೆಯುವುದು.

ಚಾಮುಂಡಿ ಬಡಾವಣೆಯಲ್ಲಿರುವ ಶ್ರೀ [illegible] ದೇವಸ್ಥಾನದ [illegible] ಶ್ರೀ [illegible] ನಡೆಯುವುದು.

[illegible] ಶ್ರೀ [illegible] ದಲ್ಲಿ ಶ್ರೀ ಎಸ್. ಕೆ. ಎ [illegible] ಹರಿಕಥೆ [illegible] ನಡೆಯುವುದು.

### ಅಶೋಕ ಚಿತ್ರ ಸಂಘ

[illegible] ಸಂಘದ [illegible] ನಡೆಯಿತು. [illegible]

## ಮತ್ತೆ ಸಾಂಬಶಿವಯ್ಯರವರ ದಸ್ತಗಿರಿ

ಮೊಳಮಾರು ಟ್ರೇಡ ಯೂನಿಯನ್ನಿನ [illegible] ಶ್ರೀ ಸಾಂಬಶಿವಯ್ಯರವರಿಗೆ ವಿಧಿಸಲಾಗಿದ್ದ ಮರಣದಂಡನೆಯನ್ನು ರದ್ದುಗೊಳಿಸಿ ಅವರನ್ನು ಬಿಡುಗಡೆ ಮಾಡಲಾಗಿತ್ತಷ್ಟೆ. ಅವರನ್ನು ನೆನ್ನೆ ವಿಶೇಷ [illegible] ಪ್ರಕಾರ ಮತ್ತೆ ದಸ್ತಗಿರಿ ಮಾಡಲಾಗಿದೆ.

## ಅಸ್ಸಾಂ–ಪೂರ್ವ ಬಂಗಾಳ ಒಪ್ಪಂದ

[illegible] ಪೂರ್ವ ಪಾಕಿಸ್ತಾನಗಳ [illegible] ಬಂಧಿಸಿ [illegible]

## ಎಸ್. ಬಿ. ಖರೆಯವರಿಗೆ ಗಡೀಪಾರು

ಹಿಂದೂ ಮಹಾಸಭಾ ಅಧ್ಯಕ್ಷರಾದ ಡಾ|| ಎನ್. ಬಿ. ಖರೆಯವರನ್ನೂ ಮತ್ತು ಜನರಲ್ ಕಾರ್ಯದರ್ಶಿಯವರನ್ನೂ ನೆನ್ನೆ ದಿನ ದೆಹಲಿಯಿಂದ ಗಡೀಪಾರು ಮಾಡಿ ನಾಗಪುರಕ್ಕೆ ಕಳುಹಿಸಲಾಯಿತು.

## ಜಿನ್ನಾ ವಿಶ್ವವಿದ್ಯಾಲಯ

ಪಾಕಿಸ್ತಾನದಲ್ಲಿ ಕಾಯದೆ ಆಜಂ ಜಿನ್ನಾರವರ ಹೆಸರಿನಲ್ಲಿ ಒಂದು ವಿಶ್ವವಿದ್ಯಾಲಯವನ್ನು ತೆರೆಯಲಾಗುವುದೆಂದು ವರದಿಯಾಗಿದೆ. ಇದಕ್ಕೆ ಪಾಕಿಸ್ತಾನ ಸರ್ಕಾರದವರು ಧನ ಸಹಾಯ ನೀಡುವರು. ಇದು ಪಾಕಿಸ್ತಾನದಲ್ಲಿ ನಾಲ್ಕನೇ ವಿಶ್ವವಿದ್ಯಾಲಯವಾಗುವುದು.

## ಗಂಡನು ಚುಂಬಿಸಿದ್ದಕ್ಕೆ ಡೈವೋರ್ಸ್ ಅರ್ಜಿ

[illegible]

## ಕೇಂದ್ರಕ್ಕೆ ಸೇರಿಹೋದ ಸಂಸ್ಥಾನದ ಇಲಾಖೆಗಳು

ಬೆಂಗಳೂರು ೩

ಸೈನ್ಯ, ರೈಲ್ವೆ, ಪರವಾನಗಿ ತೆರಿಗೆ, ಆಡಿಟ್, ಕೇಂದ್ರ ಅಬ್ಕಾರಿ ತೆರಿಗೆ, ಟೆಲಿಫೋನ್, ಆಕಾಶವಾಣಿ, ಕ್ಯಾಪಿಟಲ್ ಇಷ್ಯೂಸ್, ಹವಾಮಾನ, ಗಣಿಗಳ ಇನ್ಸ್‌ಪೆಕ್ಟರೇಟ್ ವ್ಯಾಪಾರ ಚಿಹ್ನೆಗಳು, ಮುಂಡಕ್ಕೆ ವಿಮಾನ ನಿಲ್ದಾಣ, ಔದ್ಯೋಗಿಕ ವಿಸ್ತರಣ, ಗಣತಿ, ಜಿಯೋ ಫಿಸಿಕಲ್ [illegible] ಈ ಇಲಾಖೆಗಳು ನಿನ್ನೆಯಿಂದ ಕೇಂದ್ರ ಸರ್ಕಾರಕ್ಕೆ ಸೇರಿರುವುವು. ಈ ವರ್ಗಾವಣೆಯಿಂದ ಸಂಸ್ಥಾನದ ಸುಮಾರು [illegible] ಭಾರತ ಸರ್ಕಾರದ [illegible].

## ಗಂಡು ಆಗುತ್ತಿರುವಳು

[illegible] ವರ್ಷ ವಯಸ್ಸಿನ ಒಬ್ಬ [illegible] ಗಂಡಸಾಗುತ್ತಿರುವ [illegible] ಎಂದು ವರದಿಯಾಗಿದೆ. ಈ ಪರಿವರ್ತನೆಯು ಪೂರ್ಣವಾಗಲು ಆಕೆಗೆ ಶಸ್ತ್ರಚಿಕಿತ್ಸೆ ನಡೆಸಬೇಕೆಂದು ವೈದ್ಯರು ಸಲಹೆ ಮಾಡಿದ್ದಾರೆ. ಈಗ ಆಕೆಯು ಗಂಡಸಿನಂತೆ ಉಡುಪುಗಳನ್ನು ಧರಿಸುತ್ತಲೂ ತಲೆ ಕೂದಲನ್ನು ಕತ್ತರಿಸಿಕೊಳ್ಳುತ್ತಲೂ ಇರುವಳೆಂದೂ ಮತ್ತು ಬಾಲಕರ ಶಾಲೆಗೆ ಹೋಗುತ್ತಿರುವಳೆಂದೂ ಗೊತ್ತಾಗಿದೆ.

## ಕಾಳಸಂತೆಕೋರರ ಬೊಂಬೆಯ ಮೆರವಣಿಗೆ

ಕೆಲವು ದಿವಸಗಳ ಹಿಂದೆ ಉಜ್ಜಯಿನಿಯ ಪ್ರಜೆಗಳು ಕಾಳಸಂತೆಕೋರರ ಒಂದು ಬೊಂಬೆಯನ್ನು ತಯಾರಿಸಿ ಅದರ ಕೈಗಳಿಗೆ ಬೇಡಿಯನ್ನು ಹಾಕಿ ಬೀದಿಯ [illegible] ಮೆರವಣಿಗೆ ನಡೆಸಿದ ಪ್ರಸಂಗವು ವರದಿಯಾಗಿದೆ.

### ಸತ್ಕಾರ ಕೂಟ

ಶ್ರೀ [illegible] ರವರ [illegible] ದಿನ ರಾತ್ರಿ [illegible] ಸತ್ಕಾರ [illegible] ನಡೆಯಿತು. [illegible]

## ಗೋಡ್ಸೆ ಪಾತ್ರ ವಹಿಸಿದ ಬಾಲಕನ ದುರಂತ

ಕೆಲವು ದಿವಸಗಳ ಹಿಂದೆ ಪಾಟ್ನಾ ಬಳಿ ಸಿಲಾವೊ ಎಂಬ ಗ್ರಾಮದ ಹತ್ತಾರು ವರ್ಷ ವಯಸ್ಸಿನ ಹುಡುಗರು ಊರಿನ ಹೊರಗೆ ಗಾಂಧಿ ಕೊಲೆ ಮೊಕದ್ದಮೆಯ ನಾಟಕವನ್ನು ಬಯಲಾಟದ ರೂಪದಲ್ಲಿ ಆಡುತ್ತಿದ್ದರು. ಆ ಸಂದರ್ಭದಲ್ಲಿ ಮಹಾತ್ಮರ ಪಾತ್ರವನ್ನು ವಹಿಸಿದ್ದ ಒಬ್ಬ ಹುಡುಗನು ಬಂದೂಕಿನಿಂದ ಹೊಡೆಯಲ್ಪಟ್ಟು ಕೊಲೆ ಮಾಡಲ್ಪಟ್ಟನೆಂದು ಭಾವಿಸಿ, ನ್ಯಾಯಾಧೀಶರ ಪಾತ್ರವಹಿಸಿದ್ದ ಮತ್ತೊಬ್ಬ ಹುಡುಗನು ಗೋಡ್ಸೆ ಪಾತ್ರವಹಿಸಿದ್ದವನಿಗೆ ಮರಣ ದಂಡನೆ ವಿಧಿಸಿದನು. ಕೂಡಲೆ ಆ ಹುಡುಗ ಗೋಡ್ಸೆಯನ್ನು ಹತ್ತಿರವಿದ್ದ ಒಂದು ಮರಕ್ಕೆ ನೇಣು ಹಾಕಿದುದರ ಪರಿಣಾಮವಾಗಿ ಅವನು ಮೃತಪಟ್ಟನು. ಪೋಲೀಸರಿಗೆ ಈ ಸಂಗತಿ ತಿಳಿದು ಅವರು ಮುಂದಿನ ತನಿಖೆ ಕ್ರಮ ನಡೆಸುತ್ತಿದ್ದಾರೆ.

## ಸ್ತ್ರೀಯರಿಗೆ ಪ್ರತ್ಯೇಕ ನೌಕರಿ ವರ್ಗದ ವಜಾ

ಭಾರತ ರಾಜ್ಯಾಂಗದಲ್ಲಿ ಜಾತಿ, ವರ್ಣ ಮತ್ತು ಲಿಂಗಭೇದಗಳಿರಕೂಡದೆಂದು ವಿಧಿಸಲಾಗಿರುವುದರಿಂದ ಮದ್ರಾಸಿನಲ್ಲಿ ಎಲ್ಲೆಲ್ಲಿ ಪ್ರತ್ಯೇಕ ಸ್ತ್ರೀ ವರ್ಗಗಳೇರ್ಪಟ್ಟಿರುವುವೋ ಅವುಗಳನ್ನು ವಜಾ ಮಾಡಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ.

## ಜಪಾನಿನಲ್ಲಿ ಅತಿಯಾಗಿ ಕೃತಕ ರೇಷ್ಮೆ ತಯಾರಿ

ಅತಿಯಾಗಿ ರೇಷ್ಮೆ ಮತ್ತು ಕೃತಕ ರೇಷ್ಮೆ ತಯಾರಿಸಿದ ಕಾರಣದಿಂದಾಗಿ, ಜಪಾನಿನ ಔಸಾಕಾ ಪ್ರಾಂತದಲ್ಲಿರುವ ೬೦೦ಕ್ಕಿಂತಲೂ ಹೆಚ್ಚು ಕಾರ್ಖಾನೆಗಳನ್ನು ಮುಚ್ಚಿ [illegible] ನಿಲ್ಲಿಸಲಾಗುವುದು.

## ಬಟ್ಟೆ ಹತೋಟಿ ಇನ್ನೂ ಇರುವುದು

ಬಟ್ಟೆಗಳ ಮೇಲಿನ ಹತೋಟಿಯನ್ನು ಕೇಂದ್ರ ಸರ್ಕಾರದವರು ವಾಪಸು ತೆಗೆದುಕೊಳ್ಳುವುದಿಲ್ಲವೆಂದು ಹೇಳಲಾಗಿದೆ.

## ನೂತನ ವಿದೇಶಿ ವಿಮಾನ ಅಂಚೆ ಕಾಗದ

ನೆನ್ನೆಯಿಂದ ಅರು ಆಣೆಯ, ವಿಮಾನ ಮೂಲಕ ಸಾಗಿಸಲ್ಪಡುವ ಹೊಸ ಕಾಗದವನ್ನು ಜಾರಿಗೆ ತರಲಾಗಿದೆ. ಇದರ ಮೇಲೆ ಇದುವರೆಗೆ ಇದ್ದ ಬ್ರಿಟಿಷ್ ರಾಜರ ತಲೆಯ ಜಾಗದಲ್ಲಿ ಹಾರುವ ವಿಮಾನಗಳ ಸಮೂಹವನ್ನು ಮುದ್ರಿಸಲಾಗಿದೆ.

## ವಕೀಲರ ಸಂಘದ ಹೊಸ ಅಧಿಕಾರಿ ವರ್ಗ

ರಾಜಧಾನಿಯ ವಕೀಲರುಗಳ ಸಂಘದ ಹೊಸ ಅಧಿಕಾರಿ ವರ್ಗದ ಚುನಾವಣೆ ನೆನ್ನೆ ನಡೆಯಿತು. ಶ್ರೀ ಹೆಚ್. ಸುಬ್ಬರಾಯರು ಅಧ್ಯಕ್ಷರಾಗಿಯೂ, ಶ್ರೀ ವಿ. [illegible] ನಂಜುಂಡಯ್ಯನವರು [illegible] ಕಾರ್ಯದರ್ಶಿಗಳಾಗಿಯೂ, ಶ್ರೀ [illegible] ಶ್ರೀನಿವಾಸಾಚಾರ್ಯರವರು [illegible] ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

### ಆಹಾರೋತ್ಪತ್ತಿ ಅಧಿಕಾರಿಗಳ ಹುದ್ದೆ ರದ್ದು

ಸಂಸ್ಥಾನದಲ್ಲಿ ಆಹಾರೋತ್ಪತ್ತಿಗಾಗಿ [illegible] ಹುದ್ದೆಗಳನ್ನು ರದ್ದುಗೊಳಿಸಿ, [illegible] ಅವರನ್ನು [illegible] ಹೇಳಲಾಗಿದೆ.

## ವಾರ ಭವಿಷ್ಯ

ತಾ|| ೩-೪-೫೦ರಿಂದ ೯-೪-೫೦ರ ವರೆಗೆ

ಮೇಷ—ಆರೋಗ್ಯ ನೆಟ್ಟಗೆ, ಮಕ್ಕಳ ಡು ಹುಗಳ್ಲಿ ನೌಕರಿಯಲ್ಲಿ ತೊಂದರೆ ಸಿಕ್ಕಿ ತಾ. ವಿಶೇಷವ ಅಕ್ರವ ಕಷ್ಟ ಭಾವನೆ ಸಾರ್ವಜನಿಕ ಕಾರ್ಯಗಳಲ್ಲಿ ತಾ|| ೫, ೬, ಮುಗ್ಗಟ್ಟು ಖರ್ಚು

ವೃಷಭ—ಆರೋಗ್ಯ ನೆಟ್ಟಗಿರದು ಮನಸ್ಸಿಗೆ ಅಸಮಾಧಾನ ಯೋಜಿತ ಕಾರ್ಯಗಳ ಅಪೂರ್ಣತೆ. ಖರ್ಚುಗಳ ವೈಪರೀತ್ಯ. ನೆರೆಯವರೊಡನೆ ಕಲಹ ಪ್ರವಾಸದಲ್ಲಿ ಧಕ್ಕೆ ತಾ|| ೫, ೬ ಧನಚಿಂತಾ ನಿವಾರಣೆ, ಆಕಾಡಾಯಕ ಪತ್ರಗಳು.

ಮಿಥುನ—ಆರೋಗ್ಯ ನೆಟ್ಟಗೆ ಬೌದ್ಧಿಕ ಪರಾಕ್ರಮ ಕಾರ್ಯ ವಿದ್ವಜ್ಜನರಿಗೆ ವಿಶೇಷ ಸನ್ಮಾನ. ನೌಕರಿಯಲ್ಲಿ ಅಗಿದ್ದ ಅಪಮಾನ ಮಾಯ. ಮೇಲಿನವರಿಂದ ಮೆಚ್ಚುಗೆ, ವ್ಯಾಪಾರಾದಿಗಳಲ್ಲಿ ಸುಧಾರಣೆ ತಾ||೭, ೭ ಗಡಿಬಿಡಿ

ಕರ್ಕ—ಆರೋಗ್ಯ ನೆಟ್ಟಗೆ. ಕಾಲ ಹರಣ ಪ್ರಯತ್ನ ಆದಾಯ ಖರ್ಚಿಗಿಂತ ಕಡಿಮೆ. ಧಾರ್ಮಿಕ ಕಾರ್ಯ. ತಾ||೩, ೩ ಪ್ರವಾಸದ ಯೋಗ ತಾ||೪, ೫ ನೌಕರಿಯಲ್ಲಿ ತಿರುಗಲ ಚಿಂತೆ. ವೋಸ

ಸಿಂಹ ಪಶ್ಚಾತ್ತಾಪ ನಿಮ್ಮ ತಪ್ಪಿನ ವಾರ ನಿಮಗೆ ಅರಿವಾಗುವುದು ವ್ಯಾಪಾರಾದಿಗಳಲ್ಲಿ ದುರ್ಜನರ ಭೇಟಿ. ಆಸ್ತಿಪಾಸ್ತಿಗಳ ವಾದ. ವಿರೋಧಕ್ಕೆ ಕಾರಣ, ಧನ ನಾಶ ಸ್ತ್ರೀಗೆ ಕ್ಲೇಶ ತಾ||೭,೪ ಮಹತ್ವದ ಪತ್ರ ವ್ಯವಹಾರಕ್ಕೆ ಕಥ

ಕನ್ಯಾ—ಚಂದ್ರಗ್ರಹಣದಿಂದ ನಿಮ್ಮ ರಾಶಿಯವರ ಸ್ಥಿತಿ ಶೋಚನೀಯ ಕಷ್ಟ ಪರಂಪರೆ ತಪ್ಪದು. ಕ್ರಿಯೆ ಏನ ಹೀನವಾಗ ನಿಂತ ಇಲ್ಲ ವ್ಯಾಪಾರಾದಿಗಳಲ್ಲಿ ತೊಂದರೆ ಆರೋಗ್ಯ, ಅಪಘಾತ, ಭಯ ಪಟ್ಟಿ ರೊಬ್ಬರ ಸಾವು ಅಧಿಕ ಜವಾಬ್ದಾರಿ ತಾ|| ೮, ೭ ಸಂಕಟ ನಿವಾರಣೆ ಪತ್ರಗಳ ಮನ

ತುಲಾ—ಜನಪ್ರಿಯತೆ ಹೆಚ್ಚುವುದು, ಆರೋಗ್ಯ ನೆಟ್ಟಗೆ, ನೌಕರಿಯಲ್ಲಿ ಆಗಿದ್ದ ಅನ್ಯಾಯ ಹೋಗುವುದು ತಾ|| ೬, ೭ ಧನ ಲಾಭ ಕಾರ್ಯದಲ್ಲಿ ಜಯ.

ವೃಶ್ಚಿಕ—ನಿಮ್ಮ ಗ್ರಹಮಾನ ಒಳ್ಳೆಯದು. ಆರೋಗ್ಯ ನೆಟ್ಟಗೆ. ಮೇಲಧಿಕಾರ ಪ್ರಾಪ್ತಿ, ಸುಖ ಪ್ರವಾಸ, ಪ್ರವಾಸದ ಉದ್ದೇಶದ ಸಾಫಲ್ಯ, ಧನ ಲಾಭ ತಾ||೭, ೭ ಧಾರ್ಮಿಕ ಕಾರ್ಯಕ್ಕಾಗಿ ಖರ್ಚು, ನಿದ್ರೆ ಇರದ.

ಧನು—ವಾರ ಪ್ರಗತಿಯದು, ತತ್ತ್ವಗಳ ಶೋಧನೆ ಮಾಡು, ಆರೋಗ್ಯ ನೆಟ್ಟಗೆ, ಧನಲಾಭ. ಆನಂದ, ತಾ|| ೭, ೭ ಪರೋಪಕಾರ. ಕೂಂತಿ ಮುಗ್ಗಟ್ಟು.

ಮಕರ—ಸವಾಲು ಯಾರಿಗೂ ಕೊಡ ಬೇಡಿ ಆರೋಗ್ಯ ನೆಟ್ಟಗಿರದು, ವ್ಯಾಪಾರಾದಿಗಳಲ್ಲಿ ಪ್ರತಿಕೂಲವಾಗಿರದು ಸ್ವಲ್ಪ ಹಣದ ಮುಗ್ಗಟ್ಟಾಗಿ ತಾ|| ೬, ೭ ಪ್ರ ಜನಭೇಟಿ ತಿರುಗಾಟ, ಪ್ರವಾಸ

ಕುಂಭ—ಹಿಂದಿನ ಘಟನೆಗಳ ಕಷ್ಟ ನ ನೆನಪು ನಿದ್ರೆಯಿಲ್ಲದ ಸುಧಾರಣೆ, ಪ್ರತಿಕೂಲ ತಾ|| ೪, ೬ ಧ ಯೋಚನೆ ಮಾಡು

ಮೀನ—ವಾರ ಪ್ರಗತಿಕ ವಾರ ವ್ಯಾಪಾರಾದಿಗಳಲ್ಲಿ ಸ್ಥಿತಿ ಉತ್ತಮ, ಪ್ರತಿ ಸಾಮರ್ಥ್ಯ ತಾ|| ದ ಲಾಭ ಧನವಾರ್ಥ

## ಶೀಘ್ರ ಲಿಪಿಗಾರರ ಕುಂದುಕೊರತೆಗಳು

ನ್ಯಾಯವಿಧಾಯಕ ಸಭೆಯಲ್ಲಿ ನಮ್ಮ ಸಂಸ್ಥಾನದ ಮುಖ್ಯ ಮಂತ್ರಿಗಳು ಮಾಡಿರುವ ಭಾಷಣದಲ್ಲಿ "ನೂತನ ರಾಜ್ಯಾಂಗದ ಪ್ರಕಾರ ನಾವು ಕೈಗೊಂಡಿರುವ ಪ್ರಮಾಣ ವಚನವನ್ನು ಧೈರ್ಯದಿಂದ ಪಾಲಿಸುವೆವೆಂಬ ಭರವಸೆಯನ್ನು ಕೊಡುತ್ತೇನೆ. ಮತ್ತು ಸರ್ವರನ್ನೂ ಸಮದೃಷ್ಟಿಯಿಂದ ನೋಡುವುದೇ ಸರ್ಕಾರದ ನೀತಿ"ಯೆಂದು ಹೇಳಿರುವ ಮಾತುಗಳು ಬಹಳ ಗಮನಾರ್ಹವಾಗಿಯೂ ಮತ್ತು ಆಶಾದಾಯಕವಾಗಿಯೂ ಇರುವುವು. ಈ ನೀತಿಯನ್ನು ಅನುಸರಿಸಿ ಈಗಲಾದರೂ ಪ್ರಥಮ ದರ್ಜೆಗೆ ವಿಧಿತವಾದ ಅರ್ಹತೆಯುಳ್ಳ ಮತ್ತು ೧೦-೨೦ ವರ್ಷಗಳ ಅನುಭವವುಳ್ಳ ಕೆಲವು ಶೀಘ್ರ ಲಿಪಿಗಾರರಿಗೂ ಸಮದೃಷ್ಟಿಯಿಂದ ನಮ್ಮ ಘನ ಸರ್ಕಾರವು ೧-೧-೪೭ರಿಂದ ಅವರವರುಗಳ ಅನುಭವಕ್ಕೆ ಅನುಗುಣವಾದ ಸ್ಥಾನಮಾನಗಳನ್ನು ಕಲ್ಪಿಸಿಕೊಡುವುದರ ಮೂಲಕ ಅವರ ಕುಂದುಕೊರತೆಗಳನ್ನೂ ನಿವಾರಿಸುವುದು ಅತ್ಯಾವಶ್ಯಕ ಮತ್ತು ನ್ಯಾಯಸಮ್ಮತವಾದುದೆಂದು ಕೋರಿ ಹಿತೈಷಿಗಳೊಬ್ಬರು ನಮಗೆ ಪತ್ರ ಬರೆದಿರುತ್ತಾರೆ

## ಟೆಲಿಫೋನ್ ಅವ್ಯವಸ್ಥೆ

ರಾಜಧಾನಿಯ ಟೆಲಿಫೋನ್ ವ್ಯವಸ್ಥೆಯು ತೀರಾ ಕೆಟ್ಟಿದೆ. ಯಾವ ನಂಬರಿಗೆ ಡಯಲ್ ಮಾಡಿದರೂ ಗಂಟೆಗಟ್ಟಲೆ ಎಂಗೇಜ್ ಸದ್ದು ಬರುತ್ತೆ. ಇಲ್ಲವೇ ಸಂಪರ್ಕವೇ ಉಂಟಾಗುವುದಿಲ್ಲ. ಸೆಂಟ್ರಲ್ ಬ್ಯಾಟರಿ ಸಿಸ್ಟಮ್ಮಂತೂ ಇನ್ನೂ ಹದಗೆಟ್ಟಿದೆ ಯಾವುದಾದರೂ ಒಂದು ಫೋನಿನ ಲಿಂಕ್ ಪಡೆಯಬೇಕಾದರೆ ಮಹಾ ಪ್ರಯಾಸವನ್ನೇ ಪಡಬೇಕಾಗಿದ್ದು ಇದ್ದಕ್ಕಿದ್ದಂತೆಯೇ ಸಂಪರ್ಕ ಕಡಿದು ಹೋಗುತ್ತದೆ ಈಗ ಸಂಸ್ಥಾನದ ಟೆಲಿಫೋನ್ ವ್ಯವಸ್ಥೆಯು ಕೇಂದ್ರ ಸರ್ಕಾರದ ಆಡಳಿತಕ್ಕೆ ಸೇರಿರುತ್ತೆ ಈಗಲಾದರೂ ಸಂಬಂಧಪಟ್ಟ ಅಧಿಕಾರಿಗಳು ಈ ಅವ್ಯವಸ್ಥೆಗಳನ್ನು ಸರಿಪಡಿಸಲೆಂದು ಆಶಿಸುತ್ತೇವೆ.


### ಬೇಕಾಗಿದೆ

ರಾಮಾನುಜ ರಸ್ತೆಯಲ್ಲಿ ನಲ್ಲಿ, ದೀಪ ಇರುವ ಮಹಡಿ ಮನೆ

ಸರಸ್ವತೀಪುರಂನಲ್ಲಿ ಬಾವಿ, ಕಾಂಪೌಂಡ್, ಇರುವ ಮನೆ

ವಾಣಿವಿಲಾಸಪುರದಲ್ಲಿ ನಲ್ಲಿ. ಕಾಂಪೌಂಡ್, 2ಕಡೆ ರಸ್ತೆ ಮನೆ ಬೆಲೆ ಪ್ರತಿಯೊಂದಕ್ಕೂ 6500/ ರೂ.

ಬಿ. ಎಸ್. ಸುಬ್ಬರಾವ್.

ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು.


## ಕೊಚ್ಚಿ ಚೀಣದಲ್ಲಿ ಭಾರಿ ಕದನ

ಕೊಚ್ಚಿ ಚೀಣದಲ್ಲಿ ಕಳೆದ ಮೂರು ದಿನಗಳಿಂದ ನಡೆದ ಭಾರಿ ಕದನದಲ್ಲಿ ವಿಯಟ್‌ಮಿನ್ ಸೈನ್ಯಗಳಿಗೆ ಬಲವಾದ ನಷ್ಟವುಂಟಾಗಿರುವುದಾಗಿ ಫ್ರೆಂಚ್ ಪ್ರಕಟಣೆಯೊಂದು ತಿಳಿಸಿರುತ್ತದೆ. ಈ ಕದನದಲ್ಲಿ ಎರಡು ವಿಯಟ್‌ಮಿನ್ ಡಿವಿಜನ್‌ಗಳು ಭಾಗವಹಿಸಿದ್ದವೆಂದೂ ಮತ್ತು ಅವು ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿದ್ದವೆಂದೂ ಹೇಳಲಾಗಿದೆ

## ಮದ್ಯಪಾನದ ಕಡೆಯ ಗುಟುಕಿಗಾಗಿ ನುಗ್ಗಾಟ

ಅನೇಕ ದೇಶಗಳಲ್ಲಿ ತಮ್ಮ ಕೃತಜ್ಞತೆಯನ್ನು ಸೂಚಿಸಲು ಕೆಲವು ವ್ಯಕ್ತಿಗಳ ಗೌರವಾರ್ಥವಾಗಿ ಅವರ ಪ್ರತಿಮೆಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪಿಸುವುದು ವಾಡಿಕೆಯಾಗಿದೆ. ಚರಿತ್ರಾರ್ಹವಾದ ವ್ಯಕ್ತಿಗಳು, ಕವಿಗಳು ಮತ್ತು ಇತರ ಸ್ಮಾರಕಗಳು ಚಿರಸ್ಥಾಯಿಯಾಗಿ ಉದ್ಯಾನಗಳಲ್ಲಿಯೂ, ಮುಖ್ಯವಾದ ಬೀದಿಗಳಲ್ಲಿಯೂ ಮಾರ್ಕೆಟ್ ಬಳಿಗಳಲ್ಲಿಯೂ ಶಿಲೆಗಳಿಂದಾಗಲೀ ಕಂಚಿನಿಂದಾಗಲೀ ತಯಾರಿಸಿದ ಪ್ರತಿಮೆಗಳನ್ನು ಇಡಲಾಗಿದೆ. ಇಷ್ಟೇ ಅಲ್ಲ, ಮನುಷ್ಯನಿಗೆ ಸಹಾಯಕವಾಗಿರುವ ನಾಯಿ ಕುದುರೆಗಳು ಮುಂತಾದ ಪ್ರಾಣಿಗಳ ಸ್ಮಾರಕಕ್ಕಾಗಿಯೂ ಅಂಥಾ ಶಿಲಾ ಪ್ರತಿಮೆಗಳನ್ನು ಇಡಲಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಎಂಟರ್‌ಪ್ರೈಸ್ ಎಂಬ ಒಂದು ಸಣ್ಣ ನಗರದಲ್ಲಿ ಬಾಲ್ ವಿವಿಲ್ ಎಂಬ ಒಂದು ಸ್ಮಾರಕವನ್ನು ಏರ್ಪಡಿಸಿ ಸಂಪದಭಿವೃದ್ಧಿಗೆ ದಾರಿ ತೋರಿಸಿದ ಬಾಲ್ ವಿ ಕ್ರಿಮಿಗಳ ಕೃತಜ್ಞತೆಗಾಗಿ ಎಂದು ಬರೆಯಲಾಗಿದೆ. ಒಂದಾನೊಂದು ಕಾಲದಲ್ಲಿ ಈ ಕ್ರಿಮಿಗಳು ಹತ್ತಿ ಬೆಳೆಯನ್ನೆಲ್ಲಾ ನಾಶ ಮಾಡಿದಾಗ ಈ ಕ್ರಿಮಿಗಳ ಆಹುತಿಗೆ ಒಳಗಾದಂತಹ ಪದಾರ್ಥಗಳ ಹತ್ತಿಯನ್ನು ಬೆಳೆಯಲು ಅವಕಾಶವಾಗಿ ಅಂದಿನಿಂದಲೂ ಆ ಸಣ್ಣ ನಗರವು ಬಹಳ ಅಭಿವೃದ್ಧಿಗೆ ಬಂದಿತು. ಅಲ್ಲದೆ ಈ ಹೊಸದಾಗಿ ಬೆಳೆದ ಹತ್ತಿಯೂ ಸಹ ಬಹಳ ಉತ್ತಮ ತರಹದ್ದಾಗಿ ಕಂಡುಬಂದಿದೆ.

ಸಾಲ್ಟ್‌ಲೇಕ್ ಸಿಟಿ ಎಂಬ ನಗರದಲ್ಲಿಯೂ ಸಹ ಗಲ್ ಪಕ್ಷಿಗಳ ಗೌರವಾರ್ಥವಾಗಿ ಸ್ಮಾರಕವನ್ನೇರ್ಪಡಿಸಲಾಗಿದೆ. ಈ ಗಲ್ ಪಕ್ಷಿಗಳು ಸಾಧಾರಣವಾಗಿ ಸರೋವರಗಳ ಬಳಿ ನೆಲೆ ಮಾಡಿಕೊಂಡಿರುತ್ತವೆ. ಅನೇಕ ವರ್ಷಗಳ ಹಿಂದೆ ಮಿಡತೆಗಳು ಬೆಳೆಗಳನ್ನು ಹಾಳುಮಾಡುತ್ತಿದ್ದ ಕಾಲದಲ್ಲಿ ಈ ಗಲ್ ಪಕ್ಷಿಗಳು ಅವುಗಳನ್ನೆಲ್ಲಾ ನಾಶ ಮಾಡಿ ಬೆಳೆಯ ರಕ್ಷಣೆಗಾಗಿ ರಕ್ಷಿಸಿ ಅಲ್ಲಿನ ನಿವಾಸಿಗಳಿಗೆ ಉಪಕಾರ ಮಾಡಿದುವಂತೆ. ಆದರೆ ಇತರ ಅನೇಕ ಇಂಥ ಸ್ಮಾರಕಗಳನ್ನು ಏರ್ಪಡಿಸುತ್ತಿರುವ ಕೀರ್ತಿ ಬಂದಿಲ್ಲ. ಅಂಥಾ ಸನ್ನಿವೇಶವು ಒದಗಿದ್ದುದಾದರೆ ಮೊದಲನೇ ಸ್ಥಾನವು ಸಿಂಕೋನಾ ಗಿಡಕ್ಕೆ ಲಭಿಸುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಈ ಸಿಂಕೋನಾ ಗಿಡದಿಂದ ಉತ್ಪತ್ತಿಯಾಗುವ ಸಿಂಕೋನಾದಿಂದ ಕ್ವಿನೈನ್ ಎಂಬ ಔಷಧವನ್ನು ತಯಾರಿಸಿ ಪ್ರಪಂಚದಲ್ಲಿ ಮಲೇರಿಯಾದಿಂದ ನರಳುವ ಕೋಟ್ಯಾಂತರ ಜನಗಳನ್ನು ರಕ್ಷಿಸಲು ಅವಕಾಶವಾಗಿದೆ.

ಆಗಾಗ್ಗೆ ಇರುವಿಕೆಯಲ್ಲಿ ನೇಮಕವಾದ ಮಲೇರಿಯಾ ನಿವಾರಣೆ ಕ್ವಿನೈನಿನ ಪ್ರಾಮುಖ್ಯತೆಯನ್ನು ನಿರೂಪಿಸಿವೆ. ಆ ಪದ್ಧತಿಯಲ್ಲಿ ಮಲೇರಿಯಾದಿಂದ ನರಳುವಾಗ ೫-೭ ದಿನಗಳವರೆಗೂ ಪ್ರತಿನಿತ್ಯ ರೋಗಿಗಳಿಗೆ ಗ್ರೇನ್ನುಗಳನ್ನು ಕ್ವಿನೈನನ್ನು ಕೊಡುತ್ತಿದ್ದರು. ಮಲೇರಿಯಾ ಜ್ವರದ ರೋಗಿಗಳ ರಕ್ತದಲ್ಲಿ ಪರಿಣಾಮ ಪ್ರತಿನಿತ್ಯವೂ ಆರು ಗ್ರೇನ್ನುಗಳನ್ನು ನೀಡಿ ಮುಂದೆ ನಡೆಸುತ್ತಿರುವುದಾಗಿ ಪ್ರಕಟವಾಗಿದೆ.

Edited printed and published by A R Nagarajan at Sadhvi Press. D Subbiah Road, Mysore.

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೧ ಕಾಸು

ಸಾಧ್ವಿ

ಸಂಪುಟ ೮ ಶನಿವಾರ ೮-೬-೫೦ ಸಂಚಿಕೆ ೨೦೪

# ಶಿವಮೊಗ್ಗದಲ್ಲಿ ವಕೀಲರ ಸಮ್ಮೇಳನ

## ಅವಂತೀ ಪೀಠದ ಜಗದ್ಗುರು ಸ್ವಾಮಿಗಳವರು

ಮೈಸೂರು ೮

ರಾಜಧಾನಿಯ ದೊಡ್ಡಪೇಟೆ ಸಂಗು ಕ್ರೋಟೆಗೆ ಪೂರ್ವ ಭಾಗದಲ್ಲಿರುವ ವಿದ್ಯಾ ಶಂಕರ ದೇವಸ್ಥಾನದಲ್ಲಿ ಶ್ರೀ ಅವಂತೀ ಪೀಠಾಧೀಶ್ವರರಾದ ಶ್ರೀ ಜಗದ್ಗುರು ಶಂಕರಾಚಾರ್ಯ ಸ್ವಾಮಿಗಳವರು ಬಿಡಾರ ಮಾಡಿರುತ್ತಾರೆ. ಪ್ರಸ್ತುತದಲ್ಲಿ ಉಂಟಾಗಿರುವ ಕ್ಷಾಮ ಡಾಮರಾದಿ ಅಭಾವ ನಿವಾರಣೆಗೂ, ಸಮಸ್ತ ಜನರ ಶ್ರೇಯಸ್ಸನ್ನು ಒಯುವ ಸಲುವಾಗಿಯೂ ಜನರಲ್ಲಿ ಧರ್ಮಾಸಕ್ತಿಯುಂಟು ಮಾಡುವ ಉಪನ್ಯಾಸಗಳನ್ನು ಏರ್ಪಡಿಸಿ ಆಸ್ತಿಕ ಮಹಾಜನಗಳಿಗೆ ಸನ್ಮಾರ್ಗವನ್ನು ಬೋಧಿಸುತ್ತಿರುವರು. ಇವರು ಇಂಗ್ಲೀಷ್, ಕನ್ನಡ, ತಮಿಳು, ತೆಲುಗು ಮುಂತಾದ ಭಾಷೆಗಳಲ್ಲಿ ಹೃದಯಂಗಮವಾಗಿ ಭಾಷಣ ಮಾಡುವರು. ಶಾಸ್ತ್ರ, ಪುರಾಣ, ಇತಿಹಾಸ ವಿಚಾರಗಳನ್ನು ಅತ್ಯಂತ ಸುಲಭ ಶೈಲಿಯಲ್ಲಿ ವಿವರಿಸುವರು. ಸುಮಾರು ೩೦ ವರ್ಷಗಳ ಹಿಂದೆ ಇವರು ರಾಜಧಾನಿಯ ಭಕ್ತಿ ಸಂಕಲ್ಪನ' ದೇವಸ್ಥಾನದಲ್ಲಿ ಬಿಡಾರ ಮಾಡಿ ನೂರಾರು ಜನರಿಗೆ ಧರ್ಮೋಪದೇಶಗಳನ್ನು ಮಾಡುತ್ತಿದ್ದರಲ್ಲದೆ ಅನೇಕ ಸಾರ್ವಜನಿಕ ಕಾರ್ಯಕ್ರಮಗಳಲ್ಲಿಯೂ ಸಹಾ ಭಾಗವಹಿಸಿ ಧರ್ಮಮಾರ್ಗವನ್ನು ತಿಳಿಸುತ್ತಿದ್ದರು.

ಈಗಲೂ ಪ್ರತಿದಿನವೂ ಅವರ ಬಳಿಗೆ ಅನೇಕ ಆಸ್ತಿಕ ಮಹನೀಯರುಗಳು ಹೋಗಿ ಅವರ ಹಿತೋಪದೇಶಗಳನ್ನು ಕೇಳುತ್ತಿರುವರು. ಅವರು ಬಿಡಾರ ಮಾಡಿರುವ ಸ್ಥಳದಲ್ಲಿ ಪಾರಿಸಭೆ ಸುವರು ಹೆಚ್ಚಿನ ನೈರ್ಮಲ್ಯ ಮತ್ತು ನೀರು, ದೀಪಗಳ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಕೋರಲಾಗಿದೆ.

### ಹರಿಕಥೆ

ವಾಣಿವಿಲಾಸ ರಸ್ತೆ ಪಕ್ಕದ ಸೀತಾರಾಮಯ್ಯರ ರಸ್ತೆಯಲ್ಲಿರುವ ಕಟ್ಟೆಗೆ ಜೋಡಿಲಿಂಗಣ್ಣನವರ ರಾಮ ಮಂದಿರದಲ್ಲಿ ಈ ರಾತ್ರಿ ೯ ಘಂಟೆಗೆ ಶ್ರೀ ಕೆ ಎಸ್ ಭಾಗವತರಿಂದ "ಶಶಿರೇಖಾ ಪರಿಣಯ" ಎಂಬ ಹರಿಕಥೆಯು ನಡೆಯುವುದು.

### ಆಕೃನವರ ಜಯಂತೀ ಮಹೋತ್ಸವ

ರಾಜಧಾನಿಯ ಅಕ್ಕನ ಬಳಗದವರ ಪದ್ಧತಿಯಂತೆ ಇದೇ ಶ್ರೀಮದ್ವಿಕೃತಿ ನಾಮ ಸಂವತ್ಸರದ ಚೈತ್ರಶುದ್ಧ ಪೂರ್ಣಿಮಾ (ತಾ॥ ೨೮-೪-೫೦) ನೇ ಭಾನುವಾರ ಶ್ರೀ ಮಹಾದೇವಿ ಅಕ್ಕನವರ ಜಯಂತ್ಯುತ್ಸವವನ್ನು ಮೈಸೂರು ವಾಣೀವಿಲಾಸ ರಸ್ತೆಯಲ್ಲಿರುವ ಶ್ರೀಮಾನ್ ಸಾಹುಕಾರ್ ಸಿದ್ಧಲಿಂಗಯ್ಯನವರ ಕನ್ಯಾ ಪಾಠಶಾಲೆಯಲ್ಲಿ ನೆರವೇರಿಸಿರುತ್ತಾರೆ. ನಿನ್ನೆ ಸಂಜೆ ಸುಮಾರು ... ಅಂಗಲರವರಿಂದ ... ಪುರಾಣವಾದನರ ... ಏರ್ಪಡಿದ್ದ ... [illegible] ...ಯವರಿಂದ ವಚನ ಗಾಯನವನ್ನು ... ಸಂಜೆ ಶ್ರೀಮತಿ ನಾಗಮ್ಮನವರಿಂದ ... ವಾಚನವನ್ನೂ ಏರ್ಪಡಿಸಲಾಗಿತ್ತು ... ಮಹಿಳೆಯರೂ ಮತ್ತು ಮಹನೀಯರೂ ಅಧಿಕ ಸಂಖ್ಯೆಯಲ್ಲಿ ... ಶ್ರೀ ನುಹಾದೇವಿಯ ... [illegible]

## ಭಾನುವಾರಗಳಲ್ಲಿ ಟಪಾಲು ಬಟವಾಡೆ

ಬರುವ ತಿಂಗಳು ೧ನೇ ತಾರೀಖಿನಿಂದ ಭಾನುವಾರಗಳಲ್ಲಿ ಅಂಚೆಯನ್ನು ಲವಾಜಿಸುವ ಮತ್ತು ಬಟವಾಡೆ ಮಾಡುವ ವ್ಯವಸ್ಥೆಗಳ ಬಗ್ಗೆ ನೆನ್ನೆ ದಿನ ನಂಜನಗೂಡಿನ ಪೋಸ್ಟ್ ಮಾಸ್ಟರ್ ಜನರಲ್ಲರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಮದರಾಸ್ ಪೋಸ್ಟಲ್ ಸರ್ಕಲ್ಲಿಗೆ ಸೇರಿದ ಎಲ್ಲಾ ಜಿಲ್ಲಾ ಕೇಂದ್ರಗಳ ಅಂಚೆ ಕಛೇರಿಗಳಲ್ಲಿ ಭಾನುವಾರಗಳನ್ನು ಟಪಾಲು ಹಂಚುವುದೆಂದು ತೀರ್ಮಾನಿಸಲಾಗಿದೆ. ಅಂಚೆ ಕಾಗದಗಳಿಗೆ ಒಂದು ಆಣೆ ಲೇಟ್ ಫೀ ಸ್ಟಾಂಪನ್ನು ಅಂಟಿಸಬೇಕೆಂದೂ ಮತ್ತು ಎಕ್ಸ್‌ಪ್ರೆಸ್ ಡೆಲಿವರಿಗೆ ಮತ್ತೆ ಎರಡು ಆಣೆ ಸ್ಟಾಂಪನ್ನು ಹೆಚ್ಚಾಗಿ ಅಂಟಿಸಬೇಕೆಂದೂ ಸೂಚಿಸಲಾಗಿದೆ.

### ಲಾಯಿಕ್ ಅಲಿ ಮುಂತಾದವರ ವಿಚಾರಣೆ

ಲಾಯಿಕ್ ಅಲಿ ಮಂತ್ರಿ ಮಂಡಲದವರ ಮೇಲೆ ಸ್ಪೆಷಲ್ ಟ್ರಿಬ್ಯೂನಲ್ ಸ್ಪೆಷಲ್ ಸ್ಥಾನದಲ್ಲಿ ೨೦ನೇ ತಾರೀಖು ಮೊಕದ್ದಮೆಯನ್ನು ಹೂಡಲಾಗುವುದು. ಈ ಮೊಕದ್ದಮೆಯಲ್ಲಿ ಮಾಜಿ ಪೋಲೀಸ್ ಡೈರೆಕ್ಟರ್ ಜನರಲ್ಲಾದ ನವಾಬ್ ದೀನ್ ಯಾರ್ ಜಂಗ್ ಬಹದ್ದೂರ್ ಮತ್ತು ... ಹಿಂದಿನ ಮಂತ್ರಿಗಳೂ ಸಹ ಆಪಾದಿತರಾಗಿರುವರು.

### ಶಾಂತ ವಾತಾವರಣವನ್ನು ಕಲಕಬಾರದು

ಭಯ ಮತ್ತು ಆತಂಕ ಪೂರಿತವಾಗಿರುವ ಇಂದಿನ ಪರಿಸ್ಥಿತಿಯನ್ನು ಇನ್ನೂ ಬಿಗಡಾಯಿಸಬಾರದು. ಜನರು ಪ್ರಯತ್ನ ಪೂರ್ವಕವಾಗಿ ಕೋಮುವಾರು ದ್ವೇಷವನ್ನು ದೂರ ಮಾಡಲು. ಜನರು ಕಾಂಗ್ರೆಸ್ಸಿನ ತತ್ವಗಳನ್ನು ಪರಿಪಾಲಿಸಬೇಕೆಂದೂ ... [illegible] ... ನೂಚಿಸಲಾಯಿತು.

### ಮೈಸೂರು ಬ್ಯಾಂಕಿನ ಅಧ್ಯಕ್ಷರು

ಕಳೆದ ೫ನೇ ತಾರೀಖು ಸೇರಿದ ... [illegible] ... ಸರ್ವಾನುಮತದಿಂದ ... [illegible]

## ಎರಡು ವರ್ಷಗಳಲ್ಲಿ ಇಬ್ಬರು ನ್ಯಾಯಾಧೀಶರ ನಿವೃತ್ತಿ

### ಗೋಪಾಲರಾವ್ ವಿಚಾರಣಾ ಸಮಿತಿ ವಿವಿಧೋದ್ದೇಶ ಸಹಕಾರ ಸಂಘವಾಯಿತು

ಸಂಕೀರ್ಣ ಸಮ್ಮೇಳನದ ಅಧ್ಯಕ್ಷರ ಟೀಕೆ

ಶಿವಮೊಗ್ಗ ೮

ಈ ದಿನ ಇಲ್ಲಿನ ಸಾಹಿತ್ಯ ಮಂದಿರದಲ್ಲಿ ಸಂಸ್ಥಾನದ ವಕೀಲರುಗಳ ಹದಿನೆಂಟನೆಯ ಸಮ್ಮೇಳನವು ಆರಂಭವಾಯಿತು. ಶ್ರೀ ಮಿರ್ಲೆ ಲಕ್ಷ್ಮೀನಾರಾಣಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಶಿವಮೊಗ್ಗ ಜಿಲ್ಲೆಯವರನ್ನು ಅಭಿನಂದಿಸಿದರು. ಶಾಯುಮ್ಮ ಪ್ರಾಂತದವರಂತೆ ಅವರೂ ಸಹ ನಮ್ಮ ಸ್ವಾತಂತ್ರ್ಯವನ್ನು ಸಂರಕ್ಷಿಸುತ್ತಿರುವರೆಂದು ಹೇಳಿದರು. ಸಂಸ್ಥಾನದ ಹೈಕೋರ್ಟಿನ ನ್ಯಾಯಾಧೀಶರನ್ನು ನಿವೃತ್ತಿ ಮಾಡಿದಾಗ, ಮೊಟ್ಟಮೊದಲು ಪ್ರತಿಭಟಿಸಿದವರಾಗಿ ಶಿವಮೊಗ್ಗದವರನ್ನು ಅಭಿನಂದಿಸಿದರು.

ಮುಂದುವರಿದು ಅಧ್ಯಕ್ಷರು ಈ ರೀತಿ ನುಡಿದರು - ಭಾರತದ ರಿಪಬ್ಲಿಕ್ಕಿನ ಸ್ಥಾಪನೆಯಿಂದ ಸಂಸ್ಥಾನದ ಪ್ರಜೆಗಳ ಅಹವಾಲುಗಳನ್ನು ಸುಪ್ರೀಂ ಕೋರ್ಟಿಗೆ ಕೊಂಡೊಯ್ಯಲು ಸಾಧ್ಯವಾಗಿದೆ.

ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದಾಗಿ ಕಳೆದ ಸಮ್ಮೇಳನದಲ್ಲಿ ನ್ಯಾಯಾಂಗ ಸಚಿವರು ಇತ್ತ ಭರವಸೆಯನ್ನು ಕಾರ್ಯಗತವಾಗಿಸಲು ವಿಳಂಬವಾಗಿರುವುದು ಪ್ರಭುತ್ವದವರ ... [illegible]

ಕಾರಣವನ್ನೂ ಸಹ ಕೊಡದೆ ವರ್ಷ ಕೆಲ್ಪಟ್ಟರಂತೆ ಇಬ್ಬರು ಶ್ರೇಷ್ಠ ನ್ಯಾಯಾಧೀಶರನ್ನು ನಿವೃತ್ತಿಗೊಳಿಸಲಾಗಿದೆ. ಈ ಕಾಲದಲ್ಲಿ ... [illegible] ... ಸಂಸ್ಥಾನದಲ್ಲಿ ಇರುವ ಸಾಧ್ಯವಿಲ್ಲವೆಂಬ ಒಬ್ಬ ನ್ಯಾಯಾಧೀಶರ ಅಭಿಪ್ರಾಯವು ಪ್ರಶ್ನಾರ್ಹ ... [illegible] ... ನುಡಿದರು.

ಇತ್ತೀಚೆಗೆ ನಿವೃತ್ತಿಗೊಳಿಸಲ್ಪಟ್ಟ ನ್ಯಾಯಾಧೀಶರ ... [illegible]

## ಬೊಂಬಾಯಿ ಕಾರ್ಪೋರೇಷನ್ನಿನ ಮೇಲೆ ವರಮಾನ ತೆರಿಗೆ

ಬೊಂಬಾಯಿ ಕಾರ್ಪೋರೇಷನ್ನಿನವರು ಅಲ್ಲಿನ ಅಕ್ಕಪಕ್ಕದ ಪ್ರದೇಶಗಳು ಮತ್ತು ಪುರಸಭೆಗಳವರಿಗೆ ಒದಗಿಸುತ್ತಿರುವ ನೀರಿನ ಸರಬರಾಜಿನಿಂದ ಸಂಪಾದಿಸುತ್ತಿರುವ ಮೊಬಲಗಿನ ಮೇಲೆ ವರಮಾನ ತೆರಿಗೆಯನ್ನು ವಿಧಿಸಲಾಗಿದೆಯೆಂದು ತಿಳಿದುಬಂದಿದೆ.

### ಫ್ರೆಂಚ್ ರಾಕ್ಸ್ ಹೆಸರಿನ ಬದಲಾವಣೆ

ಮಂಡ್ಯ ಜಿಲ್ಲೆಯ ಫ್ರೆಂಚ್‌ರಾಕ್ಸ್ ಪಟ್ಟಣದ ಹೆಸರನ್ನು ಪಾಂಡವಪುರವೆಂದು ಬದಲಾಯಿಸಲಾಗಿದೆ. ಪಾಂಡವರು ತಮ್ಮ ವನವಾಸದ ಕಾಲದಲ್ಲಿ ಇಲ್ಲಿ ಇದ್ದರೆಂದು ಪ್ರತೀತಿ ಇದೆ.

### ಬೆಂಗಳೂರಿಗೆ ೫೦೦ ಜನ ವಕೀಲರ ತಂಡ

ಸುಪ್ರೀಂ ಕೋರ್ಟಿನ ಶ್ರೀ ಪತಂಜಲಿ ಶಾಸ್ತ್ರಿ ನ್ಯಾಯಾಧೀಶರು ನಾಳೆ ಬೆಂಗಳೂರಿಗೆ ಬರುವ ಸಂದರ್ಭದಲ್ಲಿ ಸಂಸ್ಥಾನದ ನಾನಾ ಭಾಗಗಳಿಂದ ಸುಮಾರು ೫೦೦ ಜನ ವಕೀಲರುಗಳು ಅಲ್ಲಿಗೆ ಬರುವರೆಂದು ಹೇಳಲಾಗಿದೆ.

೦ನೆನ್ನೆ ದಿನ ಟಿಕೇಟಿಲ್ಲದೆ ಅರಸೀಕೆರೆಗೆ ಪ್ರಯಾಣ ಮಾಡಿದ ೧೧ ಮಂದಿಗೆ ಹಾಸನದ ಮ್ಯಾಜಿಸ್ಟ್ರೇಟರು ತಲಾ ರೂ ೬-೫-೦ ಜುಲ್ಮಾನೆ, ತಪ್ಪಿದರೆ ೮ ದಿನ ಸಜಾವನ್ನೂ ಮತ್ತು ೧೧ ಜನ ಹೆಂಗಸರಿಗೆ ಕೋರ್ಟು ಮುಗಿಯುವವರೆಗೆ ಸಜವನ್ನೂ ವಿಧಿಸಿದರು.

ವೃತ್ತಿಯೂ ಸಹ ಪ್ರಾಪ್ತವಾಯಿತು.

ಒಂದು ಸಣ್ಣ ಬೀದಿ ಜಗಳದ ವಿಚಾರಣೆಯಲ್ಲಿ ಒಬ್ಬ ಚಿಕ್ಕ ಮ್ಯಾಜಿಸ್ಟ್ರೇಟರೂ ಸಹ ಅನುಸರಿಸದಿರುವ ಮಾರ್ಗದಿಂದ ವಿಚಾರಣೆಯನ್ನೂ ಮಾಡದೇ ಅವರನ್ನು ತೆಗೆದುಹಾಕಲಾಯಿತು.

ಗೋಪಾಲರಾವ್ ವಿಚಾರಣಾ ಸಮಿತಿಯ ಪ್ರಕರಣವು ಸರ್ಕಾರಕ್ಕೂ, ನ್ಯಾಯನಿರ್ಣಯಕ್ಕೂ ಇರುವ ವಿಪರೀತ ಸಂಬಂಧಕ್ಕೆ ಮತ್ತೊಂದು ನಿದರ್ಶನ. ಸಮಿತಿಯು ಸದುದ್ದೇಶದಿಂದಲೇ ನೇಮಿಸಲ್ಪಟ್ಟಿತು. ಆದರೆ ಸುಪ್ರೀಂ ಮತ್ತು ಹೈಕೋರ್ಟುಗಳಿಗೆ ಮಾತ್ರ ಇರುವ ಅಧಿಕಾರಗಳನ್ನು ವಹಿಸಿಕೊಂಡು ರಿಟ್ ಮುಂತಾದ ವಿಷಯಗಳ ನಿವಾರಣೆಗೆ ಕೈಹಾಕಿ, ಸಂಸ್ಥಾನ ಮತ್ತು ಹೊರಗಡೆಯವರ ಗಮನವನ್ನು ಈ ಸಮಿತಿ ಸೆಳೆಯಿತು. ಈ ಸಮಿತಿಯು ಹೈಕೋರ್ಟಿಗೆ ಬದ್ಧವಾಗುವುದಿಲ್ಲವೆಂದು ಹೇಳಲಾಯಿತು. ಈ ಸಮಿತಿಯು ಒಂದು ಜಂಟಿ ರೆವಿನ್ಯೂ, ದಿವಾನಿ, ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಸ್ಥಾನವಾಗಿ ತನ್ನನ್ನು ತಾನೇ ನಿರ್ಮಿಸಿಕೊಂಡಿತು. ಅದರಿಂದ ಇದು ಒಂದು ವಿಧವಾದ ವಿವಿಧೋದ್ದೇಶ ಸಹಕಾರ ಸಂಘವಾಯಿತು. ಇದು ಪ್ರಪಂಚದ ಯಾವ ಭಾಗದಲ್ಲೂ ನಡೆಯದ ಘಟನೆ.

ಈಗ ಹೊಸ ಸಂವಿಧಾನದ ಮೂಲಭೂತ ಹಕ್ಕುಗಳು ಘೋಷಿಸಲ್ಪಟ್ಟಿರುವುದರಿಂದ ಇಂತಹ ಸಮಿತಿಗಳಿಗೆ ನಾಗರಿಕರನ್ನು ಪ್ರಶ್ನಿಸಲು ಹೈಕೋರ್ಟು ಸಾಮರ್ಥ್ಯ ವೃದ್ಧಿಯಾಗಿದೆ. ಸರ್ಕಾರ ಮತ್ತು ನ್ಯಾಯಾಂಗಗಳಿಗೆ ಸೌಹಾರ್ದವಿರಬೇಕು. ನ್ಯಾಯ ಇಲಾಖೆ ನೌಕರಿಗೆ ವಕೀಲರ ವೃಂದದಿಂದಲೇ ನೇಮಿಸಬೇಕು. ... [illegible] ... ವಕೀಲರು ... [illegible]

## ಬೌದ್ಧರ ಗುಹೆಯಲ್ಲಿ ಗಾಂಧಿಜಿ ಸ್ಮೃತಿ ಮಂದಿರ

ಬುದ್ಧನ ಶಿಷ್ಯರು ೨ ಸಾವಿರ ವರ್ಷಗಳ ಹಿಂದೆ ತಪಸ್ಸು ಮಾಡಿದರೆಂದು ಹೇಳಲಾದ, ಮತ್ತು ಬೊಂಬಾಯಿಗೆ ೩೦ ಮೈಲಿ ದೂರವಿರುವ ಕಾಡಿನ ಕನೇರಿ ಗುಹೆಯಲ್ಲಿ ಮೊನ್ನೆ ದಿನ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಮಹಾತ್ಮ ಗಾಂಧಿಯವರ ಸ್ಮೃತಿ ಮಂದಿರದ ಆರಂಭೋತ್ಸವವನ್ನು ನೆರವೇರಿಸಿದರು. ಇಲ್ಲಿ ಗಾಂಧಿಯವರ ಸ್ಮಾರಕಕ್ಕಾಗಿ ಯಾವ ಪ್ರತಿಮೆಯನ್ನೂ ಇಡಲಾಗುವುದಿಲ್ಲವೆಂದೂ, ಗಾಂಧಿಜಿಯವರ ಸ್ಮೃತಿಗಾಗಿ ಇಲ್ಲಿ ಮೌನ ಧ್ಯಾನಕ್ಕಾಗಿರುವುದೆಂದೂ ಅಧ್ಯಕ್ಷರು ಹೇಳಿದರು.

## ಉರಿಯುದ ಬೆಂಕಿ ಕಡ್ಡಿ

ಕೆನಡಾದ ವಿಜ್ಞಾನಿಗಳೊಬ್ಬರು ಉರಿಯದ ಒಂದು ಹೊಸ ವಿಧದ ಬೆಂಕಿ ಕಡ್ಡಿಯನ್ನು ಕಂಡು ಹಿಡಿದಿರುವರೆಂದು ಹೇಳಲಾಗಿದೆ. ಬೆಂಕಿಪೆಟ್ಟಿಗೆಯ ಮೇಲೆ ಇದನ್ನು ಗೀಚಿದರೆ ಒಂದು ಸಿಗರೇಟನ್ನು ಹತ್ತಿಸುವಷ್ಟು ಬೆಂಕಿಯು ಅದರಲ್ಲಿ ಉತ್ಪನ್ನವಾಗುವುದೆಂದೂ, ಇದಕ್ಕಾಗಿ ಒಂದೇ ಕಡ್ಡಿಯನ್ನು ಮೇಲಿಂದ ಮೇಲೆ ಉಪಯೋಗಿಸಬಹುದೆಂದೂ ಹೇಳಲಾಗಿದೆ.

## ಐ. ಎ. ಎ. ಯುವರು ಸೈನ್ಯಗಳಿಗೆ ಸೇರಬಹುದಾಗಿದೆ

ಐ. ಎ. ಎ. ದವರು ಭಾರತದ ಸೈನ್ಯಗಳಲ್ಲಿ ಸೇರಲು ಅವಕಾಶವೀಯಲಾಗುವುದೆಂದು ಸರ್ದಾರ್ ಪಟೇಲರು ಪಾರ್ಲಿಮೆಂಟಿನಲ್ಲಿ ಮೊನ್ನೆ ತಿಳಿಸಿದರು.

## ನಿರಾಶ್ರಿತರ ಹಡಗಿನ ಪ್ರಯಾಣಕ್ಕೆ ಪೂ॥ ಬಂಗಾಳದ ತಡೆ

ಪೂರ್ವ ಬಂಗಾಳದ ಬಾರಿಸಾಲ್ ಜಿಲ್ಲೆಯ ನಿರಾಶ್ರಿತರನ್ನು ತುಂಬಿಕೊಂಡು ಹೊರಡಬೇಕಾಗಿದ್ದ ಹಡಗೊಂದನ್ನು ತಡೆದು ನಿಲ್ಲಿಸಲಾಗಿದೆ. ಈ ಬಗ್ಗೆ ಭಾರತದ ಡೆಪ್ಯುಟಿ ಹೈಕಮಿಷನರರು ಪೂರ್ವ ಬಂಗಾಳ ಸರ್ಕಾರದೊಡನೆ ವ್ಯವಹರಿಸುತ್ತಿದ್ದಾರೆ.

## ಲಕ್ನೊ ಬ್ಯಾಂಕಿಗೆ ಬೆಂಕಿ ಇಡುವ ಪ್ರಯತ್ನ

ಕಳೆದ ಮಂಗಳವಾರದಿಂದ ಶಾಂತಿಯು ಮರಳಿದ್ದ ಲಕ್ನೊ ನಗರದಲ್ಲಿ ಕಳೆದ ೫ನೇ ತಾರೀಖು ಅಲ್ಲಿನ ಬ್ಯಾಂಕೊಂದಕ್ಕೆ ಬೆಂಕಿ ಇಡುವ ಪ್ರಯತ್ನ ನಡೆಯಿತು. ಕರ್ಫ್ಯೂವನ್ನು ಪುನಃ ಹಾಕಲಾಗಿದೆ.

## ಚಿರಾಲಾ ಬಳಿ ಕಮ್ಯೂನಿಸ್ಟರ ಮೇಲೆ ಪೋಲೀಸರ ಗುಂಡು

ಚಿರಾಳದ ಬಳಿ ಇರುವ ಗೋರನ್ತಲಪುರದಲ್ಲಿ ಕಮ್ಯೂನಿಸ್ಟರಿಗೂ ಪೋಲೀಸರಿಗೂ ನಡೆದ ಹೊಡೆದಾಟದಲ್ಲಿ ಆರ್ಭಟಿಸ್ಟ ಕೈದಿಗಳನ್ನು ಇರಿಯಲಾಯಿತೆಂದೂ, ಪೋಲೀಸರು ಗುಂಡು ಹಾರಿಸಿದರೆಂದೂ ವರದಿಯಾಗಿದೆ.

೦ ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಮಧ್ಯಾಹ್ನ ೩-೩೦ ಘಂಟೆಗೆ ಶ್ರೀ ಎಂ. ಎಲ್. ನಾರಾಯಣ ದಾಸರಿಂದ "ರಾಜಸೂಯ ಯಾಗ" ಎಂಬ ಹರಿಕಥೆಯು ನಡೆಯುವುದು.

## ಮಲಯಾ ಯುದ್ಧಕ್ಕೆ ಕಾಮನ್‌ವೆಲ್ತಿನ ಸಹಾಯ

ಮಲಯಾದಲ್ಲಿ ಹೆಚ್ಚುತ್ತಿರುವ ದಂಗೆಕೋರರ ಕದನಗಳನ್ನು ಹತಬಂದಿಗೆ ತರುವುದಕ್ಕಾಗಿ ಕಾಮನ್‌ವೆಲ್ತಿನ ಸೈನ್ಯಗಳ ಸಹಾಯವನ್ನು ಬ್ರಿಟನ್ನು ಪಡೆದುಕೊಳ್ಳುತ್ತದಾಗಿ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಕಾಲೊನಿಯಲ್ ಮಂತ್ರಿಗಳು ತಿಳಿಸಿದ್ದಾರೆ.

## ಮನುಷ್ಯನ ಹೊಟ್ಟೆಯಲ್ಲಿ ಖರ್ಜೂರದ ಗಿಡ

ಫ್ರಾನ್ಸಿನ ಗಣಿ ಕೆಲಸಗಾರನೊಬ್ಬನಿಗೆ ಬರುತ್ತಿದ್ದ ಹೊಟ್ಟೆನೋವಿಗಾಗಿ ಅವನಿಗೆ ಶಸ್ತ್ರ ಚಿಕಿತ್ಸೆ ನಡೆಸಲಾಯಿತು. ಆಗ ಅವನ ಹೊಟ್ಟೆಯಲ್ಲಿ ಆರು ಅಂಗುಲ ಉದ್ದದ ಖರ್ಜೂರದ ಗಿಡವು ಬೆಳೆದಿದ್ದುದು ಪತ್ತೆಯಾಯಿತು. ಕೆಲವು ದಿವಸಗಳ ಹಿಂದೆ ಅವನು ನುಂಗಿದ ಖರ್ಜೂರದ ಬೀಜವು ಹೊಟ್ಟೆಯಲ್ಲಿ ಮೊಳೆತು ಗಿಡ ಬೆಳೆದಿತ್ತೆಂದು ಹೇಳಲಾಗಿದೆ.

## ಮಹಿಳಾ ಖೈದಿ ಮತ್ತು ವಾರ್ಡರುಗಳಿಗೆ ಹೊಡೆದಾಟ

ಕಾಶಿಯ ಸೆಂಟ್ರಲ್ ಜೈಲಿನಲ್ಲಿ ಕಳೆದ ಸೋಮವಾರ ಮಹಿಳಾ ಕಮ್ಯೂನಿಸ್ಟ್ ಬಂದಿಗಳಿಗೂ, ಜೈಲು ವಾರ್ಡರುಗಳಿಗೂ ಹೊಡೆದಾಟವಾಗ ಮೂವರು ಮಹಿಳಾ ವಾರ್ಡರುಗಳು, ಮೇಟ್ರನ್ ಮತ್ತು ಡೆಪ್ಯುಟಿಗಳಿಗೂ ಏಟು ಬಿದ್ದಿರುವುದಾಗಿ ಗೊತ್ತಾಗಿದೆ.

### ಕೂಲಿಗಾರರ ಸಮ್ಮೇಳನ

ಈ ತಿಂಗಳು ೧೫ ಮತ್ತು ೧೬ನೇ ತಾರೀಖುಗಳಲ್ಲಿ ಬೆಂಗಳೂರಿನ ಕಲಾಸಿಪಾಳ್ಯದಲ್ಲಿ ಪ್ರಾಂತೀಯ ಕೂಲಿಗಾರರ ಸಮ್ಮೇಳನವು ಅಖಿಲ ಭಾರತ ವಾಣಿಜ್ಯ ಸಂಘದ ಅಧ್ಯಕ್ಷರಾದ ಶಾಂ. ಚಕ್ರವರ್ತಿ ಚೆಟ್ಟಿ ಯಾರ್ ಅವರ ಅಧ್ಯಕ್ಷತೆಯಲ್ಲಿ ಜರುಗುವುದು. ಕೂಲಿಗಾರರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುತ್ತಿರುವ ಎಲ್ಲರೂ ಸಹಕರಿಸಬೇಕೆಂದು ಕೇಳಲಾಗಿದೆ. ಈ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಲು ಇಚ್ಛಿಸುವವರು ಗಂಗಾಧರ ನಾಯಕರಿಗೆ ತಮ್ಮ ಹೆಸರು ಮತ್ತು ವಿಳಾಸವನ್ನು ಕೊಡಬೇಕೆಂದೂ ಸ್ವಯಂ ಸೇವಕರಾಗಲು ಮತ್ತು ದವಾಖಾನೆಗಳನ್ನು ಇಟ್ಟಿರುವವರು ಕೂಡಲೆ ಸ್ವಾಗತ ಸಮಿತಿಗೆ ಕಳುಹಿಸಬೇಕೆಂದೂ ತಿಳಿಸಲಾಗಿದೆ. ಸಮ್ಮೇಳನವು ಯಶಸ್ವಿಯಾಗಲು ಕೂಲಿಗಾರರು ಧನ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

೦ ಈ ದಿನ ರಾತ್ರಿ ೯ ಘಂಟೆಗೆ ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿ ಟಿ ನಾರಾಯಣರಾಯರ ಮನೆ ಮುಂಭಾಗದಲ್ಲಿ ಎಸ್. ಕೆ. ಆರ್. ಭಾಗವತರಿಂದ "ಸೀತಾ ಕಲ್ಯಾಣ" ಎಂಬ ಹರಿಕಥೆ ನಡೆಯುತ್ತೆ.


ಫೋನ್ ನಂ. 590

ಮೈಸೂರು ಧನ್ವಂತರಿ ರಸ್ತೆಯಲ್ಲಿ ಇರುವ

**ಇಂದ್ರಭವನ**

ದಲ್ಲಿ

ಭಾನುವಾರ ಮಧ್ಯಾಹ್ನದ ವಿಶೇಷ ರೀತಿಯ ಸವಿಯೂಟವನ್ನು ಉಂಡು ಆನಂದಿಸಿರಿ.

**ರಣಜಿತ್ ಟಾಕೀಸ್**

**7-4-50ರಿಂದ : ಅಮೋಘ ಆರಂಭ**

ದಿನವಹಿ ಮೂರು ಪ್ರದರ್ಶನಗಳು

ಬಹಳ ದಿವಸಗಳಿಂದ ನೋಡಬೇಕೆಂದು ಕಾತುರಪಡುತ್ತಿದ್ದ ಅಮೂಲ್ಯವಾದ ಸಂಗೀತಮಯ ಹಿಂದಿ ಚಿತ್ರ

**- ಪಾರಸ್ -**

ಭೂಮಿಕೆ:- ಕಾಮಿನಿ ಕೌಶಲ್ಯ, ಮಧುಬಾಲಾ, ಸುಲೋಚನ ಚಟರ್ಜಿ, ರೆಹಮಾನ್, ಗೋಪ್ ಮತ್ತು ಸಪ್ರೂ

ಬೆಳಗಿನ ಪ್ರದರ್ಶನ 7-4-50 ರಿಂದ 3 ದಿನಗಳು 10-30 ಘಂಟೆಗೆ

**ಚಾಂದನಿ**

**ಚಾಮುಂಡೇಶ್ವರೀ ಟಾಕೀಸ್**

7-4-50ರಿಂದ ಅಮೋಘ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

**ದೌಲತ್ ಪ್ರ** [illegible]

(ಹಿಂದಿ)

ಭೂಮಿಕೆ - ಸುರೇಂದ್ರ ಮತ್ತು ಮಧುಬಾಲಾ

Morning Shows at

**CHAMUNDESWARI TALKIES**

From 7th Friday

For 3 days : at 10-30 a.m

Paramount Film's Hilarious Comedy

**Road to Singapore**

Featuring:- Dorothy Lamour, Bob Hope and Bing Crosby

- Next Morning Show

UNION PACIFIC

**ಗಾಯತ್ರೀ ಟಾಕೀಸ್**

ದಿನವಹಿ 3 ಪ್ರದರ್ಶನಗಳು

9-4-50 ರಿಂದ 2 ದಿನಗಳು ಮಾತ್ರ

[illegible]

**ರೋಗ್ಸ್ ರೆಜಿಮೆಂಟ್**

ROGUE'S REGIMENT

[illegible]

- ಮುಂದಿನ ಆಕರ್ಷಣೆ -

**ಬ್ಯೂಟಿಫುಲ್ ಬ್ಲಾಂಡ್ ಫ್ರಂ ಬ್ಯಾಷ್‌ಫುಲ್ ಬೆಂಡ್**

ಬೆಳಗಿನ ಪ್ರದರ್ಶನ - ನಾಳೆ ಕಡೇ ದಿನ

**ಕ್ಯಾಪ್ಟನ್ ಬ್ಲಡ್**

ANNOUNCEMENT

**LAKSHMI THEATRE,**

MYSORE.

We have the pleasure to announce that we are going to screen only our English Programmes from 15th April 1950.

Watch for the Opening Picture.

NEW MANAGEMENT.

**ರಾಜಕಮಲ್ ಟಾಕೀಸ್**

**7-4-50 ರಿಂದ**

ಅಮೋಘ ೧೩ನೇ ವಾರ

ದಿನವಹಿ 2 ಪ್ರದರ್ಶನಗಳು

**ಜೀವನ**

—:ಭೂಮಿಕೆ:—

ವೈಜಯಂತಿಮಾಲಾ ಟಿ ಆರ್ ರಾಮಚಂದ್ರ, ಲಲಿತ-ಪದ್ಮಿನಿ

Morning Shows

From 7-4-50 For 4 days

**Let us Live a Little**

With:- Heddy Lamarr

Robert Cummings,

Anna Sten.


Edited, printed and published by [illegible] Nagaraian at Sadhvi Press, D Subbiah Road, Mysore

## ಹರಿಜನರ ಅಭಿವೃದ್ಧಿ

ಮೈಸೂರು ೯

ರಾಷ್ಟ್ರೀಯ ವಾರದ ಅಂಗವಾಗಿ ಸಂಸ್ಥಾನದ ಹರಿಜನ ಸೇವಕ ಸಂಘದವರು ಕೈಗೊಂಡಿರುವ ಕಾರ್ಯಕ್ರಮದ ಪ್ರಕಾರ ಸಂಘದ ಅಧ್ಯಕ್ಷರಾದ ಶ್ರೀ ಟಿ. ಆರ್. ರಾಮಯ್ಯನವರೂ, ಕಾರ್ಯದರ್ಶಿಗಳಾದ ಸ್ವಾಮಿ ವಿಶ್ವಾನಂದಜೀಯವರೂ, ನಿನ್ನೆ ನೈಟ್ಟೂರಿಗೆ ಬಂದು ಇಲ್ಲಿನ ಅಧಿಕಾರಿಗಳೊಡನೆ ಭೇಟಿಯಿತ್ತು ಅಲ್ಲಿರುವ ವಿವಿಧ ಕೇರಿಗಳಲ್ಲಿ ವಾಸಿಸುವ ಹರಿಜನರ ಸ್ಥಿತಿಗತಿಗಳನ್ನು ಪರಿಶೀಲನೆ ಮಾಡಿದರು. ಅವರಿಗೆ ಸಿಗುವ ಸ್ಥಳವಸತಿ, ದೀಪ, ಚರಂಡಿ ವ್ಯವಸ್ಥೆ ಮುಂತಾದವುಗಳ ಬಗ್ಗೆ ಇರುವ ಅನಾನುಕೂಲಗಳನ್ನು ತಿಳಿದುಕೊಂಡರು. ಸಂಜೆ ಕಾಳಮ್ಮನ ದೇವಸ್ಥಾನದಲ್ಲಿ ಏರ್ಪಡಿಸಿದ್ದ ಭಜನೆ, ಉಪನ್ಯಾಸಗಳಿಂದ ನಂತರ ಶ್ರೀ ಕೆ. ಶಾಸ್ತ್ರಿಯವರು ಅತಿಥಿಗಳನ್ನು ಪರಿಚಯ ಮಾಡಿಕೊಟ್ಟು ಹರಿಜನರ ಏಳಿಗೆಗಾಗಿ ಇಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಟಿ ಆರ್. ರಾಮಯ್ಯನವರೂ, ಸ್ವಾಮಿ ವಿಶ್ವಾನಂದಜೀಯವರೂ ಭಾಷಣ ಮಾಡಿ ಹರಿಜನರಿಗೂ ಇತರರಿಗೂ ಹೆಚ್ಚು ಹೆಚ್ಚಾದ ಸೌಹಾರ್ದವನ್ನು ಬೆಳೆಸುವುದೇ ಮಹಾತ್ಮರ ಮುಖ್ಯೋದ್ದೇಶವಾಗಿತ್ತೆಂದು ಹೇಳಿ ಮಹಾತ್ಮರ ಧ್ಯೇಯವನ್ನು ಸಾಧಿಸುವುದರಲ್ಲಿ ಸಕಲರೂ ನೆರವಾಗಬೇಕೆಂದು ಕೋರಿದರು. ಶ್ರೀಗಳಾದ ಲಿಂಗಯ್ಯ, ರಾಮಕೃಷ್ಣಯ್ಯ ಮತ್ತು ಕೆ. ಸಿದ್ದಯ್ಯನವರು ಹರಿಜನರಿಗೆ ಇರುವ ಕುಂದುಕೊರತೆಗಳನ್ನು ವಿವರಿಸಿದರು. ಧನ್ಯವಾದಗಳ ನಂತರ ಮಂಗಳಾರತಿಯೊಡನೆ ಸಮಾರಂಭವು ಮುಕ್ತಾಯವಾಯಿತು.

### ಭಾಷಣ

ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ಸಪ್ತಾಹದ ಅಂಗವಾಗಿ ನಾಳೆ ಸಂಜೆ ೬ ಘಂಟೆಗೆ ಬ್ಯಾಂಕಿನ ಆವರಣದಲ್ಲಿ ಶ್ರೀ ಎ. ರಾಮಕೃಷ್ಣಯ್ಯನವರು 'ಸಾಕ್ಷರತಾ ಪ್ರಚಾರ ಕಾರ್ಯವನ್ನು ಸಹಕಾರವು ತಪ್ಪಿಸಲಾರದು' ಎಂಬ ವಿಷಯವಾಗಿ ಭಾಷಣ ಮಾಡುವರು.

## ರಾಷ್ಟ್ರ ನಾಯಕರೊಬ್ಬರ ಕೊಲೆಗಾಗಿ ಪಿತೂರಿ

ಮಹಾಸಭೆಯ ಮಾಜಿ ಅಧ್ಯಕ್ಷರಾದ ವಿ. ಡಿ. ಸಾವರ್‌ಕರ್ ಮತ್ತಿತರ ದಕ್ಷಿಣದ ನಿನ್ನೆ ದಿನ ಭಾರತದ ಶ್ರೇಷ್ಠ ನಾಯಕರೊಬ್ಬರನ್ನು ಕೊಲೆಮಾಡಲು ಪಿತೂರಿ ನಡೆಸಿತ್ತೆಂದೂ ಇದಕ್ಕಾಗಿ ಬೊಂಬಾಯಿನಲ್ಲಿ ಗುಪ್ತ ಗುಂಡುಗಳ ಶೇಖರಣೆಯಾಗುತ್ತಿತ್ತೆಂದೂ ವರದಿಯಾಗಿದೆ. ಬೊಂಬಾಯಿ ಪೋಲೀಸರು ಈ ಪಿತೂರಿಯನ್ನು ಹೊರಗೆ ... ಗುಂಡುಗಳನ್ನು ... ... ... ವಿಚಾರಣೆಗೊಳಪಡಿಸಿ ... ಬಂಧಿಸಿ

### ನಿಧನ

ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಲೈಬ್ರೇರಿಯನ್ ಶ್ರೀ ಎನ್. ನರಸಿಂಹಯ್ಯಂಗಾರ್‌ರವರ ಪತ್ನಿ ಶ್ರೀಮತಿ ನರಸಮ್ಮನವರು ನಿನ್ನೆ ಮಧ್ಯಾಹ್ನ ... ಘಂಟೆಗೆ ... ಸ್ವಗೃಹದಲ್ಲಿ ... ... ... ... ...

ಪೋನ್ ನಂ. 792 WEEKLY EDITION ಇಂದಿನ ಪತ್ರಿಕೆ ೬ ಪುಟ

# ಪ್ರಜಾವಾಣಿ

ಸಂಪುಟ ೧೪] ಭಾನುವಾರ ೯-೪-೫೦ [ಸಂಚಿಕೆ ೩೭

# ಭಾರತ ಪಾಕಿಸ್ತಾನ ಸೈನ್ಯಗಳಲ್ಲಿ ಘರ್ಷಣೆ

## ಗುಮಾಸ್ತನ ತಪ್ಪಿನಿಂದ ಹೆಚ್ಚು ದಿನ ಕಾರಾಗೃಹ ವಾಸ

ಲಕ್ನೋ, ನ್ಯಾಯಾಲಯವೊಂದರ ಗುಮಾಸ್ತನು ಮಾಡಿದ ಸಣ್ಣ ತಪ್ಪಿನಿಂದಾಗಿ ಆರು ಜನ ಕೈದಿಗಳು ಇನ್ನೂ ದಿನಗಳಿಂದಲೂ ಹೆಚ್ಚು ಕಾರಾಗೃಹ ವಾಸವನ್ನು ಅನುಭವಿಸಬೇಕಾಯಿತು. ಅವರಿಗೆ ಕೊಡಲ್ಪಟ್ಟ ಶಿಕ್ಷೆಗಳು ಒಟ್ಟಾಗಿ ನಡೆಯತಕ್ಕದ್ದೆಂದು ನ್ಯಾಯಾಧಿಪತಿ ತೀರ್ಪಿನಲ್ಲಿ ತಿಳಿಸಿದ್ದರೂ, ಗುಮಾಸ್ತನು ಜೈಲಿಗೆ ಕಳುಹಿಸುವ ವಾರಂಟಿನಲ್ಲಿ ಒಟ್ಟಾಗಿ ಎಂಬುದನ್ನು ನಮೂದಿಸದೇ ಇದ್ದುದರಿಂದ ಕೈದಿಗಳು ತಮಗಿಂತ ಹೆಚ್ಚು ಕಾಲ ಇರಬೇಕಾಯಿತು. ಈ ತಪ್ಪನ್ನು ಕಂಡುಹಿಡಿದನಂತರ ಅವರುಗಳ ಬಿಡುಗಡೆಯಾಗಿದೆ.

## ನಾಗಾ ಪರ್ವತದಲ್ಲಿ ನರಬಲಿ

ಬರ್ಮಾ ದೇಶದ ನಾಗಾ ಪರ್ವತದ ಜನರು ತಮ್ಮ ಕುಲ ದೈವದ ತೃಪ್ತಿಗಾಗಿ ನರಬಲಿ ಕೊಡುವ ಪದ್ಧತಿ ... ... ... ... ... ಸರ್ಕಾರದವರು ... ... ... ... ... ... ... ... ... ... ... ... ... ... ಈ ವರ್ಷ ನರಬಲಿ ಕೊಡಲಾಗಿದೆಯೆಂದು ವರದಿಯಾಗಿದೆ.

## ಮೆಕಾರ್ಥರ್ ಕಛೇರಿ ಬಳಿ ೫ ವರ್ಷದಿಂದ ಇದ್ದ ಬಾಂಬು

ಅಕ್ರಮಿತ ಜಪಾನಿನ ಆಡಳಿತಗಾರರಾದ ಜನರಲ್ ಮೆಕಾರ್ಥರ್‌ರವರ ಕೇಂದ್ರ ಕಛೇರಿ ಆವರಣದಲ್ಲಿ ೫ ವರ್ಷಗಳ ಹಿಂದೆ ಅಮೆರಿಕನ್ನರು ಟೋಕಿಯೋ ಮೇಲೆ ಹಾಕಿದ್ದ ೫೦೦ ಪೌಂಡಿನ ಬಾಂಬು ಇದುವರೆಗೆ ... ... ... ... ಅದನ್ನು ಈಚೆಗೆ ಕಂಡುಹಿಡಿದು ... ... ... ...

## ರಸ್ತೆಗಳಲ್ಲಿ ತಿರುಗಾಡುವ ಬಗ್ಗೆ ನಾಯಿಗಳಿಗೆ ಶಿಕ್ಷಣ

... ... ... ... ... ... ... ... ... ... ... ... ...

## ಭಾರತ ಪಾಕಿಸ್ತಾನಗಳ ಒಪ್ಪಂದವಾಯಿತು

ಭಾರತ ಮತ್ತು ಪಾಕಿಸ್ತಾನದ ಪ್ರಧಾನಿಗಳ ನಡುವೆ ನಡೆಯುತ್ತಿದ್ದ ಮಾತುಕತೆಗಳು ನಿನ್ನೆ ಮುಕ್ತಾಯವಾಗಿ ಅಲ್ಪಸಂಖ್ಯಾತರ ಸಮಸ್ಯೆ ಬಗ್ಗೆ ಒಂದು ಒಪ್ಪಂದಕ್ಕೆ ಬರಲಾಯಿತೆಂದು ವರದಿಯಾಗಿದೆ. ಉಭಯ ರಾಷ್ಟ್ರದ ಪ್ರಧಾನಿಗಳೂ ನಿನ್ನೆ ಈ ಒಪ್ಪಂದಕ್ಕೆ ರುಜು ಹಾಕಿರುವರು. ಲಿಯಾಖತ್ ಅಲಿಖಾನರು ಕರಾಚಿಗೆ ವಿಮಾನದಲ್ಲಿ ಬಂದು ಸೇರಿದರು. ಪಂಡಿತ ನೆಹರೂರವರಿಗೆ ಶಾಂತಿ ಇತ್ತ ಆಸ್ಥಾನವನ್ನು ಮನ್ನಿಸಿ ಅವರು ಕರಾಚಿಗೆ ಬರಬೇಕೆಂದೂ ಶಾಂತಿ ಭಾರತಕ್ಕೆ ಮತ್ತೆ ಬರುವುದಾಗಿಯೂ ಲಿಯಾಖತ್ ಅಲಿಖಾನರು ಪತ್ರಿಕಾ ವರದಿಗಾರರಿಗೆ ತಿಳಿಸಿದರು. ... ಈ ಒಪ್ಪಂದದ ಒಪ್ಪಿಗೆ ... ... ... ಲಿಯಾಖತ್ ... ... ... ... ತೆರಳಿದರು.

ದೆಹಲಿಯಲ್ಲಿ ಆದ ಒಪ್ಪಂದವನ್ನು ಭಾರತದ ಪಾರ್ಲಿಮೆಂಟು ಮತ್ತು ಪಾಕಿಸ್ತಾನ ಶಾಸನ ಸಭೆಯ ... ... ... ... ... ... ... ... ಪ್ರಧಾನಿಗಳೂ ಭೇಟಿಯಾಗಬೇಕೆಂದು ತೀರ್ಮಾನವಾಗಿದೆ.

## ವಕೀಲರ ಸಮ್ಮೇಳನದ ... ...

ಶಿವಮೊಗ್ಗ ೯

ನಿನ್ನೆ ಇಲ್ಲಿ ಸೇರಿದ ವಕೀಲರ ... ಸಮ್ಮೇಳನಕ್ಕೆ ಅಧ್ಯಕ್ಷನನ್ನು ಕೋರಿ ಪ್ರಧಾನಿ ನೆಹರೂ, ಸರ್ದಾರ್ ಪಟೇಲ್, ... ... ... ... ... ... ... ... ... ... ... ... ... ... ... ... ... ... ... ... ... ... ... ... ... ... ...

## ಗಡಿ ಪ್ರದೇಶದಲ್ಲಿ ಭಾರತ ಪಾಕ್ ಸೈನ್ಯಗಳಿಗೆ ಘರ್ಷಣೆ

ಪಶ್ಚಿಮ ಬಂಗಾಳದಿಂದ ಪಾಕಿಸ್ತಾನಕ್ಕೆ ಹೋಗುತ್ತಿದ್ದ ಹಲವು ಮುಸ್ಲಿಂ ನಿರಾಶ್ರಿತರು ಕಳೆದ ಗುರುವಾರ ... ಬಳಿ ನದಿಯ ... ... ... ... ತಮ್ಮ ಮನೆಗಳ ... ... ... ಹೊರಟಿದ್ದ ... ಮೊದಲಾದ ಪದಾರ್ಥಗಳನ್ನು ತೆಗೆದುಕೊಂಡು ಪಾಕಿಸ್ತಾನಕ್ಕೆ ಹೋಗಲು ಪ್ರಯತ್ನಿಸಿದರು. ಗಡಿ ಬಳಿಗೆ ಬಂದು ... ಭಾರತದ ಪೋಲೀಸರು ಅವರನ್ನು ... ... ... ಬಳಿ ಇದ್ದ ಪಾಕಿಸ್ತಾನದ ಪಡೆ ... ... ... ಭಾರತದ ಪೋಲೀಸರ ಮೇಲೆ ಗುಂಡು ಹಾರಿಸಿದರು. ... ... ... ... ... ... ... ... ... ... ... ... ಪಾಕಿಸ್ತಾನದ ಪೋಲೀಸರೊಡನೆ ... ... ಭಾರತದ ಪೋಲೀಸರ ಮೇಲೆ ಧಾಳಿ ನಡೆಸಿದರು. ಮತ್ತೆ ನೆನ್ನೆ ದಿನವೂ ... ... ... ಘರ್ಷಣೆ ... ... ಭಾರತದ ಪೋಲೀಸ ... ಪ್ರತಿಭಟನೆಯನ್ನು ... ...

## ಆಯುರ್ವೇದ ವಿದ್ಯಾರ್ಥಿಗಳ ಪ್ರದರ್ಶನ

ತಿರುವನಂತಪುರದ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ... ... ... ... ... ... ... ... ಆಯುರ್ವೇದದ ಪದವಿಗಳನ್ನು ... ... ಬೇಕೆಂದು ಮೊನ್ನೆ ... ... ... ... ... ... ... ... ... ... ... ...

## ಮ್ಯಾಜಿಸ್ಟ್ರೇಟರ ... ... ಬಾಟಲಿ ಸೋಡರಸ ಪ್ರಯೋಗ

... ... ... ... ... ... ... ... ... ... ... ... ... ... ... ... ... ... ... ... ... ... ... ... ... ಮ್ಯಾಜಿಸ್ಟ್ರೇಟರ ... ... ... ... ... ... ... ... ... ... ... ... ... ... ... ... ... ... ...

### ಸಮಾಜ ಸೇವಾ ಎಚ್ಚರ

... ... ... ... ... ... ... ... ... ... ... ... ... ... ... ... ... ... ... ... ... ... ... ... ...

### ಸಾವು

... ... ... ... ... ... ...

## ವಾರ ಭವಿಷ್ಯ

ತಾ|| ೯-೪-೧೯೫೦ರಿಂದ ೧೫-೪-೫೦ರ ವರೆಗೆ

ಮೇಷ—ಆರೋಗ್ಯ ನೆಟ್ಟಗೆ ಇದ್ದರೆ ಮನಸ್ಸಿಗೆ ನಿರಾಶ ಮಕ್ಕಳ ಆರೋಗ್ಯದ ಬಗ್ಗೆ ಚಿಂತೆ ಮಿತ್ರ ಜನರ ಭೇಟಿ ಪತ್ನಿಯ ಪ್ರೇರಣೆಯಿಂದ ಖರ್ಚು ಹೆಚ್ಚು ತಾ ೧೩, ೧೪ ಹಣಕಾಸಿನ ಸ್ಥಿತಿ ಉತ್ತಮ. ಕೋರ್ಟು ಕಾರ್ಯದಲ್ಲಿ ಜಯ.

ವೃಷಭ—ಯೋಜನೆಗಳು ಕಾರ್ಯಗತವಾಗುವುದಿಲ್ಲ ನಿಷ್ಪ್ರಯೋಜಕ ಕಾರ್ಯದಲ್ಲಿ ಹಣದ ಖರ್ಚು ಮನೆಯಲ್ಲಿ ಅನಾರೋಗ್ಯ. ನೆರೆಯವರಿಂದ ತೊಂದರೆ ತಾ|| ೧೦ ೧೧ ಸಂಕಟ ನಿವಾರಣೆ

ಮಿಥುನ—ಆರೋಗ್ಯ ನೆಟ್ಟಗೆ ಮನಸ್ಸಿನ ಯೋಜನೆ ಕಾರ್ಯರೂಪಕ್ಕೆ ಬರುವುದು ನೌಕರಿ ಸ್ಥಿತಿ ಉತ್ತೇಜನಕರದ್ದು ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಸ್ಥಿತಿ ಸುಖ ಪ್ರವಾಸ ನೂತನ ಯೋಜನೆ. ತಾ|| ೧೩, ೧೪ ಉತ್ತಮ- ಯೋಗಾಯೋಗ ಮಹತ್ವ ಪದವಿಯ ಲಾಭ ಸಂಪತ್ತು ಲಾಭ.

ಕರ್ಕ—ಹಣದ ಸಾಲಕ್ಕಾಗಿ ಚಿಂತೆ ಪಡಬೇಕಾದೀತು. ನಿಮ್ಮ ವಸ್ತುಗಳನ್ನು ಕಂಡವರಿಗೆ ಕೊಡಬೇಡಿ ತಾ|| [illegible], ೧೪ ನಿಧಾನ.

ಸಿಂಹ—ಮಾನಸಿಕ [illegible] ವ್ಯಾಪಾರ ಉದ್ಯೋಗ ನೌಕರಿಗಳ ವೃತ್ತಿಯಿಂದ ಲಾಭ ದೊರೆಯಲಿಲ್ಲ. ಆರೋಗ್ಯಕ್ಕೆ ಕ್ಲೇಶ. ಹಣಕಾಸಿನ ಅಭಾವ ತಾ|| ೧೦, ೧೧ ಅಪ್ರಿಯ ವಾರ್ತೆ ಅಗ್ನಿ ಅಪಘಾತ ಭಯ.

ಕನ್ಯಾ—ಸಂಕಟಗಳ ನಿವಾರಣೆಯಿಲ್ಲ. ಅವು ಉಗ್ರರೂಪ ತಾಳುವುವು ಕಾಲಿನ ಜಖಂ ಗುಣವಾಗದು. ಪತ್ನಿಯೊಡನೆ ಮತಭೇದ. ವ್ಯಾಪಾರಾದಿಗಳಲ್ಲಿ ಆಕಸ್ಮಿಕ ತೊಂದರೆ ತಾ|| ೧೩, ೧೪ ಮನಸ್ಸಿಗೆ ಧಕ್ಕೆಯ ಘಟನೆ

ತುಲಾ—ಗೌರವಾಸ್ಪದ ಘಟನೆಗಳು ನಡೆಯುವುವು ನೌಕರಿಯಲ್ಲಿ ರಿವರ್ಟ್ ಆದುದು ಪುನಃ ಸರಿಹೋಗುವುದು. ಸುಖ ಪ್ರವಾಸ ಹಣಕಾಸಿನ ಸ್ಥಿತಿ ಉತ್ತಮ ತಾ||೧೦, ೧೧ ಪರಿಚಿತ ಜನರ ಆಗಮನ ಧನವ್ಯಯ

ವೃಶ್ಚಿಕ—ಒಳ್ಳೆಯ ಪ್ರತಿಫಲ. ಆರೋಗ್ಯ ನೆಟ್ಟಗೆ. ವ್ಯಾಪಾರ, ಉದ್ಯೋಗಾದಿಗಳಲ್ಲಿ ಧನ ಲಾಭ ದೊಡ್ಡವರ ಪರಿಚಯ. ತಾ||೧೩, ೧೪ ಸತ್ಕಾರ್ಯದಲ್ಲಿ ಧನವ್ಯಯ

ಧನು—ಆರೋಗ್ಯ ನೆಟ್ಟಗೆ ಮಾನಸಿಕ ಧನಲಾಭ ತಾ||೧೩, ೧೪ ಪ್ರವಾಸ ಯೋಗ ಮಾನ್ಯತೆ ಪತ್ರ ಸ್ವೀಕಾರ ನೌಕರಿಯಲ್ಲಿ ಒಳ್ಳೆ ಘಟನೆ

ಮಕರ—ಆರೋಗ್ಯ ನೆಟ್ಟಗಿರದು. ಅಪಘಾತ ಭಯ. ಪ್ರವಾಸ ಬೇಡ ನೌಕರಿಯ [illegible] ವೈಮನಸ್ಯ [illegible] ತಾ|| [illegible] ಸಂಕಟ ನಿವಾರಣೆ [illegible]

[illegible]—ಮನೋಭೀಷ್ಟವು ಸಾಧ್ಯವಾಗುವುದು ವಿಚಾರಕಗಳ ಆಟ ಸಾಗದು. ಪ್ರಭಾವಕ್ಕೆ ತಕ್ಕಂತೆ ಧನ ಮಾನ್ಯ [illegible] ಲಭ್ಯ ತಾ|| [illegible] ಸುಖ [illegible]

ಮೀನ—ಅನೇಕ [illegible] ಘಟನೆಗಳು ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ಮಾನಸಿಕ್ಯ ಹಣಕಾಸಿನ ಸ್ಥಿತಿ ಉತ್ತಮ. [illegible] ಪ್ರವಾಸ ತಾ||೧೦, ೧೧ [illegible] ಮಿತ್ರ ಭೇಟಿ

## ಪಾಕ್ ಪ್ರಧಾನಿ ಬಳಿ ಭಾರತ ಪತ್ರಿಕೆಯವರ ನಿಯೋಗ

ಭಾರತದ ಪತ್ರಿಕೆ ನಿಯೋಗವೊಂದು ಪಾಕಿಸ್ತಾನದ ಪ್ರಧಾನಿಯವರನ್ನು ಹೊಸ ದೆಹಲಿಯಲ್ಲಿ ಭೇಟಿ ಮಾಡಿ, ಪಾಕಿಸ್ತಾನದಿಂದ ಸುದ್ದಿಗಳನ್ನು ಕಳಿಸಿಕೊಳ್ಳಲು ಎಲ್ಲ ಸೌಕರ್ಯಗಳನ್ನೂ ಪುನಃ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿತು. ಪ್ರಧಾನಿಗಳು ಕರಾಚಿಗೆ ಹಿಂತಿರುಗಿದನಂತರ ನಿಯೋಗದ ಸೂಚನೆಯನ್ನು ಪರಿಶೀಲಿಸುವುದಾಗಿ ತಿಳಿಸಿದರೆಂದು ಹೇಳಲಾಗಿದೆ

## ಪೂರ್ವ ಬಂಗಾಳ-ಕಾಶ್ಮೀರಗಳ ಆಡಳಿತ ಬದಲಾವಣೆ

ಪೂರ್ವ ಬಂಗಾಳವನ್ನು ಭಾರತವು ತನ್ನ ಆಧೀನಕ್ಕೆ ತೆಗೆದುಕೊಂಡು, ಪಾಕಿಸ್ತಾನಕ್ಕೆ ಕಾಶ್ಮೀರವನ್ನು ಒಪ್ಪಿಸಬೇಕೆಂದು ಸೂಚಿಸುವ ಸಲಹೆಗಳು ಲಂಡನ್ ಮತ್ತು ವಾಷಿಂಗ್‌ಟನ್ನುಗಳಿಂದ ನವದೆಹಲಿಗೆ ಬಂದಿರುವುದಾಗಿ ಹೇಳಲಾಗಿದೆ. ಹೀಗೆ ಮಾಡಿ, ಉಭಯರ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಬೇಕೆಂದೂ, ಭಾರತದ ನಾಣ್ಯದ ಬೆಲೆಯನ್ನು ಏರಿಸಿ ಪಾಕಿಸ್ತಾನದ ನಾಣ್ಯದ ಬೆಲೆಯನ್ನು ಇಳಿಸಬೇಕೆಂದೂ ಸಲಹೆ ಮಾಡಲಾಗಿದೆ

### ಮನುಷ್ಯರ ಕೂದಲಿನ ಉಪಯೋಗ

ರಷ್ಯನ್ ಆಕ್ರಮಿತ ಜರ್ಮನಿಯಲ್ಲಿ ಮನುಷ್ಯರ ಕೂದಲುಗಳನ್ನು ರಾಷ್ಟ್ರೀಕರಿಸುವ ಒಂದು ಆಜ್ಞೆಯು ಇತ್ತೀಚೆಗೆ ಹೊರಬಿದ್ದಿದೆ ಕ್ಷೌರ ಮಾಡಲ್ಪಟ್ಟ ಕೂದಲನ್ನು ಕೊಳ್ಳಲು ಅಧಿಕಾರಿಗಳನ್ನು ನೇಮಿಸಲಾಗಿದೆ ಅನಧಿಕೃತವಾಗಿ ಕೂದಲನ್ನು ಕೊಳ್ಳುವವರನ್ನು ಶಿಕ್ಷಿಸಲಾಗುತ್ತಿದೆ. ಕೂದಲನ್ನು ಕೊಳೆದು ಕುಚಿಯಾಗಿಟ್ಟುಕೊಳ್ಳದವರನ್ನೂ ಶಿಕ್ಷೆಗೆ ಗುರಿಪಡಿಸಲಾಗುತ್ತಿದೆ, ಕಳೆದ ಯುದ್ಧದ ಸಂದರ್ಭದಲ್ಲಿ ಜರ್ಮನಿಯು ಕ್ಷೌರಕರ ಅಂಗಡಿಗಳಿಂದ ಕೂದಲನ್ನು ಕೊಂಡು ಅದರಿಂದ ಪ್ಯಾಟು ಮತ್ತು ರಗ್ಗುಗಳನ್ನು ತಯಾರಿಸಲಾಗುತ್ತಿತ್ತೆಂದೂ ಫ್ರಾನ್ಸಿನಲ್ಲಿ ಸುಲಭವಾಗಿ ಜೀರ್ಣವಾಗುವ ಸಿಸ್ಟಿನ್ ಎಂಬ ಆಹಾರವನ್ನು ಕೂದಲಿನಿಂದ ತಯಾರಿಸಿ ಅಲ್ಲಿಗೆ ಹಿಂದಿರುಗಿದ ದೃಢಕಾಯರಲ್ಲದ ಸೈನಿಕರಿಗೆ ಕೊಡಲಾಗುತ್ತಿತ್ತೆಂದೂ ಹೇಳಲಾಗಿದೆ

ಭ್ರಮರಾಂಬಾ ಟಾಕೀಸ್

ಜನಭರಿತವಾದ 12ನೇ ವಾರ

ಚಂದ್ರಲೇಖಾ

ಪಾತ್ರ—ಟಿ ಆರ್ ರಾಜಕುಮಾರಿ, ರಂಜನ್, ಎಂ. ಕೆ. ರಾಧಾ

## ವಿಚಿತ್ರ ಬೆಂಕಿ

ವಿಲ್ಲುಪುರಂ ಬಳಿ ಕಂಗಯನೂರ್ ಎಂಬ ಹಳ್ಳಿಯಲ್ಲಿ ವಿಚಿತ್ರವಾದ ಬೆಂಕಿಗಳುಂಟಾಗುತ್ತಿವೆ ಬೆಂಕಿಯು ಉಂಟಾದ ಸಮಯದಲ್ಲಿ ಸ್ಥಳೀಯ ಬೆಂಕಿ ಆರಿಸುವವರು ಅಲ್ಲಿಗೆ ಹೋಗಿ ಅದನ್ನು ನಿವಾರಿಸಿದರೆಂದೂ, ಆದಾದ ಸ್ವಲ್ಪ ದೂರದಲ್ಲೇ ಮತ್ತೆ ಬೇರೆ ಕಡೆಗಳಲ್ಲಿ ಅವು ಉಂಟಾದವೆಂದೂ ಮಂತ್ರವಾದಿಯ ಕಾರ್ಯವೆಂದೂ ಹೇಳಲಾಗಿದೆ

## ೫೦೦ ಸಂತಾಲರ ಮೇಲೆ ಪಾಕಿಸ್ತಾನ್ ಸೈನಿಕರ ಗುಂಡು

ಭಾರತಕ್ಕೆ ವಲಸೆ ಬರುತ್ತಿರುವ ಪಾಕಿಸ್ತಾನದ ೫೦೦ ಸಂತಾಲ ನಿರಾಶ್ರಿತರು ಗಡಿ ದಾಟುವ ಸಮಯದಲ್ಲಿ ಪಾಕಿಸ್ತಾನ ಗಡಿ ಪೋಲೀಸರು ಗುಂಡು ಹಾರಿಸಿದರೆಂದು ಹೇಳಲಾಗಿದೆ

## ಸವಾರಿ ಮಾಡಲು ಕಬ್ಬಿಣದ ಕುದುರೆ

ಕೆನಡದ ಸಣ್ಣ ಊರಿನ ಶಿಲ್ಪಿಯೊಬ್ಬನು ಜೀವಂತ ಕುದುರೆಯಷ್ಟು ಉದ್ದ ಮತ್ತು ಗಾತ್ರದ ಕಬ್ಬಿಣದ ಕುದುರೆಯನ್ನು ತಯಾರಿಸಿದ್ದಾನೆ. ಪೆಟ್ರೋಲಿನಿಂದ ನಡೆಸಲ್ಪಡುವ ಈ ಕುದುರೆಯು ಗಂಟೆಗೆ ೧೦ ಮೈಲಿ ಹೋಗಬಲ್ಲದು

### ಗೀತಾ ಸಾರ

ರಾಜಧಾನಿಯ ಆತ್ಮ ವಿಚಾರ ಮಂದಿರದ ಅಧ್ಯಕ್ಷರಾದ ಶ್ರೀ ಎಂ ಎನ್ ನಾಗಣ್ಣನವರು 'ಗೀತಾಸಾರ' ವೆಂಬ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿರುವ ಮುಖ್ಯ ಶ್ಲೋಕಗಳನ್ನು ಉದ್ಧರಿಸಿ, ಅದರ ಸಾರವನ್ನು ಪ್ರಕಟಿಸಿರುತ್ತಾರೆ ಗೀತಾಚಾರ್ಯನು ಅರ್ಜುನನಿಗೆ ಮಾಡಿರುವ ಉಪದೇಶವು ಸಕಲ ಕಾಲಗಳಿಗೂ ಅನ್ವಯವಾಗುವುದರಿಂದ ಮುಮುಕ್ಷುಗಳು ಕರ್ತವ್ಯ ದೃಷ್ಟಿಯನ್ನು ಈ ಉಪದೇಶಗಳಿಂದ ಅರಿಯಬಹುದಾಗಿದೆ ಆಚಾರ್ಯತ್ರಯರ ತತ್ವ ಭಾಷ್ಯಗಳ ವ್ಯತ್ಯಾಸವನ್ನು ವರ್ಣಿಸಿ, ಅವುಗಳಲ್ಲಿ ಸಮಷ್ಟಿ ಭಾವವನ್ನು ಸೂಚಿಸಿರುತ್ತಾರೆ ಈ ಪುಸ್ತಕವು ಆತ್ಮವಿಚಾರ ಗ್ರಂಥಮಾಲೆಯ ದ್ವಿತೀಯ ಪುಷ್ಪ.

ರಾಜಕಮಲ್ ಟಾಕೀಸ್

7—4—50 ರಿಂದ

ಅಮೋಘ ೧೬ ನೇ ವಾರ

ದಿನವಹಿ 2 ಪ್ರದರ್ಶನಗಳು

ಜೀವನ

—ಭೂಮಿಕೆ—

[illegible] ಆವಿ [illegible]

Malaria No. 433 Engels

## ಏವರು ಮತ್ತು ಯಾವುದಲ್ಲ?

ಹದಿನೈದು ವರ್ಷಗಳ ಹಿಂದೆ ಕೆನಡಾದಲ್ಲಿ ಒಟ್ಟಿಗೆ ಐದು ಮಕ್ಕಳ ಜನನವಾದಾಗ ಇಡೀ ಪ್ರಪಂಚವೇ ಆಶ್ಚರ್ಯಚಕಿತವಾಯಿತು. ಮಕ್ಕಳ ಪಾಲನೆ ಬಗ್ಗೆ ತೆಗೆದುಕೊಳ್ಳಲಾದ ಆಶ್ಚರ್ಯಕಾರಕ ಎಚ್ಚರಿಕೆಯನ್ನು ಕುರಿತು ಮತ್ತು ಕೆನಡಾದಲ್ಲಲ್ಲದೇ ಸಂಯುಕ್ತ ಸಂಸ್ಥಾನಗಳಲ್ಲಿರುವ ವೈದ್ಯರುಗಳು ಈ ಚಿಕ್ಕ ಮಕ್ಕಳು ಜೀವಂತವಾಗಿರಲು ಪಟ್ಟ ಶ್ರಮವನ್ನು ಕುರಿತು ಪತ್ರಿಕೆಗಳು ಶ್ಲಾಘಿಸಿದವು ಮನುಷ್ಯ ಮಾತ್ರದವರಾದ ನಮ್ಮಗಳಿಗೆ ಐವರ ಜನನವು ಒಂದು ದೊಡ್ಡ ಘಟನೆಯೇ ಆಗಿದೆ.

ಪ್ರಾಣಿಗಳಿಗಾದರೋ, ಇಂತಹ ಬಹು ಸಂಖ್ಯೆಗಳ ಜನನವು ಸಾಮಾನ್ಯವಾದುದು ಮೀನುಗಳನು ಹತ್ತರಿಂದ ಸಾವಿರ ಮೊಟ್ಟೆಗಳನು ಒಂದು ಬಾರಿಗೆ ಇಡುತ್ತವೆ ಉದಾಹರಣೆಗಾಗಿ ಹೆರ್ರಿಂಗಿನ ಉದರದಲ್ಲಿ ೩೦ ಸಾವಿರ ಮೊಟ್ಟೆಗಳಿರುತ್ತವೆ ಕಾಡ್ ಎಂಬುದರಲ್ಲಿ ೨ ಲಕ್ಷ ಇರುತ್ತವೆ. ಎಲ್ಲ ಪ್ರಾಣಿಗಳಿಗೂ ಸಂತಾನದ ಬಾಹುಳ್ಯವು ಬಹಳವಾಗಿರುವುದಿಲ್ಲ ಒಂದೇ ಒಂದು ಕರುವನ್ನು ಈಯುವ ಹಸು, [illegible] [illegible] ಪ್ರಾಣಿಗಳೂ ಒಬ್ಬೊಬ್ಬವೆ [illegible] ಮತ್ತೆ [illegible] ಒಂದರಿಂದ ಮೂರನ್ನು ಹೆರುತ್ತವೆ ಆದರೆ ವಿಷ ಜಂತುಗಳು ಹೆಚ್ಚು ಮೊಟ್ಟೆಗಳನ್ನಿಡುತ್ತವೆ ನಾಗರಹಾವು ೧೫-೨೦ನ್ನು ಪಡೆಯುವುದು, ವೈಪರ್ ಹಾವು ೫-೬, ಗೋಸುಂಬೆಯು ೨೭-೩೭, ಮೊಸಳೆ ೨೫-೬೦, ಮತ್ತು ಉತ್ತರ ಅಮೆರಿಕದ ಸ್ಟರ್ಜನ್ ಮೀನು ಒಂದು ಬಾರಿಗೆ ೫೦೦ ರಂತೆ ಸಂತಾನ ಪಡೆಯುವುದು.

ಸಾಧಾರಣವಾಗಿ, ಕೀಟಗಳು ಈ ಸಂಖ್ಯೆಗಳನ್ನು ಮೀರುವುದಿಲ್ಲ ಆದರೆ ಅವುಗಳು ಜಾಗ್ರತೆಯಾಗಿ ಬೆಳೆಯುವುವು. ೧೨೦-೧೫೦ ಮೊಟ್ಟೆಗಳನ್ನು ಒಂದೇ ಬಾರಿಗೆ ನೊಣವು ಇರಿಸುವುದು ೩೦ ದಿನಗಳನಂತರ ಅದಕ್ಕೆ ೧೬,೦೦೦೦೦ ಮರಿಗಳಾಗುತ್ತವೆ ನೂರುಕೋಟಿಯ ಮುಕ್ಕಾಲು ಭಾಗದಷ್ಟು ಕೀಟಗಳು ಪತ್ರರೂಪ, ಐದನೇ ತಲೆಯ ಹೆಣ್ಣು ನೊಣಕ್ಕೆ ೪೦ ಲಕ್ಷ ಮರಿಗಳಾಗಿರುತ್ತವೆ

ಈ ಚಿಕ್ಕ ಕೀಟದ ಇಂತಹ ಅತ್ಯದ್ಭುತ ಬೆಳವಣಿಗೆಯ ಶಕ್ತಿಯು ಅಷ್ಟೊಂದು ತೀವ್ರವಾಗಿ ಗಮನಿಸಬೇಕಾದ್ದಾಗಿರಲಿಲ್ಲ. ಆದರೆ ಅದರಿಂದ ನಿಜವಾದ ಅಪಾಯವಿರುವುದರಿಂದ ಗಮನಿಸಲೇಬೇಕು.

ಅನೋಫೆಲಿಸ್ ಎಂಬುದು ಮಲೇರಿಯಾವನ್ನು ಹೊತ್ತು ತರುವುದರಲ್ಲಿ ಪ್ರಖ್ಯಾತವಾದದ್ದು ಇದು ಉಷ್ಣವಲಯಗಳಲ್ಲಿದ್ದು ಹೇಳಲಾರದಷ್ಟು ದುಃಖಕ್ಕೆ ಕಾರಣವಾಗಿದೆ. ಹಿಂದಿನ್ನು [illegible] [illegible] ಈ ಖಾಯಿಲೆಗೆ ಒಂದು ಸಿದ್ಧೌಷಧವನ್ನು ಕಂಡು ಹಿಡಿದಿದೆ. ೧೯೩೮ರಲ್ಲಿ ಸವಾಯ್ ಮವರು ಪ್ರಕಟಿಸಿದ ಅವರ ವರದಿಯಲ್ಲಿ, ಹೇಳಿರುವ ಪ್ರಕಾರ ಪ್ರತಿ ದಿನವೂ ೪೦೦ Mg ಅನ್ನು ಕ್ವಿನೈನನ್ನು ಮಲೇರಿಯಾದಲ್ಲಿ ಸೇವಿಸಬೇಕು, ಮಲೇರಿಯಾ ಜ್ವರ ಬಂದರೆ ಕ್ವಿನೈನಿನ ೧-೧೩ ಗ್ರ್ಯಾನ್‌ಗಳಷ್ಟು ಔಷಧವು ಉತ್ತಮ ಗುಣಕಾರಿ

ಮೈಸೂರ್ ಗೌಟ್ ಸಿಲ್ಕ್ ಫ್ಯಾಕ್ಟರಿ ಕ್ರೇಪ್ ಸೀರೆಗಳಿಗೆ,
ಧರ್ಮಾವರಂ, ಪೂನಾ, ನಾಗಪುರ್ ಸೀರೆಗಳಿಗೆ
ಎಂ. ವಿ. ಭೋಜಯ್ಯ ಬಿ ಎ & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

Edited, printed and published by A R Nagarajan at Sadhvi Press D.Subbiah Road, Mysore

ಪ್ರಜಾವಾಣಿ

ಸಂಪುಟ ೪] ಸೋಮವಾರ ೧೧-೮-೫೦ [ಸಂಚಿಕೆ ೨೧೫

# ಲಾಯಕಾಲಿ ವಾಪಸಿಗೆ ಭಾರತದ ಸೂಚನೆ

## ಜಸ್ಟಿಸ್ ಕಾನಿಯಾರವರ ಆಗಮನ

### ಶ್ರೀ ಪುಟ್ಟರಾಜೆ ಅರಸರ ನಿವೃತ್ತಿ. ವಿಚಾರಣೆ ಆರಂಭ

ಸ್ವಂ ಸು ಫೋನ್] ಬೆಂಗಳೂರು ೧೦

ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೀರಾಲಾಲ್ ಕಾನಿಯಾರವರು ನೆನ್ನೆ ಮಧ್ಯಾಹ್ನ ತಮ್ಮ ಆಪ್ತ ಕಾರ್ಯದರ್ಶಿ, ಶ್ರೀ ಸಾಕ್ಸೆನಾರವರೊಡನೆ ವಿಮಾನದಲ್ಲಿ ಬಂದಿಳಿದರು. ಅವರನ್ನು ನ್ಯಾಯಾಂಗ ಮಂತ್ರಿ ಶ್ರೀ ಕೆ.ಟಿ. ಭಾಷ್ಯಂ, ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪಿ ಮೇದಪ್ಪ, ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಕೆ. ಶ್ರೀನಿವಾಸನ್, ಅಡಿಷನಲ್ ಸೆಕ್ರೆಟರಿ ಜಾರ್ಜ್ ಮ್ಯಾಥ್ಯೂ ಮತ್ತು ಹೈಕೋರ್ಟು ರಿಜಿಸ್ಟ್ರಾರ್‌ರವರುಗಳು ಎದುರುಗೊಂಡರು. ಅವರು ರೆಸಿಡೆನ್ಸಿಯಲ್ಲಿ ಬಿಡಾರ ಮಾಡಿದ್ದಾರೆ. ನೆನ್ನೆ ಸಂಜೆ ಅವರನ್ನು ಶ್ರೀ ಕೆ. ಟಿ. ಭಾಷ್ಯಂ, ಶ್ರೀ ಮೇದಪ್ಪ ಮತ್ತು ಶ್ರೀ ಪುಟ್ಟರಾಜೆ ಅರಸಿನವರು ಪ್ರತ್ಯೇಕವಾಗಿ ಸಂದರ್ಶಿಸಿದರು. ಈ ದಿನ ಬೆಳಿಗ್ಗೆ ೧೧-೩೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆವರೆಗೆ ಅವರು ಹೈಕೋರ್ಟಿನಲ್ಲಿ ಅಲ್ಲಿ ಸಂಬಂಧಪಟ್ಟ ಕಾಗದ ಪತ್ರಗಳನ್ನು ಪರಿಶೀಲಿಸಿದರು. ಅವರು ಮೂರು ದಿನಗಳವರೆಗೆ ಇರುವರೆಂದೂ ಅವಶ್ಯವಿದ್ದರೆ ಇನ್ನೊಂದು ದಿನ ಹೆಚ್ಚಾಗಿ ಇರು[illegible] ... ಈ ... ಶ್ರೀ ಕೆ [illegible] ... ಸಂಜಾವ ಮುಗಿಸಿದ[illegible] ... ನಂತರ ಶ್ರೀ ಕಾನಿಯಾರವರನ್ನು ಭೇಟಿ ಮಾಡುವರು. ಪತ್ರಿಕಾ ಪ್ರತಿನಿಧಿಗಳು ನೆನ್ನೆ ವಿಮಾನ ನಿಲ್ದಾಣದಲ್ಲಿ ಶ್ರೇಷ್ಠ ನ್ಯಾಯಾಧೀಶರನ್ನು ಪ್ರಶ್ನಿಸಿದಾಗ ತಾವು ಕೇವಲ ನ್ಯಾಯ ಪರಿಶೀಲನಾರ್ಥವಾಗಿ ಬಂದಿರುವುದರಿಂದ ಏನನ್ನೂ ಹೇಳಲು ಸಾಧ್ಯವಿಲ್ಲವೆಂದೂ ತಿಳಿಸಿದರು.

ರೆಸಿಡೆನ್ಸಿಗೆ ಅವಶ್ಯವಿಲ್ಲದವರು ಹೋಗದಿರುವಂತೆ ಪೋಲೀಸರ ಉಸ್ತುವಾರಿ ಹಾಕಲಾಗಿದೆ.

### ಸಹಕಾರ ಪದ್ಧತಿಯ ವ್ಯವಸಾಯದ ಪ್ರಾರಂಭ

ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಸಹಕಾರಪದ್ಧತಿಯ ವ್ಯವಸಾಯವನ್ನು ಸರ್ಕಾರದವರು ಬರುವ ವಾರ ಪ್ರಯೋಗಾರ್ಥವಾಗಿ ಜಾರಿಗೆ ತರಲಿರುವರೆಂದು ಹೇಳಲಾಗಿದೆ. ಮೊದಲನೆ ಬಾರಿಗೆ ೫೦೦೦ರಿಂದ ಸಾವಿರ ಎಕರೆ ಜಮೀನಿನಲ್ಲಿ ಈ ಹೊಸ ರೀತಿಯ ವ್ಯವಸಾಯವು ಪ್ರಾರಂಭವಾಗುವುದು.

### ಲಾಯಕಾಲಿ ಸೇವಕರ ಬಂಧನ

ನಿಜಾಂ ಲಾಯಕ್ ಅಲಿಯ ತೋಟದ ಕೆಲಸಗಾರನಾದ ಮ.ಹಮೂದ್ ಸಾಬ್ ಮತ್ತು ಅಡಿಗೆಯವನಾದ ಪೀರ್ ದಾವೂದ್ ಎಂಬವರನ್ನು ಹುಣಸೂರು ಮತ್ತು ಕೊಡಗುಗಳಲ್ಲಿ ಹೈದರಾಬಾದು ಪೋಲೀಸರು ಇಲ್ಲಿನ ವಿಶೇಷ ಪೋಲೀಸರ ಸಹಾಯದಿಂದ ಕ[illegible] ... ತೆಗೆ[illegible] ... ಬಾ[illegible] ... ಕರೆದ[illegible]

### ಬೆಂಕಿ ಅನಾಹುತದಿಂದ ೫೦ ಲಕ್ಷ ರೂ. ನಷ್ಟ

ಉತ್ತರ ಭಾರತದ ಹಲವು ಕಡೆ ನೆನ್ನೆ ನಡೆದ ಭೀಕರ ಬೆಂಕಿ ಅನಾಹುತಗಳಿಂದ ಸುಮಾರು ೫೦ ಲಕ್ಷ ರೂ. ಗಳಷ್ಟು ನಷ್ಟವಾಗಿರುವುದಾಗಿ [illegible]

### ನೀಲಗಿರಿಯಲ್ಲಿ ಪ್ರಭುಗಳು

ಓ ಸು] ನೀಲಗಿರಿ ೮

ಶ್ರೀಮನ್ಮಹಾರಾಜರೂ, ರಾಜಮಾತೆಯವರೂ ಪರಿವಾರದೊಡನೆ ನೆನ್ನೆ ಇಲ್ಲಿಗೆ ದಯಮಾಡಿಸಿ,-ಫರ್ನ್ ಹಿಲ್ ಅರಮನೆಯಲ್ಲಿ ಬಿಡಾರ ಮಾಡಿದ್ದಾರೆ ೧೫ ದಿನಗಳವರೆಗೆ ಇಲ್ಲಿ ಅವರು ಇರುವರೆಂದು ಹೇಳಲಾಗಿದೆ.

ಈ [illegible]

ಮೈಸೂರಿನ ಪ್ರೆಸ್ ನ ... ಗೆ ಕಾರ್ಯದರ್ಶಿಯ ಶ್ರೀ ಎಸ್. ರಾಮರಾವ್ ಮತ್ತು ಓರಿಯಂಟಲ್ ಇಂಡಸ್ಟ್ರೀಸ್‌ನ ಶ್ರೀ ಬಿ ಎಸ್ ಸುಬ್ಬರಾವ್ ಇವರುಗಳು ಇಲ್ಲಿಗೆ ಬಂದಿದ್ದಾರೆ. ಶ್ರೀ ಬಿ ಎಸ್. ಸುಬ್ಬರಾಯರು ಕೊಯಮತ್ತೂರಿಗೆ ದಯಮಾಡಿ ಅಲ್ಲಿ ಕೆಲವು ಸಹಕಾರ ಸಂಘಗಳಿಗೆ ಭೇಟಿ ಕೊಡುವರು. ಬೇಸಿಗೆ ರಜದ ... ೩-೪ ವಿದ್ಯಾರ್ಥಿ ತಂಡಗಳು ಇಲ್ಲಿಗೆ ಬಂದಿವೆ.

### ಅಣು ಬಾಂಬಿನ ಧಾಳಿಯ ಪ್ರಯೋಗಾರ್ಥ ಪ್ರದರ್ಶನ

ಬರುವ ತಿಂಗಳು ಒಂದನೇ ತಾರೀಕು ಅಮೆರಿಕದ ಟೆನೆಸ್ಸಿ ಪ್ರದೇಶದ ಓಕ್‌ರಿಡ್ಜ್ ಎಂಬಲ್ಲಿ ೩೦೦ ಮಂದಿ ವೈಜ್ಞಾನಿಕರು ದೇಶದ ಯೊ ಆಕ್ಟಿವಿಟಿಯ ಪರಿಶೀಲನೆ ನಡೆಸುವ ಸಲುವಾಗಿ ಅಣು ಬಾಂಬು ಧಾಳಿಯ ಪ್ರಯೋಗಾರ್ಥ ಪ್ರದರ್ಶನವನ್ನು ನಡೆಸುವರು. ಅವರುಗಳು ಈ ಬಗ್ಗೆ ರಕ್ಷಣೆ ಹೊಂದುವುದಕ್ಕಾಗಿ ಎಲ್ಲ ಸಲಕರಣೆಗಳನ್ನೂ ಹೊಂದಿ ಒಂದು ಗುಪ್ತ ಸ್ಥಳದಲ್ಲಿ ಕುಳಿತು ಧಾಳಿಯ ಪ್ರತಿಕ್ರಿಯೆ ಮತ್ತು ಪರಿಣಾಮಗಳನ್ನು ವೀಕ್ಷಿಸುವರು.

### ಟೆಲಿಫೋನ್ ಹೊಂದಿದವರಿಗೆ ಸೂಚನೆ

ಏಪ್ರಿಲ್ ೧ ರಿಂದ ಟೆಲಿಫೋನ್ ವ್ಯವಸ್ಥೆ ... [illegible] ... ಟೆಲಿಫೋನ್ ಹೊಂದಿರುವವರು ... ಟೆಲಿಫೋನುಗಳ ಬಗ್ಗೆ ... [illegible]

### ಜಿ. ಪರಮಶಿವಯ್ಯನವರ ನಿವೃತ್ತಿಯ ಖಂಡನೆ

#### ವಕೀಲರ ಸಮ್ಮೇಳನದ ನಿರ್ಣಯ

ಶಿವಮೊಗ್ಗ ೯

ಮೈಸೂರು ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಶ್ರೀ ಜಿ. ಪರಮಶಿವಯ್ಯನವರನ್ನು ಕಾರಣವಿಲ್ಲದೆ ನಿವೃತ್ತಿ ಮಾಡಿಸಿರುವುದನ್ನು ಖಂಡಿಸಿ, ವಕೀಲರ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಯಿತು. ... ಸ್ಥಾನ ಮತ್ತು ಗೌರವ ... ಎತ್ತಿಹಿಡಿದ ದಕ್ಕಾಗಿ ನಿವೃತ್ತ ಶ್ರೇಷ್ಠ ನ್ಯಾಯಾಧೀಶರನ್ನೇ ಅಭಿನಂದಿಸಲಾಯಿತು. ಹೈಕೋರ್ಟುಗಳಿಗೆ ಜಡ್ಜರನ್ನು ವಕೀಲರ ಸಮೂಹದಿಂದಲೇ ನೇಮಿಸಬೇಕು, ಕೋರ್ಟುಗಳ ... ಮೇಲೆ ನೇಮಕ ಕೂಡದು, ಹೆಚ್ಚಿನ ... ಕೋರ್ಟುಗಳಿಗೆ ... ಕೊಡಬೇಕು, ಕರ್ನಾಟಕ ... ರಚನೆಯಾಗಬೇಕು, ಸಂಸ್ಥಾನದ ಹೈಕೋರ್ಟಿನ ಕಾಗದಪತ್ರಗಳನ್ನು ಕನ್ನಡದಲ್ಲಿ ಬರೆಯಬೇಕು, ನ್ಯಾಯಾಂಗ ಕಾರ್ಯಾಂಗಗಳನ್ನು ಪ್ರತ್ಯೇಕಿಸಬೇಕು, ಸಾರ್ವಜನಿಕ ರಕ್ಷಣಾ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು - ಇವೇ ಮುಂತಾದ ನಿರ್ಣಯಗಳಾದವು.

### ಅಲ್ಪ ಸಂಖ್ಯಾತರಿಗೆ ಮಂತ್ರಿ ಸ್ಥಾನ

ಭಾರತ ಮತ್ತು ಪಾಕಿಸ್ತಾನಗಳಿಗೆ ಎರಡು ದಿನಗಳ ಹಿಂದೆ ಆದ ಒಪ್ಪಂದದ ಪ್ರಕಾರ ಪಶ್ಚಿಮ, ಪೂರ್ವ ಬಂಗಾಳಗಳಲ್ಲಿ ಮತ್ತು ಅಸ್ಸಾಮಿನಲ್ಲಿರುವ ಅಲ್ಪ ಸಂಖ್ಯಾತರ ಹಿತರಕ್ಷಣೆ ಮಾಡುವ ಸಲುವಾಗಿ ... ಪ್ರತಿನಿಧಿಗಳನ್ನು ... ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಗಿದೆ.

### ಬರುವ ತಿಂಗಳಲ್ಲಿ ಪ್ರಾಯೋಗಿಕ ಆಕ್ರಮಣ

[illegible] ... ಹಿಡಿದುಕೊಳ್ಳಲು ... ಈ ಧಾಳಿ ... [illegible] ... ಹೇಳಲಾಗಿದೆ

### ಲಾಯಕ್ ಅಲಿ ವಾಪಸಿಗೆ ಭಾರತದ ಸೂಚನೆ

ಹೈದರಾಬಾದಿನ ಮಾಜಿ ಮುಖ್ಯ ಮಂತ್ರಿ ಲಾಯಕ್ ಅಲಿಯವರನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದು ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಈಗಾಗಲೇ ಸೂಚಿಸಿರುವರೆಂದೂ, ಇದುವರೆಗೆ ಅಲ್ಲಿಂದ ಉತ್ತರವಿನ್ನೂ ಬಂದಿಲ್ಲವೆಂದೂ ಪಾರ್ಲಿಮೆಂಟಿನಲ್ಲಿ ಉಪ ವಿದೇಶಾಂಗ ಮಂತ್ರಿ ಡಾ॥ ಬಿ ವಿ. ಕೇಸ್ಕರರು ನೆನ್ನೆ ತಿಳಿಸಿದರು.

### ಮುಖರ್ಜಿ ರಾಜೀನಾಮೆ ಅಂಗೀಕೃತವಾಯಿತೇ?

ಭಾರತದ ಕೈಗಾರಿಕಾ ಮಂತ್ರಿ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರ ರಾಜೀನಾಮೆಯನ್ನು ಪ್ರಧಾನಿ ನೆಹರೂರವರು ಅಂಗೀಕರಿಸಿ ಪತ್ರ ಬರೆದಿದ್ದಾರೆಂದು ವರದಿಯಾಗಿದೆ. ಶ್ರೀ ಕೆ ಸಿ ನಿಯೋಗಿಯವರು ಇತ್ತ ರಾಜೀನಾಮೆಯನ್ನು ಅಂಗೀಕರಿಸುವ ಮುನ್ನ ತಮ್ಮನ್ನು ಕಾಣಬೇಕೆಂದು ನೆಹರೂರವರು ಅವರಿಗೆ ಸೂಚಿಸಿರುವುದಾಗಿ ಹೇಳಲಾಗಿದೆ. ಉಭಯರೂ ಬಂಗಾಳಕ್ಕೆ ಹಿಂತಿರುಗಿ ಅಲ್ಲಿನ ಪ್ರಾಂತೀಯ ರಾಜಕೀಯದಲ್ಲಿ ಪ್ರವೇಶಿಸುವರೆಂದು ತಿಳಿದುಬಂದಿದೆ.

### ಬಸ್ಸಿನಲ್ಲಿ ಕೂರಿಸದಿದ್ದುದಕ್ಕೆ ಡ್ರೈವರನಿಗೆ ಏಟು

ನೆಲಮಂಗಲ ಮತ್ತು ತಿಪಟೂರುಗಳ ಮಧ್ಯೆ ಓಡಾಡುವ ಎ. ಟಿ. ಎಸ್. ಮೋಟಾರ್ ಸರ್ವಿಸ್ಸಿನ ಡ್ರೈವರ್ ಮತ್ತು ಕಂಡಕ್ಟರರು ನೊಣವಿನಕೆರೆ ಬಳಿ ಅಲಬೂರಿನಲ್ಲಿ ಕಾದಿದ್ದ ೫೦ ಮಂದಿ ಪ್ರಯಾಣಿಕರನ್ನು ಬಸ್ಸಿನಲ್ಲಿ ಕೂರಿಸಲು ನಿರಾಕರಿಸಿದುದಕ್ಕಾಗಿ ಅವರು ಡ್ರೈವರ್ ಮತ್ತು ಕಂಡಕ್ಟರುಗಳನ್ನು ಹೊಡೆದರೆಂದು ವರದಿಯಾಗಿದೆ.

### ಕೊಯಮತ್ತೂರು-ಚಾಮರಾಜನಗರ ರೈಲ್ವೆ

ಚಾಮರಾಜನಗರ-ಕೊಯಮತ್ತೂರುಗಳ ನಡುವೆ ರೈಲ್ವೆ ಮಾರ್ಗವನ್ನು ನಿರ್ಮಿಸುವ ಬಗ್ಗೆ ಈಗಾಗಲೇ ಸರ್ವೆ ನಡೆದಿದೆಯೆಂದೂ, ಅದಕ್ಕಾಗಿ ೫ ಕೋಟಿ ರೂ.ಗಳು ವೆಚ್ಚವಾಗುವುದೆಂದೂ ಹೇಳಲಾಗಿದೆ. ಈ ರೈಲ್ವೆಯು ನೂರು ಮೈಲಿ ಉದ್ದವಿದ್ದು ಸುಮಾರು ೩೦ ಮೈಲಿಗಳಷ್ಟು ದೂರ ಪರ್ವತ ಪ್ರದೇಶದಲ್ಲಿ ೫೦ ಸುರಂಗಗಳನ್ನು ಹಾದುಹೋಗುವುದೆಂದೂ ವರದಿಯಾಗಿದೆ.

### ಪತಿಯರೊಡನೆ ಸಿನಿಮಾಕ್ಕೆ ಬರಬೇಕೆಂದು ನಿರ್ಬಂಧ

ಈಜಿಪ್ಟ್ ರಾಜಧಾನಿ ಕೈರೋವಿನ ಅವಿವಾಹಿತ ತರುಣ ತರುಣಿಯರು, ಸ್ವತಂತ್ರವಾಗಿ ಸುಂದರ ಪ್ರೇಮಿಗಳು ... ಪತಿಯರೊಡನೆ ಸಿನಿಮಾ ಮಂದಿರಗಳಿಗೆ ಭೇಟಿ ಕೊಡುವುದು ... [illegible] ... ಅಲ್ಲಿನ ... [illegible] ... ಕಾಗಿದೆ

## ಸಬ್‌ಮೆರೀನ್ ಯುದ್ಧಕ್ಕಾಗಿ ಅಮೆರಿಕನ್ನರ ಸಿದ್ಧತೆ

ಅಮೆರಿಕವು ಸಬ್ ಮೇರಿನುಗಳ ಧಾಳಿಯನ್ನು ಎದುರಿಸಲು ಸಕಲ ಏರ್ಪಾಡನ್ನೂ ಮಾಡಿಕೊಳ್ಳುತ್ತಿದೆ. ದೂರ ಪ್ರದೇಶಗಳಲ್ಲಿರುವ ಸಬ್ ಮೇರಿನ್‌ಗಳನ್ನು ಅಲ್ಲಲ್ಲೇ ನಾಶಮಾಡಲು ದೂರಗಾಮಿ ವಿಮಾನಗಳನ್ನು ತಯಾರಿಸಲಾಗುತ್ತಿದೆ ಅಲ್ಲದೆ ಡಿಸ್ಟ್ರಾಯರ್ ಹಡಗುಗಳ ಸಂಖ್ಯೆಯನ್ನು ೯೦ ರಿಂದ ೧೭೦ಕ್ಕೆ ಏರಿಸಲಾಗುತ್ತಿದೆ

## ಇಟಲಿ ಬಳಿ ಸಮುದ್ರದಲ್ಲಿ ಅದ್ಭುತ ಪ್ರಕಾಶ

ಉತ್ತರ ಇಟಲಿಯ ಪೀಸಾ, ಲುಕ್ಕಾ ಮತ್ತು ಲೆಗ್ ಹಾರ್ನ್‌ಗಳಲ್ಲಿ ಭೂಕಂಪಗಳಾಗುತ್ತಿವೆ ಸಹಸ್ರಗಟ್ಟಲೇ ಜನರು ಊರನ್ನು ಬಿಡುತ್ತಿದ್ದಾರೆ ಗಾಬ್ರಾ ತಿಖರದಲ್ಲಿ ಹೆಚ್ಚು ಭೂಕಂಪವಾಗಿದೆ ಸಮುದ್ರದಿಂದ ಪ್ರಕಾಶವು ಎದ್ದು ಮಿಂಚಿನ ಬಳ್ಳಿಯಂತೆ ಹಾದು ಹೋದುದನ್ನು ಕಾಣಲಾಯಿತು

## ಜಪಾನ್ ಯುದ್ಧ ಖೈದಿಗಳಿಗೆ ಗಲ್ಲು

ಓಕಿನಾವಾ ಬಳಿ ವಿಮಾನದಿಂದ ಕೆಳಕ್ಕೆ ಬಿದ್ದ ಅಮೆರಿಕನ್ನರ ತಲೆಕಡಿದ ದಕ್ಕಾಗಿ ೭ ಜನ ಜಪಾನ್ ಯುದ್ಧ ಖೈದಿಗಳನ್ನು ಗಲ್ಲಿಗೆ ಹಾಕಲಾಗಿದೆ

## ಇಟಲಿ- ಯುಗೋಸ್ಲೇವಿಯಾ ಒಪ್ಪಂದಕ್ಕೆ ಕರೆ

ಇಟಲಿ ಮತ್ತು ಯುಗೊಸ್ಲೇವಿಯಾಗಳಿಗೆ ಒಪ್ಪಂದವಾಗಬೇಕೆಂದು ಇಟಲಿ ವಿದೇಶಾಂಗ ಮಂತ್ರಿ ಕೌಂಟ್ ಸ್ಪ್ಫೋರ್ಜರವರು ಯುಗೋಸ್ಲೇವಿಯಾದ ಮುಖ್ಯ ಮಂತ್ರಿ ಮಾರ್ಷಲ್ ಟಿಟೋರವರಿಗೆ ಸೂಚನೆ ಯಿತ್ತಿದ್ದಾರೆ

## ಕಮ್ಯೂನಿಸ್ಟ್ ಧಾಳಿಯಿಂದ ನೊಂದವರಿಗೆ ಪರಿಹಾರ

ಮದರಾಸಿನ ಪ್ರಧಾನ ಮಂತ್ರಿ ಶ್ರೀ ಪಿ ಎಸ್. ಕುಮಾರಸ್ವಾಮಿ ರಾಜಾರವರು, ಕಮ್ಯೂನಿಸ್ಟರ ಧಾಳಿಗೆ ತುತ್ತಾಗಿ ನಷ್ಟ ಹೊಂದಿದವರಿಗೆ ಪರಿಹಾರ ಕೊಡುವ ಅಂಶವನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚಿಸುತ್ತಿರುವರೆಂದು ಹೇಳಿದರು

## ಸತ್ತ ಗಂಡನು ಹಾವಾಗಿ ಹೆಂಡತಿಯನ್ನು ಕಚ್ಚಿದ

ಸಿಲೋನಿನ ಒಂದು ಊರಿನಲ್ಲಿ ಗಂಡನು ಸತ್ತು ನಾಗರಹಾವಾಗಿ ಹೆಂಡತಿಯನ್ನು ಕಚ್ಚಿದ ಪ್ರಸಂಗವೊಂದು ಅಲ್ಲಿನ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ ಕೆಲವು ದಿನಗಳ ಹಿಂದೆ ಒಬ್ಬ ವಿಧವೆ ಹಾವು ಕಚ್ಚಿ ಸತ್ತಳೆಂದೂ, ಈ ಹಾವೇ ಅವಳ ಗಂಡನ ಪ್ರೇತವೆಂದು ... ನಂಬಿಕೆಯಿದೆಯೆಂದು ... ವಿಧವೆಯ ಗಂಡನು ... ಹಾವು ಹಾವನ್ನು ಹಿಡಿದು ಕೊಂದುಹಾಕಿದರೆಂದೂ ಹೇಳಲಾಗಿದೆ

## ಗೋರಿಂಗನ ನಿಧಿಯ ಪತ್ತೆ

ನೂರೆಂಬರ್ಗಿನ ಬಳಿ ಒಂದು ಭಾರಿ ಕೋಟೆಯಲ್ಲಿ ಅಮೇರಿಕದ ಸೈನಿಕರು ಶೋಧನೆ ನಡೆಸಿ ಅಲ್ಲಿನ ಗೋಡೆಗಳಲ್ಲಿ ಬಚ್ಚಿಡಲಾಗಿದ್ದ ಲಕ್ಷಾಂತರ ಪೌಂಡು ಬೆಲೆ ಬಾಳುವ ಚಿನ್ನದಗಟ್ಟಿಗಳು, ತಟ್ಟೆಗಳು ಮೊದಲಾದ ವಸ್ತುಗಳನ್ನು ಪತ್ತೆ ಹಚ್ಚಿದರೆಂದು ವರದಿಯಾಗಿದೆ ಅವುಗಳೆಲ್ಲವೂ ಮಾಜಿ ಜರ್ಮನಿ ನಾಯಕ ಗೋರಿಂಗನಿಗೆ ಸೇರಿದುವೆಂದು ಹೇಳಲಾಗಿದೆ

## ೧ ಲಕ್ಷ ಕಾಂಗ್ರೆಸ್ ಪಂಚಾಯಿತಿಗಳು

ಕಾಂಗ್ರೆಸ್ಸಿನ ಅಂಗರಚನೆ ಪ್ರಕಾರ ಈ ಸಾಲಿನಲ್ಲಿ ೧ ಲಕ್ಷ ಕಾಂಗ್ರೆಸ್ಸಿನ ಪ್ರೈಮರಿ ಪಂಚಾಯಿತಿಗಳು ಏರ್ಪಾಡಾಗುವುವು ಅವುಗಳಾದ ನಂತರ ಪ್ರಾಂತ ಮತ್ತು ಅಖಿಲ ಭಾರತ ಸಮಿತಿಗಳಾಗಬೇಕು ಇವುಗಳಾದ ಮೇಲೆ ಕಾಂಗ್ರೆಸ್ಸಿನ ಅಧಿವೇಶನವು ನಡೆಯಬೇಕಾಗಿದೆಯೆಂದು ಅಧ್ಯಕ್ಷ ಪಟ್ಟಾಭಿಯವರು ತಿಳಿಸಿದ್ದಾರೆ.

## ಭಾರಿ ಸಾಮಗ್ರಿವಾಹಕ ವಿಮಾನ

ಹದಿನೈದು ಟನ್ ಸಾಮಾನುಗಳನ್ನು ಹೊತ್ತು ಹಾರಬಲ್ಲ ಭಾರಿ ಸಾಮಗ್ರಿವಾಹಕ ವಿಮಾನವನ್ನು ಬ್ರಿಟನ್ನಿನಲ್ಲಿ ತಯಾರಿಸಲಾಗಿದೆ ... ಸಾಗಿಸಲು ಸಾಧ್ಯವಾಗುವುದು

## ಬೇಸಾಯಗಾರರಿಗೂ ಕಿಸಾನರಿಗೂ ಘರ್ಷಣೆ

ಕಳೆದ ಗುರುವಾರ ಅಂಬಾ ಸಮುದ್ರದ ಆಯರ ನಾಯಕ ಪುರದ ಸಮಾಜವಾದಿ ಕಿಸಾನರು ಅಲ್ಲಿ ಜಾರಿಯಲ್ಲಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸತ್ಯಾಗ್ರಹವನ್ನು ಆಚರಿಸಿದರು ಅವರು ಜಮೀನುಗಳಿಗೆ ಹೋಗಿ ನೇಗಿಲುಗಳನ್ನು ಸುತ್ತುಗಟ್ಟಿ ಬೇಸಾಯಕ್ಕೆ ಅಡಚಣೆ ಮಾಡಿದರು ಅದರ ಪರಿಣಾಮವಾಗಿ ಉಭಯರಿಗೂ ಘರ್ಷಣೆ ಸಂಭವಿಸಿತು. ಒಬ್ಬ ಸತ್ಯಾಗ್ರಹಿಗೆ ಗಾಯವಾಗಿದೆ ಪೋಲೀಸರು ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದರು ಕಿಸಾನ್ ಸಂಘದ ಕಾರ್ಯದರ್ಶಿ ಮತ್ತು ಇನ್ನಿತರ ೭೭ ಮಂದಿಯನ್ನು ದಸ್ತಗಿರಿ ಮಾಡಿ ಅವರುಗಳ ಮೇಲೆ ಮೊಕದ್ದಮೆ ಹೂಡಲಾಗಿದೆ


ಗಾಯತ್ರೀ ಟಾಕೀಸ್

11-4-50ರಿಂದ 2 ದಿನಗಳು ಮಾತ್ರ

ದಿನವಹಿ 3 ಪ್ರದರ್ಶನಗಳು

ಹಾಸ್ಯಮಯ ಮತ್ತು ವಿನೋದ ವರ್ಣರಂಜಿತ ಚಿತ್ರ

ದಿ ಬ್ಯೂಟಿಫುಲ್ ಬ್ಲಾಂಡ್ ಫ್ರಂ ಬ್ಯಾಷ್‌ಫುಲ್ ಬೆಂಡ್

ಪಾತ್ರ ಬೆಟ್ಟಿ ಗ್ರೇಬಲ್, ಸೀಸರ್ ರಾಮಿರೊ

ಮುಂದಿನ ಬದಲಾವಣೆ

ಏಪ್ರಿಲ್ ... ರಿಂದ

ರಾಬಿನ್ ಹುಡ್


## ಈ ರಾತ್ರಿ ನೆಹರೂ ಬ್ರಾಡ್‌ಕಾಸ್ಟ್ ಭಾಷಣ

ಈ ರಾತ್ರಿ ಇಂಡಿಯಾ ಪ್ರಧಾನಿ ನೆಹರೂರವರು ದೆಹಲಿ ರೇಡಿಯೋವಿನಲ್ಲಿ ಭಾರತ-ಪಾಕಿಸ್ತಾನ ಒಪ್ಪಂದವನ್ನು ಕುರಿತು ದೇಶಕ್ಕೆ ಪ್ರಸಾರ ಭಾಷಣ ಮಾಡುವರು

## ವಿಶ್ವವಿದ್ಯಾಲಯದ ಪ್ರಶ್ನೆ ಪತ್ರಿಕೆಗಳ ಮಾಯ

ವಿಶಾಖ ಪಟ್ಟಣಕ್ಕೆ ಹೋಗಬೇಕಾದ ಆಂಧ್ರ ವಿಶ್ವವಿದ್ಯಾಲಯದ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಪಾರ್ಸಲೊಂದು ಪಂಚಲೀ ಪಟ್ಟಣದ ಬಳಿ ರೈಲಿನಲ್ಲಿ ಮಾಯವಾಗಿದೆ ಈ ಸಂಬಂಧವಾಗಿ ಮೂರು ಜನ ರೈಲ್ವೆ ಕೂಲಿಗಾರರನ್ನು ಹಿಡಿಯಲಾಗಿದೆ

### ಪೌರಸಭಾಧಿವೇಶನ

ಮೈಸೂರು ಪೌರಸಭೆಯ ವಿಶೇಷ ಅಧಿವೇಶನವು ನಾಳಿದ್ದು ಮಧ್ಯಾಹ್ನ ೩-೩೦ ಘಂಟೆಗೆ ಪುರಸಭಾ ಭವನದಲ್ಲಿ ಸಮಾವೇಶಗೊಂಡು ನಗರಾಭಿವೃದ್ಧಿ ಸಮಿತಿಯಲ್ಲಿ ಖಾಲಿ ಬಿದ್ದಿರುವ ಎರಡು ಸ್ಥಾನಗಳಿಗೆ ಸದಸ್ಯರನ್ನು ಚುನಾಯಿಸುವುದು

ಮೇಲ್ಕಂಡ ಸಭೆಯು ಮುಂದುವರಿದ ವಿಶೇಷ ಅಧಿವೇಶನವು ಅದೇ ದಿನ ಮಧ್ಯಾಹ್ನ ೩ ಘಂಟೆಗೆ ಸೇರಿ ... ಸಾಲಿನ ... ದಾಜನ್ನೂ ಪರಿಶೀಲಿಸುವುದು.

### ಬ್ಯಾಂಕುಗಳಿಗೂ ರಜಾ ಕೊಡಬೇಕು

ಹಿಂದೆ ಪ್ರತಿ ವರ್ಷವೂ ಸೌರಮಾನ ಯುಗಾದಿ ಪ್ರಯುಕ್ತ ಎಲ್ಲಾ ಸ್ಥಳೀಯ ಬ್ಯಾಂಕುಗಳಿಗೂ ರಜಾ ಕೊಡಲಾಗುತ್ತಿತ್ತು ಈ ಸಾರಿ ಹಾಗೆ ಮಾಡಿಲ್ಲ ಸಹಕಾರ ಸಂಸ್ಥೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಿಗೆ ಮಾತ್ರ ರಜಾ ಕೊಡಲಾಗಿದೆ. ದಕ್ಷಿಣ ಭಾರತದಲ್ಲೆಲ್ಲಾ ಇದು ಪ್ರಾಮುಖ್ಯವಾದ ಹಬ್ಬವಾಗಿದೆ ಬ್ಯಾಂಕುಗಳಲ್ಲಿರುವ ಅನೇಕ ನೌಕರರೂ ಈ ಹಬ್ಬವನ್ನು ಆಚರಿಸುವರು ಆದುದರಿಂದ ಇನ್ನಿಮೇಲೆ ಸ್ಥಳೀಯ ಬ್ಯಾಂಕುಗಳಿಗೂ ಆ ದಿನ ರಜಾ ಕೊಡಬೇಕೆಂದೂ ಹಿತೈಷಿಗಳೊಬ್ಬರು ಸೂಚಿಸಿರುತ್ತಾರೆ

ಶ್ರೀ ಕೆ. ಸಿ. ರೆಡ್ಡಿ ಯವರು ದೆಹಲಿಯಲ್ಲಿ ಈ ತಿಂಗಳು ೨೫ರಲ್ಲಿ ಸೇರುವ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಅಲ್ಲಿಗೆ ಹೋಗುವರು


ಹಲ್ಲಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು ಮೊದಲಾದ ಎಲ್ಲ ದಂತ ವ್ಯಾಧಿಗಳನ್ನೂ ಖಾತರಿಯಾಗಿ ನಿವಾರಿಸುವುದು

ರಮಣಿ ಹಲ್ಲುಪುಡಿ

... ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುವುದು.

ರಮಣಿ ಟ್ರೇಡಿಂಗ್ ಕಂಪೆನಿ.

... ಕೃಷ್ಣರಾಜಪುರಂ ಮೈಸೂರು


## ಭಾಷಾ ಪ್ರಾಂತಗಳ ಬಗ್ಗೆ ಕೆ. ಸಿ. ರೆಡ್ಡಿ ಸಲಹೆ

ಭಾಷಾವಾರು ಪ್ರಾಂತಗಳನ್ನು ಒಂದಾದರ ಮೇಲೆ ಮತ್ತೊಂದು ರಚಿಸುವುದಕ್ಕಿಂತಲೂ ಎಲ್ಲವನ್ನೂ ಒಂದೇ ಕಾಲದಲ್ಲಿ ರಚಿಸುವುದು ಉತ್ತಮವೆಂದು ಶ್ರೀ ಕೆ. ಸಿ. ರೆಡ್ಡಿಯವರು ಬೆಳಗಾವಿಯಲ್ಲಿ ನಡೆದ ಪತ್ರಿಕಾ ಸಿರೋಧದ ಚಳುವಳಿಯ ಸಂಬಂಧದಲ್ಲಿ ಮಾತನಾಡುತ್ತಾ ಹೇಳಿದರು.

### ಸಹಕಾರ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಸರ್ಟಿಫಿಕೇಟು

ಕಳೆದ ವರ್ಷ ನಡೆದ ಸಹಕಾರ ಶಿಕ್ಷಣ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸರ್ಟಿಫಿಕೇಟುಗಳನ್ನು ಈ ತಿಂಗಳು ೨೯ನೇ ತಾ॥ ಬೆಂಗಳೂರಿನಲ್ಲಿ ನಡೆಯುವ ಇಡೀ ಸಂಸ್ಥಾನ ಸಹಕಾರ ಸಮ್ಮೇಳನದಲ್ಲಿ ಹಂಚಲಾಗುವುದೆಂದೂ, ಮೊಬಲಾ ಬಂದು ಅವುಗಳನ್ನು ಪಡೆಯಲು ಸಾಧ್ಯವಾಗದೆ ಹೋದವರು ತಿಳಿಸಿದರೆ ಅವುಗಳನ್ನು ಅಂಚೆ ಮೂಲಕ ರವಾನಿಸಲು ಏರ್ಪಾಡುಗಳನ್ನು ಮಾಡಲಾಗುವುದೆಂದೂ ತಿಳಿಸಲಾಗಿದೆ

### ಡೈಕ್ರೋಮೇಟ್ ಕಾರ್ಖಾನೆಯಿಂದ ಹೆಚ್ಚಿನ ಜನರ ವಜಾ

ಬೆಳಗುಳದ ಡೈಕ್ರೋಮೇಟ್ ಫ್ಯಾಕ್ಟರಿಯಿಂದ ... ಕೆಮಿಸ್ಟ್, ಅಸಿಸ್ಟೆಂಟ್ ಕೆಮಿಸ್ಟ್ ... ಹಾಕಲಾಗಿದೆ ಈ ಹಿಂದೆಯೇ ೪೦ ಜನರನ್ನು ತೆಗೆಯಲಾಗಿತ್ತು ಈ ಬಗ್ಗೆ ಮಂತ್ರಿಗಳಲ್ಲಿ ನಿಯೋಗ ಹೋಗಲು ಏರ್ಪಾಡಾಗುತ್ತಿದೆಯೆಂದು ಹೇಳಲಾಗಿದೆ.

### ಹರಿಕಥೆ

ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಶ್ರೀಯುತ ಆರ್. ಜಯರಾಮರಾಯರ ಮನೆ ಮುಂಭಾಗದಲ್ಲಿ ಹಾಕಿರುವ ಚಪ್ಪರದಲ್ಲಿ ಈ ರಾತ್ರಿ ವಿದ್ವಾನ್ ರಾಮಕೃಷ್ಣಶಾಸ್ತ್ರಿಗಳಿಂದ "ಭೂಕೈಲಾಸ" ಎಂಬ ಕಥೆ ನಡೆಯುವುದು


ನಾಯಿ ಕೆಮ್ಮಿಗೆ ಔಷಧಿ

WHOOPING COUGH REMEDY

ಗೂರ್ಲು, ಉಬ್ಬಸ, ಪರಿಣಾಮಕಾರಿ ಮತ್ತು ಗಲಾಯಕಟ್ಟೆ (TONSIL) ಖಾಯಿಲೆಯ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ 2-0-0

ಆರ್. ಎಸ್. ಪಂಡಿತರು,

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು.

ಶ್ರೀ

ಅನ್ನಪೂರ್ಣೇಶ್ವರೀ ಲಾಡ್ಜ್

ನಾರಾಯಣ ಶಾಸ್ತ್ರಿ ರಸ್ತೆ

ನಜ್ಜರ್ ಬಾದ್ ... ಮೈಸೂರು

... ಊಟವನ್ನು ... ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ

ಎ. ಎಸ್. ಪರಮೇಶ್ವರ ಅಯ್ಯರ್

ಪ್ರೊಪ್ರೈಟರ್


Edited, printed and published by A R Nagarajan at Sadhvi Press D. Subbiah Road, Mysore

ಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಪುಸ್ತಕ ೮ ಮಂಗಳವಾರ ೧೧-೪-೫೦ [ಸಂಚಿಕೆ ೫೧

# ಪಾಕಿಸ್ತಾನ-ಭಾರತಗಳಲ್ಲಿ ಯುದ್ಧ ಪ್ರಚಾರಕ್ಕೆ ನಿಷೇಧ

## ಲಿಯಾಖತ್ ಅಲಿಖಾನರಲ್ಲಿ ನೆಹರೂರವರಿಗೆ ವಿಶ್ವಾಸ

ಭಾರತ ಪಾಕಿಸ್ತಾನಗಳಿಗೆ ಆದ ಒಪ್ಪಂದದ ವಿಷಯವನ್ನು ಕುರಿತು ಪ್ರಧಾನಿ ಪಂಡಿತ ನೆಹರೂರವರು ಪಾರ್ಲಿಮೆಂಟಿನಲ್ಲಿ ಮತ್ತು ಪತ್ರಿಕಾ ಸಮ್ಮೇಳನದಲ್ಲೂ ಪ್ರಸ್ತಾಪಿಸಿದರು. ಪಾರ್ಲಿಮೆಂಟಿನ ಸದಸ್ಯರು ಅವರ ಹೇಳಿಕೆಗಳನ್ನು ಸ್ವಾಗತಿಸಿ ಹರ್ಷಧ್ವನಿಗೈದರು. ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತ ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಅಲಿಖಾನರ ಮಾತಿನಲ್ಲಿ ತಮಗೆ ಪೂರ್ಣ ವಿಶ್ವಾಸವಿರುವುದಾಗಿಯೂ, ಅವರ ಮಾತಿಗೆ ಪಾಕಿಸ್ತಾನದಲ್ಲಿ ಬೆಲೆಯಿರುವುದಾಗಿಯೂ, ಒಪ್ಪಂದದ ಷರತ್ತುಗಳನ್ನು ಕಾರ್ಯಗತ ಮಾಡಲು ತಮ್ಮ ಕೈಲಾದ ಪ್ರಯತ್ನವೆಲ್ಲಾ ಮಾಡುವುದಾಗಿ ಅವರು ಭರವಸೆಯಿತ್ತಿರುವುದಾಗಿ ಪ್ರಧಾನಿ ನೆಹರೂರವರು ದೇಶಕ್ಕೆ ನೆರರಾದರು. ನಿನ್ನೆ ನಡೆದ ಪ್ರಸಾರ ಭಾಷಣದಲ್ಲಿ, ಹಲವರಿಗೆ ಈ ಒಪ್ಪಂದದ ಪಾಲನೆ ... ದರು. ಇನ್ನೂ ಚಿಂತೆಯಿದೆ. ಈ ಒಪ್ಪಂದವನ್ನು ಪಾಲಿಸುವುದರಲ್ಲಿ ಪ್ರಾಮಾಣಿಕತೆಯಿಂದ ನಡೆದುಕೊಂಡರೆ ಎಲ್ಲವೂ ಸುಗಮವಾಗ ... ಎಂದವರು ತಿಳಿಸಿದರು.

ಪಂಡಿತ ನೆಹರೂರವರೊಡನೆ ತನಗೆ ಪೂರ್ಣ ಒಪ್ಪಿಗೆಯಿರುವುದಾಗಿ ಪತ್ರಿಕೆಯವರಿಗೆ ಸರ್ದಾರ್ ಪಟೇಲರು ತಿಳಿಸಿದ್ದಾರೆ.

## ಪಾಕಿಸ್ತಾನದ ಗುಮಾಸ್ತರ ಮುಷ್ಕರದ ಮುಕ್ತಾಯ

ಪಾಕಿಸ್ತಾನ ಸರಕಾರದ ಕೆಳದರ್ಜೆಯ ನೌಕರರ ಹನ್ನೊಂದು ದಿನಗಳ ಮುಷ್ಕರವು ನೆನ್ನೆ ಮುಕ್ತಾಯವಾಯಿತು. ಮುಸ್ಲಿಂ ಲೀಗಿನ ಅಧ್ಯಕ್ಷರಾದ ಚೌಧುರಿ ಖಲಿಕ್ ಉಜಮಾನರು ಅವರ ಕುಂದುಕೊರತೆಗಳನ್ನು ಪರಿಹರಿಸಲು ತಾವು ಸರ್ಕಾರದೊಡನೆ ಸಂಧಾನ ನಡೆಸುವುದಾಗಿ ಭರವಸೆಯಿತ್ತುದರಿಂದ ಮುಷ್ಕರವು ಕೊನೆಗಂಡಿತೆಂದು ಹೇಳಲಾಗಿದೆ.

## ತೆಲಂಗಾಣ್ಯ ಪ್ರದೇಶ ಕೇಂದ್ರದ ಆಡಳಿತಕ್ಕೆ

ಹೈದರಾಬಾದಿನ ತೆಲಂಗಾಣ್ಯ ಪ್ರದೇಶದ ... [illegible]

## ಕೆ. ಟಿ. ಸತ್ಯನಾರಾಯಣ ಶೆಟ್ಟರ ನಿಧನ

ಸ್ವಂ ಸು ಪ್ರೋ॥] ಬೆಂಗಳೂರು ೧೧

ಮೈಸೂರು ಕಾಂಗ್ರೆಸ್ ಮುಂದಾಳುಗಳಾಗಿದ್ದ ಬೇಲೂರಿನ ಶ್ರೀ ಕೆ. ಟಿ. ಸತ್ಯನಾರಾಯಣ ಶೆಟ್ಟರು ನೆನ್ನೆ ಸಂಜೆ ವಿಶ್ವೇಶ್ವರಪುರದಲ್ಲಿ ಹೃದಯ ಬೇನೆಯಿಂದ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮೃತರಿಗೆ ೫೦ ವರ್ಷ ವಯಸ್ಸಾಗಿತ್ತು. ಅವರು ಅನೇಕ ವರ್ಷಗಳಿಂದ ಕಾಂಗ್ರೆಸ್ಸಿನಲ್ಲೂ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲೂ ಸೇವೆಯನ್ನು ಸಲ್ಲಿಸಿ ಪ್ರಖ್ಯಾತರಾಗಿದ್ದರು.

## ಜಸ್ಟಿಸ್ ಕಾನಿಯಾರೊಡನೆ ಭೇಟಿಗಳು

ಸ್ವಂ ಸು ಪ್ರೋ॥] ಬೆಂಗಳೂರು ೧೧

ಸುಪ್ರೀಂ ಕೋರ್ಟಿನ ಶ್ರೀ ಹಿರಾಲಾಲ್ ಕಾನಿಯಾರವರು ನೆನ್ನೆ ಮಧ್ಯಾಹ್ನ ಹೈಕೋರ್ಟಿನಲ್ಲಿ ಚೀಫ್ ಜಸ್ಟಿಸ್ ಪಿ. ಮೇಡಪ್ಪ, ಶ್ರೀಗಳಾದ ಆರ್. ವೆಂಕಟರಾಮಯ್ಯ, ಟಿ. ಎನ್. ಮಲ್ಲಪ್ಪ ಮುಂತಾದವರೊಡನೆ ಕಾಗದ ಪತ್ರಗಳ ಪರಿಶೀಲನೆ ಮಾಡಿ ಮಾತುಕತೆ ನಡೆಸಿದರು. ... [illegible]

## ಪಾಕಿಸ್ತಾನ್-ಭಾರತಗಳ ಒಪ್ಪಂದ

[illegible]

## ಮೈಸೂರು-ಹೈದರಾಬಾದ್ ...

ಹೈದರಾಬಾದಿನ ನವ ಘಟನೆಗಳ ಬಗ್ಗೆ ... [illegible]

## ನೆರಯವರ ರಕ್ಷಣೆಗೆ ವಿಶೇಷ ಏರ್ಪಾಡುಗಳು

[illegible]

## ಯುದ್ಧ ಪ್ರಚಾರಕ್ಕೆ ನಿಷೇಧ

[illegible]

## ಹರಿಜನ ಸೇವಕ ಸಂಘದವರ ಪ್ರವಾಸ

ಮೈಸೂರು ೧೦

ಸಂಸ್ಥಾನದ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಶ್ರೀ ಸಿ ಆರ್. ರಾಮಯ್ಯ, ಕಾರ್ಯದರ್ಶಿ ಶ್ರೀ ವಿಶ್ವನಾಥಜಿ, ಜಿಲ್ಲಾ ಸಮಿತಿ ಅಧ್ಯಕ್ಷ ಶ್ರೀ ಎಸ್ ರಂಗರಾಮಯ್ಯ, ಶ್ರೀ ಕೆ ಶೇಷಾದ್ರಿ, ಡೆಪ್. ಕೆ. ಕುಮಾರಸ್ವಾಮಿ, ಮೈಸೂರು ತಾಲ್ಲೂಕ, ನಂಜನಗೂಡು ತಾಲ್ಲೂಕು ಅಮಲ್ದಾರರು, ಅಭಿವೃದ್ಧಿ ಅಧಿಕಾರಿಗಳು ಇವರೇ ಮುಂತಾದವರು ನೆನ್ನೆ ಮೈಸೂರು ತಾಲ್ಲೂಕಿನ ಲಲಿತಾದ್ರಿಪುರ, ವರುಣ, ಟಿ. ನರಸೀಪುರ ತಾಲ್ಲೂಕಿನ ಯಡದೊರೆ, ಟಿ. ನರಸೀಪುರ ಮತ್ತು ಸೋಸಲೆಗಳಿಗೆ ತೆರಳಿ ಅಲ್ಲಿನ ಹರಿಜನ ಕೇರಿಗಳಿಗೆ ಭೇಟಿಯಿತ್ತರು ಹರಿಜನರು ತಮ್ಮ ಅಹವಾಲುಗಳನ್ನು ಹೇಳಿಕೊಂಡರು. ಅವರಿಗೆ ಸೂಕ್ತವಾದ ಅನುಕೂಲಗಳನ್ನು ಕಲ್ಪಿಸುವುದಾಗಿ ಭರವಸೆ ನೀಡಲಾಯಿತು. ಬಹಿರಂಗ ಸಭೆಗಳು ನಡೆದು, ಭಾಷಣಗಳಾದವು. ಹರಿಜನರ ಅಭಿವೃದ್ಧಿ ಮತ್ತು ಅವರುಗಳ ಸ್ವಚ್ಛತೆಯ ವಿಷಯವಾಗಿ ನಾಯಕರು ಹಿತೋಪದೇಶ ಮಾಡಿದರು

### ಸಂಗೀತ ಕಛೇರಿ

ಬರುವ ಶುಕ್ರವಾರ ಗಾನವಿಹಾರದ ಬಿ ಡಾ. ಕೃಷ್ಣಪ್ಪನವರ ರಾಮಮಂದಿರದಲ್ಲಿ ಪ್ರದೋಷದ ಪ್ರಯುಕ್ತ ಶ್ರೀಮತಿ ಭೋಜಮ್ಮನವರ ಗಾನವು ಶ್ರೀಮತಿ ಇಂದಿರಮ್ಮನವರ ಪಿಟೀಲು ಮತ್ತು ವಿ॥ ವಾಲ್ಲಾರು ರಾಮಕೃಷ್ಣರವರ ಮೃದಂಗದೊಡನೆ ನಡೆಯುವುದು ಸರ್ವರಿಗೂ ಸ್ವಾಗತವಿದೆ

### ಸರ್ಕಾರದ ಕಾರ್ಯದರ್ಶಿಗಳ ಸಂಖ್ಯೆಯ ನಿಗದಿ

ಸರ್ಕಾರದ ಕಾರ್ಯದರ್ಶಿಗಳ ಸಂಖ್ಯೆಯು ಒಬ್ಬರಿಗಿಂತ ಹೆಚ್ಚಾಗಿರಕೂಡದೆಂದು ಕೇಂದ್ರ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ಸೂಚನೆ ಬಂದಿದೆಯೆಂದು ಗೊತ್ತಾಗಿದೆ


# ರಾಜಕಮಲ್ ಟಾಕೀಸ್

## 7—4—50 ರಿಂದ

ಅಮೋಘ ೧೬ ನೇ ವಾರ

ದಿನವಹಿ 2 ಪ್ರದರ್ಶನಗಳು

# ಜೀವನ

—: ಭೂಮಿಕೆ :—

ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ



## ರೇಬಿಲ್ ಪ್ರಿಂಟುಗಳು

ಶೀಘ್ರವಾಗಿಯೂ ಮತ್ತು ... ಅಚ್ಚು ... ಬೆಲೆಗೆ ... ರೆಯಬಹುದು

## ಮೈಸೂರು ಪ್ರೆಸ್

1474 ... ರಸ್ತೆ, ಮೈಸೂರು


Edited printed and published by A. R. Nagarjun at Sadhvi Press D Subbiah Road, Mysore

## ಯೂರೋಪಿನ ಅತ್ಯಂತ ಭಾರಿ ಅಣೆಕಟ್ಟು

ಆಸ್ಟ್ರಿಯಾ-ಜರ್ಮನಿ ಗಡಿ ಬಳಿ ಬರುವ ಹಲವು ವರ್ಷಗಳಲ್ಲಿ ಯೂರೋಪಿನ ಅತ್ಯಂತ ಭಾರಿಯಾದ ಅಣೇಕಟ್ಟನ್ನು ಕಟ್ಟಲಾಗುವುದು ... ಮಿಲಿಯನ್ ಪೌಂಡುಗಳು ಬೇಕಾಗುತ್ತವೆ. ೨೫೦೦೦ ಕೋಟಿ ಗ್ಯಾಲನ್ ಅಷ್ಟು ನೀರನ್ನು ಇಲ್ಲಿ ಶೇಖರಿಸಬಹುದು. ಮತ್ತು ೬೦ ಕೋಟಿ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಪ್ರತಿಗಂಟೆಗೂ ಉತ್ಪತ್ತಿ ಮಾಡಬಹುದು ೩೬೦ ಗಜ ಆಳ, ಮತ್ತು ೬೫೦ ಗಜ ಉದ್ದದಷ್ಟು ಅಣೆಕಟ್ಟು ಇರುವುದಾಗಿ ಗೊತ್ತಾಗಿದೆ


ಮನೆಮಾರ್ಗದ ಕಬ್ಬಿಣದ, ಪೆಟ್ಟಿಗೆಗಳು ಬೀರುಗಳು ಸಿದ್ಧವಾಗಿವೆ. ಬಿಡಿಸಿ ಸಹಾ ಮಾಡುತ್ತೇವೆ

**ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್,**

2707, ಹಳ್ಳದಕೇರಿ, ಮೈಸೂರು


## ಯುದ್ಧ ವೆಚ್ಚಕ್ಕಾಗಿ ಜಪಾನಿನಲ್ಲಿ ತೆರಿಗೆ

ಜಪಾನಿನ ಯುದ್ಧದ ಖರ್ಚನ್ನು ಹುಟ್ಟಿಸುವ ಸಲುವಾಗಿ ಅಲ್ಲಿರುವ ವಿದೇಶೀ ಬಂಡವಾಳಗಾರರ ಮೇಲೆ ದುಬಾರಿಯಾದ ತೆರಿಗೆಯನ್ನು ಹಾಕುವ ಬಗ್ಗೆ ಇತ್ತೀಚಿನಲ್ಲೇ ಅಲ್ಲಿನ ಸರ್ಕಾರದವರು ಒಂದು ಮಸೂದೆಯನ್ನು ತರುವರೆಂದು ಗೊತ್ತಾಗಿದೆ.


## ಭ್ರಮರಾಂಬಾ ಟಾಕೀಸ್

ಚಾಮರಾಜನಗರ

9—4—50 ರಿಂದ

ಜನಭರಿತವಾದ 12ನೇ ವಾರ

# ಚಂದ್ರಲೇಖಾ

(ತಮಿಳು)

ಪಾತ್ರ:- ಟಿ. ಆರ್. ರಾಜಕುಮಾರಿ, ರಂಜನ್, ಎಂ. ಕೆ. ರಾಧಾ,



**ಮೈ॥ ಗೌ॥ ಸಿಲ್ಕ್ ಫ್ಯಾಕ್ಟರಿ ಕ್ರೇಪ್ ಸೀರೆಗಳಿಗೆ, ಧರ್ಮಾವರಂ, ಪೂನಾ, ನಾಗಪುರ್ ಸೀರೆಗಳಿಗೆ**

## ಎಂ. ವಿ. ಭೋಜಯ್ಯ ಬಿ. ಎ. & ಬ್ರದರ್ಸ್,

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.



# ಚಾಮುಂಡೇಶ್ವರೀ ಟಾಕೀಸ್

## 13-4-50 ರಿಂದ ಅಮೋಘ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

**ಹಿಂದೂ ದೇಶದ ಚಲನಚಿತ್ರ ಚರಿತ್ರೆಯಲ್ಲಿ ಕ್ರಾಂತಿಯನ್ನುಂಟುಮಾಡಿದ ಮತ್ತು ಪ್ರದರ್ಶಿತವಾದೆಡೆಗಳಲ್ಲೆಲ್ಲಾ ಕೋಟ್ಯಾನುಕೋಟಿ ಪ್ರೇಕ್ಷಕರಿಂದ ಅತ್ಯುತ್ತಮ ಚಿತ್ರವೆಂದು ಹೊಗಳಲ್ಪಟ್ಟಿರುವ**

# ಜೆಮಿನಿಯವರ ಚಂದ್ರಲೇಖ (ಹಿಂದಿ)

**ಮುಖ್ಯ ಪಾತ್ರ:— ರಂಜನ್, ಟಿ. ಆರ್. ರಾಜಕುಮಾರಿ ಮತ್ತು ಯಶೋಧರಾ ಕಟ್ಜು.**



# ಶ್ರೀ ಗಣೇಶಾ ಟಾಕೀಸ್

## From 12—4—50 Daily 3 Shows

Showing for the First time in the City

A combination of three Great Russian Pictures

## The Story of Stalingrad

(Actual scenes from World War II)

## May-day Parade

(Full Russo colour I picture)

## In the Desert of Central Asia

ದಿ ಸ್ಟೋರಿ ಆಫ್ ಸ್ಟಾಲಿನ್‌ಗ್ರಾಡ್, ಮೇ ಡೇ ಪೆರೇಡ್ ಮತ್ತು ಇನ್ ದಿ ಡೆಸರ್ಟ್ ಆಫ್ ಸೆಂಟ್ರಲ್ ಏಷ್ಯಾ

——: Our Next Attraction :——

## "Sport Parade in Moscow"

AND

## 'BERLIN'


## Malaria No. 435 Engels

## ಪೆಸಿಫಿಕ್ ಸಾಗರ ಮತ್ತು ಯುದ್ಧ

ಶಾಂತಿ ಮತ್ತು ನೆಮ್ಮದಿಗಳಿಗೆ ಹೆಸರು ಹೊತ್ತಿದ್ದ ಶಾಂತಿ ಸಾಗರವು ದ್ವಿತೀಯ ಪ್ರಪಂಚದ ಯುದ್ಧದ ರಣಾಂಗಣವಾಯಿತು ಫಿಲಿಪೈನ್ ದ್ವೀಪಗಳಲ್ಲಿಯೂ ಮತ್ತು ಇತರ ದಕ್ಷಿಣ ಸಮುದ್ರ ದ್ವೀಪಗಳಲ್ಲೂ ಭಾರಿ ಕಾರ್ಯಾಚರಣೆಗಳಾದವು, ಜಪಾನರ ಮೇಲೆ ಧೀರೋದಾತ್ತ ಅಮೇರಿಕ ಮಿತ್ರರು ಅನೇಕ ಕಷ್ಟಗಳನ್ನು ಎದುರಿಸಿ ಹೋರಾಡಿದುದು ಈ ಕ್ಷೇತ್ರದಲ್ಲಿಯೇ.

ಜನರಲ್ ಮೆಕ್ ಆರ್ಥರ್‌ರವರಿಗೆ ತಮ್ಮ ಕೈಕೆಳಗಿದ್ದ ಸೈನ್ಯಗಳ ಬಲವು ಚೆನ್ನಾಗಿ ಅರಿವಾಗಿದ್ದಿತು. ಬಟಾನನ್ನು ಹಿಡಿದಿಡಲು ಬಹಳ ಕಾಲ ತಮ್ಮ ಸೈನಿಕರಿಗೆ ಸಾಧ್ಯವಾಗುವುದಿಲ್ಲವೆಂದೂ ಮಲೇರಿಯಾದಿಂದ ಅವ್ಯಕ್ತವಾಗಿದ್ದ ದಕ್ಷಿಣ ಸಮುದ್ರ ಪ್ರದೇಶಗಳಲ್ಲಿ ಬಹಳ ಕಾಲದ ಮತ್ತು ಬಹು ಕಠಿಣವಾದ ಕದನಗಳು ನಡೆಯಬೇಕೆಂದೂ ಅವರು ಅರಿತಿದ್ದರು.

ಮಲೇರಿಯಾದ ದುಷ್ಪರಿಣಾಮವನ್ನು ಕಡಿಮೆಯಾಗಿ ಭಾವಿಸದೇ ಜನರಲ್ ಮೆಕ್ ಆರ್ಥರ್‌ರವರು ಬಟಾನ್ ಪತನವಾಗಬಹುದಾದ ಕಾಲದಲ್ಲಿ ಕರ್ನಲ್ ಫಿಷರ್‌ರವರಿಗೆ ತಮ್ಮೊಡನೆ ಸಿಂಕೋನಾ ಬೀಜಗಳನ್ನು ತೆಗೆದುಕೊಂಡು ಹೋಗಲು ಆಜ್ಞೆ ಮಾಡಿದರು. ಈ ಬೀಜಗಳನ್ನು ಪ್ರಯೋಗ ... ಬಳಸಿ ... ಸಸ್ಯ ಶಾಸ್ತ್ರದ ಪ್ರವೀಣರು ಅವರು ಈ ಬೀಜಗಳನ್ನು ಹೇಗೋ ಒಂದು ಚೀಲದಲ್ಲಿ ತುಂಬಿಸಿ, ಬಟಾನನ್ನು ಬಿಟ್ಟು ನಂತರ ಮೆಕ್ ಆರ್ಥರ್‌ರವರು ತಿಳಿಸಿದಂತೆ ಅವರೊಡನೆ ಬೀಜಗಳ ಸಮೇತ ಪ್ರಯಾಣ ಮಾಡಿದರು.

ಈ ಬೀಜಗಳನ್ನು ನೆಡಲು ಸರಿಯಾದ ಜಾಗದ ಪರಿಶೀಲನೆಯನ್ನು ಜಮೀನು ಪ್ರವೀಣರ ಸಹಾಯದಿಂದ ಮಾಡಲಾಯಿತು ಸಾಂಟೋಪಿಗೆ ೨೦ ಮೈಲಿ ಉತ್ತರದ ಸ್ಪ್ರಿಂಗ್‌ವನ್ನು ಆಯ್ಕೆಯಾಗಿ ಆಯ್ದಾಯಿತು ಗಿಡವನ್ನು ನೆಡುವ ಕಾರ್ಯ ಬಹುಕಾಲ ಹಿಡಿಯಿತು. ಅನೇಕ ಅನಿರೀಕ್ಷಿತ ಘಟನೆಗಳನ್ನು ಎದುರಿಸಬೇಕಾಯಿತು. ಆದರೆ ಸೈನ್ಯಗಳಿಗೆ ಅವಶ್ಯಕವಾಗಿ ಮತ್ತು ಜಾಗ್ರತೆಯಾಗಿ ಕ್ವಿನೈನು ಬೇಕಾಗಿದ್ದುದರಿಂದ ಶೀಘ್ರ ಕಾರ್ಯಕ್ರಮ ಕೈಗೊಳ್ಳಲಾಯಿತು. ಈ ಮಧ್ಯೆ ಯುದ್ಧವು ಮುಗಿದು, ಯಾವ ಕಾರಣಕ್ಕಾಗಿ ಈ ಗಿಡಗಳನ್ನು ನೆಡಲಾಗಿತ್ತೋ ಅದು ಸಫಲವಾಗಲಿಲ್ಲ

ಮಲೇರಿಯಾ ಮೇಲೆ ನಡೆಸುವ ಕದನದಲ್ಲಿ ಕ್ವಿನೈನಿನ ಪ್ರಾಮುಖ್ಯತೆಯನ್ನು ಇದು ಎತ್ತಿತೋರಿಸುವುದು. ಪ್ರಾಚೀನ ... ಸಂಘದ ಮಲೇರಿಯಾ ಸಮಿತಿಯೂ ಕ ಈ ಇದನ್ನು ಪೂರ್ಣವಾಗಿ ಅರಿತಿತ್ತು. ... ಗಳಲ್ಲಿ ಅವರು ಪ್ರಕಟಿಸಿರುವ ವರದಿಯಲ್ಲಿ, ಮಲೇರಿಯಾವು ಬಂದರೆ ದಿನಕ್ಕೆ ... ಕ್ವಿನೈನನ್ನು ... ಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ ಮಲೇರಿಯಾ ಕಾಲದಲ್ಲೂ ಸಹ ಇದೇ ಸಿದ್ಧಾಂತವೆಂದು ಅವರು ಹೇಳಿದ್ದಾರೆ. ದಿನವಹಿ ... ಗ್ರೇನ್‌ಗಳನ್ನು ಪೂರ್ಣ ಗುಣವಾಗಲು ತೆಗೆದುಕೊಳ್ಳಬೇಕೆಂದು ಸಮಿತಿಯವರು ತಿಳಿಸಿದ್ದಾರೆ

ಪೋನ್: 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಬುಧವಾರ ೧೨-೪-೫೦ [ಸಂಚಿಕೆ ೨೯೩

# ರಷ್ಯಾ ಮತ್ತು ಅಮೆರಿಕಾ ವಿಮಾನಗಳ ಘರ್ಷಣೆ

## ನವಾಬ್ ಅಲಿ ದಸ್ತಗಿರಿಗೆ ಆಜ್ಞೆ

ಫರಾರಿಯಾಗಿರುವ ಹೈದರಾಬಾದಿನ ಮಾಜಿ ಪ್ರಧಾನಿ ಮೀರ್ ಲಾಯಕ್ ಅಲಿ ಮತ್ತು ಇತರ ಮೂವರನ್ನು ಬಂಧಿಸಲು ಆಜ್ಞೆಯಾಗಿದೆ. ಇವರ ಬಂಧನದ ಅವಧಿ ಈ ತಿಂಗಳು ೨೪ನೇ ತಾರೀಖು ವರೆಗೆ ಮಾತ್ರ ಇರುತ್ತದೆ. ಬಂಧನದಲ್ಲಿರುವ ಇವರುಗಳು ಮುಂದಿ ಅಪರಾಧಿಗಳನ್ನು ಈ ತಿಂಗಳು ೧೩ನೇ ತಾರೀಖು ನ್ಯಾಯಾಸ್ಥಾನದ ಮುಂದೆ ಹಾಜರ್ಪಡಿಸಲಾಗುವುದು.

## ಮಹರ್ಷಿಗಳ ಸ್ಥಿತಿ ಚಿಂತಾಜನಕ

ತಿರುವಣ್ಣಾಮಲೆಯ ಶ್ರೀ ರಮಣ ಮಹರ್ಷಿಗಳ ಸ್ಥಿತಿಯು ಚಿಂತಾಜನಕವಾಗಿ ... ಯಾರಿಗೂ ಭೇಟಿಯನ್ನು ಕೊಡಲಾಗುವುದಿಲ್ಲ

## ಕೇಂದ್ರ ಮಂತ್ರಿಗಳ ರಾಜೀನಾಮೆ ವಾಪಸು

ಪೂರ್ವ ಬಂಗಾಳ ಸಮಸ್ಯೆ ಬಗ್ಗೆ ಭಾರತ ಸರ್ಕಾರವು ಅನುಸರಿಸುತ್ತಿರುವ ನೀತಿಯ ... ದ ಅಸಮಾಧಾನಗೊಂಡು ಕೈಗಾರಿಕಾ ಮಂತ್ರಿ ಡಾ|| ಶ್ಯಾಮ ಪ್ರಸಾದ ಮುಖರ್ಜಿ ... ಪುನರ್ವಸತಿ ಮಂತ್ರಿಗಳು ಕೊಟ್ಟಿದ್ದ ರಾಜೀನಾಮೆಯನ್ನು ವಾಪಸು ತೆಗೆದುಕೊಳ್ಳಲು ಅಭಿಪ್ರಾಯ ಪಟ್ಟಿರುವರೆಂದು ತಿಳಿದು ಬಂದಿದೆ

## ಕೈನಾಕ್ ದ್ವೀಪದ ಆಕ್ರಮಣಕ್ಕಾಗಿ ವಿಫಲ ಪ್ರಯತ್ನ

ಚೀನೀಯ ಜೀನದ ದ್ವೀಪವಾದ ಹೈನಾನ್ ಮೇಲೆ ಧಾಳಿ ಮಾಡುವ ಬಲವಾಗಿ ... ಹಡಗುಗಳನ್ನು ಕಟ್ಟಿಕೊಂಡು ಕಮ್ಯೂನಿಸ್ಟರು ಆಕ್ರಮಣ ಮಾಡಲು ಪ್ರಯತ್ನ ... ವನ್ನು ರಾಷ್ಟ್ರೀಯರು ಬಲವಾದ ... ಯಿಂದ ವಿಫಲಗೊಳಿಸಿರೆಂದು ... ಕಮ್ಯೂನಿಸ್ಟರ ೧೩ ಹಡಗುಗಳನ್ನು ನಾಶಪಡಿಸಲಾಯಿತು ... ದವು ಓಡಿದವು

## ಟಿ. ಟಿ. ಕೃಷ್ಣಮಾಚಾರಿಗಳು ಕೇಂದ್ರ ಮಂತ್ರಿಗಳು

ಭಾರತ ಸರ್ಕಾರದ ಕೈಗಾರಿಕಾ ಸಚಿವ ಡಾ|| ಶ್ಯಾಮಪ್ರಸಾದ್ ಮುಖರ್ಜಿ ಅವರ ಜಾಗದಲ್ಲಿ ಬರೋಡಾದ ಮಾಜಿ ದಿವಾನರಾದ ಸರ್. ವಿ. ಟಿ. ಕೃಷ್ಣಮಾಚಾರಿಯವರನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ

## ...ಗಳಿಗೆ ಬಂದೂಕೆಯ ಪರವಾನು

[illegible]

... ನಂತರ ಹರಾ ... [illegible]

## ಪೂರ್ವ ಬಂಗಾಳಕ್ಕೆ ನೆಹರು

[illegible]

## ರಷ್ಯದ ಮೇಲೆ ಅಮೆರಿಕಾ ವಿಮಾನ ಹಾರಾಟ

ಕಳೆದ ೮ನೇ ತಾರೀಖು ರಷ್ಯಕ್ಕೆ ಸೇರಿದ ಲಟ್ವಿಯಾದ ಮೇಲೆ ೧೩ ಮೈಲಿ ದೂರದವರೆಗೂ ಹೋದ ಅಮೆರಿಕದ ವಿಮಾನವೊಂದಕ್ಕೂ, ರಷ್ಯದ ಕದನ ವಿಮಾನಕ್ಕೂ ತಿಕ್ಕಾಟವಾಗಿ, ಮೆಷಿನ್ ಗನ್ನುಗಳ ಪ್ರಯೋಗವಾಯಿತೆಂದು ವರದಿಯಾಗಿದೆ ಅಮೆರಿಕದ ವಿಮಾನವು ನಂತರ ಬಿದ್ದು ಹೋಯಿತೆಂದು ಹೇಳಲಾಗಿದೆ ಈ ಸಂಬಂಧವಾಗಿ ರಷ್ಯದ ವಿದೇಶಾಂಗ ಮಂತ್ರಿಗಳು ಅಮೆರಿಕದ ರಾಯಭಾರಿಗಳಿಗೆ ಪ್ರತಿಭಟನಾ ಪತ್ರವನ್ನು ಕಳುಹಿಸಿರುತ್ತಾರೆ

## ೨೫ನೇ ತಾ|| ನೆಹರೂರವರು ಕರಾಚಿಗೆ

ಅಲ್ಪ ಸಂಖ್ಯಾತರ ಸಂರಕ್ಷಣೆ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳಿಗೆ ಆಗಿರುವ ಒಪ್ಪಂದವನ್ನು ... [illegible] ... ಪಾಕಿಸ್ತಾನದ ಪ್ರಧಾನಿ ... [illegible] ... ದು ಬಂದಿದೆ

## ನಗರ ಕಾಂಗ್ರೆಸ್ ಕಾರ್ಯಕರ್ತರ ಸಭೆ

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಾಳೆದಿನ ಸಂಜೆ ೬ ಘಂಟೆಗೆ ಸ್ವಾತಂತ್ರ್ಯ ... ಕಾಂಗ್ರೆಸ್ ಕಛೇರಿಯಲ್ಲಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಮತಿ ... ದಿಂ ... ದಾಸಪ್ಪನವರು ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾರೆ ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ದಯಮಾಡಿ ಬರಬೇಕೆಂದು ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎನ್. ಚನ್ನಯ್ಯನವರು ಕೋರಿರುತ್ತಾರೆ

### ವಿಶೇಷ ಸೇವೆ

ಶ್ರೀರಾಮಾನುಜಾ ರಸ್ತೆಯ ೨೩ನೇ ನಂಬರ್ ಮನೆಯಲ್ಲಿರುವ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಚೈತ್ರ ಶುಕ್ಲದ ಪ್ರಯುಕ್ತ ... [illegible] ... ರಾತ್ರಿ ... ಬೆಳಗ್ಗೆ ದ ... ನಾಮಾವಳಿ ... ವಿಶೇಷ ಪೂಜಾ ... ಹಾಗೂ ಮಂಗಳಾರತಿ ... ಪ್ರಸಾದ ವಿನಿಯೋಗ ... [illegible]

## ಭೂಕಂದಾಯದ ಸೆಸ್ಸುಗಳ ವಜಾ

### ಭೂಕಂದಾಯ ಸಮಿತಿ ಶಿಫಾರಸು

ಬೆಂಗಳೂರು ೧೧

ಭೂಕಂದಾಯದ ಬಗ್ಗೆ ವಿಮರ್ಶೆ ಮಾಡಲು ಸರ್ಕಾರದಿಂದ ನೇಮಿತವಾದ ಸಮಿತಿಯವರು ಕಳುಹಿಸಿರುವ ಶಿಫಾರಸಿನಲ್ಲಿ ಭೂಕಂದಾಯದೊಡನೆ ಹಾಕಲಾಗುತ್ತಿರುವ ಸೆಸ್ಸುಗಳನ್ನು ವಜಾ ಮಾಡಬೇಕೆಂದೂ ಸೂಚಿಸಿರುವರಲ್ಲದೆ, ಗ್ರಾಮಾಧಿಕಾರಿಗಳಾದ ಪಟೇಲರು ಶ್ಯಾನುಭೋಗರುಗಳ ಪಟ್ಟದಾರಿಕೆಯನ್ನು ತಪ್ಪಿಸಿ, ಸಂಬಳದ ನೌಕರರನ್ನು ನೇಮಿಸಬೇಕೆಂದು ಸಲಹೆ ಮಾಡಿದ್ದಾರೆ ಜೋಡಿ ಮತ್ತು ಇನಾಂತಿಗಳನ್ನು ಕೊನೆಗಾಣಿಸಿ, ವಾರಸು ದಾರರಿಗೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ಸೂಚಿಸಿದ್ದಾರೆ ರೈತರಿಗೆ ಸಣ್ಣ ಸಂಸಾರಕ್ಕೆ ಬೇಕಾಗುವ ಆದಾಯವನ್ನು ... [illegible] ... ಶಿಫಾರಸು ಮಾಡಲಾಗಿದೆ

### ನಂದಿಯಲ್ಲಿ ಮಂತ್ರಿ ಮಂಡಲದ ಸಭೆ

ತಾ|| ... ನಂದಿ ಬೆಟ್ಟದ ಮೇಲೆ ... ಮಂತ್ರಿ ಮಂಡಲದ ಸಭೆ ... ಸೇರುವುದೆಂದು ಹೇಳಲಾಗಿದೆ

### ಸೂಚನೆ

ಸೌರಮಾನ ಯುಗಾದಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

## ತಂಜಾವೂರು ಅರಮನೆ ಚಿನ್ನದ ವಿಗ್ರಹಗಳ ಕಳುವು

ಕೆಲವು ದಿವಸಗಳ ಹಿಂದೆ ತಂಜಾವೂರಿನ ಅರಮನೆ ಪೂಜಾ ಕೊಠಡಿಯಿಂದ ೨೦ ಸಾವಿರ ರೂ ಬೆಲೆ ಬಾಳುವ, ೨೦ ತೊಲ ತೂಕವುಳ್ಳ ಶ್ರೀ ಭವಾನಿ ಮತ್ತು ಸೀತಾ ರಾಮರ ಚಿನ್ನದ ವಿಗ್ರಹಗಳು ... ಕಳವಾಗಿದೆ

## ಕೃಷಿಕನ ಮೊಮ್ಮಗನ ಮರಣ

[illegible]

## ಶ್ರೀ ಕಾನಿಯಾ ನಾಳೆ ದೆಹಲಿಗೆ ವಾಪಸು

ಸ್ವಂ. ಸು ಪ್ರೋ|] ಬೆಂಗಳೂರು ೧೧

ಭಾರತದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹಿರಾಲಾಲ್ ಕಾನಿಯರವರು ನಡೆಸುತ್ತಿದ್ದ ವಿಚಾರಣೆಯು ಮುಗಿಯಿತೆಂದು ಹೇಳಲಾಗಿದೆ ಅವರು ನಾಳೆ ದಿನ ದೆಹಲಿಗೆ ವಾಪಸು ತೆರಳುವರು. ಈ ದಿನ ವಕೀಲರ ಸಮ್ಮೇಳನದ ಪರವಾಗಿ ಶ್ರೀ ಮಿರ್ಲೆ ಲಕ್ಷ್ಮೀನಾರಣಪ್ಪ, ಶ್ರೀ ಹೆಚ್. ಲಿಂಗಪ್ಪ ಮತ್ತು ಶ್ರೀ ಸಿಟ್ಟೂರು ಶ್ರೀನಿವಾಸರಾಯರು ಅವರನ್ನು ಭೇಟಿ ಮಾಡಿದರು. ಕಾರ್ಯಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸುವ ಸಂದರ್ಭದಲ್ಲಿ ಮಾತುಕತೆಗಳಾದವೆಂದು ಗೊತ್ತಾಗಿದೆ. ಇಲ್ಲಿನ ವಕೀಲರ ಸಂಘದ ಪರವಾಗಿ ಎಂ. ಪಿ. ಸೋಮಶೇಖರ ರಾವ್ ಶ್ರೀ ಸಿ. ಜಿ. ಶಾಸ್ತ್ರಿ ಮತ್ತು ಎಲ್. ಎಸ್. ನಾರಾಯಣ ರಾಯರು ಕಾನಿಯರವರನ್ನು ಭೇಟಿ ಮಾಡಿದ್ದರು.

### ನಾಳೆ ಸಾರ್ವತ್ರಿಕ ರಜಾ

ಸೌರಮಾನ ಯುಗಾದಿಯಾದ ಪ್ರಯುಕ್ತ ನಾಳೆ ದಿನ ಸಾರ್ವತ್ರಿಕ ರಜ ಕೊಡಲಾಗಿದೆ.

§ ಶ್ರೀ ಎಲ್. ಎಸ್. ರಾಜುರವರ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರ ಸಾಕ್ಷ್ಯ ಮುಗಿಯಿತು ಈ ತಿಂಗಳು ೧೭ನೇ ತಾರೀಖಿಗೆ ಮುಂದಕ್ಕೆ ಹಾಕಲಾಗಿದೆ

§ ಪ್ರಿವೆಂಟಿವ್ ಡಿಟೆನ್ಷನ್ ಶಾಸನದ ಪ್ರಕಾರ ಬಂಧಿಸಲಾಗುವ ಜನರ ದಸ್ತಗಿರಿ ವಿದ್ಯಮಾನಗಳನ್ನು ಪುನರ್ವಿಮರ್ಶಿಸಲು ಶ್ರೀ ಎ. ಆರ್. ನಾಗೇಶ್ವರ ಅಯ್ಯರ್ ಮತ್ತು ಶ್ರೀ ಟಿ. ಸಿಂಗಾರವೇಲು ಮೊದಲಿಯಾರರನ್ನೊಳಗೊಂಡ ಸಮಿತಿಯು ರಚಿಸಲಾಗಿದೆ

## ನೆಹರೂರವರಿಗೆ ದಿನವಹಿ ೨೦೦೦ ಪತ್ರಗಳು

ಪ್ರಧಾನಿ ನೆಹರೂರವರಿಗೆ ಪ್ರತಿ ದಿನ ಸುಮಾರು ೨೦೦೦ ಬಗೆಯ ಪತ್ರಗಳು ಬರುತ್ತವೆಂದೂ, ಅವನ್ನೆಲ್ಲಾ ತಾವು ಓದ್ದಾಗಿ ನೋಡಲು ಸಾಧ್ಯವಿಲ್ಲದಿರುವುದರಿಂದ ಆ ಪತ್ರಗಳನ್ನು ಇತರರು ಓದಿ ಅತಿ ಮುಖ್ಯವಾದುವುಗಳನ್ನು ಮಾತ್ರ ಅವರ ಗಮನಕ್ಕೆ ತರುವರೆಂದು ಅವರು ತಿಳಿಸಿರುವರು

### ಸಂಗೀತ

ಈ ಸಂಜೆ ... ಘಂಟೆಗೆ ... ಭವನದಲ್ಲಿ ರಾಮೋತ್ಸವದ ಅಂಗವಾಗಿ ಪಾಲಘಾಟ್ ಶ್ರೀ ಸುಬ್ರಹ್ಮಣ್ಯ ಅಯ್ಯರ್ ರವರಿಂದ ಸಂಗೀತವೂ, ಶ್ರೀ ... ಕೇಶವಮೂರ್ತಿಯವರ ಪಿಟೀಲು, ... ಶ್ರೀ ಎಂ. ಎಸ್. ... ರವರ ಪಕ್ಕವಾದ್ಯದೊಡನೆ ನಡೆಯುವುದೆಂದು ... ಶ್ರೀರಾಮ ... ತಿಳಿಸುತ್ತಾರೆ

### ವಾರದಾ ಪೂಜೆ

ಕಳೆದ ೬ನೇ ತಾ|| ... ದಲು ಹಾ ... [illegible]

## ಸರಕಾರಿ ನೌಕರರು ... ಪ್ರದರ್ಶಿಸಬೇಕು

ಬೆಂಗಳೂರು ೧೦

[illegible]

### ಸಹಕಾರ ಶಿಕ್ಷಣ ಶಾಲೆ

ಮೈಸೂರು ಪ್ರಾಂತೀಯ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ಈ ತಿಂಗಳು ... ನೇ ತಾ॥ ನಿಂದ ಮೂರು ತಿಂಗಳ ಕಾಲ ಮೈಸೂರಿನಲ್ಲಿ ಸಹಕಾರ ಶಿಕ್ಷಣ ಶಾಲೆ ... ತೆರೆಯಲಾಗುವುದೆಂದೂ, ... ತಮ್ಮನೌಕರರನ್ನೂ ಮತ್ತು ಸದಸ್ಯರನ್ನೂ ಶಿಕ್ಷಣ ಪಡೆಯಲು ಕಳುಹಿಸಬೇಕೆಂದೂ ಕೋರಲಾ... ಸಹಕಾರದಲ್ಲಿ ಆಸಕ್ತಿಯುಳ್ಳ ... ಇದರಿಂದ ಪ್ರಯೋಜನ ಪಡೆಯಲು ... ಶಿಕ್ಷಣ ... [illegible]

### ವೇಣು ವಾದನ

[illegible]

## ಪ್ಯಾಸೆಂಜರ್ ರೈಲಿಗೂ ಗೂಡ್ಸ್ ರೈಲಿಗೂ ಢಿಕ್ಕಿ

ಎಂ ಎಸ್ ಎಂ ರೈಲ್ವೆಯ ಗುಂಟೂರು ... ವಿಭಾಗದಲ್ಲಿ ಕಳೆದ ಭಾನುವಾರ ಒಂದು ಪ್ರಯಾಣಿಕರ ರೈಲಿಗೂ ಢಿಕ್ಕಿ ಹೊಡೆದು ಒಬ್ಬ ಫೈರ್‌ಮನ್ನನು ಮಡಿದನು. ಇತರ ಐದು ಮಂದಿಗೆ ಗಾಯಗಳಾಗಿವೆ. ಹಲವು ವ್ಯಾಗನ್ನುಗಳಿಗೆ ... ಆಗಿ ಪ್ಯಾಸೆಂಜರ್ ರೈಲಿನ ಇಂಜನ್ನು ... ತಪ್ಪಿತೆಂದೂ ವರದಿಯಾಗಿದೆ.

## ಗಂಡ ಬೇಕು

ಸಿಂಗಪುರದ ೪೦ ವರ್ಷದ ಚೀಣಾ ಸ್ತ್ರೀಯೊಬ್ಬಳು ವಿವಾಹ ಮಾಡಿಕೊಳ್ಳಲು ... ಗಂಡನನ್ನು ಹುಡುಕಿಕೊಂಡು ಹೊರಟಿದ್ದಾಳೆ. ತಕ್ಕಿನ ಸಮಾಜ ಕ್ಷೇಮದ ... ಸಹಾಯವನ್ನು ಆ ಬಗ್ಗೆ ಕೇಳುತ್ತಾಳೆ. ಆಕೆಯು ತೆಂಗಿನ ತೋಟಗಳ ಮತ್ತು ದೊಡ್ಡ ಮನೆಯ ಬಾಡಿಗೆದಾರರು ಆಕೆಯನ್ನು ... ರುವುದಾಗಿಯೂ ಆ ಅವರುಗಳ ಉಪಟಳದಿಂದ ತಪ್ಪಿಸಿಕೊಳ್ಳಲು ಒಬ್ಬನನ್ನು ಮದುವೆ ಮಾಡಿಕೊಂಡರೆ ಸಾಧ್ಯವೆಂದೂ ಆಕೆ ನಂಬಿದ್ದಾಳೆ. ಗಂಡನು ಸಿಕ್ಕದರೆ ಅವನನ್ನು ತಾನು ಕಾಪಾಡಲು ಶಕ್ತಳಾಗಿರುವುದಾಗಿ ಅವಳು ತಿಳಿಸಿದಾಳೆ.

## ದಕ್ಷತೆಗೆ ಮದ್ರಾಸಿನಲ್ಲಿ ಸ್ಥಾನವಿಲ್ಲವೆಂದು ಸಿ. ವಿ. ರಾಮನ್

... ವಸ್ತುಗಳ ನಿಜವಾದ ಬೆಲೆಯನ್ನು ... ದ ಯಾವ ರಾಜ್ಯದ ಪ್ರಜೆಗಳಾದರೂ ಮುಂದುವರೆಯುವುದಿಲ್ಲ. ಆದರೆ ದುರದೃಷ್ಟವಶಾತ್ ಮದ್ರಾಸು ಸಂಸ್ಥಾನದಲ್ಲಿ ದಕ್ಷತೆಯನ್ನು ಮೂಲೆಗೆ ಒತ್ತರಿಸಿ, ಇತರ ವಿಷಯಗಳಿಗೆ ಹೆಚ್ಚಿಗೆ ಗಮನವೀಯಲಾಗುತ್ತಿದೆ-ಹೀಗೆಂದು ಸರ್ ಸಿ ವಿ ರಾಮನ್ ರವರು ... ಭಾಷಣ ಮಾಡುತ್ತಾ ತಿಳಿಸಿರುವರು.

## ಕಮ್ಯೂನಿಸ್ಟ್ ಚೀಣಾಕ್ಕೆ ರಷ್ಯದ ಸಹಾಯ

ರಷ್ಯವು ಕಮ್ಯೂನಿಸ್ಟ್ ಚೀಣಾಕ್ಕೆ ... ಮಾಡುತ್ತಿರ ... ದೂ ... ವಿಶ್ವ ... ರಾಷ್ಟ್ರೀಯ ಚೀಣಾ ... ವಿಶ್ವಸಂಸ್ಥೆಗೆ ದೂರು ಕೊಟ್ಟಿದ್ದಾರೆ.

## ತಿಂಗಳ ಕೊನೆಯಲ್ಲಿ ಮಂತ್ರಿ ಮಂಡಲದ ಬದಲಾವಣೆ

ಈ ತಿಂಗಳು ಆಖೈರಿನಲ್ಲಿ ಕೇಂದ್ರ ಮಂತ್ರಿ ಮಂಡಲದಲ್ಲಿ ಬದಲಾವಣೆಯನ್ನು ಮಾಡಲಾಗುವುದೆಂದು ಹೇಳಲಾಗಿದೆ.

## ಮುಸ್ಲಿಂ ಯುವತಿಯ ಅಪಹಾರ ಮತ್ತು ಮಾರಾಟ

ಕಲ್ಕತ್ತೆಯಲ್ಲಿ ಮುಸಮತ್ ... ಎಂಬ ೩೦ ವರ್ಷದ ಮಹಿಳಾ ... ನ್ನು ಅಪಹರಿಸಿ, ಅವಳನ್ನು ... ರನೊಬ್ಬನಿಗೆ ೩೫೦ ರೂ ಗಳಿಗೆ ಮಾರಾಟ ಮಾಡಿದ ಅಪಾದನೆಗಾಗಿ ಇಬ್ಬರು ... ಸ್ಲಿಮರ ದಸ್ತಗಿರಿಯಾಗಿದೆ ... ಧುಗಳೊಬ್ಬರಿಗೆ ಶಿಕ್ಷೆ ... ಆಕೆಯನ್ನು ಕರೆದೊಯ್ದು ... ರು ಮಾರಿದರು

## ಪಾಕಿಸ್ತಾನ ಪ್ರಜಾ ಸತ್ತಾತ್ಮಕ ರಾಜ್ಯ

ಪಾಕಿಸ್ತಾನವು ಪ್ರಜಾ ಸತ್ತಾತ್ಮಕ ... ದ್ದರೂ ಆಧುನಿಕ ಪ್ರಜಾ ಸತ್ತಾ... ಅದಕ್ಕೆ ... ವುದಾಗಿಯೂ ಲಿಯಾಕತ್ ಅಲಿಖಾನರು ತಮಗೆ ತಿಳಿಸಿರುದಾಗಿ ಪ್ರಧಾನ ನೆಹರೂರವರು ... ವರು ಒಪ್ಪಂದದಲ್ಲಿ ಈ ಭರವಸೆ... ನ್ನು ಕಾಣಿಸಲಾಗಿದೆ

---


ಗಾಯತ್ರೀ ಟಾಕೀಸ್

13-4-50ರಿಂದ 2 ದಿನಗಳು ಮಾತ್ರ ದಿನವಹಿ 3 ಪ್ರದರ್ಶನಗಳು

ಸ್ಟೈಲ್ ... ಸ್ಟೋ...

ಪಾತ್ರ – ... ಫ್ಲ...

– ... ದಿನ ಬದಲಾವಣೆ..

... ನಟ ... ರಾಬಿನ್ ಹುಡ್

ಒಲಂಪಿಯಾ

ಬೆಳಗಿನ ಪ್ರದರ್ಶನ

13-4-50ರಿಂದ 5 ದಿನಗಳು ಮಾತ್ರ

10-30 ಕ್ಕೆ

... ರವರ

ಸಂಜೋಗ್

ಪಾತ್ರ - ... ಮತ್ತು ಮೆಹ...

ರಾಜಕಮಲ್ ಟಾಕೀಸ್

14 -4–50 ರಿಂದ

ಅಮೋಘ ... ನೇ ವಾರ

ದಿನವಹಿ 2 ಪ್ರದರ್ಶನಗಳು

ಜೀವನ

—ಭೂಮಿಕೆ —

... ಟಿ ಆರ್ ... ಚಂದ್ರ, ಲಲಿತ-ಪದ್ಮಿನಿ

Morning Shows
From 14-4-50 For 4 d...
The Laughing Lady
(In Colour Technicol...
With – Anne Ziegler
Webster Booth &
Peter Graves

... ಟಾಕೀಸ್

13-4-50 ರಿಂದ ಅಮೋಘ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ಹಿಂದೂ ದೇಶದ ಚಲನಚಿತ್ರ ಚರಿತ್ರೆಯಲ್ಲಿ ಕ್ರಾಂತಿಯನ್ನುಂಟುಮಾಡಿದ ಮತ್ತು ಪ್ರದರ್ಶಿತವಾದೆಡೆಗಳಲ್ಲೆಲ್ಲಾ ಕೋಟ್ಯಾನುಕೋಟಿ ಪ್ರೇಕ್ಷಕರಿಂದ ಅತ್ಯುತ್ತಮ ಚಿತ್ರವೆಂದು ಹೊಗಳಲ್ಪಟ್ಟಿರುವ

ಜೆಮಿನಿಯವರ ಚಂದ್ರಲೇಖ (ಹಿಂದಿ)

ಮುಖ್ಯ ಪಾತ್ರ:— ರಂಜನ್, ಟಿ. ಆರ್. ರಾಜಕುಮಾರಿ ಮತ್ತು ಯಶೋಧರಾ ಕಟ್ಜು.

ಶ್ರೀ ಗಣೇಶಾ ಟಾಕೀಸ್

From 12–4–50 Daily 3 Shows
Showing for the First time in the City
A combination of three Great
Russian Pictures
The Story of Stalingrad
(Actual scenes from World War II)
May Day Parade
(Full Russo colour picture)
... Desert ... Central Asia

ದಿ ... ಮತ್ತು ದಿ ಡಸರ್ಟ್ ಆಫ್ ಸೆಂಟ್ರಲ್ ಏಷ್ಯಾ

—— Our Next Double Attraction ——
"Sport Parade in Moscow"
AND
BERLIN


Edited, printed ... published by A. R. ... rajan at Sadhvi Press ... Mysore

ಇಂದಿನ ಪತ್ರಿಕೆ ೩ ಕಾಸು

# ಪ್ರಧಾನಿಗಳ ಭೇಟಿ
# ಕಾಶ್ಮೀರ ಪ್ರಶ್ನೆ

## ನಂದಿ ಬೆಟ್ಟಕ್ಕೆ ಸಚಿವರುಗಳ ಪ್ರಯಾಣ

## ಉಪಸಮಿತಿ ಆರಂಭ ಮತ್ತು ಮುಕ್ತಾಯ

## ಪ್ರಧಾನಿಗಳ ಮರು ಭೇಟಿಯಲ್ಲಿ ಕಾಶ್ಮೀರ ಪ್ರಶ್ನೆ

ಪ್ರಧಾನಿ ಲಿಯಾಕತ್ ನೆಹರೂರವರೊಡನೆ ... ಭೇಟಿ ಮಾಡುವ ಕಾಲದಲ್ಲಿ ಕಾಶ್ಮೀರದ ... ಪ್ರಶ್ನೆಗಳನ್ನು ... ಪಾಕಿಸ್ತಾನದ ... ಲಿಯಾಖತ್ ಅಲಿಖಾನರು ತಿಳಿಸಿದ್ದಾರೆ.

## ನೆಹರೂ ಲಿಯಾಖತ್ ಅಲಿಖಾನರಿಗೆ ಅಭಿನಂದನೆ

## ಅಧ್ಯಕ್ಷರ ಭೇಟಿ

## ಮುಂದಿನ ಯಾತ್ರೆಗೆ ಸಿದ್ಧತೆ

## ಪಾನ ನಿರೋಧದ ಶಾಸನದ ಮೇಲೆ ಹೈಕೋರ್ಟಿನ ಆಜ್ಞೆ

ಬೊಂಬಾಯಿ ಪಾನ ನಿರೋಧದ ಶಾಸನವನ್ನು ವಿರೋಧಿಸಿ ... ಪತ್ರಿಕೆಯ ಸಂಪಾದಕರೊಬ್ಬರು ಹೈಕೋರ್ಟಿನಲ್ಲಿ ದಾವೆಯನ್ನು ಹೂಡಿದ್ದಾರೆ ...

## ಮಧ್ಯ ಚೀನಾದ ೧ ಕೋಟಿ ಜನ ಕ್ಷಾಮಕ್ಕೆ ಗುರಿ

ಮಧ್ಯ ... ಚೀನಾದ ಪ್ರದೇಶದಲ್ಲಿರುವ ೧ ಕೋಟಿ ಪ್ರಜೆಗಳು ಕ್ಷಾಮದಿಂದ ... ತಿಳಿದು ಬಂದಿದೆ ...

## ಅರಮನೆ ಗೌರವದಿಂದ ಬಿದ್ದು ರೇಸಾ ಅಂಸರೆಮರಣ

ANNOUNCEMENT EXTRAORDINARY

New Management Lakshmi Theatre Mysore, hereby inform all ... from 15—4—50 Only Foreign Pictures of quality will be exhibited to fill your hearts with lilting entertainment.

Opening Programme from 15—4—50

Return of October (Technicolor)

Shortly Coming—Big Sombrero, Jolson Sings Again, Last Train, Etc.,

Revised Rates

Box 1 14 0 ... 0 15 6 I Class 0 12 0 II Class 0 8 0 III Class 0 5 0

ರಣಜಿತ್
15—4—50 ರಿಂದ

ಪ್ರಭುದೇವಾ ಟಾಕೀಸ್
15—4—50ರಿಂದ

ಕೈಲಾಸ

ಗಾಯತ್ರಿ ...

॥ ಶ್ರೀ ॥

-: ಹೊಸ ವರ್ಷದ ಶುಭಾಶಯಗಳು :-

ಶ್ರೀ ಚಾಮುಂಡಾಂಬಿಕೆಯು ನಿಮ್ಮೆಲ್ಲರಿಗೂ ಆಯುರಾರೋಗ್ಯ ಅಭಿವೃದ್ಧಿಯನ್ನು ಕರುಣಿಸಲಿ!

CATERERS BY APPOINTMENT TO H. H. THE MAHARAJA OF MYSORE




TEL: NO. 541 ESTD. 1944

# ಶ್ರೀ ಚಾಮುಂಡೇಶ್ವರಿ ಭವನ್

ಇಲವಾಲ್ ರೋಡ್, ಮೈಸೂರು

ಉದ್ಯಾನ ನಗರ ಮತ್ತು ಸೌಂದರ್ಯದ ಬೀಡೆಂದು ಖ್ಯಾತಿಗೊಂಡಿರುವ ಮೈಸೂರು ನಗರದ ಶ್ರೇಷ್ಠ ಉಚ್ಚ ತರಗತಿಯ ವಸತಿ ಗೃಹ ಮತ್ತು ಫಲಾಹಾರ ಮಂದಿರ; ಹಾಗೂ ಶುಚಿರುಚಿಯ ಊಟದ ಮನೆ

## ನೀವು ನಮ್ಮಲ್ಲಿಗೇ ಏಕೆ ಭೇಟಿ ಕೊಡಬೇಕೆಂದರೆ?

○ ಶುಚಿರುಚಿ ಮತ್ತು ಆರೋಗ್ಯಕರವಾಗಿರುವ ಗುಜರಾತಿ ಮತ್ತು ಮದ್ರಾಸ್ ಊಟಕ್ಕಾಗಿ

○ ಅತ್ಯಾಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ಕೊಠಡಿಗಳಿಗಾಗಿ ಹಾಗೂ ಕುಟುಂಬದೊಡನೆ ಬರುವವರಿಗೆ ಏರ್ಪಡಿಸಿರುವ ಪ್ರತ್ಯೇಕವಾದ ಅನುಕೂಲವಾದ ಊಟ ಮತ್ತು ವಸತಿಗಾಗಿ

○ ಅಪ್ಪಟ ತುಪ್ಪದಲ್ಲೇ ತಯಾರಾದ ಶುಚಿ ಮತ್ತು ರುಚಿಕರವಾದ ಸಿಹಿ ಮತ್ತು ಖಾರದ ತಿಂಡಿಗಳಿಗಾಗಿ

○ ಟೀ ಪಾರ್ಟಿ ಮತ್ತು ಇತರ ಸಂತೋಷ ಕೂಟಗಳಿಗೆ ನಾವು ಮಾಡುವ ಅಚ್ಚುಕಟ್ಟಾದ ಏರ್ಪಾಡಿಗಾಗಿ

**ಸೂಚನೆ:— ಪ್ರತಿ ಭಾನುವಾರದ ದಿನ ಸ್ಪೆಷಲ್ ಊಟಕ್ಕಾಗಿ ವಿಶೇಷ ಏರ್ಪಾಡನ್ನು ಮಾಡಲಾಗಿದೆ.**

ಮಾಲೀಕರು:— ಸೇಟ್ ಮುನ್ನಿಲಾಲ್ ಮತ್ತು ಸಿ. ವಿ. ರಾಮಯ್ಯರ್.

---

## A RECENT OPINION

THE PRIVATE SECRETARY TO H. H. THE MAHARAJA OF MYSORE

Park House, Mysore. March 31, 1950.

It gives me great pleasure to certify that the catering arrangements done by you in connection with the At Home at the Chamundi Gymkhana on the occasion of the celebration [illegible] Republic [illegible] very good. The arrangements were indeed very clean and neat. The preparations were tasty and nice and served quickly with a quiet efficiency that was appreciated by all the guests. I wish your business a bright future.

(Sd.) SAFI DARASHA,
Private Secretary.

ಪೋಸ್ಟ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

# ಸಾಧ್ವಿ

ಸಂಪುಟ ೮] ಶನಿವಾರ ೧೫-೪-೫೦ [ಸಂಚಿಕೆ ೨೧೮

# ಭಾರತಸರ್ಕಾರದೊಡನೆ ಮಹಾರಾಜರ ಕರಾರು

## ರಮಣ ಮಹರ್ಷಿಗಳು ಪರಂಧಾಮವನ್ನೈದಿದರು.

ತಿರುವಣ್ಣಾಮಲೆಯಲ್ಲಿ ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದ ಭಗವಾನ್ ಶ್ರೀ ರಮಣ ಮಹರ್ಷಿಗಳವರು ನೆನ್ನೆ ರಾತ್ರಿ ೯ ಘಂಟೆಗೆ ಪರಂಧಾಮವನ್ನೈದಿದರೆಂಬ ವಿಷಾದ ವಾರ್ತೆ ಬಂದಿದೆ. ಆಧ್ಯಾತ್ಮಿಕ ಜ್ಞಾನಾರ್ಜನೆ ಮಾಡುವ ನಿಮಿತ್ತ ಬಾಲ್ಯದಲ್ಲೇ ಶ್ರೀ ರಮಣ ಮಹರ್ಷಿಗಳು ತಪಶ್ಚರ್ಯೆಯಲ್ಲಿ ನಿರತರಾಗಿ ಸುಮಾರು ೫೦ ವರ್ಷಗಳ ಹಿಂದೆ ರಮಣಾಶ್ರಮವನ್ನು ಸ್ಥಾಪಿಸಿ ತಿರುವಣ್ಣಾಮಲೆಯಲ್ಲಿ ನೆಲೆಸಿದರು. ಅವರಿಗೆ ೭೧ ವರ್ಷ ವಯಸ್ಸಾಗಿತ್ತು. ಮಹರ್ಷಿಗಳು ಅನೇಕ ಆಧ್ಯಾತ್ಮಿಕ ಗ್ರಂಥಗಳನ್ನು ರಚಿಸಿರುವರು. ದೇಶ ವಿದೇಶಗಳ ಅನೇಕ ಶಿಷ್ಯರು ರಮಣಾಶ್ರಮದಲ್ಲಿ ನೆಲೆಸಿ ಮಹರ್ಷಿಗಳಿಂದ ಜ್ಞಾನಾರ್ಜನೆ ಪಡೆಯುತ್ತಿದ್ದರು.

## ಮುಖರ್ಜಿ ರಾಜೀನಾಮೆಯು ಅಂಗೀಕಾರವೇ ?

ಕೇಂದ್ರ ಮಂತ್ರಿಮಂಡಲಕ್ಕೆ ರಾಜೀನಾಮೆ ಸಲ್ಲಿಸಿರುವ ಡಾ॥ಮುಖರ್ಜಿ ಮತ್ತು ಶ್ರೀ ಕೆ. ಸಿ. ನಿಯೋಗಿ ರವರು ತಮ್ಮ ರಾಜೀನಾಮೆಯನ್ನು ವಾಪಸು ತೆಗೆದುಕೊಳ್ಳಲು ಒಪ್ಪದಿರುವುದಿಲ್ಲವೆಂದು ಹೇಳಲಾಗಿರುವುದರಿಂದ ಪ್ರಧಾನಿ ಪಂಡಿತ ನೆಹರೂರವರು ರಾಜೀನಾಮೆಗಳನ್ನು ಅಂಗೀಕರಿಸುವ ಸಂಭವವಿದೆ

## ವಿದ್ಯಾರ್ಥಿಗಳು ರಾಜಕೀಯಕ್ಕೆ ಹಾಕಬಾರದು

### ಎಸ್. ಚನ್ನಯ್ಯನವರ ಹಿತೋಪದೇಶ

ಮೈಸೂರು ೧೫

ಶಿವರಾಮಪೇಟೆಯ ಶ್ರೀರಾಮಚಂದ್ರ ದೇವಸ್ಥಾನದಲ್ಲಿ ಲೋಕಸೇವಾನಿರತ ನಾರಾಯಣರಾಯರು ನಡೆಸುತ್ತಿದ್ದ ಶ್ರೀ ರಾಮೋತ್ಸವದ ಅಂಗವಾಗಿ ನೆನ್ನೆ ದಿನ ಸಮಾರೋಪ ಸಮಾರಂಭವನ್ನು ಏರ್ಪಡಿಸಿದ್ದರು. ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ ಮತ್ತು ಸ್ವಾಗತಗಳ ನಂತರ ದೇಶಿಕಣ್ಣನವರ ವಿದ್ಯಾರ್ಥಿ ನಿಲಯದ ವರದಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ನಾರಾಯಣರಾಯರ ಧರ್ಮ ಕಾರ್ಯಗಳಿಗಾಗಿ ಅವರನ್ನು ಅಭಿನಂದಿಸಿದರು. ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ನಂತರ ಸರ್ಕಾರಿ ಉದ್ಯೋಗಕ್ಕೆ ಸೇರುವುದನ್ನೇ ಗುರಿಯಾಗಿಟ್ಟುಕೊಳ್ಳದೆ ಸ್ವತಂತ್ರ ಜೀವನವನ್ನು ಅವಲಂಬಿಸಲು ಪ್ರಯತ್ನಿಸಬೇಕೆಂದು ಹೇಳಿದರು. ಜ್ಞಾನಾರ್ಜನೆಯೇ ಅವರ ಮುಖ್ಯೋದ್ದೇಶವಾಗಿರಬೇಕು. ದೇಶ ವಿದೇಶ ರಾಜಕೀಯ ಚಟುವಟಿಕೆಗಳನ್ನೆಲ್ಲಾ ಅವರು ಅರಿತುಕೊಳ್ಳಬೇಕು. ಆದರೆ ರಾಜಕೀಯ ರಂಗಕ್ಕೆ ಮಾತ್ರ ಇಳಿಯಬಾರದು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಿದ್ಯಾರ್ಥಿಗಳು ಕಾರ್ಯಕ್ಷೇತ್ರಕ್ಕೆ ಇಳಿಯಬೇಕಿತ್ತು. ಮುಂದೆ ಇಂತಹ ಪ್ರಸಂಗವಿರುವುದಿಲ್ಲ. ನಾಡಿನ ಪುನರ್ರಚನೆ ಮತ್ತು ಸೇವೆಗೆ ಸಿದ್ಧರಾಗಲು ಅವರು ತರಬೇತಿ ಪಡೆಯಬೇಕು. ವಿದ್ಯಾರ್ಥಿ ನಿಲಯಕ್ಕೆ ಕೊಡುವವರು ಪ್ರತ್ಯೇಕತೆಯ ಭಾವನೆಯಿಲ್ಲದೆ ಎಲ್ಲ ಜನರಿಗೂ ಸಮಾನವಾದ ಅವಕಾಶವೀಯಬೇಕು ಎಂದು ಹೇಳಿ ವಂದಿಸಿ ವಿದ್ಯಾರ್ಥಿ ನಿಲಯಕ್ಕೆ ಆಶೀರ್ವದಿಸಿದರು. ಶ್ರೀ ಎ. ಕೃಷ್ಣ ... 

## ವಿಕೃತಿ ಸಂವತ್ಸರ ಶುಭಾಶಂಸನಂ

(ಶಾರ್ದೂಲ ವೃತ್ತ)

ರವಿಯು ಕಾಂತಿಯು ಶಶಿಯು ಶಾಂತಿಯು
ಬುಧಗುರುವರ ಧೈರ್ಯವನು ಶೌರ್ಯವ
ಧವಳ ಕೀರ್ತಿಯು, ಗುರುವು ವಿದ್ಯೆಯ
ಕವಿಯು ಕಾವ್ಯವನ ॥
ರವಿಕನಯನೀಯುವನು ರಾಹುವು
ವಿವಿಧ ಶಕ್ತಿಯು ಕೇತು ಮುಕ್ತಿಯ
ನವನು ಜನರಿಗೆ ವಿಕೃತಿ ವತ್ಸರದಂದು
ಕಾವ ಕುಡುಗೆ॥

ಆಕುಳಪಿರಶ್ಮಂ, ಭಾರತೀ

## ಲಕ್ಷ್ಮೀ ಥಿಯೇಟರ್

ರಾಜಧಾನಿಯ ನೂತನ ರಸ್ತೆಯಲ್ಲಿರುವ ಲಕ್ಷ್ಮೀ ಥಿಯೇಟರ್ ಚಲನಚಿತ್ರ ಮಂದಿರದ ಹೊಸ ವ್ಯವಸ್ಥಾಪಕರು ತಮ್ಮ ಆಂಗ್ಲೇಯ ಚಿತ್ರ ಪ್ರದರ್ಶನಗಳ ಆರಂಭೋತ್ಸವವನ್ನು ಈ ದಿನ ಬೆಳಗ್ಗೆ ನೆರವೇರಿಸಿದರು. ಶ್ರೀಗಳಾದ ವಲ್ಲಭದಾಸ್ ಮೂಲ್‌ಚಂದ್ ಮತ್ತು ಹೀರಾಲಾಲ್ ರಾಮಚಂದರವರು ಬಂದಿದ್ದ ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸಿದರು. ವಿಟ್ನ್ ಅಫ್ ಆಕ್ಷೋಬರ್ ಎಂಬ ವರ್ಣರಂಜಿತ ಚಿತ್ರ ಪ್ರದರ್ಶನವೂ ಆಗ ನಡೆಯಿತು.

## ವೇಣು ವಾದನ

ಚಾಮರಾಜಪೇಟೆಯ ಶ್ರೀ ರಾಮಮಂದಿರದ ಆಶ್ರಯದಲ್ಲಿ ಈ ರಾತ್ರಿ ೮ ಘಂಟೆಗೆ ಸಹಕಾರ ಭವನದಲ್ಲಿ ವಿ॥ ದೇಶಿಕಾಚಾರ್ಯರ ವೇಣುವಾದನವು ವಿ॥ ವೆಂಕಟರಮಣಯ್ಯನವರ ಪಿಟೀಲು ಮತ್ತು ಪಾಲ್‌ಘಾಟ್ ರಾಮಯ್ಯರವರ ಮೃದಂಗದೊಡನೆ ನಡೆಯುವುದು. ಸರ್ವರಿಗೂ ಸ್ವಾಗತವಿದೆ.

## ಹರಿಕಥೆ

ಕೃಷ್ಣಮೂರ್ತಿ ಪುರದ ವ್ಯಾಸರಾಯರ ಮಠದಲ್ಲಿರುವ ರಾಮ ಮಂದಿರದಲ್ಲಿ ಈ ರಾತ್ರಿ ೯ ಘಂಟೆಗೆ ಪಾಲ್‌ಘಾಟ್ ಕೀರ್ತನ ಪಟು ಗಣಪತಿ ಭಾಗವತರಿಂದ "ಚಂದ್ರಹಾಸ" ಎಂಬ ಹರಿಕಥೆ ನಡೆಯುವುದು.

ಕೊಕ್ಕಾಲ್ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಕಮಲಾಂಬಾ ನಿಲಯದಲ್ಲಿ ನಾಳೆ ಸಂಜೆ ... ಘಂಟೆಗೆ ಶ್ರೀ ಎಸ್. ನಾರಾಯಣ ದಾಸರಿಂದ ಭಕ್ತಿ ... ಎಂಬ ಹರಿಕಥೆ ನಡೆಯುವುದು.

## ಇಡ್ಲಿ, ದೋಸೆಗಳಿಗೆ ಅವಕಾಶ

[ಸ್ವಂ. ವ.] ಬೆಂಗಳೂರು ೧೫

ಅಕ್ಕಿ ಇಲ್ಲದೆ ಬೇರೆ ಪದಾರ್ಥಗಳಿಂದ ಇಡ್ಲಿ ಮತ್ತು ದೋಸೆಗಳನ್ನು ಹೋಟೆಲುಗಳಲ್ಲಿ ಮಾಡಲು ಅನುಮತಿ ಕೊಡುವಂತೆ ಸರ್ಕಾರದವರು ನಿರ್ಧರಿಸಿರುವರೆಂದು ತಿಳಿದು ಬಂದಿದೆ. ಸಧ್ಯದಲ್ಲಿಯೇ ಈ ಬಗ್ಗೆ ಆಜ್ಞೆ ಹೊರಬೀಳಲಿದೆ.

## ಸಿಗರೇಟ್ ಬೆಂಕಿಯಿಂದ ೨ ಸಾವಿರ ಮನೆಗಳ ನಾಶ

ಜಪಾನಿನ ರಾಜಧಾನಿ ಟೋಕಿಯೋ ಬಳಿ ಅಟಾಮಿ ಎಂಬಲ್ಲಿ ಕಳೆದ ಗುರುವಾರ ರಾತ್ರಿ, ಸೇದಿ ಬಿಸಾಡಿದ್ದ ಸಿಗರೇಟಿನ ಬೆಂಕಿಯಿಂದ ಘೋರ ಅಗ್ನಿ ಪ್ರಮಾದ ಸಂಭವಿಸಿ ಎರಡು ಸಾವಿರ ಮನೆಗಳು ಸುಟ್ಟು ಭಸ್ಮವಾದುವು. ಸುಮಾರು ಹತ್ತು ಸಾವಿರ ಮಂದಿ ನಿರಾಶ್ರಿತರಾಗಿದ್ದಾರೆ.

## ಕಾಂಗ್ರೆಸ್ ಅಧ್ಯಕ್ಷಿಣಿಗೆ ೫೦೧ ರೂ. ನಿಧಿ ಅರ್ಪಣೆ

### ನಗರ ಕಾಂಗ್ರೆಸ್ ಸಮಿತಿಯಲ್ಲಿ ಸಮಾರಂಭ

ಮೈಸೂರು ೧೫

ಮೈಸೂರು ಕಾಂಗ್ರೆಸ್ ಅಧ್ಯಕ್ಷಿಣಿಯಾದ ಶ್ರೀಮತಿ ಯಶೋಧರಾ ದಾಸಪ್ಪನವರು ನೆನ್ನೆ ಇಲ್ಲಿನ ಕಾಂಗ್ರೆಸ್ ಕಛೇರಿಗೆ ಭೇಟಿ ಇತ್ತರು. ಮಧ್ಯಾಹ್ನ ಜಿಲ್ಲಾ ಕಾಂಗ್ರೆಸ್ ಮತ್ತು ಸಂಜೆ ನಗರ ಕಾಂಗ್ರೆಸ್ ಕಾರ್ಯಕರ್ತರನ್ನು ಕುರಿತು ಅವರು ಭಾಷಣ ಮಾಡಿದರು. ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಅವರನ್ನು ಸ್ವಾಗತಿಸಿ ಕೆಲಸಗಾರರ ಪರವಾಗಿ ಮೈಸೂರು ಕಾಂಗ್ರೆಸ್ಸಿಗೆ ೫೦೧ ರೂ. ಕಾಣಿಕೆಯನ್ನು ಅರ್ಪಿಸಿದರು.

ಶ್ರೀಮತಿಯವರು ತಮ್ಮ ಭಾಷಣದಲ್ಲಿ, ಕಾಂಗ್ರೆಸ್ಸಿನವರು ಅಧಿಕಾರದ ದೃಷ್ಟಿಯಿಂದಲೂ ಸೇವಾ ಭಾವನೆಯಿಂದಲೂ ಜನತೆಯ ನಾಯಕತ್ವ ವಹಿಸಬೇಕು. ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕೆಂದು ಹೇಳಿದರು. ... ನ್ಯೂನತೆಗಳನ್ನು ... ತಿದ್ದಿಕೊಳ್ಳಬೇಕೆಂದೂ ಕೋರಿದರು. ... ಭಿನ್ನಾಭಿಪ್ರಾಯಗಳಿಗೆ ... ಆದ ... 

## ಮೈಸೂರು ರಾಜಪ್ರಮುಖರ ಸ್ಥಾನಮಾನಗಳು

### ಕೇಂದ್ರ ಸರ್ಕಾರದೊಡನೆ ಒಪ್ಪಂದದ ವಿವರ

ಸ್ವಂ. ಸು. ಪ್ರೋ.] ಬೆಂಗಳೂರು ೧೫

ಮೈಸೂರಿನ ರಾಜಪ್ರಮುಖರಿಗೆ ಸಲ್ಲತಕ್ಕ ರಾಜಧನ ಮತ್ತು ಅವರ ಆಸ್ತಿ ಪಾಸ್ತಿಗಳ ಬಗ್ಗೆ ಭಾರತ ಸರ್ಕಾರದೊಡನೆ ಅವರು ಕಳೆದ ಜನವರಿ ೨೫ನೇ ತಾರೀಖು ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಕೆಳಗೆ ಕಂಡ ಷರತ್ತುಗಳು ಅಂಗೀಕರಿಸಲ್ಪಟ್ಟಿವೆ:-

ರಾಜಪ್ರಮುಖರಿಗೆ ಕೇಂದ್ರ ಸರ್ಕಾರದವರ ಸಾಲಿಯಾನ ೨೬ ಲಕ್ಷ ರೂ ಗಳ ರಾಜಧನವನ್ನು ಅವರ ಜೀವಮಾನ ಪರ್ಯಂತ ಕೊಡತಕ್ಕದ್ದು. ಈ ಮೊಬಲಗಿಗೆ ಯಾವ ವಿಧವಾದ ತೆರಿಗೆಯನ್ನು ವಿಧಿಸಲಾಗುವುದಿಲ್ಲ. ಅವರ ಉತ್ತರಾಧಿಕಾರಿಗಳಿಗೆ ಕೊಡತಕ್ಕ ಮೊಬಲಗನ್ನು ಮುಂದೆ ನಿರ್ಧರಿಸಲಾಗುವುದು. ಈ ಕೊಡತಕ್ಕ ರಾಜಧನದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಗೃಹಕೃತ್ಯಕ್ಕೆ ಸಂಬಂಧಪಟ್ಟ ವಿವಾಹನೇ ಮೊದಲಾದ ಕಾರ್ಯಗಳು ಮತ್ತು ಸ್ವಂತ ಖರ್ಚು ವೆಚ್ಚಗಳೆಲ್ಲಕ್ಕೂ ವಿನಿಯೋಗಿಸತಕ್ಕದ್ದು. ಯಾವ ಕಾರಣದಿಂದಲೂ ಈ ಮೊಬಲಗನ್ನು ಹೆಚ್ಚಿಸಲಾಗುವುದಿಲ್ಲ ಮತ್ತು ಬೋಕಾ ಮಾಡಲಾಗುವುದಿಲ್ಲ. ಮೇಲ್ಕಂಡ ಮೊಬಲಗನ್ನು ರಾಜಪ್ರಮುಖರಿಗೆ ನಾಲ್ಕು ಕಂತುಗಳಲ್ಲಿ ಮುಂಗಡವಾಗಿ ಕೊಡಲಾಗುವುದು. ರಾಜಪ್ರಮುಖರ ಖಾಸಗಿ ಆಸ್ತಿ ಪಾಸ್ತಿಗಳ ಮೇಲಿನ ಪೂರ್ಣ ಸ್ವಾಮ್ಯವು ಅವರಿಗೇ ಇರತಕ್ಕದ್ದು. ಅವರ ಆಸ್ತಿಪಾಸ್ತಿಗಳ ಬಗ್ಗೆ ಅವರು ಈಗಾಗಲೇ ಕೇಂದ್ರ ಸರ್ಕಾರಕ್ಕೆ ವಿವರವಾದ ಪಟ್ಟಿಯನ್ನು ಒಪ್ಪಿಸಿರುವರು. ಇದಲ್ಲದೇ ಆಗಸ್ಟ್ ೧೫ನೇ ತಾರೀಖಿನಿಂದೀಚೆ ರಾಜಪ್ರಮುಖರೂ ಮತ್ತು ರಾಜ ಮನೆತನದವರೂ ಸಂಸ್ಥಾನದೊಳಗೂ ಮತ್ತು ಹೊರಗೂ ಹೊಂದಿದ್ದ ಹಕ್ಕು ಬಾಧ್ಯತೆಗಳು ಮತ್ತು ಸ್ಥಾನಮಾನಗಳನ್ನು ಮುಂದೆಯೂ ಅನುಭವಿಸುವರು. ಸಂಸ್ಥಾನದ ರಾಜಗದ್ದುಗೆಗೆ ನ್ಯಾಯ ಮತ್ತು ಪರಂಪರಾನುಗತವಾದ ಉತ್ತರಾಧಿಕಾರ, ಅವರ ವ್ಯಕ್ತಿಕ ಹಕ್ಕು ಬಾಧ್ಯತೆಗಳು ಅಂತಸ್ತು ಮತ್ತು ಬಿರುದಾವಳಿಗಳ ಬಗ್ಗೆ ರಾಜಪ್ರಮುಖರಿಗೆ ಭಾರತ ಸರ್ಕಾರದವರು ಪೂರ್ಣ ಭರವಸೆ ನೀಡಿರುವರು.

ಯಾವುದಾದರೂ ಆಸ್ತಿಯ ಸ್ವಾಮ್ಯದ ಬಗ್ಗೆ ರಾಜ ಪ್ರಮುಖರಿಗೂ ಸಂಸ್ಥಾನ ಸರ್ಕಾರಕ್ಕೂ ಉಂಟಾಗಬಹುದಾದ ವಿವಾದದ ಬಗ್ಗೆ ವಿಚಾರಣೆ ನಡೆಸಲು ಕೇಂದ್ರ ಸರ್ಕಾರದವರು ಒಬ್ಬ ಪಂಚಾಯಿತದಾರರನ್ನು ನೇಮಿಸುವರು. ಅವರ ತೀರ್ಮಾನಕ್ಕೆ ಉಭಯರೂ ಬದ್ಧರಾಗಿರತಕ್ಕದ್ದು.

## ವೈಜಯಂತಿಮಾಲಾ ರಕ್ಷಣೆ ಬಗ್ಗೆ ಹೈಕೋರ್ಟಿನ ವ್ಯವಸ್ಥೆ

ಸಿನಿಮಾ ತಾರೆ ವೈಜಯಂತಿಮಾಲಾ ಳ ಉದ್ಯೋಗ, ವ್ಯವಹಾರಗಳ ಮೇಲ್ವಿಚಾರಣೆಗೆ ಅಡ್ವೊಕೇಟರಾದ ಶ್ರೀ ಎಂ. ಸುಬ್ರಹ್ಮಣ್ಯ ಪಿಳ್ಳೆಯವರನ್ನೂ, ಆಕೆಯ ಆರೋಗ್ಯ, ವಿದ್ಯಾಭ್ಯಾಸ ಮತ್ತು ರಕ್ಷಣೆಯ ಮೇಲ್ವಿಚಾರಣೆಗೆ ಆಕೆಯ ತಂದೆ ಶ್ರೀ ಎಂ. ಡಿ. ರಾಮನ್‌ರವರನ್ನೂ ಗಾರ್ಡಿಯನ್ನುಗಳಾಗಿ ನೇಮಕ ಮಾಡಿ ಮದರಾಸಿನ ಹೈಕೋರ್ಟು ನ್ಯಾಯಾಧಿಕಾರಿ ... ತೀರ್ಪಿತ್ತರು. ಆಕೆಯನ್ನು ತಾಯಿಯ ವಶದಿಂದ ತಪ್ಪಿಸಿ ತನ್ನ ಸ್ವಾಧೀನಕ್ಕೆ ಕೊಡಬೇಕೆಂದು ... ತಂದೆಯ ... ಮಾಡಿದ ... ತಾರೆ ... ಅವರ ... ದರು.

## ಒಪ್ಪಂದ ಪಾಲಿಸಲು ನೆಹರೂ ರವರ ಕರೆ

ಪ್ರತಿಯೊಬ್ಬ ಭಾರತೀಯನೂ, ಭಾರತ, ಪಾಕಿಸ್ತಾನಗಳಿಗೆ ಆಗಿರುವ ಒಪ್ಪಂದವನ್ನು ಪಾಲಿಸಲು ಪ್ರಧಾನಿ ನೆಹರೂರವರ ಪ್ರಾರ್ಥನೆ ಸಲ್ಲಿಸಿದ್ದಾರೆ. ಒಪ್ಪಂದವನ್ನು ಪಾಲಿಸದೆ ಹೋದರೆ, ಯುದ್ಧವೇ ಬೇರೆಯ ಮಾರ್ಗವೆಂದು ಅವರು ಹೇಳಿರುವರು.

ಅಖಿಲ ಕರ್ನಾಟಕ ಪ್ರೀಡಾ ... ನ್ಯಾಷನಲ್ ಕಾಂಗ್ರೆಸ್ಸಿನ ಅಧಿವೇಶನವು ಇಂದು ಮತ್ತು ನಾಳೆ ಬೆಂಗಳೂರಲ್ಲಿ ಸಮಾವೇಶಗೊಳ್ಳಲಿದೆ

---

SRI SITARAGHAVA

**JYOTIRMANDIRAM**

219 D Subbaiah Road, Mysore

Graduate Specialist in Astrology at your service. Correct Horoscopic calculations and reliable predictions

---

# ರಾಜಕಮಲ್ ಟಾಕೀಸ್

## 14-4-50 ರಿಂದ

ಅಮೋಘ ೧೭ ನೇ ವಾರ

ದಿನವಹಿ 2 ಪ್ರದರ್ಶನಗಳು

# ಜೀವನ

—: ಭೂಮಿಕೆ —

ವೈಜಯಂತಿಮಾಲಾ, ಟಿ ಆರ್. ರಾಮಚಂದ್ರನ್, ಲಲಿತ-ಪದ್ಮಿನಿ

---

Morning Shows

From 14-4-50 For 4 days

## The Laughing Lady

(In Glorious Technicolor)

With – Anne Ziegler, Webster Booth & Peter Graves

---

... ದೇವರಿಗೆ ... ಭಕ್ತಾದಿಗಳು ಬಾಯಿಗೆ ಶೂಲದಿಂದ ಚುಚ್ಚಿದ ಬೀಗ ಹಾಕಿಕೊಳ್ಳುವುದೇ ಮುಂತಾದ ಹಿಂಸಾಯುತ ಕೃತ್ಯಗಳನ್ನು ಸಿಂಗಪುರದ ಪ್ರಸಿದ್ಧ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪ್ರತಿಬಂಧಿಸಲು ತೀರ್ಮಾನಿಸಲಾಗಿದೆ

---

## LAKSHMI

THEATRE,

Daily 3 Shows

## Return of October

(Technicolor)

Cast-Glenn ford and Terry Morre

---

Next Change

BIG SOMBRERO

(CINE COLOR)

---

... ಅಬಕಾರಿ ... ಪೆಟ್ಟಿಗೆಗಳು ... ಸಿದ್ಧವಾಗಿವೆ. ದಯೆಯಿಂದ ಸಹಾ ಮಾಡುತ್ತೀರಿ

**ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್,**

2767. ಅಗ್ರಹಾರ, ಮೈಸೂರು

---

## ಸರಸ್ವತೀ ಸಂಗೀತ ಸಮಾಜ

೦. ಮೈಸೂರು

16-4-50ನೇ ಭಾನುವಾರ

ಸಂಜೆ 6-15 ಘಂಟೆಗೆ

ಮೈಸೂರು ಚಾಮರಾಜ ರಸ್ತೆಯಲ್ಲಿರುವ

**ಸರಕಾರ ಭವನದಲ್ಲಿ**

ಕಲ್ಲಿಕೋಟೆಯ ಶ್ರೀಮತಿ

## ಶಾರದಾ ಅನಂತರಾಮನ್

ಮತ್ತು ಪಾರ್ಟಿಯವರ ಸಂಗೀತ ಕಛೇರಿಯು ನಡೆಯುವುದು

ಮೆಂಬರುಗಳಲ್ಲದವರಿಗೆ ಟಿಕೆಟ್ಟು ಮೂಲಕ ಪ್ರವೇಶ

ಗಂಡಸರಿಗೆ ರೂ 1; ಹೆಂಗಸರಿಗೆ 8 ಆ

---

Watch for the date of a

**Dancing Recital** by

VYJAYANTHIMALA & PARTY

---

ಮೈಸೂರು ಸಿಟಿ ಕೋ-ಆಪರೇಟಿವ್ ಸೊಸೈಟಿ

## ಡೈರೆಕ್ಟರುಗಳ ಚುನಾವಣೆ

ತಾ॥ 16—4—50 ಒನ್‌ಟು ಯು ಕೈ ಸ್ಕೂಲು

## 32. ಜಿ. ವಿ. ಸೂರ್ಯನಾರಾಯಣ ಶೆಟ್ಟಿ

ಜನರಲ್ ಮತ್ತು ಕ್ಲಾತ್ ಮರ್ಚೆಂಟ್, ಸಯ್ಯಾಜಿರಾವ್ ರಸ್ತೆ, ಮೈಸೂರು

ಇವರಿಗೆ ತಮ್ಮ ಓಟನ್ನು ಕೊಡಬೇಕಾಗಿ ವಿನಂತಿ

ಓಟಿಗೆ ... ಗುರುತು ಹಾಕಿ

---

ಮೈಸೂರು ಕೋ ಆಪರೇಟೀವ್ ಸೊಸೈಟಿಯ ಡೈರೆಕ್ಟರ್ ಚುನಾವಣೆಗೆ ನಾನೂ ನಿಂತಿರುತ್ತೇನೆ

ದಯವಿಟ್ಟು ನನಗೂ ಸಹಾ ಓಟು ಮಾಡಬೇಕಾಗಿ ಪ್ರಾರ್ಥನೆ

# 31. ಬಿ. ಎಸ್. ಸುಬ್ಬರಾವ್

ಪ್ರೊಪ್ರೈಟರ್ ಓರಿಯಂಟಲ್ ಇಂಡಸ್ಟ್ರೀಸ್.

ಮಾಜಿ ಹೌಸ್ ಬಿಲ್ಡಿಂಗ್ ಸೊಸೈಟಿ ಡೈರೆಕ್ಟರ್

---

# ಪ್ರಭುದೇವ ಟಾಕೀಸ್

15—4—50ನೇ ಶನಿವಾರದಿಂದ ಅಮೋಘ ಪ್ರಾರಂಭ

ಟಿ. ಆರ್ ಮಹಾಲಿಂಗಂ, ಎಂ ವಿ ರಾಜಮ್ಮ ಮುಖ್ಯ ಪಾತ್ರ ವಹಿಸಿರುವ

# ತಮಿಳು ಲೈಲಾ ಮಜ್ನು

ದಿನವಹಿ ಮೂರು ಪ್ರದರ್ಶನಗಳು

ಪಾತ್ರ— ಎನ್ ಎಸ್ ಕೃಷ್ಣನ್, ಟಿ ಎ ಮಧುರಂ, ಲಲಿತ-ಪದ್ಮಿನಿ, ಸಹಸ್ರನಾಮಂ, ಪಿ ಎಸ್ ಜಾನಕಿ ಮುಂತಾದವರು

---

## ಮೈಸೂರು ದೊಡ್ಡಕೆರೆ ಫುಟ್‌ಬಾಲ್ ಮೈದಾನದಲ್ಲಿ

## 16—4—50 ನೇ ಭಾನುವಾರ

8 ಜೊತೆ ಭಾರಿ ಪೈಲ್ವಾನರುಗಳ ಕುಸ್ತಿಗಳು

**ಪೈ॥ ಸಣ್ಣ ಭೋರಯ್ಯ**

Vs

**ಪೈ॥ ಅಂತೋಣಿ**

**ಪೈ॥ ಮಹಮದ್ ಹುಸೇನ್**

[ಚಮನ್ ಬಣ್ಣ]

Vs

**ಪೈ॥ ರೈಫಲ್**



| | | |
|---|---|---|
| ಪೈ॥ ಚಿನ್ನರ್ | Vs | ಪೈ॥ ಮಹಮದ್ |
| ಪೈ॥ ಮಹದೇವ | Vs | ಪೈ॥ ರಾಮು |
| ಪೈ॥ ಕೂಸೂ | Vs | ಪೈ॥ ರಾಮು |
| ಪೈ॥ ಸ್ವಾಮಿ | Vs | ಪೈ॥ ತಿಮ್ಮ |
| ಪೈ॥ ಸಿದ್ದ | Vs | ಪೈ॥ ಚಿಕ್ಕ ಉಚ್ಚಯ್ಯ |
| ಪೈ॥ ಸಿದ್ದ | Vs | ಪೈ॥ ಜೋತಿರಾಮ್ |

ಕಂಟ್ರಾಕ್ಟರ್ – ಕೆ. ಬೋರಯ್ಯ, ನರಸಿಂಹರಾಜ ಮೊಹಲ್ಲಾ.

---

## ಪ್ರಭಾ * 14-4-50 ರಿಂದ

ದಿನವಹಿ 3 ಆಟಗಳು

ಅಮೋಘವಾದ 2 ನೆಯ ವಾರ

ವಿಜಯಾರವರ ತೆಲುಗು ಚಿತ್ರ

# – ಸಾಹುಕಾರ –

(ಅಕ್ಕಪಕ್ಕದವರ ಕಥೆ)

ಡೈರೆಕ್ಷನ್– ಪ್ರಸಾದ್, ಸ್ಟುಡಿಯೋ– ವಾಹಿನಿ

ಪಾತ್ರ-ಜಾನಕಿ, ಡಾ॥ ಸುಬ್ಬರಾವ್, ರೇಲಂಗಿ

---

# ಭಾರಿಭಾರಿ ಜರತಾರಿ ರೇಷ್ಮೆ ಸೀರೆಗಳಿಗೆ

ಒಳ್ಳೆಯ ... ಗಳಿಗೆ ಮೈಸೂರಿನ ... ಎಂ. ವಿ. ಶಿವೋಜಯ್ಯ ಬಿ. ಎ. & ಬ್ರದರ್ಸ್

ಇಂಪೋ ... ಎಂ

---

# SRI GAYATHRI

From 15 4 1950 For 4 days only

Daily 3 Shows

Warner ...

Attraction ...

The Adventures of

# ROBINHOOD

With – Errol Flynn & ... D'Havilland

... Printed and published by ... K. Nagarajan at S... Press, D. Subbiah Road, Mysore

ಕ್ರೀ.ಸಂ. 792 WEEKLY EDITION ಸಂಮಿತ ಪತ್ರಿಕೆ ೬ ಕಾಸು

ಸಂಪುಟ ೯೧] ಭಾನುವಾರ ೧೬-೧-೫೦ [ಸಂಚಿಕೆ ೩೮

# ಲಾಯಕಾಲಿವಾಪಸಿಗೆ ಪಾಕಿಸ್ತಾನ್ ನಿರಾಕರಣೆ?

## ನಗರಾಭಿವೃದ್ಧಿ ಸಮಿತಿಯ ಸಭೆ

ಮೈಸೂರು ೧೬

ರಾಜಧಾನಿಯ ನಗರಾಭಿವೃದ್ಧಿ ಸಮಿತಿಯ ವಿಶೇಷ ಸಭೆ ರುಃ ನೆನ್ನೆ ಬೆಳಿಗ್ಗೆ ಶ್ರೀ ಗೋಪಾಲಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಪ್ರಸಕ್ತ ಸಾಲಿನ ಆಯವ್ಯಯವನ್ನು ಪರಿಶೀಲಿಸಿತು.

ಶ್ರೀ ಗೋಪಾಲಕೃಷ್ಣಶೆಟ್ಟರು ಭಾಷಣ ಮಾಡಿ, ಸಮಿತಿಯು ಕಾರ್ಯಕಲಾಪಗಳನ್ನು ವಿವರಿಸಿದರು. ನಗರಾಭಿವೃದ್ಧಿ ಸಮಿತಿಯು ೧೯೦೩ರಲ್ಲಿ ಸ್ಥಾಪಿತವಾಯಿತು. [illegible] ೧೯೧೬ರಲ್ಲಿ ಶಾಸನ ಸಭೆಯು ನಗರಾಭಿವೃದ್ಧಿ ಶಾಸನವನ್ನು ಜಾರಿಗೆ ತಂದು ನಗರ ನಿರ್ಮಾಣ, ಒಳ ಚರಂಡಿ ವ್ಯವಸ್ಥೆ ಮುಂತಾದ ನಗರ ವಿಸ್ತರಣಾ ಕಾರ್ಯಗಳನ್ನು ನಗರಾಭಿವೃದ್ಧಿ ಸಮಿತಿಗೆ ವಹಿಸಿತು. ಈ ಸಮಿತಿಯು ನವನಿರ್ಮಾಣಗಳ ಪರಿಣಾಮದಿಂದ ನಗರದ ಏಳಿಗೆಗಾಗಿ ಅನೇಕ ಕೋಟಿ ರೂಗಳ ಯೋಜನೆಗಳನ್ನು ಕಾರ್ಯಗತಮಾಡಿ, ತನ್ನ ಉದ್ದೇಶವನ್ನು ಸಾಧಿಸಿದೆ ಎಲ್ಲರ ಸಹಕಾರದೊರೆತರೆ ಈ ಕಾರ್ಯವು ಮುಂದೆಯೂ ಅಭಿವೃದ್ಧಿಗೊಳ್ಳುವೆ [illegible] ಅವರು ಹೇಳಿದರು.

೧೯೧೬ನೇ ಇಸವಿಯಿಂದ ನಗರಾಭಿವೃದ್ಧಿ ಸಮಿತಿಯು ಸಾರ್ವಜನಿಕರಿಗೆ ಎರಡು ಸಾವಿರ ನಿವೇಶನಗಳನ್ನು ಕೊಟ್ಟಿದೆ. ಅಲ್ಲದೆ ಇದುವರೆಗೆ ೨೦೦೦ ಕ್ಕೂ ಮಾತ್ರ ಮನೆಗಳು ಕಟ್ಟಲ್ಪಟ್ಟು ಉಳಿದವು ಹಾಗೆಯೇ ಇವೆ. ಶಂಕರಮಠ, ಸಾಗರದಗಿರಿ, ಜಯಲಕ್ಷ್ಮೀಪುರ, ಸರಸ್ವತೀಪುರ, ಜಗನ್ನ [illegible] ನಿವೇಶನಗಳನ್ನು ವಿಸ್ತರಿಸಿ ಮತ್ತೆ ಒಂದು ಸಾವಿರ ಸೈಟುಗಳನ್ನು ಮಾಡಲಾಗುವುದು. ಪ್ರತಿ ಮನೆಗೂ ಒಂದೊಂದು ಕಿಂಡರ್ ಗ್ರಾಂಡ್ [illegible] ಮಾತ್ರ ಕೊಡಲಾಗುವುದು. ಈ ಬಗ್ಗೆ ಹಲವು ಯೋಜನೆಗಳು ಜಾರಿಗೆ ಬರಲಿವೆ ಎಂದು ಅಧ್ಯಕ್ಷರು ನುಡಿದರು. ಪೌರಸಭೆ ಮತ್ತು ನಗರ ಸಭೆಗಳಿಗೆ ಒಟ್ಟಿಗೆ ಅಧ್ಯಕ್ಷರಿರಬೇಕೆಂದು ಪೌರಸಭೆಯಲ್ಲಿ ಮಾಡಲಾಗಿರುವ ನಿರ್ಣಯವನ್ನು ಪ್ರಸ್ತಾಪಿಸಿ ತಮ್ಮ ದೃಷ್ಟಿಯಲ್ಲಿ ಈ ಯೋಜನೆಯಿಂದ ಕೆಲಸಕಾರ್ಯಗಳು ಅಷ್ಟು ಚುರುಕಾಗಿ ನಡೆಯುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು. ಮತ್ತು ಈ ನಿರ್ಣಯವನ್ನು ವಿರೋಧಿಸುವವರು ಸ್ವಾರ್ಥದ ದೃಷ್ಟಿಯಿಂದ ಹಾಗೆ ಮಾಡುವರೆಂದು ಆಪಾದಿಸುವುದು ತಪ್ಪೆಂದೂ ಮತ್ತು ಅನೇಕ ಸಂದರ್ಭಗಳಲ್ಲಿ ನಗರಾಭಿವೃದ್ಧಿ ಸಮಿತಿಯವರು ಪೌರಸಭೆಯೊಡನೆ ಸಹಕರಿಸುತ್ತಿಲ್ಲವೆಂದು ಆಕ್ಷೇಪಿಸುತ್ತಿರುವುದೂ ಸಹ ಸರಿಯಲ್ಲವೆಂದೂ ಅವರು ಹೇಳಿದರು.

### ರಥೋತ್ಸವ

ಟಿ ನರಸೀಪುರದ ತಾಲ್ಲೂಕ [illegible] ಶ್ರೀ ಸಂತಾನ ಗೋಪಾಲಕೃಷ್ಣಸ್ವಾಮಿಯವರ ರಥೋತ್ಸವವು ಇದೇ ೧೯ನೇ [illegible] ಬುಧವಾರ ನಡೆಯುವದು.

[illegible]

### ವಸ್ತ್ರ [illegible]

[illegible] ದಂಗೆಯ [illegible] ಬಟ್ಟೆ [illegible] ಬಂದಾಗ ಅವರ [illegible]

## ಪರ್ಷಿಯಾದ ರಾಜಕುಮಾರರಿಗೆ ಬಹಿಷ್ಕಾರ

ಪರ್ಷಿಯಾದ ಆರಸರಾದ ಷಹರವರ ಸಹೋದರ ೩೦ ವರ್ಷ ವಯಸ್ಸಿನ ರಾಜಕುಮಾರ [illegible] ಮತ್ತು ೨೦ ವರ್ಷ ವಯಸ್ಸಿನ [illegible] ಎಂಬ ವಿದ್ಯಾರ್ಥಿಯನ್ನು ಕಳೆದ ಗುರುವಾರ ವಿವಾಹವಾದ [illegible] ಅವರ ಮದುವೆಯು ರೋಮಿನ ಸಮುದ್ರ ತೀರದ [illegible] ಇರುವ ಕಾಲದ ದೇವಾಲಯದಲ್ಲಿ ಅಲ್ಲಿನ ಸಮಾಜದ ಸಮ್ಮುಖದಲ್ಲಿ [illegible] ನಡೆಯಿತು. ರಾಜಕುಮಾರ [illegible] ಅವರಿಗೆ ಬಹಿಷ್ಕಾರ ಹಾಕಿ ಆವರಿಗೆ ಯಾವ ವಿಧವಾದ ರಾಜ ಮರ್ಯಾದೆಯೂ ಇಲ್ಲ [illegible] ಮತ್ತು ರಾಜರ ನೆಂಟರೊಡನೆ ಯಾವ ಸಂಪರ್ಕವೂ ಇರಕೂಡದೆಂದೂ [illegible] ಘೋಷಿಸಿದ್ದಾರೆ.

## ಭಾರತ ಪಾಕಿಸ್ತಾನಗಳಿಗೆ ವಾಣಿಜ್ಯ ಒಪ್ಪಂದ

ಭಾರತ ಮತ್ತು ಪಾಕಿಸ್ತಾನ ಗಳ ಧವ್ಯವು ಉತ್ತಮಗೊಳ್ಳುವ ಸೂಚನೆಗಳು ಕಂಡುಬರುತ್ತಿವೆ. ವಾಣಿಜ್ಯ ಮತ್ತು ವ್ಯಾಪಾರದ ಬಗ್ಗೆ ಕೆಲವು ವಿವರಗಳ ಬಂದೆ ಎರಡು ರಾಷ್ಟ್ರಗಳಲ್ಲೂ ಉಂಟಾಗಿದ್ದ ಬಿಕ್ಕಟ್ಟನ್ನು ಬಗೆಹರಿಸುವ ಕಲುವಾಗಿ ಮುಂದಿನ ಬುಧವಾರ ಕರಾಚಿಯಲ್ಲಿ ಸಂಧಾನವು ನಡೆಯುವುದೆಂದೂ, ಇದಕ್ಕಾಗಿ ಭಾರತದ ನಿಯೋಗವು ಬರುವ ಮಂಗಳವಾರ ಅಲ್ಲಿಗೆ ತೆರಳುವುದೆಂದೂ ಹೇಳಲಾಗಿದೆ.

## ಕಲ್ಕತ್ತೆಗೆ ಸರ್ದಾರ್ ಪಟೇಲ್

ಅಲ್ಪಸಂಖ್ಯಾತರ ಬಗ್ಗೆ ಭಾರತ ಪಾಕಿಸ್ತಾನಗಳಿಗೆ ನಡೆದ ಒಪ್ಪಂದವನ್ನು ಕಾರ್ಯಗತ ಮಾಡುವ ಸಂಬಂಧವಾಗಿ ಭಾರತದ ಉಪ ಪ್ರಧಾನಿ ಸರ್ದಾರ್ ವಲ್ಲಭಾಯಿ ಪಟೇಲರು ಈ ದಿನ ಬೆಳಿಗ್ಗೆ ವಿಮಾನದಲ್ಲಿ ದೆಹಲಿಯಿಂದ ಕಲ್ಕತ್ತೆಗೆ ತೆರಳಿದರು.

[illegible]

[illegible]

## ಲಾಯಕಾಲಿಯನ್ನು ಭಾರತಕ್ಕೆ ಕಳುಹಿಸಲು ತಿರಸ್ಕಾರ

ಭಾರತದಿಂದ ಪಾಕಿಸ್ತಾನಕ್ಕೆ ತಪ್ಪಿಸಿಕೊಂಡು ಹೋಗಿರುವ ಹೈದರಾಬಾದಿನ ಮೀರ್ ಲಾಯಕಾಲಿಯನ್ನು ಭಾರತಕ್ಕೆ ವಾಪಸು ಕಳುಹಬೇಕೆಂದು ಪ್ರಾರ್ಥಿಸಿ ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಬರೆದಿರುವ ಪತ್ರಕ್ಕೆ ಇದುವರೆಗೂ ಉತ್ತರ ಬಂದಿಲ್ಲವೆಂದು ವರದಿಯಾಗಿದೆ. ಭಾರತ ಸರ್ಕಾರದವರು ಹೈದರಾಬಾದನ್ನು ಆಕ್ರಮಿಸಿರುವುದಕ್ಕೆ ಪಾಕಿಸ್ತಾನ ಸರ್ಕಾರದವರು ಇನ್ನೂ ಮನ್ನಣೆ ಕೊಟ್ಟಿಲ್ಲವಾದುದರಿಂದ [illegible] ಪಾಕಿಸ್ತಾನ [illegible] ಬಹುದೆಂದು ಹೇಳಲಾಗಿದೆ.

## ನೆಹರೂ ಪಟೇಲರೊಡನೆ ಪ್ರಕಾಶಂ ಮಾತುಕತೆ

ಮದರಾಸಿನ ಕಾಂಗ್ರೆಸ್ ಪ್ರಮುಖರಾದ ಟಿ. ಪ್ರಕಾಶಂ [illegible] ಸರ್ದಾರ್ ಪಟೇಲರಿಗೆ ಪತ್ರ ಬರೆದು ಮದರಾಸಿನ ಮಾಜಿ ಪ್ರಧಾನಿ ಶ್ರೀ ಟಿ. ಪ್ರಕಾಶಂರವರ ಮೇಲೆ ಶಿಸ್ತಿನ ಕಾರ್ಯ [illegible] ಬಗ್ಗೆ ಮದರಾಸು ಪ್ರಾಂತ್ಯದಲ್ಲೂ, ಮತ್ತು ಆಂಧ್ರದಲ್ಲೂ ಬಹಳ ಕಟು ತರವಾದ ಪ್ರತಿಕ್ರಿಯೆಗಳು ಸಂಭವಿಸಿ [illegible] ವಾತಾವರಣವು ಕೆರಳಿದೆಯೆಂಬುದೆಂದೂ, ಇಂತಹ ಪ್ರಸಂಗವನ್ನು ಸರ್ದಾರ್ ಪಟೇಲರು ತಡೆಗಟ್ಟಬೇಕೆಂದೂ ಪ್ರಾರ್ಥಿಸಿದ್ದರು. ಈ ಮನವಿಯನ್ನು ಸರ್ದಾರ್ ಪಟೇಲರು [illegible] ಶ್ರೀ ಪ್ರಕಾಶಂರವರೊಡನೆ ಮಾತುಕತೆ ನಡೆಸುವ ಸಲುವಾಗಿ ಅವರನ್ನು ದೆಹಲಿಗೆ ಆಹ್ವಾನಿಸಿರುವರೆಂದು ವರದಿಯಾಗಿದೆ. ಈ ಮಾತುಕತೆಯಲ್ಲಿ ಪಂಡಿತ ನೆಹರೂರವರೂ ಭಾಗವಹಿಸುವರೆಂದು ಗೊತ್ತಾಗಿದೆ.

## ಮಳೆ ಅಭಾವದಿಂದ ೧೧೦ ಜನರ ಮರಣ

ಲಿಸ್ಬನ್ [illegible] ದ್ವೀಪದ [illegible] ವಿಪರೀತ ಕ್ಷಾಮದಿಂದ ಜನರು ಬಳಲುತ್ತಿದ್ದಾರೆ [illegible]

## ಆರ್. ರಾಮಕೃಷ್ಣರವರಿಗೆ ಹೊಸ ಹುದ್ದೆ

ಸ್ವಂ ಸು ಪ್ರೋ॥] ಬೆಂಗಳೂರು ೧೬

ಮೈಸೂರು ರೈಲ್ವೆಗಳ ಜನರಲ್ ಮ್ಯಾನೇಜರಾಗಿರುವ ಶ್ರೀ ಆರ್. ರಾಮಕೃಷ್ಣರವರನ್ನು ಟೆಲಿಫೋನುಗಳ ಜನರಲ್ ಅಧಿಕಾರಿಗಳನ್ನಾಗಿ ನೇಮಿಸಿ, ತಿರುವಾಂಕೂರು-ಕೊಚ್ಚಿ ಯೂನಿಯನ್ನಿನ ಟೆಲಿಫೋನ್ ವ್ಯವಸ್ಥೆಯನ್ನೂ ಅವರಿಗೆ ವಹಿಸಲಾಗುವುದೆಂದು ಹೇಳಲಾಗಿದೆ. ಮೈಸೂರು ರೈಲ್ವೆಯನ್ನು ಒಂದು ಡಿವಿಜನ್ನಾಗಿ ಪರಿಗಣಿಸಿ ಹೊಸ ಡಿವಿಜನಲ್ ಅಧಿಕಾರಿಯನ್ನು ನೇಮಿಸಲಾಗುವುದೆಂದೂ ವರದಿಯಾಗಿದೆ.

## ಮಹರ್ಷಿಗಳ ನಿರ್ಯಾಣ ಸಮಯದಲ್ಲಿ ಮಹಾ ನಕ್ಷತ್ರದ ಪತನ

ಮೊನ್ನೆ ರಾತ್ರಿ ಶ್ರೀ ರಮಣಮಹರ್ಷಿಗಳು ತಮ್ಮ ಐಹಿಕ ವ್ಯಾಪಾರವನ್ನು ತ್ಯಜಿಸಿದಾಗ ಆಕಾಶದ ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ತೇಜಸ್ಸಿನಿಂದ ಕೂಡಿದ ಭಾರಿ ಪ್ರಮಾಣದ ನಕ್ಷತ್ರವೊಂದು ವೇಗವಾಗಿ ಹಾದುಹೋಗಿ ಕಡೆಗೆ ಅದೃಶ್ಯವಾಯಿತು. ಈ ದೃಶ್ಯವನ್ನು ಸಂಜೆ [illegible] ಜನರಿಂದ ಕೂಡಿದ ಮಹರ್ಷಿಗಳ ಶಿಷ್ಯರು, ಆಶ್ರಮದ ಕಡೆಗೆ ಧಾವಿಸಿ ಬಂದ ಸಮಯದಲ್ಲಿ ಅಂತಿಮ ವ್ಯಾಪಾರವು ನಿಂತಿತ್ತು ಮದ್ರಾಸು ನಗರದಲ್ಲೂ ಸಹ ಈ ತೇಜಸ್ಸು ಕಾಣಿಸಿತು. ನೆನ್ನೆ ಮಹರ್ಷಿಗಳ ಪಾಂಚಭೌತಿಕ ಶರೀರವನ್ನು ನಾನಾ ಧರ್ಮಕ್ಷೇತ್ರದ ದೇವಾಲಯದ ಹತ್ತಿರ ಸಮಾಧಿ ಮಾಡಲಾಯಿತು.

## ಶ್ಯಾಮಪ್ರಸಾದ ಮುಖರ್ಜಿ ರಾಜೀನಾಮೆ ಅಂಗೀಕಾರ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ಕೇಂದ್ರ ಸಚಿವರುಗಳಾದ ಡಾ॥ ಶ್ಯಾಮಪ್ರಸಾದ ಮುಖರ್ಜಿ ಮತ್ತು ಶ್ರೀ ಕೆ. ಸಿ. ನಿಯೋಗಿಯವರುಗಳು ಸಲ್ಲಿಸಿರುವ ರಾಜೀನಾಮೆಗಳನ್ನು ನೆನ್ನೆ ಮಧ್ಯಾಹ್ನ ಅಂಗೀಕರಿಸಿರುವರು.

## ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳ ಆಗಮನ

ಹೊಳೇನರಸೀಪುರದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರು ರಾಜಧಾನಿಗೆ ಆಗಮಿಸಿ ಚಾಮರಾಜಪುರದಲ್ಲಿರುವ ಅಡ್ವೋಕೇಟ್ ಶ್ರೀ ಕೆ. ಪುಟ್ಟಸ್ವಾಮಯ್ಯನವರ ಮನೆಯಲ್ಲಿ ಬಿಡಾರ ಮಾಡಿದ್ದಾರೆ. ಬರುವ ೧೯ನೇ ತಾರೀಖು ಬುಧವಾರದ ವರೆಗೆ ಅವರು ಇಲ್ಲಿ ಇರುವರು. ಚಾಮರಾಜಪುರದಲ್ಲಿರುವ ನಿವೃತ್ತ ಸೂಪರಿಂಟೆಂಡಿಂಗ್ ಎಂಜಿನಿಯರ್, ಶ್ರೀ ಟಿ. ರಾಮಸ್ವಾಮಿಯವರ ಮನೆಯಲ್ಲಿ ಶ್ರೀ ಸ್ವಾಮಿಗಳವರು ಈ ಸಂಜೆ ೬ ಘಂಟೆಗೆ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವುಂಟು.

### ಉದಾರ ದಾನ

ಮೈಸೂರು ಶ್ರೀರಾಮಪೇಟೆಯ ಮಹಾಸ್ವಾಮಿ ಕೃಷ್ಣಶೆಟ್ಟರು ಸ್ಥಾಪಿಸಿದ್ದ [illegible] ಶ್ರೀ ಸೀತಾರಾಮ ಮಂದಿರಕ್ಕೆ ಶ್ರೀ ಎಂ. ಎಸ್. [illegible] ಶ್ರೀ ಪುಟ್ಟಸ್ವಾಮಿ [illegible] ಒಂದು [illegible]

# ವಾರ ಭವಿಷ್ಯ

ತಾ|| ೧೬-೪-೧೯೫೦ರಿಂದ ೨೨-೪-೫೦ರ ವರೆಗೆ

ಮೇಷ— ಆರೋಗ್ಯ ಉತ್ತಮವಾಗಿದ್ದರೂ ಮಾನಸಿಕ ಕ್ಲೇಶಗಳು ಇದ್ದೇ ಇರುವುವು. ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಜಯ ದುರ್ಲಭ. ತಾ|| ೨೦ ೨೧ ಪ್ರವಾಸ ಯೋಗ ಮಹತ್ವದ ಪತ್ರಾಗಮನ

ವೃಷಭ— ಮನೆಯಲ್ಲಿ ಹಿರಿಯರ ಅಸ್ವಸ್ಥತೆಯಿಂದ ವ್ಯಾಪಾರ ವ್ಯವಹಾರಗಳ ಅಟಬಸ್ಥ. ಧನವ್ಯಯ. ಅಘಾತ ನಿವಾರಣೆ ಅಲಕ್ಷ್ಯಕರವಾದ ಕೆಲಸದಿಂದ ಆರೋಗ್ಯಕ್ಕೆ ಪೆಟ್ಟು ತಾ|| ೧೭, ೧೮ ದ್ವೇಷ. ಅವಮಾನ ಮತ್ತು ಅಮಿತವಾದ ಖರ್ಚು

ಮಿಥುನ— ಆರೋಗ್ಯ ನೆಟ್ಟಗೆ. ನೌಕರಿ ದಂಧೆಗಳಲ್ಲಿ ಜಯ ಶುಭ ಕಾರ್ಯಗಳು ನೆರವೇರುವುವು. ಆರ್ಥಿಕ ಸ್ಥಿತಿ ಉತ್ತಮ. ಸಜ್ಜನರ ಸಹವಾಸ, ತಾ|| ೨೦, ೨೧ ಸತ್ಕಾರ್ಯಗಳಿಗಾಗಿ ಧನವ್ಯಯ

ಕರ್ಕ— ಮೋಸಗಾರರ ಸಹವಾಸದಿಂದ ನಷ್ಟ ಅಮಿತವಾದ ಖರ್ಚು ಶತ್ರುಬಾಧೆ ವ್ಯಾಪಾರ ಪಟ್ಟಣಗಳಲ್ಲಿ ಗೊಂದಲ ನೆಮ್ಮದಿಗೆ ಭಂಗ. ಒಟ್ಟಿನಲ್ಲಿ ಈ ವಾರ ಕ್ಲೇಶ ಪೂರಿತವಾದುದು ತಾ|| ೨೦, ೨೧ ಅಲ್ಪ ಧನಲಾಭ ಮಹತ್ವದ ಪತ್ರಾಗಮನ.

ಸಿಂಹ— ದುಃಖಪೂರಿತ ಘಟನೆಗಳು ಜರುಗುವುವು. ಇದರಿಂದ ಮನಸ್ಸಿಗೆ ಬೇಸರ ಉಂಟಾಗುವುದು. ಆದರೆ ಶಾಂತಿಯಿಂದ ಸಹಿಸಿದರೆ ಇದರಿಂದ ಪಾರಾಗುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ಶತ್ರುಗಳು ಉದ್ಭವಿಸುವರು. ಆರೋಗ್ಯವು ಅಷ್ಟೇನೂ ಉತ್ತಮವಾಗಿರುವುದಿಲ್ಲ. ಈ ವಾರ ಪ್ರವಾಸ ಯೋಗ್ಯವಲ್ಲ. ೧೭ ಮತ್ತು ೧೮ ವಿಯೋಗ ವಾರ್ತೆ. ಧನವ್ಯಯ ನಿದ್ರಾ ಭಂಗ

ಕನ್ಯಾ— ಚೋರ ಭಯ ವಿಶ್ವಾಸಘಾತುಕರ ಬಗ್ಗೆ ಎಚ್ಚರಿಕೆ ಇರಲಿ. ದುಡುಕಿದರೆ ದುಃಖ ಪ್ರಾಪ್ತಿ. ಕೈಹಾಕಿದ ಕೆಲಸಗಳಲ್ಲಿ ಅಟಬಸ್ಥ ಅಳಕೆ ವಿವಾದ ಖರ್ಚು. ತಾ|| ೧೭ ಮತ್ತು ೧೮ ವಿಷಾದ ವಾರ್ತೆ ವಾಹನಾಪಘಾತ

ತುಲಾ— ನಿಮ್ಮ ಶತ್ರುಗಳು ನಿಮ್ಮಿಂದ ದೂರ ಸರಿಯುವರು. ಆರೋಗ್ಯ ಉತ್ತಮವಾಗಿರುವುದು. ಶುಭ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು ತಾ|| ೨೦-೨೧ ಮಿತ್ರರ ಸತ್ಕಾರಕ್ಕಾಗಿ ಧನ ವ್ಯಯ

ವೃಶ್ಚಿಕ— ಈ ವಾರ ಮನಸ್ಸು ಅಲ್ಲೋಲ ಕಲ್ಲೋಲವಾಗಿರುವುದು ನೌಕರಿ ದಂಧೆಗಳಲ್ಲಿ ಅಪಜಯ. ಆರೋಗ್ಯ ಸಾಧಾರಣ ದುಷ್ಟ ಸಹವಾಸ ೧೭ ಮತ್ತು ೧೮ ಪ್ರವಾಸ, ಅನಿರೀಕ್ಷಿತವಾದ ಖರ್ಚು.

ಧನು— ಸಜ್ಜನರ ಸಹವಾಸದಿಂದ ಮನಸ್ಸಿಗೆ ನೆಮ್ಮದಿ ದೊರಕುವುದು ಅಕಸ್ಮಿಕ ಪ್ರವಾಸ, ಆಪ್ತೇಷ್ಟರ ಭೇಟಿ, ಶುಭಕಾರ್ಯಗಳ ಸಡಗರ ೨೦-೨೧ ಅಪವಾದ, ಭೀತಿ, ಧನ ವ್ಯಯ

ಮಕರ— ಆರೋಗ್ಯ ನೆಟ್ಟಗಿರದು. ಕೌಟುಂಬಿಕ ಕ್ಲೇಶ. ವ್ಯಾಪಾರ, ವ್ಯವಹಾರಗಳಲ್ಲಿ ಮೋಸ, ಮಾನಸಿಕ ಕ್ಲೇಶ, ಆಲಸ್ಯ, ಮತ್ತು ದುಗುಡ ೧೭ ಮತ್ತು ೧೮ ಅಗ್ನಿಭಯ, ಯತ್ನಿಸಿದ ಕೆಲಸದಲ್ಲಿ ವಿಘ್ನ.

ಕುಂಭ— ಆರೋಗ್ಯ ಉತ್ತಮ ನಿಮ್ಮಿಂದ ಸತ್ಕಾರ್ಯಗಳು ಜರುಗುವುವು ನಿಮ್ಮ ಮೇಲೆ ನಡೆದಿರುವ ಅಪಪ್ರಚಾರದ ಸತ್ಯಾಂಶವು ಈ ವಾರ ಬಯಲಾಗುವುದು ೧೮ ಮತ್ತು ೧೯ ಮಹತ್ವದ ಪತ್ರಾಗಮನ, ಪ್ರಿಯ ವಾರ್ತೆ

ಮೀನ— ಕಷ್ಟಗಳು ನಿವಾರಣೆಯಾಗುವುವು. ಆರೋಗ್ಯ ಉತ್ತಮ ಸನ್ಮಾನ ಲಭ್ಯ. ಧನಲಾಭ ೨೦-೨೧ ವ್ಯಾಪಾರ, ಪಟ್ಟಣಗಳಲ್ಲಿ ಜಯ ಪ್ರವಾಸಯೋಗ ಒಟ್ಟಿನಲ್ಲಿ ಈ ವಾರ ತೃಪ್ತಿದಾಯಕವಾಗಿರುವುದು

## ವಿಶ್ವದ ಮಹಾನಗರಗಳ ಸಮೂಹದಲ್ಲಿ ಬೊಂಬಾಯಿ

ಬೊಂಬಾಯಿ ನಗರಕ್ಕೆ ಅಲ್ಲಿನ ಪೌರಸಭೆಯ ಗಡಿಯಲ್ಲಿದ್ದ ನಾಲ್ಕು ಸಣ್ಣ ನಗರಗಳನ್ನು ಸೇರಿಸಿಕೊಂಡು ಮಹಾ ಬೊಂಬಾಯಿಯ ಸ್ಥಾಪನೋತ್ಸವವನ್ನು ನೆರವೇರಿಸಲಾಯಿತು. ಬೊಂಬಾಯಿನ ವಿಸ್ತೀರ್ಣವು ಈಗ ೯೦ ಚದರ ಮೈಲಿಗಳಷ್ಟಾಗಿದೆ, ಜನಸಂಖ್ಯೆ ೪೦ ಲಕ್ಷ. ವಿಶ್ವದ ಆರು ಮಹಾ ನಗರಗಳಲ್ಲಿ ಈಗ ಬೊಂಬಾಯಿಗೂ ಒಂದು ಸ್ಥಾನ ದೊರಕಿದೆ

## ಅಮೇರಿಕಾ ಸರ್ಕಾರದಿಂದ ೩೦ ಕೋಟಿ ಡಾಲರ್ ಪರಿಹಾರ

ಕಳೆದ ೧೯೪೭ನೇ ಇಸವಿಯಲ್ಲಿ ಅಮೇರಿಕದ ಟೆಕ್ಸಾಸ್ ರೇವಿನ ಬಳಿ ನಡೆದ ದುರಂತಕ್ಕೆ ಅಮೆರಿಕ ಸರ್ಕಾರದ ಅಜಾಗರೂಕತೆಯೇ ಕಾರಣವೆಂದೂ ಅದಕ್ಕಾಗಿ ಸರ್ಕಾರವು ಪರಿಹಾರ ಕೊಡಬೇಕೆಂದೂ ಹೂಡಿರುವ ಮೊಕದ್ದಮೆಯಲ್ಲಿ ಅಮೆರಿಕ ಸರ್ಕಾರವು ೩೦ ಕೋಟಿ ಡಾಲರುಗಳಷ್ಟು ಪರಿಹಾರ ಕೊಡಬೇಕಾಗುವುದಾಗಿ ವರದಿಯಾಗಿದೆ. ಅಲ್ಲಿನ ಹೈಕೋರ್ಟಿನ ನ್ಯಾಯಾಧೀಶರು ತೀರ್ಪಿತ್ತು 'ದುರಂತಕ್ಕೆ ಸರ್ಕಾರಿ ನೌಕರರ ಅಜಾಗರೂಕತೆಯೇ ಕಾರಣವೆಂದು ಹೇಳಿದ್ದಾರೆ. ಈ ಅಪಘಾತದಲ್ಲಿ ೫೭೨ ಜನರು ಸತ್ತು ೩೦೦ ಮಂದಿ ಗಾಯಗೊಂಡಿದ್ದರು

## ೧। ರೂ.ಗೆ ಮಗುವಿನ ಮಾರಾಟ

ತುಮಕೂರಿನ ಒಬ್ಬ ಮುಸಲ್ಮಾನ ಮಹಿಳೆಯು ಬಡತನದ ನಿಮಿತ್ತ ತನ್ನ ಮಗುವನ್ನು ಸಾಕಲಾರದೆ ಅದನ್ನು ಅಲ್ಲಿನ ಮಂಡಿಪೇಟೆಯಲ್ಲಿ ಒಂದೂಕಾಲು ರೂಪಾಯಿಗೆ ಮಾರಿದಳೆಂದು ವರದಿಯಾಗಿದೆ

## ವರದಕ್ಷಿಣೆ ನಿರೋಧ ಶಾಸನ

ಬಿಹಾರ್ ಪ್ರಾಂತ್ಯದಲ್ಲಿ ವರದಕ್ಷಿಣೆ ತೆಗೆದುಕೊಳ್ಳುವುದು ಅಪರಾಧವೆಂದೂ, ಇದನ್ನು ಪಡೆಯುವವರು ಶಿಕ್ಷೆಗೆ ಗುರಿಯಾಗುವರೆಂದೂ ಶಾಸನ ಮಾಡಲಾಗಿದೆ.

## ಜರ್ಮನಿಯಲ್ಲಿ ೨೦ ಲಕ್ಷ ನಿರುದ್ಯೋಗಿಗಳು

ಪಶ್ಚಿಮ ಜರ್ಮನಿಯಲ್ಲಿ ೨೦ ಲಕ್ಷ ಮಂದಿ ಕೆಲಸವಿಲ್ಲದವರಾಗಿದ್ದಾರೆ ಮತ್ತು ನಿರುದ್ಯೋಗವು ಇನ್ನೂ ಹೆಚ್ಚುತ್ತಿರುವ ಸೂಚನೆಗಳಿವೆ. ಅಲ್ಲಿ ೧೫ ಲಕ್ಷ ಅರೆ ಕಾರ್ಮಿಕರಿದ್ದಾರೆ. ಹತ್ತು ಲಕ್ಷ ಸಂಸಾರಗಳು ಸಾರ್ವಜನಿಕರ ಸಹಾಯದ ಮೇಲೆ ಅವಲಂಬಿಸಿರುತ್ತಾರೆ. ಕಾರ್ಮಿಕರಿಗೆ ಕೊಡುತ್ತಿರುವ ಕೂಲಿಯು ೧ ಹೊತ್ತಿನ ಅವಶ್ಯಕತೆಯನ್ನು ಕೊಳ್ಳಲು ಮಾತ್ರ ಸಾಧ್ಯವಾಗುವಷ್ಟು ಕಡಿಮೆ ಇರುತ್ತದೆ. ಆಹಾರದ ಬೆಲೆ ಶೇಕಡ ೩೦ರಷ್ಟು ಕಡಿಮೆಯಾಗಿದೆ.

## ಗ್ರೀಸಿನಲ್ಲಿ ಮಿಶ್ರ ಮಂತ್ರಿ ಮಂಡಳ

ಗ್ರೀಸಿನಲ್ಲಿ ನೆನ್ನೆ ನಾಲ್ಕು ಪ್ರಮುಖ ಪಕ್ಷಗಳು ಕೂಡಿದ ಮಿಶ್ರ ಮಂತ್ರಿಮಂಡಲವು ಸ್ಥಾಪಿಸಲ್ಪಟ್ಟು ನೂತನ ಸಚಿವರು ಅಧಿಕಾರ ಸ್ವೀಕಾರ ಮಾಡಿದರೆಂದು ವರದಿಯಾಗಿದೆ.

## ಸಂಕ್ಷೇಪ ಸಂಧ್ಯಾವಂದನಾದಿ ಪ್ರಯೋಗ ಗ್ರಂಥ

ವೇದರತ್ನಂ ಕೆ ವೆಂಕಟರಾಮಾವಧಾನಿಗಳು "ಸಂಕ್ಷೇಪ ಸಂಧ್ಯಾವಂದನಾದಿ ಪ್ರಯೋಗ"ಎಂಬ ಗ್ರಂಥವನ್ನು ಪ್ರಕಟಿಸಿರುತ್ತಾರೆ. ಶಾಸ್ತ್ರೋಕ್ತವಾಗಿ ಮಾಡಬೇಕಾಗಿರುವ ಸಂಸ್ಕಾರಗಳಲ್ಲಿ ಪ್ರಮುಖ್ಯವಾದ ಸಂಧ್ಯಾವಂದನೆಯ ನಿಯಮಗಳನ್ನೂ, ಅವುಗಳಿಗೆ ಇರುವ ಅರ್ಥವನ್ನೂ ಸರಳವಾಗಿ ಕೊಡಲಾಗಿದೆ. ಸಂಧ್ಯಾ ಕರ್ಮವನ್ನು ಬಿಟ್ಟವನಿಗೆ ಇರುವ ಪ್ರಾಯಶ್ಚಿತ್ತ, ಗಾಯತ್ರೀಜಪ ವಿಧಿ, ಸೂರ್ಯ ನಮಸ್ಕಾರ ಪ್ರಯೋಗ, ಬ್ರಹ್ಮಯಜ್ಞ, ತರ್ಪಣ, ನಿತ್ಯ ದೇವತಾರ್ಚನ ಸಂಕ್ರಾಂತಿ, ನರಕಾದಿ ತರ್ಪಣ ಮುಂತಾದವುಗಳನ್ನೂ ಸಹಾ ಕೊಡಲಾಗಿದೆ ಬೆಲೆ ರೂ ೧ ಆಸ್ತಿಕ ಮಹನೀಯರೆಲ್ಲರೂ ಇದರ ಪ್ರಯೋಜನವನ್ನು ಪಡೆದುಕೊಳ್ಳಲೆಂದು ಹಾರೈಸುತ್ತೇವೆ.


[illegible]

ಮೈಸೂರು ಪ್ರೆಸ್

1474 ... ರಸ್ತೆ,

ಮೈಸೂರು.

ಮೆ|| ಗೌಳಿ ಸಿಲ್ಕ್ ಫ್ಯಾಕ್ಟರಿ ಕ್ರೇಪ್ ಸೀರೆಗಳಿಗೆ,
ಧರ್ಮಾವರಂ, ಪೂನಾ, ನಾಗಪುರ್ ಸೀರೆಗಳಿಗೆ
ಎಂ. ವಿ. ಭೋಜಯ್ಯ ಬಿ ಎ & ಬ್ರದರ್ಸ್
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

ಪ್ರಭುದೇವಾ ಟಾಕೀಸ್
15—4—50ನೇ ಶನಿವಾರದಿಂದ ಅನೋಖಿ ಪ್ರಾರಂಭ
ಟಿ. ಆರ್. ಮಹಾಲಿಂಗಂ, ಎಂ. ವಿ. ರಾಜಮ್ಮ ಮುಖ್ಯ ಪಾತ್ರ ವಹಿಸಿರುವ
ಬಾಲಾಜಿಯವರ
ತಮಿಳು ಲೈಲಾ ಮಜ್ನು
ದಿನವಹಿ ಮೂರು ಪ್ರದರ್ಶನಗಳು
ಪಾತ್ರ:— ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ, ಲಲಿತ-ಪದ್ಮಿನಿ, ಸಹಸ್ರನಾಮಂ, ಪಿ. ಎಸ್. ಜಾನಕಿ ಮುಂತಾದವರು.
ಈ ಲಾಗಾಯ್ತು ಎರಡು ವಾರಗಳ ಕಾಲ ಎಲ್ಲ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿ ಪಾಸುಗಳನ್ನು ವಜಾ ಮಾಡಿರುತ್ತೆ

ಪ್ರಭಾ * 14-4-50 ರಿಂದ
ದಿನವಹಿ 3 ಆಟಗಳು
ಅಮೋಘವಾದ 2ನೆಯ ವಾರ
ವಿಜಯಾರವರ ತೆಲುಗು ಚಿತ್ರ
ಷಾವುಕಾರು
ನಿರ್ದೇಶನ - ಪ್ರಸಾದ
ಪಾತ್ರ:- ಜಾನಕಿ ಡಾ|| ಸುಬ್ಬರಾವ್, ರೇಲಂಗಿ

ಗಾಯತ್ರೀ ಟಾಕೀಸ್
ದಿನವಹಿ 3 ಪ್ರದರ್ಶನಗಳು
15—4—50 ರಿಂದ 4 ದಿನಗಳು
ವಾರ್ನರ್ ರವರ ವರ್ಣರಂಜಿತ ಚಿತ್ರ
ಅಡ್ವೆಂಚರ್ಸ್ ಆಫ್
ರಾಬಿನ್ ಹುಡ್
ಪಾತ್ರ:—ಎರ್ರಾಲ್ ಫ್ಲಿನ್ ಮತ್ತು
ಒಲಿವಿಯಾ ಡಿ ಹಾವಿಲಾಂಡ್

ರಾಜಕಮಲ್ ಟಾಕೀಸ್
14—4—50 ರಿಂದ
ಅನೋಖ ೧೭ನೇ ವಾರ
ದಿನವಹಿ 2 ಪ್ರದರ್ಶನಗಳು
ಜೀವನ
—:ಭೂಮಿಕೆ:—
ವೈಜಯಂತಿಮಾಲಾ, ಟಿ. ಆರ್. ರಾಮಚಂದ್ರ, ಲಲಿತ-ಪದ್ಮಿನಿ


Edited, printed and published by A. K. Nagarajan at Sadhvi Press, D. Subbiah Road, Mysore

ಕೋಲಾರ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೬ ಕಾಸು

# ಸಾಧ್ವಿ

ಸಂಪುಟ ೮ ಸೋಮವಾರ ೧೭-೪-೫೦ ಸಂಚಿಕೆ ೨೮೫

# ಸಿಂಧ್ ಪ್ರಾಂತದಲ್ಲೂ ಅಲ್ಪಸಂಖ್ಯಾತರ ಮಂತ್ರಿ

## ಕಂದಾಯದ ದರ ಹೆಚ್ಚಿಸಲು ನಿರ್ಧಾರ

### ಪೌರಸಭಾಧಿವೇಶನದಲ್ಲಿ ಆಯವ್ಯಯ ಪಟ್ಟಿ ಪರಿಶೀಲನೆ

ಮೈಸೂರು, ೧೭

ರಾಜಧಾನಿಯ ಪೌರ ಸಭೆಯ ಮುಂದುವರಿದ ಅಧಿವೇಶನವು ಮೊನ್ನೆ ದಿನ ಶ್ರೀ ಎಸ್. ಲಿಂಗಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿತು:—

ಮನೆಕಂದಾಯವನ್ನು ೮ ತಿಂಗಳ ಬಾಡಿಗೆಯ ಆಧಾರಕ್ಕೆ ಬದಲಾಗಿ ೧೦ ತಿಂಗಳ ಬಾಡಿಗೆ ಆಧಾರದ ಮೇಲೆ ವಸೂಲು ಮಾಡುವುದು, ಬೈಸಿಕಲ್ಲಿನ ಕಂದಾಯವನ್ನು ೨ ರೂ ನಿಂದ ೩ ರೂ ಗಳಿಗೆ ಹೆಚ್ಚಿಸುವುದು, ಪ್ರಥಮ ಮತ್ತು ದ್ವಿತೀಯ ದರ್ಜೆಯ ಹೋಟೆಲುಗಳು ಮತ್ತು ಮಿಠಾಯಿ ಅಂಗಡಿಗಳ ಲೈಸೆನ್ಸ್ ಫೀಯು ಒಂದು ತಿಂಗಳ ಬಾಡಿಗೆಯಷ್ಟಿರತಕ್ಕದ್ದು; ಮಾಂಸದ ಅಂಗಡಿಗಳ ಲೈಸೆನ್ಸ್ ಫೀಯನ್ನು ೧೦ ರೂ.ಗೆ ಹೆಚ್ಚಿಸುವುದು, ಪೆಟ್ರೋಲು ಮತ್ತು ಸೀಮೆ ಎಣ್ಣೆ ಗಡಂಗುಗಳ ಲೈಸೆನ್ಸ್ ಫೀಯು ಪ್ರತಿ ಒಂದು ಸಾವಿರ ಗ್ಯಾಲನ್ನುಗಳಿಗೆ ೫ ರೂ. ಇರತಕ್ಕದ್ದು, ಆದರೆ ಕನಿಷ್ಠ ಫೀಯು ೨೫ ರೂ. ಇರಬೇಕು.

ಬರುವ ಸಾಲಿನ ಆದಾಯವು ೨೭ ಲಕ್ಷ ೮೫ ಸಾವಿರ ಚಿಲ್ಲರೆ ರೂ. ಮತ್ತು ವೆಚ್ಚವು ೨೬ ಲಕ್ಷದ ೮೮ ಸಾವಿರ ಚಿಲ್ಲರೆ ರೂ ಗಳಾಗುವುದು ಆಖೈರು ಶಿಲ್ಕು ೩೭ ಸಾವಿರ ರೂ. ಗಳು ಉಳಿಯುವುದೆಂದು ಆ ದಾಜಾ ಪಟ್ಟಿಯಲ್ಲಿ ತಿಳಿಸಲಾಗಿತ್ತು.

## ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಕಾರ್ಮಿಕರ ಸಂಘ

ರಾಜಧಾನಿಯ ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸಿನ ಕಾರ್ಮಿಕ ಸಂಘದ ವಾರ್ಷಿಕೋತ್ಸವವು ನೆನ್ನೆ ದಿನ ಹಣಕಾಸಿನ ಸಚಿವರಾದ ಶ್ರೀ ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಎ. ರಾಮಣ್ಣನವರು ಸ್ವಾಗತ ಭಾಷಣ ಮಾಡಿದನಂತರ ಶ್ರೀ ಬಿ. ಬಾಲಯ್ಯನವರು ಸಂಘದ ವರದಿಯನ್ನು ಓದಿದರು. ಕಾರ್ಖಾನೆಯ ಆಫರಿಸ್ ಮಾನೇಜರವರು ಭಾಷಣ ಮಾಡಿ ಕೆಲಸ ಸರಾಗವಾಗಿ ನಡೆಯುತ್ತಿರುವುದೆಂದೂ, ಮ್ಯಾನೇಜ್‌ಮೆಂಟಿನವರಿಗೂ ನೌಕರರಿಗೂ ಸೌಹಾರ್ದವು ಚೆನ್ನಾಗಿರುವುದೆಂದೂ ತಿಳಿಸಿದರು. ಅಧ್ಯಕ್ಷ ಶ್ರೀ ದಾಸಪ್ಪನವರು ಭಾಷಣ ಮಾಡಿ ಗಳಿಸಿರುವ ಸ್ವರಾಜ್ಯವನ್ನು ಉಳಿಸಿಕೊಳ್ಳುವುದು ಎಲ್ಲರ ಗುರಿಯಾಗಿರಬೇಕೆಂದೂ, ಮುಷ್ಕರವನ್ನು ಕೊನೆಯ ಹಂತವಾಗಿಟ್ಟುಕೊಳ್ಳಬೇಕೆಂದೂ ಹೇಳಿದರು. ಇನ್ನು ಮುಂದೆ ಕೆಲಸಗಾರರಿಗೂ ಕಾರ್ಖಾನೆಯವರಿಗೂ ಉಂಟಾಗುವ ಬಿಕ್ಕಟ್ಟನ್ನು ಅವರವರುಗಳೇ ಪರಿಹರಿಸಿಕೊಳ್ಳಬೇಕೆಂದೂ ಹೇಳಿದರು. ನೌಕರರ ಮತ್ತು ಸರ್ಕಾರದ ಪ್ರತಿನಿಧಿಗಳನ್ನೊಳಗೊಂಡ ಒಂದು ಕ್ರಿಯಾ ಸಮಿತಿಯನ್ನು ರಚಿಸಲಾಯಿತು.

## ನೀಲಗಿರಿಗೆ ಶ್ರೀ ಹೆಚ್. ಸಿ. ದಾಸಪ್ಪನವರು

ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಈ ದಿನ ನೀಲಗಿರಿಗೆ ಪ್ರಯಾಣ ಬೆಳೆಸಿದರು. ಅವರು ಅಲ್ಲಿರುವ ಫರ್ನ್‌ಹಿಲ್ ನ ಸರ್ಕಾರಿ ಅತಿಥಿ ಗೃಹ ಭವನದಲ್ಲಿ ... ಇಳಿದುಕೊಳ್ಳುವರು.

## ಮೊಸಳೆ ಬಾಯಿಯಿಂದ ಪಾರಾದ ಸಿಪಾಯಿ ಮರಣ

ಪೂರ್ಣಿಯ ಯಮುನಾ ನದಿಯಲ್ಲಿ ಮೊನ್ನೆ ದಿನ ಸ್ನಾನ ಮಾಡಲು ಹೋಗಿದ್ದ ಒಬ್ಬ ಸಿಪಾಯಿಯನ್ನು ಒಂದು ಮೊಸಳೆ ಹಿಡಿಯಿತು. ಅದರ ಬಾಯಿಯಿಂದ ತಪ್ಪಿಸಿಕೊಳ್ಳಲು ಅವನು ಬಹಳ ಹೊತ್ತು ಹೋರಾಡಿ ಬಳಲಿದ್ದನು. ಅಲ್ಲೇ ಇದ್ದ ಅವನ ಸ್ನೇಹಿತರು ಅದನ್ನು ಕಂಡು ಅವನನ್ನು ಹಿಡಿದು ಬಲವಾಗಿ ಎಳೆದು ಮೊಸಳೆ ಬಾಯಿಯಿಂದ ಬಿಡಿಸಿದರು. ಆತನಿಗೆ ಬಹಳ ಗಾಯಗಳಾಗಿದ್ದುದರಿಂದ ಅವನು ಮೃತಪಟ್ಟನು.

## ರೇಷ್ಮೆ ಕಾರ್ಖಾನೆ ದಿನಾಚರಣೆ

ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆ ದಿನಾಚರಣೆಯು ನೆನ್ನೆ ದಿನ ಹಣಕಾಸಿನ ಸಚಿವ ಶ್ರೀ ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ ಜಿ. ಪಿ. ರಂಗನಾಯಕಮ್ಮನವರಿಂದ ಪ್ರಾರ್ಥನೆಯಾದ ನಂತರ ಜನಾಬ್ ... ಯವರು ವರದಿಯನ್ನು ಓದಿದರು. ... ಶ್ರೀ ದಾಸಪ್ಪನವರು ಭಾಷಣ ಮಾಡಿ, ಮೈಸೂರಿನ ರೇಷ್ಮೆಯು ಜಗತ್ಪ್ರಸಿದ್ಧವಾದುದು, ಅದರ ಅಭಿವೃದ್ಧಿಗೆ ಕಾರ್ಖಾನೆಯವರು ಎಲ್ಲ ಪ್ರಯತ್ನವನ್ನು ಕೈಗೊಳ್ಳಬೇಕೆಂದೂ, ಕಾರ್ಖಾನೆಯ ಸ್ವಯಂಪೂರ್ಣತೆಯ ಯೋಜನೆಯು ಸರ್ಕಾರದವರ ಗಮನದಲ್ಲಿರುವುದೆಂದೂ ಹೇಳಿದರು. ಈ ಸಮಾರಂಭದಲ್ಲಿ ಕಾರ್ಮಿಕರ ಮಕ್ಕಳು ನಾಟಕ, ಕೋಲಾಟ ... ದಿನಾಚರಣೆಯನ್ನು ನಡೆಸಿದ್ದು ... ಪ್ರಶಂಸನೀಯವಾಗಿರುವುದೆಂದೂ ಅವರು ಹೇಳಿದರು. ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನ ವಿತರಿಸಿದರು.

## ಅರಮನೆ ಹೆಸರು ಉಪಯೋಗಿಸಿ ಕೂರ್ಜ ಪಡೆದವನ ದಸ್ತಗಿರಿ

ಹಾಸನ ಪೊಲೀಸರು ಪುಟ್ಟಕೃಷ್ಣ ಎಂಬಾತನನ್ನು ಕಲ್ಲೇನಹಳ್ಳಿ ಮನೆಯಲ್ಲಿ ದಸ್ತಗಿರಿಮಾಡಿದ್ದಾರೆ. ತಾನು ಮೈಸೂರು ಅರಮನೆಯ ಪ್ರತಿನಿಧಿಯೆಂದೂ ... ಹೇಳಿ ... ಹಣವನ್ನು ಸಂಪಾದಿಸಿದನೆಂದು ... ಗ್ಯಾಲನ್ನಿನ ಪೆಟ್ರೋಲ್ ಕೂಪನ್ ... 

## ಸಿಂಧ್ ಪ್ರಾಂತದಲ್ಲೂ ಅಲ್ಪಸಂಖ್ಯಾತರ ಮಂತ್ರಿ ನೇಮಕ

ನೆಹರೂ ಲಿಯಾಖತ್ ಅಲಿಖಾನ್ ಒಪ್ಪಂದವನ್ನು ಜಾರಿಗೆ ತರುವ ಸಲುವಾಗಿ ಪೂರ್ವ ಬಂಗಾಳಕ್ಕೆ ಪಾಕಿಸ್ತಾನದ ಆರೋಗ್ಯ ಮಂತ್ರಿ ಡಾಕ್ಟರ್ ಎಂ. ಮಲಿಕ್‌ರವರನ್ನು ಕಳುಹಿಸಲಾಗುವುದೆಂದು ಹೇಳಲಾಗಿದೆ. ಈ ಬಗ್ಗೆ ಲಿಯಾಖತ್ ಅಲಿಖಾನರು ಪೂರ್ವ ಬಂಗಾಳ ಮುಖ್ಯ ಮಂತ್ರಿಗಳೊಡನೆ ಕಲೆತು ಮಾತುಕತೆ ನಡೆಸಿದರು. ಸಿಂಧ್ ಪ್ರಾಂತದ ಮಂತ್ರಿಮಂಡಲದಲ್ಲೂ ಸಹ ಒಬ್ಬ ಅಲ್ಪಸಂಖ್ಯಾತರ ಮಂತ್ರಿಯನ್ನು ನೇಮಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

## ನಾಗರ ಹಾವಿನೊಡನೆ ಕೋತಿಯ ಕಾಳಗ

... ಒಂದು ಕೋತಿಯ ... ಜೊತೆ ... ಒಂದು ನಾಗರ ಹಾವನ್ನು ಹಿಡಿದುಕೊಂಡು ... ನೋಡಲು ಭಾರಿ ಜನರ ಗುಂಪು ಸೇರಿತ್ತು ... ಕೋತಿಯು ಮತ್ತೊಂದು ನಾಗರ ಹಾವಿನೊಡನೆ ಕಾದಾಡಿ ... ಕೋತಿಯು ಅದರೊಡನೆ ಸುಮಾರು ಒಂದು ಘಂಟೆ ಕಾಲ ಕಾಳಗವಾಡಿ ಹಾವನ್ನು ಕೊಂದುಹಾಕಿತು.

## ಡೈರೆಕ್ಟರುಗಳ ಚುನಾವಣೆ

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆಯು ನೆನ್ನೆ ನಡೆಯಿತು. ... ಚುನಾಯಿತರಾದರು ...

## ಗುಂಡ್ಲುಪೇಟೆ ಬಳಿ ದರೋಡೆಯೋ?

ತೆರಕಣಾಂಬಿ ಸಂತೆಗೆ ... ರಾತ್ರಿ ಹೋಗುತ್ತಿದ್ದ ಗಾಡಿಗಳು ಕಳ್ಳರ ಕಣ್ಣಿಗೆ ... ನಡುವೆ ಸಿಕ್ಕಿಕೊಂಡು ಅನೇಕ ಸಾಮಾನು ಮತ್ತು ನಗಗಳು ಲೂಟಿಯಾದುವೆಂದೂ ೧೫ ಜನರು ಕಪ್ಪು ವಸ್ತ್ರಗಳನ್ನು ಹಾಕಿಕೊಂಡು ಮುಖಕ್ಕೆ ಬಣ್ಣ ಬಳಿದುಕೊಂಡಿದ್ದು ಈ ಕೃತ್ಯ ನಡೆಸಿದರೆಂದೂ, ವ್ಯಾಪಾರಸ್ಥರಿಗೆ ಇದರಿಂದ ಭೀತಿಯುಂಟಾಗಿದೆಯೆಂದೂ ಹೇಳಲಾಗಿದೆ.

## ನಾಯಕರ ಪ್ರತಿಮೆಗಳಿಂದ ಸಂಚಾರಕ್ಕೆ ಅಡಚಣೆಯೆ?

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಮಹಾತ್ಮ ಗಾಂಧಿ ಪ್ರತಿಮೆಗಳು, ಬಾಲ ಗಂಗಾಧರ ತಿಲಕ್ ಮತ್ತು ನೇತಾಜಿ ಬೋಸರ ವಿಗ್ರಹಗಳಿಂದ ಸಂಚಾರಕ್ಕೆ ಅಡಚಣೆಯಾಗಿರುವುದರಿಂದ ಅವುಗಳನ್ನು ಈಗ ಸ್ಥಾಪಿಸಿರುವ ಸ್ಥಳದಿಂದ ಬೇರೆ ಕಡೆಗೆ ವರ್ಗಾಯಿಸಬೇಕೆಂದು ಅಲ್ಲಿನ ಕಮೀಷನರು ಪತ್ರಗಳ ಸಂಸ್ಥಾಪಕರಿಗೆ ಬರೆದಿದ್ದಾರೆ.

## ಕಾರ್ಯಕಾರಿ ಸಮಿತಿಗೆ ಶ್ರೀ ಕೆ. ಹನುಮಂತಯ್ಯನವರು

ಮೈಸೂರು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಗೆ ಶ್ರೀ ಪಿ. ವೆಂಕಟಪ್ಪನವರು ರಾಜೀನಾಮೆಯಿತ್ತ ಕಾರಣ, ಅವರ ಜಾಗದಲ್ಲಿ ಬೆಂಗಳೂರು ಜಿಲ್ಲೆಯಿಂದ ಶ್ರೀ ಕೆ. ಹನುಮಂತಯ್ಯನವರನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಯು ಸದಸ್ಯರನ್ನಾಗಿ ಚುನಾಯಿಸಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಕೆ. ಸುಬ್ಬಣ್ಣನವರನ್ನು ಆರಿಸಲಾಗಿದೆ.

## ಶಂಕರ ಜಯಂತಿ ಮಹೋತ್ಸವ

ಮೈಸೂರು ಚಾಮರಾಜ ಜೋಡಿರಸ್ತೆಯ ಶ್ರೀ ಶಾರದಾ ಮಠದ ಕೋ-ಆಪರೇಟಿವ್ ಸ್ಟೋರ್ಸಿನ ಎದುರಿಗಿರುವ ಶ್ರೀ ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಸ್ಥಾನದಲ್ಲಿ ಪದ್ಧತಿಯಂತೆ ಈ ಸಾರಿಯೂ ... ಶ್ರೀ ಶಂಕರ ಜಯಂತೀ ಮಹೋತ್ಸವವು ಜರುಗುವುದು. ಇದರ ಅಂಗವಾಗಿ ನಾಳೆ ರಾತ್ರಿ ೮ ಘಂಟೆಗೆ ವಿ॥ ಟಿ. ಎಂ. ಪುಟ್ಟಸ್ವಾಮಯ್ಯನವರ ಸಂಗೀತವನ್ನು ... ಯವರ ಪಿಟೀಲು ಮತ್ತು ವಿ॥ ಟಿ. ಎಂ. ... ಮೃದಂಗದೊಡನೆ ಏರ್ಪಡಿಸಲಾಗಿದೆ. ಈ ಕಾರ್ಯಕ್ಕೆ ಭಕ್ತಾದಿಗಳು ... ಆಗಮಿಸಬೇಕೆಂದು ಕೋರಲಾಗಿದೆ.

ರಾಜಧಾನಿಯ ... ಮಹೋತ್ಸವದ ಅಂಗವಾಗಿ ... ಶ್ರೀ ಶ್ರೀನಿವಾಸ ... ದೇವಸ್ಥಾನದಲ್ಲಿ ... ಸಂಸ್ಕೃತ ... ಪ್ರತಿ ದಿನ ಸಂಜೆ ... ಘಂಟೆಗೆ ... ನಡೆಯುವುದು ...

## ಡೆನ್ಮಾರ್ಕಿನಲ್ಲಿ ಅಟಂ ಬಾಂಬ್ ಧಾಳಿ ಬಗ್ಗೆ ರಕ್ಷಣಾ ವ್ಯವಸ್ಥೆ

ಡೆನ್ಮಾರ್ಕಿನಲ್ಲಿ ಅಣು ಬಾಂಬಿನ ಧಾಳಿಯ ಬಗ್ಗೆ ಅಗಾಧ ರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ದೇಶದ ಮುಖ್ಯ ಪ್ರದೇಶಗಳಲ್ಲಿ ರಕ್ಷಣೆ ಪಡೆಯಲು ಆಶ್ರಯಗಳನ್ನು ಕಟ್ಟಲಾಗುವುದು. ಈ ವ್ಯವಸ್ಥೆಗಳಿಗಾಗಿ ಇಲ್ಲಿ ಸುಮಾರು ೫೦ ಲಕ್ಷ ಪೌಂಡುಗಳನ್ನು ವೆಚ್ಚಮಾಡಲಾಗುವುದೆಂದು ವರದಿಯಾಗಿದೆ.

## ಒಪ್ಪಂದವು ಯಶಸ್ವಿಯಾಗುವ ಸೂಚನೆ

ಭಾರತ-ಪಾಕಿಸ್ತಾನಗಳ ಅಲ್ಪಸಂಖ್ಯಾತರ ಬಗ್ಗೆ ಎರಡು ರಾಷ್ಟ್ರಗಳ ಪ್ರಧಾನಿಗಳಿಗೆ ನಡೆದ ಒಪ್ಪಂದವು ಯಶಸ್ವಿಯಾಗುವ ಸೂಚನೆಗಳು ಕಂಡು ಬರುತ್ತಿವೆ. ಒಪ್ಪಂದವಾದ ನಂತರ ಕಲ್ಕತ್ತೆಯಿಂದ ಮುಸ್ಲಿಮರು ಹೊರಕ್ಕೆ ಹೋಗುವುದು ನಿಂತಿರುವುದಾಯ್ತು. ಪಾಕಿಸ್ತಾನದ ಪತ್ರಿಕೆಗಳು ದೇಶದಲ್ಲಿ ಶಾಂತಿ ಸೌಹಾರ್ದಗಳು ನೆಲೆಸುವ ರೀತಿಯಲ್ಲಿ ಪ್ರಚಾರ ಮಾಡುವಂತಹ ಲೇಖನಗಳನ್ನು ಬರೆಯುತ್ತಿರುವುವೆಂದೂ, ಉಭಯ ರಾಷ್ಟ್ರಗಳಲ್ಲೂ ಅಲ್ಪ ಸಂಖ್ಯಾತರು ಮತ್ತು ಬಹುಸಂಖ್ಯಾತರುಗಳಲ್ಲಿ ಪರಸ್ಪರ ಸ್ನೇಹ ಸೌಹಾರ್ದವು ಮೂಡಿರುವುವೆಂದೂ ವರದಿಯಾಗಿದೆ.

## ದಾವಣಗೆರೆಯಲ್ಲಿ ಕ್ಷಯ ನಿವಾರಣಾ ಆಸ್ಪತ್ರೆ

ದಾವಣಗೆರೆಯಲ್ಲಿ ಕ್ಷಯ ರೋಗ ನಿವಾರಣಾ ಆಸ್ಪತ್ರೆಯನ್ನು ಕಟ್ಟುವ ಬಗ್ಗೆ ಒಂದು ಯೋಜನೆಯು ತಯಾರಾಗಿದೆ. ಇಲ್ಲಿ ೨೦೦ ಜನ ರೋಗಿಗಳಿಗೆ ಏಕ ಕಾಲದಲ್ಲಿ ಚಿಕಿತ್ಸೆ ಮಾಡಬಹುದು. ರಾಜಧಾನಿಯ ಕೃಷ್ಣರಾಜಮ್ಮಣ್ಣಿ ಸ್ಯಾನಿಟೋರಿಯಮ್ಮನ್ನು ಸಹ ಅಭಿವೃದ್ಧಿ ಮಾಡಲು ಸೂಕ್ತ ವ್ಯವಸ್ಥೆಯಾಗುತ್ತಿದೆ.

### ಪಾಸ್ ಪೋರ್ಟುಗಳು

ಸಂಸ್ಥಾನದಲ್ಲಿ ನೆಲೆಸಿರುವ ಭಾರತೀಯ ರಾಷ್ಟ್ರೀಯರೂ ಇತರರೂ ವಿದೇಶಗಳಿಗೆ ಹೋಗಬೇಕಾಗುವ ಸಂದರ್ಭಗಳಲ್ಲಿ ಅವರಿಗೆ ಪಾಸ್ ಪೋರ್ಟುಗಳನ್ನು ಕೊಡುವ ಅಧಿಕಾರವನ್ನು ರಾಷ್ಟ್ರಾಧ್ಯಕ್ಷರ ಶ್ರೀಮನ್ನಾರಾಯಣರಿಗೂ ಇವರ... ಅದನ್ನು ಸಂಸ್ಥಾನದ ಚೀಫ್ ಸೆಕ್ರೆಟರಿಯವರಿಗೂ ವಹಿಸಿಕೊಟ್ಟಿರುವರೆಂದು ತಿಳಿದುಬಂದಿದೆ.

## ನೀಗ್ರೋ ನಾಯಕನಿಗೆ ಪತ್ನಿ ನೋಡಲು ಅವಕಾಶ

ದ. ಆಫ್ರಿಕಾದ ಬಮಾಂಗ್ವೊ ಜನರ ಮುಖಂಡನಾದ ಸೆರಿಟ್ಸೆ ಖಾಮರವರು ತಮ್ಮ ಇಂಗ್ಲೀಷ್ ಪತ್ನಿಯನ್ನು ನೋಡಲು ಬ್ರಿಟಿಷ್ ಅಧಿಕಾರಿಗಳು ಕೆಲವು ಷರತ್ತಿನ ಮೇಲೆ ಅವಕಾಶವಿತ್ತಿದ್ದಾರೆ. ಆಕೆಗೆ ಬರುವ ತಿಂಗಳಿನಲ್ಲಿ ಒಂದು ಶಿಶು ಜನನವಾಗುವ ಸಂಭವವಿದೆ.

## ಶಾಂತಿನಿಕೇತನದಲ್ಲಿ ಪ್ರಸಾರ ಕೇಂದ್ರ

ಕವಿ ರವೀಂದ್ರನಾಥರ ಸ್ಥಾಪಿತವಾದ ಶಾಂತಿನಿಕೇತನದಲ್ಲಿ ಒಂದು ರೇಡಿಯೋ ಪ್ರಸಾರ ಕೇಂದ್ರವನ್ನು ಬರುವ ತಿಂಗಳು ೧ನೇ ತಾರೀಖು ಸ್ಥಾಪಿಸಲಾಗುವುದು. ಅಲ್ಲಿಂದ ರವೀಂದ್ರರ ಕವನಗಳು ಮತ್ತು ಗೀತೆಗಳನ್ನು ಪ್ರಸಾರ ಮಾಡಲಾಗುವುದು.

### ಜಿಲ್ಲಾ ಮುದ್ರಣಕಾರರ ಸಂಘ

ಮೈಸೂರು ಜಿಲ್ಲಾ ಮುದ್ರಣಕಾರರ ಸಂಘವು ನೆನ್ನೆ ದಿನ ಸ್ಥಾಪಿಸಲ್ಪಟ್ಟಿತು. ೧೯೫೦-೫೧ನೇ ಸಾಲಿಗೆ ಶ್ರೀ ಟಿ. ಎ. ಕೊಯಿರಾಲಾರವರು ಅಧ್ಯಕ್ಷರಾಗಿಯೂ, ಶ್ರೀ ಜಿ. ಎಚ್. ರಾಮರಾಯರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ವಿ. ಅನಂತರಾಮಯ್ಯ ಮತ್ತು ಕೆ. ವೆಂಕಟಸುಬ್ಬಯ್ಯನವರುಗಳು ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು.

### ಬನುಮಯ್ಯನವರ ವಿದ್ಯಾಶಾಲಾ ರಜತೋತ್ಸವ

ರಾಜಧಾನಿಯಲ್ಲಿರುವ ಡಿ. ಬನುಮಯ್ಯನವರ ವಿದ್ಯಾಶಾಲೆಗಳ ರಜತಮಹೋತ್ಸವವನ್ನು ಈ ವರ್ಷದ ಉತ್ತರಾರ್ಧದಲ್ಲಿ ನೆರವೇರಿಸಲಾಗುವುದು. ಸಂಸ್ಥೆಯ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಹಳೆಯ ವಿದ್ಯಾರ್ಥಿಗಳು ತಮ್ಮ ಈಗಿನ ವಿಳಾಸವನ್ನು ಗೌರವ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

### ಸಿನಿಮಾ ರಹದಾರಿಗಳಿಗೆ ಸರ್ಕಾರದ ಷರತ್ತು

ಸಿನಿಮಾಗಳಿಗೆ ರಹದಾರಿಯನ್ನು ಕೊಡಬೇಕಾದರೆ ಅವುಗಳಲ್ಲಿ ಕಡ್ಡಾಯವಾಗಿ ೪೦೦ ಅಡಿ ಅಂಗೀಕೃತವಾದ ಫಿಲಂಗಳನ್ನು ಪ್ರದರ್ಶಿಸಬೇಕೆಂಬ ಷರತ್ತನ್ನು ಸರ್ಕಾರದವರು ಹಾಕಿದ್ದಾರೆ.

## ಮೇ ೧ ಕೈ ಕೈಗಾರಿಕೆಗಳ ರಜಾ ದಿನ

ಮೇ ೧ನೇ ತಾರೀಖಿನ ದಿನ ಕೈಗಾರಿಕೆ ಕಾರ್ಮಿಕರ ರಜಾ ದಿನವನ್ನಾಗಿ ಪರಿಗಣಿಸಬೇಕೆಂದು ಮಾಲೀಕರುಗಳಿಗೆ ಮತ್ತು ಅಧಿಕಾರಿಗಳಿಗೆ ಭಾರತ ಸರಕಾರದವರು ಸೂಚನೆಯಿತ್ತಿದ್ದಾರೆ.

## ಜರ್ಮನಿಯಲ್ಲಿ ಹಿಟ್ಲರಿಸಂ ಪುನಃ ಏಳುತ್ತಿದೆ

ಜರ್ಮನಿಯಲ್ಲಿ ಹಿಟ್ಲರಿಸಂ ತತ್ವವು ಪುನಃ ಏಳುತ್ತಿರುವುದಾಗಿ ನಾಜಿ ವಿರೋಧಿ ಜರ್ಮನ್ ಕಥೆಗಾರರಾದ ಥಾಮಸ್ ಮ್ಯಾನರವರು ಹೇಳಿದ್ದಾರೆ. ಜರ್ಮನಿಯಲ್ಲಿ ಯಹೂದ್ಯರ ಬಹಿಷ್ಕಾರಗಳು ಪುನಃ ಪ್ರಾರಂಭವಾಗಿವೆ. ಯಹೂದ್ಯ ಹೆಂಗಸರನ್ನು ಅಣಕಿಸಲಾಗುತ್ತಿದೆ.

## ನಾಲ್ಕು ಮಕ್ಕಳ ಜನನ

ಕೆನಡಾ ಅಲಬಾಮ ಪ್ರಾಂತದ ೩೬ ವರ್ಷದ ಹೆಂಗಸೊಬ್ಬಳಿಗೆ ೪ ಹೆಣ್ಣು ಮಕ್ಕಳು ಏಕ ಕಾಲದಲ್ಲಿ ಜನಿಸಿದವು. ಇವಲ್ಲದೇ ಆಕೆಗೆ ಅವಳ ಸಮೇತ ಇನ್ನೂ ೭ ಮಕ್ಕಳುಗಳಿವೆ.

## ಫ್ರೆಂಚ್ ತೀರ ದ್ವೀಪದ "ಸ್ವಾತಂತ್ರ್ಯ" ಘೋಷಣೆ

ಫ್ರೆಂಚ್ ತೀರದ ಬಳಿ ಇರುವ ೧೩೦೦ ಪ್ರಜಾ ಸಂಖ್ಯೆಯ ಎಲ್‌ಡಿಸೀರ್ ಎಂಬ ದ್ವೀಪವು ಸ್ವಾತಂತ್ರ್ಯದ ಘೋಷಣೆ ಮಾಡಿ ತಾನು ಪ್ರಪಂಚದ ರಾಷ್ಟ್ರವೆಂದು ಹೇಳಿದೆ. ಇದೇ ರೀತಿಯಲ್ಲಿ ಇತರ ಚಿಕ್ಕ ದ್ವೀಪಗಳೂ ಸಾರಬೇಕೆಂದು ಮನವಿ ಮಾಡಿದೆ.

ಅಗ್ಗದ ಜವಳಿಗಳಿಗೆ
**ಗುರುದೇವಾ ಹಾಲ್**
ಇವರಲ್ಲಿ ದಯಮಾಡಿ ಭೇಟಿ ಕೊಡಿ.
ಶಿವರಾಂಪೇಟೆ, ಮೈಸೂರು.

**ಅನ್ನಪೂರ್ಣೇಶ್ವರಿ ಲಾಡ್ಜ್**
ನಾರಾಯಣ ಶಾಸ್ತ್ರಿ ರಸ್ತೆ
ನಲ್ಲಪ್ಪನ ಛತ್ರದ ಬಳಿ, ಮೈಸೂರು
ಮೇಲ್ಕಂಡ ಹೋಟೆಲಿನಲ್ಲಿ ತಾ|| ೨೦-೩-೫೦ರಿಂದ ಪ್ಲೇಟ್ ಊಟವನ್ನು ಏರ್ಪಾಡು ಮಾಡಲಾಗಿದೆ. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.
ಎ. ಎಸ್. ಪರಮೇಶ್ವರ ಅಯ್ಯರ್
ಪ್ರೊಪ್ರೈಟರ್

## ಯುರೇನಿಯಂ ಕಂಡು ಹಿಡಿದವರಿಗೆ ಬಹುಮಾನ

ಭಾರತದ ನಾನಾ ಭಾಗಗಳಲ್ಲಿರಬಹುದಾದ ಯುರೇನಿಯಂ ಲೋಹವು ಇರುವ ಜಾಗಗಳನ್ನು ಪತ್ತೆ ಮಾಡಿ ತಿಳಿಸಿದವರಿಗೆ ಹತ್ತು ಸಾವಿರ ರೂ. ಗಳವರೆಗೆ ಬಹುಮಾನ ಕೊಡಲಾಗುವುದೆಂದು ಕೇಂದ್ರ ಸರ್ಕಾರದವರು ತಿಳಿಸಿದ್ದಾರೆ.

## ರಾಜಕೀಯದಲ್ಲಿ ಗ್ರಾಮಾಧಿಕಾರಿಗಳ ಭಾಗ ಕೂಡದು

ಮದ್ರಾಸಿನ ಗ್ರಾಮಾಧಿಕಾರಿಗಳು ರಾಜಕೀಯದಲ್ಲಿ ಭಾಗವಹಿಸಕೂಡದೆಂದು ಅಲ್ಲಿನ ಸರ್ಕಾರದ ಆಜ್ಞೆಯಾಗಿದೆ.

Malaria No. 436 Engels

**ಭಯಂಕರ ಭೂತಗಳು**

ಭೂತಗಳ ವಿಷಯವಾಗಿ ಯಾವಾಗಲಾದರೂ ನೀವು ಕೇಳಿದ್ದೀರಾ? ನಿಶೀಥದಲ್ಲಿ ಸಮಾಧಿಯಿಂದ ಎದ್ದು ಬರುವ ಶಕ್ತಿವನ ಸ್ವರೂಪವೇ ಇದೆಂದು ಪುರಾತನರ ನಂಬಿಕೆಯಾಗಿದೆ. ಇವು ಎದ್ದು ಬಂದು ಜನರ ರಕ್ತವನ್ನು ಹೀರುತ್ತವೆಂದು ಭಾವಿಸಲಾಗಿದೆ. ಭೂತಗಳ ವಿಷಯವೆಲ್ಲ ಸುಳ್ಳೆಂದು ನಮಗೆ ಕಾಣಿಸಿದರೂ ಸಹ, ಈ ಪ್ರಾಣಿಗಳ ಭಯಂಕರ ಕಾರ್ಯಗಳನ್ನು ಕೇಳಿದಾಗ ನಮ್ಮ ಹೃದಯವು ಭೀತಿಸುತ್ತದೆ. ಬಹುಕಾಲದವರೆಗೆ ಇವುಗಳ ಇರವಿಕೆ ಬಗ್ಗೆ ನಂಬಿಕೆಯಿತ್ತು. ೧೯ನೇ ಶತಮಾನದ ಮಧ್ಯಭಾಗದಲ್ಲಿ ಜರ್ಮನಿಯಲ್ಲಿ ನಡೆದ ಭೂತ-ವಿಚಾರಣೆಗಳನ್ನು ನಾವು ಓದಿರುವೆವು. ಮೂಢ ಭಕ್ತಿಯುಳ್ಳವರು ಇವುಗಳ ಜೀವ್ಯಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸಮಾಧಿಗಳ ಹತ್ತಿರ ಹಲವು ಬಗೆಯ ವಸ್ತುಗಳನ್ನು ಇಟ್ಟು ಭೂತ ತೃಪ್ತಿಯಾಗುವುದೆಂದು ಭಾವಿಸಿದ್ದರು.

ಇಂತಹ ರಕ್ತ ಹೀರುವ ಅಪಾಯಕರ ಭೂತಗಳಿಂದ ರಕ್ಷಣೆ ಪಡೆಯುವುದಕ್ಕಿಂತಲೂ ಹೆಚ್ಚಾಗಿ ನಿಜವಾಗಿಯೂ ಇರುವ ರಕ್ತ ಹೀರುವ ಪ್ರಾಣಿಗಳಿಂದ ರಕ್ಷಣೆ ಹೊಂದಬೇಕಾಗಿದೆ. ಈ ಅಪಾಯಕರವಾದ ಪ್ರಾಣಿಗಳು ಇಂದಿಗೂ ಇರುತ್ತವೆ. ಯೋಚಿಸಿರುವಿರೇ? ಅದರೆ ಸೊಳ್ಳೆಯು ನಮ್ಮ ರಕ್ತ ಹೀರುವುದೇ ಮಾತ್ರವಲ್ಲದೆ ಅಪಾಯ ಕಾರಕ ಮಲೇರಿಯ ಕ್ರಿಮಿಯನ್ನು ಒಬ್ಬ ಮನುಷ್ಯನಿಂದ ಮತ್ತೊಬ್ಬನಿಗೆ ಅಂಟಿಸುವುದು. ಕ್ವಿನೈನ್ ಸೇವನೆಯಿಂದ ಈ ನಿಜವಾದ ಅಪಾಯದಿಂದ ಪಾರಾಗಬಲ್ಲೆವು. ಇದು ಸಿಂಕೋನಾ ಗಿಡದ ತೊಗಟೆಯಿಂದ ಪಡೆದ ಸ್ವಭಾವಸಿದ್ಧವಾದ ವಸ್ತುವಾಗಿದೆ.

ಮಾಜಿ ಲೀಗ್ ಆಫ್ ನೇಷನ್ಸಿನ ಮಲೇರಿಯಾ ಸಮಿತಿಯು ಈ ಮಲೇರಿಯ ಸಮಸ್ಯೆ ಬಗ್ಗೆ ದೀರ್ಘ ಪರಿಶೀಲನೆ ಮಾಡಿ [illegible] ವರದಿಯಲ್ಲಿ ಮಲೇರಿಯಾ ಬಂದಾಗ ೫ ರಿಂದ ೭ ದಿನಗಳವರೆಗೆ ದಿನಂಪ್ರತಿ ೨೦ ಗ್ರೇನ್ ಕ್ವಿನೈನನ್ನು ಸೇವಿಸಬೇಕೆಂದೂ ಸೂಚಿಸಿತ್ತು. [illegible] ಮಲೇರಿಯಾ ಬರದಂತೆ ಮಾಡಲು ೬ ಗ್ರೇನ್ ಕ್ವಿನೈನ್ ಸೇವಿಸಬೇಕು. ಈ ರೀತಿ ಅಪಾಯವನ್ನು ಒಡ್ಡುವ ಭಯಂಕರ ಸೊಳ್ಳೆಯನ್ನು ಸಂಪೂರ್ಣವಾಗಿ ನಾಶ ಮಾಡಬಹುದು.

ಮೈಸೂರು ನಗರಾಭಿವೃದ್ಧಿ ಸಮಿತಿ, ಮೈಸೂರು

**ಪ್ರಕಟಣೆ**

**ನಿವೇಶನಗಳ ಹರಾಜು**

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ

ಮೈಸೂರು ಸಿಟಿ ಹೊಸ ಬಸ್ಸ್ ಸ್ಟಾಂಡ್ [illegible] ನಿವೇಶನಗಳನ್ನು [illegible] ಹರಾಜು ಮಾಡಲ್ಪಡುತ್ತವೆ. ಹೆಚ್ಚಿನ ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

[illegible] ಗೋಪಾಲಕೃಷ್ಣ ಶೆಟ್ಟಿ, ಛೇರ್ಮನ್

# ಪ್ರಭುದೇವಾ ಟಾಕೀಸ್

15-4-50ನೇ ಶನಿವಾರದಿಂದ ಅಮೋಘ ಪ್ರಾರಂಭ

ಟಿ. ಆರ್. ಮಹಾಲಿಂಗಂ, ಎಂ. ವಿ. ರಾಜಮ್ಮ ಮುಖ್ಯ ಪಾತ್ರ ವಹಿಸಿರುವ

ಬಾಲಾಜಿಯವರ

ತಮಿಳು **ಲೈಲಾ ಮಜ್ನು**

ದಿನವಹಿ ಮೂರು ಪ್ರದರ್ಶನಗಳು

ಪಾತ್ರ - ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ, ಲಲಿತ-ಪದ್ಮಿನಿ, ಸಹಸ್ರನಾಮಂ, ವಿ. ಎನ್. ಜಾನಕಿ ಮುಂತಾದವರು.

ಈ ಚಿತ್ರಕ್ಕೆ ಎರಡು ವಾರಗಳ ಕಾಲ ಎಲ್ಲ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿ ಪಾಸುಗಳನ್ನು ರದ್ದು ಮಾಡಿದೆ.

Edited, printed and published by A. R. Nagarajan at Sadhvi Press, D. Subbiah Road, Mysore.

ರಿಜಿ. ನಂ. 792 | ವಂದೇ ಮಾತರಂ | ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಮಂಗಳವಾರ ೧೮-೪-೫೦ [ಸಂಚಿಕೆ ೩೩೦

# ಬರುವ ವಸಂತದಲ್ಲಿ ಭಾರತದ ಚುನಾವಣೆ

## ಲಿಯಾಖತ್-ನೆಹರೂ ಭೇಟಿ ೨೬ ರೊಳಗೆ

ಬರುವ ೨೬ನೇ ತಾರೀಖಿನೊಳಗೆ ನೆಹರು, ಲಿಯಾಖತ್ ಅಲಿಖಾನರವರ ಭೇಟಿಯು ಕರಾಚಿಯಲ್ಲಿ ನಡೆಯಬಹುದೆಂದು ಹೇಳಲಾಗಿದೆ. ಲಿಯಾಖತ್ ಅಲಿಖಾನರು ೩ನೇ ತಾರೀಖಿಗೆ ಅಮೆರಿಕಾದ ಪ್ರವಾಸವನ್ನು ಕೈಗೊಳ್ಳುವರು.

## ಹೈದರಾಬಾದು ಮಂತ್ರಿ ಮಂಡಲಕ್ಕೆ ಕಾಂಗ್ರೆಸ್ಸಿನವರು

ಹೈದರಾಬಾದಿನ ಮುಖ್ಯ ಮಂತ್ರಿ ಎಂ. ಕೆ. ವೆಲ್ಲೋಡಿಯವರು ಸಂಸ್ಥಾನದ ಕಾಂಗ್ರೆಸ್ಸಿಗೆ ಒಂದು ಸೂಚನೆಯನ್ನು ಕೊಟ್ಟು, ೮ ಜನರ ಹೆಸರನ್ನು ಕಳುಹಿಸಿಕೊಡಬೇಕೆಂದೂ ಆ ಪೈಕಿ ನಾಲ್ಕು ಜನರನ್ನು ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳಲಾಗುವುದೆಂದೂ ತಿಳಿಸಿರುವುದಾಗಿ ಗೊತ್ತಾಗಿದೆ. ಹಣಕಾಸು ಮತ್ತು ಒಳಾಡಳಿತ ಎರಡು ಖಾತೆಗಳನ್ನು ಬಿಟ್ಟು, ಉಳಿದ ಖಾತೆಗಳ ಪೈಕಿ ಯಾವುದನ್ನು ಬೇಕಾದರೂ ಮಂತ್ರಿಗಳು ಆರಿಸಿಕೊಳ್ಳಬಹುದೆಂದು ತಿಳಿಸಲಾಗಿದೆ.

## ಪೂರ್ವ ಆಫ್ರಿಕಾದಲ್ಲಿ ಗಾಂಧಿ ಸ್ಮಾರಕ

ಮಹಾತ್ಮ ಗಾಂಧೀಜಿಯವರ ಆಜೀವ ಸಹೋದ್ಯೋಗಿಗಳಾದ ಕಾಕಾ ಕಾಲೇಲ್ಕರವರು ಶೀಘ್ರದಲ್ಲೇ ಪೂರ್ವ ಆಫ್ರಿಕಾಕ್ಕೆ ಭೇಟಿಯಿತ್ತು, ಅಲ್ಲಿ ಗಾಂಧಿ ಸ್ಮಾರಕವಾಗಿ ಸ್ಥಾಪಿಸಲಿರುವ ಕಾಲೇಜನ್ನು ಕುರಿತು ಸಮಾಲೋಚನೆ ನಡೆಸುವುದಾಗಿ ಹೇಳಲಾಗಿದೆ.

## ಪಶ್ಚಿಮ ಬಂಗಾಳಕ್ಕೆ ಕೇಂದ್ರಾಧಿಕಾರಿಗಳು.

ಪಶ್ಚಿಮ ಬಂಗಾಳದ ಆಡಳಿತವನ್ನು ಬಲಪಡಿಸಲು ೪ ಜನ ಕೇಂದ್ರದ ಹಿರಿಯ ಅಧಿಕಾರಿಗಳನ್ನು ಎರವಲು ಕೊಡಲಾಗಿದೆ. ಕೈಗಾರಿಕೆ, ವ್ಯಾಪಾರ ಮತ್ತು ಒಳಾಡಳಿತ ಇಲಾಖೆಗಳ ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಲಾಗುವುದು.

## ಬದರೀನಾಥ ದೇವಾಲಯಕ್ಕೆ ವಿದ್ಯುದ್ದೀಪ

ಹಿಮಾಲಯ ಪರ್ವತದಲ್ಲಿ ಸುಮಾರು ೧೧ ಸಾವಿರ ಅಡಿಗಳ ಎತ್ತರದಲ್ಲಿರುವ ಶ್ರೀ ಬದರೀನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಬರುವ ತಿಂಗಳು ವಿದ್ಯುದ್ದೀಪಗಳನ್ನು ಹಾಕಲಾಗುವುದೆಂದು ಗೊತ್ತಾಗಿದೆ. ದೇವಾಲಯದ ಸುತ್ತಮುತ್ತಲ ರಸ್ತೆಗಳಿಗೂ ದೀಪವನ್ನು ಹಾಕಲಾಗುವುದು.

## ಫಿಲಿಪ್ಪೈನ್ ದ್ವೀಪಗಳಲ್ಲಿ ಕಮ್ಯೂನಿಸ್ಟ್ ಸೈನ್ಯಗಳ ಧಾಳಿ

ಫಿಲಿಪ್ಪೈನ್ ದ್ವೀಪಗಳಲ್ಲಿ ಕಮ್ಯೂನಿಸ್ಟರ ಕ್ರಮ ವಿರೋಧಚಟುವಟಿಕೆಗಳನ್ನು ಸೈನ್ಯವು ಗೆರಿಲ್ಲಾ ಕಾರ್ಯಾಚರಣೆಯನ್ನು ಮಾಡುತ್ತಿರುವುದಾಗಿ ಹೇಳಲಾಗಿದೆ. ಸರ್ಕಾರಿ ಸೈನ್ಯಗಳ ಮೇಲೆ ೮ ನೇ ಬಾರಿ ಈ ಸೈನ್ಯಗಳು ಧಾಳಿಯಿಟ್ಟು ಧಾನ್ಯಗಳನ್ನು ಲೂಟಿ ಮಾಡಿದವೆಂದು ವರದಿಯಾಗಿದೆ.

## ಅಫ್ರಿಕ ಕಾಲೇಜಿಗೆ ಭಾರತದ ಮುಖ್ಯೋಪಾಧ್ಯಾಯರು

ಪೂರ್ವ ಆಫ್ರಿಕದ ಕ್ಯಾಂಗನೀಕಾ ಸ್ಥಳದ ಭಾರತೀಯ ವ್ಯವಸಾಯದ ಕಾಲೇಜಿನ ಮುಖ್ಯೋಪಾಧ್ಯಾಯರಾಗಿ ಶ್ರೀ [illegible] ಅವರನ್ನು ನೇಮಿಸಲಾಗಿದೆ. ಇಲ್ಲಿ ಇಂತಹ ನೇಮಕವು ಇದೇ ಮೊದಲನೆಯದು.

## ಇಬ್ಬರು ಉಪಾಧ್ಯಾಯಿನಿಯರಿಗೆ ಫಾಸಿ ಶಿಕ್ಷೆ

ದಕ್ಷಿಣ ಮಲಬಾರಿನಲ್ಲಿ ಕಳೆದ ೧೧ನೇ ತಾರೀಖು ನಂಗಯ್ಯ ಬ್ರಹ್ಮಣೀ ಎಂಬ ಮಹಿಳೆಯನ್ನೂ ಮತ್ತು ಅವಳ ಮಗುವನ್ನೂ ಕೊಲೆ ಮಾಡಿದ ಅಪರಾಧಕ್ಕಾಗಿ ಚಿನ್ನಮ್ಮ ಉರ್ಫ್ ಲಕ್ಷ್ಮಿ ಪೊಡವಳ್ಯಾರ್ ಮತ್ತು ದೇವಕಿ ಅಮ್ಮ ಎಂಬ ಇಬ್ಬರು ಉಪಾಧ್ಯಾಯಿನಿಯರನ್ನು ಮರಣ ದಂಡನೆ ಶಿಕ್ಷೆಗೆ ಗುರಿ ಮಾಡಲಾಗಿದೆ. ಸತ್ತವಳ ಗಂಡನೊಡನೆ ಲಕ್ಷ್ಮಿಯ ಅಕ್ರಮ ಸಂಗ ಮಾಡಿದ್ದಕೆಂದೂ ತನ್ನ ಪ್ರಣಯಕ್ಕೆ ಭಂಗ ಬಂದಾಗ ಕೊಲೆ ಮಾಡಿದಳೆಂದೂ ಹೇಳಲಾಗಿದೆ

## ಭಾರತಕ್ಕೆ ಹತ್ತು ಲಕ್ಷ ನಿರಾಶ್ರಿತರ ಆಗಮನ

ಪೂರ್ವ ಬಂಗಾಳದಿಂದ ಹತ್ತು ಲಕ್ಷ ಜನ ನಿರಾಶ್ರಿತರು ಪಶ್ಚಿಮ ಬಂಗಾಳಕ್ಕೆ ಬಂದಿರುತ್ತಾರೆ. ನಿರಾಶ್ರಿತರಿಗೆ ಕೊಡಲಾಗುತ್ತಿದ್ದ ಉಚಿತ ರೇಷನ್ ಮತ್ತು ದಕ್ಕನ್ನು ನಿಲ್ಲಿಸಲಾಗಿದೆ

## ಇಂಗ್ಲೆಂಡಿನ ಗಡಿಯಾರಗಳ ಕಾಲ ಮುಂದಕ್ಕೆ,

ಬೇಸಿಗೆ ಕಾಲಕ್ಕಾಗಿ ಇಂಗ್ಲೆಂಡಿನ ಗಡಿಯಾರಗಳನ್ನು ಒಂದು ಗಂಟೆ ಕಾಲ ಮುಂದಕ್ಕೆ ಹಾಕಲಾಗಿದೆ. ಬರುವ ಅಕ್ಟೋಬರ್ ತಿಂಗಳು ೨೨ರ ವರೆಗೂ ಈ ಬೇಸಗೆಯ ಕಾಲವನ್ನು ಆ ರೀತಿ ಲೆಕ್ಕಿಸಲಾಗುವುದು.

### ಶಾಂಕರ ವೇದಾಂತ

ರಾಜಧಾನಿಯ ಶಂಕರ ಜಯಂತಿ ಮಹೋತ್ಸವ ಸಭೆಯ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳು ಶ್ರೀಮನ್ನಾರಾಯಣ [illegible] ಶಾಂಕರ ವೇದಾಂತದ ಬಗ್ಗೆ ಭಾಷಣ ಮಾಡುವರು.

### ನ್ಯಾಷನಲ್ ಇನ್ಸ್ಟಿಟ್ಯೂಟಿಗೆ ಸಾವಿರ ರೂ. ಸಹಾಯ

ರಾಜಧಾನಿಯ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ [illegible] ಗೆ ೬೬ ಕೋ-ಆಪರೇಟಿವ್ [illegible] ಒಂದು ಸಾವಿರ ರೂ. [illegible]

## ರಾಮಪುರದ ನವಾಬರ ಆಗಮನ

ಸ್ವಂ ಸು ವರದಿ] ಬೆಂಗಳೂರು ೧೮

ಉತ್ತರ ಭಾರತದ ರಾಮಪುರ ಸಂಸ್ಥಾನದ ನವಾಬರು ಈ ಪ್ರಾತಃಕಾಲ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು. ೩ ದಿನಗಳ ಕಾಲ ಇಲ್ಲಿರುವರು. ನಾಳೆ ದಿನ ಅವರು ರಾಜಧಾನಿಗೆ ಪ್ರಯಾಣ ಬೆಳೆಸಿ, ಬೃಂದಾವನ, ಕೃಷ್ಣರಾಜ ಸಾಗರ ಮುಂತಾದ ಪ್ರದೇಶಗಳನ್ನು ನೋಡಿಕೊಂಡು ಬಂದ ನಂತರ ತಾರೀಖು ಹಿಂತಿರುಗುವರು.

### ಮೈ॥ ರಾ॥ ಕಾರ್ಯಕಾರಿ ಸಮಿತಿ ಸಭೆ

ನಾಳೆ ದಿನ ಬೆಳಗ್ಗೆ ೯ ಗಂಟೆಗೆ ಮೈ॥ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ನಡೆಯುವುದು. ಸಚಿವರಿಗೆಲ್ಲರಿಗೂ ಆಹ್ವಾನವನ್ನು ಕೊಡಲಾಗಿದೆ. ಸರ್ಕಾರಕ್ಕೂ ಮತ್ತು ಕಾಂಗ್ರೆಸ್ಸಿಗೂ ಇರಬೇಕಾದ ಸಂಬಂಧದ ವಿಷಯವು ಚರ್ಚೆಗೆ ಬರಲಿದೆಯೆಂದು ತಿಳಿದುಬಂದಿದೆ. ಈ ತಿಂಗಳ ೨೨ನೇ ತಾ॥ ಅಖಿಲ ಕರ್ನಾಟಕ ಪ್ರಾಂತೀಯ ಸಮ್ಮೇಳನವು, [illegible] ಶ್ರೀ ಎ. ಎನ್. ನಾರಾಯಣರಾಯರೊಡನೆ ಮಡಿಕೇರಿಗೆ ಪ್ರಯಾಣ ಮಾಡುವರೆಂದು ಹೇಳಲಾಗಿದೆ

### ರಿಸರ್ವ್ ಬ್ಯಾಂಕ್ ಶಾಖೆ

ಭಾರತದ ರಿಸರ್ವ್ ಬ್ಯಾಂಕಿನ ಶಾಖೆಯನ್ನು ಇಲ್ಲಿ ಸ್ಥಾಪಿಸುವ ಬಗ್ಗೆ ಸಂಸ್ಥಾನದ ಸರ್ಕಾರದವರು ರಿಸರ್ವ್ ಬ್ಯಾಂಕ್ ಅಧಿಕಾರಿಗಳೊಡನೆ ವ್ಯವಹರಿಸುತ್ತಿದ್ದಾರೆ.

೦ ಅರಣ್ಯ ಶಾಖೆಯ ಕರ್ನಲ್ ಕನ್ಸರ್ವೇಟರ್ ಆದ ಶ್ರೀ ವಿ. [illegible] ಅವರನ್ನು ಕನ್ಸರ್ವೇಟರ್ ಆಗಿ ಬಡ್ತಿ ಕೊಟ್ಟು ಅವರನ್ನು ಅರಣ್ಯ ಉಪಯೋಗ ಅಧಿಕಾರಿಗಳನ್ನಾಗಿ ನೇಮಿಸಿದೆ

### ಡರ್ಬಾನಿನಲ್ಲಿ ಜ್ವಾಲಾಮುಖಿ

ದಕ್ಷಿಣ ಆಫ್ರಿಕಾದ [illegible] ವಿನ ಅನೇಕ ಜ್ವಾಲಾಮುಖಿಯು [illegible] ಹತ್ತು ಸಾವಿರ [illegible] ಮುಂತಾದುವು [illegible] ಬರುವರೆಗೆ ಬಲ್ಲ [illegible]

[illegible] ತಿಂಗಳ ಕಾಲ [illegible] ಪುಲ್ಲವೆಂದು [illegible]

## ಹನೇ ವಸಂತಋತುವಿನಲ್ಲಿ ಭಾರತದ ಮಹಾಚುನಾವಣೆ

ಭಾರತದ ರಿಪಬ್ಲಿಕ್ಕಿನ ರಾಜ್ಯಾಂಗದ ಅನುಸಾರವಾಗಿ ಈ ಬಾರಿ ಭಾರತದಲ್ಲಿ ಎಲ್ಲಾ ಒಟ್ಟು ೧೭ ಕೋಟಿಗಿಂತಲೂ ಹೆಚ್ಚು ಜನರು ಮತವನ್ನು ನೀಡಬಹುದಾಗಿದ್ದಾರೆ. ೨೧ ವರ್ಷಕ್ಕೆ ಮೀರಿದವರೆಲ್ಲರನ್ನೂ ಓಟರುಗಳಾಗಿ ಪರಿಗಣಿಸಲಾಗಿದೆ. ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯ ಓಟುದಾರರು ಭಾರತದಲ್ಲಿರುವರೆಂದು ಗೊತ್ತಾಗಿದೆ. ೧೯೫೧ನೇ ವಸಂತ ಋತುವಿನಲ್ಲಿ ಮಹಾ ಚುನಾವಣೆಗಳಾಗುವುವೆಂದು ನಿರೀಕ್ಷಿಸಲಾಗಿದೆ

### ಪೌರಸಭಾ ಚುನಾವಣೆ ಫಲಿತಾಂಶ

ಚಾಮರಾಜನಗರ ೧೮

ಈ ಕೆಳಗೆ ಕಂಡವರು ನೆನ್ನೆ ನಡೆದ ಚುನಾವಣೆಯಲ್ಲಿ ಇಲ್ಲಿನ ಪೌರಸಭೆಯ ಸದಸ್ಯರಾಗಿ ಆರಿಸಲ್ಪಟ್ಟಿರುವರು. ಶ್ರೀಗಳಾದ (ಎ ಡಿವಿಜನ್) ಸಿ. ವಿ. ರಾಮನ್, ಸಿ. ಎಸ್. ಅಬ್ದುಲ್ ಜಬ್ಬಾರ್, ಸಿ. ಬಸವಣ್ಣ, ಡಿ. ವಿ. ಕೃಷ್ಣಶೆಟ್ಟಿ, [illegible] ಶೆಟ್ಟಿ (ಬಿ ಡಿವಿಜನ್) ಬಿ. ನಾರಾಯಣ್, ಸಿ. ವಿ. ವೆಂಕಟೇಶ್, ಸಿ. ಅರ್. ಜಗನ್ನಾಥರಾವ್, ಸಿ. ಎಸ್. ಶ್ರೀಕಂಠಯ್ಯ, [illegible] ನರಸಿಂಹಮೂರ್ತಿ, (ಸಿ ಡಿವಿಜನ್) ವೆಂಕಟರಮಣ ನಾಯುಡ್, ವೆಂಕಟಸುಬ್ಬ ಶೆಟ್ಟಿ, ವೆಂಕಟಶೆಟ್ಟಿ, ಆನಂದರಾವ್, [illegible] ಶೆಟ್ಟಿ ಇವರ ಪೈಕಿ ಶ್ರೀ ವೆಂಕಟಶೆಟ್ಟರು ಕೂಡಲೇ ರಾಜೀನಾಮೆ ಕೊಟ್ಟುದರಿಂದ [illegible] ಗೌಸ್ ಪೀರ್‌ರವರು [illegible] ದ್ದಾರೆ

## ಮಹಿಳೆಯ ಗರ್ಭದಲ್ಲಿ ಮೊಸಳೆ ಮುಖದ ಮಗು

ಸಿಂಧ್ ಪ್ರಾಂತದ ಬಾರಕ್ ಎಂಬ ಸ್ಥಳದ ನಿರಾಶ್ರಿತ ಮಹಿಳೆಯೊಬ್ಬಳು ನಾಡದಲ್ಲಿ [illegible] ಮೊಸಳೆಯ ಮುಖವನ್ನು ಹೊಂದಿರುವ [illegible] ಜನಿಸಿದೆಯೆಂದು [illegible] ಆಸ್ಪತ್ರೆಯಲ್ಲಿ [illegible] ತಲೆಯು [illegible] ಮತ್ತು ನಾಲಿಗೆಗಳು [illegible] ಗಂಟೆಯಲ್ಲಿ ಸತ್ತಿತು. ಇದನ್ನು [illegible] ಜನರ ನೋಟಕ್ಕಾಗಿ ಇಡಲಾಗಿದೆ

### ೨೦ ಸಾವಿರ ರೂ. ಹಣದ ಕಳವು

ಬೆಂಗಳೂರು [illegible] ನೆನ್ನೆ ರಾತ್ರಿ ೨೦ ಸಾವಿರ [illegible] ಮಾಯತೆಂದು ಹೇಳಲಾಗಿದೆ

## ವಿಮಾನಗಳ ಮೂಲಕ [illegible] ಸುವ ವಿದೇಶೀ [illegible]

ವಿದೇಶಗಳ [illegible] ವಿಮಾನಗಳ [illegible] ಕಾರ್ಯಗಳನ್ನು [illegible] ನ್ನು ಮುಂದಿನ [illegible] ಮಾಡಲಾಗುವುದೆಂದು [illegible] ಆಗಿದೆ

[illegible]

ಬರುವ ಸಾವಿರ [illegible]

## ಕಲ್ಕತ್ತಾದಲ್ಲಿ ಸರ್ದಾರ್ ಪಟೇಲ್

ಭಾರತದ ಉಪ ಪ್ರಧಾನಿ ಸರ್ದಾರ್ ಪಟೇಲರು ಕಲ್ಕತ್ತಾಗೆ ಮೊನ್ನೆ ದಿನ ವಿಶೇಷ ವಿಮಾನದಲ್ಲಿ ಆಗಮಿಸಿದರು. ಅವರನ್ನು ಗೌರ್ನರ್, ಮುಖ್ಯ ಮಂತ್ರಿ ಮುಂತಾದವರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಬಂಗಾಳ ಗೌರ್ನರ್ ಮತ್ತು ಇತರರೊಡನೆ ಅವರು ಬಹಳ ಕಾಲ ಮಾತನಾಡಿದರು. ಬಂಗಾಳದ ಪತ್ರಿಕಾಕರ್ತರನ್ನು ಆ ನಂತರ ಕಂಡಿದ್ದರು. ಅಲ್ಪಸಂಖ್ಯಾತರ ಒಪ್ಪಂದವನ್ನು ಪಾಲಿಸುವಬಗ್ಗೆ ಪತ್ರಿಕೆಯವರ ಸಹಕಾರವನ್ನು ಅವರು ಕೋರಿದರು. ಆರು ದಿನಗಳ ಕಾಲ ಸರ್ದಾರ್ ಪಟೇಲರು ಇಲ್ಲಿರುವರು.

## ಬೇಲೂರು ಅಂಚೆ ಕಛೇರಿಗೆ ಬಹುಮಾನ

ಹಾಸನ ಜಿಲ್ಲೆಯ ಬೇಲೂರು ಅಂಚೆ ಕಛೇರಿಯು, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲೆಲ್ಲಾ ಅತ್ಯಂತ ಶುದ್ಧವಾದ ಕಛೇರಿಯಾಗಿರುವುದಕ್ಕಾಗಿ ಮ. ದಾ. ಸಿ. ಸ ಪೋಸ್ಟ್ ಮಾಸ್ಟರ್ ಜನರಲ್‌ರವರು ಒಂದು ಬೆಳ್ಳಿಯ ಬಟ್ಟಲನ್ನು ಬಹುಮಾನ ಕೊಟ್ಟಿರುತ್ತಾರೆ

## ಸವರ್ಣ ಹಿಂದೂಗಳಿಗೆ ಸಂಸ್ಥಾನದ ಹರಿಜನ ಸಂಘದ ಅಧ್ಯಕ್ಷರ ಮನವಿ

ಸಂಸ್ಥಾನದ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಶ್ರೀ ಟಿ. ಚೆನ್ನಯ್ಯನವರು ರಾಷ್ಟ್ರೀಯ ವಾರದ ಸಂದರ್ಭದಲ್ಲಿ ಸಂಸ್ಥಾನದವೆಲ್ಲಾ ಭಾಗಗಳಲ್ಲಿ ಅಸ್ಪೃಶ್ಯತಾ ನಿವಾರಣ ಪ್ರಚಾರವನ್ನು ಕುರಿತು ಪ್ರಸಿದ್ಧಪಡಿಸಿ ಕೊಟ್ಟಿರುವ ಹೇಳಿಕೆಯಲ್ಲಿ ಸವರ್ಣ ಹಿಂದುಗಳು ಆಸಕ್ತಿಯಿಂದ ಹರಿಜನಾಭಿವೃದ್ಧಿ ಸಂಬಂಧದಲ್ಲಿ ಆಗಬೇಕಾದ ಸುಧಾರಣೆಗಳನ್ನು ಸಮಾಜದಲ್ಲಿ ಜಾರಿಗೆ ತರಬೇಕೆಂದು ತಿಳಿಸಿರುತ್ತಾರೆ. ಹರಿಜನರಿಗೆ ಸಮಾನ ಸ್ಥಾನ ಗೌರವಗಳು ಕಾನೂನಿನಲ್ಲಿ ದೊರಕಿದ್ದರೂ ಸಹ ಸಮಾಜದಲ್ಲಿ ಸ್ಥಿತಿಯು ಗಮನಾರ್ಹ ಬದಲಾವಣೆಯಾಗಿಲ್ಲವೆಂದು ವಿದ್ಯಾವಂತ ಹರಿಜನರು ಭಾವಿಸಿರುವರೆಂದೂ ಹರಿಜನರಲ್ಲಿ ವಿದ್ಯಾಭ್ಯಾಸವು ಹೆಚ್ಚಿದಂತೆಲ್ಲಾ ಕ್ರಮೇಣ ಎಲ್ಲಾ ಅಸಮಾನತೆಗಳೂ ಹೋಗುವುವೆಂದೂ ಅವರು ಹೇಳಿದ್ದಾರೆ


ಅಗ್ಗದ ಜವಳಿಗಳಿಗೆ

**ಗುರುದೇವಾ ಹಾಲ್**

ಅವರಲ್ಲಿ ದಯಮಾಡಿ ಭೇಟಿ ಕೊಡಿ

ಶಿವರಾಂಪೇಟೆ, ಮೈಸೂರು

**ರಾಜಕಮಲ್**

ಟಾಕೀಸ್

14-4-50 ರಿಂದ

[illegible] ೨ ನೇ ವಾರ

ದಿನವಹಿ 2 ಪ್ರದರ್ಶನಗಳು

**ಜೀವನ**

[illegible]


## ನಿದ್ರಿಸುತ್ತಿದ್ದಾಗ ಪತ್ನಿಯ ಅಪಹರಣ

ತಿರುಪತಿಯ ಬಳಿ ಗ್ರಾಮವೊಂದರಲ್ಲಿ ಕೊಂಡ ರೆಡ್ಡಿ ಚಿನ್ನ ವೆಂಕಟೇಶಂ ಎಂಬಾತನು ತಿರುಪತಿಯ ನ್ಯಾಯಾಧೀಶರಿಗೆ ಒಂದು ದೂರನ್ನು ಕೊಟ್ಟು ಕಳೆದ ಭಾನುವಾರ ಕೋದಂಡನು ಮತ್ತು ವೆಂಕಟಗಾಡು ಎಂಬಿಬ್ಬರು ಮಧ್ಯ ರಾತ್ರಿಯಲ್ಲಿ ತನ್ನ ಮನೆಯಲ್ಲಿ ನಿದ್ರಿಸುತ್ತಿದ್ದ ತನ್ನ ಪತ್ನಿ ಕಾಪುಲು ಎಂಬ ೧೫ ವರ್ಷದ ತರುಣಿಯನ್ನು ಅಪಹರಿಸಿಕೊಂಡುಹೋದರೆಂದು ತಿಳಿಸಿದ್ದಾನೆ

## ರಸಾಯನಿಕ ಶಾಸ್ತ್ರಜ್ಞ ಡಾ|| ಕೋಕಟನೂರರ ನಿಧನ

ನ್ಯೂಯಾರ್ಕಿನಲ್ಲಿದ್ದ ಪೂನದ ಡಾ|| ವಾಮನ್ ರಾಮಚಂದ್ರ ಕೋಕಟನೂರರು ಮೊನ್ನೆ ದಿನ ಅಲ್ಲಿ ನಿಧನರಾದರು. ಅವರು ರಸಾಯನಿಕ ಶಾಸ್ತ್ರದಲ್ಲಿ ಪ್ರವೀಣರು ಮತ್ತು ಸುಪ್ರಸಿದ್ಧವೈಜ್ಞಾನಿಕರೂ ಆಗಿದ್ದರು. ಅವರು ಸಂಶೋಧನಾ ಯೋಜನೆ ಸಂಬಂಧವಾಗಿ ರಷ್ಯಕ್ಕೆ ಗವರ್ನರದ ಹೋಗಿದ್ದರು. ಕೆಲವುಕಾಲ ಅಮೆರಿಕದ ನೌಕಾಬಲದ ಸಲಹೆಗಾರರು ಆಗಿದ್ದರು. ಅವರು ಕನ್ನಡಿಗರು


ಮೆ|| ಗೌ|| ಸಿಲ್ಕ್ ಫ್ಯಾಕ್ಟರಿ ಕ್ರೇಪ್ ಸೀರೆಗಳಿಗೆ,
ಧರ್ಮಾವರಂ, ಪೂನಾ, ನಾಗಪುರ್ ಸೀರೆಗಳಿಗೆ

ಎಂ. ವಿ. [illegible] ಬಿ ಎ & ಬ್ರದರ್ಸ್,

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

A Rare Opportunity! A must - see programme!

GRAND DOUBLE ATTRACTION

**AT SRI GANESH TALKIES**

(Daily 3 Shows)

**"Sports Parade in Moscow"**

(The Best Russo colour Entertainer)

**'BERLIN'**

Fascinating Documentary Film of the Last Battle of Nazi Germany

(A Stalin prize-winner)

**ಶ್ರೀ ಗಣೇಶಾ ಟಾಕೀಸಿನಲ್ಲಿ**

19-4-50 ರಿಂದ — ದಿನವಹಿ 3 ಆಟಗಳು

ಡಬ್ಬಲ್ ಪ್ರೋಗ್ರಾಂ

**ಸ್ಪೋರ್ಟ್ಸ್ ಪೆರೇಡ್ ಇನ್ ಮಾಸ್ಕೋ**

ಪೂರ್ತಿ ವರ್ಣರಂಜಿತ ಮನರಂಜಕ ಚಿತ್ರ

**ಬರ್ಲಿನ್** * ಕಳೆದ ಮಹಾಯುದ್ಧದಲ್ಲಿ ಜರ್ಮನಿಯವರ ಸಾಹಸವನ್ನು ತೋರಿಸುವ ಚಲನ ಚಿತ್ರ

ಇದಕ್ಕೆ ಸ್ಟಾಲಿನ್ ಬಹುಮಾನ ದೊರೆತಿದೆ.

ರಸಿಕರಿಗೆ ಅಚ್ಚುಮೆಚ್ಚಾದುವು

**ಮೈಸೂರು ರೇಷ್ಮೆ ವಸ್ತ್ರಗಳು**

ಮಿತವ್ಯಯ-ಹಾಗೂ, ಸುರುಚಿ.

ಮೈಸೂರು ರೇಷ್ಮೆ — ಸಮಾಜದಲ್ಲಿ ಮೇಲ್ಮೆಯ ಗುರುತು, ಮುತ್ತಂಚಿನಲ್ಲಿ ಅನುಪಮವಾದುದು

ಜಾರ್ಜೆಟ್, ಕ್ರೇಪ್,

ಜಾರ್ಜೆಟ್ ಮತ್ತು ಕ್ರೇಪ್ ಸೀರೆಗಳು

ಹೊಸ ನಕ್ಷೆಯ ಮಾದರಿಗಳು

[illegible] ಅಂದದ ರಂಗುಗಳು.

ಸರಕಾರಿ ರೇಷ್ಮೆ ನೇಯುವ ಕಾರ್ಖಾನೆ,

ಮೈಸೂರು.


[illegible] published by A. [illegible] Nagarajan [illegible] Sadhvi Press, D. Subbiah Road, Mysore.

## ಅಮೆರಿಕಾಕ್ಕೆ ಮೈಸೂರು ಆನೆಗಳ ಆಗಮನ

ಮೈಸೂರಿನ ಆನೆ ಮರಿಗಳಾದ ಶಕ್ತಿ ಮತ್ತು ಶಾಂತಿ ನ್ಯೂಯಾರ್ಕಿಗೆ ಮೊನ್ನೆ ದಿನ ತಲಪಿದುವು. ಅವುಗಳನ್ನು ಬಳಿಯಲ್ಲಿ ವಾಷಿಂಗ್ಟನ್ನಿಗೆ ಕಳುಹಲಾಯಿತು. ಭಾರತದ ರಾಯಭಾರಿ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಅವುಗಳನ್ನು ಭಾರತದ ಪರವಾಗಿ ಅಮೆರಿಕದ ಅಧಿಕಾರಿಗಳಿಗೆ ಒಪ್ಪಿಸಿದರು

## ಹೈದರಾಬಾದಿನ ಜೈಲು ಅಧಿಕಾರಿಯ ದಸ್ತಗಿರಿ

ಹೈದರಾಬಾದಿನ ವಾರಂಗಲ್ ಜೈಲಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಹಮದ್ ಅಲಿಖಾನ್‌ನನ್ನು ನಿನ್ನೆ ರಾತ್ರಿ ದಸ್ತಗಿರಿ ಮಾಡಲಾಗಿದೆ. ಅವರು ತಮ್ಮ ಸಂಬಂಧಿಗಳ ದರ್ಶನಕ್ಕಾಗಿ ಅಲ್ಲಿಗೆ ತೆರಳಿದ್ದರು.

## ಡೈನಾಮೈಟ್ ಸಿಡಿತದಿಂದ ರೈಲು ಕಂಬಿ ಕದಲಿತು

ಸಿಲೋನಿನ ಕೊಲಂಬೊ-ಬಟ್ಟಿಕಲೋವಾ ರೈಲ್ವೆ ಲೈನಿನಲ್ಲಿ ಕಳೆದ ಶುಕ್ರವಾರ ರಾತ್ರಿ ಒಂದು ಡೈನಾಮೈಟ್ ಸಿಡಿದು ಸುಮಾರು ೬೦ ಅಡಿಗಳಷ್ಟು ದೂರ ರೈಲು ಕಂಬಿಗಳು ಕಡಿದುಹಾಕಲ್ಪಟ್ಟಿದ್ದುವೆಂದು ವರದಿಯಾಗಿದೆ


ಮಜಬೂತಾದ ಕಬ್ಬಿಣದ ಪೆಟ್ಟಿಗೆಗಳು ಬಿಕರಿಗೆ ಸಿದ್ಧವಾಗಿವೆ, ರಿಪೇರಿ ಸಹಾ ಮಾಡುತ್ತೇವೆ.

**ದಿ ಸಿಟಿ ಇಂಪ್ಲಿಮೆಂಟ್ ವರ್ಕ್ಸ್,**

2767, ಹಳ್ಳದಕೇರಿ, ಮೈಸೂರು

**LAKSHMI**

THEATRE,

from 18--4--50

**Big Sombrero**

Cast:-Gene Autry, Elena Verdugo & others

-:Next Change:-

MOONRISE

Featuring:-Dane Clark & Gail Russel

**ಗಾಯತ್ರೀ ಟಾಕೀಸ್**

ದಿನವಹಿ 3 ಪ್ರದರ್ಶನಗಳು

19—4—50ರಿಂದ 2 ದಿನಗಳು

**ಯೇಂಜಲ್ಸ್ ವಿತ್ ಡರ್ಟಿ ಫೇಸಸ್**

ಪಾತ್ರ:- ಜೇಮ್ಸ್ ಕಾಗ್ನೆ

-:ಮುಂದಿನ ಬದಲಾವಣೆ-

ಜೂಲಿಯಾ ಮಿಸ್‌ಬಿಹೇವ್ಸ್

**ರೀಬಿಲ್ಟ್ ಟೈರುಗಳು**

ಶ್ರೇಷ್ಠತೆಗೂ ಮತ್ತು ಬಾಳಿಕೆಗೂ ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿವೆ. ವಿವರಗಳಿಗೆ ಇಂದೇ ಬರೆಯಿರಿ

**ಮೈಸೂರು ಟೈರ್ಸ್**

147, ಸಯ್ಯಾಜಿರಾವ್ ರಸ್ತೆ,

ಮೈಸೂರು

ಫೋನ್ ನಂ 7೨೦ ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

# ಸಾಧ್ವಿ

ಸಂಪುಟ ೮] ಬುಧವಾರ ೧೯-೧೦-೫೦ [ಸಂಚಿಕೆ ೨೩೧

# ಕೇಂದ್ರ ಮಂತ್ರಿಯಾಗಿ ಆರ್ಕಾಟರ ನೇಮಕ ?

## ಪಾರ್ಲಿಮೆಂಟಿನಲ್ಲಿ ಪುನಃ ಪುಟ್ಟರಾಜೇ ಅರಸರ ಪ್ರಶ್ನೆ

ಶ್ರೀ ಪುಟ್ಟರಾಜೇ ಅರಸರನ್ನು ನಿವೃತ್ತಿಗೊಳಿಸಿದ ಬಗ್ಗೆ ಇಂಡಿಯಾ ಛೀಫ್ ಜಸ್ಟಿಸ್‌ರು ಇನ್ನೂ ಪರಿಶೀಲಿಸುತ್ತಿದ್ದಾರೆಂದು ಗೃಹ ಮಂತ್ರಿ ಸರ್ದಾರ್ ಪಟೇಲರು ಮೊನ್ನೆ ಪಾರ್ಲಿಮೆಂಟಿನಲ್ಲಿ ಶ್ರೀ ಹೆಚ್. ವಿ. ಕಾಮತ್‌ರವರಿಗೆ ಉತ್ತರ ಕೊಡುತ್ತಾ ತಿಳಿಸಿದರು.

## ಮೋಟಾರ್ ಅಪಘಾತ ದಿಂದ ತಲೆ ಚೂರಾಯಿತು

ಕಳೆದ ಭಾನುವಾರ ಮಂಡ್ಯದಲ್ಲಿ ಶಕ್ಕರೆ ಕಂಪೆನಿಯ ಚೌಕದಲ್ಲಿ ಒಂದು ಟ್ಯಾಕ್ಸಿಗೂ ಮತ್ತು ಸೈಕಲ್ಲಿನ ಮೇಲೆ ಬರುತ್ತಿದ್ದ, ಕಾರ್ಖಾನೆಯ ಸೂಪರ್‌ವೈಸರಾದ ನಾರಾಯಣರಾಯರಿಗೂ ಡಿಕ್ಕಿಯಾಗಿ ಅವರ ತಲೆಯು ಕಾರಿನ ವಿಂಡ್ ಸ್ಕ್ರೀನಿಗೆ ಹೊಡೆದು ಚೂರು ಚೂರಾಯಿತು. ಅವರು ಸ್ಥಳದಲ್ಲೇ, ತಕ್ಷಣ ಮೃತಪಟ್ಟರು

## ರಾಜಾಜಿಯವರಿಗೆ ಹೊಸ ಹುದ್ದೆ

ನೆಹರೂ-ಲಿಯಾಖತ್ ಆಲಿಖಾನರ ಒಪ್ಪಂದವನ್ನು ಜಾರಿಗೆ ತರುವ ಬಗ್ಗೆ ರಾಜಾಜಿಯವರನ್ನು ಒಂದು ವಿಶೇಷ ಹುದ್ದೆಗೆ ನೇಮಿಸಿ ಅವರು ಕಲ್ಕತ್ತಾದಲ್ಲಿರುವಂತೆ ಮಾಡಿ, ಈ ಮೂಲಕ ಅವರ ನೆರವನ್ನ ಕೋರಲಾಗುವುದೆಂದು ತಿಳಿದುಬಂದಿದೆ

## ಆಸನ ದ್ವಾರದಲ್ಲಿ ಬಚ್ಚಿಟ್ಟ ಚಿನ್ನದ ಪತ್ತೆ

ವಿಶ್ವಪುರದ [illegible] ಜನರಲ್ ಆಸ್ಪತ್ರೆಯ [illegible] ಅಧಿಕಾರಿ [illegible] ಎ. ಶರ್ಮ ಎಂಬುವವನನ್ನು ಶೋಧಿಸಲಾಗ, ಅವನ ಆಸನ ದ್ವಾರದಲ್ಲಿ [illegible] ತೊಲ ಚಿನ್ನವನ್ನು ಬಚ್ಚಿಟ್ಟಿದ್ದುದು ಪತ್ತೆಯಾಗಿ, ಅವನ ದಸ್ತಗಿರಿಯಾಗಿದೆ.

## ಮಾಜಿ ಕೌನ್ಸಿಲರರ ದಸ್ತಗಿರಿ

ಸ್ವಂ. ಸು. ಫೋ॥] ಬೆಂಗಳೂರು ೧೯

ನಂಬಿಕೆ ದ್ರೋಹದ ಅಪಾದನೆ ಮೇರೆ ಇಲ್ಲಿನ ಮಾಜಿ ಪೌರಸಭಾ ಸದಸ್ಯರೂ, ರೇಷ್ಮೆ ವ್ಯಾಪಾರಿಗಳೂ ಆದ ಶ್ರೀ ಟಿ. ಗಂಗಾಧರ ಸ್ವಾಮಿಯವರನ್ನು ನಿನ್ನಿನ ಅಮಾವಾಸೆ ಪೋಲೀಸ್ ಸಬ್ ಇನ್ಸ್‌ಪೆಕ್ಟರಾದ ಕೃಪಾಲ್ ಸಿಂಗರು ಸ್ಥಳೀಯ ಪೋಲೀಸರ ಸಹಾಯದಿಂದ ದಸ್ತಗಿರಿ ಮಾಡಿದರು. ಅವರು ರಾಷ್ಟ್ರೀಯ ಧ್ವಜಗಳನ್ನು ಹಿಂದೆ ಆರ್ಡರಿಗೆ ಸರಬರಾಜು ಮಾಡಿರುವ ಸಂಬಂಧವಾಗಿ ದಸ್ತಗಿರಿಯಾಗಿದೆ. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಅಮರಾವತಿ ನ್ಯಾಯಾಲಯದ ಮುಂದೆ ಹಾಜರಾಗಲು ಅವರಿಗೆ ತಿಳಿಸಲ್ಪಟ್ಟಿದೆ.

### ಸಮಾಜವಾದಿಗಳ ಸಮ್ಮೇಳನ

ಸಮಾಜವಾದಿ ಪಕ್ಷದ ಮೈಸೂರು ಶಾಖೆಯ ಸಮ್ಮೇಳನವು ಈ ತಿಂಗಳ ೨೯ ಮತ್ತು ೩೦ನೇ ತಾರೀಖುಗಳಲ್ಲಿ ದಾವಣಗೆರೆಯಲ್ಲಿ ನಡೆಯಲಿದೆ. ಸಮಾಜವಾದಿ ಪಕ್ಷದ ಮುಖಂಡರಾದ ಶ್ರೀ ಪುರುಷೋತ್ತಮ ದಾಸ್ ತ್ರಿಕಂ ದಾಸ್‌ರವರು ಪ್ರಾರಂಭೋತ್ಸವವನ್ನು [illegible] ಶ್ರೀ [illegible] ಅಲ್ಬುಕರ್ಕರವರು ಅಧ್ಯಕ್ಷತೆ ವಹಿಸುವರು. [illegible] ನಿರ್ಣಯಗಳನ್ನು ಕಳುಹಿಸುವವರು ೨೫ನೇ ತಾರೀಖಿನೊಳಗೆ ಸ್ವಾಗತ ಕಾರ್ಯಾಲಯಕ್ಕೆ ಕಳುಹಿಸಬೇಕೆಂದು [illegible]

## ಸಾಲ ತೀರಿಸಲಾರದೆ ವಿಮಾನದಲ್ಲಿ ಆತ್ಮಹತ್ಯೆ ಪ್ರಯತ್ನ

ಅಮೇರಿಕದ ಲಾಸ್ ಏಂಜಲಿಸ್ ಪಟ್ಟಣದಲ್ಲಿ ಜಾರ್ಜ್ ಹೆನ್ರಿಗ್ರಾಂಟ್ ಎಂಬುವನು ೩೫ ಸಾವಿರ ಡಾಲರ್ ಸಾಲ ಮಾಡಿ ಅದನ್ನು ತೀರಿಸಲಾರದೆ, ತಾನು ಮತ್ತು ತನ್ನ ಹೆಂಡತಿ ಮಕ್ಕಳು ಕುಳಿತಿದ್ದ ವಿಮಾನದಲ್ಲಿ ಗ್ಯಾಸೊಲೀನ್ ಬಾಂಬನ್ನಿಟ್ಟು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದನು. [illegible] ಅವನಿಗೆ ಮನಸ್ಸು ಬದಲಾಯಿ[illegible] ಬಾಂಬನ್ನು [illegible] ಹೊರಗೆ ಎಸೆದನು. ಈಗ ಅವನನ್ನು ಪೋಲೀಸರು ಹಿಡಿದು ತನಿಖೆ ನಡೆಸುತ್ತಿದ್ದಾರೆ

### ಸತ್ಕಾರ ಕೂಟಗಳು

